Digitized by Arya Samaj Foundation Chennai and eGangotri

ಪ್ರಜಾಸಾಮ್ರಾಜ್ಯಂ ಗ್ರಂಥಮಾಲಾ ಸಂಖ್ಯೆ-14

ಬ್ರಾಹ್ಮೀ ರಾಜನೀತಿ ಮೂಲತತ್ವ ಪ್ರಕಾಶನ

# ಸ್ವಧರ್ಮ ವಿವೇಕ

पुस्तकालय,
गुरुकुल कांगड़ी विश्वविद्यालय,
जिला सहारनपुर (उ० प्र०)

ಪ್ರಜಾಸಾಮ್ರಾಜ್ಯಂ (ಪಂಜೀನಿಬದ್ಧ),
ಮೈಸೂರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल कांगड़ी विश्वविद्यालय, हरिद्वार
पुस्तकालय

विषय संख्या
पुस्तक संख्या
आगत पंजिका संख्या

पुस्तक पर किसी प्रकार का निशान वर्जित है। कृपया १५ दिन से अधिक पुस्तक अपने पास न रखें।

पुस्तकालय, गुरुकुल कांगड़ी विश्वविद्यालय, हरिद्वार

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


# विज्ञान महाविद्यालय पुस्तकालय

गुरुकुल कांगड़ी

वर्ग संख्या

ग्रन्थ संख्या

यह पुस्तक निम्नांकित अन्तिम तिथि को या उससे पूर्व पुस्तकालय में जमा हो जानी चाहिये। अन्यथा पांच पैसे प्रतिदिन के हिसाब से विलम्ब शुल्क देना होगा।

| | | | |
|---|---|---|---|
| | | | |


CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल क

विषय सं

पुस्तक सं

आगत पं

पुस्त
वर्जि

पुस्तकालय, गुरुकु
हरि

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

राज्यनीति-मूलतत्त्व-प्रकाशन-ग्रन्थाः

Presented by

The Ministry of Education and Youth Services

Government of India New Delhi

Ref. No. F.43/112/65-S.K.II. Dated 20-3-1971

प्रजासाम्राज्य-ग्रन्थमाला संख्या १३ १४ १५

राजनीतिः स्वधर्मविवेकः शूद्रमीमांसा

RAJANITI SVADHARMAVIVEKA SUDRAMIMAMSA

Edited by

R. N. Suryanarayana M.A.,

Prajasamrajyam (Regd.),
1403 Soppinakola, Mysore 4

साम्राज्यम् मुद्रणालय, मैसूर -४

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

गुरुकुल

विषय

पुस्तक

आगत

पु

व

पुस्तकालय, गुरु

हो

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜಾಸಾಮ್ರಾಜ್ಯಂ ಗ್ರಂಥಮಾಲಾ ಸಂಖ್ಯೆ-14

ಬ್ರಾಹ್ಮೀ ರಾಜನೀತಿ ಮೂಲತತ್ತ್ವ ಪ್ರಕಾಶನ

# ಸ್ವಧರ್ಮ ವಿವೇಕ

CHECKED 1973
Initial ..........

नीतिः

ಪ್ರಜಾಸಾಮ್ರಾಜ್ಯಂ (ಪ:ಜೀನಿಬದ್ಧ),
ಮೈಸೂರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರು :

ಪ್ರಜಾಸಾಮ್ರಾಜ್ಯಂ (ಪಂಜೀನಿಬದ್ಧ),
1403, ಸೊಪ್ಪಿನಕೊಳ, ಮೈಸೂರು-4

ಪ್ರಚಲಿತ ಶಕ ೧೮೯೧
(ಕ್ರಿ.ಶ. 1969)

ಮುದ್ರಣಕಾರರು :

ಸಾಮ್ರಾಜ್ಯಂ ಮುದ್ರಣಾಲಯ, ಮೈಸೂರು—೪.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಗುರುಭ್ಯೋ ನಮಃ

# ಭೂಮಿಕೆ

ಪ್ರಜಾಸಾಮ್ರಾಜ್ಯಂ – ಸಂಸ್ಥೆಯ ನಿಯಮಾವಳಿಯಲ್ಲಿ ವಿಸ್ತರಿಸಿ ರುವಂತೆ, ಬ್ರಹ್ಮ ಕ್ಷತ್ರಾತ್ಮಕವಾದ ವಿಶ್ವದ ರಾಜ್ಯಭಾರವು ಋತ ನಿಯ ಮಾನುಗುಣವಾಗಿ ಅಧಿಕೃತವಾದ ಗುಣ, ಕರ್ಮ ಮತ್ತು ಶಕ್ತಿಗಳುಳ್ಳ ಆಯಾ ಪ್ರಕೃತಿ ವರ್ಗಗಳಿಂದ ಸುಬದ್ಧವೂ ಸುಭದ್ರವೂ ಆಗಿ ಸಾಧಿಸ ಲ್ಪಡುತ್ತದೆ. ಇದರಂತೆ ಜೀವನ ವರ್ತನೆಯಲ್ಲಿ ದೇಹಿಗಳು ತಮ್ಮ ಗುಣ, ಕರ್ಮ ಮತ್ತು ಶಕ್ತಿಗಳ ಮಿತಿಯಲ್ಲಿ ಅಳವಡಿಸಿಕೊಳ್ಳ ಬಹುದಾದ ಸಂಸ್ಕೃತಿ, ಆಚಾರ, ರಾಜನೀತಿಗಳ ವಿವರಗಳು ವೇದ, ವೇದಾಂಗಗಳು ; ಸೂತ್ರ ಗ್ರಂಥಗಳು ; ದರ್ಶನ (ಶಾಸ್ತ್ರ)ಗ್ರಂಥಗಳು ; ಇತಿಹಾಸಾದಿಗಳು ಮೊದಲಾದ ಗ್ರಂಥರಾಶಿಯಲ್ಲಿ ಪ್ರತಿಪಾದಿತವಾಗಿವೆ.

ಆಸೇತು ಹಿಮಾಚಲ ವ್ಯಾಪ್ತವಾಗಿ ಯಜ್ಞಭೂಮಿ, ಯೋಗ ಭೂಮಿ, ಬ್ರಹ್ಮಭೂಮಿಯೆನಿಸಿಕೊಳ್ಳುವ ಬ್ರಾಹ್ಮಣ ರಾಷ್ಟ್ರದಲ್ಲಿ ಬ್ರಾಹ್ಮೀ ಸಂಸ್ಕೃತಿ, ಬ್ರಾಹ್ಮಣಾಚಾರ, ಬ್ರಾಹ್ಮೀ ರಾಜನೀತಿಗಳು ಅನಾದಿಯಾಗಿ ರೂಢಿಗೆ ಬಂದಿರುತ್ತವೆ. ತತ್ವತಃ ರಾಷ್ಟ್ರಕ್ಕೆಲ್ಲಾ ಅನ್ವಯವಾಗಿ ರಾಷ್ಟ್ರದಲ್ಲೆಲ್ಲಾ ಏಕ ಪ್ರಕಾರವಾಗಿ ಅಂತರ್ಗತವಾಗಿ ರುವ ಮತ್ತು ಕಾಲ, ದೇಶ, ಪಾತ್ರಾನುಗುಣವಾಗಿ ಸರ್ವತೋಮುಖ ವಾಗಿರುವ ಸಂಸ್ಕೃತಿ, ಆಚಾರಾದಿಗಳ ಸಮ್ಯಕ್ ಜ್ಞಾನದಿಂದ ರಾಷ್ಟ್ರ, ರಾಷ್ಟ್ರೈಕ್ಯ ಭಾವನೆಗಳು ಮಾನವ ಹೃದಯದಲ್ಲಿ ಸುಸ್ಥಿರವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಲ್ಲುವವು ; ರಾಷ್ಟ್ರಶಕ್ತಿ ಬಲಪತ್ತರವಾಗುವುದು ; ಕ್ಷಾತ್ರ ತೇಜಸ್ಸಿನ ರಾಷ್ಟ್ರವೀರರಿಂದ ರಾಜ್ಯಭಾರವು ಹಿತಕರವಾಗುವುದು ; ಪ್ರಜೆಗಳು ಸಂತುಷ್ಟ ಚಿತ್ತರಾಗಿ ಸಂತೃಪ್ತಿ ಮನೋಭಾವದಿಂದ ಅವರವರ ಮಿತಿಯಲ್ಲಿ ಸ್ವರಾಷ್ಟ್ರೀಯವೂ ಸ್ವದೇಶೀಯವೂ ಸಹಜವೂ ಆದ ಜೀವನ ಯಾತ್ರೆಯನ್ನು ಸ್ವಪರ ಹಿತಾರ್ಥಕ್ಕಾಗಿ ಸಾಧಿಸುತ್ತಾ ಬ್ರಾಹ್ಮಣ ರಾಷ್ಟ್ರದ ಸುಪುತ್ರ ಸತ್ಪ್ರಜೆಗಳೆಂಬ ಯಶಸ್ಸಿನಿಂದ ಶ್ರೇಯೋವಂತರಾಗುವರು. ( 'ರಾಜನೀತಿ' ಪ್ರಜಾಮತ, ಮಕರ ೧೫ ಪ್ರಚಲಿತ ಶಕ ೧೮೭೩ * )

ಸುಮಾರು ೨೦೦೦ ವರ್ಷಗಳಿಂದೀಚೆಗೆ ಕಾಲ, ದೇಶ, ಪಾತ್ರಗಳ ವೈಚಿತ್ರ್ಯ ಮತ್ತು ನ್ಯೂನತಾಧಿಕ್ಯಗಳಿಂದಲೂ ಪರಕೀಯ ಸಂಪರ್ಕ, ಆಕ್ರಮಣ, ಆಡಳಿತ ಮೊದಲಾದ ಈತಿ ಬಾಧೆಗಳಿಂದಲೂ ಸಂಸ್ಕೃತಿ, ಆಚಾರ, ರಾಜನೀತಿಗಳು ವಿವೇಚನೆಯ ವಿಮರ್ಶಾತ್ಮಕ ಜ್ಞಾನಕ್ಕೆ ಲಕ್ಷ್ಯವಾಗಲು ಅವಕಾಶವಾಗದೆ, ರಾಷ್ಟ್ರದ ಮತ್ತು ಪ್ರದೇಶಗಳ ವಿವಿಧ ಭಾಗಗಳಲ್ಲಿ ವಿವಿಧವಾಗಿರುವಂತೆ ತೋರಬಹುದಾದ ಕಾರಣದಿಂದ ರಾಷ್ಟ್ರ, ರಾಷ್ಟ್ರೈಕ್ಯಭಾವನೆಗಳು ದೂರ ಸರಿದಿರುವುವು. ಈ ಪರಿಸ್ಥಿತಿಯಲ್ಲಿ ರೂಢಮೂಲವಾದಂತಿರುವ ಪರಕೀಯ ಸಂಪರ್ಕ,

* ಸ್ವತಂತ್ರವಾದ ಆಡಳಿತವುಳ್ಳ ರಾಷ್ಟ್ರದಲ್ಲಿ ಸ್ವರಾಷ್ಟ್ರ, ಸ್ವದೇಶ ಪ್ರಿಯರೂ ಆತ್ಮವಿಶ್ವಾಸವುಳ್ಳವರೂ ಅತ್ಯವಶ್ಯಕವಾಗಿ ತಮ್ಮದೇ ಆದ ಮತ್ತು ರಾಷ್ಟ್ರೀಯವಾದ ಕಾಲಗಣನೆಯನ್ನು ಹೊಂದಿರಬೇಕು. ಬ್ರಾಹ್ಮಣ ಧರ್ಮಗ್ರಂಥದಲ್ಲಿ ಬ್ರಹ್ಮೀಕರಣ (Brahmanisation) ಭಾಗದಲ್ಲಿ (ಪು. ೧೮೪-೨೦೨) ಹೇಳಿರುವಂತೆ ನಿರ್ದಿಷ್ಟ ದಿನಾಂಕಗಳುಳ್ಳ ಮೇಷಾದಿಗಳನ್ನೂ ಶಾಲಿವಾಹನಶಕದ ಪ್ರಚಲಿತ ಸಂವತ್ಸರ ಸಂಖ್ಯಾ ಗಣನೆಯನ್ನೂ ಕಾರ್ಯಗತ ಮಾಡಿಕೊಳ್ಳುವುದು ಸಹಜ. ಅದರಂತೆ ಇಲ್ಲಿ ಅಂಕಿ ಅಂಶಗಳನ್ನು ಬರೆದಿರುತ್ತೆ. ಈ ಬಗೆಯ ವಿವೇಚನೆಯಿಂದ ರಾಷ್ಟ್ರ ಕಲ್ಯಾಣವು ಸಾಧಿಸಲ್ಪಡುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥ, ಭಾಷಾಜ್ಞಾನ ಪ್ರೌಢಿಮೆಯಿಂದ ಕುಗ್ಗಿದ ಅಂತಃಕರಣದಲ್ಲಿ ಸ್ವರಾಷ್ಟ್ರಭಾವನೆಯು ಉದಯಿಸದೆ ಪರಕೀಯರು ರಾಷ್ಟ್ರದ ಮೇಲೆ ಹೊರಿಸಿ ಬಳಕೆಗೆ ತಂದಿರುವ ಹೆಸರಿನ ಅಪವಿತ್ರತೆ ಮೊದಲಾದ ಕಾರಣಗಳಿಂದ ಜನತೆಯಲ್ಲಿ ದ್ವೇಷಾಸೂಯಾದಿ ಸಂಕುಚಿತವರ್ತನೆಗಳು ಹೆಚ್ಚುತ್ತಿವೆ. ವಿವೇಚನೆಯಿಲ್ಲದ ಈ ಸನ್ನಿವೇಶದಿಂದ ಬಿಡುಗಡೆ ಹೊಂದುವುದಕ್ಕಾಗಿ "ಬ್ರಾಹ್ಮಣಧರ್ಮ"(ಯೂನಿವರ್ಸಲ್ ರಿಲಿಜನ್) ಗ್ರಂಥದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿರುವ ರಾಷ್ಟ್ರೀಯತೆಯ ವಿವರಗಳನ್ನು ನೋಡಿ ರಾಷ್ಟ್ರದ ಕೇಂದ್ರರಾಜ್ಯದ ಪ್ರಧಾನಿ ಜಗದ್ವಿಖ್ಯಾತ ಜವಹರ ಲಾಲ್ ನೆಹ್ರೂರವರು ಧನ್ಯವಾದಗಳನ್ನರ್ಪಿಸಿರುವರು (ದಿನಾಂಕ ೧೪ ಸಿಂಹ ಶಕ ಪ್ರಚಲಿತ ೧೮೭೦ ); ಈ ವಿಷಯಗಳು ಪ್ರಪ್ರಥಮ ರಾಷ್ಟ್ರೀಯ ಸಭಾಧಿವೇಶನದಲ್ಲಿ ಸೇರಿದ್ದ ರಾಷ್ಟ್ರ ಪ್ರಜಾ ಪ್ರತಿನಿಧಿಗಳ ಅವಗಾಹನೆಗೆ ಬಂದು ಸೂಕ್ತವ್ಯವಸ್ಥೆಗೆ ಯತ್ನವು ನಡೆದಿದೆ. ರಾಷ್ಟ್ರವೀರ ವಿ. ದಾ. ಸಾವರಕರ ಮಹಾಶಯರು ಸ್ವಗೃಹದಲ್ಲಿ ಮೊಲ್ಕೊಂಡ ಗ್ರಂಥವನ್ನು ಸ್ವಾಗತಿಸಿ ಸಹಾನುಭೂತಿಯನ್ನು ಪ್ರದರ್ಶಿಸಿರುವರು. (ವೃಶ್ಚಿಕ ೩–೧೮೭೫)

ಅಯೋಧ್ಯೆಯ ವಿದ್ವಾನ್ ಕಾಳೀಪ್ರಸಾದಶಾಸ್ತ್ರಿ ಮಹಾಶಯರು ತಮ್ಮ 'ಸಂಸ್ಕೃತಂ' ವಾರಪತ್ರಿಕೆಯಲ್ಲಿ ಕಟಕ ೨೦ ಶ. ಪ್ರ. ೧೮೭೬ ರಲ್ಲಿ ಪ್ರಕಟಿಸಿದ ರಾಷ್ಟ್ರದ ಪರಕೀಯ ನಾಮ ಸಮರ್ಥನೆಯ ವಿಷಯವೂ ಅದನ್ನು ಗರ್ಹಣ ಮಾಡಿ ಅದೇ ಪತ್ರಿಕೆಯ ಕನ್ಯಾ ೬ ಶಕ ಪ್ರ. ೧೮೭೬ ನೇ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನವೂ ರಾಷ್ಟ್ರಕ್ಕೂ ವಿಶ್ವಕ್ಕೂ ಜ್ಞಾನ ಜ್ಯೋತಿಯನ್ನು ಉಂಟುಮಾಡಿರುತ್ತವೆ. ಆದರೂ ವಿವಿಧ ಭಾಷೆಗಳಲ್ಲಿ ಲಿಖಿತವಾದ ಗ್ರಂಥಗಳಲ್ಲಿ ಕಾಣುವ ಈ ಪರಕೀಯ ನಾಮದಿಂದ ರಾಷ್ಟ್ರ ಸಂಸ್ಕೃತಿ, ರಾಜನೀತಿಗಳ ಸತ್ಯಾಂಶ ಜ್ಞಾನಕ್ಕೆ ಆಗುತ್ತಿರುವ ಅಡ್ಡಿ ಆತಂಕಗಳನ್ನು ಪರಿಹರಿಸುವುದು ಸ್ವತಂತ್ರ ರಾಷ್ಟ್ರದ ಮುಖ್ಯ ಕರ್ತವ್ಯವಾಗಿದೆ.

ರಾಷ್ಟ್ರ ಗೀತೆಯ ವಿವರಗಳು ರಾಷ್ಟ್ರ ಸಂಸ್ಕೃತಿ ವೈಶಿಷ್ಟ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನು ಪ್ರತಿಬಿಂಬಿಸುವಂತೆ ನ್ಯೂನತಾಧಿಕ್ಯ ಲೋಪ ದೋಷಗಳಿಂದ ಮುಕ್ತವಾಗಿ ಇರಬೇಕೆಂದು ಪ್ರಕಟಿಸಿದ್ದ (ನೋಡಿ, 'ಡೇಲಿ ನ್ಯೂಸ್' ಧನುಸ್ಸು ೨೧ ಶಕ ೧೮೭೨) ವಿಚಾರವನ್ನು ಪ್ರಜಾಸಾಮ್ರಾಜ್ಯಂ ಸಂಸ್ಥೆಯಲ್ಲಿ ವಿಪುಲವಾಗಿ ಚರ್ಚಿಸಿ ಪ್ರಜೆಗಳ ಗಮನಕ್ಕೆ ತರಲಾಗಿದೆ.

ಮಾನವೀಯತೆ ಮತ್ತು ಸಂಸ್ಕೃತಿಗಳ ಅರಿವಿಲ್ಲದ ಕಾರಣ ಆರ್ಥಿಕ, ಪ್ರಾಪಂಚಿಕ ಲೋಲುಪತೆಗಳು ಹೆಚ್ಚಿ ವಿಜ್ಞಾನ ಮತ್ತು ನಾಗರಿಕತೆ(?) ಶಬ್ದಗಳ ನೆರಳಿನಲ್ಲಿ ಆಶ್ರಯವನ್ನು ಹೊಂದಿದ ಮನಸ್ಸು ಅನಾಗರಿಕರ ಅಶಾಂತಿ ಸಾಗರದಲ್ಲಿ ಮುಳುಗಿರುವುದನ್ನೂ, ವಿಶ್ವದಲ್ಲಿ ರಾಜ್ಯ, ಜೀವಿಕೆ ಮತ್ತು ವರ್ತನೆಗಳಲ್ಲಿ ಸಮತೋಲನ ವಾ ಸಮತ್ವದ ಬಿಕ್ಕಟ್ಟು ಸಡಿಲವಾಗಿರುವುದನ್ನೂ, ವಿಜ್ಞಾನದ ಹೆಸರಿನಲ್ಲಿ ವಿದೇಶ ಯಾತ್ರೆ-ವಾಸಗಳಿಗೆ ಹಮ್ಮೈಸುವುದು ಸರ್ವಥಾ ಹೇಯವಾದುದೆಂದು ವಿಶ್ವವಿಖ್ಯಾತ ವಿಜ್ಞಾನಿಗಳಲ್ಲಿ ಅಗ್ರಗಣ್ಯರಾದ ಶ್ರೀ ಸಿ. ವಿ. ರಾಮನ್ ರವರು ಸ್ವಂತ ಅನುಭವದಿಂದ ಬ್ರಾಹ್ಮಣ ರಾಷ್ಟ್ರದ ಪ್ರಜೆಗಳಿಗೆ, ಹೇಳಿರುವುದನ್ನೂ ರಾಷ್ಟ್ರದ ನೆರೆಹೊರೆ ಪ್ರದೇಶಗಳು ಪರಕೀಯ ಸಂಪರ್ಕ ದೋಷವಿಲ್ಲದ ಕಾರಣ ಬ್ರಾಹ್ಮೀ ಸಂಸ್ಕೃತಿ, ಬ್ರಾಹ್ಮೀ ರಾಜ ನೀತಿಗಳನ್ನು ಅನುಷ್ಠಾನದಲ್ಲಿಟ್ಟುಕೊಂಡಿರುವುದನ್ನೂ ವಿಶ್ವದಲ್ಲಿ ಎಲ್ಲೆಡೆಯಲ್ಲಿಯೂ ಪ್ರಜಾತ್ವ ಪ್ರಭುತ್ವ ಸ್ವರೂಪ, ಲಕ್ಷಣ, ಮಿತಿ, ಸ್ಥಿತಿ, ಗತಿಗಳ ಜ್ಞಾನವು ಕಲುಷಿತವಾಗಿರುವುದರಿಂದ ಮಾನವ ಜೀವನದಲ್ಲಿ ಭೋಗ, ರಾಗ, ವಿರಾಗ ಮೊದಲಾದುವು ರಸ ವಿಹೀನ ವಾಗಿರುವುದನ್ನೂ, ಸರ್ವೇ ಧರ್ಮಾ ರಾಜಧರ್ಮೇ ಪ್ರವಿಷ್ಟಾಃ ಎಂಬ ವ್ಯಾಸೋಕ್ತಿಯಂತೆ, ಸರ್ವ ಧರ್ಮಗಳಿಗೂ ಆಶ್ರಯವಾದ ಬ್ರಾಹ್ಮೀ ರಾಜನೀತಿ ಜ್ಞಾನ ಬಲದಿಂದಲೇ ವಿಶ್ವವೆಲ್ಲವೂ ಕ್ಷಾತ್ರಯುತ ಮಾನವೀ ಯತೆಯನ್ನು ಸಂಪಾದಿಸಿ ರಕ್ಷಿಸಬೇಕಾಗಿರುವುದನ್ನೂ ಪರ್ಯಾಲೋಚಿಸಿ ಮಾನವೀಯತೆ ಮತ್ತು ಸರಳ ಜೀವನಗಳ ಉದ್ಧಾರಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಬ್ರಾಹ್ಮಣ ರಾಷ್ಟ್ರದ ಕೇಂದ್ರ ಮತ್ತು ಪ್ರದೇಶರಾಜ್ಯಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮೋಹವನ್ನು ತಳ್ಳಿ ಹಾಕಿ ಸರ್ವ ಪ್ರಯತ್ನ ಮಾಡಿ ಮೋಹದಿಂದ ವಿಸ್ಮೃತವಾದ ಸಂಸ್ಕೃತಿ ರಾಜನೀತಿಗಳನ್ನು ಉದ್ಧರಿಸಬೇಕಾದುದು ಅತ್ಯವಶ್ಯಕವಾದ ಪ್ರಥಮ ಕರ್ತವ್ಯವೆಂಬುದು ಸ್ವತಸ್ಸಿದ್ಧವಾಗುವುದು. "ಶಾಸ್ತಿ ಬ್ರಾಹ್ಮಣ ಭೂಮಿರ್ನೋ ವರ್ಣಚಕ್ರಧ್ವಜೇನ ಶಂ" ಎಂಬಂತೆ ರಾಷ್ಟ್ರದ ವರ್ಣಚಕ್ರ ಧ್ವಜವು, "ಬ್ರಾಹ್ಮೀ ನೀತಿಂ ಚ ಸರ್ವೇಭ್ಯೋ ಬ್ರಾಹ್ಮ್ಯಾ ವಾಣ್ಯಾ ಪ್ರಕಾಶಯೇತ್" ಎಂಬಂತೆ ವೇದ ವಾಙ್ಮಯದ ಆಧಾರದ ಮೇಲೆ ಬ್ರಾಹ್ಮೀ ಭಾಷೆಯ ಮೂಲಕ ವಿಶ್ವಕ್ಕೆಲ್ಲಾ ಆಚಾರ, ಸಂಸ್ಕೃತಿ, ರಾಜನೀತಿ ತತ್ವಗಳ ಜ್ಞಾನಜ್ಯೋತಿಯನ್ನು ಕೊಡುವ ವಿಶ್ವದೀಪಸ್ತಂಭವಾಗುವಂತೆ ಪ್ರಯತ್ನವು ನಡೆಯಬೇಕಾಗಿದೆ. ಈ ಪರಿಸ್ಥಿತಿಯಲ್ಲಿ —

"ವೇದಗಳೆಲ್ಲವೂ ತ್ರೈಗುಣ್ಯ ವಿಷಯಗಳಾಗಿರುತ್ತವೆ; ಈ ವಿಷಯಗಳನ್ನು "ನಿಸ್ತ್ರೈಗುಣ್ಯ" ಬುದ್ಧಿಭಾವದಿಂದ ತಿಳಿಯಲು ಯತ್ನಿಸಿದರೆ ವಸ್ತುತತ್ವವು ಸ್ವತ ಏವ ಮನಸ್ಸಿಗೆ ಪ್ರಕಾಶವಾಗುವುದು." ಎಂಬ ಸಂದೇಶವನ್ನು ಗಮನದಲ್ಲಿ ಇಟ್ಟುಕೊಂಡು ಸಂಸ್ಥೆಯ ಧ್ಯೇಯಗಳಲ್ಲಿ ಮುಖ್ಯವಾದ 'ಸಂಶೋಧನ' ಕಾರ್ಯವನ್ನು ಸಂಸ್ಕೃತಿ, ರಾಜನೀತಿ ಪರಿಶ್ರಮವುಳ್ಳವರಾದ ಅನೇಕ ಸಂಖ್ಯೆಯ ಸ್ತ್ರೀಪುರುಷ–ಉಪನ್ಯಾಸಕರೂ ವಿಮರ್ಶಕರೂ ಕೈಗೊಂಡು, ಪ್ರಜಾ ಸಾಮ್ರಾಜ್ಯಂ ಆಶ್ರಯದಲ್ಲಿ ಚರ್ಚಿಸಿ, ನಿಸ್ತ್ರೈಗುಣ್ಯ ಭಾವದಿಂದ ಸಂಗ್ರಹಿಸಿರುವ ವಿಷಯಗಳನ್ನು "ಸ್ವಧರ್ಮ ವಿವೇಕ" ವೆಂಬ ಈ ಗ್ರಂಥದಲ್ಲಿ ಉಲ್ಲೇಖಿಸಿ ಪ್ರಕಾಶ ಪಡಿಸಲು ವ್ಯವಸ್ಥೆ ಮಾಡಿರುತ್ತಾರೆ.

"ಕಾರ್ಪಣ್ಯದೋಷೋಪಹತ ಸ್ವಭಾವ"ನೂ "ಧರ್ಮಸಮ್ಮೂಢ ಚೇತಸ್ಕ"ನೂ ಆಗಿದ್ದರೂ ಸ್ವಕರ್ಮ ಫಲಯೋಗದಿಂದ ತತ್ವಾನ್ವೇಷಿಯಾಗಿ "ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ" ಎಂದು ಗುರುವನ್ನು ಆಶ್ರಯಿಸಿ ಶರಣಾಗತನಾದ ಶಿಷ್ಯನ ಗುಣ, ಕರ್ಮ ಮತ್ತು ಶಕ್ತಿಗಳನ್ನು ಅರಿತು, ಗುರುವು ಸಮುಚಿತವಾದ ಭಗವನ್ಮಂತ್ರ, ಪೂಜಾಯೊಂದಿಗೆ, [illegible] ಸಂಸ್ಕೃತಿ, ರಾಜನೀತಿ ತತ್ವಗಳನ್ನು ಶಿಷ್ಯನಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಉಪದೇಶಿಸಿ "ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು" ಎಂದು ಅನುಗ್ರಹಿಸಿದಾಗ ಶಿಷ್ಯನು "ಕರಿಷ್ಯೇ ವಚನಂ ತವ" ಎಂಬ ಪ್ರತಿಜ್ಞೆಯನ್ನು ಕೈಗೊಂಡು ಗುರೂಪದೇಶವನ್ನು ಅನುಷ್ಠಾನಕ್ಕೆ ತಂದು ಸ್ವರಾಜ್ಯ ಸಾಮ್ರಾಜ್ಯ ವಿಭೂತಿಯನ್ನು ಪಡೆಯುತ್ತಾನೆ.

ಈ ಅಮೃತ ಲಾಭಕ್ಕೆ ಗುರು ಪ್ರಸಾದವೇ ಕಾರಣವೆಂದು, ಶಿಷ್ಯನು "ಸ್ವರಾಜ್ಯ ಸಾಮ್ರಾಜ್ಯ ವಿಭೂತಿರೇಷಾ
ಭವತ್ಕೃಪಾಶ್ರೀ ಮಹಿಮ ಪ್ರಸಾದಾತ್ ।
ಪ್ರಾಪ್ತಾ ಮಯಾ ಶ್ರೀಗುರವೇ ಮಹಾತ್ಮನೇ
ನಮೋ ನಮಸ್ತೇಽಸ್ತು ಪುನರ್ನಮಸ್ತೇ ॥"
(ವಿವೇಕಚೂಡಾಮಣಿ 518)

ಎಂಬದಾಗಿ ಕೃತಜ್ಞತಾ ವಂದನೆಗಳನ್ನು ಅರ್ಪಿಸಿ ಸುಖಶಾಂತ ಚಿತ್ತನು ಆಗುತ್ತಾನೆ. ಅದರಂತೆ ಪಠನ ಮನನಾದಿಗಳಿಂದ ಈ ಗ್ರಂಥಗಳನ್ನು ಆದರಿಸಿದ ಸ್ತ್ರೀ ಪುರುಷ ಪ್ರಜೆಗಳು ಬ್ರಹ್ಮ ಕ್ಷತ್ರ ಸೂಚಕ ಸನ್ಮಾರ್ಗ ದರ್ಶನವನ್ನು ಹೊಂದಿ ರಾಜ ಮಾರ್ಗ ರಾಜಯೋಗವನ್ನು ಅವರವರ ಗುಣ, ಕರ್ಮ ಮತ್ತು ಶಕ್ತಿಗಳ ಮಿತಿಗೆ ತಕ್ಕಂತೆ ಅನುಷ್ಠಾನ ಮಾಡಿ ಸ್ವಹಿತ, ಪರಹಿತ, ಸ್ವದೇಶ-ಸ್ವರಾಷ್ಟ್ರ-ಹಿತಗಳನ್ನು ಸಾಧಿಸಿ ಶ್ರೇಯಸ್ಸಿಗೆ ಪಾತ್ರರಾಗಿ ಯೋಗಿಗಳಂತೆ ಸುಖಶಾಂತಿಗಳನ್ನು ಅನುಭವಿಸುವವರಾಗುತ್ತಾರೆ.

"ಕರ್ತಾರಃ ಸುಲಭಾ ಲೋಕೇ, ವಿಜ್ಞಾತಾರಸ್ತು ದುರ್ಲಭಾಃ"

ಇತಿ ಶಂ

ಪ್ರಜಾಸಾಮ್ರಾಜ್ಯಂ ಸಂಸ್ಥೆಯ ಪರವಾಗಿ

ಮಹೀಸುರ ನಗರ

**ರುದ್ರಪಟ್ಟಂ ಸೂರ್ಯನಾರಾಯಣ**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಾಹ್ಮೀ ರಾಜನೀತಿ ಮೂಲ ತತ್ತ್ವ ಪ್ರಕಾಶಕಗಳಾದ

ಈ ಗ್ರಂಥಗಳು

ಸರ್ವಭೂತಗಳ ಹೃದ್ದೇಶದಲ್ಲಿ, ದ್ವಾದಶಾರ್ಣ ಕಮಲದಲ್ಲಿ,
ಭಾವಲಕ್ಷ್ಯವಾದ ಅನಲಾಲಯದಲ್ಲಿ ಹಂಸದ್ವಯಗಳಂತಿರುವ,
ಜೀವನಮೂಲ, ಉದ್ಯಮಮೂಲ, ಋಷಿಮೂಲ, ಮಂತ್ರಮೂಲ,
ದೇವತಾಮೂಲ, ಯಜ್ಞಮೂಲ, ಜೀವನಯೋಗಮೂಲ,
ಜೀವನಯೋಗಾನುಸಂಧಾನಮೂಲ, ಸೌಂದರ್ಯಮೂಲಗಳಾದ,
ಶ್ರೀ ಸದ್ಗುರು ಯೋಗಾನಂದ ಪಾದಗಳಲ್ಲಿ
ಸಂನ್ಯಸ್ತವಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ವಿಷಯಾನುಕ್ರಮಣಿಕೆ

ಪುಟ

೧. ಧರ್ಮ ೧–೧೪

ಸ್ವಧರ್ಮವಿವೇಚನೆ — ಧರ್ಮ ಮತ್ತು ಬ್ರಹ್ಮ— ಬ್ರಹ್ಮ-ಧರ್ಮ ಶಬ್ದ ನಿಷ್ಪತ್ತಿ, ಅರ್ಥ— ಬ್ರಹ್ಮಪ್ರತಿಪಾದಕ ದರ್ಶಕ ಶಬ್ದರಾಶಿಗಳು ರಸಿಕತಾ ವಿಮರ್ಶೆ— ಬ್ರಹ್ಮ ಪ್ರತಿಪಾದನೆಯ ಮಾನ್ಯತೆ— ಅಮೃತ ಮಂಥನ— ಪಂಚಮ ವೇದ— ವ್ಯವಹಾರ— ಏಕಧ್ಯೇಯ (ಶಬ್ದ ಬಹುತ್ವ ಅನೇಕಾರ್ಥ) ಸರ್ವಜ್ಞತ್ವದ ಮಿತಿ— ಅರ್ಥಜ್ಞಾನಕ್ಕೆ ಸರ್ವಜ್ಞತ್ವದ ಮಿತಿ— ಅರ್ಥಜ್ಞಾನಕ್ಕೆ ಸರ್ವರೂ ಅರ್ಹರು.

೨. ಪ್ರಜಾಪತಿರಾಜ್ಯ – ವ್ಯವಹಾರ ೧೫–೩೮

ಆತ್ಮವಿಲಾಸ — ಯೋಗಕ್ಷೇಮ — ರಾಜಕರ್ಮ, ರಾಜ್ಯ — ರಾಜ ಕಲನ, ಕಾಲ — ಶಕ್ತಿತ್ರಯ — ಸಂಕಲ್ಪ, ಕ್ರಿಯಾ — ಸಂಕಲ್ಪವು ಅಮೋಘ, ಫಲ ಮತ್ತು ಅನುಭವಗಳು ಅಪ್ರತಿಹತ — ಲೀಲೆ — ದುಷ್ಫಲ ಸಂಕಲ್ಪ — ವಿರೋಧ ಸಂಕಲ್ಪ — ಋತಾನುರೋಧ ರಾಜ್ಯಭಾರ — ವಿಪ್ರತಿಕ್ರಿಯೆ — ಆತ್ಮಜ್ಞಾನವು ಸರ್ವಸುಲಭ — ಆತ್ಮಲಾಭ — ಪ್ರಜಾರಾಜ್ಯ ಫಲ— ಆತ್ಮಲಾಭ ಸೋಪಾನ

೩. ಋಣ ೩೯–೮೬

ಋಣ ಶಬ್ದಾರ್ಥ— ಋಣ ಸೂತ್ರ— ಪುಣ್ಯಪಾಪ— ಪ್ರಕೃತಿಯ ಸಹಾಯ, ಹೊಣೆಗಾರಿಕೆ— ಬಂಧನ— ಋಣದಿಂದ ಸಂಪದಭ್ಯುದ-ಯ— ಬಂಧನ, ವೈಯಕ್ತಿಕ, ಸ್ವಾಭಾವಿಕ— ಋಣ ಕಲ್ಪನೆ ಮತ್ತು ನಿವೃತ್ತಿ— ಅನುಭವ — ಸ್ವಾಯತ್ತೀಕರಣ ನಿವೃತ್ತಿ— ಋಣಾನು ಭವವಾರಣ – ಅನುಭವ ಸಂಘಟನೆ ವಿಮೋಚನೆ, ಘಟನಾವೈಚಿತ್ರ್ಯ–

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ

ಜನ್ಮ ಘಟನೆ— ಸಾಮೂಹಿಕ ಘಟನೆ— ಋಣಭಾರ, ಭಯದಿಂದ ಋಣಪ್ರಾಪ್ತಿ— ಸಹಾಯ ಋಣ— ತಪಸ್ವಿಗಳ ಋಣ ನಿವೃತ್ತಿ— ಪತಿ-ಪತ್ನೀ-ಪುತ್ರ ಋಣದ ಮಿತಿ— ವಿವಿಧ ಋಣಭಾವ ವಿಮರ್ಶೆ- ಶುಲ್ಕ— ಋಣತ್ರಯ— ಪಿತೃ-ಋಷಿ-ದೇವ-ಋಣ ಬಂಧನ, ನಿವಾರಣೆ-- ಸದಾವರಣ ಕಲ್ಪನೆ— ಋಣ ರಹಸ್ಯ.

೪. ಕರ್ಮ ೮೭–೧೨೦

ಕರ್ಮ, ದೇವತಾ, ಇಂದ್ರಿಯಾತೀತ ವಿಷಯ— ಕಾರಣ, ಮೂಲ, ಬೀಜ— ಅಂಗ— ನಿರ್ವಾಹ, ಪ್ರಕೃತಿ— ವ್ಯಾಪ್ತಿ— ಅ, ವಿ ಉಪಪದ ಸಹಿತ – ವಿರೋಧ ಕರ್ಮ, ಗತಿ ಪ್ರಾಪಕ— ಸುಮುಖ, ದುರ್ಮುಖ, ವಿಮುಖ— ಸ್ವಾತಂತ್ರ್ಯದ ಮಿತಿ— ವಾರಣ, ಹೊಣೆಗಾರಿಕೆ— ಸನ್ಮಾರ್ಗದರ್ಶನ-— ಸಂಕಲ್ಪ– ಫಲ– ವಿವೇಚನೆ- ವ್ಯಾಪ್ತಿ-. ಕಾಲ ವಿವೇಚನೆ, ವಿಭಾಗ— ಫಲಾಧಿಕ್ಯ– ಯಂತ್ರ, ಏಕ ಪ್ರಕಾರ– ಫಲ, ನೈಷ್ಕರ್ಮ್ಯಸಿದ್ಧಿ—ನಿಷ್ಕಾಮವು ವ್ಯವಹಾರಾತೀತ- ಜೀವನ, ಪ್ರಯೋಗ, ಯಜ್ಞ— ಧ್ಯೇಯ.

೫. ಸಂಸ್ಕೃತಿ ೧೨೧–೨೦೬

ಸ್ವಾಭಾವಿಕ— ಮಾನವ ಪ್ರಜಾ ಸಾಮಾನ್ಯ— ಲಕ್ಷಣ– ಸೋಪಾನ ಸುಮುಖ, ದುರ್ಮುಖ, ವಿಮುಖ— ಅಪೂರ್ವ, ಅಲೌಕಿಕ,ಯೋಗ ಬಾಧಾ ಪರಿಹಾರಕ— ಆವರಣ, ನಿಗ್ರಹ— ಆಗಾಮಿ ವಾರಣ— ಪುರುಷಾರ್ಥ ಪ್ರಾಪಕ— ವಿವಾಹ– ಜೀವ, ಗರ್ಭ, ಜನನ– ದ್ವಿಜ- ಪರಸ್ಪರ ಭಾವನಾ-- ದೇವತ್ವ ಸಾಧನ— ಪೂಜಾ— ಪೂಜಾಫಲ- ವಿನಿಯೋಗ— ಪರಿಣಾಮ ತತ್ತ್ವ— ಸಂತರ್ಪಣ— ಯೋಗ-ಕರ್ಮ ಸಮರ್ಪಣ — ಹಠಯೋಗ— ಬ್ರಹ್ಮಕ್ಷತ್ರಯೋಗ— ಬ್ರಹ್ಮ-ಕ್ಷತ್ರ ಪ್ರಯೋಗ— ಕ್ಷತ್ರ ವಿಭಜನೆ - ಜೀವನ– ಶೂದ್ರ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ, ನಿಷಾದ — ಪಂಚ ಸಂಸ್ಕೃತಿಗಳು — ವಿಶ್ವರೂಪ— ಚೇತನಾಚೇತನ— ಶೂದ್ರ— ಜನ್ಮ, ಮುಕ್ತಿ— ಸಂಸ್ಕೃತಿಗಳ ಪ್ರಯೋಗ ನಿರ್ವಾಹ, ಸಮಾನತೆ — ಜೀವನ ಪ್ರಧಾನ- ಅವಸ್ಥಾ- ಪ್ರಭಾವ, ಅನಿವಾರ್ಯ ಅಪ್ರತಿಹತ.

CC-0. In Public Domain. Gurukul Kangri Collection, Haridwar

ಪುಟ

೬. ಆಚಾರ ೨೦೭-೨೯೪

ಲಕ್ಷಣ– ಏಕೈಕ ಬ್ರಾಹ್ಮಣಾಚಾರ— ಉಪಾಧಿ, ಅನುಭವ.. ವ್ಯಂಜಕಾವರಣ– ಕರ್ತವ್ಯ ಕರ್ಮ ತತ್ತ್ವ ವಿಶ್ವವ್ಯಾಪಿ– ಬ್ರಹ್ಮಾನುಸಂಧಾನ ವ್ಯಾಪಾರ, ಯಜ್ಞ— ಆಚಾರವೇ ವ್ಯವಹಾರ– ವ್ಯಕ್ತಿಗಳ ದೇವತ್ವ, ಅಸುರತ್ವ–ಸಂಸ್ಕೃತಿ, ಆಚಾರ ವ್ಯವಹಾರಗಳ ರಾಜನೀತಿಕಲ್ಪವೃಕ್ಷದ ಬೇರು, ಕಾಂಡ, ಕೊಂಬೆಗಳಂತೆ– ವ್ಯವಹಾರಾತೀತ– ಆಶಾ ನಿರಾಶಾವಾದವಲ್ಲ ನಿತ್ಯಸುಖಾನುಸಂಧಾನ– ಕ್ಷತ್ರ, ಪ್ರಭುತ್ವಗಳಿಂದ ಆಚಾರ ವಿಧಾನ– ಯಜ್ಞಗಳಲ್ಲಿ ರಾಜನೀತಿ ವೈಖರಿ– ರಾಜನೀತಿ, ಯೋಗ— ಯುಗಾದಿ ವೇದಗಳೂ, ವೈಶ್ಯಾದಿ ಬಿರುದುಗಳೂ ನಿತ್ಯ ವೈದಿಕ ಯಜ್ಞ ಅನುಸಂಧಾನ ವೃತ್ತಿ ಕರ್ಮ— ವರ್ತನೆ ಮಿತಿ– ಆವರಣ ವರ್ತನೆ, ವರ್ಣ, ವೃತ್ತಿ– ಲಕ್ಷಣ ಸ್ವರೂಪ— ಸಾಹಸ (ಉನ್ನತಿ, ಅವನತಿ)– ವಿಶೇಷ ವರ್ತನೆ (ರಾಜ್ಯದ ಪಂಚವಲಯ)— ಸಮತಾ ಭಾವನೆ, ಜೀವನ ಸಿದ್ಧಿ— ವೃತ್ತಿಮಹಿಮೆ, ಸರ್ವಸಮಾನ– ಜನ್ಮ ಗೌಣ, ವರ್ತನೆ ಪ್ರಧಾನ– ಸತ್ತ್ವ ಪರೀಕ್ಷೆ ಸನ್ಯಾದಿಗಳು ಕ್ಷತ್ರಾಂಗ ವರ್ತನೆ– ಅಂಗವರ್ತನೆ, ಪರಿವರ್ತನೆ— ಕ್ಷೇತ್ರ ವರ್ಣ ವೃತ್ತಿ, ಅನಿತ್ಯ— ಆಚಾರ, ವೃತ್ತಿ, ವರ್ಣ, ಅವಸ್ಥೆ — ವೃತ್ತಿದೋಷ ಜಾತಿಭಂಗ, ಜೀವನದ ಮುಗ್ಗಟ್ಟು– ಸ್ವಧರ್ಮ, ಸ್ವಾಚಾರ, ಸ್ವಕರ್ಮ ಪರಧರ್ಮ ಪರಾಚಾರ ಪರಕರ್ಮ— ಸ್ವ-ಪರಗಳ ಮಿತಿ— ಪೂರ್ಣ, ಅವ್ಯತ, ವೈಯಕ್ತಿಕ ಕರ್ಮ– ವಿವರಣೆ ಮಿತಿ– ಸ್ವಾತಂತ್ರ್ಯ– ಸ್ವಕರ್ಮ— ಪ್ರಾದೇಶಿಕ, ರಾಷ್ಟ್ರದ, ಸಾಮಾಜಿಕ, ಕೌಟುಂಬಿಕ, ವೈಯಕ್ತಿಕ— ಸ್ವಪರ ವ್ಯಾವೃತ್ತಿ, ವ್ಯಾಪ್ತಿ.

೭. ಅನುಷ್ಠಾನ ೨೯೫-೩೩೬

ಸ್ತ್ರೀಯರ ಪಾತ್ರ, ಹೊಣೆ– ವೈವಿಧ್ಯ– ಪಂಥಕಾರಣ. ಅಹಂಕಾರ– ಗ್ಲಾನಿ– ಧರ್ಮಗ್ಲಾನಿ– ದೂರೀಕರಣ.

೮. ಜೀವನಯೋಗ – ಅನುಸಂಧಾನ ೩೩೭-೩೬೦

ರಾಜನೀತಿ–– ರಾಜಯೋಗ — ಯೋಗಸಿದ್ಧಿಯ ಹಂತಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

श्रीगणेशाय नमः

ಶ್ರೀ ಯೋಗಾನಂದಗುರುಪಾದುಕಾಭ್ಯೋ ನಮಃ

# ೧. ಧರ್ಮ

## ಸ್ವಧರ್ಮ ವಿವೇಚನೆ

ಸ್ವಧರ್ಮ ಶಬ್ದವು ತುಂಬಾ ಬಳಕೆಯಲ್ಲಿರುತ್ತದೆ; ನಿತ್ಯಜೀವನ ವ್ಯವಹಾರದಲ್ಲಿ ಎಡೆಬಿಡದೆ ತುಂಬಿಕೊಂಡಿರುತ್ತದೆ. ಧರ್ಮ ಶಬ್ದವನ್ನು ಉಪಯೋಗಿಸದಿರುವ ಸಂದರ್ಭವೇ ಪ್ರಪಂಚದಲ್ಲಿಲ್ಲವೆಂಬಂತೆ ಅದು ಸುತ್ತಿಕೊಂಡಿರುವುದು. ಆದರೂ ವಿವೇಕಯುತ ವಿಮರ್ಶೆಯು ಮರೆಯಾಗಿರುವುದರಿಂದ ಧರ್ಮ ಶಬ್ದದ ಲಕ್ಷಣ, ಸ್ವರೂಪ ವ್ಯಾಪ್ತಿಗಳನ್ನು ಗ್ರಹಿಸುವುದಕ್ಕಾಗದೆ ಮತ್ತು ಗ್ರಹಿಸದೆ ಜನಗಳು ಸಂದೇಹ ಸಾಗರದಲ್ಲಿ ಮುಳುಗುತ್ತಾ ತೇಲುತ್ತಾ ಇರುವುದಾಗಿದೆ. ಸ್ವಧರ್ಮವೂ, ಧರ್ಮವೂ ಅಧರ್ಮವೂ ದೃಷ್ಟಿಗೆ ಗೋಚರಗಳಾಗುವುದಿಲ್ಲವಾದುದರಿಂದ ವಿವೇಚನೆಯಿಂದ ಅವುಗಳನ್ನು ಗ್ರಹಿಸಬೇಕಾಗಿದೆ. ಸ್ವಧರ್ಮವಿವೇಕವು ಮಾತ್ರ ಮಾನವನ ಮಿತಿ(ಹಂತ)ಯಲ್ಲಿರುತ್ತದೆ.

## ಧರ್ಮ ಮತ್ತು ಬ್ರಹ್ಮ

ಧರ್ಮವು ವಿಶ್ವವ್ಯಾಪಿಯಾದುದು. ಒಂದು ಕಡೆ, ಒಂದು ಕಾಲದಲ್ಲಿ ಇರುವುದೆಂದಾಗಲೀ, ಮತ್ತೊಂದು ಕಡೆ ಮತ್ತೊಂದು ಕಾಲದಲ್ಲಿ ಇಲ್ಲವೆಂದಾಗಲೀ ಧರ್ಮದ ವಿಷಯದಲ್ಲಿ ಹೇಳಲಾಗುವುದಿಲ್ಲ. ಧರ್ಮವು ತ್ರಿಕಾಲಾಬಾಧಿತವಾಗಿ ಸರ್ವದಾ ಸರ್ವತ್ರ ಏಕಪ್ರಕಾರವಾಗಿ ಅಖಂಡವಾಗಿ ತುಂಬಿರುವುದು. ಇಂತಹ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯವಾಗಿ ಧರ್ಮಶಬ್ದವನ್ನು ಬಳಸುತ್ತಾರೆ. ಪೂರ್ವೋತ್ತರಮೀಮಾಂಸಾ ಶಾಸ್ತ್ರಗಳಲ್ಲಿ ಅದ್ವಿತೀಯ ವಿದ್ವಾಂಸರೂ ಅನುಷ್ಠಾನಪರರಾದ ಶ್ರೋತ್ರಿಯರೂ ಆದ ಅಪ್ಪಯ್ಯದೀಕ್ಷಿತರು ಧರ್ಮ ಬ್ರಹ್ಮ-ಶಬ್ದ ಶಬ್ದಾರ್ಥಗಳ ಮೇಲೆ ಬಹಳ ಸೂಕ್ಷ್ಮವಾಗಿ ವಾಕ್ಯಾರ್ಥಗಳನ್ನು ನಡೆಸಿರುತ್ತಾರೆ. ಪಾರಮಾರ್ಥಿಕವಾಗಿ ವಿಮರ್ಶಿಸಿದಾಗ ಧರ್ಮಶಬ್ದವನ್ನೂ ಬ್ರಹ್ಮಶಬ್ದ ಸ್ಥಾನದಲ್ಲಿ ಪ್ರಯೋಗಿಸಬಹುದೆಂದು ಹೇಳಿರುತ್ತಾರೆ.

ಬ್ರಹ್ಮವನ್ನು ಸಗುಣ ನಿರ್ಗುಣವೆಂಬದಾಗಿ ಭಾವಿಸಿರುತ್ತೇವೆ. ಅದರಂತೆ ಧರ್ಮವನ್ನೂ ಸಗುಣ ನಿರ್ಗುಣವೆಂಬದಾಗಿ ತಿಳಿಯಬೇಕಾಗಿದೆ ಸ್ಪಷ್ಟವಾಗಿ ಹೇಳುವುದಾದರೆ, ಕ್ರಮವಾಗಿ ಪರಿಮಿತ ಮತ್ತು ಪೂರ್ಣ (Absolute) ಶಬ್ದಗಳನ್ನು ಪ್ರಯೋಗಿಸಿ ಪರಿಮಿತ ಧರ್ಮ (ಆಚಾರ) ಮತ್ತು ಪೂರ್ಣಧರ್ಮವೆಂಬದಾಗಿ ಭಾವಿಸುವುದು ಸ್ವತಸ್ಸಿದ್ಧವೂ ತರ್ಕಬದ್ಧವೂ ಆಗಿರುತ್ತದೆ.

## ಬ್ರಹ್ಮ–ಧರ್ಮ ಶಬ್ದ ನಿಷ್ಪತ್ತಿ, ಅರ್ಥ

'ಬೃಂಹ್' ಧಾತುವಿನಿಂದ ವ್ಯುತ್ಪನ್ನವಾದುದು ಬ್ರಹ್ಮಶಬ್ದ; 'ವೃದ್ಧಿಯನ್ನು ಹೊಂದುವುದು' ಎಂದು ಅದರ ಅರ್ಥ. 'ಧೃ' ಧಾತುವಿನಿಂದ ವ್ಯುತ್ಪನ್ನವಾದುದು ಧರ್ಮ ಶಬ್ದ; ಧರಿಸಿರುವುದು ಅಥವಾ ಹಿಡಿದಿರುವುದು, ಪೋಷಿಸುವುದು ಎಂದು ಅದರ ಅರ್ಥ. ಬ್ರಹ್ಮಶಬ್ದವು ಪೂರ್ಣ, ಅನಂತ-ಅಖಂಡಜ್ಞಾನಾನಂದಸೂಚಕವೆಂದು ಸಾಕ್ಷಾತ್ಕರಿಸಿಕೊಂಡಿರುತ್ತಾರೆ. ಬ್ರಹ್ಮವೇ ಧರ್ಮವಾಗಿ ವಿವರ್ತವಾಗುವುದು; ಧರ್ಮವೇ ಕರ್ಮ; ಧರ್ಮ-ವಾ-ಕರ್ಮದಿಂದ ಅಖಂಡ ಬ್ರಹ್ಮ ಸಾಕ್ಷಾತ್ಕಾರ-ಅಪರೋಕ್ಷಾನುಭವವುಂಟಾಗುವುದು.

ಧರ್ಮ ಬ್ರಹ್ಮ ವಾಚಕಗಳಾದ ನಾದ ಸರಣಿಗಳು ಜಗತ್ತಿನಲ್ಲೆಲ್ಲಾ ತುಂಬಿರುತ್ತವೆ. ಇವು ಸಾಕ್ಷಾತ್ಕಾರವಾದಂತೆಲ್ಲಾ ಮನಸ್ಸಿನ ಮತ್ತು ಇಂದ್ರಿಯಗಳ ಮಟ್ಟದಲ್ಲಿ ಪ್ರತ್ಯಕ್ಷವಾಗುವುವು ಮತ್ತು ವಾಕ್, ಶ್ರುತಿ ಲೇಖನಗಳ ರೂಪದಲ್ಲಿ ಪ್ರಸಾರವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಬ್ರಹ್ಮಧರ್ಮಪ್ರತಿಪಾದಕ-ದರ್ಶಕ-ಶಬ್ದರಾಶಿಗಳು

ಬ್ರಹ್ಮ ಮತ್ತು ಧರ್ಮ ಪದಾರ್ಥಗಳ ದರ್ಶಕಗಳಾದ ವೇದ ರಾಶಿಗಳು ಅಖಂಡವಾಗಿ ಅನಂತವಾಗಿರುತ್ತವೆ. ವೇದಾಂತ ಅಂದರೆ ವೇದದ ಕೊನೆಯ ಭಾಗವೆಂದು ಅರ್ಥ ಮಾಡಿ ಉಪನಿಷತ್ತುಗಳಿಗೆ ಮಾತ್ರ ವೇದಾಂತಶಬ್ದವನ್ನು ಅನ್ವಯಿಸುವುದು ಸತ್ಯಾಂಶವಾಗಲಾರದು. ವೇದಗಳ ಅಂತರ್ಭಾಗವಾಗಿ ವೇದಾಂತವೆನಿಸಿ ವೇದೋಕ್ತವಿಷಯ-ಗಳ ಬಳಿಯಲ್ಲಿರುವ ಪ್ರತಿ ವೇದೋಕ್ತಿ-ಗರ್ಭ ವಿಷಯಗಳಾದ ಉಪನಿಷತ್‌ಗಳು (ಉಪ = ಸಮೀಪದಲ್ಲಿ ನಿಷತ್ = ಇರುವುವು) ಸರ್ವ ವೇದವ್ಯಾಪಿಯಾಗಿರುತ್ತವೆ.

ಋಕ್, ಯಜುಸ್, ಸಾಮ, ಅಥರ್ವಗಳು ಕರ್ಮದ ವಿವರ್ತ ರೂಪಗಳಾಗಿರುತ್ತವೆ. ಕರ್ಮದ ರೀತಿನೀತಿಗಳನ್ನು ಅನುಸರಿಸುವ ವೇದೋಕ್ತಿಗಳನ್ನು ಸಂಪುಟೀಕರಿಸಿ ಅಂದರೆ ವಿಭಜಿಸಿ, ಸಂಗ್ರಹಿಸಿ, ಜೋಡಿಸಿ ಅಧ್ಯಯನ ಸೌಕರ್ಯವನ್ನು ಕಲ್ಪಿಸಿರುವುದರಿಂದ ಋಗ್ಭಾಗ, ಯಜುರ್ಭಾಗ, ಸಾಮಭಾಗ, ಅಥರ್ವಭಾಗಗಳಾಗಿವೆ. ಈ ಭಾಗಗಳು ಸ್ವತಂತ್ರವಾದ ನಾಲ್ಕು ವೇದಗಳು! ಎಂಬದಾಗಿಯೂ ಇವುಗಳು ಒಂದಾದ ಮೇಲೊಂದು ಎಂಬ ಕ್ರಮದಲ್ಲಿ ಆವಿರ್ಭವಿಸಿದುವು! ಎಂಬದಾಗಿಯೂ ಆಪಾತತಃ ಅರ್ವಾಚೀನರಿಗೆ ಕಾಣುವ ಗ್ರಂಥರಾಶಿಗಳು ಸಾಮಾನ್ಯರನ್ನು ಸಂದೇಹಕ್ಕೆ ಗುರಿಮಾಡಬಹುದು ಮತ್ತು ಈ ಸಂದೇಹಾರ್ಥವನ್ನು ಬಿಡಿ ಬಿಡಿಯಾದ ಪುರುಷಸೂಕ್ತ ವೇದೋಕ್ತಿಗಳ ಉದಾಹರಣೆಯಿಂದ ಸಮರ್ಥಿಸಬಹುದು; ಉಪನಿಷತ್ತುಗಳು ಬೇರೆಯಾಗಿರುವಂತೆ ತೋರ್ಪ-ಡಿಸಬಹುದು. ಈ ಸಂದೇಹಗಳನ್ನು ತೋರಿಸಿ ಪರಿಹರಿಸಿ ನಿಜಾಂಶವು ಸ್ಫುರಿಸುವಂತೆ ಮಾಡುವುದು ರಾಜನೀತಿ ವಿವೇಕವು. ಆದರೆ 'ವೇದ ಮಾರ್ಗವನ್ನು ತಿಳಿದಿರುತ್ತೇನೆ'ಂದು ವಿಜೃಂಭಿಸುವ ಪಾಂಡಿತ್ಯವೂ ಅನನ್ಯಶರಣವಾಗಿ ಆ ಪಾಂಡಿತ್ಯವನ್ನು ಆಶ್ರಯಿಸಬೇಕಾದ ಜನತೆಯೂ ಅರ್ಥಶಾಸ್ತ್ರವನ್ನೂ (ರಾಜನೀತಿ) ಅದರ ಪ್ರಕ್ರಿಯೆಯನ್ನೂ ದೂರದಲ್ಲಿ ಟ್ಟಿರುವುದರಿಂದ ವೇದಗಳ ಸ್ವರೂಪಜ್ಞಾನಕ್ಕೂ ಪಾಂಡಿತ್ಯಕ್ಕೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಂಬಾ ಅಂತರವು ಕಲ್ಪಿತವಾಗಿದೆ. ಇದರಿಂದ ವೇದಗಳ ಸ್ವರೂಪ ಜ್ಞಾನವೇ ಮಾನವೀಯತೆಯಿಂದ ಮರೆಯಾದಂತಿದೆ. ಧರ್ಮದ ಆಶ್ರಯ ದಲ್ಲಿ ಅಭ್ಯುದಯವನ್ನು ಹೊಂದಿದವರೆನಿಸಿಕೊಂಡ ವಿದ್ವಾಂಸರು ರಾಜ ನೀತಿ ವ್ಯಾಸಂಗವನ್ನು ಬಹಿಷ್ಕರಿಸಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ರಾಜನೀತಿಜ್ಞಾನವಿಲ್ಲದ ಪಾಂಡಿತ್ಯದ ಸಹಾಯದಿಂದ ಯೂರೋಪ್ ಖಂಡದವರು ವೇದಗಳ ವಿಚಾರವನ್ನು ತಿಳಿಯಲು ಹೊರಟು ಕಗ್ಗತ್ತಲೆಯಲ್ಲಿ ತಡವರಿಸಿ, ಎಡವಿ, ಮುಗ್ಗರಿಸಿರುವರು. ಪರಕೀಯ ದಾಸ್ಯ ಮನೋಭಾವವನ್ನು ಹೆಚ್ಚಿಸಿಕೊಂಡು ಪಾಶ್ಚಾತ್ಯ ಪುಸ್ತಕ ಭಂಡಾರವನ್ನು ಉಪಾಸನೆ ಮಾಡುವವರು ಪಾಶ್ಚಾತ್ಯರ ಅಲ್ಪಜ್ಞಾನದ ಪ್ರಭಾವಕ್ಕೆ ಸಿಕ್ಕಿ ಭಯದಿಂದ ಮಿಲಿಗುಟ್ಟುವ ವೇದವಿಚಾರಗಳನ್ನು ಮುಂದಟ್ಟುಮಾಡಿಕೊಂಡು ವಿಜೃಂಭಿಸುವುದರಿಂದ ಸ್ವಧರ್ಮ ಜ್ಞಾನಕ್ಕೇ ಕುಠಾರ ಪ್ರಯೋಗ ಮಾಡುವಂತಾಗಿದೆ. [ಅಂಧೇನೈವ ನೀಯಮಾ-ನಾಃ ಯಥಾಂಧಾಃ — ಕಠ]

ಪಾಶ್ಚಾತ್ಯರು ತಮ್ಮ ವ್ಯಾಸಂಗಕ್ಕೆ ಗುರಿಯಾದ ವೇದಭಾಗಗಳನ್ನು ಸ್ವತಂತ್ರವಾದ ವೇದಗಳೆಂದೇ ಭ್ರಮಿಸಿ ಪ್ರತಿಯೊಂದು ವೇದವೂ ಸ್ವತಂತ್ರವಾದ ಆಚಾರವನ್ನು ಬೋಧಿಸುತ್ತದೆಂದು ಪ್ರಕಟಿಸಿದಾರೆ. ಋಗ್ವೇದ-ಆಚಾರ, ಅಥರ್ವವೇದ-ಆಚಾರ, ಉಪನಿಷದಾಚಾರಗಳು ಬೇರೆ ಬೇರೆಯಾಗಿವೆ ಎಂದು ಭ್ರಮಿಸಿರುತ್ತಾರೆ. ಋಗ್ವೇದಭಾಗದಲ್ಲಿ ಕಂಡ ವಿಷಯಗಳೆಲ್ಲಾ ಮೊದಲು ಉಂಟಾದಂತೆಯೂ ಅನಂತರ ಇತರ ವೇದ ವಿಷಯಗಳು ಹೊರಕ್ಕೆ ಬಂದಂತೆಯೂ ಹೇಳಿರುತ್ತಾರೆ. ಇವರ ಗ್ರಂಥಗಳೇ ಪರಮಪವಿತ್ರವಾದ ಪ್ರಮಾಣವೆಂದು ನಂಬಿ ಹೃದ್ಗತಮಾಡಿ ಕೊಂಡು ಪ್ರವೀಣರೆಂದೆನಿಸಿಕೊಂಡಿರುವವರಿಗೆ ವೈದಿಕಮಾರ್ಗವಾಗಲೀ ಅವೈದಿಕ ಮಾರ್ಗವಾಗಲೀ ತಿಳಿಯದೆ ಉಭಯಭ್ರಷ್ಟತೆಯುಂಟಾಗಿರು ತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬ್ರಹ್ಮಸ್ವರೂಪವಾದ ಯಜ್ಞ-ವಾ-ಧರ್ಮ -ವಾ-ಕರ್ಮವನ್ನೇ ಮರೆತು ಸ್ವಧರ್ಮ ವಿಚಾರಗೃಹದ ಬಾಗಿಲನ್ನು ಮುಚ್ಚಿದಂತಾಗಿರುವುದರಿಂದ ಸ್ವಧರ್ಮವಿವೇಕವೆಂಬ ಬೀಗದಕೈ ಸಹಕಾರ ದಿಂದ ಸ್ವಧರ್ಮಜ್ಞಾನಾಂಗಣವನ್ನು ಪ್ರವೇಶಿಸಬೇಕಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ರಸಿಕತಾ ವಿಮರ್ಶೆ

ವಸ್ತುತಃ ರಸಾಭಿಜ್ಞತೆಯಿಂದ ದರ್ಶನಪಥಕ್ಕೆ ಬಂದ ಋಗ್ವೇದಾದಿ ವಿಷಯಗಳು ಪರಸ್ಪರ ಸ್ವತಂತ್ರಗಳಾಗಿ ನಿಲ್ಲತಕ್ಕವುಗಳಲ್ಲ. ಉಪನಿಷತ್ ಅರ್ಥಗರ್ಭಿತವಲ್ಲದ ವೇದದ ವಿಷಯಗಳೂ ಯಜ್ಞಸಾಧಕ ವಿಷಯ ಗಳಿಂದ ಬೇರೆಯಾದ ಉಪನಿಷದ್ವಾಕ್ಯಗಳೂ ಚರಿತಾರ್ಥವಾಗಲಾರವು. ವೇದರಾಶಿಯಲ್ಲಿ ಅಡಕವಾಗಿರುವ ಸಂಹಿತಾ, ಬ್ರಾಹ್ಮಣ ಮತ್ತು ಉಪನಿಷತ್ತುಗಳು ಪರಸ್ಪರ ಹೆಣೆದುಕೊಂಡು ಅಖಂಡವಾಗಿ ಹಬ್ಬಿರುತ್ತವೆ. ಪ್ರಕೃತಿಸಿದ್ಧವಾಗಿ ಪ್ರಕೃತಿದತ್ತವಾದ ಈ ಮೂಲಾಂಶಗಳ ಆಧಾರ ಮತ್ತು ದೃಷ್ಟಿಕೋಣಗಳಿಂದ ಸಂಕುಚಿತಭಾವವೆಂಬ ಅಂಧಕಾರವನ್ನು ಹೋಗಲಾಡಿಸಿಕೊಂಡ ಹೊರತು ಸ್ವಧರ್ಮಜ್ಞಾನವಾಗಲೀ ಸ್ವಧರ್ಮ ಅನುಷ್ಠಾನವಾಗಲೀ ಸುಗಮವಾಗುವುದಿಲ್ಲ.

ಈ ಬಗೆಯ ರಸವದ್ವಿಮರ್ಶೆಗೆ ರಾಜನೀತಿಶಾಸ್ತ್ರಜ್ಞಾನವು ಮೂಲ ಕಾರಣ. ಸಂದಿಗೊಂದಿಗಳಲ್ಲಿ ಬೇರೆ ಬೇರೆಯಾಗಿ ಕಾಣುವ ಸ್ವಾಚಾರಗಳ ಮೂಲವನ್ನು ರಾಜನೀತಿಯು ಕಂಡುಹಿಡಿಯಬಲ್ಲುದು. ಈ ಸ್ವಾಚಾರ ಗಳು ಹೇಗೆ ಒಂದನ್ನೊಂದು ಸಂಬಂಧಿಸಿವೆ ? ಒಂದೇ ಮೂಲವುಳ್ಳ ಆಚಾರದಿಂದ ಅವು ಹೇಗೆ ಬೇರೆ ಬೇರೆಯಾಗಿ ಹೊರಕ್ಕೆ ಬಂದುವು ? ಎಲ್ಲಾ ಸ್ವಾಚಾರಗಳಿಗೂ ಮೂಲಭೂತವಾದ ಪದಾರ್ಥವನ್ನು ತಿಳಿ ಯುವುದರಿಂದ ಆಚಾರ ನಿರ್ಣಯವು ಸಾಧ್ಯವಾಗುವ ಬಗೆ ಹೇಗೆ ? ಇವೆಲ್ಲವೂ ರಾಜನೀತಿಯಿಂದ ತಿಳಿಯಬರುವುದು. ರಾಜನೀತಿಯ ಮೂಲತತ್ವ ಮತ್ತು ವಿವರಗಳನ್ನು ತಿಳಿಯದವರಿಗೆ ವೇದದ ಅಪೌರುಷೇಯತ್ವ-ವಿಚಾರ ವಿಮರ್ಶೆಗಾಗಲೀ ಕಾಲಪ್ರಶ್ನೆಯ ವಿವರ ವಿಮರ್ಶೆಗಾಗಲೀ ಅರ್ಹತೆಯುಂಟಾಗುವುದಿಲ್ಲ.

## ಪ್ರತಿಪಾದನೆಯ ನ್ಯೂನತೆ

ಸದ್ಯಃ ಪರಿಸ್ಥಿತಿಯಲ್ಲಿ ದೊರೆತಿರುವ ರಾಜನೀತಿ ಗ್ರಂಥಗಳು ತುಲನಾತ್ಮಕ ದೃಷ್ಟಿಯಿಂದ ದೂರ ಸರಿದಿರುವುವು. ವ್ಯಕ್ತಿ, ಕುಟುಂಬ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾಜ, ದೇಶ, ರಾಷ್ಟ್ರಗಳೆಂಬ ಪಂಚರಾಜ್ಯವಲಯಗಳ ಮನೋಭಾವದಿಂದ ವಿರಹಿತವಾಗಿರುತ್ತವೆ; ವೇದೋಕ್ತಮಾರ್ಗವನ್ನು ಪರಿಪಾಲಿಸುವಂತೆ ನಟಿಸುತ್ತಿವೆ; ಏಕಾಕ್ಷಿಗಳಂತೆ ಏಕಪಕ್ಷವಾಗಿ ಸಂಕುಚಿತಭಾವನೆಯಿಂದ ವಿಶಾಲಪ್ರಪಂಚದ ಅರಿವಿಲ್ಲದೆ ಏಕೈಕಶಾಸ್ತ್ರ ಮೂಲೆಯಿಂದ ಬರೆಯಲ್ಪಟ್ಟಿರುವವುಗಳಾಗಿ ಕಾಣುತ್ತವೆ. ಇಷ್ಟಾದರೂ ಈ ಗ್ರಂಥಗಳು ರಾಜನೀತಿ ರಹಸ್ಯವನ್ನು ದೂರೀಕರಿಸಿಲ್ಲ. ಪ್ರತಿಯೊಂದು ಪಂಕ್ತಿಯೂ ಸಹ ರಾಜನೀತಿ ಗರ್ಭಿತವಾಗಿರುವುದು. ಈ ರಹಸ್ಯವನ್ನು ಭೇದಿಸಿದ ಹೊರತು ಸಂಪ್ರದಾಯದ ವಿಶಾಲಭಾವನೆಯು ಉಂಟಾಗುವುದಿಲ್ಲ, ಸಂಕೋಚಭಾವವು ಹೋಗುವುದಿಲ್ಲ, ಶಾಂತಿದಾಯಕ ಸ್ವಧರ್ಮಾನುಷ್ಠಾನಜ್ಞಾನವು ಸಿಲುಕುವುದಿಲ್ಲ.

ಮಾನವತೆಯ ಸಾಮಾನ್ಯ ಜೀವನ ಮಟ್ಟವನ್ನೂ ವಿವೇಕದ ಅತ್ಯುನ್ನತ ಮಟ್ಟವನ್ನೂ ಸರಿದೂಗಿಸುವ ಮನೋಭಾವವು ಆವಶ್ಯಕ. ಇದರಿಂದ ಜೀವನಯಜ್ಞದಲ್ಲಿ ಗರ್ಭಿತವಾಗಿರುವ ಅದ್ವಿತೀಯ ರಾಜನೀತಿ ಶಾಸ್ತ್ರ ತತ್ವವನ್ನೂ ತನ್ಮೂಲಕ ಆಚಾರ, ಸಂಸ್ಕೃತಿ ವ್ಯವಹಾರಗಳಿಗೆ ಮೂಲಾಧಾರವಾದ ಧರ್ಮಶಾಸ್ತ್ರವನ್ನೂ ತಿಳಿಯಬೇಕು. ಇದಕ್ಕಾಗಿ ಕುಹಕಗಳನ್ನು ಬಿಟ್ಟು ಯತ್ನಿಸುವ ಗುರುತರವಾದ ಹೊಣೆಗಾರಿಕೆಯು ಪ್ರಜೆಗಳಿಗೂ ಪಂಡಿತರೆನಿಸಿಕೊಂಡಿರುವವರಿಗೂ ಸೇರಿದುದಾಗಿದೆ.

## ಅಮೃತಮಂಥನ

ರಸಾಭಿಜ್ಞತೆಯ ವಿಮರ್ಶೆ ಅಥವಾ ರಾಜನೀತಿ ಅಥವಾ ರಾಜಯೋಗದ ರಹಸ್ಯಗಳು ಅರ್ಹತೆಯನ್ನು ಸಂಪಾದಿಸಿದ ದೇಹಿಗೆ ತಾವಾಗಿಯೇ ಬೋಧ್ಯವಾಗುವುವು. ಶ್ರೇಯೋಭಿವೃದ್ಧಿಗಳಿಗೆ ಸರ್ವರಿಗೂ ಹಕ್ಕು (ಅಧಿಕಾರ) ವುಂಟು. ಅದರ ಪ್ರಾಪ್ತಿಗೆ ಕೆಲವು ವರ್ತನೆಗಳು ಸಹಕರಿಸುವುವು, ಕೆಲವು ಅಡ್ಡಿಯನ್ನೊಡ್ಡುವುವು. ಜೀವಿತ ವರ್ತನೆಯೆಲ್ಲವೂ ಅಮೃತಪ್ರಾಪ್ತಿಗಾಗಿ ನಡೆಯುವ ಮಥನ ಕ್ರಿಯೆಯಾಗಿರುವುದು. ದೋಷದಿಂದ ಕೂಡಿದ ಕರ್ಮದಿಂದ ವಿಷವೂ ಪ್ರಾಪ್ತವಾಗುವುದು. ಕ್ರಮೇಣ ನಿರ್ದುಷ್ಟವಾಗಿ ಮುಂದುವರಿದ ಮಂಥನಕ್ರಿಯೆಯು ಅಮೃತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಪ್ತಿ ಅಮೃತ ರಕ್ಷಣೆ ಮತ್ತು ಅಮೃತಾನುಭವಗಳಲ್ಲಿ ವಿವರ್ತವಾಗುವುದು. ಇವಕ್ಕೆ ರಾಜನೀತಿಯಲ್ಲಿ ಹೇಳಿರುವ ಪಾಠಗಳನ್ನು ಸಮಯೋಚಿತವಾಗಿ ಅನುಸಂಧಾನಮಾಡಿ ಅನ್ವಯಿಸಿಕೊಳ್ಳಬೇಕು. ಪಿಂಡಾಂಡ ಬ್ರಹ್ಮಾಂಡ ವ್ಯಾಪಾರಗಳೆರಡೂ ಸಮವಾಗಿ ಪರಸ್ಪರ ಸಹಾಯದಿಂದ ವರ್ತಿಸಿದರೆ ಅಮೃತವು ಸುಲಭವಾಗುವುದು. ಕೇವಲ ಪಿಂಡಾಂಡದ ವ್ಯಾಪಾರಗಳಿಂದಾಗಲೀ ಕೇವಲ ಬ್ರಹ್ಮಾಂಡದ ವ್ಯಾಪಾರಗಳಿಂದಾಗಲೀ ಅಮೃತವು ಸಾಧ್ಯವಾಗಬೇಕಾದರೆ ದೇಹಿಯೂ (ಪಿಂಡಾಂಡ) ಆವರಣಗಳೂ (ಬ್ರಹ್ಮಾಂಡ, ವಿಧಿ ಇತ್ಯಾದಿ) ಹೆಚ್ಚಿನ ಹೊಣೆಗಾರಿಕೆಯನ್ನು ವಹಿಸಿ ಸಾಹಸ ಮಾಡಬೇಕಾಗಿರುವುದು.

## ಪಂಚಮವೇದ – ವ್ಯವಹಾರ

ಪಂಚಮವೇದಭಾಗವಾದ ರಾಜನೀತಿಯ ತಿಳಿವಳಿಕೆಯ ಅಭಾವದಿಂದ ದೇವಕಾರ್ಯಾದಿ ಸ್ವಕರ್ಮಾಚರಣೆಗಳಲ್ಲಿ ಉಂಟಾಗುವ ನ್ಯೂನಾತಿರಿಕ್ತಗಳೂ ದೋಷಗಳೂ ದಿನೇ ದಿನೇ ಲೋಕಕಂಟಕತನವನ್ನು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸುವುವು. ಇಂತಹ ದುರವಸ್ಥೆಗಳನ್ನೂ ಅವ್ಯವಸ್ಥೆಗಳನ್ನೂ ಹೋಗಲಾಡಿಸಿ ವ್ಯವಹಾರವನ್ನು ಕ್ರಮಪಡಿಸಿ ಸುವ್ಯವಸ್ಥೆಗೊಳಿಸುವ ಮತ್ತು ರಾಜನೀತಿಯೇ ಸ್ವಕರ್ಮವಾಗಿರುವ ಕ್ಷತ್ರಿಯವು ಮುಂದರಿಯಬೇಕು. ಕ್ಷಾತ್ರವು ಬಲವಾಗಿ ನಿಂತು ಕ್ಷೇಮಕಾರಿಯಾಗಲು ಉಳಿದ ಶ್ರೋತ್ರಿಯಾದಿಗಳು ಸಹಕರಿಸಬೇಕು. ಈ ಸಹಕಾರದಿಂದ ಕ್ಷತ್ರಿಯತ್ವವು ಎಲ್ಲಾ ಸ್ವಕರ್ಮಗಳಲ್ಲಿ ಪ್ರಭಾವವನ್ನು ಬೀರಿ ಪ್ರಜೆಗಳೆಲ್ಲರೂ ಆದರ್ಶಪ್ರಾಯರಾಗಿ ಬ್ರಹ್ಮಾನುಸಂಧಾನಗರ್ಭಿತವಾದ ಸ್ವಾಚಾರವನ್ನೂ ಸಾಮಯಾಚಾರಿಕಧರ್ಮವನ್ನೂ ಸ್ವಧರ್ಮವನ್ನೂ ಬೆಳಗಿ ಲೋಕ-ಶಾಂತಿ-ಕಲ್ಯಾಣವನ್ನುಂಟುಮಾಡುವಂತಾಗುವುದು. ಇದರ ಪರಿಣಾಮವಾಗಿ ವಿಶ್ವದಲ್ಲಿ ಪ್ರತಿಯೊಬ್ಬರೂ ಸ್ವಕರ್ಮನಿಷ್ಠೆಯುಳ್ಳವರಾಗುವಂತೆ ರಾಜ್ಯ (ಶಾಸನ) ಕಾರ್ಯಗಳನ್ನು ವ್ಯಕ್ತಿಯ, ಕುಟುಂಬ, ಸಮಾಜ, ದೇಶ, ರಾಷ್ಟ್ರಗಳೆಂಬ ಪಂಚರಾಜ್ಯವಲಯಗಳಲ್ಲಿ ನಿರ್ವಹಿಸುವ ಕಾರ್ಯವು ತಾನಾಗಿಯೇ ಸುಸ್ಥಿತವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಹುಕಾಲದಿಂದ ರಾಜನೀತಿ ಸೂರ್ಯನು ಮರೆಯಾಗಿರುತ್ತಾನೆ. ಇಂತಹ ಕಗ್ಗತ್ತಲೆಪರಿಸ್ಥಿತಿಯಲ್ಲಿಯೂ ಸೂರ್ಯನ ಉದಯವನ್ನು ಹಂಬಲಿಸಿ ಪ್ರಾರ್ಥಿಸುವುದೇ ಪ್ರಜೆಗಳ ಕೆಲಸವಾಗಿದೆ. ಸರ್ವರನ್ನೂ ಮತ್ತು ಸರ್ವರ ವ್ಯವಹಾರವನ್ನೂ ಉದ್ದೀಪನಗೊಳಿಸಿ ಅವರವರ ಮಿತಿಯಲ್ಲಿ ಅವರವರು ವರ್ತಿಸುತ್ತಾ ಸ್ವಪರಹಿತಗಳಿಗೆ ಯತ್ನಿಸುವಂತೆ ಮಾಡುವ ಹೊಣೆಗಾರಿಕೆಯುಳ್ಳ ರಾಜನೀತಿಯನ್ನು ಸರ್ವರೂ ತಿಳಿಯಬೇಕು. ಚಿತ್ರಗ್ರೀವ ಪಾರಿವಾಳ ಮತ್ತು ಅದರ ಅನುಯಾಯಿಗಳು ಒಗ್ಗಟ್ಟಾಗಿ ಬಲೆಯನ್ನೇ ಮೇಲಕ್ಕೆತ್ತಿ ಬಂಧವಿಮೋಚನೆ ಮಾಡಿಕೊಂಡಂತೆ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಸ್ತ್ರೀಪುರುಷರಾದಿಯಾಗಿ ಯತ್ನಿಸಿ ಅಂಧಕಾರವೆಂಬ ರಾಜನೀತಿ ಜ್ಞಾನಾಭಾವವನ್ನು ಕತ್ತರಿಸಿ ರಾಜನೀತಿ ಸೂರ್ಯನು ಬೆಳಗುವಂತೆ ಮಾಡಬೇಕು. ರಾಜನೀತಿಜ್ಞಾನ ಸೂರ್ಯನಿಂದ ಪ್ರಚೋದಿತರಾದ ಪ್ರಜೆಗಳು ಸ್ವಧರ್ಮಾನುಷ್ಠಾನ ಮಂದಿರದ ಹೊಸಲನ್ನು ದಾಟಿ ಒಳಹೊಗಲು ಅರ್ಹತೆಯನ್ನು ಹೊಂದುತ್ತಾರೆ.

ರಾಜ, ಮಹಾರಾಜ ಶಬ್ದಗಳನ್ನು ಅಸೂಯೆಯಿಂದಲೋ ಎಂಬಂತೆ ಸಂಕುಚಿತ ದೃಷ್ಟಿಯಿಂದ ಅರ್ಥವಮಾಡಿಕೊಳ್ಳುವ ಅಲ್ಪ ತಿಳಿವಳಿಕೆಯಿಂದ ಆತ್ಮವಂಚನೆಯಾಗುವುದು. ರಸಾಭಿಜ್ಞತೆಯಿಂದಲೂ ವಿವೇಕದಿಂದಲೂ ಶಬ್ದಗಳ ಗೂಢಾರ್ಥವನ್ನು ರೂಢಿಯಲ್ಲಿರುವ ಅರ್ಥದೊಂದಿಗೆ ಹೋಲಿಸಿ ನಿಸ್ಪೃಷ್ಟವಾದ ನಿರ್ಣಯವನ್ನು ತಂದುಕೊಳ್ಳಬೇಕು. ರಾಜ, ಮಹಾರಾಜ ಶಬ್ದಗಳನ್ನು ಕುರುಡು ಸಂಪ್ರದಾಯದ ದಾರಿಯಿಂದ ಹೊರಗೆ ಪ್ರಯೋಗ ಶಾಲೆಯೆಂಬ ಅನುಭವದಿಂದ ಪರೀಕ್ಷಿಸಬೇಕು. ರಾಜತ್ವ, ಮಹಾರಾಜತ್ವಗಳು ದೇವತ್ವದಲ್ಲಿ ಐಕ್ಯವನ್ನು ಹೊಂದುವುವು. ಎಂದು ವೇದಗಳೂ ಶಾಸ್ತ್ರಗಳೂ ಘೋಷಿಸುತ್ತವೆ. ದೇವತ್ವವು ಪ್ರಪಂಚದಲ್ಲಿ ತುಂಬಿರುವುದು. ದೇವತ್ವವಿರುವ ಕಡೆಗಳಲ್ಲಿ ರಾಜತ್ವ ಮಹಾರಾಜತ್ವಗಳನ್ನು ನೋಡಬೇಕಾದುದು ಸಹಜವಾಗಿದೆ. ಸಾಧುಮಾರ್ಗವನ್ನು ಬಿಟ್ಟು ಕೊರಕಲು ದಾರಿಯಲ್ಲಿ ನುಗ್ಗಿ ರಾಜ, ಮಹಾರಾಜ ಶಬ್ದಗಳನ್ನು ಕುಹಕದಿಂದ ಭಾವಿಸಿ ದ್ವೇಷಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿದರೆ ಆ ದ್ವೇಷಭಾವನೆಯೆಂಬ ಬೆಂಕಿಯಿಂದ ಬೇಯಬೇಕಾಗುವುದು.

ರಾಜ ಮಹಾರಾಜ ಶಬ್ದಗಳು ಪ್ರಜಾಸಾಮಾನ್ಯವಾಗಿವೆ; ಸರ್ವ ಪ್ರಜೆಗಳಿಗೂ ಅವರವರ ಕಾರ್ಯಗೌರವದಿಂದ ರಾಜತ್ವ ಮಹಾರಾಜತ್ವಗಳನ್ನು ಅನ್ವಯಿಸಬೇಕಾಗಿದೆ. ರಾಜನೀತಿಯೆಂಬುದು ಸುವರ್ಣ ಮಾರ್ಗ, ಸಮತೆಯ ಸೂತ್ರ; ಮಿತಿಯ ದರ್ಪಣ; ಸುಖಶಾಂತಿಪ್ರದವಾದ ಸುಲಭೋಪಾಯವಾಗಿರುತ್ತದೆ. ಇದೇ ಪಂಚಮವೇದ; ಆಚಾರ ವ್ಯವಹಾರ ಸಂಸ್ಕೃತಿಗಳು ಸಮ್ಮಿಶ್ರವಾಗಿ ಜೀವನವು ಪರಿಪಕ್ವವಾಗುವಂತೆ ಮಾಡಿ ದೇವತ್ವಾನುಭವಕ್ಕೆ ಸಹಕರಿಸುವ ಸಹಾಯಕ ಮಿತ್ರ.

ಪಂಚಮವೇದವೆಂಬ ರಾಜನೀತಿಶಾಸ್ತ್ರ ಪರಿಚಯವಿಲ್ಲದ ಯಾವ ಸ್ತ್ರೀ ಪುರುಷ ಪ್ರಜೆಗಳೂ ದಾಂಪತ್ಯ ಸುಖವನ್ನೂ ಅನುಭವಿಸಲಾರರು. ಎಂಬುದಕ್ಕೆ ಉದಾಹರಣೆಗಳು ಸಹೇತುಕವಾಗಿರುತ್ತವೆ. ಶುಕಸಪ್ತತಿ ಕಥೆಗಳಲ್ಲಿ ಈ ತತ್ವಗಳು ಅಡಗಿವೆ. ವ್ಯಕ್ತಿಯು ವೈಯಕ್ತಿಕ ರಾಜ್ಯವನ್ನೂ ಗೃಹಾಧಿಪರು ಗೃಹರಾಜ್ಯವನ್ನೂ ಸುಮುಖವಾಗಿ ನಿರ್ವಹಿಸಲು ರಾಜನೀತಿಜ್ಞಾನವು ಸಾಧನವಾಗಿರುತ್ತದೆ. ಮತ್ತು ಈ ಜ್ಞಾನ ಸಾಧನದಿಂದಲೇ ದೇಶದ ರಾಜ್ಯ ನೌಕೆಯನ್ನು ನಡೆಸಿ ಪಾರಗಾಣಬಹುದು.

## ಏಕಧ್ಯೇಯ—ಶಬ್ದಬಹುತ್ವ-ಅನೇಕಾರ್ಥ

ಇಂತಹ ಪರಿಸ್ಥಿತಿಯಲ್ಲಿ ಅನುಭವ ಪೂರಿತ ಗ್ರಂಥಗಳೇ ಶರಣು. ಋಷಿ ಮತಗಳೂ ಧರ್ಮಶಾಸ್ತ್ರಗಳೂ ಬೇರೆ ಬೇರೆಯಾಗಿ ಕಂಡರೂ ಆಧಾರಭೂತವಾದುದು ಒಂದೇ ಆಗಿ ಧ್ಯೇಯವೂ ಒಂದೇ ಆಗಿರುವುದರಿಂದ ಭಿನ್ನತೆಯಲ್ಲಿ ಐಕ್ಯವನ್ನೇ ಸಾಧಿಸಬೇಕಾಗಿರುವುದು.

"ಅರ್ಥೋಽಪಿ ನೈಕಃ ಸ್ಮೃತಯೋ ವಿಭಿನ್ನಾಃ
ನೈಕೋ ಮುನಿಃ ಯಸ್ಯ ಮತಂ ಪ್ರಮಾಣಮ್ ।
ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನ ಗತಃ ಸ ಪಂಥಾಃ" ॥

"ನ ಧರ್ಮಾಧರ್ಮೌ ಚರತಃ ಆವಂ ಸ್ವ । ಯತ್ ಆರ್ಯಾಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಿಯಮಾಣಂ ಪ್ರಶಂಸಂತಿ ಸ ಧರ್ಮೋ ಯದ್ಗರ್ಹಂತೇ ಸೋಽಧರ್ಮಃ” ಎಂಬಂತೆ ಧರ್ಮತತ್ವವು – ನೆಲೆಯು – ಗಹನವಾದ ‘ಗುಹೆ’ ಎಂಬ ಬುದ್ಧಿಯಿಂದಲೂ ವಿವೇಕವೆಂಬ ಹರಿತವಾದ ಅಲುಗಿನ ಸಹಾಯದಿಂದಲೂ ಪ್ರಕಾಶಕ್ಕೆ ಬರುವುದು. ಕಾಲ ದೇಶ ಪಾತ್ರಾನುಗುಣವಾಗಿ ಶ್ರೇಯಸ್ಸನ್ನು ಸಾಧಿಸುವುದಕ್ಕೆ ಅನುಕೂಲಪಡಿಸುವುದು ಧರ್ಮದ ಸ್ವಭಾವ. ಕರ್ತ-ವ್ಯಾಕರ್ತವ್ಯತೆಯ ನಿರ್ಣಯವು ಸಾಹಸವುಳ್ಳ ವ್ಯಕ್ತಿಗೆ ಆಯಾ ಸನ್ನಿವೇಶದಲ್ಲಿ ಬುದ್ಧಿವ್ಯಾಪಾರದಿಂದ ಉಂಟಾಗುವುದು. ಅಂತಹ ಸಾಹಸವಿಲ್ಲದವರು ಒಟ್ಟುಗೂಡಿ ಮಹಾಜನವಾಕ್ಯದಿಂದ ಇತಿಕರ್ತವ್ಯತಾ ವಿಷಯವನ್ನು ಗೊತ್ತುಮಾಡಿಕೊಳ್ಳಬೇಕಾಗುವುದು.

## ಸನ್ನಿವೇಶ–ಆವರಣಗಳ ಆವಶ್ಯಕತೆಗೆ ತಕ್ಕಂತೆ ಸರ್ವಜ್ಞತ್ವವು ಮಿತಿಯಾಗಿ ಪ್ರಪಂಚಿತವಾಗುವುದು

ಒಬ್ಬ ಋಷಿಯು ಹೇಳಿರುವುದನ್ನು ಮತ್ತೊಬ್ಬ ಮುನಿಯ ವಚನವು ಬಾಧಿಸುವಂತೆ ತೋರುವುದು. ಒಬ್ಬರು ಕಾಣದುದನ್ನು ಮತ್ತೊಬ್ಬರು ಕಂಡರು ಎಂದು ತೋರುವುದು. ಗುಹಾಶಕ್ತಿಯಿಂದ (ಬುದ್ಧಿ; ವಿವೇಕ) ನಿರ್ಣಯವನ್ನು ಮಾಡಿಕೊಳ್ಳಬೇಕೇ ಹೊರತು ಆಪಾತತಃ ಕಾಣುವುದನ್ನು ಯಥಾರ್ಥವಾಗಿ ಸಾರ್ವಕಾಲಿಕವಾಗಿರುವುದೆಂದಾಗಲೀ ಸಾರ್ವಕಾಲಿಕವಲ್ಲವೆಂದಾಗಲೀ ತಿಳಿಯಲಾಗುವುದಿಲ್ಲ. ಅಖಂಡವಾದ ಪ್ರಕೃತಿಯ ಋತ-ಛಾಯೆಗಳು ಅನಂತವಾಗಿ ವ್ಯವಹಾರದಲ್ಲಿ ಕಾಣುತ್ತವೆ; ಅಪರೋಕ್ಷ ಜ್ಞಾನಿಗಳಾದ ಮುನಿಗಳು ಎಲ್ಲವನ್ನೂ ತಿಳಿಯಬಲ್ಲರು; ಆದರೆ ಯಾವ ಸನ್ನಿವೇಶಕ್ಕೆ ಎಷ್ಟು ಪ್ರಕೃತೋಪ-ಯೋಗಿಯೋ ಅದನ್ನು ಮಾತ್ರ ಆಯಾ ಪರಿಮಿತಿಯಲ್ಲಿ ಹೇಳಿರುತ್ತಾರೆ. ಎಲ್ಲ ಮುನಿಗಳು ಹೇಳಿರುವುದನ್ನು ಸಂಗ್ರಹಿಸಿ, ಒಟ್ಟುಗೂಡಿಸಿ ಪ್ರಕಾಶಿಸಿದಾಗ ಒಂದೊಂದು ವಿಷಯವನ್ನೂ ಪೂರ್ಣವಾಗಿ ಹೇಳಿದಂತಾಗುವುದು. ಯಾವ ಸನ್ನಿವೇಶದಲ್ಲಿ ಎಷ್ಟೆಷ್ಟು ಬೇಕಾದುದನ್ನು

CC-0. In Public Domain. Gurukul Kangri Collection, Haridwar

पुस्तकालय,
Digitized by Arya Samaj Foundation Chennai and eGangotri
गुरुकुल कांगड़ी विश्वविद्यालय,
जिला सहारनपुर (उ० प्र०)



ಅನುಷ್ಠಾನ ಮಾಡಬಹುದೋ ಅದಕ್ಕೆ ಆಯಾ ವ್ಯಕ್ತಿಯ ವಿವೇಕವೇ ಪ್ರಮಾಣವು. ಏನೇ ಆದರೂ ಅಭೀಷ್ಟಫಲವು ಸಿದ್ಧಿಸುವುದಕ್ಕೆ ಅವಶ್ಯಕವಾದ ವ್ಯವಸಾಯವು ನಡೆಯಬೇಕೆಂಬುದನ್ನು ಮರೆಯಬಾರದು.

ತತ್ಕಾಲಕ್ಕೆ ಸಾಕ್ಷಾತ್ತಾಗಿ ಸಂಬಂಧಪಟ್ಟ ವಿಷಯಗಳು ಹಿಂದಿನ ಗ್ರಂಥಗಳಲ್ಲಿ ಕಾಣುವುದಿಲ್ಲವೆಂದು ತೋರಬಹುದು. ಹಿಂದಿನ ಗ್ರಂಥಗಳಲ್ಲಿ ಉಕ್ತವಾದ ವಿಷಯಗಳು ತತ್ಕಾಲಕ್ಕೆ ಹೊಂದಿಕೊಳ್ಳದಂತೆ ಕಾಣಬಹುದು. ತತ್ವಾನ್ವೇಷಣ ಬುದ್ಧಿಯಿಂದ ಪದಗಳ ಮತ್ತು ಪಂಕ್ತಿಗಳ ಮಧ್ಯೆ ರಹಸ್ಯಭೇದವನ್ನು ಮಾಡಿ ಮಾನವ ಸಾಧಾರಣವಾದ ಸರ್ವ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥಗಳಿಂದ ರಹಸ್ಯವನ್ನು ತಿಳಿಯುವ ಪ್ರಾವೀಣ್ಯವನ್ನು ಅವಲಂಬಿಸಲು ಯತ್ನಿಸಬೇಕು.

ಒಂದು ಸನ್ನಿವೇಶದಲ್ಲಿ ಹೇಳಿರುವ ವರ್ಣನೆಯು ವಾಕ್ಯಸರಣಿಯು ಜನರ ಬುದ್ಧಿಯ ಮಟ್ಟ-ಮಿತಿ-ಗೆ ಬೇಕಾದಷ್ಟು ಅರ್ಥವನ್ನು ಪುಷ್ಟೀಕರಿಸಿ ಹಿತವಾಗಿದ್ದಿರಬಹುದು. ಸಣ್ಣದಾದ ಮತ್ತು ಹೆಚ್ಚು ವಿಕಾಸಕ್ಕೆ ಅಂದರೆ ಹೊರಗಿನ ವಿಶಾಲ ಪ್ರಪಂಚದ ಸಂಪರ್ಕಕ್ಕೆ ಅವಕಾಶವಿಲ್ಲದಿರುವ ಕೆಳಗಿನ ವರ್ಗದಲ್ಲಿ ಓದುವ ಸಣ್ಣ ವಯಸ್ಸಿನ ಬಾಲಕರಿಗೆ ಜೀವನ ತತ್ವಗಳು ಸಂಕುಚಿತ ರೀತಿಯಲ್ಲಿ ಭಾಸವಾಗುತ್ತವೆ. ವಯಸ್ಸಾದ ನಂತರ ವಿವೇಕವುಂಟಾಗಿ ಹೊರಗಿನ ವಿಶಾಲ ಪ್ರಪಂಚಸಂಪರ್ಕವನ್ನು ಹೊಂದಿದಂತೆಲ್ಲಾ ಅರ್ಥ ಮತ್ತು ಜ್ಞಾನದ ವಿಕಾಸವಾಗಬೇಕು ; ಹಿಂದಿನ ಕೆಳಗಿನ ಮಟ್ಟದಲ್ಲಿಯೇ ಇರಲು ಸಾಧ್ಯವಿಲ್ಲ. ಹಾಗೆ ವಿಕಾಸವುಂಟಾಗದಿದ್ದರೂ, ವಿಕಾಸವಾದಾಗಲೂ ಕೆಳಗಿನ ಮಟ್ಟದ ವಿಷಯಗಳಲ್ಲಿಯೇ ಕ್ರೀಡಿಸುತ್ತಿರುವುದಾದರೂ ದುಷ್ಟವಾದ ದುರಂತದಲ್ಲಿ ಪರಿಣಾಮವಾಗುವುದು.

ಯುವಕನನ್ನು ಸಂತೋಷಗೊಳಿಸಬಲ್ಲ ವರ್ಣನೆಗಳು ವೃದ್ಧನಿಗೆ ಪರ್ಯುಷಿತವೆನಿಸಿ ರುಚಿಸುವುದಿಲ್ಲ ; ವೃದ್ಧರಿಗೆ ಬೇಕಾದ ವಿಷಯಗಳು ಯುವಕರಿಗೆ ಆವಶ್ಯಕವಾದವುಗಳಲ್ಲವಾದರೂ ತಿರಸ್ಕೃತವಾದವುಗಳಲ್ಲ ಮತ್ತು ಬೇಕಿಲ್ಲವಾದುವೂ ಅಲ್ಲ. ಒಬ್ಬರ ದೃಷ್ಟಿಯಿಂದ ಮತ್ತೊಬ್ಬರಿಗೆ ಬೇಕಾದ ವಿಷಯಗಳು [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್ಲವೂ ಎಲ್ಲರಿಗೂ ಬೇಕು. ಪ್ರಯೋಜನದಲ್ಲಿ ಅಂತರವಿರಬಹುದು. ಬಿಲ್ಲುಗಾರನಿಗೆ ಉಪದೇಶಿಸಿದ ಗೀತೆಯು ವೃದ್ಧರಿಗೆ ಮಾತ್ರ ಸಲ್ಲತಕ್ಕುದು, ಯುವಕರಿಗೆ ಬೇಡ – ಎಂದರೆ ಯುವಕರ ಕೀಳು ಮಟ್ಟದ ವಿವೇಕವನ್ನೂ ವೃದ್ಧರ ಸಂಕೋಚವರ್ತನೆಯನ್ನೂ ಪ್ರಕಾಶಿಸಿದಂತಾಗುವುದು. ಗೀತಾ ಪಠನಕ್ಕೆ ಶಾಸ್ತ್ರವಿದರು ಮಾತ್ರ ಅಧಿಕಾರವುಳ್ಳವರಂತೆ ತೋರಿಸುವ ಪಾಂಡಿತ್ಯವು ಕುಹಕಪೂರಿತವಾದುದು. ಇತಿಹಾಸ ಪುರಾಣಾದಿಗಳಿಂದ ಧರ್ಮಸಂಗ್ರಹವನ್ನು ಮಾಡುವುದಕ್ಕೆ ಸ್ತ್ರೀಪುರುಷ ಸಾಮಾನ್ಯರಿಗೆ ಅವಕಾಶವಿರುವುದು. ಇತಿಹಾಸದ ಮಧ್ಯೆ ಜೋಡಿಸಿದ ಗೀತೆಯ ಅಭ್ಯಾಸಕ್ಕೆ ಸರ್ವರಿಗೂ ಅಧಿಕಾರವುಂಟು. ಯಾವುದೇ ಆಗಲಿ ಯಾವಾಗಲೂ ಯಾರಿಗೂ ಬೇಡವೆಂದು ಹೇಳುವಹಾಗಿಲ್ಲ ; ಬೇಕೆಂದು ಹಮ್ಮೈಸುವುದೂ ಸಾಧುವಲ್ಲ. ವೇದ - ಚಮುಕಾಧ್ಯಾಯದಲ್ಲಿ ಕಂಡಂತೆ ಮಿತಿಯರಿತು ವ್ಯವಹರಿಸುವುದೇ ರಾಜಮಾರ್ಗ. ಬುದ್ಧಿ ವಿಕಾಸವು ಹೆಚ್ಚಿದಂತೆಲ್ಲಾ ಅರ್ಥವಿಕಾಸವೂ ಅನುಷ್ಠಾನಪರತೆಯೂ ಹೆಚ್ಚಬೇಕು.

ಒಂದು ವಸ್ತುವಿನ ಜ್ಞಾನಾನುಭವಗಳು ದೇಹಿಗಳ ಶಾರೀರಕ, ಮಾನಸಿಕ ಸ್ಥಿತಿ ಗತಿಗಳಿಗೆ ತಕ್ಕಂತೆ ಉಂಟಾಗುತ್ತವೆ. ಆಯಾ ಮಟ್ಟದಲ್ಲಿ ಪ್ರಕಾಶವಾಗುವ ಆ ಅನುಭವವನ್ನು ಬದಲಾಯಿಸುವುದಕ್ಕೆ ಯತ್ನಿಸಿದರೆ ಬುದ್ಧಿ ಭೇದ ದೋಷವುಂಟಾಗುತ್ತದೆ. ಪ್ರತಿ ದೇಹಿಯ ಜೀವನದಲ್ಲಿ ವರ್ತನೆಯ ಮತ್ತು ಯಾವುದಾದರೊಂದೊಂದು ಅವಸ್ಥೆಯ ಸಮಸ್ತ ವಿಧವಾದ ಜ್ಞಾನಾನುಭವಗಳು ಕಾಣಬರುವುವು. ಎಷ್ಟೇ ದ್ವೇಷಾಸೂಯಾದಿ ಸಂಕುಚಿತ ಭಾವಗಳಿಂದ ವಿರೋಧವಾಗಿ ನಡೆಯುವ ಸನ್ನಿವೇಶಗಳಲ್ಲಿಯೂ ಸಹ ಮುಖ್ಯ ತತ್ವವು ಒಂದೇ ಆಗಿರುವ ವಿಚಾರವು ಆಳಕ್ಕೆ ಇಳಿದು ನೋಡುವವರ ದೃಗ್ಗೋಚರಕ್ಕೆ ಬರುತ್ತದೆ. ಇದರ ಅರಿವು ಕಾಲಾನುಕಾಲದಲ್ಲಿ ಬಹುಜನಾನುಭವಕ್ಕೆ ಬರುವ ಸಂಭವವಿದ್ದೇ ಇರುವುದು.

ಅಂತೆಯೇ ಏಕೈಕವಾದ ವಸ್ತುವಿನ ವಿಷಯಕವಾದ ಜ್ಞಾನ, ವಾಣೀ, ಅರ್ಥ ಮತ್ತು ಅನುಭವಗಳು ದೇಹಿಗಳ ಮನಃ ಪರಿಪಾಕ ಮತ್ತು ಆವರಣಗಳಿಗೆ ತಕ್ಕಂತೆ ಮಾರ್ಪಾಡಾಗುವುವು. ಇದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಿವಾರ್ಯವಾದುದು. ಇಂತಹ ವೈವಿಧ್ಯಕ್ಕೆ ಅವಕಾಶ ಕೊಟ್ಟು ಮಹತ್ತಮವಾದ ಸಾಮಾನ್ಯ ಅಪವರ್ತನದಿಂದ ಅವುಗಳನ್ನು ಅಳೆದು ನೋಡಿ ಐಕಮತ್ಯವನ್ನು ಸಾಧಿಸಿ ಶಾಂತಿಪ್ರಿಯರಾಗಬೇಕಾಗುತ್ತದೆ.

## ಅರ್ಥಜ್ಞಾನಕ್ಕೆ ಸರ್ವರೂ ಅರ್ಹರು.

ಕೋಟಿಗಟ್ಟಲೆ ಇರುವ ಜ್ಞಾನ ಮತ್ತು ಅನುಭವದ ಹಂತಗಳಲ್ಲಿ ಸರ್ವವೂ ಆತ್ಮ-ಪ್ರಕೃತಿ ವ್ಯಾಪಾರವೇ ಆಗಿರುವುದರಿಂದ ಮೇಲ್ಕಂಡ ಭೇದಭಾವನೆಗಳು ಸಂಕುಚಿತವಾದ ಮತ್ತು ಕುಹಕವಾದ ಆವರಣದ ಪ್ರಭಾವದಿಂದ ಉಂಟಾಗುವುವು. ಅವು ಪಾರಮಾರ್ಥಿಕವಾಗುವುದಿಲ್ಲ; ಮತ್ತು ವ್ಯವಹಾರ ದೃಷ್ಟಿಯಿಂದ ನಿಂದ್ಯಗಳೆಂದು ತೋರಿ ಬಂದರೂ ಎಲ್ಲವೂ 'ಸಮ' ಎಂಬ ಉದಾತ್ತಭಾವವೆಯು ಅಂತರ್ಗತವಾಗಿದ್ದೇ ಇರಬೇಕು; "ಪಾರಮಾರ್ಥಿಕವಾಗಿ ಎಲ್ಲವೂ ಸಾಧುವೇ; ಎಲ್ಲವೂ ಪ್ರಕೃತಿಲೀಲೆ" ಎಂದು ಭಾವಿಸಿ ಆನಂದ ವಿವರ್ತವಾದ ವ್ಯವಹಾರದಲ್ಲಿಯೂ ಆನಂದವನ್ನೇ ನೋಡುತ್ತಾ ವ್ಯವಹಾರ ಸೌಕರ್ಯಕ್ಕೆ ಕಲ್ಪಿತವಾದ ಅಂತರಗಳನ್ನು ತಿಳಿದು ಮಿತಿಯಲ್ಲಿ ಕರ್ಮಗಳನ್ನು ಆಚರಿಸುವುದೇ ಮಧ್ಯಮ ಮಾರ್ಗ. ಚಮಕ ರುದ್ರಾಧ್ಯಾಯ ಗೀತಾದಿಗಳಲ್ಲಿ ಹೇಳಿರುವ ರಹಸ್ಯವನ್ನು ಚರ್ವಿತ ಚರ್ವಣ ಕ್ರಮದಲ್ಲಿ ಅರ್ಥಮಾಡಿಕೊಂಡು ಆನಂದವನ್ನು ವ್ಯವಹಾರದಲ್ಲಿಯೂ ಅನುಭವಿಸಬೇಕು.

ಬ್ರಹ್ಮವಿವರ್ತವಾದ ಪ್ರಪಂಚದಲ್ಲಿ – ವ್ಯವಹಾರದಲ್ಲಿ – ಪೂರ್ಣ ಪ್ರಳಯದ ವರೆಗೂ ಕಾಣಬಹುದಾದ ಸಮಸ್ತ ಅನುಭವಗಳೂ ಬ್ರಹ್ಮ-ವಿವರ್ತವಾದ ವೇದ ಶಬ್ದರಾಶಿಗಳಲ್ಲಿ ಉದಾಹೃತವಾಗಿ ಅಡಕವಾಗಿವೆ. ಇವುಗಳನ್ನು ಸರ್ವದಾ ಸರ್ವತ್ರ ಸರ್ವರೂ ತಪಸ್ಸಿನಿಂದ ಸಾಧಿಸಿ ನೋಡಬಹುದಾಗಿವೆ; ಸಾಕ್ಷಾತ್ಕರಿಸಿಕೊಳ್ಳಬಹುದಾಗಿವೆ. ಮಂತ್ರಗಳೂ ಮಂತ್ರಾರ್ಥಗಳೂ ಸಹ ತಪಸ್ವಿಗಳ ತಪಸ್ಸಿಗೆ ಮೆಚ್ಚಿಗೆಯನ್ನಿತ್ತು ತಾವಾಗಿಯೇ ದರ್ಶನವನ್ನು ಕೊಡುವುವು. ಇದಕ್ಕೆ ಭೂತ, ವರ್ತಮಾನಾದಿ ಕಾಲಗಳ ವಿವೇಚನೆಯಿರುವುದಿಲ್ಲ. ತಾತ್ಕಾಲಿಕವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವಾಗಲೂ ಅಪರೋಕ್ಷಾನುಭವಗಳ ದರ್ಶನವು ತಪಸ್ವಿಗಳೆನಿಸಿದ ಸರ್ವರಿಗೂ ಒಲಿದುಬರುವುದಾಗಿದೆ. ಆದುದರಿಂದ ಪೌರುಷೇಯತ್ವ, ಅಪೌರುಷೇಯತ್ವವೆಂಬ ಸಂದೇಹಾತ್ಮಕ ಪ್ರಶ್ನೆಗೆ ಅವಕಾಶವಿಲ್ಲ. ವ್ಯವಹಾರ ಪ್ರಪಂಚದ ಮಧ್ಯೆ ವೇದರಾಶಿಯನ್ನು ಅಳೆಯುವುದಕ್ಕೆ ಹೊರಟು ಅದರಲ್ಲಿ ಕಾಣುವ ಕೆಲವು ಶಬ್ದಗಳನ್ನು ಮಾನವಾದಿಗಳ ಶರೀರಕ್ಕೆ ಸಂಬಂಧಿಸಿದಂತೆ ಹೊಂದಿಸಿಕೊಳ್ಳುವುದು ವಿಮುಖವಾದ ತಪಸ್ಸಿನ ಫಲವಾಗಿರುತ್ತದೆ. ಅಲ್ಲಿ ಕಾಣುವ ಅಂಕಿತನಾಮಗಳೆಲ್ಲವೂ ರೂಢನಾಮಗಳೂ ಮತ್ತು ಅನ್ವರ್ಥನಾಮಗಳೂ ಆಗಿರುತ್ತವೆ. ಅಂಕಿತನಾಮಗಳುಳ್ಳವು ಪೌರುಷೇಯವೇ ಅಹುದು; ಮತ್ತು ಒಂದು ಸನ್ನಿವೇಶಕ್ಕೆ ಸಂಬಂಧಿಸಿರುವುವು ತ್ರಿಕಾಲಾಬಾಧಿತವಾಗಿ ಸಾರ್ವತ್ರಿಕವಾಗಿ ಸರ್ವದಾ ಅನ್ವಯವಾಗಬಹುದಾದ ವಿಷಯಗಳು ಸಾಮಾನ್ಯ ಪುರುಷಮಿತಿಗೆ ಮೀರಿದುದಾಗಿ, ಅಪೌರುಷೇಯವೆನಿಸುವುದು. ಇವು ತಪಃಫಲವಾದ ಸ್ವಾನುಭೂತಿಯಿಂದ ಪ್ರತಿವ್ಯಕ್ತಿಗೂ ಗೋಚರವಾಗುವುವು. ವಸಿಷ್ಠ, ವಿಶ್ವಾಮಿತ್ರ, ಇಂದ್ರ, ಸೋಮ, ಯಮ, ಕಶ್ಯಪ, ದಿತಿ, ದನು, ಅದಿತಿ ಇತ್ಯಾದಿಗಳು ಗುಣ ಶಕ್ತಿ ಕರ್ಮವಿಶೇಷಗಳನ್ನು ತಿಳಿಸುವುವು. ಯಜ್ಞ, ಚರ್ಯೆ ಆಟಪಾಟಗಳನ್ನೂ, ಸುಮುಖ ದುರ್ಮುಖ ಕರ್ಮಗಳನ್ನೂ, ವಿಮುಖ ಕರ್ಮಗಳನ್ನೂ ತಿಳಿಸುವ ಈ ಶಬ್ದಗಳು ಮಾನವ ಪ್ರಪಂಚದ ವ್ಯವಹಾರ ಸೂಚಕಗಳಾಗಿ ಪರಿಪೂರ್ಣವಾದ ಅನುಭವಗಳನ್ನು ತಿಳಿಸುವುವು. ಸುಖಬೋಧೆಗಾಗಿ ಜೋಡಿಸಿರುವ ಆಖ್ಯಾಯಿಕೆಗಳಲ್ಲಿ – ಕಥೆಗಳಲ್ಲಿ ಕಾಣುವ ನಾಮವಾಚಕಗಳು ನಿರ್ದಿಷ್ಟವಾದ ಮನುಷ್ಯವಾಚಕವಲ್ಲವೆಂದು ಶ್ರೀಶಂಕರ ಜಗದ್ಗುರು ಭಗವತ್ಪೂಜ್ಯಪಾದರು ಸ್ಪಷ್ಟಪಡಿಸಿರುತ್ತಾರೆ. ವಸ್ತುಜ್ಞಾನ ಮತ್ತು ಅನುಭವಗಳನ್ನು ನಿಶ್ಶೇಷವಾಗಿ ಪ್ರಕಾಶಿಸುವ, ಋತ ಮತ್ತು ವಿದ್ಯೆಗಳನ್ನು ಪ್ರತಿಪಾದಿಸುವ ಗ್ರಂಥರಾಶಿಗಳಿಂದ ಜ್ಞಾನಾನುಭವ ಸಾಕ್ಷಾತ್ಕಾರಕ್ಕೆ ಆತ್ಮನಿವಿಷ್ಟರಾದ ದೇಹಿಗಳೆಲ್ಲರೂ ಬಾಧ್ಯರೇ ಆಗಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೨. ಪ್ರಜಾಪತಿ-ರಾಜ್ಯ-- ವ್ಯವಹಾರ

ಅಖಂಡ ಪರಿಪೂರ್ಣವಾದ ಪುರುಷತತ್ವದ ಅಂದರೆ ಆನಂದ ಸ್ಥಿತಿಯ ತಪಸ್ಸಿನಿಂದ ಬ್ರಹ್ಮವು ಪ್ರಕೃತಿ ಅಥವಾ ಗುಣತ್ರಯ ಪದಾರ್ಥಗಳಾಗಿ ವಿವರ್ತವಾಗುವುದು. ಸತ್ವರಜಸ್ತಮೋಗುಣ ಪದಾರ್ಥಗಳ ವಿಭಜನ ಸಂಯೋಜನಗಳಿಂದಲೂ ಶಕ್ತಿತ್ರಯಗಳಿಂದಲೂ ನಡೆಯುವ ಕರ್ಮಗಳೇ 'ಪ್ರಕೃತಿಲೀಲೆ'ಯೆನಿಸುವುವು. ಈ ಲೀಲಾನುಭವವು ಪೂರ್ಣವಾದನಂತರ "ಪೂರ್ಣಮಿದಂ ಪೂರ್ಣಮದಃ" ಎಂಬ ಜ್ಞಾನವು ಸಾಕ್ಷಾತ್ಕೃತವಾಗಿ ಪೂರ್ಣತತ್ವವೆಂಬ ಆನಂದಸ್ಥಿತಿಯೇ ನಿಲ್ಲುವುದು. ಅನಿತ್ಯ ನಿತ್ಯ ಜ್ಞಾನಾನಂದಾನುಭವಗಳು ಬ್ರಹ್ಮ-ವೈವರ್ತವೇ ಆಗಿರುತ್ತವೆ.

## ಆತ್ಮವಿಲಾಸ

ಆನಂದಾಶ್ರಯವಾದ ವಸತಿಗೃಹದಿಂದ ಹೊರಕ್ಕೆ ಸಂಚಾರ ಹೊರಟ ವ್ಯಕ್ತಿಗಳು ಹೊರಗೆಯಿರುವಾಗ ಆಗುವ ಅನುಭವಗಳನ್ನೂ ನೆನ್ಮದಿಗಾಗಿ ಪುನಃ ಸ್ವಮಂದಿರಕ್ಕೆ ಹಿಂತಿರುಗುವಾಗ ಆಗುವ ಅನುಭವಗಳನ್ನೂ ಹೊಂದಿ ಮಂದಿರವನ್ನು ಸೇರಿ ಮಂದಿರದೊಡನೆ ಐಕ್ಯವಾಗುವರು. ಗೃಹೀ ಇದ್ದಲ್ಲಿ ಗೃಹವು; ಗೃಹವು ಗೃಹಿಗಾಗಿರುವುದು. 'ಗೃಹಿ'ಗಾಗಿ ಏರ್ಪಡದ ಮಂದಿರವನ್ನು ಗೃಹವೆಂದು ಹೇಳುವುದಿಲ್ಲ. ಆದುದರಿಂದ ಗೃಹ ಮತ್ತು 'ಗೃಹಿ'ಗಳಿಗೆ ಐಕ್ಯವನ್ನು ಹೇಳಬೇಕಾಗಿದೆ. ಅದರಂತೆ ಬ್ರಹ್ಮವು (ಅಖಂಡ ಪುರುಷತತ್ವವು) ವಿವರ್ತವಾದ ಪ್ರಕೃತಿ ಮತ್ತು ಗುಣ ಶಕ್ತಿಗಳ ಲೀಲೆಯ ಪ್ರಭಾವದಿಂದ ವಿವಿಧವಾಗಿ ವಿಶ್ವವನ್ನು ಅನುಭವಿಸುವ ಜೀವನೆನಿಸುತ್ತಾನೆ. ಅನುಭವವು ಪೂರ್ಣವಾದನಂತರ ಜೀವಭಾವನೆಯು ಕಳೆದು "ಪೂರ್ಣವಸ್ತು"-"ಆನಂದದಿಂದ ವಿವರ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾದುದೇ ವಿಶ್ವವು; ಸರ್ವವೂ ಆನಂದವೇ; ಜೀವವೂ ಆನಂದವೇ" ಎಂಬ ದಿವ್ಯಜ್ಞಾನವು ತಲೆದೋರಿದೊಡನೆ ಮುಕ್ತನೆನಿಸುತ್ತಾನೆ.

ಚೈತನ್ಯವುಳ್ಳ ವ್ಯಕ್ತಿಗಳು ಸುತ್ತಮುತ್ತಲೂ ಇರುವ ವಿಷಯಗಳ ಕಡೆ ಗುಣಶಕ್ತಿಪ್ರಭಾವವನ್ನು ಬೀರಿ ಆ ವಿಷಯವನ್ನು ತಿಳಿಯಲು ಯತ್ನಿಸುವುದು; ಅದಕ್ಕಾಗಿ ಅಪೇಕ್ಷಿಸಿ ಅದರ ಪ್ರಾಪ್ತಿಗೆ ವ್ಯವಸಾಯ ಮಾಡುವುದು; ಅಥವಾ ಅದನ್ನು ಉಪೇಕ್ಷಿಸಿ ದೂರೀಕರಿಸುವುದು ಅಥವಾ ಉದಾಸೀನವಾಗಿರುವುದು; – ಈ ಜ್ಞಾನೇಚ್ಛಾ ಕ್ರಿಯಾಶಕ್ತಿ ವ್ಯಾಪಾರಗಳೂ ಸಹ ಬ್ರಹ್ಮ ವಿವರ್ತವಾಗಿರುತ್ತವೆ. ಈ ವಿವರಣೆಯು ತರ್ಕವನ್ನು ಮುಂದುವರಿಯಗೊಡದೆ ಆನಂದವನ್ನೀಯುವುದು. ಈ ಬಗೆಯ ಸಾಕ್ಷಾತ್ಕಾರಕ್ಕಾಗಿಯೇ ವ್ಯಕ್ತಿಗಳು ಅವರವರ ಅಂತಸ್ತುಗಳಲ್ಲಿ ಯತ್ನಿಸಿ ಅನೇಕ ಕೋಟಿ ವಿಧವಾದ ಅನುಭವಗಳನ್ನು ಹೊಂದಿ ಕೊನೆಗೆ ಸ್ವಸ್ವರೂಪಜ್ಞಾನಸ್ಥಿತಿಯಲ್ಲಿ ಐಕ್ಯವಾಗಬೇಕಾಗುವುದು.

ಪರಿಪೂರ್ಣವಾದ ಪುರುಷದ ಆನಂದವೇ ತಪಸ್ಸು. ತಪಸ್ಸಿನಿಂದ ಅನಿರ್ವಚನೀಯವಾದ ಪ್ರಕೃತಿ-ಗುಣತ್ರಯ ಶಕ್ತಿತ್ರಯಗಳು ಹೊರ ಪಡುವುವು. "ತತ್ ಸೃಷ್ಟ್ವಾ ತದೇವಾನುಪ್ರಾವಿಶತ್" ಎಂಬಂತೆ ಪ್ರಕೃತಿಯೊಡನೆ ಬೆರೆಯುವ ಸಂವಿಧಾನದಲ್ಲಿ ಸೂಕ್ಷ್ಮಾದಿ ಶರೀರಗಳಿಂದ ಕಲ್ಪಿತವಾದ ಉಪಾಧಿಗಳೂ ರೂಪಗಳೂ ನಾಮಗಳೂ ಉಂಟಾಗುವುವು. ಸ್ವರಾಜ್ಯವು— ಎಂದರೆ ಆತ್ಮನಿಗಾಗಿ (ದೇಹಿಗಾಗಿ) ಆತ್ಮನಿಂದ (ದೇಹಿಯಿಂದ) ಆತ್ಮನ (ದೇಹಿಯ) ರಾಜ್ಯವು. ಸ್ವಸ್ಮೈ, ಸ್ವೇನ, ಸ್ವಸ್ಯ ರಾಜ್ಯಂ — ಆರಂಭವಾಗುತ್ತದೆ. ಆತ್ಮ ವಿಲಾಸ ರಾಜ್ಯಭಾರವು ಸನ್ನಿವೇಶಕ್ಕೆ ಅನುಗುಣವಾಗಿರುವುದು. ಸನ್ನಿವೇಶ ಪ್ರಭಾವಕ್ಕೆ ಒಳಪಡುವ ಅಥವಾ ಸನ್ನಿವೇಶವನ್ನೇ ಆತ್ಮಪ್ರಭಾವಕ್ಕೆ ಒಳಪಡಿಸುವ ಸಂವಿಧಾನ ಕ್ರಮಗಳಿರುವುವು. ವಿವೇಕ, ಜ್ಞಾನ, ವೈರಾಗ್ಯಗಳೆಂಬ ನೀತ್ಯನುಶಾಸನ ಸಂಯಮಗಳ ಪ್ರಯೋಗದಿಂದ ಅನಿರ್ವಚನೀಯವಾದ ಸಾಮ್ರಾಜ್ಯ ಪರಿಸ್ಥಿತಿಗಳುಂಟಾಗುತ್ತವೆ. ಜ್ಞಾನೇಚ್ಛಾಕ್ರಿಯಾಶಕ್ತಿಗಳ ವ್ಯಾಪಾರಗಳು-ಕಲನಗಳು ಅವಿಚ್ಛಿನ್ನವಾಗಿ ನಡೆಯುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಯೋಗಕ್ಷೇಮ

“ ಬಹುಸ್ಯಾಮ್ ’ ‘ ಪ್ರಜಾಯೇಯ ” ಎಂಬಂತೆ ವೃದ್ಧಿಯನ್ನು ಹೊಂದಬೇಕೆಂಬ ಕಾಮದಿಂದ (ಸೋಽಕಾಮಯತ), ಬ್ರಹ್ಮವಿವರ್ತ ಕಾರ್ಯಾಂಕುರವಾಯಿತು. ಪ್ರಕೃತಿಯು ಸೃಷ್ಟವಾಯಿತು ; ಆಗುತ್ತಿದೆ. ಬ್ರಹ್ಮವು ಅದನ್ನು ಪ್ರವೇಶಿಸಿ ಪುರುಷನೆನಿಸಿ ವಿರಾಟ್, ಸ್ವರಾಟ್, ಸಂರಾಟ್, ಹಿರಣ್ಯಗರ್ಭ ಮೊದಲಾದ ವಿಶೇಷಣಗಳಿಗೆ ಪಾತ್ರವಾಯಿತು ; ಪಾತ್ರವಾಗುತ್ತಿದೆ. ಪ್ರಭುತ್ವಶಕ್ತಿಯು ಪ್ರಯೋಗಿಸಲ್ಪಟ್ಟಿತು ; ಪ್ರಯೋಗಿಸಲ್ಪಡುತ್ತಿದೆ. ನಾನಾ ಉಪಾಧಿಗಳ ಧಾರಣೆಯಿಂದ ಜೀವದ ವ್ಯವಹಾರವು-ಕಲನವು ಆರಂಭವಾಯಿತು ; ಆರಂಭವಾಗುತ್ತಿದೆ. ವರುಣ, ಸೋಮ, ಇಂದ್ರಾದಿಗಳು ಅವಸ್ಥಾನುಗುಣವಾಗಿ ರಾಜತ್ವಕ್ಕೆ ಸಂಬಂಧ ವಾದುವು–ಆಗುತ್ತಿವೆ. ರಾಜ್ಯಭಾರ ವ್ಯವಹಾರವು ರೂಪುಗೊಂಡು ಋತವು-ಶಾಸನ ವಿಧಿಯು (constitution) ಗೊತ್ತಾಗಿ ನಡೆಯುತ್ತಿದೆ.

## ರಾಜಕರ್ಮ— ರಾಜ್ಯ

ಯೋಗಕ್ಷೇಮ ಮತ್ತು ರಾಜ್ಯಭಾರಾದಿಗಳಿಗೆ ಪ್ರಧಾನವಾದ ದೇವತ್ವ ಅಸುರತ್ವಗಳು ದೇವಃ ಅಸುರಃ ಶಬ್ದಗಳಿಂದ ತಿಳಿಯಲ್ಪಡುವುವು. ಹೀಗೆಯೇ ಋಷಿತ್ವವನ್ನು ತಿಳಿಸುವ ಋಷಿನಾಮಗಳೂ ಪಿತೃತ್ವವನ್ನು ತಿಳಿಸುವ ಪಿತೃನಾಮಗಳೂ ವಸುತ್ವವನ್ನು ತಿಳಿಸುವ ವಸುನಾಮಗಳೂ ಗುಣ ಶಕ್ತಿ ಕರ್ಮಾದಿಗಳನ್ನು ತಿಳಿಸುವುವು. ಇಂದ್ರತ್ವಾದಿ ಅಷ್ಟಪಾಲಕ ಶಕ್ತಿಗುಣಾದಿಗಳೂ ಬೆಳಗುವ ಸೂರ್ಯತ್ವಾದಿಗಳೂ ಛಾಯೆಯನ್ನು ತಿಳಿಸುವ ರಾಹುತ್ವಾದಿಗಳೂ ವಿಶ್ವವನ್ನು ವ್ಯಾಪಿಸಿರುವುವು. ಮತ್ತು ಸಂದರ್ಭ, ಕಾಲ, ಪಾತ್ರಾನುಗುಣವಾಗಿ ಆಯಾ ಪ್ರಮಾಣಗಳಲ್ಲಿ ಈ ಗುಣಶಕ್ತಿ ಕರ್ಮಗಳು ವ್ಯಕ್ತಿಗಳ ಮೂಲಕ-ದೇಹಿಗಳ ಮೂಲಕ ವ್ಯಂಜಕವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿ–ದೇಹಿ–ಗಳ ಅಂತಃ, ಶರೀರದ ವ್ಯಾಪಾರಕ್ಕೆ ಕಾರಣಗಳಾದ ಗುಣ ಶಕ್ತಿ ಕರ್ಮಗಳು ವಿಚಿತ್ರವಾಗಿರುವುವು. ಇಂದ್ರಿಯ, ಮನಸ್ಸು, ಮತ್ತು ಅವುಗಳ ಲಕ್ಷಣಾದಿಗಳೂ ಅತಿ ಸೂಕ್ಷ್ಮ ದರ್ಶಕಗಳಾದ ಯಂತ್ರ ಸಾಧನಗಳಿಗೆ ಮೀರಿದ, ಶರೀರದೊಳಗಿನ ವ್ಯಾಪಾರವು ನಡೆಯುವ ಅವಯವಗಳೂ ಅವುಗಳ ಗುಣಶಕ್ತಿಕರ್ಮಗಳೂ ರುದ್ರಾಧ್ಯಾಯದಲ್ಲಿ ವರ್ಣಿಸಲ್ಪಟ್ಟಿವೆ ಎಂದು ತಿಳಿಯಲಾಗಿದೆ.

ಈ ಮೇಲ್ಕಂಡ ವ್ಯವಹಾರಕ್ಕೆಲ್ಲಾ ಮೂಲವಾದ ನಾದ-ಪ್ರಕೃತಿಯು ಶಬ್ದವಾಗಿಯೇ ಗ್ರಹಿಸಲ್ಪಟ್ಟಿರುವುದು. ವೇಗ-ಶಬ್ದ-ಕರ್ಮಗಳು ಪರಸ್ಪರ ಹೊಂದಿಕೊಂಡು ಕರ್ಮವಿದ್ದಲ್ಲಿ ವಸ್ತು, ವಸ್ತುವಿದ್ದಲ್ಲಿ ಶಬ್ದ-ನಾದ ಈ ರೀತಿಯಾಗಿ ಹೊಂದಿಕೊಂಡು ಹೆಣೆದುಕೊಂಡಿರುವುವು. ಗೋಚರವಾಗದೇ ಇರುವ ನಾದವೂ ವಿಶ್ವಕ್ಕೆ ಕಾರಣವಾಗಿರುವುದು. ನಾದವು ಪೂರ್ಣವಾಗಿ ' ನಿಲ್ಲುವುದೆಂದರೆ ಬ್ರಹ್ಮೈಕ್ಯವೆಂದೂ ಬ್ರಹ್ಮವೆಂದೂ ತಿಳಿಯಬೇಕಾಗುವುದು.

ಹೀಗೆ ಪ್ರಜಾಪತಿಯ 'ಜೀವ'ನ– ಆತ್ಮನ ರಾಜ್ಯಭಾರವು ಯೋಗಕ್ಷೇಮಲಾಭಕ್ಕಾಗಿ ನಿರಂತರವೂ ನಡೆಯುತ್ತಾ ಬ್ರಹ್ಮೈಕ್ಯದಲ್ಲಿ—ಸಮಾಧಿಯಲ್ಲಿ ಸಮದಲ್ಲಿ ಪರಿಣಮಿಸುವುದಾಗುವುದು.

## ರಾಜಕರ್ಮ– ರಾಜಕಲನ ಮತ್ತು ಕಾಲ

ಕಲನವೂ ಕರ್ಮವಾಗಿ ಪರಿಗಣಿಸಲ್ಪಟ್ಟಿದೆ. ವೇಗ–ಕಲನವು ಕಾಲವೆಂದು ಸ್ಪಷ್ಟವಾಗಿ ತಿಳಿಯಬೇಕು. ಅನಂತವೂ ಅನಾದಿಯೂ ಆದ ಕಾಲ–ಕಲನ–ದಲ್ಲಿ ವ್ಯಾವಹಾರಿಕವಾಗಿ ನಮಗೆ ಕಾಣುವ ಎರಡು ಅವಧಿ–ಅಂತಗಳನ್ನು ಗೊತ್ತುಮಾಡಿಕೊಂಡು ನಡುವೆ ಇರುವ ಕರ್ಮ ಅಥವಾ ಕಾಲ–ಕಲನವನ್ನೂ ಇದೇ ರೀತಿಯಲ್ಲಿ ಮತ್ತೊಂದು ಸನ್ನಿವೇಶದಲ್ಲಿ ನಡೆದ ಕರ್ಮ–ಕಾಲವನ್ನೂ ಪರಸ್ಪರ ಹೊಂದಿಸಿ, ಹೋಲಿಸಿ ಅಳತೆಮಾಡಿ ಪ್ರಮಾಣಸೂಚಕ ಶಬ್ದಗಳಿಂದ ತಿಳಿಯುತ್ತೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದು ರಾಜಕರ್ಮಕ್ಕೆ ಆವಶ್ಯಕವಾಗಿರುವುದರಿಂದ ರಾಜತ್ವವೇ ಕಾಲಕ್ಕೆ ಕಾರಣವೆಂದು ಹೇಳಲಾಗಿದೆ.

ಕಲನದಿಂದ ತುಂಬಿದ ವಿಶ್ವವು ಪೂರ್ಣವೆನಿಸುತ್ತದೆ. ಪೂರ್ಣದಿಂದ ಪೂರ್ಣವು ವ್ಯವಹಾರದಲ್ಲಿ ಅಳವಡಿಸಲ್ಪಡುತ್ತದೆ. ಕಾಲ-ಕಲನದಿಂದ ಬೇರೆಯಾಗಿಲ್ಲದೆ ಎಲ್ಲೆಲ್ಲಿಯೂ ಕಲನವೇ ಇದ್ದು ಕಲನವೇ ಆಗಿರುವುದರಿಂದ ಕಾಲವು ಅಖಂಡವಾಗಿರುತ್ತದೆ. ಕಾಲದ-ಕಲನದ ಕೊರತೆಗೆ ಕಾರಣವಿಲ್ಲ. ಹಾಗೆಯೇ ಪೂರ್ಣ ಎಂಬ ಭಾವನೆಯಿಂದ ಪೂರ್ಣವನ್ನು ಭಾವಿಸುತ್ತಿದ್ದರೆ ಪೂರ್ಣಭಾವನೆಯೇ ಆಗುತ್ತದೆ. ವ್ಯವಹಾರದಿಂದ ಕಲ್ಪಿತವಾದ 'ಮಿತಿ'ಯೇ ಯೋಗಕ್ಷೇಮದ ಮೂಲ. ಗುಣಶಕ್ತಿಕರ್ಮಭಾವಗಳ ಸಂಯೋಗ-ಯೋಗ-ದಿಂದ ಭಾವಕಲ್ಪನೆಗಳಿಗೆ ಅನುಗುಣವಾಗಿ ಫಲವು ಉಂಟಾಗುವುದು. ಯೋಗಕ್ಷೇಮಗಳ ಆಗುಹೋಗುಗಳೇ ಕಲನ-ಕರ್ಮಗಳೆನಿಸಿ ರಾಜ್ಯಭಾರವಾಗಿರುತ್ತವೆ.

ವಿವಿಧ ಕರ್ಮ ಮತ್ತು ಶಕ್ತಿಗಳ ಪ್ರಯೋಗದಿಂದ ಮತ್ತು ಪಂಚಭೂತಾದಿಗಳ ( ಓಷಧಿಗಳು, ಖಗೋಳಗಳು, ಜ್ಯೋತಿರ್ಘನಶಕ್ತಿಗಳು ಇತ್ಯಾದಿಗಳ ) ಸಂಯೋಜನದಿಂದ ವಿವಿಧವಾದ ನಾಮರೂಪಗಳು ಹೊರಹೊಮ್ಮುವುವು. ನಾಮರೂಪಗಳುಳ್ಳ ಪಿಂಡಾಂಡಗಳ ದೇಹಿಗಳೆಲ್ಲರೂ ಪ್ರಜೆಗಳೆನಿಸುತ್ತಾರೆ. ವಿರಾಟ್ ಪುರುಷನು ಪ್ರಜಾಪತಿಯೆನಿಸಿ ಪ್ರಭುತ್ವಶಕ್ತಿಯನ್ನು ಹೊಂದಿದಂತೆಯೂ ಸರ್ವಪ್ರಜೆಗಳಲ್ಲಿಯೂ ಪ್ರಭುತ್ವಶಕ್ತಿ-ಪ್ರಜಾಪತಿತ್ವವು ಉಂಟಾಗುವಂತೆಯೂ ಇರುತ್ತದೆ.

ಯೌವನವು ಪಾಕವಾದಾಗ ಸ್ತ್ರೀ ಪುರುಷ ದೇಹಿಗಳು ಸಮಾಗಮ ಸುಖವನ್ನು ಅನುಭವಿಸುವಂತಾಗುವುದು. ಆತ್ಮ ಬಹುತ್ವಕ್ಕೆ ಸಹಾಯಕವಾದ ಅಪತ್ಯ ಲಾಭವಾಗುವುದು. ಅಲಬ್ಧವಾದುದನ್ನು ಪಡೆಯುವುದೆಂಬ ಯೋಗವು ಉಂಟಾಗುವುದು. ಪಡೆದ ಯೋಗವನ್ನು ಸಂರಕ್ಷಿಸುವುದೆಂಬ ಕ್ಷೇಮಚಿಂತನೆಯುಂಟಾಗುವುದು. ಪ್ರಭುತ್ವಶಕ್ತಿಯನ್ನು ಪ್ರಯೋಗಿಸಿ ಪ್ರಭು-ರಾಜ- ಎನಿಸಿಕೊಳ್ಳುವ ವಿರಾಟ್ ಪುರುಷನು ಪ್ರಭುತ್ವ ವ್ಯವಹಾರಕ್ಕೆ ತಕ್ಕ ವಸ್ತುಗಳನ್ನು ಪಡೆಯುವ ಯೋಗವನ್ನು ಹೊಂದುವನು. ಪ್ರಾಪ್ತವಾದ ವಸ್ತುಗಳ ಕ್ಷೇಮಕ್ಕಾಗಿ ತಕ್ಕ ವ್ಯವಸ್ಥೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆಯಬೇಕಾಗಿರುತ್ತದೆ. ಕ್ಷೇಮವೆಂಬ ಪ್ರಾಪ್ತ-ವಸ್ತುಗಳ ಸಂರಕ್ಷಣವು ಕ್ಷತ್ರವೆನಿಸುವುದು.

ಅಂತರ್ಯಾಮಿಯಾಗಿ ಸರ್ವ-ಉಪಾಧಿಗಳಲ್ಲಿಯೂ ವ್ಯಾಪಿಸಿರುವ ಜೀವನ-ಬ್ರಹ್ಮಸ್ವರೂಪಾವಸ್ಥಾನ ಸಂರಕ್ಷಣಕ್ಕಾಗಿ ಕ್ಷತ್ರ-(ಧರ್ಮ-ಕರ್ಮ)ಗಳು ರೂಪುಗೊಳ್ಳುವುವು. ಅನಂತ ಗುಣ ಶಕ್ತಿವಿಶಿಷ್ಟವಾದ ಕ್ಷತ್ರವು ಆಚಾರ ರೂಪದಲ್ಲಿ ಬ್ರಹ್ಮಾಂಡವನ್ನೆಲ್ಲಾ ಆವರಿಸಿರುತ್ತದೆ. ನಾನಾ ರೂಪದ ಆಚಾರಗಳನ್ನು ವಿಭಜನ ಸಂಯೋಜನ ಕ್ರಮದಲ್ಲಿ ಸಂಪುಟೀಕರಿಸಿ ಸಂಗ್ರಹಿಸಿದರೆ ಬ್ರಹ್ಮಜ್ಞಾನಾವಸ್ಥಾನ ಸಂರಕ್ಷಣಕ್ಕೆ ಅತ್ಯವಶ್ಯಕವಾದ ಮತ್ತು ಸಾರಭೂತವಾದ ಐದು ಶಕ್ತಿ-ವ್ಯಾಪಾರಗಳಾಗಿ ನಿಲ್ಲುವುವು. ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದ*ಗಳೆಂಬ ಗುಣ,* ಶಕ್ತಿ ಮತ್ತು ಕರ್ಮಗಳು ಕ್ಷತ್ರವಾಗಿ ಬ್ರಹ್ಮಸ್ವರೂಪಾವಸ್ಥಾನವನ್ನು ಸಂರಕ್ಷಿಸಿ ಸಂವರ್ಧಿಸಿ ಜೀವನ ಸ್ವಸ್ವರೂಪಜ್ಞಾನಕ್ಕೆ ಅವಕಾಶವನ್ನೀಯುವುವು. ಯೋಗಕ್ಷೇಮಗರ್ಭಿತವಾದ ಪ್ರಪಂಚವು ಋತವೆಂಬ ನಿಬಂಧನೆಯ ಮಾರ್ಗದಲ್ಲಿ ಸಾಗುವುದು. [ಸೋಽಮೋ ವಾ ಏತಸ್ಯ ರಾಜ್ಯಮಾಧತ್ತೇ .... ತ ಏನಂ ಪುನಸ್ಸ್ವಂತೇ ರಾಜ್ಯಾಯ ದೇವಸೂ ರಾಜಾ ಭವತಿ ತೈ. ಸಂ. ಅಷ್ಟಕ 1.] ಬ್ರಹ್ಮಾಂಡ ಮತ್ತು ಪಿಂಡಾಂಡಗಳಲ್ಲಿ ಏಕ ಪ್ರಕಾರವಾಗಿ ಯೋಗಕ್ಷೇಮ ಕಲನಗಳು ನಡೆದು ಅನುಭವವನ್ನುಂಟುಮಾಡುತ್ತವೆ.

* ಈ ಗುಣಗಳುಳ್ಳ ಪ್ರಜೆಗಳ ಧರ್ಮ ಮತ್ತು ಯೋಗಕ್ಷೇಮ ಸಾಧನೆಗೂ ಪ್ರಜಾತ್ವ ರಾಜತ್ವಗಳಿಗೂ ಆವಶ್ಯಕಗಳಾದ ಶಕ್ತಿ ಗುಣ ಕರ್ಮಭಾವಗಳು ಅನಂತವಾಗಿವೆ. ಇವೆಲ್ಲವೂ ಧರ್ಮಿಯನ್ನು ಹೇಳುವ ಶಬ್ದಗಳಿಂದ ವೇದಗಳಲ್ಲಿ ವ್ಯವಹೃತವಾಗಿವೆ. ವೇದರಾಶಿಯಲ್ಲಿ ಅಂಕಿತನಾಮಗಳಂತೆಯೂ ರೂಢನಾಮಗಳಂತೆಯೂ ತೋರುವ ಶಬ್ದಜಾಲವೆಲ್ಲವೂ, ಧರ್ಮಗಳನ್ನು ಹೇಳುವುದು. ನೈಸರ್ಗಿಕವಾದ ಪ್ರಕೃತಿಯ ವಸ್ತುಗಳನ್ನು ಹೇಳುವ ನಾಮಗಳು ಆಯಾ ಧರ್ಮ ಗುಣ ಶಕ್ತಿಗಳನ್ನೂ ಇವುಗಳಿಂದ ಕೂಡಿದ ವಸ್ತುಗಳನ್ನೂ ತಿಳಿಸುತ್ತವೆ. ಭೂಮಿ-ವಾ-ಪೃಥ್ವೀ ಶಬ್ದವು ಪೃಥ್ವೀಶಕ್ತಿ ಗುಣಾದಿಗಳನ್ನೂ ಪೃಥ್ವಿಯನ್ನೂ ಹೇಳುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವಶಕ್ತನಾದ ದೇಹಿಗೆ ಉಂಟಾಗುವ ವಸ್ತುಜ್ಞಾನವು ಅದರ ಮೇಲಿನ ಇಚ್ಛೆಗೋ ಅನಿಚ್ಛೆಗೋ ಔದಾಸೀನ್ಯಕ್ಕೋ ಕಾರಣವಾಗುವುದು (ಪುಟ 16). ಇಷ್ಟವಾದಲ್ಲಿ ಮನಸ್ಸಂಗವುಂಟಾಗುವುದು. ಅನಿಷ್ಟವಾದಲ್ಲಿ ದ್ವೇಷವುಂಟಾಗುವುದು. ಮನಸ್ಸಂಗದಿಂದ ಪ್ರಾಪ್ತಿಗಾಗಿಯೂ ದ್ವೇಷದಿಂದ ದೂರೀಕರಣಕ್ಕಾಗಿಯೂ ನಿಬಂಧನೆಗಳು ಸ್ವಯಂ ವಿವರ್ತವಾಗುವುವು. ಜ್ಞಾನಶಕ್ತಿಯಿಂದ ನಿರ್ದೇಶಿಸಲ್ಪಟ್ಟ ನಿಬಂಧನೆಗಳಿಗೆ ಸ್ವತಃ ಬದ್ಧವಾಗುವ ಪರಿಸ್ಥಿತಿಯಾಗುವುದು. ಈ ಬಂಧನ ಸಂಬಂಧವೇ ಋಣ ಮತ್ತು ಋಣಶಕ್ತಿಯಾಗಿ ದೇಹಿಯನ್ನು ಸುತ್ತುಗಟ್ಟುವುದು; ಅದಕ್ಕನುಗುಣವಾದ ಅನುಭವದಿಂದಲೇ ಅದು ಪರಿಹೃತವಾಗಬೇಕಾಗುವುದು. ಕ್ರಿಯಾಶಕ್ತಿಯ ವ್ಯಾಪಾರವು ಮುಂದುವರಿದು ಫಲಾನುಭವವನ್ನು ಉಂಟುಮಾಡುವುದು.

## ಸಂಕಲ್ಪ – ಕ್ರಿಯಾ

ಕ್ರಿಯಾಶಕ್ತಿಯ ಅಂಗವಾದ ಸಂಕಲ್ಪವು ಪ್ರಥಮಕಲ್ಪವಾಗುವುದು. ಎರಡನೆಯದಾದ ಅಧ್ಯವಸಾಯವು ನಡೆದು ಫಲವಾಗುವುದು; ಫಲಾನುಭವದಿಂದ ಋಣವನ್ನು ಪರಿಹರಿಸಿಕೊಳ್ಳಬೇಕಾಗುವುದು. ಹೀಗೆ ಸಂಕಲ್ಪಸಾಧನೆ ಮೊದಲುಗೊಂಡು ಫಲಾನುಭವದ ವರೆಗಿನ ಮಧ್ಯಕಾಲದಲ್ಲಿಯೂ ಸಹ ಸರ್ವಶಕ್ತನೂ ಸರ್ವಸ್ವತಂತ್ರನೂ ಆದ ದೇಹಿಯ ಜ್ಞಾನ ಮತ್ತು ಇಚ್ಛಾಶಕ್ತಿಗಳ ಪ್ರಾಬಲ್ಯದಿಂದ ಹೊಸ ಹೊಸದಾಗಿ ಋಣಬಂಧನಗಳು ಕಲ್ಪಿತವಾಗಿ ಸಂಕಲ್ಪಗಳೂ ವೃದ್ಧಿಯಾಗುವುವು. ಅವುಗಳನ್ನು ಸಾಧಿಸಿ ಫಲಾನುಭವವಾಗುವುದಕ್ಕೆ ಸನ್ನಿವೇಶಗಳೂ ಆವರಣಗಳೂ ಹೊಣೆಯಾಗಿ ನಿಲ್ಲುವುವು. ಈ ರೀತಿಯಾಗಿ ಋಣ ಮತ್ತು ಅನುಭವಗಳ ಪ್ರವಾಹವು ಮುಂದುವರಿಯುವುದು. ಆದರೆ ಪ್ರಪಂಚದಲ್ಲಿ ವಸ್ತುಗಳ ಸಂಬಂಧವು ಉಂಟಾದಾಗಲೂ, ಆವರಣಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದನ್ನು ಪ್ರೋತ್ಸಾಹಿಸಿ ಅನುಭವಕ್ಕೆ ದೇಹಿಯನ್ನು ಗುರಿಮಾಡಿದಾಗಲೂ ಸರಳವಾದ (ಋಜುವಾದ) ನೀತ್ಯನುಶಾಸನ ಸಂಯಮಾದಿಗಳಿಗೆ ಅವುಗಳನ್ನು ಒಳಪಡಿಸಿ ದೂರೀಕರಿಸಿದರೆ ಋಣಕ್ಕೆ ಅವಕಾಶವಾಗುವುದಿಲ್ಲ ಬಂಧನವೂ ಅಂಕುರಿಸುವುದಿಲ್ಲ. ಸ್ವಸ್ವರೂಪಜ್ಞಾನಾನಂದವು ಸ್ವತಃ ಅನುಭವಕ್ಕೆ ಬರುವಂತಾಗುವುದು.

## ಸಂಕಲ್ಪವು ಅಮೋಘ, ಫಲ ಮತ್ತು ಅನುಭವಗಳು ಅಪ್ರತಿಹತ

ಉಪಾಧಿಗಳನ್ನು (ಶರೀರಗಳನ್ನು) ಧರಿಸುವುದರಿಂದ ದೇಹೀ, ಶರೀರೀ, ಜೀವ— ಎಂದುಹೇಳಲ್ಪಡುವ ಆತ್ಮವು ಸನ್ನಿವೇಶ ಅಥವಾ ಆವರಣ ಪ್ರಾಬಲ್ಯದಿಂದ ಪ್ರಕೃತಿಲೀಲೆಯನ್ನು ಅನುಭವಿಸುವುದಕ್ಕೆ ಸಂಕಲ್ಪವನ್ನು ಮಾಡುತ್ತದೆಂದು ವ್ಯಾವಹಾರಿಕವಾಗಿ ಭಾವಿಸೋಣ. ಅದರ ಪೂರೈಕೆಗಾಗಿ ತಕ್ಕ ಅಧ್ಯವಸಾಯವನ್ನು ಮಾಡಿ ಅದರ ಫಲವನ್ನು ಅನುಭವಿಸುತ್ತದೆ. ದೇಹಿಯು ಸರ್ವಶಕ್ತನಾಗಿ ಶಕ್ತಿತ್ರಯ ಗಳನ್ನು ಪ್ರಯೋಗಿಸುವವನಾದುದರಿಂದ ದೇಹಿಯ ಸಂಕಲ್ಪವು ಎಂದಿಗೂ ಮೋಘವಾಗಲಾರದು. ಮಾಡಿದ ಸಂಕಲ್ಪವು ಕಾರ್ಯಗತವಾಗಿ ಫಲಿಸಲೇ ಬೇಕು; ಅನುಭವವಾಗಲೇ ಬೇಕು. ಪ್ರಕೃತಿಯೂ ಸಹ ತನ್ನ ಸ್ವಾಮಿಯಲ್ಲಿ ಸಂಕಲ್ಪವು ಉದಯಿಸುವುದಕ್ಕೆ ತಕ್ಕ ಸನ್ನಿವೇಶ ವನ್ನು ಕಲ್ಪಿಸಿ, ಸ್ವಾಮಿಯನ್ನು ಸಂಕಲ್ಪಕ್ಕೆ ಈಡುಮಾಡಿ, ಸಂಕಲ್ಪವು ಸ್ವಾಮಿಯಲ್ಲಿ ಕಾಣಿಸಿದೊಡನೆ ಸಂಕಲ್ಪಿತಕಾರ್ಯವು ಸಾಧ್ಯವಾಗುವಂತೆ ಸಕಲ ಸಾಹಸಗಳನ್ನೂ ಮಾಡುವುದು. ಆವರಣಕ್ಕೆ ತಕ್ಕಂತೆ ಸಂಕಲ್ಪ ಮತ್ತು ಗುಣಗಳೂ, ಸಂಕಲ್ಪಕ್ಕೆ ತಕ್ಕಂತೆ ಆವರಣಗಳೂ ಹೊಂದಿ ಕೊಂಡಿದ್ದರೆ ಫಲವು ಅವಶ್ಯಕವಾಗಿ ಕೂಡಲೆ ಲಭಿಸುವುದು. ಒಂದು ವೇಳೆ ಒಂದು ಉಪಾಧಿಯಲ್ಲಿ ಜೀವದ ಸಂಕಲ್ಪಕ್ಕೂ ಆವರಣಗಳಿಗೂ ಹೊಂದಿಕೆಯಾಗದಿದ್ದರೂ ಅಥವಾ ಆ ಉಪಾಧಿಯೇ ಸಂಕಲ್ಪದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫಲಾನುಭವಕ್ಕೆ ಮೇಲ್ಮಟ್ಟದಲ್ಲಿಯಾಗಲೀ ಕೀಳುಮಟ್ಟದಲ್ಲಿಯಾಗಲೀ ಇದ್ದರೂ, ವ್ಯವಸಾಯಕ್ಕೂ ಫಲಾನುಭವಕ್ಕೂ ಅಡ್ಡಿಯಾಗಬಹುದು. ಅಂತಹ ಸಂದರ್ಭಗಳಲ್ಲಿ ಯೋಗ್ಯವಾದ ಉಪಾಧಿಯನ್ನು ಕಲ್ಪಿಸಿಕೊಂಡು ಹಿತವಾದ ಆವರಣದಲ್ಲಿ ವ್ಯವಸಾಯ ಮಾಡುವುದಕ್ಕೆ ಅತ್ಯವಶ್ಯಕವೂ ಯೋಗ್ಯವೂ ಆದ ಹೊಸಜನ್ಮವನ್ನು ತಾಳಿ ಸಂಕಲ್ಪವನ್ನು ಸಾಧಿಸಿ ಕೊಳ್ಳಬೇಕಾಗಿರುವುದು. ಕಾರಣ, ಕಾರ್ಯ ಮತ್ತು ಫಲಗಳ ವ್ಯವಸ್ಥೆಗೆ ಹೊಣೆಯಾದ ಪ್ರಕೃತಿಯು – (ಋತವು–ವಿಧಿಯು) – ತಕ್ಕ ಸಲಕರಣೆ ಗಳನ್ನು ಹೊಂದಿಸುವುದು. ಕಾರ್ಯಸಾಧನೆಗೆ ಆವರಣಗಳ ಸಹಕಾರವು ಅವಶ್ಯಕವಾದುದರಿಂದ ಆ ಸಹಕಾರದ ಪ್ರಮಾಣಕ್ಕೆ ತಕ್ಕಂತೆ ಸಾಕ್ಷಾತ್ತಾಗಿಯೂ, ಪರೋಕ್ಷವಾಗಿಯೂ ಸರ್ವರೂ ಫಲವನ್ನು ಅನುಭವಿ ಸಬೇಕಾಗುವುದು. ಒಬ್ಬ ದೇಹಿಯ ಸಂಕಲ್ಪ ಮತ್ತು ವ್ಯವಸಾಯ ಗಳಿಂದ ಆಗುವ ಫಲಾನುಭವವು ಆ ದೇಹಿಗೆ ಮಾತ್ರವಲ್ಲದೆ ಆವರಣ ಕ್ಕೆಲ್ಲಾ ವ್ಯಾಪಿಸುವುದು.*

ಪೂರ್ಣದಿಂದ ವ್ಯಾಪ್ತವಾದ ಪ್ರಪಂಚದಲ್ಲಿ ಆತ್ಮವು ಘನೀಭೂತ ವಾಗಿಯೂ ವಿರಳವಾಗಿಯೂ ವ್ಯಾಪಿಸಿ ತುಂಬಿರುವುದರಿಂದ ಒಂದು ಕಡೆಯಲ್ಲಿ ನಡೆದ ಕಲಸವು ವೀಣೆ ಮೊದಲಾದ ವಾದ್ಯಗಳ ನಾದದಂತೆ ಅಥವಾ ದೀಪದ ಬೆಳಕಿನಂತೆ ಪರಂಪರೆಯಾಗಿ ವ್ಯಾಪಿಸಿ ಹರಿದು ವಿಶ್ವವನ್ನೇ ತುಂಬಿಕೊಳ್ಳುತ್ತಿರುವುದು. ಶರೀರದ ಒಂದು ಭಾಗದಲ್ಲಿ ಅನುಭವಕ್ಕೆ ಬಂದ ಕಾರ್ಯವು ಶರೀರಕ್ಕೆಲ್ಲಾ ವ್ಯಾಪಿಸಿ ಶರೀರವನ್ನು ಫಲಕ್ಕೆ ಗುರಿ ಮಾಡುವುದು. ಅದರಂತೆ ವಿಶ್ವಶರೀರದಲ್ಲಿ ರೋಮಕೂಪದಲ್ಲಿ ನಡೆದಂತೆ ವ್ಯಾಪಾರಗಳು ಸರ್ವತ್ರ ವ್ಯಾಪಿಸುವುವು.

ಒಂದು ಕಾರ್ಯಸಾಧನೆಗೆ ಸಂಕಲ್ಪವನ್ನು ಮಾಡಿ ಕ್ರಿಯಾವಿಧಾನ ಗಳನ್ನು ತಿಳಿಯದೆ, ಸಂಕಲ್ಪಕ್ಕೆ ವಿರೋಧವಾಗಿರಬಹುದಾದ ಕರ್ಮಾ-ಚರಣೆ ಮಾಡಿದ ಕರ್ತೃವು ಅನಿಷ್ಟಫಲವನ್ನು ಹೊಂದುವುದಲ್ಲದೆ

---

* ಪ್ರಯೋಜಯಿತಾ, ಮಂತಾ, ಕರ್ತಾ ಏತೇ ಸ್ವರ್ಗನರಕ-ಫಲೇಷು ಕರ್ಮಸು ಭಾಗಿನಃ — ಆಪಸ್ತಂಬ-ಧರ್ಮಸೂತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆವರಣಕ್ಕೆ ಸೇರಿದ ಕುಟುಂಬದವರೂ ಸಮಾಜದವರೂ ಪ್ರದೇಶ-ದೇಶದವರೂ, ದುಷ್ಕಫಲವನ್ನು ಅನುಭವಿಸುವಂತೆ ಮಾಡುವ ಸಂದರ್ಭ ಉಂಟಾಗುವುದು. ಹೀಗೆ "ಪ್ರತಿಕ್ರಿಯಾ" ರೂಪವಾದ ಫಲವನ್ನು ಅನುಭವಿಸುವುದಕ್ಕೆ ಕರ್ತೃ ಮೊದಲಾಗಿ ಸರ್ವರೂ ಸಿದ್ಧರಾಗಿರಬೇಕೆಂಬುದನ್ನು ಮರೆಯಬಾರದು. ಕಾರ್ಯಕಾರಣಗಳನ್ನು ತಿಳಿಯದೆ ಕುಲ-ಗೇಡಿಗಳೂ ಸಮಾಜದ್ರೋಹಿಗಳೂ ದೇಶ ದ್ರೋಹಿಗಳೂ ರಾಷ್ಟ್ರದ್ರೋಹಿಗಳೂ ಸ್ವದ್ರೋಹಿಗಳೂ ಆಗುವವರು ಲೋಕದಲ್ಲಿ, ಪ್ರಜಾಪತಿರಾಜ್ಯಕ್ಕೆ ಸೇರಿದ ಲೋಕದಲ್ಲಿ, ಹೇರಳವಾಗಿ ಕಂಡುಬರುವರು.

ಒಂದು ಕಾಲದಲ್ಲಿ ನೆರವೇರದಿರುವ ಸಂಕಲ್ಪವು ಋಣಶೇಷದೊಂದಿಗೆ ಸೇರಿ ಕೂಡಿಹಾಕಲ್ಪಡುವುದು ಮತ್ತು ಕಾಲಕ್ರಮೇಣ ಪಕ್ವ-ವಾಗುತ್ತಾ ಬಂದು ಫಲಾನುಭವಕ್ಕೆ ಅವಶ್ಯಕವಾದ ಪ್ರಯತ್ನಗಳ ಮೂಲಕ ಫಲವಾಗಿ ಪರಿಣಮಿಸುವುದು.

ಸರ್ವಥಾ ಪ್ರಪಂಚದಲ್ಲಿ, ಪ್ರಜಾಪತಿಯ ರಾಜ್ಯಭಾರದಲ್ಲಿ, ಕಾಣುವ ಆಗು ಹೋಗುಗಳು, ವ್ಯಾಪಾರಗಳು ಆತ್ಮ-ಜೀವ-ರ ಸಂಕಲ್ಪ ಮತ್ತು ವ್ಯವಸಾಯಗಳ ಫಲವಾಗಿರುವುದರಿಂದ ಸರ್ವವೂ ಆಯಾ ಮಿತಿ ಮತ್ತು ಸನ್ನಿವೇಶಗಳಲ್ಲಿ ಸಾಧುವಾಗಿಯೇ ಇರುವುದು. ವ್ಯಾವಹಾರಿಕವಾಗಿ ದೃಷ್ಟಿಕೋಣಗಳ ಮಿತಿಯಿಂದ 'ಒಳ್ಳೆಯದು' 'ಕೆಟ್ಟದ್ದು' ಎಂಬ ಭೇದಭಾವನೆಯು ಕಾರ್ಯ-ಕಾರಣ-ಮಿತಿಯ ಪ್ರಪಂಚದಲ್ಲಿ ಅವಶ್ಯಕವಾಗಿ ಏರ್ಪಡುವುದು.

ಲೀಲೆ

ರೂಢಿಯಲ್ಲಿ 'ಒಳ್ಳೆಯದು' ಮತ್ತು 'ಕೆಟ್ಟದ್ದು' ಎಂದು ಹೇಳಬಹುದಾದ ಫಲಾನುಭವಕ್ಕೆ ಕರ್ತೃವೇ ಪ್ರಧಾನ ಕಾರಣವಾಗಿದ್ದರೂ, ಕುಟುಂಬ, ಸಮಾಜ, ಪ್ರದೇಶ, ದೇಶಗಳೂ ಸಾಧಾರಣ ಕಾರಣವೆನಿಸಿಗೊತ್ತಾದ ಮಿತಿಯಲ್ಲಿ ಹೊಣೆಯಾಗಿರುತ್ತಾರೆ. ಒಳ್ಳೆಯ ಫಲಕ್ಕೆ ಕರ್ತೃವು ಕಾರಣನೆಂದೂ ಅಹಿತವಾದ ಫಲಕ್ಕೆ ಬೇರೆ ಯಾವುದೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತು ಕಾರಣವೆಂದೂ ಭ್ರಮಿಸಿ, ವಿಜೃಂಭಿಸಿ ಮಾಡಿದವನ ತಪ್ಪನ್ನು ಮುಚ್ಚಿಕೊಳ್ಳುವುದು,— ಜ್ಞಾನವು ಮರೆಯಾಗಿರುವುದರ ಪ್ರಭಾವವಾಗಿರುತ್ತದೆ. "ಕಾಮಃ ಅಕಾರ್ಷೀತ್, ಮನ್ಯುಃ ಅಕಾರ್ಷೀತ್, ನಾಹಂ ಕರ್ತಾ, ನಾಹಂ ಕಾರಯಿತಾ" ಎಂಬ ವಿವೇಚನೆಗಳು ಜ್ಞಾನ ಸಾರಕ್ಕೆ ಅನುಗುಣವಾಗಿರುವುವು. ಆದರೆ ಕಾಮವು ದೇಹಿಯಲ್ಲಿ ಆಶ್ರಯವನ್ನು ಹೊಂದಿದರೇನೇ ಪ್ರವೃತ್ತಿಯುಂಟಾಗುವುದು. ಈ ರಹಸ್ಯವನ್ನು ತಿಳಿಯದೆ, ತಿಳಿದರೂ ತೋರಿಸದೆ ದುಷ್ಟಫಲ ಕಾರಣವನ್ನು ಗ್ರಹಚಾರ, ಹಣೇಬರಹ, ಅದೃಷ್ಟ, ಪ್ರಕೃತಿ ಮೊದಲಾದ ಶಬ್ದಗಳಿಂದ ವಿವರಿಸಿ ಅವುಗಳ ಮಿತಿ–ಅರ್ಥಗಳನ್ನು ತಿಳಿಯದೆ ಬೇರೆಯವರ ಮೇಲೆ ತಪ್ಪುಹೊರಿಸಿದಂತೆ ಭಾವಿಸಿ ತಮ್ಮ ತಮ್ಮ ತಪ್ಪನ್ನು ಮರೆಮಾಡಿಕೊಂಡು ಸಾಧುತ್ವವನ್ನು ತಮ್ಮ ಮೇಲೆ ಆರೋಪಿಸಿಕೊಂಡು ಪ್ರಕಟಿಸುವುದು ಕೇವಲ ದ್ರೋಹವಾಗುವುದು. ಆದುದರಿಂದ ದ್ರೋಹದ ಮತ್ತು ದ್ರೋಹಭಾವನೆಯ 'ಪ್ರತಿಕ್ರಿಯಾ' ಫಲವನ್ನೂ ಆಹ್ವಾನಿಸಬೇಕಾಗುವುದು. ಜ್ಯೋತಿಗಳಾಗಿ ದೇವರೆನಿಸುವ ಗ್ರಹಗಳನ್ನು ತಮ್ಮ ತಮ್ಮ ಕೆಲಸಗಳ ಫಲಕ್ಕೆ ಗುರಿಪಡಿಸಿ ಜ್ಯೋತಿಶ್ಶಾಸ್ತ್ರಕ್ಕೆ ಕಳಂಕವನ್ನು ತರುವ ಮಹಾಪರಾಧಕ್ಕೆ ಗುರಿಯಾಗುವುದು ಮಾನವತೆಯಲ್ಲ. "ಹಣೇಬರಹವೆಂಬುದು ವ್ಯಕ್ತಿಯ ಕೆಲಸದ ಫಲವಲ್ಲದೆ ಬೇರೆಯಲ್ಲ." ಎಂಬುದನ್ನು ತಿಳಿಯದವರೂ ತಿಳಿದವರೂ ತಿಳಿಯದಂತೆ ವರ್ತಿಸುವವರೂ ಹೇರಳವಾಗಿರುತ್ತಾರೆ. 'ಪ್ರಕೃತಿಯು ತನ್ನ ಲೀಲೆಗೆ ಆತ್ಮನನ್ನು ಒಳಪಡಿಸಿ ಬಂಧನಕ್ಕೆ ಸಿಕ್ಕಿಸಿ ಹಿಂಸೆಪಡಿಸುವುದು' ಎಂಬ ಭಾವನೆಯು ಕುಹಕ ಮತ್ತು ಸಮತಾಜ್ಞಾನವು ಮರೆಯಾಗಿರುವುದರ ಫಲ. 'ಹಿಂಸೆ'* ಎಂಬ

---

* ಹಿಂಸೆ ಎಂಬುದರ ಲಕ್ಷಣ, ಸ್ವಭಾವ, ವ್ಯಾಪ್ತಿ ಮತ್ತು ಅನ್ವಯಗಳನ್ನು ತಿಳಿದರೆ ಲೋಕದಲ್ಲಿ ಒಂದು ಗರಿಕೆ ದಳವು ಅಲುಗಾಡುವುದಾಗಲಿ ಉಸಿರಾಡುವುದೇ ಮೊದಲಾದ ಸ್ಥೂಲ, ಸೂಕ್ಷ್ಮ ಕಾರ್ಯಗಳಾಗಲೀ ವಸ್ತುಗಳ ಇರುವಿಕೆಯಾಗಲೀ ಒಂದೊಂದು ದೃಷ್ಟಿಯಿಂದ ಹಿಂಸೆಯಾಗಿರುತ್ತವೆ. ಅಸೂಯೆ, ಅತೃಪ್ತಿ, ದ್ವೇಷಾದಿಗಳಿಂದ ಕೂಡಿದವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾವನೆಯೇ ಸಂಕುಚಿತವಾದುದು.* ಯಾವುದನ್ನು ಹಿಂಸೆಯೆಂದೂ ಅಹಿಂಸೆಯೆಂದೂ ಹೇಳುತ್ತವೆಯೋ ಅದೆಲ್ಲವೂ ಕೇವಲ ಸಂಕಲ್ಪ ವ್ಯವಸಾಯಗಳ ಫಲ; ಆದುದರಿಂದಲೇ "ಲೀಲೆ" ಎಂಬುದಾಗಿ ಹೇಳುತ್ತಾರೆ.

## ದುಷ್ಟಫಲ ಸಂಕಲ್ಪ

ಒಳ್ಳೆಯ ಕೆಲಸಗಳೆಂದು ಭಾವಿಸಿ ಸಂಕಲ್ಪಿಸುವಂತೆ ಕೆಟ್ಟ ಪರಿಣಾಮವನ್ನುಂಟುಮಾಡುವ ಕೆಲಸಗಳಿಗೂ ಸಂಕಲ್ಪವನ್ನೇ ಮಾಡುತ್ತಾರೆಂದು ತಿಳಿಯಬೇಕು. ಇದು ಆಶ್ಚರ್ಯಜನಕವಾದರೂ ಅನುಭವ ಸಿದ್ಧವಾದುದು. ಹೇಗೆಂದರೆ:— ಲೋಕದಲ್ಲಿ ಯಾರೂ ಕಾಯಿಲೆಯಿಂದ ನರಳಿ ಹಿಂಸೆಪಡಬೇಕೆಂದು ಬಯಸುವುದಿಲ್ಲ; ಆ ಬಗೆಯ ಸಂಕಲ್ಪವಿಲ್ಲದಿದ್ದರೆ 'ಕಾಯಿಲೆ' ಎಂಬ ಕಾರ್ಯವು ಕಾಣಿಸುವುದೇ ಇಲ್ಲ. ಇವೆರಡನ್ನೂ ಸಮನ್ವಯ ಮಾಡಿಕೊಂಡು ವಿವೇಕದಿಂದ ವಿಷಯ ವಿಮರ್ಶೆ ಮಾಡಿ ಯಥಾರ್ಥಜ್ಞಾನವನ್ನು ಹೊಂದಬೇಕು ಜಿಹ್ವೇಂದ್ರಿಯ ತೃಪ್ತಿಯೆಂಬ ಫಲಾನುಭವಕ್ಕೆ ಸಂಕಲ್ಪಿಸಿ ವ್ಯವಸಾಯ ಮಾಡಿ ಭುಂಜಿಸಿದುದರ ಫಲವನ್ನು ಅನುಭವಿಸಬೇಕು. – 'ಮಿತವಾಗಿರಬೇಕು' ಎಂಬ ತತ್ವವನ್ನು ದೂರೀಕರಿಸಿ ಮಿತಿ ಮೀರಿ ತಿನ್ನುವ ಕೆಲಸವನ್ನಾಚರಿಸಿದರೆ ತತ್ಕಾಲಕ್ಕೆ ಇಂದ್ರಿಯತೃಪ್ತಿಯಾಗುವುದು ಮಾತ್ರವಲ್ಲದೆ ಶರೀರದ

---

* ಹೊಗಳಿಕೆ ವಂಚನೆಗಳಿಗಾಗಿ ತನಗೆ ಬೇಕಾದುದು ಅಹಿಂಸೆಯೆಂತಲೂ ತನಗೆ ಬೇಕಿಲ್ಲದುದು 'ಹಿಂಸೆ' ಎಂತಲೂ ಹೇಳಬಹುದಾಗಿದೆ. ತರ್ಕಜ್ಞಾನ ಮತ್ತು ಸಾಮಾನ್ಯವಿವೇಕವುಳ್ಳವರು ಈ ಸಮಸ್ಯೆಯನ್ನು ಮಥಿಸಿ ಅಮೃತವನ್ನು ಪಡೆದು ಕರ್ಮಫಲಗಳ ದೃಷ್ಟಿಕೋಣ ಮತ್ತು ಮಿತಿಗಳನ್ನು ಗೊತ್ತುಮಾಡಿಕೊಳ್ಳಬೇಕಾಗಿರುತ್ತದೆ.
(ಶ್ಲೋಕ ಪುಟ 9-10. ಅನುವಾದ ಪುಟ 10–13 ಅಧ್ಯಾಯ 3.
ವಿಜಯಾದ್ರಿ ಮಾಹಾತ್ಮ್ಯಂ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇತರ ಅಂಗಗಳು ಅಸಹಕಾರವನ್ನು ತೋರಿಸಿ ನೊಂದು ಬೀಳುವುವು. ಆರೋಗ್ಯಸ್ಥಿತಿಯು ವ್ಯತ್ಯಾಸವಾಗುವುದು. ಹೀಗೆಯೇ ಕೆಲವು ಇಂದ್ರಿಯ ತೃಪ್ತಿಗಾಗಿ ನಡೆವ ಕಾರ್ಯಗಳು ಶರೀರದ ಇತರ ಅಂಗಗಳ ಶಾಂತತೆಗೆ ಭಂಗವನ್ನುಂಟುಮಾಡುವುವು. ಅಂತರ್ಯುದ್ಧವು ಆರಂಭವಾಗುವುದು. ಇದೇ 'ಕಾಯಿಲೆ'–ವಾ–ಅನಾರೋಗ್ಯವೆಂದು ವ್ಯವಹರಿಸಲ್ಪಡುವುದು. ಇಂದ್ರಿಯ ತೃಪ್ತಿಗಾಗಿ ಸಂಕಲ್ಪ ಮಾಡಿದುದರ ಫಲಕ್ಕೆ ಸಂಬಂಧಪಟ್ಟಂತೆ ಈ ವಿರುದ್ಧ ಫಲಗಳು ಉಂಟಾಗುವುದರಿಂದ ಇವುಗಳೂ ಸಂಕಲ್ಪದಲ್ಲಿ ಅಡಕವಾದಂತೆಯೇ ಸರಿ. ಈ ಬಗೆಯ ಸಂಕಲ್ಪಸಿದ್ಧಿಗೂ ಪ್ರಕೃತಿಯು ಸೇವಕಳಂತೆ ಸಿದ್ಧಳಾಗಿ ಸಹಕರಿಸುತ್ತಾಳೆ. ಆವರಣಗಳೂ ಅನುಗ್ರಹಿಸುತ್ತವೆ. ಹೊಣೆಗಾರಿಕೆಯೂ ಸಹ ಕರ್ತೃವಾದ ದೇಹಿಗೂ ಸಹಕರಿಸುವ ದೇಹಿಗಳಿಗೂ ಸಂಬಂಧಿಸಿರುವುದು.

## ವಿರೋಧ ಸಂಕಲ್ಪ

ಒಂದು ದೇಹಿಯು ಆವರಣಗಳ ಪ್ರಭಾವಕ್ಕೆ ಸೋತು ವಿರುದ್ಧವಾಗಿ ಪ್ರಕೃತಿಯನ್ನೇ ಎದುರಿಸಿ ಸಂಕಲ್ಪಿಸಬಹುದು. ಚಳಿ, ಮಳೆ, ಬಿಸಿಲು ಮುಂತಾದುವುಗಳನ್ನು ತುಚ್ಛವಾಗಿ ಭಾವಿಸಿ ತಿರಸ್ಕರಿಸಬಹುದು. ಈ ಬಗೆಯ ತೀವ್ರ ಸಂಕಲ್ಪಗಳು ನೆರವೇರುವುದಕ್ಕೂ ಪ್ರಕೃತಿಯೇ ಸಹಕರಿಸಿ ಆಯಾ ಸಂಕಲ್ಪಕ್ಕೆ ತಕ್ಕಂತೆ ಇರುವ ಪರಿಸ್ಥಿತಿಯಲ್ಲಿ ಆಯಾ ದೇಹಿಗಳು ಆಯಾ ಫಲಗಳನ್ನು ಅದೇ ಜನ್ಮದಲ್ಲಿ ಅಥವಾ ಬೇರೆ ಜನ್ಮದಲ್ಲಿ ಅನುಭವಿಸಬಹುದಾದ ಸಂವಿಧಾನಗಳನ್ನು ಏರ್ಪಡಿಸುವುದು. ಆಕಸ್ಮಿಕವಾಗಿ ನಡೆಸಿದ ಸಂಕಲ್ಪಗಳ ಫಲಗಳನ್ನು ಅನುಭವಿಸಲು ತಕ್ಕ ಉಪಾಧಿಗಳನ್ನು ಧರಿಸಿ ಆಯಾ ಸ್ಥಳ ಸನ್ನಿವೇಶಗಳಲ್ಲಿ ಜನ್ಮವನ್ನೆತ್ತಬೇಕಾಗುವುದು. ಸಾಮೂಹಿಕವಾದ ಘಟನೆಗಳಿಗೂ ಬೆಂಕಿ, ಪ್ರವಾಹ ಮೊದಲಾದುವುಗಳ ಹೊಡೆತಕ್ಕೂ ಇತರ ಆಕಸ್ಮಿಕ ಘಟನೆಗಳಿಗೂ ಈ ಬಗೆಯ ಸಂಕಲ್ಪವೇ ತಳಹದಿಯಾಗಿರುತ್ತದೆ. ಪ್ರಾಕೃತಿಕ ಮತ್ತು ಮಾನವ ಅಪಘಾತಗಳೂ ಸಂಕಲ್ಪಸಿದ್ಧಿಗಳೇ ಆಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುರುಷನಾದ ಶ್ರೀರಾಮನ ಮುಖ ಸೌಂದರ್ಯವನ್ನು ಮೋಹಿಸಿ, ಸಂಕಲ್ಪಮಾಡಿದುದರ ಫಲವಾಗಿ ಋಷಿಗಳು ಗೋಪಸ್ತ್ರೀಯರಾದರು; ಸೌಂದರ್ಯವನ್ನು ಹೊಂದಿದುದೇ ಮಹಾಪರಾಧವಾದಂತಾಗಿ ಅದರ ವಿಪ್ರತಿಫಲವನ್ನು ಅನುಭವಿಸುವಂತೆ ಶ್ರೀರಾಮನು ಕೃಷ್ಣನಾಗಿ ಅವತರಿಸಿ ರಾಮನ ಸಹವಾಸ ಸುಖವನ್ನು ಗೋಪಿಗಳಾದ ಋಷಿಗಳು ಅಥವಾ ಋಷಿಗಳಾಗಿದ್ದ ಗೋಪಿಯರು ಅನುಭವಿಸುವಂತಾಯಿತು. ವಾಲಿಯ ನಿಗ್ರಹವು ಋತಕ್ಕೆ ವಿರೋಧವಾಗಿದ್ದರೂ ರಾಜನೀತಿಶಾಸ್ತ್ರವು ವಿಧಿಸಿದ್ದಂತೆ ಕಾರ್ಯಸಿದ್ಧಿಗೆ ಯತ್ನಿಸಬೇಕಾದ ಸಂದರ್ಭವೊದಗಿತು; ಪ್ರತಿಜ್ಞಾ ಋಣವಾದ ಆ ಹೊಣೆಗಾರಿಕೆಯನ್ನು ಅಲ್ಲಿ ನಿರ್ವಹಿಸಿದುದಾಯಿತು. ಕರ್ಮಯೋಗ ತತ್ವ ಪ್ರಕಾರ ಶಾಸ್ತ್ರವೂ ಸ್ವಕರ್ಮವೂ ವಿಧಿಸಿದಂತೆ ಮಾಡಿ ನಿರ್ಲಿಪ್ತವಾಗಿರುವ ಪರಿಸ್ಥಿತಿಯಿದ್ದರೂ ಋತವಿರೋಧಕರ್ಮ ಮಾರ್ಗಕ್ಕೆ ಪ್ರಾಯಶ್ಚಿತ್ತ – ಶಿಕ್ಷಾ – ರೂಪವಾದ ಫಲವನ್ನು ಸ್ವತಃ ಆಹ್ವಾನಿಸಿ ಬೇಡನ ರೂಪವನ್ನು ಧರಿಸಿದ ವಾಲಿಯಿಂದ, ಕೃಷ್ಣನ ಶರೀರವನ್ನು ಧರಿಸಿದ ರಾಮನು ಪ್ರತಿಕ್ರಿಯಾ ರೂಪದಲ್ಲಿ ಅನುಭವಿಸಿ ವಾಲಿ ನಿಗ್ರಹವೆಂಬ ಪ್ರತಿಜ್ಞಾ ಋಣದ ದುಷ್ಪರಿಣಾಮದಿಂದ ಬಿಡುಗಡೆ ಹೊಂದಿದನು.*

---

* ಪ್ರತಿಯೊಬ್ಬರ ಜೀವಮಾನದಲ್ಲಿಯೂ ಪುರಾಣೇತಿಹಾಸಗಳಲ್ಲಿ ಕಂಡ ವ್ಯಕ್ತಿಗಳ ಚರಿತ್ರೆ–ಅನುಭವ ವಿಷಯಗಳು ಒಂದು ರೂಪದಲ್ಲಿಲ್ಲದಿದ್ದರೆ ಮತ್ತೊಂದು ರೂಪದಲ್ಲಿ ಕಾಣುತ್ತವೆ. ಈ ಸಂದರ್ಭದಲ್ಲಿ ಪುರಾಣ-ಇತಿಹಾಸಗಳಲ್ಲಿ ಕಂಡುಬರುವ ಅಂಕಿತನಾಮಗಳು – ಆಯಾ ವ್ಯಕ್ತಿಗಳ ಚರಿತ್ರೆಯನ್ನು ಹೇಳಬಹುದಾಗಿರುತ್ತದೆಂಬಲ್ಲದೆ, ವಿಶ್ವಕ್ಕೆಲ್ಲಾ ಅನ್ವಯಿಸುವ ಮಾನವ ಸಾಮಾನ್ಯವಾದ ಅನುಭವಗಳನ್ನು ಉದಾಹರಿಸಿ ತೋರಿಸಲು ಆರಿಸಿದಂತಿರುವ – ಸರ್ವಾನ್ವಯ ರೂಢನಾಮಗಳಾಗಿವೆ ಎಂದು ಭಾವಿಸಬೇಕಾಗಿದೆ. ಆಯಾ ಅಂಕಿತನಾಮಕ್ಕೆ ಸಂಬಂಧಪಟ್ಟಂತೆ ಇತಿಹಾಸಾದಿಗಳಲ್ಲಿ ಹೇಳಿರುವ ಸಮಸ್ತಗುಣ ಕರ್ಮಗಳನ್ನೆಲ್ಲಾ ಆಯಾ ನಾಮ-ವಾಚಕಗಳೇ ಬೋಧಿಸುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಕಲ್ಪ ಫಲ ಮತ್ತು ಅನುಭವಗಳು ಅನೇಕ ಸಂದರ್ಭಗಳಲ್ಲಿ ಮನಸ್ಸಿನಲ್ಲಿಯೂ ಬರೀ ಮಾತಿನಲ್ಲಿಯೂ ನಡೆದುಹೋಗಿ ಅಷ್ಟಕ್ಕೇ ಕೊನೆಗಾಣಬಹುದು ; ಸ್ವಪ್ನಾವಸ್ಥೆಯಲ್ಲಿಯೂ ಅತಿವಿಚಿತ್ರವಾಗಿ ಅತ್ಯದ್ಭುತವಾಗಿ ಅನುಭವಕ್ಕೆ ಬರುವುವು. ಕಾಯಕವಾಗಿ ಇಂದ್ರಿಯಗಳ ಮಟ್ಟದಲ್ಲಿ ಪೂರೈಸುವವರೆಗೂ ಕಾದು ನಿರೀಕ್ಷಿಸಲ್ಪಡಬಹುದು. ದಾರಿಯಲ್ಲಿ ಹೋಗುವಾಗ ತೋಟದ ಹೂ ಹಣ್ಣುಗಳ ಸೊಬಗನ್ನು ನೋಡುತ್ತೇವೆ; ವಾಸನೆ ರೂಪುಗಳು ಹಿತವಾಗಿ ಮನಸ್ಸನ್ನು ಸೆಳೆಯುವುವು ; ವಾಚಾ ವರ್ಣನೆಯೂ ಆಗುತ್ತದೆ. ದೃಷ್ಟಿ, ವಾಕ್ ಮನಸ್ಸುಗಳಿಂದಲೇ ಫಲಾನುಭವವು ಸಾಕಾಗುವಷ್ಟು ಅಂಶ–ಪ್ರಮಾಣ–ದಲ್ಲಿ ಸಂಕಲ್ಪವಿದ್ದಿದ್ದರೆ ಅಷ್ಟರಲ್ಲೇ ಕೊನೆಗಾಣುವುದು. ಹಾಗಲ್ಲದೆ ಸ್ಮರಣ, ಮನನ ವರ್ಣನೆಗಳಿಂದ ಕಾಯಕವಾಗಿ ಅನುಭವಿಸುವ ಅಪೇಕ್ಷೆಯು ಹೆಚ್ಚಾಗಿ ಬಲಿತು, ಋಣವು ಕಲ್ಪಿತವಾದರೆ ಅದರ ಪೂರೈಕೆಗಾಗಿ ಸಂಕಲ್ಪ ವ್ಯವಸಾಯಗಳು ನಡೆಯುವುವು. ಈ ಪೂರೈಕೆಗೆ ತತ್ಕಾಲದಲ್ಲಿ ಅವಕಾಶ ಸಿಕ್ಕದೇಯಿದ್ದರೆ ಆ ದೇಹಿಯ ಸಂಕಲ್ಪಪುಸ್ತಕದಲ್ಲಿ ಉಲ್ಲೇಖಿಸಲ್ಪಡುವುದು. ಯಾವ ಉಪಾಧಿಯಿಂದ ಮೇಲ್ಕಂಡ ಫಲಾನುಭವವು ಸಾಗುವುದೋ ಆ ಉಪಾಧಿಯನ್ನೂ ತನ್ಮೂಲಕ ಫಲಾನುಭವವನ್ನೂ ಉಚಿತವಾದ ಕಾಲದಲ್ಲಿ ದೇಹಿಗೆ ದೊರಕಿಸಬೇಕಾದುದು ಪ್ರಕೃತಿಯ * ಮತ್ತು ಕಾರ್ಯಕಾರಣಗಳ ಹೊಂದಾಣಿಕೆಗೆ ಹೊಣೆಯಾದ ವಿಧಿಯ ಕರ್ತವ್ಯ.

ಈ ಬಗೆಯ ಫಲಾನುಭವವು ಋತಕ್ಕೂ, ನೀತಿಗೂ ಪರಿಸ್ಥಿತಿಗಳಿಗೂ ವಿರೋಧವಾಗಿದ್ದರೆ ಅವಕ್ಕೆ ತಕ್ಕ ಶಿಕ್ಷಾರೂಪವಾದ ಫಲಕ್ಕೂ ದೇಹಿಯು ಸಿದ್ಧವಾಗಿದ್ದು, ದೈಹಿಕ ಮಾನಸಿಕ-ಅನುಭವಗಳನ್ನು ಹೊಂದಲೇ-ಬೇಕಾಗಿರುವುದು.

---

* 'ಪ್ರಕೃತಿ' ಶಬ್ದವನ್ನು ವಿಧಿ–ಹಣೇಬರಹ ಎಂಬ ಅರ್ಥಗಳಲ್ಲಿಯೂ ಪ್ರಯೋಗಿಸಿರುತ್ತಾರೆ. ಪ್ರಕೃತಿ ಎಂದರೆ ಸುತ್ತಮುತ್ತಲಿನ ಚರಾಚರ ವರ್ಗದ ಪ್ರಕೃತಿ ಮಾತೆ. ಸಂಕಲ್ಪ ವ್ಯವಸಾಯಗಳೂ ಪ್ರಕೃತಿಶಬ್ದದಿಂದಲೇ ಉದಾಹರಿಸಲ್ಪಡುವುವು. ವಿವೇಕದಿಂದ ಈ ಭಾವಾರ್ಥಗಳನ್ನು ಸಂದರ್ಭಾನುಸಾರ ತಿಳಿಯುವುದು ಅವಶ್ಯಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಋತಾನುರೋಧ ರಾಜ್ಯಭಾರ

ಪ್ರಕೃತಿಯ ಮಧ್ಯೆ ಸೇರಿಪಂತಿರುವ ಪ್ರಜಾ-ದೇಹಿಗೆ ಸಂಕಲ್ಪ. ವ್ಯವಸಾಯ ಮತ್ತು ಪ್ರಕೃತಿ ಸಹಾಯಗಳಿಂದ ಫಲವು ಅವಶ್ಯಕವಾಗಿ ಲಾಭವಾಗುವುದು. ಇದೇ ಪ್ರಜಾಪತಿಯ ನಿರಸ್ತಕುಹಕವಾದ ಪ್ರಜಾ ರಾಜ್ಯಭಾರದ ತತ್ವ. ಅವಿಚ್ಛಿನ್ನವಾಗಿ ಉಂಟಾಗುತ್ತಿರುವ ಋಣಸಂಕಲ್ಪ ಕಾರ್ಯಗಳು ಆಯಾ ಪ್ರಮಾಣಕ್ಕೆ ತಕ್ಕಂತೆ ಸ್ವಪ್ನದಲ್ಲಿಯೇ ವ್ಯಕ್ತಿಯ ಅನುಭವಕ್ಕೆ ಬಂದಿರುವುದಕ್ಕೆ ಅನೇಕ ನಿದರ್ಶನಗಳಿವೆ. ಸಾತ್ವಿಕವೆನಿಸಿ ಶುದ್ಧವಾದ ಬಾಹ್ಯಾವರಣದ ಮಧ್ಯೆ ಇದ್ದು ಆಹಾರಾದಿಶುದ್ಧಿಯಿಂದ ಸತ್ವಶುದ್ಧಿಯನ್ನು ಹೊಂದಿ "ಅಂತರಾವರಣ" ವನ್ನು ಶುದ್ಧವಾಗಿಟ್ಟು ಕೊಂಡಿರುವ ವ್ಯಕ್ತಿಗಳಿಗೆ ಜಾಗ್ರದವಸ್ಥೆಯಲ್ಲಾಗಲೀ ಸ್ವಪ್ನಾವಸ್ಥೆಯಲ್ಲಾಗಲೀ ಹಿಂದೆ ನಡೆದ, ಈಗ ನಡೆಯುತ್ತಿರುವ ಮತ್ತು ಮುಂದೆ ನಡೆಯಲಿರುವ ಅನುಭವಗಳು ಸ್ವೇಚ್ಛಾನುಸಾರವಾಗಿ ವಿಜ್ಞಾನ ಪ್ರಕಾಶರೂಪನಾದ ಆತ್ಮನಿಗೆ-ದೇಹಿಗೆ- ಪೂರ್ವಭಾವವಾಗಿ ಗೋಚರವಾಗುವುವು.

ಶ್ರೇಯಃಪ್ರಾಪ್ತಿಗೆ ಶ್ರೇಯಃಪ್ರಾಪಕ ಕರ್ಮಗತಿ ಶಾಸನವೇ, ಋತವೆನಿಸುವುದು. 'ಓಮ್' ಎಂಬ 'ಸಮ'ವನ್ನು ಹೊಂದಿಸುವುದಕ್ಕಾಗಿರುವ ಋತವು ಅಮೃತ. ಅಮ್ ಎಂಬುದು ನಿಶ್ಶ್ರೇಯಸಸೂಚಕವಾದ ಶಬ್ದ ; ಓಮ್ ಎಂಬುದರ ಲಕ್ಷಣ ಸ್ವರೂಪಗಳನ್ನು ಬೋಧಿಸುವುದು. ಒಂದು ನಾಣ್ಯದ ಮುಖಗಳಂತೆ ಋತಕ್ಕೆ ವಿರೋಧವಾದುದು ಅನೃತ; ಸತ್ಯ ಮತ್ತು ಸತ್ಯಕ್ಕೆ ವಿರೋಧವಾದ ಅಸತ್ಯ ಎಂದು ತಿಳಿಯಬೇಕು. ಋತವೂ ಸತ್ಯವೂ ಪರಸ್ಪರ ಹೆಣೆದುಕೊಂಡಿರುತ್ತವೆ. ಸತ್ಯವು ಋತದಿಂದಲೂ ಋತವು ಸತ್ಯದಿಂದಲೂ ಬಳಸಲ್ಪಟ್ಟಿರುತ್ತವೆ. ಅದರಂತೆ ಅನೃತ ಮತ್ತು ಅಸತ್ಯಗಳು ಅವುಗಳ ವಿರೋಧಾರ್ಥವನ್ನು ಬೋಧಿಸುತ್ತವೆ. ಆದರೆ ವಾಕ್, ಅರ್ಥ, ಕರ್ಮ ಮತ್ತು ಶಕ್ತಿಗಳ ದೃಷ್ಟಿಯಿಂದ ಋತ, ಸತ್ಯ, ಅನೃತ, ಅಸತ್ಯಗಳು ಬೇರೆ ಬೇರೆಯಾಗಿಯೇ ಇದ್ದು ಇತಿ ಮಿತಿಗಳನ್ನು ಸ್ಪಷ್ಟಪಡಿಸುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇವುಗಳು ಪ್ರತಿಕ್ಷಣದಲ್ಲಿಯೂ ಪ್ರಕಾಶವಾಗುತ್ತಿರುವುದರಿಂದ ಶ್ರೇಯಸ್ಸನ್ನು ಸಾಧಿಸುವುದಕ್ಕೆ ಯತ್ನಿಸಬೇಕು. ಶ್ರೇಯಸ್ಸಿಗೆ ವಿರೋಧವಾದುದನ್ನು ದೂರೀಕರಿಸಬೇಕಾದುದು ಪಾರಮಾರ್ಥಿಕವಾಗಿಯೂ ವ್ಯಾವಹಾರಿಕವಾಗಿಯೂ ಸಾಧುವಾಗಿರುತ್ತದೆ.

ವ್ಯಕ್ತಿಗಳ ಶರೀರದೊಳಗಿನ ವ್ಯಾಪಾರಗಳನ್ನೂ ಹೊರಗಡೆಯ ಪ್ರಕೃತಿಯ ವ್ಯಾಪಾರಗಳನ್ನೂ ಸಾವಧಾನವಾಗಿ ಪರಿಶೀಲಿಸಿದರೆ ಋತದ ಗತಿಯು ಸ್ಪಷ್ಟವಾಗುವುದು. ವ್ಯಕ್ತಿಯ ಹುಟ್ಟು, ಗುಣ, ಕರ್ಮ, ಶಕ್ತಿವ್ಯಂಜಕವಾದ ಋಣ ಮತ್ತು ಆಯಾ ಪರಿಸ್ಥಿತಿ, ಕಾಲಗಳಿಗನುಗುಣವಾಗಿ ಶರೀರವೂ ಪ್ರಕೃತಿ ವಸ್ತುಗಳೂ ಹೊಂದಿಕೊಳ್ಳುವಂತೆ ವರ್ತನೆಯನ್ನು ಅಳವಡಿಸಿಕೊಳ್ಳಬೇಕು. ಭಿನ್ನಭಿನ್ನವಾದ ಗುಣಶಕ್ತಿಗಳನ್ನು ಹೊಂದಿದ ಜೀವಿಗಳ ಶರೀರಗಳು ಪರಸ್ಪರ ವ್ಯತ್ಯಾಸವಾಗಿರುವುದರಿಂದ ಎಲ್ಲ ಪ್ರಕೃತಿ ವಸ್ತುಗಳೂ ಪ್ರಕೃತಿ ಪರಿಸ್ಥಿತಿಯೂ ಎಲ್ಲಾ ಶರೀರಗಳಿಗೂ ಏಕ ಪ್ರಕಾರವಾಗಿ ಹೊಂದಿಕೊಳ್ಳುವುದಿಲ್ಲ. ಈ ಸೂಕ್ಷ್ಮವನ್ನು ಅರಿಯುವುದೇ ಋತದ-(ಸತ್ಯದ)-ಗತಿಯ ಗುಟ್ಟು. ದೇಹಿಗಳ ಶರೀರದಲ್ಲಿ ಮತ್ತು ಹೊರಗಿನ ಆವರಣಗಳಲ್ಲಿ ಓವರ್ - ಸಮತೆಯನ್ನು ಕುದುರಿಸುವ ಋತಕ್ಕೆ ಸಾಧನವಾದುದು ಅಮೃತ. ಅಮೃತಪ್ರಾಪ್ತಿ ಅಥವಾ ಅಮೃತಾನುಭವವೇ ಶಾಂತಿ, ಸಮತಾ, ಸುಖ, ಆನಂದ ಮೂಲವಾದ - ರಾಜ್ಯಭಾರದ ಫಲವಾಗಿರುತ್ತದೆ.

## ವಿಪ್ರತಿಕ್ರಿಯೆ

ಪ್ರಜಾಪತಿಯ ಅಥವಾ ಪ್ರಜೆಯ - ಸಂಘಾತಾತ್ಮನ - ದೇಹಿಯ-ಸಂಕಲ್ಪವು ಅಪ್ರತಿಹತವಾದುದು. ಆದರೆ ಸಂಕಲ್ಪವೇ ಮಾನವತೆಗೂ ಋತಕ್ಕೂ ವಿರೋಧವಾಗಿದ್ದ ಸಂದರ್ಭದಲ್ಲಿ ಸಂಕಲ್ಪಕ್ಕೆ ತಕ್ಕಂತೆ ವಿರುದ್ಧ ಫಲವು ನೆರವೇರುವ ಸಮಕಾಲದಲ್ಲಿಯೇ ಅದರ ಉಪಶಮನಕ್ಕಾಗಿ ಪ್ರತಿಕ್ರಿಯೆಯೂ ಸಹ ಪ್ರಜಾಪತಿಪ್ರಜೆಯ ಸಂಕಲ್ಪ ಫಲದ ಅಂಗವಾಗಿಯೇ ಒದಗುವುದು. ಕಾಮಕ್ರೋಧಾದಿಗಳಿಂದ ಋತ - (Divine

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

constitution of the Universe) – ವಿರೋಧವಾಗಿ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದರೂ ಆ ಸಿದ್ಧಿಯ ನೆರಳಿನಲ್ಲಿಯೇ ವಿಪ್ರತಿ ಕ್ರಿಯೆಯೂ ಉದ್ಭವಿಸಿ ಪ್ರಕೃತಿಯಲ್ಲಿ ಸಮತೆಯು ಕೆಡದಂತೆಯೂ, ಹಾನಿಯಾಗದಂತೆಯೂ ವಿರೋಧವಾಗಿ ನಡೆದ ವ್ಯಕ್ತಿಯು ಉತ್ತರೋತ್ತರ ಶ್ರೇಯಸ್ಸನ್ನು ಪಡೆಯುವುದಕ್ಕೆ ಅನುಕೂಲಿಸುವಂತೆಯೂ ವ್ಯವಸ್ಥೆ ಮಾಡುವುದಕ್ಕೆ ಪ್ರಕೃತಿಯು ಹೊಣೆಗಾರಳಾಗಿರುತ್ತಾಳೆ. ಸಂಕಲ್ಪ ವಿಕಲ್ಪಗಳ ಮತ್ತು ಕ್ರಿಯಾ-ವಿಪ್ರತಿಕ್ರಿಯೆಗಳ ಪೂರ್ವಾಪರವನ್ನು ತಿಳಿದು ಕಾರ್ಯ ನಿರ್ವಾಹ ಮಾಡುವುದು ದೊಡ್ಡಗುಣ ಮತ್ತು ವಿವೇಕದ ಫಲ.

ಪ್ರಜಾಪತಿಯ ಪ್ರಜಾರಾಜ್ಯಭಾರದಲ್ಲಿ ವಿವೇಚನೆಯು ಅಖಂಡ ಬ್ರಹ್ಮಾಂಡದಲ್ಲಿ ತುಂಬಿ ಪ್ರಕೃತಿಯಲ್ಲಿ ಕಾಣುವ ಉದಾಹರಣೆ-ನಿದರ್ಶನಗಳ ಪೂರ್ವಕ ಸದಾ ಪ್ರಜಾದೇಹಿಗಳ ಸಾಕ್ಷಾತ್ಕಾರಕ್ಕೆ ನಿಲುಕುವುದಾಗಿದೆ. ವಿವೇಚನಾತ್ಮಕ ಬುದ್ಧಿಗೆ ಗೋಚರವಾಗಿ ಪ್ರವೃತ್ತಿ ನಿವೃತ್ತಿ ಕಾರ್ಯಗಳು ನೆರವೇರುವುದಾಗಿರುತ್ತವೆ. ವಿವೇಚನೆ ಎಂಬ ಒರೆಗಲ್ಲಿನ ಪರೀಕ್ಷೆಗೆ ಗುರಿಪಡಿಸಿ ಕರ್ತವ್ಯಗಳನ್ನು ಕ್ರಮಪಡಿಸಿ ಕೊಳ್ಳುವುದೂ ಪ್ರಕೃತಿಲೀಲೆಗೆ (ಪ್ರಕೃತಿಃ ತ್ವಾಂ ನಿಯೋಕ್ಷ್ಯತಿ ; ಪ್ರಕೃತಿಂ ಯಾಂತಿ ಭೂತಾನಿ- ಎಂಬಂತೆ) ಒಳಗಾಗಿರುವ ಪ್ರಜೆಯ ಸ್ವಭಾವ.[1] ಸ್ವತಃ ಊಹಾಪೋಹಗಳಿಂದ ನ್ಯೂನಾತಿರಿಕ್ತಗಳಿಗೆ ಅವಕಾಶ ವಾಗುವಂತೆ ಬುದ್ಧಿಪ್ರಯೋಗ ಮಾಡುವುದರಿಂದ[2] ಪ್ರಜಾ ದೇಹಿಯ ಜೀವನ ವಿಶಿಷ್ಟ ವ್ಯಾಪಾರವು ಹೊರಪಡುತ್ತದೆ. ಆದುದರಿಂದ

---

1 ಸ್ವಭಾವ ಎಂದರೆ ಪ್ರಜೆಯ (ಜೀವನ ಅಥವಾ ದೇಹಿಯ) ಸ್ವತಂತ್ರವಾದ ವಸ್ತುಸ್ಥಿತಿ ಮತ್ತು ವರ್ತನೆ. ಸರ್ವಸಾಮಾನ್ಯವಾಗಿ ಪ್ರಕೃತಿಲೀಲೆ-ಪ್ರೇರಣೆಗೆ ಮಾತ್ರ ಒಳಪಟ್ಟ ವೈಯಕ್ತಿಕವಾದ ಕಾಮಾದಿ ಗಳನ್ನು ಸ್ವತಂತ್ರವಾಗಿ, ಬೆರಸದೆ ನಡೆದುಕೊಂಡುಹೋಗುವ ಸ್ಥಿತಿ.

2 ಇದು ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ಶಕ್ತಿ – ಕರ್ಮಗಳಲ್ಲಿ ತುಂಬಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ವ್ಯಾಪಾರಕ್ಕೆ ಪ್ರಜೆಯೇ ಹೊಣೆಗಾರಿಕೆಯನ್ನು ಹೊತ್ತುಕೊಳ್ಳ ಬೇಕಾಗಿರುತ್ತದೆ.

ಮೌಢ್ಯ, ಕುರುಡು ನಂಬಿಕೆ, ಕುರುಡು ಭಯಭಕ್ತಿಗಳಿಗೆ ಮನ ಸೋತು ಶ್ರೇಷ್ಠವಾದ ಮತ್ತು ನಿಕೃಷ್ಟವಾದರೂ ರಮ್ಯವಾದ ವೇಷಗಳನ್ನು ಧರಿಸಿ ಸಂಚರಿಸುವವರ ಕುಹಕಗಳ ಜಾಲದಲ್ಲಿ ಸಿಕ್ಕಿಕೊಂಡರೆ ವಿಪ್ರತಿ ಫಲವುಂಟಾಗುವುದು. ಕುಹಕಿಗಳ ಕುಹಕಕ್ಕೆ ಪ್ರಾಯಶ್ಚಿತ್ತ-ಶಿಕ್ಷಾರೂಪ ವಾದ ಫಲವೂ ಇದ್ದೇ ಇರುವುದು ವೇಷಧಾರಿಯಾದ ಭಿಕ್ಷುಕನಿಗೆ ಮರುಗಿದರೆ ಅದು ದೋಷವಾಗಿ ಪರಿಣಮಿಸುವುದು. ಅದರ ಪ್ರತಿಕ್ರಿಯಾ ಫಲವನ್ನು ಮರುಗಿದವನೂ ಸಹ ಅನುಭವಿಸಬೇಕಾಗುವುದು. ಇಂತಹ ಅಪಾಯದಿಂದ ತಪ್ಪಿಸಿಕೊಳ್ಳಲು ದಾನ, ದಯಾ, ದಾಕ್ಷಿಣ್ಯ ಗುಣಾದಿ ಗಳನ್ನು ಕಾರ್ಯಗತ ಮಾಡುವಾಗ ಸದಾ ವಿವೇಕವೆಂಬ ಉಪಾಯ ವನ್ನು ಅವಲಂಬಿಸಬೇಕು. ರಾಜನ ಮೇಲಿನ ಮೋಹಕ್ಕೆ ಒಳಗಾದ ಶುಕ್ರಾಚಾರ್ಯನು ವಾಮನನಿಗೆ ದಾನ ಕೊಡುವುದಕ್ಕೆ ಅಡ್ಡಿಯನ್ನು ಒಡ್ಡಿದಂತೆ ಮಾಡಬಾರದು. ದಾನ ಮಾಡಿದರೂ, ದಾನಪಾತ್ರನ ಮಹಿಮೆಯನ್ನು ತಿಳಿಯದೆ ಇದ್ದ ಹರಿಶ್ಚಂದ್ರನಂತೆ ಹೆಣ್ಣು ಪಡಬಾರದು. ದಾನಾದಿಗುಣಗಳುಳ್ಳವನಾದರೂ ಮೌಢ್ಯ ಮೊದಲಾದ ನ್ಯೂನಾತಿರಿಕ್ತ ಗಳಿಂದ ಕೂಡಿದ ಸಂಕಲ್ಪ ಅಧ್ಯವಸಾಯಗಳಿಗೆ ತಕ್ಕಂತೆ ದುರ್ಗತಿಯನ್ನೇ ಪಡೆಯಬೇಕಾಗುವುದು. ಆಪಾತತಃ ದುಷ್ಟ ವರ್ತನೆಯುಳ್ಳರುವಂತೆ ಕಾಣುತ್ತಾ ಇದ್ದರೂ ವೈಭವವನ್ನು ಹೊಂದುತ್ತಿರುವಂತೆ ಕಾಣುವುದಕ್ಕೂ ಸದ್ವರ್ತನೆಯುಳ್ಳಿರುವಂತೆ ಕಾಣುತ್ತಾ ಇದ್ದರೂ ದುಃಸ್ಥಿತಿಯನ್ನು ಹೊಂದು ತ್ತಿರುವಂತೆ ಕಾಣುವುದಕ್ಕೂ ಸಂಕಲ್ಪ ವ್ಯವಸಾಯಗಳ ಮತ್ತು ದೃಷ್ಟಿಕೋಣಗಳ ಗುಣ ದೋಷಗಳೇ ಕಾರಣವು. ಹೀಗೆಯೇ, ವೈಭವವೇ ಅಹಿತವಾಗಿಯೂ, ದುಃಸ್ಥಿತಿಯೇ ಹಿತವಾಗಿಯೂ ಇರಬಹುದಾದ ಸಂದರ್ಭಗಳನ್ನು ಪರಿಶೀಲಿಸಿ ಸದಾಚಾರದ ಮಿತಿಯನ್ನು ಗೊತ್ತುಮಾಡಿಕೊಳ್ಳುವುದರಿಂದ ಸುಖಪ್ರದವಾದ ಮಧ್ಯಮಮಾರ್ಗವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾನಾಗಿಯೇ ವ್ಯಕ್ತವಾಗುವುದು.*

## ಆತ್ಮಜ್ಞಾನವು ಸರ್ವಸುಲಭ

'ಆತ್ಮವು ಅವಿನಾಶಿ' ಎಂಬ ಸಿದ್ಧಾಂತವು ಪ್ರಪಂಚದ ಪ್ರಜೆಗಳ (ಜೀವಗಳ) ವರ್ತನೆಗಳಿಂದಲೂ ಕಾರ್ಯ ಕಾರಣ ವಿವೇಚನೆಯಿಂದಲೂ ತತ್ವಶಾಸ್ತ್ರಗಳ ಗೊತ್ತುವಳಿಯಿಂದಲೂ ಎಲ್ಲಾ ಕಡೆಯಲ್ಲಿಯೂ ಹರಡಿ ಎಲ್ಲರ ತಿಳಿವಳಿಕೆಗೂ ಬರುವಂತೆ ಸದಾ ಸಿದ್ಧವಾಗಿರುತ್ತದೆ. ಈ ಸಿದ್ಧಾಂತವೇ ಜೀವಿಕೆಯ ಸರ್ವ ಸಮಸ್ಯೆಗಳನ್ನೂ ಪರಿಹರಿಸುತ್ತದೆ.

---

* 1. ನೊಣವನ್ನು ತಿಂದ ಹಲ್ಲಿಯನ್ನು ಹಾವು ತಿನ್ನುವುದು. ಹಾವನ್ನು ತಿನ್ನಲು ಹದ್ದು ಹೊಂಚುಹಾಕುವುದು. ಹದ್ದನ್ನು ಬಾಣದ ಏಟಿಗೆ ಗುರಿಪಡಿಸಲು ಬೇಡನು ಸಿದ್ಧನಾಗುವನು. ವ್ಯಾಧನು ಕಾರಣಾಂತರದಿಂದ ಕಾಲು ಜಾರಿ ಮೃತನಾಗುವನು. ಹೀಗೆ ನೊಣ, ಹಲ್ಲಿ, ಹಾವು, ಹದ್ದು, (ಬೇಡ-ವ್ಯಾಧ) ಎಲ್ಲರೂ ಮೃತ್ಯುವಿಗೆ ತುತ್ತಾಗುವುದರ ಕರ್ಮರಹಸ್ಯವನ್ನು ತಿಳಿಯಬೇಕು.

2. ಹಾವನ್ನು ಹದ್ದು ಕಚ್ಚಿಕೊಂಡು ಹಾರುತ್ತಿರುವಾಗ ಹಾವಿನ ವಿಷವು, ಗಾಳಿಯಿಂದ ತೆಗೆಯಲ್ಪಟ್ಟ ಮುಚ್ಚಳ-ಮುಸುಕುಳ್ಳ ಮಡಕೆಯ ಮೊಸರಿನಲ್ಲಿ ಬಿದ್ದುದು ಯಾರಿಗೂ ಗೋಚರವಾಗದೇ ಇತ್ತು. ಯಾತ್ರಾರ್ಥಿಯಾದ ಪ್ರವಾಸಿಗೆ ಅತಿಥಿ ಸತ್ಕಾರ ಮಾಡಲು ಆ ದಧಿಯನ್ನು ಕೊಂಡುಕೊಂಡು ಬಡಿಸಿದುದರಿಂದ ಪ್ರವಾಸಿಯ ಮರಣವಾಯಿತು. ಈ ತಪ್ಪು ಇಂತಹವರಿಗೇ ಸೇರಿದ್ದು ಎಂದು ಯಾರು ಹೇಳುತ್ತಾರೋ ಅವರಿಗೆ ಆ ದೋಷವೂ ತತ್ಫಲವೂ ಉಂಟಾಗುವುದೆಂಬ ಕರ್ಮ ರಹಸ್ಯವನ್ನು ಚಮತ್ಕಾರವಾಗಿ ಬೋಧಿಸುವ ಇತಿಹಾಸವನ್ನು ಮರೆಯಬಾರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೀಗೆ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿದ್ದರೂ ಆ ತತ್ವದ ಸಾಕ್ಷಾತ್ಕಾರವು ಅನೇಕ ವಿಧವಾದ ಅಧ್ಯವಸಾಯ ಅಥವಾ ತಪಸ್ಸಿನ ಫಲವೆಂದು ತಿಳಿಯಬೇಕಾಗಿದೆ. ಹಿತವಾದ ಸನ್ನಿವೇಶಗಳಲ್ಲಿ ಈ ತಪಸ್ಸು ಅವಿಚ್ಛಿನ್ನವಾಗಿ ನಡೆಯುವುದು; ಪಾಂಡಿತ್ಯವು ಸನ್ನಿವೇಶಗಳನ್ನು ಪ್ರೋತ್ಸಾಹಿಸಿ ಉದ್ದೀಪನಗೊಳಿಸುವುದು. ರಸಾಭಿಜ್ಞತಾ ವಿಮರ್ಶೆಯಿಂದ ಸಂಸ್ಕೃತಿಯನ್ನು ಹೊಂದಿದ ಮತ್ತು ಅನುಭವಗಳಿಂದ ಲಭ್ಯವಾದ ಜ್ಞಾನವೇ ಪಾಂಡಿತ್ಯವೆನಿಸುವುದು. ಆದುದರಿಂದ ಶಾಂತಿ ಫಲಪ್ರದವಾದ ತಪಸ್ಸಿಗೆ ಯೋಗ್ಯರಾದವರು ಮತ್ತು ಭಾಗಿಗಳಾದವರು ಅನೇಕ ಕೋಟಿ ಮಾನವರಲ್ಲಿ ಅಲ್ಪ ಸಂಖ್ಯಾಕರಾಗಿರುತ್ತಾರೆ. ವಿದ್ಯಾ ತಪಃ ಫಲಾನುಭವವುಳ್ಳವರು ಕೇವಲ ವಿರಳರು ಎಂದು ಸ್ವತಃಸಿದ್ಧವಾಗಿರುತ್ತದೆ. ಶಾಂತಿಗಾಗಿ ತಪಸ್ಸುಮಾಡುವುದಕ್ಕೆ ಆವರಣಗಳೂ ಮತ್ತು ಪಾತ್ರತೆಯೂ ವಿರಳವಾದುದರಿಂದ ತತ್ವಸಾರವು ಕೇವಲ ಸಮೀಪದಲ್ಲಿದ್ದರೂ (ಉಪನಿಷತ್), ಗಗನದಲ್ಲಿರುವಂತೆಯೂ ಭೂಮಟ್ಟಕ್ಕೆ ಬಾರದೆ ನಿಲುಕದಂತೆಯೂ ಜನಗಳು ಭಾವಿಸುತ್ತಾರೆ. ಅಂದ ಮಾತ್ರಕ್ಕೇ ತತ್ವವು ಜನಗಳ ಪರಿಮಿತಿಗೆ ಬಂದುದಲ್ಲವೆಂದಾಗಲೀ, ಜನಗಳು ಕೀಳುಮಟ್ಟದವರೆಂದಾಗಲೀ ಭಾವಿಸುವುದು ಮಾನವತೆಯಲ್ಲ. ಸಿದ್ಧಾಂತವೇ ಸರಿಯಲ್ಲವೆಂದು ವಿಜೃಂಭಿಸಿ ಹೇಳಿಕೊಳ್ಳುವವರ ಭಾವನೆಯೂ ಸಹ ಅವರ ಅನುಭವಕ್ಕೂ ವರ್ತನೆಗೂ ಮಾತಿಗೂ ಮಾನವತೆಗೂ ತರ್ಕಕ್ಕೂ ವಿರುದ್ಧವಾಗಿರುತ್ತದೆ. ಆತ್ಮಜ್ಞಾನ–ಆತ್ಮಲಾಭವು ಸ್ಪಷ್ಟರೂಪಾವಸ್ಥಾನವಾಗಿ "ಆತ್ಮಲಾಭಾನ್ನ ಪರಂ ವಿದ್ಯತೇ" * ಎಂಬಂತೆ ಶರೀರಧಾರಿಗಳೆಲ್ಲರೂ ಅವಶ್ಯಕವಾಗಿ ಪಡೆಯಬೇಕಾದ ಪುರುಷಾರ್ಥವಾಗಿರುವುದರಿಂದ ಸರ್ವರಿಗೂ ಸರ್ವಸುಲಭವಾಗಿ ಆತ್ಮಾನಂದಾನುಭವವಾಗುತ್ತಿರುವುದು. ಧರ್ಮ, ಪ್ರಜ್ಞಾ, ಧನಾದಿಗಳಿಂದಲೂ ತ್ಯಾಗದಿಂದಲೂ 'ಅಮೃತ' ಪ್ರಾಪ್ತಿಯಾಗುವುದು. ಆತ್ಮಜ್ಞಾನದಿಂದ ಅಪರೋಕ್ಷಾನುಭೂತಿಯನ್ನು ಹೊಂದುವುದರಿಂದ ಜನನ, ಜರಾ, ಮರಣ ದುಃಖಾದಿಗಳಿಂದ

---

* ಆಪಸ್ತಂಬಧರ್ಮಸೂತ್ರಮಂಜರೀ ಪುಟ 4 ಮತ್ತು 44

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿಡುಗಡೆಯು ಶಾಶ್ವತಾನಂದವೆಂಬ ಸಮಾಧಿಸ್ಥಿತಿಯಾಗುವುದು.

## ಆತ್ಮಲಾಭ- ಪ್ರಜಾರಾಜ್ಯ ಫಲ

ವಿಶ್ವದಲ್ಲಿ ಸುಖದುಃಖಾನುಭವವು ಬಂಧನಕ್ಕೆ ಸೇರಿದುದು. ಈ ಬಂಧನದಿಂದ ಬಿಡುಗಡೆಯಾಗುವುದೇ ಮೋಕ್ಷವು. ಸ್ವಸ್ವರೂಪಜ್ಞಾನಾನಂದವೆನಿಸಿದ ಮೋಕ್ಷವು ಬಂಧನದಲ್ಲಿರುವ ಚರಾಚರಾತ್ಮಕವಾದ ಜಗತ್ತಿಗೆಲ್ಲಾ ಅನ್ವಯಿಸುವುದು. ಜೀವನು ವಿಶ್ವವನ್ನು ವಿಶ್ವವನ್ನಾಗಿ ಅನುಭವಿಸುವುದು ಕೆಳಗಿನ ಮಟ್ಟದ್ದು. ಈ ಅನುಭವವು ಪೂರ್ತಿಯಾಗುವವರೆಗೂ ಆ ಅಂತಸ್ತಿನಲ್ಲಿಯೇ ಇರಬೇಕಾಗುವುದು. ಉನ್ನತ ಮಟ್ಟದ ಜ್ಞಾನ ಸೋಪಾನವು ಸರ್ವರಿಗೂ ಸರ್ವತ್ರ ಸರ್ವದಾ ದೊರೆಯುವುದು. ಪ್ರಾಪಂಚಿಕಾನುಭವದ ಆವರಣವು ಇಂದ್ರಿಯಗಳ ಮೇಲೆ ಕವಿದುಕೊಳ್ಳುವುದರಿಂದ ಜ್ಞಾನಸೋಪಾನವನ್ನೇರಲು ಅಡಚಣೆಯುಂಟಾಗುವುದು. ಕ್ರಮೇಣ ಈ ಅಡಚಣೆಗಳು ದೂರ ಸರಿಯುವುವು.

ಅವಿನಾಶಿಯೂ ಅಖಂಡವೂ ನಿತ್ಯವೂ ನಿರ್ಗುಣವೂ ನಿರಾಕಾರವೂ ಆದ ಆತ್ಮತತ್ವವು ವಿಶ್ವವನ್ನು ಏಕಾಕಾರವಾಗಿ ಆವರಿಸಿರುತ್ತದೆ — ಎಂಬುದೇ ಅತ್ಯುನ್ನತ ಮಟ್ಟದ ಸಮಾಲೋಚನೆಯ ಫಲವಾಗಿರುತ್ತದೆ. ಇದನ್ನು ಆ ಮಟ್ಟಕ್ಕೆ ಏರುವವರೂ, ಆ ಮಟ್ಟವನ್ನು ಅರಿಯದವರೂ ಸಹ ಅವರವರ ಮಟ್ಟದಿಂದಲೇ ನೋಡಿ ಸಾಮಾನ್ಯವಾಗಿ ತಿಳಿಯಬಹುದಾಗಿದೆ. ಬ್ರಹ್ಮವಿವರ್ತವಾದ ಪ್ರಕೃತಿಯ ಗುಣಲೀಲೆಯಿಂದ ವಿವಿಧವಾದ ಉಪಾಧಿಗಳು-(ಶರೀರಗಳು)-ಉಂಟಾಗಿ ಪರಮಾತ್ಮನು ಒಳಗೂ ಹೊರಗೂ ಇರುವಂತೆ ಕಾಣುವುದು. ಗಾಳಿಯು ಆಕಾಶದಲ್ಲಿಯೂ ಘಟದಲ್ಲಿಯೂ ಇರುವಂತೆ ಒಳಗು ಹೊರಗುಗಳೆಂಬ ಭಾವನೆಗೆ ಕಾರಣವಾದ ಆವರಣಗಳಿದ್ದರೂ ಅಖಂಡತತ್ವವನ್ನು ಪ್ರಜೆಗಳು ಪ್ರಜಾಪತಿತ್ವದ ಆಶ್ರಯದಲ್ಲಿ ಸಂಸ್ಕೃತಿ ಮತ್ತು ಆಚಾರಗಳ ಮಾರ್ಗದಲ್ಲಿ ತಪಸ್ಸುಮಾಡಿ ಸಾಕ್ಷಾತ್ಕರಿಸಬೇಕಾಗಿರುತ್ತದೆ. ಪರಮಧ್ಯೇಯವಾದ ಆತ್ಮಲಾಭವು ಪ್ರಜಾಕೋಟಿಗೆಲ್ಲಾ ಉಂಟಾಗಬೇಕೆಂಬುದೇ ಪ್ರಜಾಪತಿಯ ಪ್ರಜಾರಾಜ್ಯ ಫಲವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಆತ್ಮಲಾಭ ಸೋಪಾನ

ಕಲನ–ನಾದ-ಮಯವಾದ ಪ್ರಕೃತಿಯಲ್ಲಿ ನಾದವೆಂಬ ಪ್ರಕೃತಿಯ ಕಲನಗಳು (ವ್ಯಾಪಾರಗಳು) ಎಡೆಬಿಡದೆ ಸಾತ್ವಿಕವಾದ ಮತ್ತು ಹಿತವಾದ ಆವರಣವನ್ನು ಕಲ್ಪಿಸಿಕೊಂಡಿರುತ್ತವೆ. ಪ್ರಜಾಪತಿ–ಪರಮಾತ್ಮನ ಪ್ರಜಾರಾಜ್ಯದಲ್ಲಿ ಏರ್ಪಟ್ಟಿರುವ ಅನುಸಂಧಾನ ಕ್ರಮಗಳನ್ನು ಆರಿಸಿಕೊಂಡು ಪರಿಪಕ್ವಸ್ಥಿತಿಯನ್ನು ಹೊಂದುವುದಕ್ಕೆ ತಕ್ಕಂತೆ ಆವರಣಗಳು ಸಹಕರಿಸುವುದರಿಂದ ಮೋಕ್ಷವು ಸ್ವತಸ್ಸಿದ್ಧವಾಗಿ ಲಾಭವಾಗುವುದು.

ಅನುಸಂಧಾನಕ್ರಮಗಳು ಅನಂತವಾಗಿರುತ್ತವೆ. ಲೋಕದಲ್ಲಿ ಸಾಮಾನ್ಯವಾಗಿ ಮೋಕ್ಷವನ್ನು ವರ್ಣಿಸುವುದಕ್ಕೂ ಪಡೆಯುವುದಕ್ಕೂ ಯತ್ನವು ನಿರಂತರವಾಗಿ ನಡೆಯುತ್ತಿರುತ್ತದೆ. ಒಬ್ಬೊಬ್ಬ ಪ್ರಜಾದೇಹಿಯು ಒಂದೊಂದು ವಿಧವಾದ ಅನುಸಂಧಾನ ಕ್ರಮದಲ್ಲಿ ವೈಯಕ್ತಿಕವಾಗಿ ಮುಂದುವರಿದು ಸಿದ್ಧಿಯನ್ನು ಹೊಂದುವರು. ಈ ಕ್ರಮಗಳನ್ನು ಮೇಲಿನ ಹಂತದಲ್ಲಿ ನಿಂತು ನೋಡಿದಾಗ, ಸುಲಭವಾಗಿ ಕಂಡರೂ, ಸುಲಭವಾಗಿ ಕಾಣುವಂತೆ ಅವುಗಳನ್ನು ವರ್ಣಿಸಿದರೂ ಮೇಲಿರುವ, ಕೊನೆಯ ಹಂತವು ಎಣಿಸಲಾಗದಷ್ಟು ಸಂಖ್ಯೆಯ ಸೋಪಾನಗಳ ಮೇಲೆ ಇದ್ದು ಅನೇಕ ತಪಸ್ಸಿನ ರಾಶಿಯ ಫಲವಾಗಿರುವುದೆಂಬುದನ್ನು ಮರೆಯಬಾರದು. ಈ ಕ್ರಮಗಳ ವೈವಿಧ್ಯಕ್ಕೂ ಅಧ್ಯವಸಾಯಕ್ಕೂ ಅಥವಾ ತಪಸ್ಸಿಗೂ ಋಣವು ಮೂಲವಾಗಿರುತ್ತದೆ.

ಪುರುಷಾರ್ಥ ದೃಷ್ಟಿಯಿಂದ ಚರಾಚರ ವಸ್ತು-ದೃಷ್ಟಾದೃಷ್ಟವಸ್ತು-ಗಳೆಲ್ಲವೂ ಧರ್ಮಮಯ, ಅರ್ಥಮಯ, ಕಾಮಮಯ, ಮೋಕ್ಷಮಯಗಳಾಗಿರುವುವು. ಧರ್ಮಾರ್ಥಕಾಮಗಳು ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಸಂಪದಭ್ಯುದಯಕಾರಿಗಳಾಗಿರುವುದರಿಂದ ಋಣಪ್ರಧಾನವಾಗಿರುತ್ತವೆ. ಧರ್ಮಾರ್ಥ ಕಾಮ-ಮೋಕ್ಷಗಳಲ್ಲಿ ಯಾವುದೂ ಸ್ವತಂತ್ರವಾಗಿಲ್ಲ. ಅವಿಚ್ಛಿನ್ನವಾಗಿ ನಡೆಯುವ ಅಮೃತ ಮಂಥನಾದಿ ಪಾರಮಾರ್ಥಿಕ, ವ್ಯಾವಹಾರಿಕ ಮತ್ತು ಉಭಯಾತ್ಮಕ ಕಾರ್ಯಗಳಲ್ಲಿ ಪರಸ್ಪರ ಹೆಣೆದುಕೊಂಡು ಸಾಧ್ಯ, ಸಾಧನ ಸಾಧಿತ ಸಂಬಂಧವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಂದಿವೆ. ಪರಮಾರ್ಥದಲ್ಲಿ ವ್ಯವಹಾರವನ್ನೂ ವ್ಯವಹಾರದಲ್ಲಿ ಪರಮಾರ್ಥವನ್ನೂ ಪರಮಾರ್ಥ ವ್ಯವಹಾರಗಳೆರಡರಲ್ಲಿ 'ಸಮ' ವನ್ನೂ ಕಾಣುವುದರಿಂದ ಹೆಜ್ಜೆಹಜ್ಜೆಗೂ ಆನಂದವು ಆಯಾ ಪರಿಸ್ಥಿತಿಯಲ್ಲಿ ಸ್ವಾನುಭವಕ್ಕೆ ಬರುತ್ತಿರುವುದು. ಬ್ರಹ್ಮಮಯ, ರಸಮಯ, ಪೂರ್ಣಮಯ, ಆನಂದಮಯ ಪ್ರಪಂಚದಲ್ಲಿ ಆನಂದೇತರಾನುಭವವೆಲ್ಲಿಯದು? ಪವಿತ್ರವಾದ ಋಣ ಪ್ರಯೋಗದಿಂದಲೂ, ಸಮಪ್ರಯೋಗದಿಂದಲೂ ಪ್ರಪಂಚವು ಆನಂದಮಯವಾಗಿದ್ದು ಋಣಮುಕ್ತಿ ಎಂಬ ನಿತ್ಯಾನಂದ ಲಾಭವಾಗುವುದು. ಪ್ರಜಾಪತಿಯ ರಾಜನೀತಿ-ರಾಜ್ಯನೀತಿ-ರಾಜ್ಯಭಾರಗಳು ಆನಂದಮಯವಾಗಿ, ಪ್ರಜಾನಂದದಾಯಕವಾಗಿ ಪ್ರಜಾನಂದದಿಂದ ಅನುಭೂತವಾಗಿರುವುದನ್ನು ಪ್ರತಿಪ್ರಜೆಯೂ * ಇಂದ್ರಿಯಗಳಿಂದ-ಮನಸ್ಸಿನಿಂದ ತಿಳಿದು ಆತ್ಮಾನುಭವ ಸಾಕ್ಷಾತ್ಕಾರವನ್ನು ಪಡೆಯಬಹುದಾಗಿದೆ.

---

* ಪ್ರತಿವ್ಯಕ್ತಿಯೂ ಪ್ರಜಾಗುಣ ಕರ್ಮಶಕ್ತಿಗಳುಳ್ಳ ರಾಜನೂ ರಾಜಗುಣ ಕರ್ಮ ಶಕ್ತಿಗಳುಳ್ಳ ಪ್ರಜೆಯೂ ಆಗಿರುವುದರ ರಹಸ್ಯವೇ ರಾಜ್ಯಭಾರದ ತಳಹದಿಯಾಗಿದೆ. ರಾಜತೇ ಇತಿ ರಾಜಾ (ಪ್ರಕಾಶಿಸುವವನು ರಾಜನು) ಎಂದು ಭಾಷಾಶಾಸ್ತ್ರವಿವರಣೆಯು ತಿಳಿಸುವುದು. ಪ್ರಕಾಶಗುಣವು ಉದಯಿಸಿದ ಅಥವಾ ಬ್ರಹ್ಮ ವಿವರ್ತವಾದ ಸಮಸ್ತವಸ್ತುಗಳಿಗೂ ಅನ್ವಯಿಸುವುದು. ದೃಷ್ಟವಾದುದು ಸ್ಥಿತಿಯನ್ನು ಹೊಂದಿ ಕಣ್ಮರೆ-ಲಯ-ವಾಗುವುದು. ಆದುದರಿಂದ ಸೃಷ್ಟಿಯು ಸ್ಥಿತಿಲಯಗಳನ್ನೂ ಸ್ಥಿತಿಯು ಸೃಷ್ಟಿಲಯಗಳನ್ನೂ ಲಯವು ಸೃಷ್ಟಿಸ್ಥಿತಿಗಳನ್ನೂ ಹೊಂದಿಕೊಂಡಿರುವುವು. ಸೃಷ್ಟಿಸ್ಥಿತಿಲಯಗಳು ಪ್ರತಿವಸ್ತು-ವ್ಯಕ್ತಿಗಳ ಮೂಲಕ ಪ್ರಕಾಶವಾಗುವುವು. ಈ ಪ್ರಕಾಶಕ ಗುಣವುಳ್ಳ ಸಮಸ್ತ-ವಸ್ತು-ವ್ಯಕ್ತಿಗಳೂ 'ರಾಜ' ಎನಿಸುವುವು. ರಾಜತ್ವ ಪ್ರಜಾತ್ವಗಳೆರಡೂ ಆತ್ಮಲಾಭದ ಪ್ರತಿಹಂತದಲ್ಲಿಯೂ ವ್ಯಾಪಿಸಿ ಸ್ವಸ್ವರೂಪಾನುಸಂಧಾನಕ್ಕೆ ಆಧಾರವಾಗಿಯೂ ಸಹಕಾರವಾಗಿಯೂ ಇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೩. ಋಣ

## ಋಣ – ಶಬ್ದಾರ್ಥ

ಪ್ರಜಾಪತಿ ಪರಮಾತ್ಮನ ಪ್ರಜಾರಾಜ್ಯಕ್ಕೆ ಒಳಪಟ್ಟ ಬ್ರಹ್ಮಾಂಡದಲ್ಲಿ ನಡೆಯುವ ಸಮಸ್ತ ವಿಧವಾದ ಆಗುಹೋಗುಗಳಿಗೆ ಮೂಲಭೂತವಾದುದು ಋಣ. ಜೀವ–ನ ಜೀವಿತವೆಂಬ ಸಂಗೀತಕ್ಕೆ ಪಲ್ಲವಿಯಂತಿರುವ ಋಣ ಶಬ್ದಕ್ಕೆ ಸಾಮಾನ್ಯವಾಗಿ 'ಸಂಬಂಧ' 'ಸಂಗ'ವೆಂದರ್ಥ. 'ಋ' ಧಾತುವು 'ಗತಿ ಪ್ರಾಪಣಯೋಃ' ಎಂಬಂತೆ ಗತಿ ಮತ್ತು ಪ್ರಾಪ್ತಿ ಎಂಬ ಅರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತದೆ.

ಗತಿ ಎಂದರೆ ಅಭ್ಯುದಯ, ಶ್ರೇಯಸ್ಸು, ಸುಖ, ಶಾಂತಿ ಮತ್ತು ನಿತ್ಯಸುಖ ಇದರ ಪ್ರಾಪ್ತಿಗೆ ವಿರೋಧವಾಗಿ ತಡೆಯನ್ನುಂಟುಮಾಡುವ ಅರ್ಥದಲ್ಲಿ 'ನ' ಎಂಬ ಉಪಪದವು ಸೇರಿ ಋಣ ಶಬ್ದವು ವ್ಯುತ್ಪನ್ನವಾಗಿದೆ. ಐದನೇ ಗಣಕ್ಕೆ ಸೇರಿದ ಕೆಲಸವನ್ನು ಸೂಚಿಸುವ 'ಋ' ಧಾತು ಶಬ್ದವು ಬಾಧಿಸು ಎಂಬ ಕೆಲಸವು ನಡೆಯುವ ಅರ್ಥವನ್ನು ಕೊಡುತ್ತದೆ. ಗತಿಯನ್ನು ಬಾಧಿಸುವುದು ಅಥವಾ ಅಡ್ಡಿಪಡಿಸುವುದು ಎಂಬ ಅರ್ಥದಲ್ಲಿ 'ಋಣ' ಶಬ್ದವು ನಿಷ್ಪನ್ನವಾಗಿದೆಯೆಂದೂ ಹೇಳಬಹುದು. ಪ್ರಬಲವಾದ 'ಸಂಗ' ಅಥವಾ 'ಸಂಬಂಧ'ವೆಂಬ ಬಂಧನವೇ (commitment) ಪ್ರಪಂಚದಲ್ಲಿ ಪ್ರಗತಿಗೆ ಅವಕಾಶವಾಗಿ ಪ್ರಪಂಚದ ಮುನ್ನಡೆಯನ್ನು ಸೂಚಿಸುವುದು. ಇದನ್ನೇ ಋಣಾನುಬಂಧವೆಂದು ಸಾಮಾನ್ಯವಾಗಿ ವ್ಯವಹರಿಸುತ್ತಾರೆ. ಈ ಬಂಧನಶಕ್ತಿ-ಸಂಬಂಧಶಕ್ತಿ-ಯಿಂದ ಪ್ರಾಪಂಚಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೇಯೋಭಿವೃದ್ಧಿಗಳು ಉಂಟಾಗಿ ಕೊನೆಗೆ ಸಂಬಂಧ ವಿಮೋಚನೆಯು ಸ್ವತಃ ಪ್ರಾಪ್ತಿಯಾಗುವುದು ಜ್ಞಾನೇಚ್ಛೆಗಳ ಪ್ರಭಾವಕ್ಕೆ ಒಳಗಾದ ಮನೋವಿಕಾರವು ವಸ್ತುಸಂಬಂಧದಿಂದ ಉಂಟಾಗುವುದರಿಂದ ಋಣವೆನಿಸಿಕೊಳ್ಳುತ್ತದೆ. [ ಕರ್ಮ ಪಂಕ್ತಿ 2-5 ]

ಇಹೈವ ಸಂತಃ ಪ್ರತಿ ತದ್ಯಾತಯಾಮಃ
ಜೀವಾ ಜೀವೇಭ್ಯೋ ನಿಹರಾಮ ಏನತ್ ।
ಅನೃಣಾ ಅಸ್ಮಿನ್ ಅನೃಣಾಃ ಪರಸ್ಮಿನ್
ತೃತೀಯೇ ಲೋಕೇ ಅನೃಣಾಃ ಸ್ಯಾಮ
ಯೇ ದೇವಯಾನಾ ಉತ ಪಿತೃಯಾಣಾಃ
ಸರ್ವಾನ್ ಪಥೋ ಅನೃಣಾ ಆಕ್ಷೀಯೇಮ ॥

ತೈತ್ತಿರೀಯ ಬ್ರಾಹ್ಮಣ, ಕಾಂಡ 3, ಪ್ರಶ್ನ 7, ಅನು. 9, ಕಂ. 8-9.
आ. आश्रम. परिष्करण ಸಂ, 2, ಪುಟ 1126-27

ಯದಾ ಪಿಪೇಷ ಮಾತರಂ ಪಿತರಂ ಪುತ್ರಃ ಪ್ರಮುದಿತೋ ಧಯನ್
ಅಹಿಂಸಿತೌ ಪಿತರೌ ಮಯಾ ತತ್ ತದಗ್ನೇ ಅನೃಣೋ ಭವಾಮಿ

ಮೇಲ್ಕಂಡಂತೆ 3.7.12.4. ಪುಟ 1142.

ಎಂಬದಾಗಿ ಋಣ ಬಂಧನ ಮತ್ತು ಋಣ ವಿಮೋಚನೆ ಕ್ರಮಗಳು ಉದಾಹೃತವಾಗಿವೆ.

## ಋಣ ಸೂತ್ರ

ಋಣವು ಜ್ಞಾನೇಚ್ಛಾಕ್ರಿಯಾಶಕ್ತಿಗಳ ಮಧ್ಯೆ ಅಡಕವಾಗಿರುತ್ತದೆ. ವಸ್ತು ಜ್ಞಾನೇಚ್ಛಾಶಕ್ತಿಗಳೆರಡರ ಪ್ರಯೋಗ ಪ್ರಾಬಲ್ಯದಿಂದ ಋಣವು-ಋಣ ಬಂಧನವು ಅಂಕುರಿಸುವುದು. ಈ ಬಂಧನಶಕ್ತಿಯೇ ಸಂಕಲ್ಪವಾಗಿ ವಿವರ್ತವಾಗುವುದು. ಸಂಕಲ್ಪಸಿದ್ಧಿಗಾಗಿ ವ್ಯವಸಾಯವು ನಡೆಯುವುದೆಂಬ ಕ್ರಿಯಾಶಕ್ತಿಯು ಪ್ರಯೋಗವಾಗಿ ಫಲಾನುಭವವಾಗುವುದು. ಹಸಿವು, ನೀರಡಿಕೆಗಳು ಬಾಧೆಯನ್ನುಂಟುಮಾಡುವುವು. ಆಹಾರ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಾರ್ಥ ಮತ್ತು ನೀರುಗಳು ಗೋಚರವಾದಾಗ ಅವುಗಳ ಮೇಲೆ ಇಚ್ಛೆಯುಂಟಾಗುವುದು. ಅವುಗಳ ಸಂಬಂಧವನ್ನು ಹೊಂದಬೇಕೆಂಬ ಅತ್ಯುತ್ಕಟ-ಇಚ್ಛೆಯೇ ಋಣ-ಬಂಧನವೆನಿಸುವುದು. ಇಚ್ಛೆಯು, ಇಚ್ಛೆಪಟ್ಟವನನ್ನು ಕಟ್ಟಿಹಾಕುವುದು. ಕಟ್ಟಿಹಾಕುವ ಇಚ್ಛೆಯೇ ಋಣವೆನಿಸುವುದು. ಇಷ್ಟವಾದವುಗಳ ಪ್ರಾಪ್ತಿಗಾಗಿ ಸಂಕಲ್ಪವೂ ಸಂಕಲ್ಪಕ್ಕೆ ತಕ್ಕಂತೆ ವ್ಯವಸಾಯವೂ ನಡೆಯುವುವು. ಆಹಾರ ನೀರುಗಳನ್ನು ಪಡೆಯುವುದು ಮತ್ತು ಅವುಗಳಿಂದ ಹಸಿವು ಬಾಯಾರಿಕೆಗಳೆಂಬ ಬಾಧೆಯನ್ನು ಹೋಗಲಾಡಿಸಿಕೊಳ್ಳುವುದೆಂಬ ಫಲಾನುಭವವಾಗಿ ಋಣ ಸಂಬಂಧವು ಪರಿಹಾರವಾಗುವುದು. ಋಣ ಬಂಧನ ಬಾಧೆಯು ನಿವೃತ್ತಿಯಾಗಿ ಋಣಮುಕ್ತಿಯಾಗುವುದು. ಹೀಗೆ ಋಣ ಬಂಧನ ಮತ್ತು ಋಣ ಬಂಧವಿಮೋಚನೆಯು ಜೀವನದಲ್ಲಿ ಅವಿಚ್ಛಿನ್ನವಾಗಿ ನಡೆಯುತ್ತಿರುತ್ತದೆ. ಪರಿಣಾಮಕಾರಿಯಾದ 'ಸಂಗ' ಅಥವಾ 'ಸಂಬಂಧ'ವೆಂಬ ಋಣದ ರಹಸ್ಯವನ್ನು ತಿಳಿದೋ, ತಿಳಿಯದೆಯೋ ಸಾಧಾರಣವಾಗಿ ಹೆಂಗಸರು ಮೊದಲುಗೊಂಡು ಸರ್ವರೂ ಊಟವಾದ ಮೇಲೆ "ಇಂದಿನ ಊಟದ ಸಾಲ ತೀರಿತು" ಎಂದು ಉಸುರುವರು. ಇದರಿಂದ ಭೀಭತ್ಸೆಯಾಗಲೀ, ತೃಪ್ತಿಯಾಗಲೀ ಸಮರ್ಪಣಬುದ್ಧಿಯಾಗಲೀ ವ್ಯಕ್ತವಾಗುವುದು. ಇದು ಸಹಜ ಜೀವನದ ಅತ್ಯುನ್ನತ ಮಟ್ಟವನ್ನು ಸೂಚಿಸುವುದು. ಕೇವಲ ಶಬ್ದೋಚ್ಚಾರಣೆಯಾಗದೆ ಈ ಮನೋಭಾವವು ಸರ್ವಸಾಮಾನ್ಯವಾಗಿ ವಿವೇಕದಿಂದ ರೂಢಮೂಲವಾದರೆ ಹಜ್ಜೆಹಜ್ಜೆಗೂ ಆನಂದವುಂಟಾಗುವುದರಲ್ಲಿ ಸಂದೇಹವಿಲ್ಲ.

ಕನ್ಯಾಕುಮಾರೀ ಗೌರೀಶಂಕರಗಳನ್ನೂ ಪಾರ್ಕ್ ಮತ್ತು ಪನಾಮ ಜಲಸಂಧಿಗಳನ್ನೂ ಉತ್ತರ ದಕ್ಷಿಣ ಧ್ರುವಗಳನ್ನೂ ಭೂಗೋಳ ಖಗೋಳಗಳನ್ನೂ ಪರಸ್ಪರ ಬಂಧಿಸಿ ಹಿಡಿದಿರುವುದು ಋಣಶಕ್ತಿ. ಬ್ರಹ್ಮಾಂಡವನ್ನೆಲ್ಲಾ ಆಳಿದು ಮುಗುಚುತ್ತಿರುವ ಋಣವು ಋತನಿಯಮಕ್ಕೆ ಸೂತ್ರ-(ದಾರ)-ದಂತಿದ್ದು ಸಹಕಾರಿಯಾಗಿರುವುದು.

ಹಣದ ಪ್ರಪಂಚದಲ್ಲಿ ಋಣವು ತಾಂಡವವಾಡುತ್ತಿದೆ. ವಸ್ತುವನ್ನು ತಾತ್ಕಾಲಿಕವಾಗಿ ಕೊಟ್ಟು, ಪುನಃ ಅದನ್ನು ಪಡೆಯುವುದು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ವಸ್ತುವನ್ನು ಹಿಂದಕ್ಕೆ ಕೊಡುವ ಗೊತ್ತುವಳಿಯಿಂದ ತಾತ್ಕಾಲಿಕವಾಗಿ ಅದನ್ನು ಉಪಯೋಗಕ್ಕಾಗಿ ಪಡೆಯುವುದು. ಎಂಬ ಮಿತಿಯಲ್ಲಿ ಆದರ ಅನುಭವವಾಗುತ್ತಿದೆ. ಇದು ಸಹಾಯಕ ಋಣ. ಸಂಸ್ಕೃತಿ ಮತ್ತು ಆಚಾರಗಳ ಪರಿಮಿತಿಯಲ್ಲಿಯೂ ಋಣದ ಬಳಕೆಯು ವಿಶೇಷವಾಗಿರುತ್ತದೆ. ಋಣ-ಸಾಲ-ವೆಂದರೆ ಕೇವಲ ಸಂಬಂಧವೆಂಬ ಬಂಧನವು ಎಂದು ತಿಳಿಸಲು ಅರಳೆಯನ್ನು ಬಿಡಿಸಿದಂತೆ ವಿವರಣೆಯು ನಡೆದಿಲ್ಲ. Debt ಎಂಬ ಶಬ್ದವ್ಯವಹಾರವು ಕೇವಲ ಆರ್ಥಿಕಲೋಕಕ್ಕೆ ಸಂಬಂಧಿಸಿದಂತೆ ಸಂಕುಚಿತವೂ ಅಸ್ಪಷ್ಟವೂ ಆದ ಅಭಿಪ್ರಾಯವನ್ನು ಸೂಚಿಸುವುದರಿಂದ ಜೀವನಕ್ರಮದ ಕೆಳಗಿನ ಹಂತವನ್ನೇ ಪ್ರಕಟಿಸುವುದು. ಆದರೆ (Indebtedness) 'ಋಣಿಯಾಗಿರುವಿಕೆ' ಎಂಬ ಶಬ್ದದ ವ್ಯವಹಾರವು ಸಾಧುವೂ ಗಂಭೀರವೂ ಗೌರವಯುತವೂ ಆದ ಋಣ ಭಾವವನ್ನು ಹೇಳುವುದು. ಖೇದವನ್ನುಂಟುಮಾಡುವುದೆಂಬ ದೃಷ್ಟಿಯಿಂದ ಋಣವನ್ನು ತುಚ್ಛಭಾವನೆಯಿಂದ ನೋಡುವ ಪದ್ಧತಿಯಿದೆ; ಇದು ವಿವೇಕಕ್ಕಿಂತ ತೀರ ಕೆಳಗಿನ ಮಟ್ಟಕ್ಕೆ ಸೇರಿದುದು. ಋಣವು ಸಂಪದಭ್ಯುದಯಕ್ಕೂ ಮೂಲಕಾರಣವೆಂಬುದನ್ನು ಸಂಪದನುಭವ ಕಾಲದಲ್ಲಿ ಮರೆಯುವುದರಿಂದ ಋಣವನ್ನು ರಸಾಭಿಜ್ಞತೆ ವಿಮರ್ಶೆಯಿಂದ ನೋಡಿ ಆನಂದಪಡುವ ಯೋಗವು ದೂರವಾಗುತ್ತದೆ.

## ಋಣ- ಪುಣ್ಯ, ಪಾಪ

ಕ್ರಿಯಾಮಯ ಪ್ರಪಂಚದಲ್ಲಿ ವ್ಯಕ್ತಿಗಳ ಮಿತಿಯಲ್ಲಿ ಋಣಕ್ಕೂ ಸ್ವಧರ್ಮಕ್ಕೂ ಪರಸ್ಪರ ಹೊಂದಿಕೆಯ ಸಂಬಂಧವಿರುವುದು. ಪರಿಮಿತ-ಧರ್ಮವೆಂಬ ಸಮಯಾಚಾರವು ಸಂಘಾತಾತ್ಮನ (=ಜೀವ-ನ-ಪ್ರಜೆಯ) ವ್ಯಾಪಾರವಾಗಿರುತ್ತದೆ. ಸ್ವಧರ್ಮ – ಸ್ವಕರ್ಮ – ಆಚಾರಗಳಿಗೆಲ್ಲಾ ತಾಯಿಬೇರಿನಂತಿರುವುದು ಋಣ. 'ಧರ್ಮಾಣಿ' ಎಂಬ ವೇದೋಕ್ತಿಯಿಂದ ತಿಳಿಯಬರುವ ಗುಣ ವಿಶಿಷ್ಟಕರ್ಮಗಳು 'ಜೀವ'ನನ್ನು ಹಿಡಿದು 'ಜೀವ'ನಿಗೂ 'ಜೀವ'ನ ಜೀವನಕ್ಕೂ ಆಧಾರವಾಗಿರುತ್ತವೆ. ಈ ಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು ಋಣದಿಂದ ಸಾಧ್ಯವಾಗಬೇಕಾಗಿವೆ. ಮತ್ತು ಋಣಮುಕ್ತಿಯಿಂದ ವಿರಾಮವನ್ನು ಹೊಂದಬೇಕಾಗಿವೆ. ಕಾಲ, ದೇಶ, ಪಾತ್ರಗಳ ಮಿತಿಯಲ್ಲಿ ನಿಯಮಗಳಿಗೆ ಒಳಪಟ್ಟ ಈ ಕರ್ಮ-ಕಲನ-ಮಂಥನ-ವ್ಯಾಪಾರಗಳು ಸಾಮಯಾಚಾರಿಕ ಧರ್ಮಗಳೆಂದು ಧರ್ಮಶಾಸ್ತ್ರಗ್ರಂಥಗಳು ವೊಳಗುತ್ತಿವೆ. ಈ ಬಗೆಯ ವ್ಯಾಪಾರಗಳು ಕಾಲೋಚಿತವಾಗಿ, ದೇಶೋಚಿತವಾಗಿ ಋಣವನ್ನು ಹೊಂದುವುದಕ್ಕಾಗಲೀ ಹರಿಸುವುದಕ್ಕಾಗಲೀ ಅವಿಚ್ಛಿನ್ನವಾಗಿ ನಡೆಯುತ್ತವೆ. ಪ್ರಕೃತಿಲೀಲೆಯೆಂಬ ಪರಿಮಿತಿಯಲ್ಲಿ ಸಿಕ್ಕಿ ಋತದ ನಿಯಮಗಳಿಗೆ ಅನುಸಾರವಾಗಿ ನಡೆಸುವ ವ್ಯಾಪಾರವು ಋತಕ್ಕೂ ವ್ಯಕ್ತಿಗೂ ಮತ್ತು ಪ್ರಪಂಚಕ್ಕೂ ಹಿತವಾದ ಫಲಗಳನ್ನು ಕೊಡುವುದು. ಇದನ್ನು ರಾಜನೀತಿ-ವ್ಯವಹಾರ-ದೃಷ್ಟಿಯಿಂದ ಪುಣ್ಯವೆನ್ನುವರು.[1] ಋತನಿಯಮಗಳಿಗೆ ವಿರುದ್ಧವಾದ ವ್ಯಾಪಾರವು ಋತಕ್ಕೂ ವ್ಯಕ್ತಿಗೂ ಪ್ರಪಂಚಕ್ಕೂ ವಿರೋಧವಾದ ಫಲವನ್ನು ಕೊಡುವುದರಿಂದ ಅದನ್ನು ಪಾಪ ಶಬ್ದದಿಂದ ವ್ಯವಹರಿಸುವರು.[1] ಪುಣ್ಯಕಾರ್ಯ ನಿರ್ವಾಹಕ್ಕೆ ಶಕ್ತಿ, ಬುದ್ಧಿ ಸ್ವಾತಂತ್ರ್ಯಗಳಿರುವಂತೆ ಮೋಸ, ಪಟಿಂಗತನ, ದೌಷ್ಟ್ಯ ಮೊದಲಾದ ಕರ್ಮಗಳಿಗೂ ಸ್ವಾತಂತ್ರ್ಯ ಶಕ್ತ್ಯಾದಿಗಳು ಇರುತ್ತವೆ.[2]

## ಪ್ರಕೃತಿಯ ಸಹಾಯ ಹೊಣೆಗಾರಿಕೆ

ಪುಣ್ಯಪಾಪಕಾರ್ಯಗಳು ಪುಣ್ಯಪಾಪ ಫಲಗಳನ್ನು ಒದಗಿಸುತ್ತವೆ.

---

1 ಪುಟ 13 — ಹಿಂಸೆ.

2 ಪ್ರಶ್ನೆ - ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ?

ಗೀತಾ 3. 34.

ಉತ್ತರ - ಕಾಮ ಏಷಃ, ಕ್ರೋಧ ಏಷಃ

ಕಾಮಕ್ರೋಧಾದಿಭಿಃ ಪ್ರಯುಕ್ತೋಽಯಂ ಪಾಪಾಚರಣಂ

ಗೀತಾ 3. 37.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಫಲಾನುಭವವೆಂಬ ಬಂಧನವನ್ನೂ ಕಲ್ಪಿಸುವುವು. ಕರ್ಮ, ಫಲ ಮತ್ತು ಫಲಾನುಭವಗಳಿಗೆ ಪ್ರಕೃತಿಯು ಸೇವಕಳಂತೆ ಸಿದ್ಧಳಾಗಿ ಸಹಕರಿಸುವುದಕ್ಕೆ ಪ್ರಜಾಪತಿಯ ವಿಶ್ವಪ್ರಜಾರಾಜ್ಯದಲ್ಲಿ ತಡೆಯಿಲ್ಲದೆ ಸರಳವೂ ಸರಾಗವೂ ಆದ ಅವಕಾಶವಿರುತ್ತದೆ.

## ಬಂಧನ-ಋಣದಿಂದ ಸಂಪದಭ್ಯುದಯ (ಪ್ರಗತಿ)

ಋತಕ್ಕೆ ಅನುರೋಧವಾಗಿಯೂ ವ್ಯಕ್ತಿಗಳು ತಮ್ಮ ತಮ್ಮ ಇಷ್ಟ ಪ್ರಾಪ್ತಿಗಾಗಿಯೇ ಸ್ವಂತ ಹೊಣೆಗಾರಿಕೆ ಮೇಲೆ ಕೆಲಸ ಮಾಡುವರು. ವ್ಯಕ್ತಿಗಳ ಇಷ್ಟವು ಆಪಾತತಃ ಇಷ್ಟವಾಗಿ ಕಂಡರೂ ಪರಿಣಾಮದಲ್ಲಿ ಸಂಸ್ಕೃತಿಯ ಕೆಳಗಿನ ಹಂತವನ್ನು ಸೂಚಿಸಬಹುವಲ್ಲದೆ ವ್ಯಕ್ತಿಗೂ ವ್ಯಕ್ತಿಯ ಸುತ್ತಮುತ್ತಲಿನವರಿಗೂ ಅನಿಷ್ಟವಾಗಬಹುದು. ಒಂದು ವ್ಯಕ್ತಿಯು ಮಾಡುವ ಕೆಲಸವು ತನಗೆ ಅನಿಷ್ಟವೆಂದೂ ಬಲಾತ್ಕೃತವೆಂದೂ ಆದುದರಿಂದ ಅನಿಷ್ಟಫಲಪ್ರದವೆಂದೂ ತಿಳಿದು ಕೆಲಸ ಮಾಡಿದರೂ ಅದು ಪರಿಣಾಮದಲ್ಲಿ ತನಗೂ ತನ್ನ ಸುತ್ತಮುತ್ತಲಿನವರಿಗೂ ಇಷ್ಟಪ್ರದ ವಾಗಬಹುದು. ಋತದ ದೃಷ್ಟಿಯಿಂದ ಇಷ್ಟಾನಿಷ್ಟಗಳನ್ನು ಗೊತ್ತು ಮಾಡಿ ನಡೆಸುವ ವ್ಯಾಪಾರಗಳೇ ಬೇರೆ; ಆವರಣದಲ್ಲಿ ಸಿಕ್ಕಿರುವ ಜೀವಗಳು ಸಂಕುಚಿತವಾದ ದೃಷ್ಟಿಯಿಂದ ಸ್ವಂತ ಹೊಣೆಗಾರಿಕೆ ಮೇಲೆ ನಡೆಸುವ ವ್ಯಾಪಾರಗಳೇ ಬೇರೆ. ಸ್ವಂತ ಹೊಣೆಗಾರಿಕೆ ವ್ಯಾಪಾರಗಳು ಋಣದ ಭಾರವನ್ನು ಹೆಚ್ಚಾಗಿ ಹೊರಿಸುವುವು. ಹೀಗೆ ಕಲ್ಪಿತವಾದ ಋಣಭಾರವು ವ್ಯಕ್ತಿಯು, ಎಲ್ಲಿ ? ಯಾವ ಮಟ್ಟದಲ್ಲಿ ? ಹೇಗೆ ? ಇರಬಹುದು ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದು. ಸರ್ವಥಾ ಋಣ ಸಂಬಂಧವು ಸ್ವಯಂ ಕಲ್ಪಿತವಾಗಿ ಸ್ವತಃ ಹೊರಿಸಲ್ಪಟ್ಟುವುಗಳೇ. ಎಂದು ಖಚಿತವಾಗಿ ತಿಳಿಯಬೇಕು. ಯಾವ ಗೃಹಕಾರ್ಯ ಸಮಾಜ ಕಾರ್ಯ ದೇವತಾಕಾರ್ಯಗಳಾದರೂ ಬಂಧನಗಳಿಗೆ (commitment) ಒಳಪಟ್ಟು ಬದ್ಧವಾಗಿ ಬಂಧನದಿಂದಲೇ ಮುಂದುವರಿಯ ಬೇಕಾಗಿರುತ್ತದೆ. ಈ ವ್ಯಾಪಾರಗಳ ಹೊಣೆಗಾರಿಕೆಗಳ ಹಂಚಿಕೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಕ್ಕಂತೆ ಆಗುವ ಫಲಾನುಭವಕ್ಕೂ ಪ್ರಪಂಚದಲ್ಲಿ ವ್ಯಕ್ತಿಗಳು ಸ್ವತಂತ್ರಿಸಿ ಮಾಡುವ ಕರ್ಮಗಳ ಇಷ್ಟಾನಿಷ್ಟಫಲಗಳಿಂದ ಪ್ರಪಂಚದ ಋತವು ವಿಕಾರವನ್ನು ಹೊಂದದೆ ಇರುವಂತೆ ಸಮತೆಯನ್ನು ಉಂಟುಮಾಡುವುದಕ್ಕೂ ಸಹ ಪ್ರಕೃತಿಯಲ್ಲಿ ವ್ಯವಸ್ಥೆಯಿರುವುದು.

## ಬಂಧನ – (ನೈಮಿತ್ತಿಕ – ಸ್ವಾಭಾವಿಕ)

ವ್ಯಾವಹಾರಿಕವಾಗಿ ವಿಮರ್ಶಿಸಿದರೆ ಬಂಧನಗಳು ಸ್ವಾಭಾವಿಕವಾಗಿಯೂ ನೈಮಿತ್ತಿಕವಾಗಿಯೂ ವ್ಯಕ್ತವಾಗುತ್ತವೆಂದು ತಿಳಿಯಬರುವುದು. ಒಂದು ವ್ಯಕ್ತಿಯ ಮೇಲೆ ಆ ವ್ಯಕ್ತಿಯ ಸುತ್ತುಮುತ್ತಲಿನ ವಸ್ತುಗಳೂ ಜೀವಿಗಳೂ ತಮ್ಮ ತಮ್ಮ ಪ್ರಭಾವವನ್ನು ಪ್ರಬೋಧಿತಗಳಾಗಿಯೋ ಅಥವಾ ಸ್ವಾಭಾವಿಕವಾಗಿಯೋ ಬೀರುವುವು. ಮತ್ತು ಪ್ರೇರಕಗಳೂ ಆಗುವುವು. ನಿರ್ಜೀವವಾದ ವಸ್ತುವೂ ಸಹ ಇಂತಹ ಪ್ರಭಾವಕ್ಕೆ ಒಳಗಾಗಿ ಪರಿಣಾಮವನ್ನು ಹೊಂದುವುದು. ವ್ಯಕ್ತಿಯ ಅಂತರಾವರಣಕ್ಕೂ ಬಹಿರಾವರಣಕ್ಕೂ ಇರುವ ಹೊಂದಿಕೆ, ಹೋಲಿಕೆ ವ್ಯತ್ಯಾಸಗಳಿಗೆ ಅನುಗುಣವಾಗಿ ಋಣವು ಕಲ್ಪನೆಯಾಗುತ್ತದೆ. ಸೂಜಿಗಲ್ಲು (ಅಯಸ್ಕಾಂತ) ಮತ್ತು ಕಬ್ಬಿಣದ ತುಂಡು ಇವುಗಳ ಮಿತಿಯಲ್ಲಿ ಸೂಜಿಗಲ್ಲು ಕಬ್ಬಿಣವನ್ನು ಎಳೆಯುವುದು. ಸಂಸ್ಕಾರ ಮತ್ತು ಋಣಗಳ ಇತಿಮಿತಿಗೆ ತಕ್ಕಂತೆ ವಸ್ತುಗಳ ಮತ್ತು ವ್ಯಕ್ತಿಗಳ ವಿಶಿಷ್ಟಸಂಬಂಧವು ತಲೆದೋರಿ ಋಣವು ಆರಂಭವಾಗುವುದು. ವಸ್ತುಗಳಿಗೆ ಪರಸ್ಪರ ಸಂಬಂಧವು ಕಲ್ಪನೆಯಾಗದೆ ಇದ್ದರೂ, ಅವುಗಳಲ್ಲಿ ಯಾವುದಾದರೂ ಒಂದು ವಸ್ತುವು ಮತ್ತೊಂದರ ಅಪೇಕ್ಷೆಯನ್ನು ಲೆಕ್ಕಿಸದೇ ಅದರ ಮೇಲೆ ಕಲ್ಪಿಸಿಕೊಂಡ ಋಣವು ಪರಸ್ಪರ ಬಂಧನಕ್ಕೆ ಕಾರಣವಾಗಿ ವಸ್ತುದ್ವಯವನ್ನೂ ಬಂಧನಕ್ಕೆ ಗುರಿಮಾಡುವುದು.* ಹೀಗೆ ಋಣಶಕ್ತಿಯು

* ರಾಮಾಯಣದ ವಿಷಯ 1. ಗೋಪಸ್ತ್ರೀ ಮತ್ತು ಕೃಷ್ಣ— ಇತ್ಯಾದಿ ಪುಟ 28 ವಾಕ್ಯಬಂಧಾರಂಭ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದ್ಭುತವಾದುದರಿಂದ ಋಣಮುಕ್ತಿಗಾಗಿ ಅತ್ಯಂತ ಜಾಗರೂಕತೆಯಿಂದ ಕೆಲಸಮಾಡಬೇಕಾಗಿರುವುದು. ಕೆಲವು ಸಂದರ್ಭಗಳಲ್ಲಿ ಯಾವ ವಿಧವಾದ ವಿಶಿಷ್ಟಪ್ರೇಮಕ್ಕೂ ಸಂಬಂಧಕ್ಕೂ ಅವಕಾಶವಿಲ್ಲದಿರುವ ಬಾಹ್ಯ ಸನ್ನಿವೇಶಗಳಲ್ಲಿ ಪರಸ್ಪರ ಸಂಬಂಧವು ತಾನೇ ತಾನಾಗಿ ಲಭಿಸಿದಂತಾಗುವುದು. ಇದು ಹಿಂದಿನ ಋಣದ ಪರಿಹಾರಕ್ಕಾಗಿ ಕಲ್ಪಿತವಾದ ಅವಕಾಶವೆಂದೂ ಅಥವಾ ಹೊಸದಾಗಿ ಋಣ ಭಾವವು ಹೊರಿಸಲ್ಪಡುವುದೆಂದೂ ತಿಳಿಯಬೇಕು.

## ಋಣ ಕಲ್ಪನೆ ಮತ್ತು ನಿವೃತ್ತಿ

ವ್ಯತಿಷಜತಿ ಪದಾರ್ಥಾನಾಂತರಃ ಕೋಽಪಿ ಹೇತುಃ ।
ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ॥

— ಭವಭೂತಿಃ

ಪದಾರ್ಥಗಳು ಪರಸ್ಪರ ಬದ್ಧವಾಗುವುದಕ್ಕೆ ಇರುವ ಆಂತರಂಗಿಕವಾದ ಕಾರಣವು ಅನಿರ್ವಚನೀಯವೆಂದು ತಿಳಿಸಲು ಅನಿರ್ದಿಷ್ಟಾರ್ಥವನ್ನು ಕೊಡುವ 'ಕೋಽಪಿ' ಎಂಬ ಪದವನ್ನು ಪ್ರಯೋಗಿಸಿ ಭವಭೂತಿ ಮಹಾಕವಿಯು ಋಣ ಪ್ರಭಾವವನ್ನು (?) ವರ್ಣಿಸಿರುತ್ತಾನೆ.. ಕೇವಲ ದೃಷ್ಟಿಮಾತ್ರದಿಂದ-ವಾ-ಮಾತಾಡುವುದರಿಂದ ಋಣವು ಅಂವರೆ ಸಂಬಂಧಬಂಧವು ಆರಂಭವಾಗುವುದು. ಇದು ಮನಸ್ಸಿಗೆ ಸ್ವತಃ ಸ್ಪಷ್ಟವಾಗುವುದು. ರೂಢಿಯಲ್ಲಿರುವ ನಮಸ್ಕಾರ! ನಮಸ್ತೇ! Good morning! ಸಲಾಂ! ಮೊದಲಾದ ಅಭಿನಂದನ ಸೂಚನೆಗಳೂ ಸಂಗವನ್ನು ಪ್ರೋತ್ಸಾಹಿಸಿ ಉದ್ದೀಪನಗೊಳಿಸಿ ಋಣಕಲ್ಪನೆ-ವಾ-ಋಣ ನಿವೃತ್ತಿಯನ್ನು ಸೂಚಿಸುವುವು.

## ಋಣಾನುಭವ

ವೃತ್ತಪತ್ರಿಕೆ ಪುಸ್ತಕಾದಿಗಳ ಪಠಣದಿಂದ ಉಂಟಾಗುವ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಧ ನವೀನ ಸಂಸ್ಕಾರದಿಂದ, ಇಂದ್ರಿಯಗಳ ಸಂಪರ್ಕಕ್ಕೆ ದೂರವಾದ ವಸ್ತುವ್ಯಕ್ತಿಗಳೊಡನೆ ಋಣವು ಹೊಸದಾಗಿ ಕಲ್ಪನೆಯಾಗುವುದು. ತದನುಗುಣವಾಗಿ ಸಂಕಲ್ಪವು ಅಂಕುರಿಸಿ ಫಲಪ್ರಾಪ್ತಿಗೆ ವ್ಯವಸಾಯಗಳು ನಡೆಯುವುವು.

ವಾಹನಗಳೂ ಸಂಚಾರ ಸೌಕರ್ಯಗಳೂ ವಿಶೇಷವಾಗಿರುವ ಸನ್ನಿವೇಶದಲ್ಲಿ ಯಾರು ಎಲ್ಲಿಗೆ ಬೇಕಾದರೂ ಹೋಗಿ ಪ್ರಕೃತಿ ಲೀಲೆಗೆ ಮೋಹಿತರಾಗಿ ಯಾವ ವ್ಯಕ್ತಿಯ ಮೇಲಾದರೂ ವಸ್ತುವಿನ ಮೇಲಾದರೂ ಇಂದ್ರಿಯ ಬಾಣಗಳನ್ನು ಪ್ರಯೋಗಿಸಿ ವ್ಯಕ್ತಿ-ವಾ-ವಸ್ತುಗಳ ಆಕರ್ಷಣ ಸಂಪರ್ಕಗಳಿಗೆ ಇಂದ್ರಿಯಗಳನ್ನು ಗುರಿಮಾಡಿ ಋಣಪಾಶದಲ್ಲಿ ಕಟ್ಟಿಹಾಕಲ್ಪಡಬಹುದು. ಏನೂ ಅರಿಯದ ನಿಷ್ಕಲ್ಮಷ ಚಿತ್ತರಾದವರೂ ಸಹ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ, ಈ ವಿಧವಾದ ಪಾಶಬಂಧನದಲ್ಲಿ ಸಿಕ್ಕಿ ಬಾಧೆಗೆ ಒಳಗಾಗುವರು.* ಈ ಸಂಬಂಧಬಾಧೆಯು ತತ್ಕಾಲಜನ್ಯವಾದ ಋಣಪ್ರಾಪ್ತಿಯಾಗಿ ಅತ್ಯುತ್ಕಟ ಪ್ರಯತ್ನಗಳಿಂದ ಆಗಲೇ ಪರಿಹಾರವನ್ನು ಹೊಂದಬಹುದು. ಅಥವಾ ಕಾಲವನ್ನು ಕಾದು ಅದರ ಪರಿಹಾರ - ಅನುಭವಕ್ಕೆ ತಕ್ಕ ದೇಶ ಉಪಾಧಿಗಳನ್ನು ಹೊಂದಬಹುದು. ಹಿಂದಿನಿಂದ ಅನುಸರಿಸಿಕೊಂಡು ಬಂದದ್ದಾಗಿ ಹಠಾತ್ತಾಗಿ ತತ್ಕಾಲದಲ್ಲಿ ಪ್ರಾಪ್ತವಾದ ಋಣವನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಸಾವಿರಾರು ಯೋಜನ ದೂರದಲ್ಲಿರುವ ವಸ್ತುವಿನೊಡನೆ ಸಂಬಂಧವು (ಋಣವು) ಕಲ್ಪನೆಯಾಗಿ ಸಂಕಲ್ಪ ವ್ಯವಸಾಯಗಳು ನಡೆದು ಗುರುಶಿಷ್ಯ ಭಾವ, ದಾಂಪತ್ಯ ಸ್ನೇಹ, ವೃತ್ತಿ ಮೊದಲಾದುವುಗಳು ವಿಚಿತ್ರವಾದಂತೆ ಫಲವೀಯುವುವು. ಕಾಮಿಯು ಯಾವ ವ್ಯಕ್ತಿಯನ್ನು, ವಸ್ತುವನ್ನು ಕಾಮಿಸುವುದೋ ಆ ಕಾಮ್ಯ ಅಥವಾ ಕಾಮಿತ ವ್ಯಕ್ತಿ-ವಸ್ತುಗಳು ದೂರಸರಿದರೂ ದೂರದಲ್ಲಿದ್ದರೂ ಅದರ ಪ್ರಭಾವವು ಕಾಮಿಸಿದ ವ್ಯಕ್ತಿಯ

---

* ಏಕಲವ್ಯನ ವಿದ್ಯಾಭ್ಯಾಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲೆ ಬೀಳುವುವು.* ಇದಕ್ಕೆ ಸಮಾಗಮ 'ಸಂಬಂಧ' 'ಋಣ'ವೇ ಕಾರಣವಾಗುವುದು. § ಈ ಋಣವು ದೇಹಿಯನ್ನು ಆವರಿಸಿ ಸಂಕಲ್ಪವನ್ನು ಪ್ರಚೋದಿಸುವುದು. ವ್ಯವಸಾಯದ ಮೂಲಕ ಅದರ ಅನುಭವವೆಂಬ ಪರಿಹಾರವು ಆಗಿಯೇ ತೀರಬೇಕಾಗುವುದು. ಆಗ್ಗೆ ಅದೂ ಅದರ ಧರ್ಮ – ಕರ್ತವ್ಯ ಕರ್ಮವೆಂತಲೇ ಹೇಳಬೇಕಾಗುವುದು. ಯಾವ ಶಾಸ್ತ್ರ ನಿಯಮಗಳೂ ಕಟ್ಟು ಪಾಡುಗಳೂ ಇದರ ಮುಂದೆ ಹಾಯಲಾರವು. ಎಂಬುದನ್ನು ಸೂಚಿಸುವ 'ಅಪವಾದ' ಎಂದು ಸಮಾಧಾನದಿಂದ ಆನಂದಿಸಬೇಕು. ತಾತ್ಕಾಲಿಕವಾಗಿ ಗೋಚರವಾಗುವ ಕಾರಣಗಳಿಲ್ಲದಿರುವಾಗ "ಋಣಾನುಬಂಧರೂಪೇಣ ಪಶುಪತ್ನೀ-ಸುತಾಲಯಾಃ" ಎಂಬಂತೆ ಹಿಂದಿನ ಮತ್ತು ಮುಂದಿನ ಪರಸ್ಪರ ಋಣ ಸಂಬಂಧವನ್ನು ಮುಂದುವರಿಸುವ ಕಟ್ಟು (ಬಂಧನ – ನಿಯಮ) (commitment) ಗಳು ಪ್ರಧಾನವಾಗಿ ಎದ್ದು ಕಾಣುವುವು.

---

* ಪಾಶ್ಚಾತ್ಯ ದಂಪತಿಗಳಿಗೆ ನೀಗ್ರೋ ರೂಪಿನ ಸಂತಾನವು ಪ್ರಾಪ್ತಿಯಾದಾಗ ಉಂಟಾದ ಸಂದೇಹವನ್ನು ಮನಶ್ಶಾಸ್ತ್ರಜ್ಞನು ಪರಿಹರಿಸಿ ಪಾರಿತೋಷಕವನ್ನು ಹೊಂದಿದನು. ಆ ದಂಪತಿಗಳು ಮಲಗುವ ಮನೆಯಲ್ಲಿದ್ದ ದೃಢಕಾಯನಾದ ನೀಗ್ರೋ ಯುವಕನ ಭಾವಚಿತ್ರವು ಆ ಹೆಂಗಸಿನ ಮೇಲೆ ಪರಿಣಾಮವನ್ನುಂಟುಮಾಡಿದ್ದರಿಂದ ಜನಿಸಿದ ಶಿಶುವು ನೀಗ್ರೋ ಮಾದರಿಯಲ್ಲಿ ರೂಪುಗೊಂಡಿತು. ಎಂದು ಸಕಾರಣವಾಗಿ ವಿವರಿಸಿದನು – ಎಂಬ ವದಂತಿ ಹರಡಿತ್ತು. ಇದು ಋಣಬಂಧನದ ಪರಿಮಿತಿಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಡಬೇಕಾಗುವುದು.

§ Eros, Kama, was the first cause of the Gods in Hesiod.

For Empedocles, love is the efficient cause of every union of cosmic forces.

Dr S. Radhakrishna :

*East And West Some Reflections*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯವಾಗಿ ಇಂದ್ರಿಯಗಳ ಮಟ್ಟದಲ್ಲಿ ನಡೆಯುವ ಸಾಮಾನ್ಯ ವ್ಯಾಪಾರ ಮತ್ತು ಅನುಭವಗಳು ತಾತ್ಕಾಲಿಕವಾಗಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಒಳಪಟ್ಟಿರುತ್ತವೆ. ಜೀವನಕ್ಕೆ ಹೊಂದಿಕೊಂಡಂತೆ ಮತ್ತು ಸಂಸ್ಕೃತಿಯ ಸೋಪಾನಗಳನ್ನು ಏರುವುದಕ್ಕೆ ಸಹಕಾರವಾಗು ವಂತೆ ವ್ಯಾಪಾರಗಳು ನಡೆದು ಅನುಭವವೆಂಬ ಋಣಪರಿಹಾರವಾಗುವುದು ಎಂದು ಸಾಮಾನ್ಯವಾಗಿ ತಿಳಿಯಬೇಕು. ಋಣವನ್ನು ಹೊರಿಸುವ (ಕಲ್ಪಿಸುವ) ಮತ್ತು ಹರಿಸುವ ಸ್ಥಿತಿ ಗತಿಗಳನ್ನು ಸಂಸ್ಕೃತಿ ಸಂವಿಧಾನವು ಅಥವಾ ಪ್ರಯೋಗ ಅಥವಾ ಕಲ್ಪವು ತಿಳಿಸುವುದು.

ಒಬ್ಬ ವ್ಯಕ್ತಿಯು ರಾಗ ದ್ವೇಷಗಳಿಗೆ ಪಾತ್ರವಾದ ಮತ್ತೊಂದು ವ್ಯಕ್ತಿಯು ತನಗೆ ಏನೇನೂ ಸಂಬಂಧವಿಲ್ಲವೆಂದು ತಿಳಿಯದವನಂತೆಯೇ (innocent) ಇರಬಹುದು. ಸ್ಥಾನಪ್ರಾಬಲ್ಯದಿಂದಾಗಲೀ, ಮತ್ತಾವ ಶಕ್ತಿ ರೂಪು, ಗುಣ ಮೊದಲಾದ ವುಗಳಿಂದಾಗಲೀ ಕೂಡಿದ ಒಬ್ಬ ವ್ಯಕ್ತಿ ಯನ್ನು ಒಲಿಸಿಕೊಳ್ಳುದಕ್ಕೆ ಮಾನಸಿಕ ಶಾಸ್ತ್ರಕ್ಕೆ ಸಂಬಂಧಪಟ್ಟಂತಿರುವ ಮಂತ್ರಶಾಸ್ತ್ರ ಪ್ರಯೋಗಗಳು ನಡೆಯುವುವು. ಇಂತಹ ವಶೀಕರಣಾದಿ ಶಕ್ತಿಗಳು ಆ ಶಕ್ತಿಗಳಿಗೆ ಗುರಿಯಾದ ವ್ಯಕ್ತಿಯನ್ನು ಬಂಧಿಸುವುವು. ಹೀಗೆಯೇ ಕೇವಲ ನ್ಯಾಯಮೂರ್ತಿಯಾಗಿದ್ದು ಶಾಂತಚಿತ್ತನಾಗಿರು ವವನೂ ಸಹ ತನಗೆ ಗೋಚರವಾಗದೇ ಇರುವ ನಾನಾ ವಿಧವಾದ ಸಂಬಂಧಗಳಿಗೆ ಗುರಿಯಾಗುವುದರಿಂದ ಕಟ್ಟಲ್ಪಡುತ್ತಾನೆ. ಇಂತಹ ಬಂಧನಗಳ ವಿಮೋಚನೆಗೆ ಪ್ರಕೃತಿಯೂ ಸರ್ವಜ್ಞನಾದ ಕ್ಷೇತ್ರಜ್ಞನೂ ಸದಾ ಯತ್ನಿಸಬೇಕಾಗಿರುವುದು. ಜಡಭರತನೂ ಸಹ ಜಿಂಕೆಯ ಮೋಹದಿಂದ ಋಣಬದ್ಧನಾದನು.

ಧನವನ್ನು ವಿವಿಧವಾಗಿ ಸಂಗ್ರಹಿಸಿ ಧನಾಢ್ಯರಾಗಿರುವವರ ಧನದ ಶಾಖದಿಂದುಂಟಾಗುವ ಪರಿಸ್ಥಿತಿಯನ್ನು ನೋಡಿ ಅಂತಹ ಧನಸಂಗ್ರಹ ವಿಲ್ಲದವರು ತವಕದಿಂದ ಆ ಸನ್ನಿವೇಶವನ್ನು ಬಯಸಿಕೊಂಡು ಆ ಬಗೆಯ ಜೀವನವನ್ನು ನಡೆಸುವುದಕ್ಕೆ ಸಂಕಲ್ಪಮಾಡಬಹುದು. ಈ ಸಂಕಲ್ಪದ ಫಲವಾಗಿ ಋಣವು ಕಲ್ಪನೆಯಾಗಿ ನಾನಾವಿಧ ಮಾರ್ಗಗಳಲ್ಲಿ ಧನವನ್ನು ಸಂಪಾದಿಸುವರು. ಧರ್ಮ ಸಾಧನೆಗೆ ವಿರೋಧವಾದ ಮೋಸ, ಕಳ್ಳತನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲಾದ ಅಕ್ರಮ ಮಾರ್ಗಗಳಿಂದಲ್ಲದೆ ಧನಸಂಗ್ರಹವಾಗುವುದಿಲ್ಲ :-

ನಾಛಿತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದಾರುಣಂ |
ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಮಹತೀಂ ಶ್ರಿಯಂ || ಮ. ಭಾ.

ಆದುದರಿಂದ ಆಯಾ ದುಷ್ಟನೀತಿಯನ್ನು ಅನುಸರಿಸಿ ಜೀವಿಸುವುದಕ್ಕೆ ತಕ್ಕ ಶರೀರಗಳನ್ನು ಧರಿಸಿ ಅನೇಕರಿಗೆ ಕಿರುಕುಳ ಕೊಡಬೇಕಾಗುವುದು. ಈ ಕಿರುಕುಳದ ವಿಪ್ರತಿಕ್ರಿಯಾ ಫಲವನ್ನು ಅನುಭವಿಸಲು, ಕಿರುಕುಳವನ್ನು ಹೊಂದಿದವರೂ ಕಿರುಕುಳವನ್ನುಂಟುಮಾಡಿದವರೂ ತಕ್ಕ ಶರೀರಗಳನ್ನು ಧರಿಸಿ ಅವತರಿಸಬೇಕಾಗುವುದು. ಕಿರುಕುಳವನ್ನು ಹೊಂದಿದವನಿಂದ ಶಿಕ್ಷೆರೂಪವಾದ ಪ್ರತಿಕ್ರಿಯಾ ಫಲವನ್ನು ಹೊಂದಲು ದುಷ್ಟನು ಸಿದ್ಧನಾಗಿರಬೇಕು. ಈ ರೀತಿಯಾಗಿ ಧನಸಂಗ್ರಹದ ಬಯಕೆಯಿಂದ ಮನಸ್ಸನ್ನು ಕ್ಷೋಭೆಗೆ ಗುರಿಪಡಿಸಿ ಮಾಡಿದ ಸಂಕಲ್ಪ ಮತ್ತು ಪ್ರಯತ್ನಗಳಿಂದ ವಿವಿಧ ಫಲಗಳು ಉಂಟಾಗುವ ಸಂದರ್ಭಗಳು ಒದಗುವುವು. ಹೀಗೆ ಅನವಸ್ಥಾ ಸ್ಥಿತಿಯುಂಟಾಗುವುದರಿಂದ ಸಂಕಲ್ಪವನ್ನು ಶುದ್ಧಿಗೊಳಿಸುವ ಕಾರ್ಯವನ್ನು ಪ್ರಥಮತಃ ಪರಿಗ್ರಹಿಸಿ ಎಚ್ಚೆತ್ತುಕೊಳ್ಳಬೇಕಾಗಿರುತ್ತದೆ.*

ಅನುರಾಗ ವಿಶೇಷದ ದಾಂಪತ್ಯ ಋಣವು ಅತ್ಯದ್ಭುತವಾದುದು. ಮಾನವತೆಯನ್ನು ಹುಲ್ಲುಕಡ್ಡಿಯಷ್ಟು ಹಗುರವಾಗುವಂತೆ ಮಾಡಿ ನಾಚಿಕೆಗೆ ಒಳಪಡಿಸುವುದು. ಯುವಕ ಸ್ತ್ರೀ ಪುರುಷರ ಮಾನಸಿಕ, ವಾಚಕ, ಕಾಯಕ ರೂಪವಾದ ಭಾವಗಳು ಮತ್ತು ಕರ್ಮಗಳು ಎಂತಹ ನಿಸ್ಪೃಹತ್ವವನ್ನೂ ಪ್ರಕೃತಿಲೀಲೆಯ ದಾಕ್ಷಿಣ್ಯಕ್ಕೆ ಒಳಗಾಗಬೇಕಾಗುವ ಭಗವಂತನನ್ನೂ ಸಹ ಬಂಧನಕ್ಕೆ ಗುರಿಮಾಡುವುವು. ಸಾತ್ವಿಕ ಸ್ವಭಾವದ ಶ್ರೀರಾಮಚಂದ್ರನ ಸುಲಕ್ಷಣ ಸೌಂದರ್ಯವು ಋಷಿಗಳನ್ನೂ ಮೋಹಗೊಳಿಸಿತು. ಈ ಸೌಂದರ್ಯವನ್ನು ಹೊಂದಿದ ತಪ್ಪಿಗಾಗಿ ಶ್ರೀರಾಮನೂ ಬೇರೆ ಉಪಾಧಿಯನ್ನು ಹೊಂದಬೇಕಾಯಿತು. ಋಷಿಗಳೂ ತಮ್ಮಲ್ಲಿ ಉಂಟಾದ ಮೋಹಕ್ಕಾಗಿ ಸ್ತ್ರೀಯರಾಗಿ ಜನಿಸಬೇಕಾಯಿತು.

---

* ತಪಸ್ಸು— (ಕರ್ಮ, ಕರ್ಮಫಲ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಕಲ್ಪಾನುಸಾರವಾಗಿ ಸಂಕಲ್ಪಗಳ ಪೂರೈಕೆಗಾಗಿ ಜನ್ಮ ತಾಳುವುದು ತಿಳಿದಂಶವಾಗಿದೆ. ಜನ್ಮವನ್ನು ತಾಳುವ ಜೀವನು, ತನಗೆ ಆಶ್ರಯ ಕೊಡುವುದರಿಂದ ಪಿತೃವೆನಿಸಿಕೊಳ್ಳುವ ವ್ಯಕ್ತಿಯ ದೇಹದಲ್ಲಿ ಆಹಾರಾದಿ ರೂಪಗಳಲ್ಲಿ ಸೇರಿ ಚೈತನ್ಯವುಳ್ಳ ಜೀವಾಣು ವೀರ್ಯವಾಗಿ ಪರಿಣಮಿಸುತ್ತಾನೆ. ಇಂತಹ ವೀರ್ಯವುಳ್ಳ ಪಿತೃವು ಒಂದು ವಿಧವಾಗಿ ಆಚಾರವುಳ್ಳ ಜನಾಂಗಕ್ಕೆ ಸೇರಿರಬಹುದು. ಪಿತಾಪುತ್ರ ಋಣಕ್ಕೆ ಸಂಬಂಧಪಡುವಷ್ಟು ಕಾಲದ ವರೆಗೆ ಪಿತಾಪುತ್ರರು ಸಹವಾಸದಲ್ಲಿರಬಹುದು. ಪುತ್ರನ ದೇಹದಲ್ಲಿ ಆಹಾರಾದಿ ರೂಪಗಳಲ್ಲಿ ವೀರ್ಯಸತ್ವವಾಗಿ ಪರಿಣಮಿಸಿದ ಯಾರೋ ಒಬ್ಬ ಜೀವನು ಧರಿಸುವ ಕ್ಷೇತ್ರವು ಬೇರೇ ಜನಾಂಗಕ್ಕೆ ಸೇರಿರುವಾಗ ಆ ಕ್ಷೇತ್ರದ ಗರ್ಭವಾಸಕ್ಕಾಗಿ ಅನುಕೂಲಿಸುವಂತೆ ಮೇಲ್ಕಂಡ ಪುತ್ರನು ತನ್ನ ತಂದೆಯೆನಿಸಿಕೊಳ್ಳುವ ವ್ಯಕ್ತಿಯನ್ನು ಬಲಾತ್ಕರಿಸಿ, ಪ್ರೇರಿಸಿ ತನ್ನ ಜನ್ಮ ಜನಾಂಗವನ್ನು ತ್ಯಾಗಮಾಡಿ ಮೇಲೆ ವಿವರಿಸಿದಂತೆ ಸ್ತ್ರೀ (ಕ್ಷೇತ್ರದ) ಜನಾಂಗದಲ್ಲಿ ಬೆರೆಯುವಂತೆ ಸರ್ವ ಶಕ್ತಿಯನ್ನು ಉಪಯೋಗಿಸುತ್ತಾನೆ.

ಬ್ರಾಹ್ಮಣಾಚಾರದ ವ್ಯಕ್ತಿಯ ಶರೀರದಲ್ಲಿ ಆಹಾರಾದಿಗಳಿಂದ ಸೇರಿ ವೀರ್ಯ ಸತ್ವವಾಗಿ ಜನ್ಮಕ್ಕೆ ಕಾದಿರುವ ಯಾವುದೋ ಜೀವನು ಅನ್ಯ ಜನಾಂಗದ ಕ್ಷೇತ್ರದಲ್ಲಿ ಜನ್ಮತಾಳಲಿರುವಾಗ ಬ್ರಾಹ್ಮಣಾಚಾರದ ವ್ಯಕ್ತಿಯನ್ನು ಬಲವಾಗಿ ಪ್ರೇರಿಸಿ ಸರ್ವತ್ಯಾಗ ಮಾಡಿ ಅನ್ಯ ಕ್ಷೇತ್ರ ಜನಾಂಗಕ್ಕೆ ಸೇರುವಂತೆ ಅಪ್ರತಿಹತವಾದ ಶಕ್ತಿ ಪ್ರಯೋಗ ಮಾಡುತ್ತಾನೆ. ಆ ವೀರ್ಯ ಚೈತನ್ಯವು ಶರೀರದಲ್ಲಿರುವವರೆಗೂ ಅದಕ್ಕೆ ಆಶ್ರಯದಾತನು ಅಶರಣನಾಗಿ ಆ ಸಂಕಲ್ಪವನ್ನು ಪಾಲಿಸಲೇ ಬೇಕಾಗಿರುತ್ತದೆ. ಇದಕ್ಕೆ ತಕ್ಕ ಅನುರೋಧನಾದ ಸನ್ನಿವೇಶಗಳು ಆಯಾ ಸಂದರ್ಭಗಳಲ್ಲಿ ವ್ಯಾಪಾರೋನ್ಮುಖವಾಗಿಯೂ ವಿರೋಧ ಸನ್ನಿವೇಶಗಳು ಹಿಂದೆ ಸರಿದು ಮರೆಯಾಗಿಯೂ ಇದ್ದು ಸಂಕಲ್ಪ ಪೂರೈಕೆಗೆ ಅವಕಾಶವಾಗುತ್ತದೆ.

(ದಾಂಪತ್ಯ ಋಣಭಾವದ ರಹಸ್ಯವನ್ನರಿಯದೆಯೂ ತಿಳಿದೂ ತಿಳಿಯದಂತೆ ವರ್ತಿಸುತ್ತಲೂ, ಋಣಾನುಬಂಧರೀತ್ಯಾ ತಾಯಿತಂದೆಗಳೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಸಿಕೊಳ್ಳುವವರು "ಗಂಡುಮಕ್ಕಳ ಮತ್ತು ಹೆಣ್ಣು ಮಕ್ಕಳ ಮದುವೆ ಮಾಡಿದೆವು ; ವರಾನ್ವೇಷಣ ಮಾಡಿದೆವು ; ಕನ್ಯಾನ್ವೇಷಣ ಮಾಡಿದೆವು; ಸರಿಯಾದವನಿಗೆ ಮಗಳನ್ನು ಕೊಡಲಿಲ್ಲ ; ಸರಿಯಾದ ವಧೂ ದೊರೆಯ ಲಿಲ್ಲ." ಇತ್ಯಾದಿ ಹೊಣೆಗಾರಿಕೆಯ ಡಾಂಭಿಕವಚನಗಳನ್ನಾಡುವರು. ನಿಮಿತ್ತಮಾತ್ರವಾಗಿರುವ ತಮ್ಮ ಸ್ಥಿತಿಯನ್ನೂ ಮಿತಿಯನ್ನೂ ಮರೆತು, 'ಗಂಡು ಮತ್ತು ಹೆಣ್ಣು ಮಕ್ಕಳ ವಿವಾಹಕ್ಕೆ ಅವರವರೇ ಹೊಣೆಗಾರರು.' ಎಂಬುದನ್ನು ತಿಳಿಯದೇ ಆಡುವ ಮಾತುಗಳು ಋತಕ್ಕೆ ವಿರೋಧವಾಗಿ ವಾಗ್ರೂಪವಾದ ಅಪರಾಧವನ್ನು ಮಾಡುತ್ತಾರೆ.

'ನಮ್ಮ ತಾಯಿ ತಂದೆಗಳು, ಸರಿಯಾದ ಮನುಷ್ಯನಿಗೆ ನಮ್ಮನ್ನು ಕೊಟ್ಟು ಮದುವೆ ಮಾಡಲಿಲ್ಲ.' ಎಂದು ಹೆಣ್ಣು ಮಕ್ಕಳೂ 'ಸರಿಯಾದ ಹೆಣ್ಣನ್ನು ತಂದು ಮದುವೆ ಮಾಡಲಿಲ್ಲ.' ಎಂದು ಗಂಡು ಮಕ್ಕಳೂ ಮನಸ್ಸಿಗೆ ತೋರಿದಂತೆ ಆಡಿಕೊಳ್ಳುವುದರಿಂದ ಅಪರಾಧಕ್ಕೆ ಗುರಿಯಾಗು ತ್ತಾರೆ. "ಒಳ್ಳೆಯ ಕುಲದ ವರನಿಗೆ ಹೆಣ್ಣು ಮಗಳನ್ನು ಕೊಡಬೇಕು. ಒಳ್ಳೆಯ ಕುಲದಿಂದ ಹೆಣ್ಣುಮಕ್ಕಳನ್ನು ತಂದು ಗಂಡುಮಕ್ಕಳಿಗೆ ವಿವಾಹ ಮಾಡಬೇಕು." ಇತ್ಯಾದಿ ವಿಮರ್ಶೆಗಳು ತರ್ಕಕ್ಕೂ ಸತ್ಯಕ್ಕೂ ಋಣ ಶಾಸ್ತ್ರಕ್ಕೂ ವಿರುದ್ಧವಾಗಿವೆ. ವಯಸ್ಸಾಗಿರಬಹುದಾದ ತಾಯಿತಂದೆಗಳು ಎನಿಸಿಕೊಳ್ಳುವ ದೇಹಿಗಳೂ, ಪೂರ್ವವಯಸ್ಸಿನ ವಧೂವರರೆನಿಸಿ ಕೊಳ್ಳುವ ದೇಹಿಗಳೂ ಸರ್ವಶಕ್ತರೂ ಸರ್ವಸ್ವತಂತ್ರರೂ ಆಗಿರುತ್ತಾ ರೆಂಬುದನ್ನೂ ಅವರಸ್ವಂತಕ್ಕೆ ಶಕ್ತಿಪ್ರಯೋಗದಿಂದ 'ಜ್ಞಾನೇಚ್ಛಾ' ಋಣ ವನ್ನು ಕಲ್ಪಿಸಿಕೊಳ್ಳುವುದಕ್ಕೆ ಅವರವರೇ ಬಾಧ್ಯರು. ಎಂಬುದನ್ನೂ ಎಂದಿಗೂ ಮರೆಯಲಾಗುವುದಿಲ್ಲ. ತಳ್ಳಿಹಾಕುವುದಕ್ಕೆ ಆಗುವುದೇ ಇಲ್ಲ. 'ಒಳ್ಳೆಯದಲ್ಲ'ವೆಂದು ತಿರಸ್ಕೃತವಾದ ಕುಲಗಳೂ ವಿವಾಹ ಪ್ರಪಂಚದಲ್ಲಿ ಕಾಣಬರುದಿವುಲ್ಲ.

'ಕಾಲಕ್ಕೆ ಸರಿಯಾಗಿ ಮದುವೆ ಮಾಡಲಿಲ್ಲ ; ಶಾಸ್ತ್ರವಿರೋಧ ವಾಯಿತು.' ಎಂದು ಋಣಶಾಸ್ತ್ರಕ್ಕೆ ವಿರೋಧವಾಗಿ ಆತ್ಮದ್ರೋಹ ವಾಗುವ ವಚನಗಳನ್ನು ಆಡಿಕೊಳ್ಳುವುದರಿಂದ ಸ್ವಭಾವ ಪ್ರೇರಿತರಾದ ಮತ್ತು ಸ್ವಭಾವ ಶರಣರಾದ ಜನತೆಯಲ್ಲಿ ಕ್ಷೋಭೆಯುಂಟಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವೇಷಾಸೂಯೆಗಳೂ ಕೂಟ ಸಮಾಜಗಳೂ ಏರ್ಪಾಡಾಗುವುವು.

ದೇಶಾಧಿಪತ್ಯಾದಿ ಪ್ರಾಪಂಚಿಕ ಭೋಗಗಳನ್ನು ತ್ಯಾಗಮಾಡಿ ಕೀಳುಮಟ್ಟದಲ್ಲಿರುವ ಬಡತನದ ಸ್ವರೂಪಿಗಳನ್ನೇ ವರಿಸಿರುವ ತರುಣ ತರುಣಿಯರ ಜೀವಿಕೆಯ ನಿದರ್ಶನಗಳು ವಿಶ್ವದಲ್ಲೆಲ್ಲಾ ತುಂಬಿರುತ್ತವೆ.)

## ಋಣಾನುಭವ (ಋಣ ಸ್ವಾಯತ್ತೀಕರಣ ಮತ್ತು ನಿವೃತ್ತಿ)

ಅನುಭವದ ಗೌರವ ಲಾಘವ ಪರಿಸ್ಥಿತಿಗಳಿಗೆ ತಕ್ಕಂತೆ ಋಣವು ಅಂಕುರವಾಗುವುದಕ್ಕೂ ಸಂಬಂಧವು ಪರಿಪಕ್ವವಾಗಿ ರೂಢಮೂಲವಾಗುವುದಕ್ಕೂ ಸಾಕಾದಷ್ಟು ಕಾಲ - ಅವಧಿಯು ಆವಶ್ಯಕ. ಕೇವಲ ಸಾಮೀಪ್ಯ ಆಲೋಕ ಮೊದಲಾದುವುಗಳಿಂದ ಕ್ಷಣಿಕವಾಗಿ ಉಂಟಾಗುವ ಋಣವು ಮುಂದೆ ಬೆಳೆಯುವುದಿಲ್ಲ. ಫಲಾನುಭವವೂ ಆಗಲಾರದು. ಒಂದು ಸನ್ನಿವೇಶದಲ್ಲಿ ಉಂಟಾದ ಫಲದ ಅನುಭವವು ಶೀಘ್ರವಾಗಿ ಪ್ರಾಪ್ತವಾದಂತೆ ಕಂಡರೂ ಆ ಅನುಭವ ಪ್ರಾಪ್ತಿಗೆ ಬೇಕಾಗುವಷ್ಟು ಕಾಲದಲ್ಲಿ ಪ್ರಯತ್ನಗಳು ಕ್ರಮಶಃ ನಡೆದಿರಲೇಬೇಕು. ಅತ್ಯುಗ್ರವಾದ ವ್ಯವಸಾಯವು ಇಂದ್ರಿಯಗಳ ಮಟ್ಟದಲ್ಲಿ ತಾತ್ಕಾಲಿಕವಾಗಿ ನಡೆದು ಋಣ ಮತ್ತು ಅದರ ಪರಿಹಾರವು ನಡೆಯುವ ಸಂದರ್ಭಗಳೂ ಉಂಟು. ವ್ಯಕ್ತಿಯ ಜೀವನದಲ್ಲಿ ಅಂತಹ ಪ್ರಯತ್ನಗಳು ಕಾಣದೆ ಫಲವು ಸುಲಭವಾಗಿ ಪ್ರಾಪ್ತವಾದಂತೆ ತೋರಿದರೆ ಆ ವ್ಯಕ್ತಿಯ ತಿಳಿವಳಿಕೆಯ ಮಿತಿಗೆ ಮೀರಿದ ಬೇರೆ ಸಂದರ್ಭಗಳಲ್ಲಿ ಅಪಾರವಾದ ಪ್ರಯತ್ನವು ನಡೆದಿರಲೇಬೇಕೆಂದು ತರ್ಕದಿಂದ ನಿರ್ಣಯಿಸಿಕೊಳ್ಳಬೇಕು. ಅಥವಾ ಈಗಿನ ಘಟನೆಯ ಸಿದ್ಧಿಯನ್ನು ತನ್ನದೇ ಆಗುವಂತೆ ಮಾಡಿಕೊಳ್ಳುವುದಕ್ಕೂ ಅಥವಾ ಈಗ ಹಠಾತ್ತಾಗಿ ಹೊರಿಸಲ್ಪಟ್ಟ ಆ ಸಿದ್ಧಿಗೆ ಹೊಣೆಗಾರರಾದ ಇತರ ದೇಹಿಗಳ ಸಹಕಾರ ಋಣವನ್ನು ಮುಂದೆ ಪರಿಹರಿಸುವುದಕ್ಕೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿದ್ಧನಾಗಿರಬೇಕೆಂದು ತಿಳಿದುಕೊಳ್ಳಬೇಕು.*

ವಿಶ್ವಾಮಿತ್ರನೆನಿಸುವ ವ್ಯಕ್ತಿಯ ಘನೀಭೂತವಾದ ತಪಸ್ಸು ಮೇನಕೆಯಾದ ಹೆಂಗಸಿನೊಡನೆ ಆಗಬೇಕಾದ ಸಮಾಗಮ ಋಣಕ್ಕೆ ಬಲಿಯಾಯಿತು. ಹುಟ್ಟಿದ ಮಗುವನ್ನು ನೋಡಿ ಜುಗುಪ್ಸೆಯನ್ನು ಹೊಂದಿದರೂ ಶಕುಂತಲೆಯ ತಂದೆಯಾಗುವ ಋಣಾನುಬಂಧವು ತಪ್ಪದೆ ಬಲವಾಗಿ ನಿಂತಿತು. ದೇಹಿಯು ಪುತ್ರನಾಗಿ ಜನಿಸಲು ಪೂರ್ವಸಿದ್ಧತೆ ಬೇಕಾಗುವುದು. ಆದುದರಿಂದ ಋಣವು ಹಿಂದೆ ನಡೆದಿರಬೇಕೆಂದು ಸಿದ್ಧಾಂತವಾಗುವುದು. ಪುತ್ರಾದಿ ಪ್ರಾಪ್ತಿಯಿಲ್ಲದೆ ಕೇವಲ ಮಿಥುನೀಭಾವದ ಫಲದಲ್ಲಿ ಕೊನೆಗಾಣುವ ಸಮಾಗಮವು ತಾತ್ಕಾಲಿಕವಾಗಿಯೇ ಫಲಿಸುವಂತಾಗಬಹುದು. ಅಥವಾ ಗೋಪಿಗಳು ಮತ್ತು ಶ್ರೀಕೃಷ್ಣ ಇವರ ಸಂಬಂಧವುಂಟಾದಂತೆ ಹಿಂದೆ ನಡೆದ ಋಣದ ಫಲವಾದರೂ ಆಗಬಹುದು.

## ಋಣಾನುಭವ– ವಾರಣ

ಅಹಲ್ಯೆಯು ಇಂದ್ರಿಯ ಭೋಗಾಧಿಪತ್ಯದ ಇಂದ್ರನೆಂಬ ಪದವಿಯ ವ್ಯಕ್ತಿಯ ಸಂಸರ್ಗವನ್ನು ಮನಸಾ ನೆನೆದು ಋಣವನ್ನು ಆರಂಭಿಸಿದಳು. ಗೌತಮನ ದಿವ್ಯಚಿತ್ತಕ್ಕೆ ಇದು ಬಾರದಿದ್ದರೂ ಅಥವಾ ಬಂದಿದ್ದರೂ ಔದಾಸೀನ್ಯದಿಂದ ಸುಮ್ಮನಿರಬಹುದಾಗಿತ್ತು. ಅಹಲ್ಯೆಯ ಋಣವು ಬೇರೂರಿ ಮುಂದೆ, ಒಂದಾನೊಂದು ಕಾಲದಲ್ಲಿ ಆ ಭೋಗಕ್ಕೆ ತಕ್ಕ ಉಪಾಧಿಯನ್ನು ಧರಿಸಿ ಸಂಕಲ್ಪವನ್ನು ಸಾಧಿಸಿ ಋಣವನ್ನು ಪರಿಹಾರ

---

* ಕಾರ್ಯಕ್ಕೆ ತಕ್ಕ ಕಾರಣ, ಕಾರಣಕ್ಕೆ ತಕ್ಕ ಕಾರ್ಯಗಳೂ ತತ್ತ್ವದನುಭವಗಳೂ ಸ್ಪಷ್ಟವಾಗಿ ಗೋಚರವಾಗದಿರುವಾಗ ಹಿಂದು ಮುಂದಿನ ಉಪಾಧಿಗಳ ಚರಿತ್ರೆಯನ್ನು ಹುಡುಕಬೇಕಾಗಿರುವುದು. ಎದುರಿಗೆ–ಪ್ರತ್ಯಕ್ಷವಾಗಿ–ಕಾರ್ಯ ಕಾರಣಗಳು ತೊಡಕಿಲ್ಲವುಗಳಾದರೆ ತಾತ್ಕಾಲಿಕವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿಕೊಳ್ಳಬಹುದಾಗಿತ್ತು. ವ್ಯಕ್ತಿಗಳು ಸ್ವಾತಂತ್ರ್ಯದಿಂದ ಸಂಕಲ್ಪಿಸುವ ಕಾರ್ಯಗಳಿಗೆ ಪ್ರಕೃತಿಯು ನೆರವಾಗುವಂತೆ ಅಹಲ್ಯೆಗೂ ಪ್ರಕೃತಿ ಸಹಾಯವು ದೊರೆಯುತ್ತಿತ್ತು. ಆದರೆ ಈ ಋಣವನ್ನು ಬೇರುಸಹಿತ ಕಿತ್ತುಹಾಕುವ ಉದ್ದೇಶದಿಂದ ಗೌತಮನು ತೀವ್ರವಾದ ನೀತ್ಯನುಶಾಸನ ಮತ್ತು ಶಿಕ್ಷಣ ರೂಪವಾದ ಸಂಸ್ಕೃತಿಯ ಪ್ರಯೋಗವನ್ನು ಮಾಡಿದನು. ಈ ಪ್ರಯೋಗಕ್ಕೆ ಸಿಕ್ಕಿದ ಪವಿತ್ರಳಾದ ಅಹಲ್ಯೆಯ ಇಂದ್ರಿಯಗಳೂ ಮನಸ್ಸೂ ಶರೀರವೂ ಸಹ ಚೈತನ್ಯವಿಲ್ಲದಂತಾಗಿ ಸ್ಥಾಣುವಿನಂತೆ, ಶಿಲೆಯಂತೆ ಜಡತ್ವವನ್ನು ಹೊಂದಿದುವು.*

ಆಕೆಯ ಮನಸ್ಸು ಕಳ್ಳತನದಿಂದ ಋತಕ್ಕೆ ವಿರೋಧವಾಗಿ ಪ್ರವರ್ತಿಸಿ ಮೋಹಕ್ಕೆ ಬಲಿಯಾದುದರಿಂದ ರಾಜನೀತಿಗೆ ಅನುಗುಣವಾಗಿ ಶಂಖಮುಹರ್ಷಿಯಂತೆ ಪ್ರಾಯಶ್ಚಿತ್ತರೂಪವಾದ ದಂಡವನ್ನು ಹೊಂದಿ ಅಪರಾಧವನ್ನು ಹೋಗಲಾಡಿಸಬೇಕಾಗಿದ್ದಿತು. ಹೆಂಗಸಾದುದರಿಂದ ರೂಪವನ್ನು ಮರೆಮಾಚಿ ರಾಜಕುಮಾರನ ಪಾದತಾಡನದಿಂದ ಪುನೀತಳಾಗುವ ಸನ್ನಿವೇಶವನ್ನು ಪ್ರಕೃತಿಯು-ವಿಧಿಯು ಒದಗಿಸಿತು. ಋತವೂ ಅನುಗ್ರಹಿಸಿತು. ಬಂಧನದಿಂದ ಮುಕ್ತಳಾದಳು. ಅಹಲ್ಯೆ, ಗೌತಮ ಇತ್ಯಾದಿಗಳು ಆಯಾ ಗುರಿ, ಕರ್ಮಶಕ್ತಿಗಳನ್ನು ಹೊಂದಿದ ಜ್ಞಾನೇಂದ್ರಿಯ ನರಗಳು ಎಲ್ಲ ಶರೀರಗಳಲ್ಲಿಯೂ ಇದ್ದು ಕಾಲೋಚಿತವಾದ ವ್ಯಾಪಾರಗಳನ್ನು ನಡೆಸುವುವು.

ಮಿತಿಯನ್ನು ಬೋಧಿಸುವ ರಾಜನೀತಿ ಶಾಸ್ತ್ರದ ಪರಿಜ್ಞಾನವಿಲ್ಲದಿರುವ ಜನಗಳಿರುವ ದೇಶದಲ್ಲಿ ಇಂತಹ ಪರಿಸ್ಥಿತಿಗಳು ಇರುತ್ತವೆ. ಪ್ರಾಣಿವರ್ಗದಲ್ಲಿರುವಂತೆ ವಿವೇಕವಿಲ್ಲದೆ, ಇಂದ್ರಿಯ ಪ್ರೀತಿಗೆಂದು ವಿವಾಹಾದಿ ಸಂಬಂಧಗಳನ್ನು ಉದಾಸೀನತೆಯಿಂದ ನೋಡುವುದು ಮಾನವತೆಯಲ್ಲ. ವಿವೇಕಯುತ ವಿವಾಹ ಸಂಸ್ಕಾರಗಳು ಹರಡುವಂತೆ ನೀತ್ಯನುಶಾಸನದ ಸತ್-ಆವರಣಗಳನ್ನು ಕಲ್ಪಿಸುವ ಹೊಣೆಗಾರಿಕೆಯಿಂದ

* ನರಗಳ ವ್ಯಾಪಾರವು ನಿಂತು ಜ್ಞಾನವು ಮರೆಯಾಗುವುದಕ್ಕೆ ಪ್ರಯೋಗಿಸುವ ಔಷಧಿಯನ್ನು ಈಗ [illegible] ರುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ಣಭಾವವಾಗಿ ಎಚ್ಚೆತ್ತುಕೊಳ್ಳುವ ಅಥವಾ ಎಚ್ಚರಿಸುವ ರಾಜನೀತಿ ಶಾಸ್ತ್ರವು ಸಮಸ್ತವಿಷಯದಲ್ಲಿಯೂ ನೇತೃವೂ ಉನ್ನೇತೃವೂ ಆಗಿರುತ್ತದೆ. ಬ್ರಾಹ್ಮೀ ಸಂಸ್ಕೃತಿಯಲ್ಲಿ ಇಂತಹ ಚಮತ್ಕೃತಿಗಳು ಹೇರಳವಾಗಿರುವುವು. ಅವುಗಳ ತಿಳಿವಳಿಕೆ ಮತ್ತು ಅನುಷ್ಠಾನಗಳು ಜನಸಾಮಾನ್ಯದಲ್ಲಿ ಉಂಟಾಗಲು ಪ್ರಭುತ್ವತಕ್ತೆಯುಳ್ಳ ಪ್ರಜೆಗಳೆಲ್ಲರೂ ಪಂಚವಲಯ ರಾಜ್ಯಶಾಸನಗಳನ್ನು ಗೊತ್ತುಮಾಡಿಕೊಳ್ಳಬೇಕಾಗಿರುತ್ತದೆ.

## ಋಣಾನುಭವದ ಸಂಘಟನೆ

ವ್ಯಕ್ತಿಗಳ ಮರಣದ ಸಮಯದಲ್ಲಿ ಸಾಯುವ ವ್ಯಕ್ತಿಗೂ ಆ ವ್ಯಕ್ತಿಗೆ ಸಂಬಂಧಪಟ್ಟ ದೇಹಿಗಳಿಗೂ ಇರುವ ಋಣವು ಪರಿಹಾರವಾಗುವ ಸಂವಿಧಾನದಲ್ಲಿ ಚಿತ್ರವಿಚಿತ್ರವಾದ ಘಟನೆಗಳುಂಟಾಗುವುದನ್ನು ಆ ಸನ್ನಿವೇಶಕ್ಕೆ ಒಳಗಾದ ಬಹುಜನರು ನೋಡಿ ತಿಳಿದಿರುವರು. ಜೀವಗಳ ಈ ಸಂಘಟನೆಗಳಿಗೆ ಸೇವಕಳಾದ ವಿಧಿ-ಪ್ರಕೃತಿಯು ತಕ್ಕ ಸಂವಿಧಾನಗಳನ್ನು ಏರ್ಪಡಿಸುವುದು. ನಿರ್ದಿಷ್ಟವಾದ ಮತ್ತು ಅನಿರ್ದಿಷ್ಟವಾದ ಘಟನಾಘಟನೆಗಳು ನಡೆದು ಋಣ ಪರಿಹಾರಕ್ಕೆ ಅವಕಾಶವಾಗುವುದು.

ವಿಷಮಯವಾದ ವಸ್ತುವಿನ ವಿಷಪ್ರಭಾವವನ್ನು ತಿಳಿಯದೆ ಆಪಾತತಃ ಕಾಣುವ ಬೆಡಗಿಗೆ ಬೆರಗಾಗಿ ಕಾಮಿಸಿ ಋಣವನ್ನು ಕಲ್ಪಿಸಿಕೊಳ್ಳುವ ಸಂಭವವಿರುತ್ತದೆ. ದುಷ್ಟಫಲಾನುಭವವು ಅದಕ್ಕೆ ಮೂಲವಾದ ದುಷ್ಟವಾದ ಋಣದ ಫಲವಾಗಿರುತ್ತದೆ. ಮತ್ತು ಎಣ್ಣೆ-ಸೀಗೆಗಳಿಗಿರುವಂತೆ ಸ್ವಭಾವ ಗುಣಗಳ ಕಾರಣವೇ ಮೊದಲಾದ ಸನ್ನಿವೇಶಗಳಿಂದ ಉಂಟಾಗುವ ಸಂಬಂಧದಿಂದ ದ್ವೇಷ್ಯ ವಸ್ತುವಿಗೆ ತಿಳಿಯದಂತೆಯೇ, ಋಣವು ಕಲ್ಪಿತವಾಗುವುದು. ಮತ್ತು ಋಣವು ಆ ವಸ್ತುವನ್ನು ಫಲಕ್ಕೆ ಗುರಿಪಡಿಸುವುದು; ಅಂತೆಯೇ ಈ ಋಣವೇ ವಿಪ್ರತಿಫಲಕ್ಕೂ ಗುರಿಮಾಡುವುದು.

ಆಂತರಂಗಿಕವಾದ ಮತ್ತು ಪ್ರಕರ್ಷವಾದ (Intensive) ಮೈತ್ರೀ, ಭಕ್ತಿ, ಸ್ನೇಹ ಅನುರಾಗಗಳೆಂಬ ಋಣಭಾವನೆಗಳು ಅವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಿಗೆ ಲಕ್ಷ್ಯರಾದವರ ಹೃದಯವನ್ನು ಪ್ರವೇಶಿಸಿ ಕರ್ತವ್ಯ ತತ್ಪರತೆಯನ್ನು ಪ್ರೇರಿಸುವುವು. ಹೆಂಗಸರೂ ಸಹ ಹೃದಯದ ( ಕರುಳಿನ ? ) ಈ ಬಗೆಯ ವ್ಯಾಪಾರಗಳನ್ನು ವಿಶೇಷವಾಗಿ ಪರಿಭಾವಿಸಿ ಕಾರ್ಯಮುಖರಾಗುವರು. ಹೀಗೆ ಋಣ ಶಕ್ತಿಯು ಸಂಕಲ್ಪಸಿದ್ಧಿಯನ್ನೂ ಫಲವನ್ನೂ ನಾನಾವಿಧವಾಗಿ ಉಂಟುಮಾಡಿರುವುದಕ್ಕೆ ಇತಿಹಾಸಗಳಲ್ಲಿಯೂ ಆಧುನಿಕ ಜೀವನದಲ್ಲಿಯೂ ನಿದರ್ಶನಗಳಿವೆ.*

ಒಂದು ವಿಧವಾದ ಋಣ (ಸಂಬಂಧದಿಂದ) ಒಂದು ವ್ಯಕ್ತಿಯು ಒಂದು ಕಡೆ ಶರೀರವನ್ನು ಹೊಂದುವುದು. ಆ ಋಣವು ಆ ವಿಧವಾದ ಶರೀರ ಪ್ರಾಪ್ತಿಯಲ್ಲಿ ಮಾತ್ರವೇ ಕೊನೆಗಂಡು ಹುಟ್ಟಿದವನ ಹಿಂದಿನ

---

* ಶ್ರೀ ಶೃಂಗೇರಿ ಶ್ರೀ ಜಗದ್ಗುರು ಶ್ರೀ ಶಿವಾಭಿನವ ನೃಸಿಂಹ ಭಾರತೀ ಜಗದ್ಗುರು ಭಗವತ್ಪೂಜ್ಯಪಾದರು ರಾಮೇಶ್ವರಕ್ಕೆ ದಯಮಾಡಿಸಿದ್ದಾಗ ಶೃಂಗೇರಿಯಲ್ಲಿದ್ದ ಸಹಾಯಕ ಶಿಷ್ಯನ ಉಪಸ್ಥಿತಿಯನ್ನು ಸ್ಮರಿಸಿದರು. ಇದು ಋಣ ಶಕ್ತಿಯಾಗಿ ಪರಿಣಮಿಸಿ, ಶೃಂಗೇರಿಯಲ್ಲಿದ್ದ ಆ ಶಿಷ್ಯನ ಹೃದಯವನ್ನು ಪಲಕಿತು. ಶ್ರೀಗುರುನಾಥನ ಅನುಗ್ರಹದಿಂದ ಹೃದಯ ವಿಕಾರದ ಮರ್ಮವನ್ನು ತಿಳಿದು, ಶ್ರೀಜಗದ್ಗುರುಗಳು ಕಳುಹಿಸಿರುವ ಸಂದೇಶಾಜ್ಞೆಯನ್ನು ಶಿರಸಾ ಧರಿಸಿ ಹೊರಟು ರಾಮೇಶ್ವರದಲ್ಲಿ ಶ್ರೀ ಜಗದ್ಗುರು ಪಾದ ಸಂದರ್ಶನವನ್ನು ಮಾಡಿದರು. ತಮ್ಮ ಸಂದೇಶವನ್ನು ಅರ್ಥಮಾಡಿಕೊಂಡು ಬಂದ ಶಿಷ್ಯನನ್ನು ಅಭಿನಂದಿಸಿ ಆಶೀರ್ವದಿಸಿದರು. ಎಂದು ಆ ಚರಿತ್ರೆಯಲ್ಲಿ ತಪೋ ಮಹಿಮೆಯನ್ನು ವರ್ಣಿಸಿರುತ್ತಾರೆ

ಶ್ರೀ ಶ್ರೀ ಯೋಗಾನಂದ ಅಹೋಬಲ ನರಸಿಂಹ ಶಾಸ್ತ್ರಿಗಳು ಸ್ವ-ಗೃಹ ಯಜ್ಞಕಾರ್ಯನಿರ್ವಾಹಕ್ಕೆ ತಮ್ಮ ಪುತ್ರರ ಸಾನ್ನಿಧ್ಯವನ್ನು ನೆನೆಸಿಕೊಂಡ ಮಾತ್ರದಲ್ಲಿಯೇ ಅದು ದೂರದಲ್ಲಿದ್ದ ಪುತ್ರರ ಹೃದಯದಲ್ಲಿ ಕೆಲಸ ಮಾಡಿದ ಪರಿಣಾಮವಾಗಿ, ಅವರುತೀರ್ಥರೂಪರ ಆಜ್ಞೆಯನ್ನು ಪರಿಪಾಲಿಸಲು ಹೊರಟು ಸ್ವಗ್ರಾಮಕ್ಕೆ ಹಿಂತಿರುಗಿ ಕರ್ತವ್ಯ ಕರ್ಮದಲ್ಲಿ ಭಾಗಿಗಳಾಗಿ ಪ್ರೀತಿಯನ್ನು ... ಮಾತ್ರವಾಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸನ್ನಿವೇಶಪ್ರಾಬಲ್ಯದಿಂದಲೂ ತಾತ್ಕಾಲಿಕ ಸನ್ನಿವೇಶಪ್ರಾಬಲ್ಯದಿಂದಲೂ ಹೊಸದಾದ ಅಥವಾ ಹೊಸದೆಂದು ಕಂಡರೂ ಆ ವ್ಯಕ್ತಿಯ ಹಿಂದಿನ ಯಾವುದೋ ಬೇರೆಯಾದ, ವಾಸನೆಯನ್ನು ಮುಂದುವರಿಸುವ ಋಣ ಕಲ್ಪನೆಯನ್ನು ಆ ಶರೀರದಲ್ಲಿ ಹೊಂದುವ ಅವಕಾಶ ದೊರೆಯಬಹುದು. ಇದು ಸುತ್ತುಮುತ್ತಲಿನವರಿಗೆ ವಿಚಿತ್ರವಾಗಿ ಕಂಡುಬರುವುದರಲ್ಲಿ ಆಶ್ಚರ್ಯ ವೇನೂ ಇಲ್ಲ. ಸಮಾಜ, ಪ್ರದೇಶ, ದೇಶಗಳ ಹಿತಕ್ಕೆ ವಿರೋಧವಾಗಿ ಕರ್ತವ್ಯ ಕರ್ಮವು ತಲೆಕೆಳಕಾದಂತೆ ಭಾಸವಾಗಬಹುದು; ಆದರೆ ಪ್ರಕೃತಿಲೀಲೆಯಲ್ಲಿ ದೇಹಿಗೆ ವಿಚಿತ್ರವಾದ ಋಣವು ಸಂಘಟನೆಯಾಗಿ ಆ ಋಣಶಕ್ತಿಯ ಪ್ರಭಾವದಿಂದ ಅದಕ್ಕೆ ತಕ್ಕ ಸಂಕಲ್ಪವ್ಯಾಪಾರಗಳು ನಡೆಯಬೇಕಾಗಿರುತ್ತವೆ. ಹಿರಣ್ಯಕಶಿಪುವಿನ ಸಂಪ್ರದಾಯಕ್ಕೂ ಪ್ರಹ್ಲಾದನ ವರ್ತನೆಗೂ (ನೂತನ ಸಂಪ್ರದಾಯ ?) ಉಂಟಾದ ವ್ಯತ್ಯಾಸಕ್ಕೆ ರಹಸ್ಯವಾಗಿ ಸಂಭವಿಸಿದ ಸಂಘಟನೆ ಋಣವೇ ಕಾರಣ. ಆಕಸ್ಮಿಕ ವಾಗಿ ದರ್ಶನ ಸ್ನೇಹಗಳು ಲಭಿಸಿದಾಗ ವ್ಯಕ್ತಿಗಳಿಗೆ ಪರಸ್ಪರ ಋಣವು ಬೆಳೆಯುವುದು. ಹೀಗೆ ಹಿಂದಿನ ಸಂಬಂಧವನ್ನು ಹೊಂದದಿದ್ದರೂ ಮುಂದೆ ನಡೆಯಬೇಕಾಗಿರುವ ಪ್ರಕೃತಿ ಲೀಲೆಗೆ ಬೀಜರೂಪವಾದ ಋಣಶಕ್ತಿಯು ಆರಂಭವಾಗುವುದು.

ದಯೆಯ, ಪ್ರೇಮದ ಮತ್ತು ಆವೇಶದ ಉದ್ವೇಗ ಉಲ್ಬಣಗಳ ಸಂದರ್ಭದಲ್ಲಿ ಪ್ರತಿಜ್ಞೆಗಳು ನಡೆಯುವುವು. ಅವುಗಳನ್ನು ಅನುಷ್ಠಾನಕ್ಕೆ ತರುವ ವೇಳೆಯಲ್ಲಿ ಆ ಸಂಘಟನೆಯು ಆಗಿನ ಕರ್ತವ್ಯಕರ್ಮ ಪದ್ಧತಿಗೆ ವಿರುದ್ಧವೆಂತಲೂ ಕಂಡುಬರುವುದು. ಆದರೂ ಪ್ರತಿಜ್ಞಾ ಋಣವು ಅಪ್ರತಿಹತವಾದುದಾಗಿ ಎಲ್ಲವನ್ನೂ ಬಾಧಿಸಿ ಪ್ರತಿಜ್ಞಾ ಪೂರಣ ನ್ಯಾಯ ವನ್ನೇ ಮುಂದುಮಾಡಿ ಅದೇ ಕರ್ತವ್ಯ ಕರ್ಮವಾಗಿ ಪರಿಣಮಿಸುವುದು. ಆದುದರಿಂದ ಪ್ರತಿಜ್ಞಾ ಋಣ ಪರಿಪಾಲನೆಯು ಸ್ವಕರ್ತವ್ಯ ಕರ್ಮದ ಮಟ್ಟದಲ್ಲಿ ಒಂದು ವ್ಯಕ್ತಿಯ 'ಸ್ವಾತಂತ್ರ್ಯ' ಶಕ್ತಿಯ ವ್ಯಾಪಾರಕ್ಕೆ ತಕ್ಕ ಫಲಾಫಲಗಳನ್ನು ಹೊಂದಬೇಕಾಗುವುದು. (ವಾಲ್ಮೀ-ಶ್ರೀರಾಮ ಪುಟ 28)

ಪ್ರಾಪಂಚಿಕವಾಗಿ ಮತ್ತು ವ್ಯಾವಹಾರಿಕವಾಗಿ ಕೀಳುಮಟ್ಟದ್ದೆಂದು ದುರಭಿಮಾನದಿಂದ ಹೇಳಬಹುದಾದ ಗೃಹ (ಕುಲ) ದಲ್ಲಿ ಅವತರಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿಯ ಕುಲದ ಋಣವು ಕೇವಲ ಜನ್ಮಪ್ರಾಪ್ತಿಯಲ್ಲಿ ಪರಿಹಾರವಾಗಬಹುದು ; ಮತ್ತು ಅತ್ಯುನ್ನತವಮಟ್ಟದ ಸ್ವಸ್ವರೂಪಜ್ಞಾನವು-ಮುಕ್ತಿಯು-ಶಾಂತಿಯು ಉಂಟಾಗಿ ತನ್ಮೂಲಕ ಇತರರಿಗೂ ಶಾಂತಿಸುಖವು ಪ್ರಸಾರವಾಗಬಹುದು. ಅಥವಾ ಕೀಳು ಮಟ್ಟದ ಕರ್ಮಗಳ ಹಂತಕ್ಕೆ ಇಳಿದು ಹೋಗಬಹುದು. ಮಗನ ಕರ್ತವ್ಯ ಕರ್ಮವು ತಂದೆಯ ಅಥವಾ ಗೃಹದ ಕರ್ತವ್ಯಕರ್ಮಕ್ಕಿಂತ ಬೇರೆಯಾಗಿ ತೋರುವುದಕ್ಕೂ ಋಣಪರಿಮಿತಿಯೇ ಕಾರಣ. ಪ್ರಹ್ಲಾದನು ಗರ್ಭದಲ್ಲಿರುವಾಗಲೇ ತನ್ನ ಕುಲಕ್ಕೆ ಬೇರೆಯಾದ ಮತ್ತು ತನ್ನದೇ ಆದ ಪ್ರಬಲವಾದ ಋಣ ಸಂಬಂಧವನ್ನು ಆತನಿಗೆ ದೊರಕಿಸುವ ಪರಿಸ್ಥಿತಿಯುಂಟಾಗಿತ್ತು. ವ್ಯಾವಹಾರಿಕ ದೃಷ್ಟಿಯಿಂದ ಉನ್ನತ ಮಟ್ಟದಲ್ಲಿದ್ದ ಜಗನ್ನಾಥ ಪಂಡಿತನಿಗೆ ತನ್ನ ಸಮಾಜ ವ್ಯವಹಾರ ಸಂವಿಭಾಗದ ದೃಷ್ಟಿಯಿಂದ ಕೀಳೆಂದು ಭಾವಿಸಲ್ಪಟ್ಟಿದ್ದ ವ್ಯಕ್ತಿಯ ಸಂಸರ್ಗವುಂಟಾಗಿತ್ತೆಂಬ ಕಥೆಯಿದೆ. ಈ ಋಣವು ಹಿಂದಿನಿಂದ ಬಹು ಕಾಲದಿಂದ ಬೆಳೆದುಬಂದುದಾಗಿರಬಹುದು, ಅಥವಾ ಅತ್ಯುತ್ಕಟವೂ ತಾತ್ಕಾಲಿಕವೂ ಆಗಿರಬಹುದು. ಅಪ್ರತಿಹತವಾದ ಸಂಕಲ್ಪವ್ಯವಸಾಯಗಳಿಂದ ಈ ಬಂಧನವು ಸಂಘಟಿತವಾಗಿರಬಹುದು. ಆದರೂ ಜಗನ್ನಾಥ ಪಂಡಿತನ ಅಂತರಂಗಿಕವಾದ ಬ್ರಹ್ಮಶಕ್ತಿಯ (ಯೋಗದ-ತಪಸ್ಸಿನ) ವ್ಯಾಪ್ತಿಯು ಕುಗ್ಗದಿದ್ದುದು ಆಶ್ಚರ್ಯ ಜನಕವಾದ ಸಂಗತಿ. ಹೀಗೆ "ಹೊರಗೆ ಕಾಣುವುದೊಂದು ; ಒಳಗಿರುವುದೇ ಒಂದು. ಒಳಗೆ ತೋರುವುದೊಂದು, ಹೊರಗೆ ಇರುವುದೇ ಮತ್ತೊಂದು" ಎಂದು ಜನಗಳಿಗೆ ತಿಳಿದಿರುವಂತೆ ಋಣದ ಸ್ಥಿತಿಗತಿಗಳೂ ಸಂಕಲ್ಪವ್ಯವಸಾಯಗಳೂ ಗಹನವಾಗಿರುತ್ತವೆ. ವಿದೇಶೀಯ ಸಹವಾಸ, ವಿದೇಶವಾಸ ವಿದೇಶ ಶಾಸ್ತ್ರಾಭ್ಯಾಸಗಳಿಗಾಗಿ ಜ್ಞಾನೇಚ್ಛಾ ಶಕ್ತಿಗಳ ಪ್ರಯೋಗದಿಂದ ಋಣವನ್ನು ಕಲ್ಪಿಸಿಕೊಂಡವರು ವಿದೇಶವಾಸವನ್ನು ಅನುಭವಿಸಲು, ಪ್ರಕೃತಿಯ ಸನ್ನಿಧಾನವು ನೆರವಾಗುವುದು ; ಮತ್ತು ಪ್ರೋತ್ಸಾಹಿಸುವುದು. ತತ್ಕಾಲದಲ್ಲಿ ವಿಫಲವಾದರೆ ಅನ್ಯ ಜನ್ಮಗಳಲ್ಲಿಯಾದರೂ ಸಾಧಿತವಾಗಲೇ ಬೇಕಾಗುವುದು. ಆಗ್ಗೆ ಇದು ದೇಹಿಯ ಕರ್ತವ್ಯಕರ್ಮಗಳ ಪಟ್ಟಿಯಲ್ಲಿ ಅಡಕವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಋಣವಿಮೋಚನ ಘಟನಾ ವೈಚಿತ್ರ್ಯ

ವೃಕ್ಷದ ಮೇಲೆ, ವೃಕ್ಷದ ಕೊಂಬೆಯನ್ನು ಆಶ್ರಯಿಸಿ ಬೆಳೆಯುವ ಪರತಂತ್ರ ಜೀವಿಗಳೆಂಬ ಸಸ್ಯಗಳ ಜೀವಿಕೆಯು ಋಣದ ಮರ್ಮವನ್ನು ಒಳಗೊಂಡಿರುತ್ತದೆ. ಕಂಬಳಿ ಹುಳುಗಳಾಗಿದ್ದು ರೆಕ್ಕೆಯೊಡಗೂಡಿ ಹಾರುವ ಪತಂಗ (ಚಿಟ್ಟೆ) ಹುಳುಗಳ ರೂಪದಲ್ಲಿ ದೇಹಿಗಳು ಋಣವನ್ನು ಹೊರಿಸುವ ಮತ್ತು ಹರಿಸುವ ವಿಚಿತ್ರ ಸೃಷ್ಟಿ ಕ್ರಮವು ವಿಮರ್ಶಾತ್ಮಕ ವಾದುದು. ರೆಕ್ಕೆಗಳ ವಿವಿಧವರ್ಣಗಳಿಂದಲೂ ಹಾರಾಟದಿಂದಲೂ ಪ್ರೇಕ್ಷಕರಿಗೆ ಆನಂದವೀಯುವುದರಿಂದಲೇ ಋಣಮುಕ್ತಿಯನ್ನು ಹೊಂದು ವುದು. ಕಾಗೆ, ಕೋಗಿಲೆ, ನವಿಲು, ಕೋಳಿ ಮೊದಲಾದುವುಗಳು ತಮ್ಮ ತಮ್ಮ ರೂಪು, ಧ್ವನಿ, ಕಾರ್ಯಗಳಿಂದ ಪ್ರತ್ಯಕ್ಷವಾಗಿಯೂ ಪರೋಕ್ಷ ವಾಗಿಯೂ ಪರಂಪರೆಯಾಗಿಯೂ ಜನೋಪಕಾರಕಾರ್ಯಗಳನ್ನು ಮಾಡಿ ಋಣ ಬಂಧನವನ್ನು ಕಳೆದುಕೊಳ್ಳುವುವು. ಕೇವಲ 'ಸ್ಥಿತಿ' (= ಇರುವಿಕೆ) ಯಿಂದಲೇ ಪರಮೋಪಕಾರ ಮಾಡಿ ಜನ್ಮ ಸಾರ್ಥಕ್ಯ ಮಾಡಿಕೊಳ್ಳುವುದರಿಂದ ಅಚೇತನ ಮತ್ತು ಚೇತನ ವಸ್ತುಗಳು ಮುಕ್ತವಾಗುವುವು.

## ಜನ್ಮ- ಘಟನೆ

ಸ್ತ್ರೀಯರಾಗಲೀ ಪುರುಷರಾಗಲೀ ಮಕ್ಕಳಾಗಲೀ ವರ್ಣಿಸಲಸದಳ ವಾದ ಋಣಭಾವ-ಸಂಬಂಧಗಳನ್ನು ಪ್ರಪಂಚದ ಜೀವರೊಡನೆ-ವಾ- ವಸ್ತುಗಳೊಡನೆ ಹೊಂದಿರುವರು. ವಿಚಿತ್ರವಾದ ಈ ಬಗೆಯ ಋಣವನ್ನು ಹೊರಿಸುವ ಮತ್ತು ಹರಿಸುವ ಜೀವನ ತತ್ವಕ್ಕೆ ಅನುಗುಣವಾಗಿ ಕರುಳಿ ನಲ್ಲಿ ಉತ್ಪತ್ತಿಯಾಗಿ ಪರಾಶ್ರಯದಲ್ಲಿ ಬದುಕಿ ಆಶ್ರಯದಾತರ ಅನಾರೋಗ್ಯಕ್ಕೆ ಕಾರಣಗಳಾದ ಜಂತುಗಳ (Round worms) ಜೀವನವೂ ಆಶ್ಚರ್ಯಜನಕವಾದುದು. ಕಿವಿಯಿಂದ ಕೇಳದ ಕಣ್ಣಿಂದ ನೋಡದ ದೇಶ ವಿದೇಶಗಳ ಆಹಾರಪದಾರ್ಥಗಳ-ನೀರಿನ-ಮೂಲಕ ಜೀವಾಣುಗಳು ಋಣಕ್ಕನುಸಾರವಾಗಿ ಶರೀರವನ್ನು ಹೊಕ್ಕು ಉಪಾಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ಧರಿಸಿ ಬೆಳೆದು ಜೀವಿಸುತ್ತವೆ. ಜೀವಾವಧಿ ಅಂತಶ್ಶತ್ರುಗಳಂತಿ ರುವ ಈ ಪರತಂತ್ರ ಜೀವಿಗಳು ಇತರ ಜೀವಿಗಳ ಶರೀರವನ್ನು ಹೊಕ್ಕು ಬೆಳೆಯುತ್ತಾ ಆನಂದದಿಂದ ಆಹಾರವನ್ನು (ರಕ್ತವನ್ನು-ಅಸುವನ್ನು) ಹೀರುತ್ತಾ ಇರುವ ಮರ್ಮವನ್ನು ಋಣವು ತಿಳಿಸುವುದು. ಸಾವಿರಗಟ್ಟಲೆ ಜೀವಗಳು ಈ ಹುಳುಗಳ ಶರೀರವನ್ನು ಧರಿಸಿ ಏಕ ಕಾಲದಲ್ಲಿ ಮತ್ತೊಂದು ಶರೀರಿಯ ಕರುಳಿನಲ್ಲಿ ವಾಸ ಮಾಡುವುದರ ಋಣ ತತ್ವವು ನಾಚಿಕೆಯನ್ನುಂಟುಮಾಡಿ ವಿವೇಕವುಳ್ಳವರನ್ನೂ ಸಹ ನಿಸ್ತೇಜಸ್ಕರನ್ನಾಗಿ ಮಾಡಿ "ಕಾರ್ಪಣ್ಯದೋಷೋಪಹತ" ರನ್ನಾಗಿ ಮಾಡಿಬಿಡುವುದು. ಈ ಜಂತುಗಳ ಆಧಿಕ್ಯದಿಂದ ಎದೆ ಪಂಜರವು ಕೆಟ್ಟು ಕ್ಷಯರೋಗಕ್ಕೆ ಮುಖ್ಯ ಕಾರಣವಾಗುತ್ತದೆ. ಈ ಜಂತುಗಳಿಗೂ ಇವುಗಳನ್ನು ಒಳ ಗೊಂಡ ಶರೀರಿಗೂ ಇರುವ ಋಣವು ಪರಿಹಾರವಾಗುವ ವರೆಗೂ ಆ ಋ ಣಾನುಬಂಧಪರಿಮಿತಿಯಲ್ಲಿ ಅವುಗಳಿಗೆ ಪೋಷಣೆಯು ದೊರೆಯುವುದು. ಕ್ರಿಮಿಗಳು ವೃದ್ಧಿಯನ್ನು ಹೊಂದುವುವು. ಆಶ್ರಯದಾತನು ಬಾಧೆಗೆ ಗುರಿಯಾಗುವನು. ಪ್ರಕೃತಿ-ವಿಧಿಯು (ಕರ್ಮಫಲವು) ಅನುಗ್ರಹಿಸಿ ಜಂತುಜೀವನಕ್ಕೆ ಸಹಕರಿಸುವುದು. ಋಣವು ಪರಿಹಾರವಾದನಂತರ ತಕ್ಕ ಪ್ರಯತ್ನಗಳು ಸ್ವತ ಏವ ನಡೆದು ಜಂತುಬಾಧೆಯು (?) ನಿವೃತ್ತಿ ಯಾಗುವುದು. ಋಣಶೇಷವನ್ನು ಔಷಧಾದಿ ಪ್ರಯೋಗರೂಪಗಳಲ್ಲಿ ಹೋಗಲಾಡಿಸಿಕೊಂಡು ಕ್ಷಿಪ್ರವಾಗಿ ದೇಹಿಗಳು ಜಂತು ಪೋಷಣೆ ಎಂಬ ಹೊಣೆಗಾರಿಕೆಯ ದೆಸೆಯಿಂದ ಬಿಡುಗಡೆ ಹೊಂದಬಹುದು.

ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಕ್ರಿಮಿ ಕೀಟಾದಿಗಳ ಮತ್ತು ಮಾನವರ ಸಮೂಹದಲ್ಲಿ ಕಾಯಕ್ಷೋಭೆ ಚಿತ್ತಕ್ಷೋಭೆಗಳಾಗು ವಂತೆ ಋತಕ್ಕೆ ವಿರೋಧವಾಗಿ ನಡೆದುಕೊಳ್ಳುವುದರಿಂದ ವಿಪ್ರತಿಕ್ರಿಯೆಯು ಋಣವಾಗಿ ಪರಿಣಮಿಸುತ್ತದೆ. ವಿರೋಧಕ್ರಿಯೆಗೆ ಪಾತ್ರರಾದ ದೇಹಿ ಗಳು ಕರ್ತೃವಿನ ಕರುಳನ್ನು ಕಿತ್ತುಕೊಳ್ಳುವುದೆಂಬ ವಿಪ್ರತಿಕ್ರಿಯಾಫಲ ವನ್ನು ಕರ್ತೃವು ಅನುಭವಿಸಬೇಕಾಗುವುದು.* ಈ ವಿಧವಾಗಿ ಕಲ್ಪನೆ

* ನ[illegible]ದೇ.

CC-0. In Public Domain. Gurukul Kangri Collection, Haridwar.

Digitized by Arya Samaj Foundation Chennai and eGangotri

ಯಾಗುವ ಋಣವನ್ನು ಸಮೂಲವಾಗಿ ಕಿತ್ತುಹಾಕುವ ಸಂಸ್ಕೃತಿ ವಿಧಾನಗಳನ್ನು ದೇಹಿಗಳ ಸುಖಶಾಂತಿಗಾಗಿ ಗೊತ್ತುಮಾಡಿರುತ್ತಾರೆ.

ಪ್ರಕೃತಿಯ ಋತು–ವಾಯುಗುಣ–ವನ್ನು ಅನುಸರಿಸಿ ಕ್ರಿಮಿಗಳೆನಿಸುವ ದೇಹಿಗಳು ಗುಂಪುಗುಂಪಾಗಿ ಅವತರಿಸುವುವು; ಗುಂಪುಗುಂಪಾಗಿಯೇ ಆ ಬಗೆಯ ದೇಹಗಳಿಂದ ಮುಕ್ತವಾಗುವುವು. * (ಬೇಸಗೆಕಾಲದಲ್ಲಿ ಕಾಣುವ ಸಣ್ಣ–ಹಗಲು ಸೊಳ್ಳೆಗಳೂ) ಮೊದಲಾದುವು.

ಋಣಾನುಬಂಧ ಬಂಧನಕ್ಕೆ ತಕ್ಕಂತೆ, ಒಂದೇ ಆತ್ಮವು ತಗಣೆಯ ಶರೀರವನ್ನು ಧರಿಸಿ ರಾಜಕುಲದಲ್ಲಿ ಶ್ರೀಮಂತರ ಮನೆಯಲ್ಲಿ ಅವತರಿಸಬಹುದು; ಸೊಳ್ಳೆಯಾಗಬಹುದು; ಬೇಸಗೆಯ ಹಗಲುಸೊಳ್ಳೆಯಾಗಬಹುದು; ಹಲ್ಲಿಯಾಗಬಹುದು; ಹುಲಿಯಾಗಬಹುದು; ಆನೆ, ಸರ್ಪ, ನಾಯಿ, ಬೆಕ್ಕು ಇತ್ಯಾದಿಗಳಾಗಬಹುದು; ಶ್ರೀಮಂತನಾಗಬಹುದು; ಭಿಕ್ಷುಕನಾಗಬಹುದು; ತಪಸ್ವಿಯಾಗಬಹುದು; ಜೀವನ್ಮುಕ್ತನೂ ಆಗಬಹುದು; ವ್ಯಕ್ತಿಸ್ವಾತಂತ್ರ್ಯಶಕ್ತಿಯನ್ನು ಪ್ರಯೋಗಿಸಿ ಋಣವನ್ನು ಕಲ್ಪಿಸಿಕೊಂಡು ಸಂಕಲ್ಪಮಾಡಿದುದರಿಂದ ಅಥವಾ ಮಾಡುವುದರಿಂದ ಮತ್ತು ವಿಪ್ರತಿಕ್ರಿಯಾಫಲಗಳ ಪ್ರಭಾವದಿಂದ — ಸಮಸ್ತಜನ್ಮಗಳನ್ನು ಸರ್ವರೂ ಹೊಂದುವ ಸಂವಿಧಾನವು ನಿಷ್ಕೃಷ್ಟವಾಗಿ ಮತ್ತು ಸ್ಪಷ್ಟವಾಗಿ ಋತದಲ್ಲಿ ಅಡಕವಾಗಿರುವುದು.

ಒಬ್ಬ ದೇಹಿಯು ತಾತ್ಕಾಲಿಕ ಜೀವನದಲ್ಲಿ ಕಲ್ಪಿಸಿಕೊಂಡ ಋಣದ ಅನುಭವಕ್ಕಾಗಿ ಸಂಬಂಧಪಟ್ಟ ದೇಹಿಗಳು ಬೇರೆ ಬೇರೆ ಜನ್ಮಗಳನ್ನು ಹೊಂದಬಹುದಾದ ವಿವರವನ್ನು ಬಾಣ ಮಹಾಕವಿಯು ಕಾದಂಬರೀ ಕಥೆಯಲ್ಲಿ ಉದಾಹರಿಸಿ ನಿದರ್ಶನಗಳ ಮೂಲಕ ಸಿದ್ಧಾಂತಗೊಳಿಸಿರುತ್ತಾನೆ. ಮಹಾಶ್ವೇತೆಯ ಮೇಲಿನ ಅನುರಾಗ ಋಣವನ್ನು ಕಲ್ಪಿಸಿದ ಪುಂಡರೀಕನೂ ಆತನ ಮಿತ್ರನಾದ ಕಪಿಂಜಲನೂ ಬೇರೆ ಬೇರೆ ಜನ್ಮ

---

* ಒಂದೇ ಜನ್ಮದಲ್ಲಿ ಒಂದು ವ್ಯಕ್ತಿಗೂ ಎದುರಾಳಿಗಳಿಗೂ ಇರುವ ದ್ವೇಷಾದಿ ಸಂಬಂಧಗಳ ಮತ್ತು ಅವುಗಳನ್ನು ಪರಿಹರಿಸಿಕೊಳ್ಳುವ ಮಾರ್ಗವನ್ನು ಇದರಿಂದ ಊಹಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಗಳನ್ನು ಹೊಂದಿ ಋಣಾನುಭವಗಳನ್ನು ಪೂರ್ತಿಗೊಳಿಸಿಕೊಂಡ ಕಥಾ ವಿಸ್ತರವು ಚಮತ್ಕಾರ ಪೂರಿತವಾಗಿ ಕರ್ಮ-ಋಣ-ರಹಸ್ಯವನ್ನು ಪ್ರಕಾಶಪಡಿಸುವುದು.

ಬಾಣ ಮಹಾಕವಿಯು ಚಂದ್ರಾಪೀಡನ ಮುಖದಿಂದ ಕುದುರೆಯನ್ನು ಸಂಬೋಧಿಸಿ ಹೇಳಿಸಿರುವ "ಯೋಽಸಿ, ಸೋಽಸಿ ಮಹಾತ್ಮನ್ ನಮಸ್ತೇ, ಸರ್ವಥಾ ಮರ್ಷಣೀಯಃ ಅಪರಾಧಃ" ಎಂಬ ಸೂಕ್ತಿಯನ್ನು ವಿಶ್ವದ ಮಾನವರೆಲ್ಲರೂ ರಾಜನೀತಿಯ ದೃಷ್ಟಿಯಿಂದ ಅರಿತು ಜಾಗರೂಕರಾಗಿದ್ದು 'ಋಣ' ವಿಮೋಚನೆಗೆ ಯತ್ನಿಸಬೇಕು. ಏನೂ ತಿಳಿಯದಂತೆಯೂ ಸಾಮಾನ್ಯರಂತೆಯೂ ಇರುವ ದೇಹಿಗಳು ಋಣಾನುಭವಕ್ಕೆ ಕಾಲವು ಒದಗಿದಾಗ ಹುಲ್ಲುಕಡ್ಡಿ, ಕ್ಷೇತ್ರ, ವಾತಾವರಣ, ಮಹಾತ್ಮರ ಸಾನ್ನಿಧ್ಯ ಮೊದಲಾದ ನೆಪಗಳಿಂದ ದೋಸೆ ಮಗುಚಿದಂತೆ ಕ್ಷಣಮಾತ್ರದಲ್ಲಿ ಬೇರೆ ಜನ್ಮಗಳನ್ನು ತಾಳಿದಂತೆ ಮಹಾತ್ಮರಾಗಿ ಸಿದ್ಧಪುರುಷರಾಗಬಹುದು. ಸಿದ್ಧಪುರುಷರಾಗಿ ಋಣಾನುಬಂಧವಿದ್ದವರಿಗೆ ಜ್ಞಾನೋಪದೇಶ, ಮಂತ್ರೋಪದೇಶ, ತೀರ್ಥ, ಪ್ರಸಾದ, ಮೂಲಿಕಾ, ಭಸ್ಮಾದಿಗಳಿಂದ ಮಹಾವ್ಯಾಧಿಗಳ ಪರಿಹಾರ ಚಿಕಿತ್ಸೆಗಳನ್ನು ಮಾಡಿ ಋಣಪರಿಹಾರ ಮಾಡಿಕೊಳ್ಳಬಹುದು. ಭೂತ ಪ್ರೇತ ಪಿಶಾಚಿಗಳ ಬಾಧೆಯುಳ್ಳವರು-ಕೃತ್ರಿಮ ವಿಷಾದಿಗಳಿಗೆ ಗುರಿಯಾದವರು-ವ್ಯಾಧಿಗ್ರಸ್ತರು ಸಹ ಅನೇಕ ವಿಧವಾಗಿ ಶ್ರಮಪಟ್ಟು ಫಲವಾಗದೆ ಇದ್ದಂತೆ ಭಾವಿಸಿಕೊಂಡಿರುವಾಗ, ದುಷ್ಕರ್ಮಫಲವು ಮುಗಿದ ಕಾಲಕ್ಕೆ ಸರಿಯಾಗಿ, ಪವಿತ್ರವಸ್ತುಗಳ ಅಥವಾ ಮಹಾತ್ಮರಾಗಿದ್ದರೂ ಸಾಮಾನ್ಯರಂತೆ ಕಾಣಿಸಿಕೊಂಡಿರುವವರ ಸಂಪರ್ಕದಿಂದ ಮಣಿಮಂತ್ರೌಷಧಿ ಚಿಕಿತ್ಸೆಗಳನ್ನು ಸುಲಭವಾಗಿ ಪಡೆದು ಗುಣಹೊಂದುತ್ತಾರೆ. ಪರಸ್ಪರ ಋಣ ವಿಮೋಚನವಾಗುವುದಕ್ಕೆ ನಡೆದ ಈ ಬಗೆಯ ಘಟನೆಗಳಿಂದ ಒಂದೇ ದೇಹದಲ್ಲಿ ಪುನರ್ಜನ್ಮ-ದ್ವಿಜ ಸಂಸ್ಕಾರ-ವನ್ನು ಹೊಂದಿದಂತಾಗುವುದು. ಇಂತಹ ಸಮಯದಲ್ಲಿ ರಾಜನೀತಿಯ ಪಾತಕ್ಕನುಗುಣವಾಗಿ ಪರಸ್ಪರ ನಯಮಾರ್ಗದಲ್ಲಿ ಸೌಹಾರ್ದ ವರ್ತನೆಯಿಂದ ನಡೆದುಕೊಳ್ಳಬೇಕಾದ ಕರ್ತವ್ಯವು ದೇಹಿಗಳಿಗೆ [illegible] ವರ್ತನೆಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದನಕಾಲವನ್ನು ಕಳೆದುಕೊಂಡಾಗ ಋಣಪರಿಹಾರ ಕಾಲವು ಇನ್ನೂ ಪಕ್ವವಾಗಿಲ್ಲವೆಂಬ ರಾಜನೀತಿ ಪಾಠದಿಂದ ತಾಳ್ಮೆಯನ್ನು ಧರಿಸಿ ನಯ, ವಿನಯ, ಸದ್ವರ್ತನೆ, ಸದ್ಬುದ್ಧಿಗಳಿಂದ ಸದಾಚಾರ ಪರರಾಗಿ ಕಾದು ನಿರೀಕ್ಷಿಸಬೇಕಾಗಿರುತ್ತದೆ.

ದೇಹಿಯು ತನ್ನ ಅನುಭವಜ್ಞಾನಗಳ ಅಪೂರ್ವ ಘಟನೆಗಳಿಗೆ ಅನುಸಾರವಾಗಿ ಹೊಸ ಹೊಸ ಜನ್ಮಗಳನ್ನೂ ಮರಣಗಳನ್ನೂ ಒಂದೇ ಜನ್ಮ-ದೇಹ-ದಲ್ಲಿ ಅನುಭವಿಸುವ ಋಣಾನುಬಂಧದ ಅರಿವು ದೇಹಿಯ ವಿವೇಚನಾ ಶಕ್ತಿಯ ಮಿತಿಯಲ್ಲಿರುತ್ತದೆ.

ಸೂರ್ಯನ ಬೆಳಕು ಕಾಣು-ಉದಯವಾಗು-ವುದೂ ಮರೆಯನ್ನು (ಅಸ್ತವನ್ನು ) ಹೊಂದುವುದೂ ಜನನ ಮರಣಗಳೇ ಆಗಿ ಚರಾಚರಗಳೆಲ್ಲವೂ ನಿತ್ಯಜನ್ಮ, ನಿತ್ಯಮರಣ, ಪುನರ್ಜನ್ಮ ಪುನರ್ಮರಣಗಳನ್ನು ಹೊಂದುವುದೂ ಸಹ ಋಣ-ಸಂಕಲ್ಪ-ಕರ್ಮ ಘಟನೆಗಳ ಪರಿಮಿತಿಯಲ್ಲಿಯೇ ಇರುತ್ತದೆ.

## ಸಾಮೂಹಿಕ ಘಟನೆಗಳು

ಸಾಮೂಹಿಕವಾದ ಏಳಿಗೆ ಅಥವಾ ವಿನಾಶಕ್ಕೆ ಸಹವಾಸ ಋಣವು ಕಾರಣವಾಗುವುದು. ಈತಿಬಾಧೆಗಳು, ಸಾಮೂಹಿಕವಾದ ಆಕಸ್ಮಿಕ ಘಟನೆಗಳು, ಸಾಂಕ್ರಾಮಿಕ ರೋಗಗಳು, ಬೆಂಕಿ, ಪ್ರವಾಹ ಮೊದಲಾದುವುಗಳಿಂದ ಉಂಟಾಗುವ ಸಣ್ಣ ಸಣ್ಣ ಪ್ರಳಯಗಳು ಎಲ್ಲವೂ ತತ್ಕಾಲಿಕವಾದ ಋಣ ಪ್ರಾಪ್ತಿ ಮತ್ತು ಋಣ ನಿವೃತ್ತಿ ತತ್ವಗಳ ರಹಸ್ಯದಿಂದ ಗರ್ಭಿತವಾಗಿವೆ. ಒಂದು ವ್ಯಕ್ತಿಯ ಋಣ ಸಂಬಂಧದಿಂದ ಆಗುವ ಘಟನಾ ಘಟನೆಗಳು ಇಷ್ಟವೂ ಅನಿಷ್ಟವೂ ಆದ ಫಲಗಳಿಗೆ ವ್ಯಕ್ತಿಯನ್ನೂ ಮತ್ತು ಸಮೂಹವನ್ನೂ ಸಮಾಜ, ಪ್ರದೇಶ, ದೇಶಗಳನ್ನೂ ಗುರಿಮಾಡುವುವು. (ಪುಟ 61, ಸಾಲು 4)

ಋಣಾನುಬಂಧ ಫಲಗಳು ಮೇಲೆ ವಿವರಿಸಿದಂತೆ, ಕಂಡಂತೆಯೂ ಕಾಣದಂತೆಯೂ ವ್ಯಕ್ತಿಯ ಅಥವಾ ವ್ಯಕ್ತಿಗಳ ಮೇಲೆ ಹೊರಿಸಲ್ಪಡುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದರಿಂದ ಅಂತಹ ಋಣಗಳ ಬಂಧನದಿಂದ ಬಿಡುಗಡೆ ಹೊಂದುವುದಕ್ಕಾಗಿ ಕೃತಿ ವಿಶೇಷಗಳನ್ನು ಋತದ ಮಾದರಿಯಲ್ಲಿ ಕಲ್ಪಿಸಿರುತ್ತಾರೆ. ನಿತ್ಯ ಜೀವನದ ವೃತ್ತಿ ಮೊದಲಾದ ಆಚಾರ ವ್ಯವಹಾರಗಳಲ್ಲಿಯೂ ಸ್ವಭಾವ ಸಿದ್ಧವಾದಂತೆ ಋಣ ಮುಕ್ತಿಗೆ ಹೊಂದಿಕೊಂಡಿರುವ ಸಂವಿಧಾನವು ಏರ್ಪಟ್ಟಿರುತ್ತದೆ. ಋಣ ಮತ್ತು ಕರ್ತವ್ಯ ಕರ್ಮ ಮೊದಲಾದುವುಗಳು ಒಂದಕ್ಕೊಂದು (ಪರಸ್ಪರ) ಆಧಾರವಾಗಿಯೂ ಆಧೇಯವಾಗಿಯೂ ಇರುತ್ತವೆ. ಆಚಾರ ವಿಶೇಷದಿಂದ ಋಣಪ್ರಾಪ್ತಿಯು ಪುನಃ ಪುನಃ ಉಂಟಾಗಿ ಆಚಾರವೂ ಋಣಕ್ಕೆ ಆಧಾರವಾಗಿರುತ್ತದೆ.

## ಋಣಭಾರ– ಭಯದಿಂದ ಋಣಪ್ರಾಪ್ತಿ

ದೇಶೋನ್ನತಿಗಾಗಿ ಸಂಕಲ್ಪಿಸಿ ವ್ಯವಸಾಯ ಮಾಡುವ ಮಹನೀಯರು ಇರುತ್ತಾರೆ. ದೇಶದ ಋಣವನ್ನು ಹೊಂದಿದುದರಿಂದ ಅದರ ಪರಿಹಾರಕ್ಕಾಗಿ ವ್ಯವಸಾಯ ಮಾಡುತ್ತಿರಬಹುದೆಂದು ತರ್ಕದಿಂದ ಹೇಳಬಹುದು. ಮತ್ತು ದೇಶದ ಮೇಲೆಯೇ ಅಪಾರವಾದ ಋಣವನ್ನು ಹೊರಿಸಬಹುದೆಂದೂ ಸಿದ್ಧಾಂತ ಮಾಡಬಹುದು. ಆಯಾ ದೇಶದ ಪರಿಮಿತಿಯಲ್ಲಿ ವಾಸಮಾಡುವವರೆಲ್ಲರೂ ತಮ್ಮ ತಮ್ಮ ಮೇಲೆ ಹಂಚಿಕೆ ಪ್ರಕಾರ ಹೊರಿಸಲ್ಪಟ್ಟಿರುವ ಈ ಋಣಭಾರವನ್ನು ತೀರಿಸಲೇ ಬೇಕು. ಮತ್ತು ಪರಿಹರಿಸಿಕೊಳ್ಳಲೇ ಬೇಕು. ಋಷಿಗಳೂ ಪಿತೃಸ್ಥಾನೀಯರೂ ವಿವಿಧವಾದ ಉಪಕಾರವನ್ನು ದೇಶಕ್ಕೆ ಸಲ್ಲಿಸಿರುತ್ತಾರೆ. ಅಂತಹವರ ಋಣವನ್ನು ಪರಿಹರಿಸುವ ಕ್ರಮಗಳೂ ಕರ್ತವ್ಯ ಕರ್ಮ (ಆಚಾರ-ವ್ಯವಹಾರ) ಗಳಲ್ಲಿ ಅಳವಡಿಸಲ್ಪಟ್ಟಿರುವುವು. ಆದುದರಿಂದ ಜಾಗರೂಕತೆಯಿಂದ ಈ ಋಣಗಳ ದೆಸೆಯಿಂದ ಮುಕ್ತಿಯನ್ನು ಹೊಂದುವ ವಿಚಾರಗಳನ್ನು ತಿಳಿದು ವರ್ತನೆಗಳಲ್ಲಿರುವ ನ್ಯೂನಾತಿರಿಕ್ತಗಳನ್ನು ಹೋಗಲಾಡಿಸಿಕೊಳ್ಳಬೇಕು. ಋಣಭಾರಕ್ಕೆ ಹೆದರಿಕೊಂಡು ಹೆಜ್ಜೆ ಹೆಜ್ಜೆಗೂ ಏಕಪಕ್ಷದಲ್ಲಿ ಮನಸ್ಸನ್ನು ಸಡಿಲಿಸಿಬಿಟ್ಟು 'ಋಣಪರಿಹಾರವಾಗಲಿ' ಎಂದು ಕೈಗೊಳ್ಳುವ ಕಾರ್ಯವು ಮಾತ್ರ ಋಣಪ್ರಾಪ್ತಿಯಲ್ಲಿ ಪರ್ಯವಸಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಬಹುದು. ಮತ್ತು ಈ ಋಣವ್ಯಾಪಾರಕ್ಕೆ ಸಂಬಂಧಪಟ್ಟವರಿಗೆಲ್ಲಾ ಪರಸ್ಪರ ಬಂಧನವುಂಟಾಗಿ ಜನ್ಮ ಜನ್ಮಾಂತರಗಳಿಗೂ ವ್ಯಾಪಿಸಬಹುದು. ಮಂತ್ರಶಾಸ್ತ್ರ ನಿಷ್ಣಾತರೂ ತಮ್ಮನ್ನು ಆಶ್ರಯಿಸಿಕೊಂಡವರ ಕೋರಿಕೆಗಳನ್ನು ಈಡೇರಿಸುವ ಋಣದಲ್ಲಿ ಜನ್ಮವನ್ನು ನೀಗಿದರೆ ಅನ್ಯಜನ್ಮದಲ್ಲಿ ಸಿದ್ಧಪುರುಷರಾಗಿ ಹಿಂದಿನ ಜನ್ಮದ ತಪಃಶಕ್ತಿ ಪ್ರಭಾವದಿಂದ ಸಿದ್ಧಿಫಲವನ್ನು ಹಂಚುವರು. ಸಾನ್ನಿಧ್ಯಮಾತ್ರದಿಂದಲೇ ಆಶ್ರಿತರೂ ಋಣವನ್ನು ಹಿಂಪಕ್ಕೆ ಪಡೆಯಲು ಸಿದ್ಧರಾಗಿ ಅದೇ ಜನ್ಮದಲ್ಲಿ ಅಥವಾ ಅನ್ಯ ಜನ್ಮ-ಶರೀರದಲ್ಲಿ ಸ್ವಯಂ ಪ್ರೇರಿತರಾಗಿ ಬರುತ್ತಾರೆ,

## ಸಹಾಯ ಋಣ

ವಿದ್ಯಾರ್ಥಿಗಳು ವಿದ್ಯಾಸಹಾಯ ವೇತನವನ್ನು ಗೊತ್ತಾದ ಕ್ರಮದಲ್ಲಿ ನಿರ್ದಿಷ್ಟವಾಗಿ ಹೊಂದುವುದಾದರೆ ಆ ಋಣವು ಪರಿಹಾರವಾಗುವ ನಿಯಮಗಳನ್ನು ಗೊತ್ತುಮಾಡಿರುತ್ತಾರೆ. ಜೀವವಿಮೆ, ದ್ಯೂತಕ್ರಮಗಳಲ್ಲಿ ನಿಯಮಕ್ಕೆ ಬದ್ಧವಾದ ಧನಪ್ರಾಪ್ತಿಗಳಿದ್ದರೂ ಕಾರ್ಯಕಾರಣ ಪ್ರಮಾಣವು ಅಸ್ತವ್ಯಸ್ತವಾಗಿದ್ದರೆ ಅವು ಋಣಭಾರವಾಗಿ ಪರಿಣಮಿಸುವುವು. ಈ ಕ್ರಮದಲ್ಲಿ ವ್ಯಕ್ತಿಯ ಸಹಾಯವು ಸಂಸ್ಥೆಗೂ ಸಂಸ್ಥೆಯ ಲಾಭಾಂಶ ಸಹಾಯವು ವ್ಯಕ್ತಿಗೂ ಆಗುವುದೆಂದು ಆಪಾತತಃ ಕಾರ್ಯಕಾರಣಭಾವವು ನಿರ್ದೋಷವಾಗಿ ಕಂಡುಬರಬಹುದು. ಈ ಬಗೆಯ ಪರಸ್ಪರ ಸಹಾಯವು ವ್ಯಕ್ತಿಯ ಮತ್ತು ಸಂಸ್ಥೆಯ ಕರ್ತವ್ಯಾಕರ್ತವ್ಯ ಕರ್ಮ ಲೋಪದೋಷಗಳಿಗೆ ಕಾರಣವಾಗುವುದರಿಂದ ವ್ಯತಿರೇಕಕ್ರಮದ ಋಣವು ಮತ್ತಷ್ಟು ಬಾಧಾರೂಪವಾಗಿ ಕಾಡುವುದು.

ವಿದ್ಯಾಭಿವೃದ್ಧಿ ; ಉದ್ಯಮ, ಜೀವನ ಸಮಸ್ಯೆ ಪರಿಹಾರ ಮೊದಲಾದುವುಗಳಿಗೆ ವಿನಿಯೋಗವಾದ ಸಹಾಯವಾಗಲೀ ಅಥವಾ ಸ್ವಸಂಪತ್ತಾಗಲೀ ಋಣನಿಯಮಕ್ಕೆ ಒಳಪಟ್ಟು ಪರಿಹಾರವನ್ನು ಕಲ್ಪಿಸಬೇಕಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ತಪಸ್ವಿಗಳ ಋಣ ನಿವೃತ್ತಿ

ರಹಸ್ಯದಲ್ಲಿ ತಪಸ್ಸು ಮಾಡುವ ಮುನಿಗಳು ನಿರಾತಂಕವಾಗಿ ನಿರ್ಬಾಧಕವಾಗಿ ಮನೆಯೊಳಗಾಗಲೀ ಹೊರಗಾಗಲೀ ಅರಣ್ಯದಲ್ಲಿಯಾಗಲೀ ತಮ್ಮ ತಮ್ಮ ಆಚಾರವನ್ನು (ಕರ್ತವ್ಯ ಕರ್ಮಗಳನ್ನು) ಶಾಸಕರೂ ಪ್ರಜಾಸಂರಕ್ಷಕರೂ ಆದ ವಿಭೂತಿ ವ್ಯಕ್ತಿಗಳ ಶಾಸನ, ಸಂರಕ್ಷಣ ಸಂವಿಧಾನದಿಂದ ನಿರ್ವಹಿಸಿಕೊಳ್ಳುತ್ತಾರೆ. ಆದುದರಿಂದ ರಾಜ್ಯಭಾರಕ್ಕೆ ತಪಸ್ವಿಗಳು ಪ್ರಭುತ್ವಶಕ್ತಿಯುಳ್ಳ ಪ್ರಜೆಗಳಾಗಿ ಋಣಿಯಾಗುವರು. ಈ ಋಣಭಾರದ ದೆಸೆಯಿಂದ ಸ್ವತ ಏವ ಮುಕ್ತವಾಗುವ ಸಂವಿಧಾನವು ತಪಶ್ಚರ್ಯೆಯ ಒಂದು ಅಂಗವಾಗಿರುವುದು. ತಪಃ ಫಲದ $\frac{1}{6}$ ಭಾಗವು ಋಣಪರಿಹಾರಕ್ಕಾಗಿ ದತ್ತವಾಗಿ ಸ್ವತಃ ರಾಜ್ಯಕ್ಕೆ ತಾನೇ ತಾನಾಗಿ ಸಲ್ಲಿಕೆಯಾಗುವ ಏರ್ಪಾಡು ಋತದಲ್ಲಿ ಅಡಕವಾಗಿರುವುದು. ಹೀಗೆ ತಪಸ್ವಿಗಳ ತಪಃ ಪ್ರಭಾವದಿಂದ ಪರೋಕ್ಷವಾಗಿಯೇ ರಾಷ್ಟ್ರದ ವಿಪತ್ತುಗಳು ಪರಿಹಾರವಾಗಿ ಸಂಪದಭ್ಯುದಯವಾಗುವುದು. ಅದಕ್ಕಾಗಿಯೇ ಮುನಿವೃತ್ತಿಯು ಮತ್ತು ಅವರ ತಪಸ್ಸು ಶ್ರೇಷ್ಠವೆನಿಸಿ ಗೌರವಕ್ಕೆ ಪಾತ್ರವಾಗುವುವು.* ರಾಜ್ಯಶಾಸನ ಮತ್ತು ರಾಜನೀತಿಗಳು ತಪಸ್ವಿಗಳ ತಪಶ್ಚರ್ಯೆಯನ್ನು § ತಮ್ಮ ಸಂರಕ್ಷಣೆಯ ಪರಿಮಿತಿಗೆ ಸೇರಿಸಿಕೊಂಡಿವೆ.

---

* ವಿವೇಕದ ದೆಸೆಯಿಂದ ಕೆಳಕ್ಕೆ ಜಾರುವ ಮಟ್ಟದಲ್ಲಿರುವ ಕಾರಣ, ತಪಸ್ವಿಗಳ ತಪಸ್ಸನ್ನು ತಿಳಿಯಲಾರದೆ ಇರುವ ಜನತೆಯನ್ನು ಮೋಸಪಡಿಸಿ ಸ್ವಾರ್ಥವನ್ನು ಪೂರೈಸಿಕೊಳ್ಳುವ ವೇಷಧಾರಿಗಳ ವಿಷಯದಲ್ಲಿ ಪ್ರಜಾಸಮೂಹವು ಎಚ್ಚರವಾಗಿರಬೇಕು.

§ ಮೂಗಿನ ಮೇಲೆ ಬೆರಳಿಟ್ಟು ಕಾಡಿನಲ್ಲಿ ಕುಳಿತುಕೊಳ್ಳುವುದರಿಂದ ಫಲವಿಲ್ಲವೆಂದು ಹಾಸ್ಯಕ್ಕೆ ಗುರಿಮಾಡಿ ಸಾಮಾಜಿಕ ಸೇವೆಯೇ ಶ್ರೇಷ್ಠವೆಂದು ಪ್ರಾಪಂಚಿಕ ಭಾರದಿಂದ ತಗ್ಗಿ ಕುಗ್ಗಿದವರು (ವಿಷಯಲಂಪಟರು) ಹೇಳಬಹುದು. ಕಾಡಿನ ಮೂಲೆಯಲ್ಲಿದ್ದರೂ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಪತಿ–ಪತ್ನೀ–ಪುತ್ರ–ಋಣದ ಮಿತಿ

'ತಂದೆತಾಯಿಗಳಿಗಾಗಿ ಮಕ್ಕಳಾಗುತ್ತಾರೆ; ಮಕ್ಕಳಾಗುವುದಕ್ಕೆ ಗಂಡಹೆಂಡತಿಯರಿರುತ್ತಾರೆ.' ಎಂಬುದು ಪರಿಮಿತವಾದ ಮನೋವಲಯಕ್ಕೆ ಸೇರಿದೆ. ಆತ್ಮ–ಜೀವ–ರು ತಮ್ಮ ತಮ್ಮ ಋಣಶೇಷವನ್ನು ಪರಿಹರಿಸಿಕೊಳ್ಳುವುದಕ್ಕೂ ಸಂಕಲ್ಪವನ್ನು ಸಿದ್ಧಿಗೊಳಿಸುವುದಕ್ಕೂ ಯಾವ ಸನ್ನಿವೇಶದಲ್ಲಿ ಎಷ್ಟು ವ್ಯವಸಾಯವನ್ನು ಹೇಗೆ ನಡೆಸಬೇಕೋ ಅದಕ್ಕೆ ತಕ್ಕಂತೆ ಅವತರಿಸುತ್ತಾರೆ; ಇರುತ್ತಾರೆ; ಬೆಳೆಯುತ್ತಾರೆ; ವಿಕಾರವನ್ನು ಹೊಂದುತ್ತಾರೆ; ಕ್ಷೀಣಿಸುತ್ತಾರೆ ಮತ್ತು ಮರೆಯಾಗುತ್ತಾರೆ. "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" ಎಂಬಂತೆ 'ಆತ್ಮ' ಪ್ರೀತಿಗಾಗಿ ಆತ್ಮರಾದ ಸರ್ವರೂ ಪ್ರಿಯರಾಗಿರುತ್ತಾರೆ; ಅಥವಾ ಆತ್ಮವಾದ ಸರ್ವವೂ ಪ್ರಿಯವಾಗಿರುತ್ತವೆ. ವ್ಯಕ್ತಿಗಳ ಉಪಾಧಿ ದೃಷ್ಟಿಯಿಂದ ಯಾರೂ ಯಾವ ವಿಧವಾದ ಮನೋವಿಕಾರವನ್ನೂ ಹೊಂದಲಾರರು. (ನ ಖಲು ಬಹಿರುಪಾಧೀ ಪ್ರೀತಯಃ ಸಂಶ್ರಯಂತೇ — ಭವಭೂತಿ) 'ಆತ್ಮಾ ವೈ ಪುತ್ರನಾಮಾಸಿ' ಅಂದರೆ ತಂದೆಯೇ ಮಗನಾಗಿ ಹುಟ್ಟುತ್ತಾನೆಂದು ಹೇಳುವುದರ ತತ್ತ್ವಾರ್ಥ ವಿವೇಚನೆಯು ಸಾಮಾನ್ಯವಾದ ಉಪರಿಷ್ಟವಾರ್ಥಕ್ಕಿಂತ ದೂರವಾದುದು. ತಂದೆಯೂ ಆತ್ಮ; ಮಗನೂ ಆತ್ಮ; ಸರ್ವವೂ ಆತ್ಮವೆಂಬದಾಗಿ ವ್ಯವಹೃತವಾಗಿರುವುದು. ಎಂಬುದೇ ಅದರ ಗೂಢಾರ್ಥ. ಮಕ್ಕಳು ಹುಟ್ಟಿದುದರಿಂದ ಉನ್ನತಿ; ಮಕ್ಕಳಿಲ್ಲದಿದ್ದರೆ ಅವನತಿ ಎಂಬುದು ಸಂಕುಚಿತವಾದ ದೃಷ್ಟಿಯ ಫಲ. ಋಣವಿದ್ದರೆ ಮಕ್ಕಳು, ಋಣವಿಲ್ಲದಿದ್ದರೆ ಮಕ್ಕಳಿಲ್ಲ ಎಂದು ಹೇಳುವುದರಿಂದ ಋಣವು ಪುತ್ರಾದಿಪ್ರಾಪ್ತಿಗಾಗಿ ಅವಶ್ಯಕವಾದ ಅಲಭ್ಯ ಲಾಭವೆಂಬಂತಾಗುವುದು. ಈ ಮನೋವಿಕಾರಗಳೆಲ್ಲವೂ

---

ತಪಶ್ಶಕ್ತಿಯನ್ನು ಉತ್ಪಾದನೆ ಮಾಡಿ ಜಗತ್ತನ್ನೆಲ್ಲಾ ಬೆಳಗಿಸುವ ವಿಚಾರವನ್ನೂ ಅದೇ ಸಮಾಜ ಸೇವೆಯಾಗುವುದೆಂಬುದನ್ನೂ ವಿವೇಕದಿಂದ ತಿಳಿಯಬೇಕಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವೇಕಕ್ಕೆ ದೂರವಾಗಿರುವುವು. ಒಂದು ಜನ್ಮದಲ್ಲಿ ಪತಿತ್ವ ಋಣ ಬಂಧನಕ್ಕೆ ಒಳಗಾಗಿದ್ದ ಪತಿಯೇ ಜನ್ಮ ಜನ್ಮಾಂತರಗಳಲ್ಲಿಯೂ ಪತಿಯಾಗಲಿ ಎಂಬುದೂ ಒಂದು ಜನ್ಮದ ಪತ್ನಿಯೇ ಇತರ ಜನ್ಮಗಳಲ್ಲಿ
18 ಯೂ ಉಂಟಾಗಬೇಕೆಂಬುದೂ ತತ್ವಜ್ಞಾನ-ಋಣವಿವೇಕ-ಕ್ಕೆ ದೂರ ವಾದುದು. ಒಂದು ಜನ್ಮದಲ್ಲಿ ಸ್ತ್ರೀ ಉಪಾಧಿಯನ್ನು ಧರಿಸಿದ ವ್ಯಕ್ತಿಯು ಮುಂದೆಯೂ ಅದೇ ಉಪಾಧಿಯನ್ನು ಹೊಂದಬೇಕೆಂಬುದು ಶ್ರೇಯಸ್ಸಿಗೆ ಕುಂದಕವಾಗುವುದು. ಅಲ್ಲದೆ ಆಯಾ ಋಣ ಸಂಬಂಧಕ್ಕೆ ತಕ್ಕಂತೆ ಬೇರೆ ಬೇರೆ ಉಪಾಧಿಗಳು ಸ್ತ್ರೀ ಪುರುಷ (ದಂಪತಿ) ವ್ಯಕ್ತಿಗಳಿಗೆ ಅವಶ್ಯಕ ವಾಗಿ ಘಟಿಸುವುವು. ಆದುದರಿಂದ ಈ ಪ್ರಾರ್ಥನೆಯು ಸಾಧುತ್ವ ಅಸಾಧುತ್ವಗಳನ್ನು ವಿಮರ್ಶೆಯಿಂದ ತಿಳಿದು ಮಿತಿಯನ್ನು ಸ್ಪಷ್ಟಗೊಳಿಸ ಬೇಕು. ಈ ಅರ್ಥವಾದಗಳಿಗೆ ಉಚಿತವಾದ ಸ್ಥಾನವನ್ನು ತತ್ವ ಶಾಸ್ತ್ರಜ್ಞರು ಕೊಟ್ಟಿರುತ್ತಾರೆ.

ಯಾರು ಈ ಜನ್ಮದಲ್ಲಿ ಹೆಂಡತಿಯಾಗಿರುತ್ತಾರೋ ಅವರು ಹಿಂದಿನ ಜನ್ಮದಲ್ಲಿ ತಾಯಿಯಾಗಿದ್ದರು; ಮುಂದೆ ತಾಯಿ ಅಥವಾ ಹೆಂಡತಿ ಯಾಗುವರು" ಎಂಬುದರ ರಹಸ್ಯವನ್ನು ಅನುಭವಕ್ಕೆ ತಕ್ಕಂತೆ ಅರ್ಥ ಮಾಡಿಕೊಳ್ಳಬೇಕು. ತಾಯಿ, ಪತ್ನೀ, ಪತಿ, ಪಿತೃ ಇತ್ಯಾದಿ ಪದ ಗಳಿಂದ ಬೋಧಕವಾಗುವ ಕೆಲವು ಸ್ತ್ರೀ ಪುರುಷ ಗುಣಗಳನ್ನೂ ಕರ್ತವ್ಯ ಗಳನ್ನೂ ಗ್ರಹಿಸಬೇಕಲ್ಲದೆ ವ್ಯಕ್ತಿಗಳನ್ನಲ್ಲವೆಂದು ತಿಳಿಯಬೇಕು.

## ವಿವಿಧ ಋಣ ಭಾವಗಳು—ವಿಮರ್ಶೆ

ಜೀವಿತವನ್ನು ವಿಭಜಿಸಿ ಋಣದ ಸಂಬಂಧವನ್ನು ಗೊತ್ತುಮಾಡಿ ಅಳೆಯುವುದು ಆವಶ್ಯಕ. ಕುಲ, ಕಳತ್ರ, ಪರಿವಾರ, ಪುತ್ರ, ಮಿತ್ರ, ಬಾಂಧವ, ಸಮಾಜ, ಗ್ರಾಮ, ಪ್ರದೇಶ, ದೇಶ, ಗುರು, ಶಿಷ್ಯ, ವೃತ್ತಿ, ಸ್ವಾಮಿ, ಭೃತ್ಯ, ಮಾನವತೆ, ಆಕಸ್ಮಿಕ ಘಟನೆ, ಪ್ರತಿಜ್ಞೆ ಮೊದಲಾದ ಋಣಗಳು-ಋಣಭಾವನಗಳು-ದೇಹಿಗಳ ಮೇಲೆ ಹೊರಿಸಲ್ಪ ಡುವುವು. ಆಯಾ ಪರಿಮಿತಿಯಲಿ ಆವಿರ್ಭವಿಸಿದ ದೇಹಿಯು ಆಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಋಣದಿಂದ ಜನ್ಮತಃ ಬದ್ಧವಾಗುವುದು. ಮುಕ್ತಿಯ ಅವಸ್ಥೆಯು ವ್ಯಕ್ತವಾಗುವವರೆಗೂ ಈ ವ್ಯಾಪಾರಗಳು ನಡೆಯುವುವು. ಋಣದಿಂದ ಕರ್ಮವೂ ಕರ್ಮದಿಂದ ಋಣ ಕರ್ಮ ಫಲಾನುಭವಗಳೂ (ಋಣ ನಿವೃತ್ತಿ) ಆಗುವುವು. ಈ ಸಮಾರಂಭದಲ್ಲಿ ಪುನಃ ಪುನಃ ಋಣಪ್ರಾಪ್ತಿ ಋಣವೃದ್ಧಿ ಋಣಸಂಚಯಗಳೂ ಉಂಟಾಗುವುವು.

ಒಂದು ವ್ಯಕ್ತಿಯ ಇರುವಿಕೆ ಮೊದಲಾದುವುಗಳಿಗೆ ಮೇಲ್ಕಂಡ ಪಿತ್ರಾದಿ ಋಣಗಳು ಹೊಣೆಯಾಗುವುವು. 'ಹೊಣೆ' ಎಂಬುದೇ ಋಣ. 'ಹೊಣೆ' ಎಂಬ ಋಣವನ್ನು ಪರಿಹರಿಸಿದ ಹೊರತು ಶಾಶ್ವತಶಾಂತಿಯು ಲಭಿಸುವುದಿಲ್ಲ. ಫಲಾನುಭವವೇ ಋಣ ಪರಿಹಾರವೆಂದು ಹೇಳಿಯೇ ಇದೆ. ಋಣದ ಮಿತಿಯಲ್ಲಿ ಒಬ್ಬರು ಮತ್ತೊಬ್ಬರಿಂದ ಉಪಕಾರವನ್ನು ಹೊಂದುತ್ತಾರೆ. ಈ ಉಪಕಾರದಿಂದ ಆದ ಫಲವು ತನ್ನ ಸ್ವಂತವಾಗಿ ತನ್ನದೇ ಆಗಿ ಅನುಭವಕ್ಕೆ ಬರಬೇಕಾದರೆ ಉಪಕಾರ ಮಾಡಿದವರ ಉಪಕಾರವನ್ನು ಆ ಮಿತಿಯಲ್ಲಿ ಹಿಂದಕ್ಕೆ ಸಲ್ಲಿಸಬೇಕು. ಅದುವರೆಗೂ ಅದು ಅವನ ಸ್ವಂತವೆನಿಸದೆ ಋಣವಾಗಿ ಉಳಿದು ಫಲಾನುಭವವಿಲ್ಲ ದಂತಾಗುವುದು. ಆದುದರಿಂದ ಋಣವನ್ನು ಅನುಭವಿಸುವುದೆಂದರೂ ಪರಿಹರಿಸುವುದೆಂತಲೇ ಅರ್ಥವಾಗುವುದು. ಋಣಪರಿಹಾರವೆಂದರೂ ಸ್ವಾನುಭೂತಿಯಾಗುವುದು. ಕೆಲವು ಸಂದರ್ಭಗಳಲ್ಲಿ ಒಂದು ಋಣ ಬಂಧನಕ್ಕೆ ಬದ್ಧವಾದನಂತರ ಅದನ್ನು ತಿರಸ್ಕರಿಸಿ ಬೇರೇ ಮಾರ್ಗವನ್ನು ಹೊಂದುವುದಕ್ಕೆ ಅಧಿಕಾರವಿಲ್ಲ. ಆರ್ಥಿಕ ಪ್ರಪಂಚದಲ್ಲಿಯೂ ಸಹ ಋತದ ಈ ನಿಯಮವನ್ನು ಪಾಲಿಸುತ್ತಿದೇವೆ. ಭೂಮಿ, ಮನೆ, ತೋಟ ಮೊದಲಾದ ಸ್ಥಿರವಸ್ತುಗಳನ್ನೂ ಒಡವೆ ವಸ್ತು ಮೊದಲಾದ ಚರ ದ್ರವ್ಯ ಗಳನ್ನೂ ಪ್ರಥಮತಃ ಸಾಲಕ್ಕೆ ಈಡುಮಾಡಿ ಅದನ್ನು ಪರಿಹರಿಸಿದ ಹೊರತು ಅವುಗಳನ್ನು ಬೇರೇ ವಿಧವಾಗಿ ಅನುಭವಕ್ಕೆ ಗುರಿಮಾಡಲು ಅವಕಾಶವನ್ನು ಕೊಟ್ಟಿರುವುದಿಲ್ಲ. ಇದು ಸಕಾರಣವೆಂದು ಒಪ್ಪಿ ನಡೆಯುತ್ತಿದೇವೆ. ಋತ ನಿಯಮಗಳ ಛಾಯಾನುವರ್ತಿಯಾದ ಮಾನವ ಆಚಾರ ವ್ಯವಹಾರವಲ್ಲಿ ಹೀಗಿರುವಾಗ ಅತ್ತಿತ್ತ ಸರಿಯದೆ, ನ್ಯೂನಾತಿರಿಕ್ತಗಳಿಗೆ ಅವಕಾಶಕೊಡದೆ ಪ್ರಯೋಗಶಾಲೆಗಳಲ್ಲಿ ಪ್ರಯೋಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು ನಡೆಯುವಂತೆಯೂ, ಯಜ್ಞಶಾಲೆಗಳಲ್ಲಿ ಯಜ್ಞಕಾರ್ಯವು ನಿರ್ವಾಹವಾಗುವಂತೆಯೂ ಮೂಲಭೂತವಾದ ದೇವತಾ ಋತದಲ್ಲಿ ವ್ಯಾಪಾರವು ಹಿಡಿತದಿಂದ ನಿಸ್ಪೃಷ್ಟವಾಗಿ ನಡೆಯಬೇಕಾಗಿದೆ.

## ಶುಲ್ಕ–ಋಣ

ಋಣಾನುಬಂಧ ರೀತ್ಯಾ ಜೀವನಕ್ಕೂ ಜೀವಿತದಲ್ಲಿ ಕರ್ತವ್ಯ ಕರ್ಮ ನಿರ್ವಾಹಕ್ಕೂ ಸಾಧಕವಾಗುವ ವಿವಾಹವೆಂಬ ಸಂಸ್ಕೃತಿಯಲ್ಲಿ ಕನ್ಯಾದಾನಾಂಗವಾಗಿ ದಕ್ಷಿಣೆಯು ವಿಧಿಸಲ್ಪಟ್ಟಿದೆ. ಮತ್ತು ಅಭ್ಯಾಸ ವಾಗಿ ಆಚಾರವೆನಿಸಿಕೊಂಡಂತಿದೆ. ಈ ದಕ್ಷಿಣೆಯು ಮೋಹಕರವಾಗಿ ಕೊಡುವವರನ್ನೂ ತೆಗೆದುಕೊಳ್ಳುವವರನ್ನೂ ಋಣದ ಬಲೆಯಿಂದ ಕಟ್ಟಿ ಹಾಕುವ ಪರಿಸ್ಥಿತಿಯು ಶೋಚನೀಯವಾದ್ದುದು. ಈ ಬಗೆಯ ಋಣ ಕಲ್ಪನೆಯು ಆಪಾತತಃ ಒಂದು ಪಕ್ಷದ ದೃಷ್ಟಿಯಿಂದ ಹಿತವೆಂದು ಕಂಡು ಬಂದರೂ ಮತ್ತೊಂದು ಪಕ್ಷದ ದೃಷ್ಟಿಯಿಂದ ಅಹಿತವಾದ ಮನೋ ಭಾವನೆಯೆಂಬ ವಿಷದಿಂದ ಪೂರಿತವಾದುದು. ಋಣವನ್ನು ಹರಿಸಬಹು ದಾದ ಸಂದರ್ಭಗಳನ್ನು ಒಳಗೊಂಡಿದ್ದರೂ ಋಣವನ್ನು ಹೊರಿಸುವ ಸನ್ನಿವೇಶಗಳೇ ಹೆಚ್ಚಾಗಿ ಸುಖಶಾಂತಿಗೆ ಭಂಗವನ್ನುಂಟುಮಾಡುವುವು. ಎಂದು ಅನುಭವವು ತಿಳಿಸುವುದು. ಕೊಟ್ಟ ಪದಾರ್ಥವನ್ನು ಹಿಂದಕ್ಕೆ ತೆಗೆದುಕೊಳ್ಳುವ ಮತ್ತು ಕೊಡಬೇಕಾದ ಸಹಾಯಕ ಮತ್ತು ಪರಸ್ಪರ ಸಹಾಯಕ ಋಣವ್ಯಾಪಾರಗಳು ಒಂದು ಕಾಲದಲ್ಲಿ ಒಂದು ಸನ್ನಿವೇಶ ದಲ್ಲಿ ನಡೆಯಲು ಅವಕಾಶ ತಪ್ಪುವುದರಿಂದ ನಾನಾವಿಧವಾದ ಕುತ್ಸಿತ ಜನ್ಮಗಳಲ್ಲಿ ನಾನಾವಿಧವಾಗಿ ಕೊಡಬೇಕಾದವರೂ ಕೊಟ್ಟವರೂ ಋಣ ವನ್ನು ಹರಿಸುವ ಅನುಭವಗಳನ್ನು ಹೊಂದಬೇಕಾಗುತ್ತದೆ.

(ಪುಟ 60–61)

ತತ್ವಾನ್ವೇಷಣ ಮಾಡಿದ ಮಹರ್ಷಿಯರು ಋಣ ವ್ಯಾಪಾರದ ರಹಸ್ಯವನ್ನು ಗೋಚರ ಮಾಡಿಕೊಂಡು ಮುಂಜಾಗ್ರತೆಯಿಂದ ವರ್ತಿಸುವ ಕ್ರಮವನ್ನು ಬೋಧಿಸಿರುತ್ತಾರೆ. ಮಾನವ ವಿವೇಕದಿಂದ ವರ್ತನೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಮಪಡಿಸಿಕೊಂಡು ಸಂಸ್ಕರಿಸಿಕೊಳ್ಳುವುದಾದರೆ ವರ್ತನೆಯು ಹಿತದಾಯಕವಾಗುವುದು. ಅನುಸಂಧಾನ ಕ್ರಮದಲ್ಲಿ ನಡೆದ ಋಣವೂ ಸಹ ಆನಂದವೇ ಆಗುವುದೆಂದು ತಿಳಿದು ದುಃಖಕ್ಕೆ ಅವಕಾಶವಾಗದಂತೆ ಮಾಡಬಹುದು. ಈ ಸ್ಥಿತಿಯು ಉಂಟಾಗುವವರೆಗೂ ವಿಷಕ್ರಿಮಿನ್ಯಾಯದಂತೆ ಜೀವನವನ್ನು ಸಾಗಿಸಬೇಕಾಗುವುದು. ಅನುಭವವು ಬೆಳೆದಂತೆಲ್ಲಾ ಆ ಬಗೆಯ ವಿವೇಕವು ಉಂಟಾಗುವುದಕ್ಕೂ ಸಂಸ್ಕೃತಿಯ ಹಂತವನ್ನು ಏರುವುದಕ್ಕೂ ಪ್ರಕೃತಿಯು ಸಹಕರಿಸುವುದು.

## ಋಣ ತ್ರಯ

ಸಂಸ್ಕೃತಿಯ ರಹಸ್ಯವನ್ನು ತಿಳಿಯಲು ತಪಸ್ಸು ಮಾಡಿದ ಮಹಾತ್ಮರು ಋಣ ವಿಮರ್ಶೆಯನ್ನು ನಡೆಸಿ ಅತ್ಯಂತ ಪ್ರಧಾನವಾಗಿ, ಪ್ರಪಂಚದಲ್ಲಿ ದೇಹಿಗೆ ಸಂಬಂಧಿಸಿಕೊಂಡಿರುವ ಋಣ ವಿಧಾನಗಳನ್ನು ನಿರ್ದೇಶಿಸಿರುತ್ತಾರೆ. ದೇವ-ಋಣ, ಋಷಿ-ಋಣ, ಪಿತೃ-ಋಣಗಳು ಪ್ರಪಂಚದಲ್ಲಿ ದೇಹವನ್ನು-ಉಪಾಧಿಯನ್ನು-ಧರಿಸಿದ ಆತ್ಮಕ್ಕೆ ನಿರೂಢವಾಗಿ ಹೊಂದಿಕೊಂಡಿರುವುವು. ಈ ಋಣಗಳನ್ನು ಅನುಭವಿಸಿ ಪರಿಹರಿಸಬೇಕಾಗಿರುವ ಕರ್ತವ್ಯವನ್ನು ಸಮಸ್ತ ಮಾನವರೂ ಸ್ವಭಾವತಃ ಹೊತ್ತುಕೊಂಡಿರುತ್ತಾರೆ. 'ಋಣವನ್ನು ತೀರಿಸುವುದು' ಎಂಬುದನ್ನು ಎಲ್ಲರೂ ಉಚ್ಚರಿಸುವರು. ತೀರಿಸುವುದು ಎಂದರೇನು? ಋಣವು ಹೇಗೆ ಬಂದಿತು? ಇತ್ಯಾದಿ ವಿಮರ್ಶೆಗಳು ಮಾತ್ರ ತಿಳಿವಳಿಕೆಯ ಕ್ಷೇತ್ರಕ್ಕೆ ದೂರವಾದಂತಿವೆ. ಋಣವನ್ನು ಕಲ್ಪಿಸಿಕೊಳ್ಳುವವರೂ ದೇಹಿಗಳು; ಅದನ್ನು ಸಾಧಿಸುವವರೂ ದೇಹಿಗಳು; ಅದರ ಫಲವನ್ನು ಅನುಭವಮಾಡಿಕೊಳ್ಳುವವರೂ ದೇಹಿಗಳೇ ಆಗಿರುತ್ತಾರೆ. ದೇಹಿಯ ಜ್ಞಾನೇಚ್ಛಾಕ್ರಿಯಾಶಕ್ತಿಗಳ ಪ್ರಯೋಗ ಮೊದಲಾದುವುಗಳಿಗೆ ಹೊಣೆಯಾಗುವವರಲ್ಲಿ ಅನಂತ ಶಕ್ತಿಗುಣಯುತವಾದ ಪ್ರಕೃತಿಯು * ಮೊದಲನೆಯದಾಗಿದೆ. ಇದನ್ನೇ

* ಪ್ರಕೃತಿ ಎಂದರೆ 'ಕಾಣುವ ವಿಶ್ವ'ವೆಂಬ ಅರ್ಥವನ್ನು ಕೊಡುವ ಆಂಗ್ಲ ಭಾಷೆಯ (Nature–ನೇಚರ್) ಅಲ್ಲ. ಇದೂ ಒಂದು ಮುಖ್ಯ ತತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
ಅಂದರೆ ಶಕ್ತಿಗುಣ ಸಹಿತವಾದ ಪ್ರಕೃತಿಯನ್ನೇ ದೇವತ್ವಕ್ಕೆ ಸಂಬಂಧಿಸಿ 'ದೇವರು' ಎನ್ನುತ್ತಾರೆ. ದೇವತ್ವವು ಅಖಂಡವಾಗಿ ವಿಶ್ವವ್ಯಾಪಿಯಾಗಿ ಸರ್ವತ್ರ ಇದ್ದರೂ ವ್ಯಾವಹಾರಿಕವಾಗಿ ಶಕ್ತಿಗುಣಗಳ ಒಂದೊಂದು ಪ್ರಧಾನಾಂಶಗಳಿಗೆ ಅದನ್ನು ಸಂಬಂಧಿಸಿ ಅನೇಕ ಸಂಖ್ಯೆಯಲ್ಲಿ ಉದಾಹರಿಸಿರುತ್ತಾರೆ. ಅದರಂತೆಯೇ ಋಷಿತ್ವವು ತಿಳಿವಳಿಕೆಯನ್ನು ಉಂಟು ಮಾಡುವುದಕ್ಕೆ ಹೊಣೆಯಾಗಿರುತ್ತದೆ. ಈ ಮೂರೂ ಪರಸ್ಪರ ಹೆಣೆದು ಕೊಂಡು ಹಗ್ಗದಂತೆ ಇರುವುವು. ಒಂದನ್ನು ಬಿಟ್ಟು ಮತ್ತೊಂದು ಇರುವುದಿಲ್ಲವೆಂಬುದನ್ನು ಪೃಥವಾಗಿ ತಿಳಿದುಕೊಳ್ಳಬೇಕು. ಜೀವಿತದಲ್ಲಿ ಕಾಣುವ ನಾನಾ ಬಗೆಯ ಋಣವಿಶೇಷಗಳನ್ನು ಸೂಕ್ಷ್ಮವಾಗಿ ಋಣ ತ್ರಯಗಳಲ್ಲಿ ಅಡಕ ಮಾಡಿರುತ್ತಾರೆ. ಆದರೆ ವಿವರವನ್ನು ತಿಳಿಯದಿದ್ದರೆ ಪ್ರಗತಿಗೆ ಸಾಧನವು ದೊರೆಯುವುದಿಲ್ಲ.

ಜನ್ಮದೊಂದಿಗೆ ನಿತ್ಯವಾಗಿ ಕೂಡಿಕೊಂಡಿರುವ ಈ ಋಣತ್ರಯಗಳ ಪ್ರಾಪ್ತಿ ಮತ್ತು ನಿವೃತ್ತಿಗಳಿಗೆ ಸಂಬಂಧಪಟ್ಟ ಕರ್ಮಗಳು ಸಂಸ್ಕೃತಿಗೂ ಪ್ರಗತಿಗೂ ಸಹಕಾರವಾಗಿರುತ್ತವೆ. ಪ್ರಪಂಚಕ್ಕೆ ಆಧಾರವಾದ ಪಂಚಭೂತಗಳಂತೆ ಈ ಋಣತ್ರಯಗಳೂ ಪ್ರಪಂಚದಲ್ಲಿ ಸೃಷ್ಟಿಸ್ಥಿತಿ ಲಯಗಳಿಗೆ ಹೊಣೆಯಾಗಿ ಅವುಗಳನ್ನು ಪ್ರೋತ್ಸಾಹಿಸುತ್ತವೆ. ಪ್ರಪಂಚದಲ್ಲಿ ಕಾಣುವ, ಸೂಕ್ಷ್ಮವಾದ ಋಣವ್ಯಾಪಾರಗಳಲ್ಲಿ ಈ ಮೂರೂ ಸಂಯೋಜನ ವಿಭಜನಾತ್ಮಕವೆಂಬ ಸಂಪುಟೀಕರಣ ಕ್ರಮದಲ್ಲಿ ಅಡಕವಾಗಿರುತ್ತವೆ. ಆದುದರಿಂದ ಇದರ ವಿವರವನ್ನು ತಿಳಿಯುವುದು ಅತ್ಯವಶ್ಯಕವಾಗಿರುತ್ತದೆ.

## ಪಿತೃ ಋಣ

ಸೃಷ್ಟಿ ಮತ್ತು ಪರಿಪಾಲನೆಯ ಕರ್ಮವನ್ನು ಪಿತೃಶಬ್ದವು ಸೂಚಿಸುತ್ತದೆ. ವಸ್ತುವಿನ ಮತ್ತು ವ್ಯಕ್ತಿಯ ಉತ್ಪತ್ತಿಗೆ ಕಾರಣವಾದ ವಸ್ತುವಿನಿಂದ ಋಣವು ಹೊರಿಸಲ್ಪಡುವುದು. ಪ್ರಕೃತಿ ಪ್ರೇರಿತವಾಗಿ, ಪ್ರಕೃತಿ ಸಹಾಯದಿಂದ ವ್ಯಕ್ತಿಯು ಋಣವನ್ನು ಕಲ್ಪಿಸಿಕೊಳ್ಳಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯವಾಗಿ ಸಂಕಲ್ಪವು ಕಾರ್ಯಕ್ಕೆ ಪೂರ್ವಭಾವಿಯಾದುದರಿಂದಲೂ ಜನ್ಮವೆಂಬ ಕಾರ್ಯಕ್ಕೆ ಮೊದಲೇ ಸಂಕಲ್ಪವು ನಡೆದಿದ್ದಿರಬೇಕಾಗಿರುವುದರಿಂದಲೂ, ತಾಯಿ, ತಂದೆ, ಮಕ್ಕಳು ಎಂಬ ವ್ಯವಹಾರಕ್ಕೆ ಹಿಂದಿನ ಜನ್ಮದ ಋಣ ಸಂಬಂಧವೇ ಕಾರಣವಾಗಿರುತ್ತದೆ. ಇಂತಹ ಸಂಬಂಧಗಳು ಹಿಂದೆ ನಡೆಯದೇ ಇರುವಾಗ, ಅತ್ಯುತ್ಕಟವಾದ ಕಾರ್ಯ ವಿಶೇಷದಿಂದ ಜನ್ಮವುಂಟಾಗಬೇಕಾದಾಗ ವ್ಯಕ್ತಿಯು ತಕ್ಕ ತಾಯಿ, ತಂದೆ (ಕ್ಷೇತ್ರ, ಬೀಜ) ಗಳನ್ನು ಆರಿಸಿಕೊಂಡು ತಾತ್ಕಾಲಿಕವಾಗಿ ಜನ್ಮವನ್ನು ಹೊಂದಬಹುದು. ಇಂತಹ ಸಂದರ್ಭಗಳಲ್ಲಿ ತಾಯಿ ತಂದೆಗಳ ಕರ್ತವ್ಯವೆಂಬ ಹೊಣೆಗಾರಿಕೆಗೆ ಕಾರಣವಾದ ಪುತ್ರವ್ಯಕ್ತಿಯ ಮೇಲೆ ಪಿತೃ-ಋಣವು ಹೊರಿಸಲ್ಪಡುವುದು. ತಾಯಿ ತಂದೆಗಳಿಗೆ 'ಮಕ್ಕಳ ಪಾಲನೆ' ಎಂಬ ಋಣವು ಹೊಸದಾಗಿ ಕಲ್ಪನೆಯಾಗಿ ಅದರ ಫಲಾನುಭವಕ್ಕೆ ಭಾಗಿಗಳಾಗುವರು. 'ಹಿಂದೆ ನಡೆದ ಋಣದ ಶೇಷವನ್ನು ಪರಿಹರಿಸಿಕೊಳ್ಳುವ ಸನ್ನಿವೇಶದಲ್ಲಿ ಮಕ್ಕಳ ಸೃಷ್ಟಿ, ಪಾಲನೆ ಕರ್ಮಗಳು ಹೊರಿಸಲ್ಪಟ್ಟದ್ದಾಗಿ ನಡೆಯಬಹುದು.' ಎಂಬ ಅಂಶವನ್ನು ಮರೆಯಬಾರದು. ಕೇವಲ 'ಪ್ರಾರ್ಥನೆ' 'ಬೇಡಿಕೆ' ಎಂಬ ತಪಸ್ಸಿನ ಋಣಕ್ಕೆ ಕಟ್ಟುಬಿದ್ದ ಹಿರಣ್ಯಗರ್ಭ-ವಿಶ್ವಾತ್ಮನಾದ ಭಗವಂತನೂ ಸಹ ಅದನ್ನು ಪರಿಹರಿಸಿಕೊಳ್ಳಲು ಯತ್ನಿಸಿ ಪ್ರಾರ್ಥನಾ ತಪಸ್ಸನ್ನಾಚರಿಸಿದವರ ಇಷ್ಟಾರ್ಥಗಳನ್ನು ಪೂರೈಸಿ ಋಣವನ್ನು ಪರಿಹರಿಸಿಕೊಳ್ಳಬಹುದು. ಅಥವಾ ತಾಯಿ ತಂದೆಗಳ ಅತ್ಯುತ್ಕಟ ತಪಸ್ಸಿನ ಫಲವಾಗಿ, ಈ ಜನ್ಮದಲ್ಲಿ ತಾತ್ಕಾಲಿಕವಾಗಿ ಅಂದರೆ ಹಿಂದಿನ ಸಂಬಂಧವಿಲ್ಲದೆ, ಪರಮಾತ್ಮನ ಅಂಶವು ಉಪಾಧಿಯನ್ನು ಧರಿಸಿ ತಾಯಿತಂದೆಗಳ ತಪಸ್ಸಿನಿಂದ ಹೊರಿಸಲ್ಪಟ್ಟ ಋಣನಿವೃತ್ತಿಗಾಗಿ ಜನ್ಮವನ್ನು ಹೊಂದಬಹುದು. 'ಯಾರು ? ಯಾರಿಗೆ ? ಎಷ್ಟರ ಮಟ್ಟಿಗೆ ಋಣಿಗಳು ?' ಎಂಬುದನ್ನು ತಿಳಿಯುವುದು ಇಂದ್ರಿಯಗಳ ಅನುಭವಕ್ಕೆ ಮೀರಿದ ವಿಷಯವಾಗಿದೆ. ಆದರೆ ಇದರ ರಹಸ್ಯವನ್ನು ಭೇದಿಸಿ ವಿಷಯವನ್ನು ಕರತಲಾಮಲಕದಂತೆ ತಿಳಿಯಲು ಕರ್ಮ ಪ್ರಪಂಚದಲ್ಲಿ ಅವಕಾಶವಿಲ್ಲದೇಯಿಲ್ಲ. ಹೇಗೇ ಆದರೂ ಸಂಬಂಧದ ಫಲವನ್ನು ಆಯಾ ಮಿತಿಯಲ್ಲಿ ಅನುಭವಿಸುವುದರ ಮೂಲಕ ನಿವೃತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿಕೊಳ್ಳಬೇಕಾಗಿರುತ್ತದೆ. ಸ್ವಯಂ ಪ್ರೇರಿತವಾಗಿ ಕಲ್ಪಿಸಿಕೊಂಡ ಋಣವನ್ನು ಪಂಹರಿಸಿಕೊಳ್ಳುವ ಹೊಣೆಗಾರಿಕೆಯೂ ವ್ಯಕ್ತಿಗಳಿಗೆ ಉಂಟಾಗುವುದು. ಪಿತೃಋಣದಲ್ಲಿ ಮಾತೃಋಣ ಮೊದಲಾದುವುಗಳೂ ಸೇರಿರುತ್ತವೆ. ಮಾತೃಋಣವು, ಮಾತೃವಾಗಿ ಜನ್ಮವೆತ್ತಿ ಮಕ್ಕಳನ್ನು ಪಡೆವ ಅನುಭವದಿಂದಲೂ, ಪಿತೃಋಣವು, ಪಿತೃವಾಗಿ ಪಿತೃಕರ್ತವ್ಯವನ್ನು ನೆರವೇರಿಸುವುದರಿಂದಲೂ ಪರಿಹಾರವಾಗಬೇಕಾಗಿರುತ್ತವೆ.*

## ಋಷಿಋಣ

'ಜ್ಞಾನ'- ಕರ್ಮಕ್ಕೆ ಕಾರಣವಾದ ಸನ್ನಿವೇಶಗಳಿಂದ ಋಣ ಸಂಬಂಧವು ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಆಯಾ ಪರಿಮಾಣದಲ್ಲಿ ಹೊರಿಸಲ್ಪಡುತ್ತದೆ. ಇದೇ ಋಷಿಋಣವು. ಇದರಲ್ಲಿ ಪಿತೃ-ಋಣವೂ ಅಡಕವಾಗಿರುತ್ತದೆಂಬ ಸೂಕ್ಷ್ಮಾಂಶವನ್ನು ಮರೆಯಬಾರದು. ಋಷಿಋಣದ ನಿವಾರಣೆಯೂ ಸಹ ಅದರ ಅನುಭವದಿಂದ ಉಂಟಾಗುವುದು. ಜ್ಞಾನಾರ್ಜನೆಗಾಗಿ ಜ್ಞಾನಿಗಳ ಸಂಬಂಧವನ್ನು ಬಯಸುತ್ತೇವೆ. ಅದರ ಪೂರೈಕೆಗಾಗಿ ತಕ್ಕ ವ್ಯವಸಾಯವು ನಡೆದು ಜ್ಞಾನಾನುಭವವಾದರೆ ಋಣಪರಿಹಾರವಾಗುವುದು. ಈ ಪರಿಹಾರಕ್ರಮದಲ್ಲಿ ಜ್ಞಾನಪ್ರಸಾರಣವೂ ಒಂದಂಗವಾಗಿರುತ್ತದೆ. ಜ್ಞಾನಿಗಳ ಜ್ಞೇಯತ್ವವೆಂಬ ಬಂಧನವು ಜ್ಞಾನವಿತರಣೆಯಲ್ಲಿ ಪರ್ಯವಸಾನವನ್ನು ಹೊಂದುವುದು.

---

* ಶ್ರಾದ್ಧಾದಿಗಳಲ್ಲಿ ಪಿತೃಗಳಿಗೆ ಶಾಶ್ವತ ಬ್ರಹ್ಮಲೋಕವು ಲಭಿಸಲಿ ಎಂದು ಆಶೀರ್ವದಿಸುವುದರಿಂದಲೇ ಪಿತೃವಿಗೆ ಮುಕ್ತಿ ಎಂಬುದನ್ನು ಕರ್ಮಶಾಸ್ತ್ರದ ಮಿತಿಯುಂತು ತಿಳಿಯಬೇಕು. ಋಣ ಸಂಬಂಧದಲ್ಲಿ ಹೊಣೆಗಾರಿಕೆ ನಿವೃತ್ತಿಗಾಗಿ ಪುತ್ರರಾದವರು ಅನುಸರಿಸುವ ಸುಸಂಸ್ಕೃತಕರ್ಮದ ರಹಸ್ಯವನ್ನು ತಿಳಿದು ಆನಂದಿಸುವವರು ವಿರಳ. ಈ ಆನಂದವ್ಯಾಪಾರದ ಫಲವಾಗಿಯೇ ಅರ್ಥವಾದೋಕ್ತಿಗಳು ಪ್ರೋತ್ಸಾಹ ಜನಕ ಮತ್ತು ಪ್ರಚೋದಕಗಳಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ದೇವಋಣ

ಸರ್ವವ್ಯಾಪಿನಿಯೂ, ಸರ್ವಾಂತರ್ಯಾಮಿನಿಯೂ ಪುರುಷಗರ್ಭಿತಳೂ ಆದ ಪ್ರಕೃತಿಯ ದಿವ್ಯತೆ (Divinity) ಯಿಂದ ಆಗುವ ಉಪಕಾರಕಾರ್ಯವು ದೇವತ್ವಗರ್ಭಿತವಾದ ದೇಹಿಗಳಿಗೆ ದೇವ ಋಣವೆನಿಸುವುದು. ಪ್ರಕೃತಿಯು ಕಲ್ಪಿಸಿಕೊಂಡ ಜ್ಞಾನೇಚ್ಛಾಪೂರ್ವಕವಾದ ಋಣದ ಕಾರಣದಿಂದ ತನ್ನ ವ್ಯಾಪಾರಗಳನ್ನು ಅಳವಡಿಸಿಕೊಳ್ಳುತ್ತಾಳೆ. ಈ ವ್ಯಾಪಾರಗಳ ಘನೋದ್ದೇಶಗಳನ್ನು ಸಾಕ್ಷಾತ್ಕರಿಸುವ ಜ್ಞಾನೇಚ್ಛಾ ಶಕ್ತಿಗಳಿಂದ ದೇಹಿಗಳಲ್ಲಿ ಋಣವು ಕಲ್ಪನೆಯಾಗುವುದು. ಈ ವಿಧವಾದ ಪರಸ್ಪರ ಋಣದಿಂದ ದೇಹಿಗಳು ಪ್ರಕೃತಿಯ ಕಾರ್ಯದ ಫಲವನ್ನೂ ಅನುಭವಿಸಿ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳುವುದರಿಂದ ಪರಸ್ಪರ ಋಣವು ಪರಿಹಾರವಾಗುವುದು. ಈ ಋಣವು ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಎಡೆಬಿಡದೆ ಹೊಂದಿಕೊಂಡಿರುವುದು. ಆದುದರಿಂದ ವ್ಯಕ್ತಿಯ ಜೀವಿತದೊಡನೆ ಐಕ್ಯವಾಗಿರುವುದು. ಈ ವಿಧವಾದ ಋಣದ ಅಂದರೆ ಸಂಬಂಧದ ವ್ಯಾಪಾರವನ್ನು ಆರಾಧನೆ, ಪೂಜೆ ಮೊದಲಾದ ಶಬ್ದಗಳಿಂದ ಗೌರವಪುರಸ್ಸರವಾಗಿ ಉದಾಹರಿಸುತ್ತೇವೆ. ಕೃತಜ್ಞತಾಪೂರ್ವಕವೆಂಬಂತೆ ಬೆಳಕು, ಗಾಳಿ, ನೀರು ಮೊದಲಾದುವುಗಳ ಸಂಬಂಧಾನುಭವವೂ ಆರಾಧನೆ. ಪ್ರಕೃತಿಯು ಪರಮಾತ್ಮನಿಗೆ ಸಂತೋಷವನ್ನುಂಟುಮಾಡಬೇಕೆಂದು ನಡೆಸುವ ಈ ವ್ಯಾಪಾರವು ಈಶ್ವರಪೂಜೆಯಾಗುವುದು. ಆ ವ್ಯಾಪಾರದಿಂದ ದೇವತ್ವವುಳ್ಳ ದೇಹಿಗಳಲ್ಲಿ ಉಂಟಾಗುವ ಸಂತೋಷವೂ ಈಶ್ವರಪೂಜೆಯೇ ಆಗುವುದು. ತಿಳಿವಳಿಕೆ, ಭಾಷೆಗಳಿಂದ ಕೂಡಿ ಮೇಲಿನ ಹಂತದಲ್ಲಿರುವ ಮಾನವ ಪ್ರಪಂಚದಲ್ಲಿ ಮಾನವರು ಮಾಡಿಕೊಂಡಿರುವ ಸಂಕೇತಗಳಿಗನುಸಾರವಾಗಿ ಮೇಲ್ಕಂಡ ಆರಾಧನೆ ಪೂಜೆಗಳು ವಿವಿಧವಾಗಿ ವರ್ಣಿಸಲ್ಪಟ್ಟಿವೆ.*

---

* ಆನಂದರಾಮಾಯಣದಲ್ಲಿ ವರ್ಣಿತವಾದ ಒಂದು ಕಥಾ ಸಂದರ್ಭವನ್ನು ನೆನಪಿಗೆ ತಂದುಕೊಂಡರೆ ಈ ರಹಸ್ಯಗಳು ಸ್ಪಷ್ಟವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದಕ್ಕನುಗುಣವಾದ ಚೇಷ್ಟೆಗಳ ಮೂಲಕ ಕರ್ಮವು ನಡೆಯುತ್ತಿರುತ್ತದೆ.

ಪ್ರಕೃತಿಲೀಲೆಯನ್ನು ಸಸ್ಯಕ್ರಿಮಿಕೀಟಾದಿ ಸಕಲ ದೇಹಿಗಳೂ ಅನುಭವಿಸುವವರಾಗಿ ಈ ಪೂಜೆಯಲ್ಲಿ ಭಾಗಿಗಳಾಗಿರುತ್ತಾರೆ. ಪ್ರಕೃತಿಲೀಲೆಯನ್ನು ಅನುರೋಧವಾಗಿ ಮತ್ತು ವಿರೋಧವಾಗಿ ಅನುಭವಿಸಿದುದರ ಫಲವಾಗಿ ಸಂತೋಷ ಮತ್ತು ದುಃಖಗಳೆಂಬ ಮನೋವಿಕಾರಗಳು ವ್ಯಕ್ತವಾಗುತ್ತವೆ. ಸಂತೋಷವನ್ನು ವ್ಯಕ್ತಪಡಿಸುವುದರಿಂದ ಸುಮುಖವಾದ ಆರಾಧನೆಯಾಗಿ ಋಣವು ಪರಿಹೃತವಾಗುವುದು. ದುಃಖವನ್ನು ವ್ಯಕ್ತಪಡಿಸಿ ಅನುಭವಿಸುವುದರಿಂದ ದುರ್ಮುಖವಾದ ಆರಾಧನೆಯಾಗಿ ಬಂಧನವು ಕಲ್ಪಿತವಾಗುವುದು. ಔದಾಸೀನ್ಯದಿಂದ ಇರುವ ಉನ್ನತ ಹಂತದ ಆರಾಧನೆಗೂ ಅವಕಾಶವಿರುವುದು. ವಿರುದ್ಧವಾಗಿ ನಡೆಸುವ ಆರಾಧನೆಯು ವಿಮುಖಾರಾಧನೆ ಯೆನಿಸುವುದು.

ದೇವಋಣದಲ್ಲಿ ಪಿತೃ-ಋಷಿಋಣಗಳೂ ಅಡಕವಾಗಿರುತ್ತವೆ.

---

ಅರ್ಥವನ್ನು ತಿಳಿಸುವುವು. ಶಬರಿಯು ರುಚಿನೋಡಿ ಉತ್ತಮವೆಂದು ಕಂಡುಬಂದ, ಪ್ರಕೃತಿದತ್ತವಾದ ಫಲಗಳನ್ನು ರಾಮಲಕ್ಷ್ಮಣರಿಗೆ ಅರ್ಪಿಸಿದಳು. ಶಬರಿಯ ಭಕ್ತಿಭಾಜನದಲ್ಲಿದ್ದ ದೇವದತ್ತಫಲಗಳನ್ನು ರಾಮನು ಸಂತೋಷದಿಂದ ಸ್ವೀಕರಿಸಿ ಋಣದಿಂದ ಮುಕ್ತನಾದನು. ಲಕ್ಷ್ಮಣನು ನಿರಾಹಾರ (ನಿರಶನ) ವ್ರತವನ್ನು ಪ್ರಚ್ಛನ್ನವಾಗಿ ಆಚರಿಸುತ್ತಿದ್ದುದರಿಂದಲೂ ಬಹಿರಂಗವಾಗಿ ಶಬರಿಯ ಉಚ್ಛಿಷ್ಟಗಳೆಂಬ ಭಾವನೆಯಿಂದಲೂ ಆ ದಿವ್ಯಫಲಗಳ ಸಾನ್ನಿಧ್ಯದಿಂದ ಉಂಟಾದ ಋಣವನ್ನು ಉದಾಸೀನಮಾಡಿ ಸ್ವೀಕರಿಸಲಿಲ್ಲ. ಆದರೆ ಋಣವು ಪ್ರಾಪ್ತಿಯಾಗಿ ಹೊರಿಸಲ್ಪಟ್ಟದ್ದರಿಂದ ತಪ್ಪಿಸಿಕೊಳ್ಳುವುದು ಅಸಂಭವವಾಯಿತು. ಆ ಫಲಗಳು ಅದೇ ಸ್ಥಳದಲ್ಲಿ ಸಂಜೀವನ ಮೂಲಿಕೆಗಳಾಗಿ ಬೆಳೆದು ಲಕ್ಷ್ಮಣನು ಲಂಕೆಯಲ್ಲಿ ಮೂರ್ಛಿತನಾಗಿದ್ದಾಗ, ರಸವಾಗಿ ಶರೀರದಲ್ಲಿ ವ್ಯಾಪಿಸಿ ಜೀವದಾನ ಮಾಡುವಂತಾಯಿತು. (ಭಾವಿ ವ್ಯಾಪಾರದ ಕಾರ್ಯಕಾರಣ ಋಣಾನುಬಂಧವೂ ಇದರಿಂದ ವ್ಯಕ್ತವಾಗುವುದು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಬಂಧನ ನಿವಾರಣೆ - ಸತ್-ಆವರಣ ಕಲ್ಪನೆ

ವಿದ್ಯುಚ್ಛಕ್ತಿಯ ತರಂಗದಂತೆ ಋಣಶಕ್ತಿತರಂಗಗಳು ಪ್ರಪಂಚವನ್ನು ಆವರಿಸಿ ಸಂಬಂಧಪಟ್ಟವರನ್ನು ಸುತ್ತುಗಟ್ಟುವುವು. ವಿಪ್ರತಿಕ್ರಿಯಾಫಲವೂ ಸಹ ಈ ಶಕ್ತಿಯ ಪ್ರಭಾವಕ್ಕೆ ಒಳಪಟ್ಟಿದೆ. ಋತಕ್ಕೆ ವಿರೋಧವಾಗಿ ವರ್ತಿಸುವವರ ಕ್ರಿಯೆಯ ಹಿಂದುಗಡೆಯಲ್ಲಿ ವಿಪ್ರತಿಕ್ರಿಯಾ (ವ್ಯಾಪಾರವೂ) ಬೆಳೆದು ವಿರುದ್ಧಾಚರಣೆ ಮಾಡುವವರನ್ನು ವಿರುದ್ಧಫಲಕ್ಕೆ ಗುರಿಮಾಡುವುದು. ಇದಕ್ಕೆ ಅನುಗುಣವಾಗಿ ಋತವಿರೋಧಿಯ ಕ್ರಿಯೆಯಿಂದ ಬಾಧಿಸಲ್ಪಟ್ಟವರು ಅದರ ದೆಸೆಯಿಂದ ಬಿಡುಗಡೆ ಹೊಂದಲು ಮಾಡುವ 'ಪ್ರಾರ್ಥನೆ' ಎಂಬ ಋಣದಿಂದ ಬದ್ಧಳಾದ ಪ್ರಕೃತಿಯ ಲೀಲೆಗೆ ಒಳಪಟ್ಟಂತೆ ಪರಮಾತ್ಮನು ಉಪಾಧಿಗಳನ್ನು ಧರಿಸಿ ಪ್ರಜಾ ಯೋಗಕ್ಷೇಮಕ್ಕಾಗಿ ಯತ್ನಿಸಬೇಕಾಗುವುದು ಋತಾನುರೋಧವಾಗಿ 'ವರಪ್ರದಾನ' ವಾಗುವುದು. ಋತವಿರೋಧವಾಗಿ ನಡೆಸಿದ ಕರ್ಮವು ಬಾಧೆಯನ್ನುಂಟುಮಾಡಿ, ಶಾಪವೆಂಬ ವಿಪ್ರತಿಕ್ರಿಯಾಫಲವನ್ನು ಸ್ವತಃ ಕರ್ತೃವಿಗೆ ತಂದುಕೊಡುವುದು. ಬಾಧೆಗೊಂಡವರು ಶಾಪವನ್ನು ಬಾಯಲ್ಲಿ ಉಚ್ಚರಿಸಬೇಕಾಗಿಲ್ಲ.

ಋಣ ಬಂಧನಗಳು ಜನ್ಮಗಳ ಬೆಳೆವಣಿಗೆಗೆ ಕಾರಣವಾಗುವುವು. ನಿವಾರಣೀಯವಾದ ಮತ್ತು ಅನಿಷ್ಟಫಲದಾಯಕ ಬಂಧನಗಳು ನಾಮಾವಶೇಷವಾದರೆ ಪ್ರಪಂಚದಲ್ಲಿರುವ ಪ್ರಜಾವರ್ಗವು ಸಂಸ್ಕೃತಿಯ ಉನ್ನತ ಹಂತಗಳನ್ನೇರಿ ಶ್ರೇಯಸ್ಸನ್ನು ಸಾಧಿಸಬಹುದು. ಋಣದಿಂದ ರೂಪಿತವಾದ ಪ್ರಾರಬ್ಧ ಕರ್ಮಫಲವನ್ನು ತಪ್ಪಿಸಲಾಗುವುದಿಲ್ಲ. ದುಷ್ಟಫಲಪ್ರದವಾದ ಬಂಧನಗಳು ಉಂಟಾಗದಂತೆ ಋಣಗಳ ಪರಿಮಿತಿಯನ್ನು ರೂಪಿಸಿ ಉತ್ತಮವಾದ ಮನೋಧರ್ಮಗಳು ಸುಸಂಸ್ಕೃತವಾಗಿ ಹರಡುವುದಕ್ಕೆ ತಕ್ಕ ಆವರಣಗಳನ್ನು ಕಲ್ಪಿಸಲು ಗೊತ್ತಾಗಿರುವ ಶ್ರೇಷ್ಠತಮವಾದ ಕರ್ಮವು ಮಾನವತೆಯ ಹೊಣೆಗಾರಿಕೆಗೆ ಸೇರಿದುದಾಗಿದೆ. ಇಂತಹ ಸತ್-ಆವರಣಗಳಿಂದ ಸದ್ಭಾವನೆಗಳು ದೇಹಿಗಳಲ್ಲಿ ರೂಢಮೂಲವಾಗಿ ದುಷ್ಟ ಫಲವನ್ನು ಕೊಡುವ ಋಣ-ವಾಸನೆಗಳೂ ದುಷ್ಟ ಪ್ರಾರಬ್ಧ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮಗಳೂ ತಪ್ಪುವುವು. ಜೀವನ ಯಾತ್ರೆಯು ಸುಗಮವಾಗಿ ಸುಖ ಪ್ರದವಾಗುವುದು. ಇದಕ್ಕಾಗಿ ಅಧ್ಯವಸಾಯ ಮಾಡುವ ಹೊಣೆಗಾರಿಕೆಯು ಪ್ರತಿ ವ್ಯಕ್ತಿಯು, ಪ್ರತಿ ಕುಟುಂಬದ, ಪ್ರತಿ ಸಮಾಜದ ಪ್ರತಿ ದೇಶದ ಮತ್ತು ವಿಶ್ವದ ರಾಜನೀತಿ ರಾಜ್ಯ ಶಾಸನಗಳ ಮೇಲೂ ಸ್ವತಃ ಹೊರಿಸಲ್ಪಟ್ಟದ್ದಾಗಿರುತ್ತದೆ. ರಾಜ್ಯದ ಪಂಚವಲಯಗಳಲ್ಲಿಯೂ ಬಿಂಬ ಪ್ರತಿ ಬಿಂಬ ಭಾವದಂತೆ ಕಾರ್ಯ ನಿರ್ವಾಹವು ನಡೆಯುವುದರಿಂದ ಪ್ರಜೆಗಳಲ್ಲಿ ಸಭ್ಯ ವರ್ತನೆಯು ನೆಲೆಗೊಳ್ಳುವುದು. ಪ್ರಪಂಚದ ಅಸ್ತಿತ್ವಕ್ಕೆ ಮೂಲಾಧಾರವಾದ ಗೃಹಸ್ಥಾಶ್ರಮವೂ ದಾಂಪತ್ಯ ಮನೋಭಾವವೂ ಸುವ್ಯವಸ್ಥಿತವಾಗುವುದರಿಂದ ಋಣಕಲ್ಪನೆ, ಋಣಾನುಭವಗಳು ಆನಂದದಲ್ಲಿ ಪರಿಣಾಮವಾಗುವುವು. ಗೃಹೀ, ಕುಟುಂಬೀ - ಅಲ್ಲದವನು ಯಾವ ವಿಧವಾದ ಕುಟುಂಬ ಸಮಾಜಾದಿ ರಾಜ್ಯವಲಯಗಳ ಕಾರ್ಯಭಾರಕ್ಕೆ ಅರ್ಹನಲ್ಲವೆಂಬುದು ಪ್ರತಿವ್ಯಕ್ತಿಯ ಹೃದ್ಗಂದಲ್ಲಿಯೂ ಚಿರಸ್ಥಾಯಿಯಾಗುವ ಕ್ರಮವು ರಾಜ್ಯ ಶಾಸನದಲ್ಲಿ ಅಳವಡಿಸಲ್ಪಡಬಹುದು. ಅಪತ್ನೀಕನಿಗೂ ಅಥವಾ ಅವಿವಾಹಿತನಿಗೂ ಕುಟುಂಬಿಯಲ್ಲದವನಿಗೂ ಸ್ಥಾನವಿಲ್ಲವೆಂದು ಸ್ವತಃ ಪರಿಶೀಲನೆಗೆ ಅವಕಾಶವಾಗುವುದು. ಆಯಾ ದೇಶದ ವಾಯುಗುಣ, ಪ್ರಕೃತಿ, ಋತಗಳಿಗೆ ತಕ್ಕಂತೆ ಜೀವನ ವ್ಯವಸ್ಥೆಯಾಗುವ ಹಾಗೆ ವ್ಯಕ್ತಿಯು ಗೃಹಸ್ಥನಾಗುವ ಕುಟುಂಬಿಯಾಗುವ-ವಯಸ್ಸು ಪ್ರಾಪ್ತವಾದೊಡನೆ ಸರ್ವ ಸಾಮಾನ್ಯವಾಗಿ ದ್ವಿತೀಯಾಶ್ರಮವನ್ನು ಹೊಂದುವ ಹೊಣೆಗಾರಿಕೆಯುಳ್ಳವನಾಗಿ, ಸ್ತ್ರೀಯರ ಸ್ತ್ರೀತ್ವ ಮರ್ಯಾದೆಯನ್ನೂ ರಕ್ಷಿಸುವ ಪರಮ ಶ್ರೇಯಸ್ಸಾಧನವನ್ನು ಕೈಗೊಳ್ಳಬೇಕು. ಇವರಿಂದ ಸತ್ಕರ್ಮವೂ, ಸುಸ್ಕೃತಿಯೂ, ರಾಜನೀತಿಯೂ ಪರಸ್ಪರ ಹೊಂದಿಕೆಯಿಂದ ಪುರುಷಾರ್ಥಗಳ ಮತ್ತು ಪಂಚವರ್ಣಗಳ ಋಣಭಾವವನ್ನು ಸಂರಕ್ಷಿಸುವುವು.

ಶ್ರೀ ಶ್ರೀ ಪರಮಹಂಸ ಶ್ರೀ ಶಂಕರಭಗವತ್ಪೂಜ್ಯಪಾದರು ಮಾತೃ ವಾಕ್ಯ ಪರಿಪಾಲನೆಗಾಗಿ ಊರ್ಧ್ವ ಕ್ರಿಯಾದಿಗಳನ್ನು ನಡೆಸಿ ಋಣ ಪ್ರಭಾವವು ಆತ್ಮಸಂಕಲ್ಪಕ್ಕೆ ಅನುಗುಣವಾಗಿರುವುದೆಂದು ಬೆಳಗಿದರು. ಇದೇ ಒಂದು ವಿಶಿಷ್ಟ ಧರ್ಮಶಾಸ್ತ್ರವಾಯಿತು. ಹೀಗೆಯೇ ಸಮಸ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗುಹೋಗುಗಳೂ ಒಂದಲ್ಲದಿದ್ದರೆ ಮತ್ತೊಂದು ವಿಧದಲ್ಲಿ ಋಣವಾಗಿ ಆ ಬಂಧವಿಮೋಚನಕ್ಕೆ ನಡೆಯಬೇಕಾದ ಪರಿಹಾರ ಕಾರ್ಯಗಳೇ ಆಗಿರುವುವು. ಧರ್ಮಶಾಸ್ತ್ರೋಕ್ತಿಗಳೂ ಸಹ ಆಯಾ ಋಷಿಗಳ ದಿವ್ಯ ದೃಷ್ಟಿಗೆ ಗೋಚರವಾದ ಅನುಭವ ಸೂಚಕಗಳಾಗುವುವು. ದಿನಂಪ್ರತಿ ನಡೆಯುವ ಕೋಟಿಗಟ್ಟಲೆ ವ್ಯಾಪಾರಗಳಿಗೆಲ್ಲಾ ಸಾಮಾನ್ಯವಾಗಿರುವಂತೆ ಆರಿಸಿದರೂ ಧರ್ಮ ಶಾಸ್ತ್ರೋಕ್ತಿಗಳು ಅನಂತವಾಗಿಯೇ ನಿಲ್ಲುವುವು. ಆದುದರಿಂದ ಕೇವಲ ಮಾರ್ಗದರ್ಶನಕ್ಕಾಗಿ ಅನನುಭವಿಗಳಿಗೆ ಅನುಭವ ಶಾಲಿಗಳು ತೋರಿಸುವ ಸೂಕ್ಷ್ಮವಾದ ಕರ್ಮಗತಿಯಾಗಿರುವುವು. ಈ ಸೂಕ್ತಿ ಪಂಕ್ತಿಗಳನ್ನು ಕೈಯಲ್ಲಿ ಹಿಡಿದು ಮಾನವರೂ, ಮೃಗಗಳೂ ಮೊದಲಾದ ಜೀವರಾಶಿಗಳ ಪ್ರತಿಕ್ಷಣದ ವ್ಯಾಪಾರವನ್ನು ಪರೀಕ್ಷಿಸುವುದ ರಿಂದ ಆತ್ಮವನ್ನು ಆಕ್ಷೇಪಿಸಿದಂತಾಗುವುದು. ಈ ಆಕ್ಷೇಪವು ಋಣವನ್ನು ಅಲುಗಾಡಿಸಲು ಶಕ್ತಿ ಇಲ್ಲದೆ ಮುರಿದು ಬೀಳುವುದು. ಈ ಬಗೆಯ ಋಣವು ವಿರೋಧವಾಗದಂತೆ ಎಚ್ಚರಿಕೆ, ಮುಂಜಾಗ್ರತೆ ಕಾರ್ಯಕ್ರಮ ಗಳಲ್ಲಿ ಅಧಿಕಾರವಿದೆಯೇ ಹೊರತು ನಡೆದು ಹೋದ, ನಡೆಯಬೇಕಾದ ವ್ಯಾಪಾರಗಳ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ.

## ಋಣರಹಸ್ಯ

ಋಣ ಮೂಲವಾದ ಪ್ರಪಂಚದಲ್ಲಿ ಸರ್ವ ಬಂಧನ ಮೂಲವಾದ ಮನಸ್ಸಿನ ವ್ಯಾಪಾರವು ಸರ್ವತೋಮುಖವಾದ ಸಂಕಲ್ಪ, ಯತ್ನ, ಸಿದ್ಧಿ ಮತ್ತು ವಿಪ್ರತಿಕ್ರಿಯೆಗಳಿಗೆ ಗುರಿಯಾಗುವುದು. ಪರಮಾತ್ಮನ ಅಂಶವಾದ ಗುಣಭೂಯಿಷ್ಠ ದೇವತೆಗಳ ಸಹಾಯವನ್ನು ಬಯಸುವುದ ರಿಂದ ಸಹಾಯ ಋಣವು ಆವರಿಸುವುದು. ಅನೇಕರು ಇಂತಹ ಸಹಾಯ ಋಣವನ್ನು ಪರಿಹರಿಸಿಕೊಳ್ಳದೆ, ಪರಿಹರಿಸಿಕೊಳ್ಳಲಾರದೆ ವಿಸ್ಮೃತ್ಯಾದಿಗಳಿಂದ ಉದಾಸೀನರಾಗುವುದರಿಂದ ಅದು ವಿಪ್ರತಿಕ್ರಿಯೆ ಯಾಗಿ ಋಣಕರ್ತೃವನ್ನೇ ಸ್ವತಃ ಸೂಕ್ಷ್ಮರೂಪವಾಗಿ ಆಶ್ರಯಿಸಿ ಪರಿ ಹೃತವಾಗಬೇಕಾಗುವುದು. ಹೀಗೆ ಋಣಕರ್ತೃವು ಅನುಭವವನ್ನು ಪಡೆದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಾಯಾದಿ ಋಣಗಳನ್ನು ಪರಿಹರಿಸದಿದ್ದರೆ ಋಣಕ್ಕೆ ಆಶ್ರಯವನ್ನು ಕೊಟ್ಟವರು ಸೂಕ್ಷ್ಮ ಕ್ರಿಮಿರೂಪದಲ್ಲಿ ದೇಹಿಯ ದೇಹವನ್ನೇ ಆಶ್ರಯಿಸಿ ಮಜ್ಜಾ ಮಾಂಸಾದಿ ಸಪ್ತಧಾತುಗಳನ್ನು ಅನುಭವಿಸುವುದರ ಮೂಲಕ ಋಣವು ಪರಿಹಾರವಾಗಲೇಬೇಕಾಗಿರುತ್ತದೆ. ಅಪ್ರತಿಹತವಾದ ಆತ್ಮನ ಸ್ವಾಭಾವಿಕವಾದ ಶ್ರೇಯೋ ಮಾರ್ಗವು ಇದಕ್ಕೆ ಅವಕಾಶವನ್ನು ಹೊಂದಿಸುವುದು. ಹೀಗೆ ಸಪ್ತಧಾತುಗಳ ಭಕ್ಷಣಾದಿಗಳಿಂದ ದೇಹಿಯ ದೇಹ ಸುಖವು ಭಂಗವಾಗುವುದು. ಇದನ್ನೇ ರೋಗವೆನ್ನುವೆವು. ಚರ್ಮ ವ್ಯಾಧಿಗಳೂ ಅಂತರಾವಯವಗಳ ವ್ಯಾಧಿಗಳೂ, ಮನೋವ್ಯಾಧಿಗಳೂ ಹೀಗೆ ರೂಪುಗೊಳ್ಳುವುವು. ದೇಹಿಯ ಋಣ ಪರಿಹಾರಕ ವಸ್ತುವು ಪ್ರಕೃತಿಯಲ್ಲಿ ಎಲ್ಲಿ, ಯಾವ ರೂಪದಲ್ಲಿ ಯಾವ ಕಾಲದಲ್ಲಿ ದೊರೆಯುವುದೋ ಅದನ್ನೇ ಆಯಾ ಕಾಲದಲ್ಲಿ ಆಯಾ ರೂಪದಲ್ಲಿ ಪರಿಗ್ರಹಿಸುವುದಕ್ಕೆ ಅನಿರ್ವಚನೀಯವಾದ ಆತ್ಮಶಕ್ತಿಯು ಸಹಕರಿಸುವುದು. ತತ್ಪರಿಗ್ರಹದಿಂದ ಸ್ವಾಗತವನ್ನು ಪಡೆದ ಋಣಪರಿಹಾರಕ ವಸ್ತುವು ಶರೀರವನ್ನು ಹೊಕ್ಕು ದೇಹಿಯ ತತ್ಸಂಬಂಧವಾದ ಸಂಕಲ್ಪಋಣಾದಿಗಳು ಪರಿಹಾರವಾಗುವಂತೆ ಮಾಡುವುವು. ಅನ್ಯ ದೇಹಿಯಿಂದ ಭಕ್ಷಿಸಲ್ಪಟ್ಟ ಸಪ್ತಧಾತುಗಳ ಕ್ಷಯದಿಂದ ವಿವಿಧ ರೋಗಗಳುಂಟಾಗುವುವು. ಜನ್ಮ ಧಾರಣೆಗಾಗಿ ಕಾದಿರುವ ದೇಹಿಗಳು ಋಣಾನುಬಂಧರೀತ್ಯಾ ಜನಿಸುವುದಕ್ಕೂ ವಿಘ್ನವಾಗುವಂತೆ ಧಾತುಹೀನತೆಯುಂಟಾಗುವುದು.

ಇಂತಹ ಸಂದರ್ಭಗಳಲ್ಲಿ ಮೂಲಕಾರಣವನ್ನು ಅರಿತು ಆಯಾ ತತ್ವಪ್ರಧಾನವಾದ, ದೇವತೆಗಳೆನಿಸಿಕೊಳ್ಳುವ ಗುಣ ಶಕ್ತಿ ಕರ್ಮಗಳ ಸಮಾಧಾನಕ್ಕೆ – ಸಾಮ್ಯಕ್ಕೆ – ಉಕ್ತವಾದ ಪರಿಹಾರ ಕರ್ಮಗಳನ್ನು ಆಚರಿಸುವುದರಿಂದ ಮೇಲ್ಕಂಡ ಕರ್ತವ್ಯ ಲೋಪದಿಂದುಂಟಾದ ಬಾಧೆಗಳು ಪರಿಹಾರವನ್ನು ಪಡೆದುದಾಗಿ ಶಮನವಾಗುವುವು. ಇಂತಹ ಪರಿಹಾರ ಕರ್ಮಗಳು ಶಾಂತಿಕರ್ಮಗಳೆಂದು ಪ್ರಸಿದ್ಧವಾಗಿ ದೇಹಿಯ ಪರಿಮಿತಿಯಲ್ಲಿರುವುವು. ಶಾಂತಿಕರ್ಮಗಳಿಂದ, ಋಣ ಫಲಾನುಭವದ ರೀತಿನೀತಿಯನ್ನು ಬದಲಾಯಿಸಿ ಪರಿಹಾರದ ಬೇರೊಂದು ಮುಖವನ್ನು ಕಲ್ಪಿಸಿದಂತಾಗುವುದು. ಒಟ್ಟಿನಲ್ಲಿ ಕರ್ಮ ಫಲಾನುಭವವಾದಂತಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೇಯೋಮಾರ್ಗವು ಲಭಿಸಿದಂತಾಗುವುದು.

ಅತಿ ಸೂಕ್ಷ್ಮವಾದ ಋಣಾನುಬಂಧ ಫಲಾನುಭವವು ಸ್ವಪ್ನದಲ್ಲಿ ಮನಸ್ಸಿನಿಂದಲೇ ಆಗಿಹೋಗುವುದು. ಮುಂದೆ ದೇಹಿಯ ಶ್ರೇಯೋ ಮಾರ್ಗವೂ ಸಹ ಈ ಅನುಭವದಿಂದ ಸೂಚಿತವಾಗಿ ಸ್ವಪ್ನವು ಪರಿಣಾಮ ಕಾರಿಯಾಗುವ ವಿಚಾರವು ಸರ್ವರ ಅನುಭವದಲ್ಲಿರುವುದು.

ರಾತ್ರಿಂಚರರಾಗಿರುವ ದೇಹಿಗಳೂ, ಪಕ್ಷಿಗಳೂ, ಕಾಡುಮೃಗಗಳೂ ಸಹ ಋಣಾನುಬಂಧಾದಿ ಪರಿಮಿತಿಯ ನಿಬಂಧನೆಗೆ ಒಳಪಟ್ಟು ಜನ್ಮವನ್ನು ತಾಳುವುವು. ರಾಷ್ಟ್ರೀಯ, ಸಾಮಾಜಿಕ, ವೈಯಕ್ತಿಕ ದ್ವೇಷಾದಿಗಳಿಂದ ಉಂಟಾದ ಮರಣಗಳು ಋಣದ ಮಿತಿಯನ್ನು ಮೀರಿರುವುದರಿಂದ ಹೆಚ್ಚಿನ ಋಣವನ್ನು ಹೊರಿಸುವುವು. ಆದುದರಿಂದ ಬಂಧನಗಳನ್ನು ಮತ್ತೆ ಮತ್ತೆ ಅನುಭವಿಸಬೇಕಾದುದೂ ಸಹ ಸಾಮಾನ್ಯವಿವೇಕಕ್ಕೆ ಗೋಚರವಾಗುತ್ತದೆ.

ಹೀಗೆಯೇ ಕಳ್ಳತನವನ್ನು ವೃತ್ತಿಯನ್ನಾಗಿ ಹೊಂದಿರುವವರು ತಮ್ಮ ಋಣವನ್ನು ತೀರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯತ್ನಿಸುವರು. ಯಾವ ದೇಹಿಗಳೂ ಹೆಚ್ಚು ಧನವನ್ನು ಇಟ್ಟುಕೊಳ್ಳಲು ಋತದಲ್ಲಿ ಅವಕಾಶವಿಲ್ಲ. ಎಲ್ಲೆಲ್ಲಿ ಹಣವೂ ದ್ರವ್ಯಗಳೂ ಒಟ್ಟಿಗೆ ಸೇರಿವೆಯೋ ಅವೆಲ್ಲವೂ ಗೊತ್ತಾದವರಿಗೆ ಮಾತ್ರ ಸೇರಬೇಕಾದ್ದಾಗಿರುತ್ತದೆ. ಅವುಗಳ ವಿನಿಯೋಗವು ಆಯಾ ಧನ ದ್ರವ್ಯಗಳ ಮೇಲೆ ಸ್ವಾಮ್ಯವನ್ನು ಹೊಂದಿರು ವವರ ಸಂಕಲ್ಪದಂತೆ ನಡೆಯುವುದು. ಭೂಮಿಯಲ್ಲಿ ಬಚ್ಚಿಟ್ಟದ್ದ ನಿಧಿ ನಿಕ್ಷೇಪಗಳನ್ನೂ ಸಹ ಅವುಗಳ ಸ್ವಾಮಿತ್ವವನ್ನು ಹೊಂದಿರುವವರು ಸರ್ಪ ಮೊದಲಾದ ರೂಪಗಳಲ್ಲಿ ಕಾದುಕೊಳ್ಳುವರು ಮತ್ತು ಬಾಧ್ಯರಾದ ವರು ಮಾತ್ರ ಅದನ್ನು ಪಡೆಯುವರೆಂದು ನಡೆವಳಿಕೆಗಳಲ್ಲಿ ಕಂಡುಬಂದಿದೆ.

ಕರ್ತವ್ಯ ಕರ್ಮಗಳ, ಉಪಕಾರಕ್ಕಾಗಿ ಮಾಡುವ ಕರ್ಮಗಳ ಬಣ್ಣ, ತೂಕ, ಬೆಲೆಯನ್ನು ಕಂಡುಹಿಡಿದುಕೊಂಡು ನಡೆಯುವುದರಿಂದ ತತ್ಸಂಬಂಧವಾದ ಋಣಗಳು ಅಂಟಿಕೊಳ್ಳುವುದಿಲ್ಲ; ಹಿಂಬಾಲಿಸುವುದೂ ಇಲ್ಲ. ಸ್ವಾಭಾವಿಕವಾದ ವ್ಯಾಪಾರಗಳಿಂದ ಕೆಲವು ದೇಹಿಗಳಿಗೆ-ಸಸ್ಯ ಗಳಿಗೆ ತೊಂದರೆಯಾಗುವುದನ್ನು ಋಣ ಬಂಧನವನ್ನಾಗಿ ಗ್ರಹಿಸುವು ದಿಲ್ಲ. ಅಡಿಗೆ ಊಟದ ವಿಮರ್ಶೆಯನ್ನು ಮಾಡಿದಾಗ ಪದಾರ್ಥಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಊಟಕ್ಕೆ ಸಿದ್ಧವಾಗುವವರೆಗೂ ಎಷ್ಟೆಷ್ಟು ವಿಧಗಳಲ್ಲಿ ಮಾರ್ಪಾಡನ್ನು ಹೊಂದುವುವು ? ಎಷ್ಟು ಶತಸಹಸ್ರ-ಲಕ್ಷ ವಿಷಯಗಳು ಅವುಗಳ ಸ್ಥಿತಿಗೆ ಹೊಣೆಗಾರರಾಗಿರುವುವು ? ಎಂಬಿವೇ ಮೊದಲಾದವು ವಿವೇಚನೆಗೆ ಬರುವುವು. ಊಟದ ಒಂದು ಸಣ್ಣ ವಸ್ತುವಿಗೆ ಸಂಬಂಧಪಟ್ಟ ಕೋಟಿಗಟ್ಟಲೆ ಕಾರ್ಯ ನಿರ್ವಾಹಕರಿಗೆಲ್ಲಾ ಭೋಜನ ಮಾಡುವವರು ಋಣಿಯಾಗಿರುತ್ತಾರೆ. ಈ ಋಣವನ್ನು ಪರಿಹರಿಸಿಕೊಳ್ಳುವುದಕ್ಕೆ ಅವಶ್ಯಕವಾದ ಪರಿಹಾರೋಪಾಯಗಳು ಕರ್ಮಸಾಕ್ಷಾತ್ಕಾರವನ್ನು ಹೊಂದಿದ ಋಷಿಗಳಿಗೆ ಸ್ವತಃ ಗೋಚರವಾಗಿರುವುವು. ಇವು ವೈಶ್ವದೇವಾದಿ ಕರ್ತವ್ಯ ಕರ್ಮಗಳ ವಿವರವನ್ನು ಪೋಷಿಸುವುವು. ಈ ತತ್ವರಹಸ್ಯವನ್ನು ತಿಳಿಯುವುದೇ ಆನಂದವೆಂಬ (ಋಣ) ಬಾಧಾ ಮೋಕ್ಷವು.* ದೇವತೆಗಳ (ಪರಶಕ್ತಿಗಳ) ಸಹಾಯವನ್ನು ಬೇಡಿ ಅರ್ಚಿಸುವೆವು. ಸಿದ್ಧಿಯೆಂಬ ದೇವತೆಗಳು ಈ ಅರ್ಚನೆಯಿಂದ ತೃಪ್ತರಾಗಿ ದೇಹಿಯು ಅಭೀಷ್ಟಸಿದ್ಧಿಯನ್ನು ಪಡೆಯಲು ಒಳಗೆ ಮತ್ತು ಹೊರಗೆ ಇರುವ ಕೊರತೆಗಳನ್ನು ಹೋಗಲಾಡಿಸುವುವು. ಒಡನೆಯೇ ಸಿದ್ಧಿಗಳು ಸ್ವತಃ ಗೋಚರವಾಗುವುವು. ಅರ್ಚನೆಗಿಂತ ಮೊದಲೇ ಆಗಲಿ ಅರ್ಚನೆಯ ಸಮಕಾಲದಲ್ಲಿಯಾಗಲೀ ಅರ್ಚನೆಯಾದ ನಂತರವೇ ಆಗಲಿ ಋಣವು ಏರ್ಪಟ್ಟು ಕಾರ್ಯವು ಸಿದ್ಧಿಯಾಗುವ ಪರಿಸ್ಥಿತಿಯು 'ಆತ್ಮಸಂಕಲ್ಪ'ಕ್ಕೆ ಸೇರಿದುದಾಗಿದೆ. ಹೀಗೆ ಸಿದ್ಧಿಯಾದ ನಂತರವೂ ಸಿದ್ಧಿಯನ್ನು ಪಡೆದವನು ಮೇಲ್ಕಂಡಂತೆ ಮೂರು ಅವಸ್ಥೆಗಳಲ್ಲಿ ಉಂಟಾಗಬಹುದಾದ ಋಣವನ್ನು ಸ್ವತಃ ಮತ್ತು ಪರತಃ ನಿವೃತ್ತಿ

---

* ಋಣದ ಪ್ರಕ್ರಿಯೆಗನುಗುಣವಾಗಿ ಯಜ್ಞಗಳಲ್ಲಿ ಪಶುವನ್ನು ಅರ್ಪಿಸುವ ಯೋಗವನ್ನು ಹೊಂದಿರುವ, ಪ್ರಾಣಿಗಳು ಸಂಜ್ಞಪನವೆಂಬ ಕ್ರಮದಲ್ಲಿ ಕುಂಡಲಿನಿಯನ್ನು ಉದ್ಬೋಧಿಸಿ ಪ್ರಾಣವು ಬ್ರಹ್ಮರಂಧ್ರದ ಮೂಲಕ ಹೊರಡುವಂತೆ ಮಾಡುವುದರಿಂದ ಯಜಮಾನ, ಅಥವಾ ಯಜಮಾನ ಪ್ರತಿನಿಧಿಯಾದ ಪಶುಗಳು ಋಣಮುಕ್ತರಾಗುವರು. ಯಜಮಾನನೇ ಸಾಕ್ಷಾತ್ತಾಗಿ ತನ್ನ ವಪೆಯನ್ನು ಅರ್ಪಿಸಬಹುದು ಎಂದು ಡಾ. ಎನ್. ಎಸ್. [illegible] ರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿಕೊಳ್ಳಬೇಕು. ಅರ್ಚನೆಗೆ ಮೊದಲೇ ಕಾರ್ಯ ಸಿದ್ಧಿಯಾದರೆ ಅರ್ಚನೆಯನ್ನು ನಿರ್ವಹಿಸಿ ಕೃತಜ್ಞರಾಗಿ ಪರಿಹರಿಸಿಕೊಳ್ಳಬೇಕು. ಅರ್ಚನೆಯಾದನಂತರ ಸಿದ್ಧಿಯನ್ನು ಪಡೆದ ಮೇಲೂ ಕೃತಜ್ಞರಾಗಿದ್ದು ಅಹಂಕಾರವನ್ನು ನೀಗಿಕೊಳ್ಳುವುದರಿಂದ ಋಣವು ಬಂಧಿಸುವುದಿಲ್ಲ, ಬಾಧಿಸುವುದೂ ಇಲ್ಲ. ಋಣದ ಪ್ರಾಬಲ್ಯವೇ ದೇವತಾ ಸಂಬಂಧದ ಮೂಲಕ ಶರೀರದಲ್ಲಿ ನಿತ್ಯ ರೋಗಗಳ ರೂಪಿನಲ್ಲಿ ಋಣಪರಿಹಾರಕ್ಕೆ ಯತ್ನಿಸುವುದು.

ಅರ್ಚನೆಯ ಬಣ್ಣ, ತೂಕ, ಬೆಲೆಗಳು ಕಾರ್ಯಸಿದ್ಧಿಗೆ ಅಥವಾ ಪೂಜಿಸುವವರ ಶಾರೀರಕ, ಮಾನಸಿಕ ಮತ್ತು ಬಾಹ್ಯ ಸಂಪತ್ ಸಂಸ್ಥಿತಿಗೆ ತಕ್ಕಂತೆ ಇರುತ್ತವೆ. ಸ್ವ ಮತ್ತು ಪರ ಎನಿಸಿಕೊಳ್ಳುವ ದೇಹಿಗಳು ಸೇರಿ ಪರ್ಯಾಲೋಚಿಸುವಾಗ ಸಂಸ್ಕೃತವಾದ ಹೃದಯಾಂತರಾತ್ಮನಿಗೆ ಇವು ಗೋಚರವಾಗುವುವು. ಹೀಗೆ ಗೋಚರವಾಗಿ ತಿಳಿದುದಕ್ಕೆ ವಿರೋಧವಾಗಿ ನಡೆದರೆ ಋಣ ಭಾರವು ಮತ್ತಷ್ಟು ಹೆಚ್ಚುವುದು.

ಪ್ರಾರ್ಥನೆಯೆಂಬ ಋಣಬಂಧನವನ್ನು ಕಲ್ಪಿಸಿಕೊಂಡ ದೇಹಿಗಳು 'ದೇವತೆ'ಗಾಗಿ ಅತಿಶಯ ಪ್ರಮಾಣದಲ್ಲಿ ಧನವನ್ನು ಅರ್ಪಿಸಬಹುದು ; ಅರ್ಪಿಸುವಂತೆ ವಿಜ್ಞಾಪಿಸಿಕೊಳ್ಳಬಹುದು. ಇದರಿಂದ ದೇವತೆಯು ಋಣಬಂಧನಕ್ಕೆ ಸಿಕ್ಕಿದಂತಾಗಿ, ದೇಹಿಗಳ ಪ್ರಾರ್ಥನೆಯು ಸಿದ್ಧಿಸುವುದರ ರಹಸ್ಯವು ಋಣದ ಪರಿಮಿತಿಯಲ್ಲಿ ಬರುವುದು. ದೇಹಿಗಳು ತಮ್ಮ ಕ್ಲೇಶಗಳಿಗೆ ಕಾರಣವಾದ ಋಣವನ್ನು ಪರಿಹರಿಸಿಕೊಳ್ಳಲು ದಿಕ್ಕು ತೋರದೆ ವಿಶ್ವವ್ಯಾಪಕ ಪರಮಾತ್ಮನ ಮೂಲಕ ಹಿರಣ್ಯಾದಿ ದ್ರವ್ಯಗಳನ್ನು ಅರ್ಪಿಸಿ ವಿವಿಧ ಋಣಗಳನ್ನು ಪರಿಹರಿಸಿಕೊಳ್ಳುತ್ತಾರೆ.

ಉದ್ದಿಷ್ಟ ದೇವತೆಯ ಪ್ರತಿಷ್ಠಾಸ್ಥಾನವನ್ನಾಗಲೀ ದೇವತಾ ಮೂರ್ತಿಯನ್ನಾಗಲೀ ನೋಡಲೇಬೇಕೆಂಬ ನಿಯಮವಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಯಾವ ದೇವತಾ ಮೂರ್ತಿಯನ್ನು ಹೃದಯದಲ್ಲಿ ಭಾವಿಸುತ್ತಾರೋ ಆ ಮೂರ್ತಿಯೇ ವಸ್ತುತಃ ಗೋಚರವಾಗದಿರಬಹುದು.

ಸರ್ವದೇವನಮಸ್ಕಾರಃ ಪರಮಾತ್ಮಾನಂ ಪ್ರತಿಗಚ್ಛತಿ ಎಂಬಂತೆ ದೇಹಿಗಳ ಋಣಗಳ ಪರಿಹಾರವೇ ಪ್ರಧಾನವಾಗಿರುವುದರಿಂದಲೂ ಅರ್ಪಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ರವ್ಯವು ಋಣಪರಿಹಾರಕ್ಕೆ ಯಾವ ಮೂಲಕವಾದರೂ ವಿನಿಯೋಗವಾಗುವುದಾಗಿದೆ ಎಂದು ಸಮಾಧಾನ ತಂದುಕೊಳ್ಳಬೇಕು.

ಕರ್ಮ ಸಾದ್ಗುಣ್ಯಕ್ಕೆ ಪ್ರತಿಯಾಗಿ ತನು ಮನ ಧನ – ಸಂಪತ್ತುಗಳಲ್ಲಿ ಆವಶ್ಯಕವಾದ ಭಾಗವನ್ನು ತೆಗೆದಿಟ್ಟು ಅರ್ಪಿಸಬೇಕು. ಕಡಿಮೆಯಾದರೂ ಋಣಭಾರವೇ, ಹೆಚ್ಚಾದರೂ ಋಣಭಾರವೇ. ಈ ರಹಸ್ಯವನ್ನು ತಿಳಿಯದೆ ಹೆಮ್ಮೆಯಿಂದ ಅತಿಯಾಗಿ ಮೆರೆದರೂ ಕರ್ಮವು ವಿರೋಧ ಫಲಪ್ರದವಾಗುವುದು. ತನ್ನ ಅವಸ್ಥೆಗಿಂತ ಕೆಳಗಿನ ಅಂತಸ್ತಿಗೆ ಇಳಿದು ಕರ್ಮ ಲೋಪ ಮಾಡಿದರೂ, ಅಂದರೆ ಅವಶ್ಯವಾದುದನ್ನು ದಾನ ಮಾಡಲು ಮೋಹದಿಂದ ಹಿಂದೆಗೆದರೂ ಕರ್ಮವು ವಿರೋಧಫಲಪ್ರದವಾಗುವುದು. ವೃಥಾ ಆರೋಪ, ಪ್ರೇರಣೆ, ಪ್ರತಾರಣೆಗಳಿಂದ ಮಿತಿಯನ್ನು ಮೀರಿ ಅಥವಾ ಮಿತಿಯಿಂದ ಇಳಿದು ನಡೆದ ಕರ್ಮಗಳು ಕರ್ಮ ಭಾಗಿಗಳೆಲ್ಲರನ್ನೂ ದೋಷಕ್ಕೆ ಗುರಿಮಾಡುವುವು.

ಹೀಗೆ ಕರ್ಮವೇ ಶಾಪವೆನಿಸುವುದು. ಎಂದರೆ ತನ್ನ ಕುತ್ಸಿತ ವರ್ತನೆಯು ತನಗೆ ವಿರೋಧವಾಗಿ ನಡೆದು ಋಣವನ್ನು ಹೊರಿಸುವುದು.

ಸಾರ್ವಜನಿಕ ಕಾರ್ಯಗಳಲ್ಲಿ ನಾಯಕರಾದವರಿಗೆ ಇಂತಹ ಋಣಬಾಧೆಗಳು ಭಯಂಕರವಾಗಿರುವುವು. ರಾಜಾ ರಾಷ್ಟ್ರಕೃತಂ ಪಾಪಂ ಅನುಭವತಿ. ಎಂಬುದೂ ಇದೇ ಸಂದರ್ಭದಲ್ಲಿಯೇ. ಆದರೆ ರಾಜನನ್ನು ಅದಕ್ಕೆ ಗುರಿಪಡಿಸಿದ ರಾಷ್ಟ್ರವೂ (ಪ್ರಜೆಗಳೂ) ತಮ್ಮ ಔದಾಸೀನ್ಯಾದಿಗಳಿಗೆ ತಕ್ಕ ಪ್ರತಿಫಲವನ್ನು ಅನುಭವಿಸುತ್ತಾರೆ. ವ್ಯವಸ್ಥೆಗಾಗಿ ಆರಿಸಲ್ಪಟ್ಟ ಅಧಿಕೃತನಾದ ರಾಜ–ನಾಯಕನಿಗೂ ತನ್ನ ಹೊಣೆಗಾರಿಕೆಯ ಲೋಪಕ್ಕೆ ತಕ್ಕ ಪ್ರತಿಫಲವು ಋಣ ರೂಪದಲ್ಲಿ ಬೆನ್ನುಹತ್ತುವುದು.

ಸಾರ್ವಜನಿಕ ಕಾರ್ಯಗಳು ಅವ್ಯವಸ್ಥಿತವಾದಾಗ ಅವುಗಳಿಗೆ ಸಹಕಾರವನ್ನಿತ್ತ ಕನಿಷ್ಠವ್ಯಕ್ತಿ ಪದಾರ್ಥ ಮೊದಲುಗೊಂಡು ಶ್ರೇಷ್ಠ ಪದವಿಯ ನಾಯಕಸ್ಥಾನದಲ್ಲಿರುವವರು ಋಣಬಾಧೆಯನ್ನು ಅವರವರ ಅವಸ್ಥೆಯ ಪ್ರಮಾಣಕ್ಕೆ ತಕ್ಕಂತೆ ಅನುಭವಿಸಲೇ ಬೇಕು. ಸುವ್ಯವಸ್ಥಿತವಾದಾಗ ಸಾರ್ವಜನಿಕ ಕಾರ್ಯಗಳ ಫಲವನ್ನು ಸಂತೋಷದಿಂದ ಅನುಭವಿಸುತ್ತಾರೆಂಬುದರಿಂದಲೇ ದುಷ್ಟಫಲಕ್ಕೂ ಅವರು ಸಿದ್ಧರಾಗಿರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕೆಂದು ಕರ್ಮ ವ್ಯವಹಾರವು ಹೇಳುತ್ತದೆ.

ಈ ಮೇಲ್ಕಂಡ ಬಂಧನಗಳು ಶ್ರೋತ್ರಿಯ, ಕ್ಷತ್ರಿಯ, ವೈಶ್ಯ ವರ್ತನೆಗಳಿಗೂ ಬಂಧನವನ್ನು ಸ್ವಾಗತಿಸಿದ ಶೂದ್ರಕ್ಕೂ ಸೇರಿರುತ್ತವೆ. ಗುರೂಪದೇಶದಿಂದ ಜ್ಞಾನವೈರಾಗ್ಯವುಳ್ಳವರು ಈ ಬಂಧನ ವ್ಯಾಪಾರಗಳಿಂದ ದೂರ ಸರಿದು ಋಣವು ಅಂಟದಂತೆ ಜಾಗರೂಕರಾಗಿರುತ್ತಾರೆ.

'ಹಂಗು' ನಿವಾರಣೆಗಾಗಿ 'ದಕ್ಷಿಣಾ' ಎಂಬ ಕರ್ಮಾಂಗ ದ್ರವ್ಯವನ್ನು ಕರ್ಮವು ವಿಧಿಸಿರುತ್ತದೆ. ಇದರ ಮರ್ಮವನ್ನು ಅರಿತು ಹೆಮ್ಮೆಯಿಂದ ಹೆಚ್ಚಿಸದೆ, ಕುತ್ಸಿತವಾಗಿ ಕಡಿಮೆ ಮಾಡದೆ ಉಕ್ತವಾದಷ್ಟನ್ನು ಮಾತ್ರ ನೆರವೇರಿಸುವ ಹೊಣೆಗಾರಿಕೆಯೇ ಕರ್ಮಪ್ರಪಂಚದ ಸಾರವಾಗಿರುತ್ತದೆ. ಲೋಕದಲ್ಲಿ 'ಐಶ್ವರ್ಯ ಸಂಪತ್ತು' ಇವೆ ಎಂದಾಗಲೀ, ಇಲ್ಲವೆಂದಾಗಲೀ ಭಾವಿಸಿ ಮನಸ್ಸು ವಿಕಾರವನ್ನು ಹೊಂದಬಾರದು. ಆತ್ಮ, ಮನಸ್ ಮೊದಲಾದ ತತ್ವಗಳು ತತ್ವತಃ ಒಂದೇ ಆದರೂ ಬಂಧನದ ಆವರಣಗಳ ಹೊರೆಯ ಹೆಚ್ಚು ಕಡಿಮೆಯಿಂದ ನೀಚ ಮತ್ತು ಉಚ್ಚಗಳೆನಿಸುವುವು. ಕರ್ಮದ ದೃಷ್ಟಿಯಿಂದ ಸಂಪತ್ತಿನ ಅಸ್ತಿತ್ವವಾಗಲೀ ಅಭಾವವಾಗಲೀ ವಸ್ತುತಃ ಭೇದವನ್ನು ಹೊಂದಿದ್ದರೂ ಗುಣತಃ ಏಕಪ್ರಕಾರವಾಗಿರುವುವು. ಸಂಪತ್ತಿನ ಆಧಿಕ್ಯದಿಂದ ಕರ್ಮೋಕ್ತ ಪ್ರಮಾಣವನ್ನು ಮೀರಿ ಸಂಪತ್ತನ್ನು ಚಲ್ಲಿದರೆ, ಪ್ರಪಂಚವನ್ನು (ಜನಗಳನ್ನು)–ದಾರಿ ತಪ್ಪಿಸಿ ಹಳ್ಳಕ್ಕೆ ತಳ್ಳಿದಂತಾಗುವುದು. ಸಂಪತ್ತಿದ್ದಾಗಲೂ ಕರ್ಮೋಕ್ತ ಪ್ರಮಾಣದ ಅಂಶಕ್ಕೆ ಎರವೆ ಕೆಳಗಿದ್ದರೆ ತನ್ನನ್ನು ತಾನೇ ದಾರಿ ತಪ್ಪಿಸಿ ವಂಚಿಸಿಕೊಂಡು ಇತರರನ್ನೂ ವಂಚಿಸಿ ಪಂಚಭೂತಗಳ, ಅಪ್ಸರೂಪಗಳ ವ್ಯಾಪಾರವನ್ನು ಕೆಡಿಸುವಂತಾಗುವುದು. ಇದರಿಂದ ಋಣಭಾರ ಹೆಚ್ಚಾಗಿ ಇತರರನ್ನೂ ತನ್ನ ಋಣಸ್ಥಿತಿಗೆ ಹೊಣೆಗಾರರನ್ನಾಗಿ ಮಾಡಿ ಬಂಧನಕ್ಕೆ ಗುರಿಪಡಿಸುವಂತಾಗುವುದು. ಇಂತಹ ಸನ್ನಿವೇಶಗಳಲ್ಲಿ ಒಬ್ಬ ದೇಹಿಯಿಂದ ಪರಿಹರಿಸಲ್ಪಡಬೇಕಾದ ಋಣಕ್ಕೆ ಸಂಬಂಧಪಟ್ಟ ಪಾತ್ರಗಳು ಸೂಕ್ಷ್ಮ ಕ್ರಿಮಿರೂಪದಲ್ಲಿ ಶರೀರವನ್ನಾಶ್ರಯಿಸಿ ರೋಗರೂಪದಿಂದ ಋಣವನ್ನು ಪರಿಹರಿಸಿಕೊಂಡು ಹೋಗಬೇಕಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೪. ಕರ್ಮ

'ಕರ್ಮ'ವು ಎಷ್ಟು ಬಳಕೆಯಾಗಿ ರೂಢಿಯಲ್ಲಿರುವುದೋ ಅಷ್ಟೇ ಆಳವಾಗಿಯೂ, ವಿಶಾಲವಾಗಿಯೂ, ದೂರಸ್ಥವಾಗಿಯೂ ಉನ್ನತವಾಗಿಯೂ ಇರುವ 'ಕರ್ಮ ಮೀಮಾಂಸೆ'ಯು-ಕರ್ಮ ಶಾಸ್ತ್ರವು ಪ್ರಜೆಗಳನ್ನು ವಿಸ್ಮಯಗೊಳಿಸುವುದು. ಕರ್ಮ, ಕಾಲ, ಮಂಥನ, ನಾದ, ಸ್ಪಂದ, ಕಲನ, ಜ್ಯೋತಿಃ ಇವುಗಳೆಲ್ಲಾ ಪರ್ಯಾಯ ಪದಗಳು. 'ಕಾಲ' 'ಕಲನ' 'ಕರ್ಮ' ಗಳು ಪರಸ್ಪರ ಐಕ್ಯಗೊಂಡಿರುವ ಭಾವನೆಯಿಂದ ಆನಂದ ಸ್ಫೂರ್ತಿಯು ಉದಯವಾಗಿ ಶ್ರೇಯಃಪ್ರದವಾದ ಯೋಗವೆನಿಸುವುದು. ಈ ಸೂಕ್ಷ್ಮಾಂಶವು ಕಾಲ-ಅಮೃತ ಮಂಥನ-ಯೋಗದ ಶೀರ್ಷಿಕೆಯಲ್ಲಿ ವಿಸ್ತರಿಸಲ್ಪಡುವುದು. ಸ್ಥೂಲವಾಗಿ ಸಾಮಾನ್ಯವಾಗಿ ತಿಳಿಯಬೇಕಾದ ಅಂಶವು ಇಲ್ಲಿ ವಿವರಿಸಲ್ಪಟ್ಟಿದೆ.

## ಕರ್ಮ- ದೇವತಾ- ಇಂದ್ರಿಯಾತೀತ ವಿಷಯ

ಪ್ರಪಂಚ ಮೂಲವಾದ ಕರ್ಮವೂ ಅಥವಾ ಕರ್ಮ ಮೂಲವಾದ ಪ್ರಪಂಚವೂ ಜ್ಞಾನೇಚ್ಛಾಕ್ರಿಯಾಶಕ್ತಿ ಮೊದಲಾದ ಅಸಂಖ್ಯಾತ ಗುಣ ಶಕ್ತಿವಿಶೇಷಗಳಿಂದ ಸಾಧ್ಯವಾಗತಕ್ಕದ್ದಾಗಿದೆ. ಜ್ಞಾನೇಚ್ಛೆಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಭಾವಕ್ಕೆ ಒಳಗಾದ ಮನೋವಿಕಾರವು ವಸ್ತು-ತತ್ವ-ಗಳ ಸಂಬಂಧ ದಿಂದ ಉಂಟಾಗುವುದರಿಂದ ಋಣವೆನಿಸಿಕೊಳ್ಳುತ್ತದೆ. ಈ ಋಣವು ಕಾರ್ಯಗತವಾಗುವುದಕ್ಕಾಗಲೀ ಅಥವಾ ಸಂಯಮನಾದಿಗಳಿಂದ ಅಡಗಿ ಹೋಗುವುದಕ್ಕಾಗಲೀ ಕರಚರಣಾದಿ ಚೇಷ್ಟೆಗಳು ನಡೆಯುವುವು. ತಿಳಿವಳಿಕೆ ಇಚ್ಛೆಗಳೂ ಸಹ ಮನೋವ್ಯಾಪಾರವಾದುದರಿಂದ ಮನಶ್ಚೇಷ್ಟೆಗಳೆನಿಸಿ ಕಲನ ಕರ್ಮಗಳೇ ಆಗಿರುತ್ತವೆ. ಹೀಗೆ ಬ್ರಹ್ಮಾಂಡ ಪಿಂಡಾಂಡಗಳಲ್ಲಿ ನಡೆಯುವ ಸಮಸ್ತ ಚೇಷ್ಟೆಗಳೂ ಕರ್ಮವೆನಿಸುತ್ತವೆ. ಈ ಚೇಷ್ಟೆಗಳಲ್ಲಿ ಇಂದ್ರಿಯಗಳಿಗೆ ಗೋಚರವಾಗುವ ಚೇಷ್ಟೆಗಿಂತಲೂ, ಇಂದ್ರಿಯಾತೀತವಾಗಿ ನಡೆಯುವ ಚೇಷ್ಟೆಗಳ ಸಂಖ್ಯೆಯೇ ಹೆಚ್ಚು.

ಕರ್ಮವು ಫಲವಾಗುವ ರೀತಿಯನ್ನು ಇಂದ್ರಿಯಗಳು ತಿಳಿಯಲಾರವು. ಬೀಜವು ಸಸ್ಯ-ವೃಕ್ಷ-ವಾಗುವುದು. ಕಾಯಿ ಹಣ್ಣಾಗುವುದು ಇತ್ಯಾದಿ ವ್ಯಾಪಾರಗಳು ಮತ್ತು ಫಲಗಳು ಪ್ರತಿಕ್ಷಣವಲ್ಲಿಯೂ ಕಾರಣ ಕಾರ್ಯ ಪರಂಪರೆಯಲ್ಲಿ ಅಡಕವಾಗಿರುವುದನ್ನು ನೋಡುವುದಕ್ಕೂ, ನೋಡಿ ತಿಳಿಯುವುದಕ್ಕೂ ಸಾಧ್ಯವಾಗುವುದಿಲ್ಲ. ಯಂತ್ರಗಳೂ ಸಹ ಮಿತಿಯಾದ ಶಕ್ತಿಯಲ್ಲಿ ಕೆಲಸ ಮಾಡುವುದರಿಂದ ಅವುಗಳ ಸಹಾಯವೂ ವೈಯರ್ಥ್ಯವನ್ನು ಸೂಚಿಸುವುದು.

ಸ್ವಪ್ನದಲ್ಲಿ ಗೋಚರವಾಗುವ ಮನಸ್ಸಿನ ಚೇಷ್ಟಾನುಭವಗಳು ಅಸಂಖ್ಯಾಕಗಳಾಗಿ ಅಪರಿಮಿತಗಳಾಗಿರುವುದನ್ನು ಸರ್ವರೂ ಬಲ್ಲರು. ದೇಹವನ್ನು ಧರಿಸಿದ ದೇಹಿಗೆ ಸ್ವಸ್ವರೂಪಜ್ಞಾನಾನಂದಾನುಭವವೆಂಬ ನಿತ್ಯ ಸಮಾಧಿಸ್ಥಿತಿ ಪ್ರಾಪ್ತಿಯಾಗುವವರೆಗೂ ಕರ್ಮಗಳು ಅಂಟಿಕೊಂಡು 'ದೇಹೀ'- ಎಂದರೆ 'ಕರ್ಮ'- ವೆನ್ನುವಷ್ಟು ಪ್ರಮಾಣದಲ್ಲಿರುವುವು. ಕರ್ಮವೇ ಪ್ರಪಂಚ, ಕರ್ಮವೇ ಬ್ರಹ್ಮ; ಕರ್ಮವೇ ಪೂರ್ಣ ಇತ್ಯಾದಿ ಪದವಾಕ್ಯಗಳು ಕರ್ಮದ ಅನಿರ್ವಚನೀಯ ಸ್ಥಿತಿಯನ್ನು ತಿಳಿಸುವುವು.

ಕರ್ಮದ ವಿಚಾರವಾಗಿ ನಡೆದಿರುವ (ಉಪನ್ಯಾಸ) ವಿಚಾರವು ಭಗವದ್ಗೀತೆಯ 18 ಅಧ್ಯಾಯಗಳಲ್ಲಿಯೂ ವ್ಯಾಪಿಸಿದೆ. ಇವುಗಳನ್ನೆಲ್ಲಾ ಸಂಯೋಜನ ವಿಭಜನೆಯ ಸಂಪುಟೀಕರಣವೆಂಬ ಅಧ್ಯಯನ ಕ್ರಮದಲ್ಲಿ ಸಂಗ್ರಹಿಸಿ, ಕೂಡಿಸಿ, ಉಪನ್ಯಾಸ ಬೋಧನ ಕ್ರಮದಲ್ಲಿ ಅಳವಡಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಯತ್ನವು ಮೊತ್ತಮೊದಲು ಸಂಪುಟೀಕೃತ ಭಗವದ್ಗೀತೆಯಲ್ಲಿ * ಕಾಣುತ್ತದೆ. ಕರ್ಮದ ವಿಷಯವಾಗಿ ಅತ್ಯವಶ್ಯಕವಾಗಿ ತಿಳಿಯಬೇಕಾಗಿರುವ ಕೆಲವು ಮೂಲ ವಿಷಯಗಳ ಸಾರಾಂಶವು ಈ ಗ್ರಂಥದಲ್ಲಿ
23 ಉದಾಹೃತವಾಗಿದೆ.

## ಕರ್ಮ – ಕಾರಣ, ಮೂಲ, ಬೀಜ

ಕರ್ಮವು ನೆರವೇರಬೇಕಾದರೆ ಕರ್ಮಕ್ಕೆ ವಿಷಯವೂ ಮಾಡುವವನೂ ಸಾಮಗ್ರಿಗಳೂ ಕರಚರಣಾದಿ ಚೇಷ್ಟೆಗಳೂ 'ದೈವ' ವೆಂದು ಹೇಳುವ, ಕರ್ಮಫಲವನ್ನು ವಿಧಾಯಕ ಮಾಡುವ ಮತವೂ ಕಾರಣಗಳಾಗಿರುತ್ತವೆ.§ ಮತಕ್ಕೆ ಅನುರೋಧವಾಗಿಯೂ, ವಿರೋಧವಾಗಿಯೂ ಮನೋವಾಕ್ಕಾಯಗಳಿಂದ ಕೆಲಸವು ನಿರ್ವಾಹವಾಗುವುದಕ್ಕೆ ಈ ಐದು ಕಾರಣಗಳೂ ಅತ್ಯವಶ್ಯಕವಾಗಿರುತ್ತವೆ.‡

---

* ಸಂಪುಟೀಕೃತ ಭಗವದ್ಗೀತೆಯು ವಿದ್ವಾಂಸರಿಂದ ಪ್ರಶಸ್ತವೆನಿಸಿ ಶ್ರೀ ಮೈಸೂರು ಶ್ರೀಮನ್-ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಪ್ರಭುಗಳ ಮನ್ನಣೆಗೆ ಪಾತ್ರವಾಗಿ ಉತ್ತಮ ಸನ್ಮಾನವನ್ನು ಹೊಂದಿದೆ. ಬಹುಜನ ಕನ್ನಡಿಗರು ಪುಸ್ತಕವನ್ನು ಆದರಿಸಿ ಅನೇಕ ಸಂಶಯಗಳನ್ನು ಹೋಗಲಾಡಿಸಿಕೊಂಡಿರುತ್ತಾರೆ.

§ ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।
ವಿವಿಧಾಶ್ಚ ಪೃಥಕ್ ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥
ಗೀ. 18, 14.

‡ ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥
ಗೀ. 18–15.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಕರ್ಮ – ಅಂಗ

ಕರ್ಮವನ್ನು ಮಾಡುವಂತೆ ಪ್ರೇರಣೆ–ಚೋದನೆ–ಯಾಗಲು ತಿಳಿಯಲ್ಪಡುವ ವಸ್ತು ಅದನ್ನು ತಿಳಿಯುವವನು ಮತ್ತು ಅದರ ತಿಳಿವಳಿಕೆಗಳೆಂಬದಾಗಿ ಮೂರು ಅಂಗಗಳಿರುತ್ತವೆ.* ಸಂಗ್ರಹ ಮಾಡಿ ಹೇಳುವಾಗ ವಿಷಯ, ಮಾಡುವವನು ಮತ್ತು ಸಾಮುಗ್ರಿಗಳೆಂಬದಾಗಿ ಕರ್ಮದ ಮೂರು ಅಂಶಗಳು ಕಾಣುತ್ತವೆ.§

ಗುಣವನ್ನು ಪ್ರಧಾನಮಾಡಿ ಎಣಿಸಿದಾಗ ಮಾಡುವವನು, ವಿಷಯ, ತಿಳಿವಳಿಕೆಗಳು ಮುಖ್ಯ ಕಲ್ಪವಾಗುವುವು.‡ ಸತ್ವರಜಸ್ತಮೋ ಗುಣಗಳು ಪ್ರತಿ ಹಂತದಲ್ಲಿಯೂ ಪ್ರತಿಯೊಂದು ವಿಷಯಕ್ಕೂ ಅಥವಾ ವಸ್ತುವಿಗೂ ಅನ್ವಯಿಸುವುವು.†

## ಕರ್ಮ ನಿರ್ವಾಹ – ಪ್ರಕೃತಿ

ಸರ್ವ ಪ್ರಕಾರದಲ್ಲಿಯೂ ಕರ್ಮಗಳು ಪ್ರಕೃತಿಯ ಗುಣಗಳಿಂದ ನಿರ್ವಹಿಸಲ್ಪಡುವುವು. ಅಂದರೆ ಪ್ರಕೃತಿಯಿಂದಲೇ ಕೆಲಸಗಳು ನಡೆಯುವುವು. ಸಮಸ್ತ ವಸ್ತುಗಳೂ ಪ್ರಕೃತಿಯ ಅಂಶವಾಗಿರುವುದರಿಂದ

---

* ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಗೀ. 18–18.

§ ಕರಣಂ, ಕರ್ಮ, ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ।
ಗೀ. 18–18.

‡ ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ।
ಗೀ. 18–19.

† ಗೀತಾ — 18–29 ; 36, 20, 21, 22, 30 ... 35, 37 ... 39 ॥ 23 ... 25 ॥ 17–7 ... 22 ॥ 14–16 ॥
18–2 6 ... 28 ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕೃತಿಯೊಡನೆ ಕೂಡಿಕೊಂಡಿರುವುವು.*

ಕರ್ಮ ನಿರ್ವಾಹಕ್ಕೆ ತಕ್ಕಂತೆ ಬ್ರಹ್ಮಾಂಡದಲ್ಲಿ ಋತಾನುಗುಣವಾಗಿ ನಡೆಯುವ ಪಂಚಭೂತ ವ್ಯಾಪಾರಗಳನ್ನು ನಕ್ಷತ್ರ ಮಂಡಲದ ಜ್ಯೋತಿರ್ಗ್ರಹ ಮಂಡಲದ ಕಲನ ಭ್ರಮಣಾದಿಗಳನ್ನೂ ಭೂಮಿಯೂ ಸಹ ಉಳಿದ ಗ್ರಹಗಳ ದೃಷ್ಟಿಯಿಂದ ಜ್ಯೋತಿರ್ಗ್ರಹವಾಗಿ ನಡೆಸುವ ವ್ಯಾಪಾರಗಳನ್ನೂ ಪ್ರಕೃತಿಯೇ ಪ್ರಕಾಶಪಡಿಸಿ ನಿದರ್ಶನಾದಿಗಳಿಂದ ತಿಳಿಸುವುದಾಗಿದೆ.

ಸ್ಪಷ್ಟವಾದ ಚೈತನ್ಯಯುಕ್ತರಾದ ದೇಹಿಗಳಿಂದ ಸಸ್ಯತರು, - ಕ್ರಿಮಿಕೀಟಮೃಗಮಾನವಾದಿಗಳ ದೇಹಗಳೂ ವ್ಯಾಪಾರವೂ ಸಂಕಲ್ಪ-ಋಣಕ್ಕೆ ತಕ್ಕಂತೆ ರೂಪಿಸಲ್ಪಡುವುವು. ಕೇವಲ ಸೃಷ್ಟಿ, ಸ್ಥಿತಿ, ಲಯ ಗುಣಗಳುಳ್ಳ, ಕರ್ಮಗಳು ಮಹತ್ತಮ ಸಾಮಾನ್ಯ ಆವರ್ತನಗಳಾಗಿ ಸರ್ವ ಜಂತುಗಳಲ್ಲಿಯೂ ಸಾಮಾನ್ಯವಾಗಿ ನಿರ್ವಾಹವಾಗುವುವು. ಇದೂ ಸ್ವಾಭಾವಿಕವಾದ ಸಂಸ್ಕೃತಿಯ ಆಧಾರದ ಮೇಲೆ ನಿಂತಿರುವುದು.

ಸೃಷ್ಟಿಗೆ ಮೂಲವಾದ ಪ್ರಕೃತಿ-ಪುರುಷ, ಸ್ತ್ರೀ-ಪುರುಷ ಕರ್ಮ ವಿಶೇಷಗಳ ನಿರ್ವಾಹಕ್ಕೆ ತಕ್ಕಂತೆ ಅನಂತ ಲಕ್ಷವಿಧವಾದ ದೇಹಗಳು ರೂಪಿಸಲ್ಪಟ್ಟಿರುತ್ತವೆ. ಒಂದೇ ಶರೀರದಲ್ಲಿ ಒಂದೇ ಅವಯವದಲ್ಲಿ ಸ್ತ್ರೀ-ಪುರುಷ ಗುಣ ಕರ್ಮ ಶಕ್ತಿಗಳುಳ್ಳ ವಸ್ತುಗಳು ಅಡಗಿದ್ದು ಕಾಲ ಕರ್ಮಗಳಿಗನುಗುಣವಾಗಿ ವ್ಯಾಪಾರಗಳನ್ನು ನಡೆಸುವ ವೈಶಿಷ್ಟ್ಯವನ್ನು ಹೂಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

ಶರೀರದಲ್ಲಿರುವ ಸ್ತ್ರೀಗುಣ ಕರ್ಮ ಶಕ್ತಿಸಾಧನವಾದ ಅವಯವಗಳೂ ಅಥವಾ ಪುರುಷ ಗುಣ ಕರ್ಮ ಶಕ್ತಿಸಾಧನ ಅವಯವಗಳೂ ಕಾಲಾನಂತರ ಮಾರ್ಪಡುವುವು. ಸ್ತ್ರೀ ಪುರುಷ ಗುಣ ಕರ್ಮ ಶಕ್ತಿಗಳಿಗೆ

---

* ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಗೀ. 7-12 ; 3-27.

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।

ಪ್ರಕೃತಿಂ ಯಾಂತಿ ಭೂತಾನಿ ಗೀ. 3-33 ; ಗೀ. 13-29.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುರೂಪವಾದ ದೇಹಾವಯುವಗಳನ್ನು ಧರಿಸಿದ ಜೀವನು ಏಕಪ್ರಕಾರ ವಾಗಿದ್ದು ಜ್ಞಾನ, ಇಚ್ಛಾ, ಕ್ರಿಯಾತ್ಮಕ ಸಂಕಲ್ಪ ಮತ್ತು ಗುಣಗಳ ಆವರಣಗಳಿಗೆ ಒಳಪಟ್ಟು ನಡೆಯುವ ಕರ್ಮಗಳಿಗೆ ಸಾಕ್ಷಿಯಾಗಿರುತ್ತಾನೆ.

ಸ್ತ್ರೀ ಪುರುಷ ದೇಹಾವಯವಗಳು ವ್ಯಕ್ತಿಯ ಗೋಚರಕ್ಕೆ ಬರದಂತೆಯೇ ಸ್ವಾಭಾವಿಕವಾದ ಕರ್ಮಗಳನ್ನು ನಡೆಸುವುವು. ಬುದ್ಧಿ ಶಕ್ತಿಯೆಂಬ ವೈಶಿಷ್ಟ್ಯವನ್ನು ಹೊಂದಿದ ಮಾನವ ಸ್ತ್ರೀ ಪುರುಷರೂ ಬುದ್ಧಿ ವ್ಯಾಪಾರ-ಆವರಣಕ್ಕೂ ಸನ್ನಿವೇಶಗಳಿಗೂ ಒಳಗಾಗಿ ನಿರ್ವಾಹ ಮಾಡುವರು.

ಬೌದ್ಧಿಕ ಮತ್ತು ಶಾರೀರಕ ಸಂಸ್ಕೃತಿಗಳನ್ನು ಹೊಂದಿ ಶಿಕ್ಷಿತರಾದ ಮಾನವರು ಅಸುರಕರ್ಮಗಳನ್ನೂ ಸುರಕರ್ಮಗಳನ್ನೂ ನಿರ್ವಹಿಸುವರು. ಸ್ತ್ರೀಯರ ಸ್ತ್ರೀಕರ್ಮ ವಿಶೇಷವೂ ಪುರುಷರ ಪುರುಷಕರ್ಮ ವಿಶೇಷವೂ 'ಜೀವ'ನ ಸಂಕಲ್ಪಕ್ಕೆ ಮತ್ತು ಕರ್ಮ ಫಲಕ್ಕೆ ಅನುಗುಣವಾಗಿರುವುದರಿಂದ ಕರ್ಮ ನಿರ್ವಾಹದ ವಿಷಯದಲ್ಲಿ ಸ್ತ್ರೀ ಮತ್ತು ಪುರುಷರ ಅಪ್ರತಿಹತವಾದ ದೈಹಿಕ ವ್ಯಾಪಾರಗಳ ಪ್ರಾಬಲ್ಯವನ್ನೂ ಮಿತಿಯನ್ನೂ ತಿಳಿದು ಆಯಾ ಮಿತಿಯಲ್ಲಿ ಅತ್ಯುತ್ತಮವಾದ ಫಲಪ್ರಾಪ್ತಿಗಾಗಿ ಸಂಸ್ಕೃತಿ ವಿಶೇಷಗಳನ್ನು ರೂಢಿಸಿಕೊಂಡು ದೇವತ್ವದ ಮತ್ತು ಮಾನವತ್ವದ ಪೂರ್ಣ ಸುಖವನ್ನು ನೆಮ್ಮದಿಯಿಂದ ಅನುಭವಿಸುವಂತೆ ಕರ್ಮ ನಿರ್ವಾಹ ಮಾಡುವುದೇ ಋತವೆನಿಸಿ ಶ್ರೇಯಃ ಪ್ರಾಪ್ತಿ ಎನಿಸುವುದು.

## ಕರ್ಮ ಲಕ್ಷಣ

ವಸ್ತುಗಳ ಇರುವಿಕೆ ಮತ್ತು ಸೃಷ್ಟಿಗಳನ್ನುಂಟುಮಾಡುವ 'ವಿಸರ್ಗ'ವು ಕರ್ಮದ ಲಕ್ಷಣವಾಗಿರುತ್ತದೆ.* ವಿಸರ್ಗವೆಂದರೆ

* ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ । ಗೀ. 8-3.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಬಿಡುವುದು" ಎಂತಲೂ 'ಹೋಮ'ವೆಂತಲೂ ಅರ್ಥ. ಒಂದು ವಸ್ತುವಿನಲ್ಲಿ ಮತ್ತೊಂದು ವಸ್ತುವಿನ ಪ್ರವೇಶ ಅಥವಾ ಒಂದರೊಡನೆ ಮತ್ತೊಂದರ ಸಂಬಂಧವೇ ಹೋಮವೆನಿಸುವುದು. ವಿಸರ್ಗವೆಂದರೆ ಲಯವೆಂದು ಅರ್ಥವಾಗುವುದರಿಂದ ಸೃಷ್ಟಿ ಸ್ಥಿತಿ ಲಯಗಳನ್ನುಂಟು ಮಾಡುವುದೇ 'ಕರ್ಮ'ವೆಂಬದಾಗಿ ಹೇಳುತ್ತಾರೆ.

ಅನಿರ್ವಚನೀಯವಾದ ಪ್ರಪಂಚಸೃಷ್ಟಿಯನ್ನು ವರ್ಣಿಸಿ ವಿವರಿಸುವಾಗ 'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್' ಎಂಬ ವಾಕ್ಯವು ಉದಾಹೃತವಾಗಿದೆ. ಇದರ ಅರ್ಥವನ್ನೂ ಅಹಂ ಮಯಿ ಮಾಂ ಜುಹೋಮಿ' ಎಂಬ ವಾಕ್ಯದ ಅರ್ಥವನ್ನೂ ಪರಿಗಣಿಸಿದರೆ ಪುರುಷನು ಪುರುಷನಿಂದ ವಿವರ್ತವಾದ ಪ್ರಕೃತಿಯಲ್ಲಿ ಪ್ರವೇಶ ಮಾಡಿದನು ಅಂದರೆ ಪುರುಷನು ಪುರುಷನಲ್ಲಿ ಪುರುಷವೆಂಬ ಹೋಮವನ್ನು ಮಾಡಿದನು. ಎಂದು ಸ್ಪಷ್ಟವಾಗುವುದರಿಂದ ಸೃಷ್ಟಿಸ್ಥಿತಿಲಯಗಳೆಲ್ಲವೂ ಹೋಮಕರ್ಮದಲ್ಲಿ ಅಡಕವಾಗುವುವು.

## ಕರ್ಮ – ವ್ಯಾಪ್ತಿ

ಕರ್ಮವೆಂದರೆ ಯಜ್ಞ ಅಥವಾ ಕ್ರತು; ಯಜ್ಞ ವಾ ಕ್ರತು ಎಂದರೆ ಧರ್ಮ; ಧರ್ಮ ಎಂದರೆ ಬ್ರಹ್ಮ ಹೀಗೆ ಸರ್ವಂ ಬ್ರಹ್ಮಮಯಂ ಎಂಬದಾಗಿ ಜ್ಞಾನಸಾರ, ಕರ್ಮಸಾರ, ವಿಚಾರಸಾರಗಳ ವಿವೇಚನೆಯ ದೃಷ್ಟಿಯಿಂದ ಪ್ರಧಾನವಾಗಿಯೂ ಗೌಣವಾಗಿಯೂ ಹೇಳುತ್ತಾರೆ.*

---

† ಕರ್ಮಸ್ವರ್ಗೌ = ಬ್ರಹ್ಮಾಪವರ್ಗೌ — ಮಲ್ಲಿನಾಥಕವಿ.

ಜೀವೇಶ್ವರಸಂಗತಿಕರಣರೂಪಃ ಯೋಗಃ ಯಜ್ಞಃ —

ನೀಲಕಂಠದೀಕ್ಷಿತ ಮಹಾಭಾರತ – ಭಾಷ್ಯ.

ಯಾಗಾದಿಃ ಧರ್ಮಃ । ಧರ್ಮಾಣಿ — ಪು. ಸೂ.

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ, । ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥ ಗೀತಾ 3-15.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ತೇನ ವಿನಾ ತೃಣಮಪಿ ನ ಚಲತಿ' ಎಂಬಂತೆಯೂ 'ಆತ್ಮನು ಪ್ರಕೃತಿ ಲೀಲೆಯನ್ನು ಅನುಭವಿಸುವವನು' ಎಂಬಂತೆಯೂ 'ಅಖಂಡ ಪೂರ್ಣಾನಂದ ವಸ್ತುವು ಖಂಡ ಖಂಡವಾಗಿ ವಿವಿಧವಾದ ಉಪಾಧಿಗಳಿಂದ ನಾಮರೂಪಗಳನ್ನು ಧರಿಸಿ ತುಂಬಿರುತ್ತಾನೆ.' ಎಂಬಂತೆಯೂ ಬ್ರಹ್ಮಾಂಡ ಪಿಂಡಾಂಡಗಳಲ್ಲಿ ನಡೆಯುವ ವಸ್ತುಸೃಷ್ಟಿ–ಸ್ಥಿತಿ–ಲಯಗಳನ್ನುಂಟುಮಾಡುವುದೆಲ್ಲವೂ 'ಶ್ರೇಷ್ಠತಮ'ವಾದ 'ಕರ್ಮ'ವಾಗಿರುತ್ತದೆ.* ಸಂಸ್ಕೃತಿ ಆಚಾರ ಗರ್ಭಿತವಾದ ವ್ಯವಹಾರವೂ ವೃತ್ತಿವ್ಯಾಪಾರಗಳೂ ಇದರಲ್ಲಿ (ಕರ್ಮ) ಅಡಕವಾಗಿರುವುವು-

## ಅ, ವಿ ಉಪಪದ ಸಹಿತವಾದ ಕರ್ಮವ್ಯಾಪ್ತಿ

ಕರ್ಮ, ಅಕರ್ಮ, ವಿಕರ್ಮಗಳೆಂಬದಾಗಿ ಒಂದು ದೃಷ್ಟಿಯಿಂದ ಕರ್ಮವನ್ನು ಅಳೆದಿರುತ್ತಾರೆ. ಸಾಮಾನ್ಯವಾಗಿ ಕರ್ಮ ಎಂಬ ಪದದಿಂದ ಋತಕ್ಕೆ ಅನುರೋಧವಾಗಿರುವಂತೆ ಪ್ರಕೃತಿ ನಿಯಮಗಳ ಪರಿಮಿತಿಯಲ್ಲಿ ವಿಹಿತವಾದ, ಸಾಧುವಾದ ಕರ್ಮಗಳೆಂದು ತಿಳಿಯುವುದು ಸ್ವಭಾವವಾಗಿದೆ. ಇದನ್ನು ಮೀರಿ (ದಾಟಿ) ನ್ಯೂನಾತಿರಿಕ್ತಗಳಿಂದ ಕೂಡಿದ ಕರ್ಮಗಳನ್ನು ವಿಶಿಷ್ಟ ಕರ್ಮಗಳೆಂದು ಹೇಳಲು ಉಪಸರ್ಗಗಳನ್ನು ಸೇರಿಸಿ ಹೇಳುವರು. ವಿರೋಧಾರ್ಥವನ್ನು ಸೂಚಿಸುವ 'ವಿ' ಉಪಪದವನ್ನು ಸೇರಿಸಿ ಹೇಳುವ ವಿಕರ್ಮ‡ ಶಬ್ದವು ಮೇಲ್ಕಂಡ ಸಾಧು

---

ಬ್ರಹ್ಮಕರ್ಮಸಮಾಧಿ — ಬ್ರಹ್ಮಾರ್ಪಣಂ, ಬ್ರಹ್ಮಹವಿಃ, ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ, ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ-ಸಮಾಧಿನಾ ॥ ಗೀತಾ

* ಶ್ರೇಷ್ಠತಮಾಯ ಕರ್ಮಣೇ — ವೇದ.

‡ 'ವಿಶಿಷ್ಟಕರ್ಮವು – ವಿಕರ್ಮವೆಂದು ವಿಕರ್ಮ ಶಬ್ದದ ವ್ಯಾಪ್ತಿಯನ್ನು ಬಹುದೂರ ಎಳೆದು ವಿಶೇಷಾರ್ಥವನ್ನು ಕೊಡುವ ಉತ್ತಮೋತ್ತಮ ಕರ್ಮಗಳೆಂದು ಸ್ವಕಪೋಲಕಲ್ಪಿತ ಶ್ರೇಷ್ಠ ವ್ಯಾಖ್ಯಾನಗಳಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ಮ, ವಿಹಿತ* ಕರ್ಮಗಳಿಗೆ ಬೇರೆಯಾದ ಕರ್ಮಗಳೆಂದು ತಿಳಿಸುತ್ತದೆ.

ಅಕರ್ಮವೆಂಬಲ್ಲಿ ನಿಷೇಧಾರ್ಥ ಸೂಚಕವಾದ 'ನ' ಉಪಪದವು 'ಕರ್ಮ' ಪದಕ್ಕೆ ಸೇರಿ 'ಅಕರ್ಮ' ಪದವಾಗುತ್ತದೆ. 'ಕರ್ಮವಲ್ಲದ್ದು' 'ಕರ್ಮವಿಲ್ಲದ್ದು' ಎಂಬ ಅರ್ಥಗಳಲ್ಲಿ ನಿಷೇಧಾರ್ಥವನ್ನು ತಿಳಿಯಬಹುದಾಗಿದೆ.

ಲೋಕದಲ್ಲಿ ಶರೀರಯಾತ್ರೆ, ಉಸಿರಾಡುವುದು ಮೊದಲ್ಗೊಂಡು ವಸ್ತುವಿನ ಹುಟ್ಟು, ಇರುವಿಕೆ, ಹೆಚ್ಚುವಿಕೆ. ವಿರೂಪವಾಗುವಿಕೆ, ಕ್ಷೀಣಿಸುವಿಕೆ, ನಾಶ ವೆಂಬಂತೆ ಉಸಿರು ನಿಲ್ಲುವವರೆಗೆ ಕರ್ಮವಿಲ್ಲದಿರಲು ಸಾಧ್ಯವಿಲ್ಲ.‡ ಆದುದರಿಂದ ಅಕರ್ಮವೆಂದರೆ ಕರ್ಮವಿಲ್ಲದ್ದು ಎಂದಾಗುವುದಿಲ್ಲ. ಅಕರ್ಮ = ಕರ್ಮವಲ್ಲದ್ದು ಎಂಬ ಅರ್ಥವನ್ನೂ– ವಿಕರ್ಮ ವಿರೋಧವಾದ ಕರ್ಮ ಎಂಬ ಅರ್ಥವನ್ನೂ ಪರಿಗಣಿಸಿದರೆ ಎರಡೂ ಬೇರೆ ಬೇರೆಯಾಗಿರುವುದು. ಕರ್ಮವಲ್ಲದ್ದು ಎಂಬುದನ್ನು ವಿರುದ್ಧಕರ್ಮವೆಂಬ ಅರ್ಥದಲ್ಲಿ ತೆಗೆದುಕೊಂಡು ವಿಕರ್ಮವೆಂದರೆ ವಿಶೇಷಕರ್ಮವೆಂದು ಭಾವಿಸುವುದು ಚೆನ್ನಾಗಿದೆ ಎಂದು ತೋರಬಹುದು. ಆದರೆ ಗೀತಾ ಪ್ರಕರಣದಲ್ಲಿ 'ಅಕರ್ಮವನ್ನು ಕರ್ಮವಲ್ಲದ್ದು' ಎಂಬ ವಿರುದ್ಧಕರ್ಮದ ಅರ್ಥದಲ್ಲಿ ಹೇಳಿಲ್ಲವೆಂಬುದು ವ್ಯಕ್ತವಾಗಿರುತ್ತದೆ. ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ನೋಡಬೇಕು ಎಂದು ಹೇಳಿರುವುದರಿಂದ ಶ್ರೀಕೃಷ್ಣ, ಸದಾಶಿವಬ್ರಹ್ಮೇಂದ್ರ, ರಾಮಕೃಷ್ಣ ಪರಮಹಂಸ, ರಮಣ ಮೊದಲಾದ ಜೀವನ್ಮುಕ್ತರ ಶರೀರಾದಿಗಳಲ್ಲಿ ಚೇಷ್ಟೆಗಳು ನಡೆಯುತ್ತಿದ್ದರೂ ಸೃಷ್ಟಿಸ್ಥಿತಿಲಯಗಳಾಗುವುದಿಲ್ಲವಾದುದರಿಂದಲೂ ಋಣ

---

ಅವಕಾಶವಿರುವುದಿಲ್ಲವೆಂದು ಪ್ರಕರಣವು (– ಸಂದರ್ಭ) ವು ತಿಳಿಸುತ್ತದೆ. ವಿರೋಧ ಕರ್ಮವನ್ನು ತಿಳಿಯುವುದು ಕಷ್ಟವಾಗಿರುತ್ತದೆ. ವಿಶೇಷ ಕರ್ಮದ ವಿಚಾರವನ್ನು ತಿಳಿಯುವುದು ಸರ್ವಸಾಮಾನ್ಯವಾಗಿರುತ್ತದೆ.

* ವಿಹಿತ ಕರ್ಮ = ವಿ + ಧಾ = ವಿಧಾನಮಾಡುವುದು. 'ವಿ' ಉಪಸರ್ಗದೊಡನೆ ಕೂಡಿದ 'ಧಾ' ಧಾತುವಿನಿಂದ ಆದ ಪದ – ವಿಧಾನ = ವಿಹಿತ [illegible] ಕರ್ತವ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ಪನೆಯಿಲ್ಲದುದರಿಂದಲೂ ಅಕರ್ಮವೆಂದೇ ಹೇಳಬೇಕಾಗಿದೆ. ಅದರಂತೆ ಕರ್ಮವೆನಿಸದಿರುವಿಕೆ, ಕರ್ಮವಾಗದಿರುವಿಕೆಯು ಅಕರ್ಮವೆಂದು ಹೇಳುವುದರಲ್ಲಿ ಔಚಿತ್ಯವಿದೆ.

ಅಕರ್ಮವನ್ನು ವ್ಯವಹಾರದಲ್ಲಿ ಸಿಕ್ಕಿಕೊಂಡಿರುವ ವ್ಯಕ್ತಿಯ ಪರಿಮಿತಿಯಲ್ಲಿ ಕರ್ಮವೆನಿಸದಿರುವಿಕೆ ಎಂದರೆ ಸ್ವಕರ್ತವ್ಯ ಕರ್ಮಮಿತಿಯಲ್ಲಿ ಉಕ್ತವಾದ ಕರ್ಮಗಳ ಅಭಾವವೆಂದು ತಿಳಿಯಬೇಕು. ಕರ್ಮತ್ಯಾಗವು ಸಮ್ಮತವಲ್ಲ (ಸಾಧ್ಯವೂ ಅಲ್ಲ) ಎಂಬುದನ್ನು ಪೋಷಿಸಿ 'ಅಕರ್ಮದಲ್ಲಿ ಸಂಗ ಬೇಡ' ಎಂಬದಾಗಿ ಹೇಳಿದೆ. ಇದರಿಂದ ಉಕ್ತ (ವಿಹಿತ) ಕರ್ಮವನ್ನು ಮಾಡದಿರುವಿಕೆ ಎಂಬುದನ್ನೂ ನಿಷೇಧಿಸಿದೆ. ಎಂದು ತಿಳಿಯಬೇಕಾಗಿದೆ.

'ವಿ' ಎಂಬ ಉಪಸರ್ಗದ ಪ್ರಭಾವದಿಂದ ವಿಶಿಷ್ಟವಾದ ಕರ್ಮವೆಂಬದಾಗಿ ಹೇಳಿ ವಿರೋಧ ಕರ್ಮವನ್ನು ವಿಶಿಷ್ಟ ಕರ್ಮವೆಂದು ಹೊಗಳಿಕೊಳ್ಳಬಹುದು. ಆದರೆ ವಿಶಿಷ್ಟ ಕರ್ಮಕ್ಕೆ ಉತ್ತಮವಾದ ಪ್ರತ್ಯೇಕ ಸ್ಥಾನವಿರುವುದರಿಂದ ವಿಕರ್ಮ ಪದದಿಂದ ಅದನ್ನು ಸೂಚಿಸುವುದು ರಸಾಭಾಸವಾಗುವುದು ಎಂದು ಸ್ವತಸ್ಸಿದ್ಧವಾಗಿಯೇ ಇರುವುದು.

## ವಿರೋಧಕರ್ಮ – (ವ್ಯತಿರೇಕ ದೃಷ್ಟಾಂತವಾಗಿ) ಗತಿ ಪ್ರಾಪಕ

ಸೃಷ್ಟಿಸ್ಥಿತಿಲಯಗಳಿಗೆಲ್ಲಾ ಕರ್ಮವೇ ಪ್ರಧಾನವಾಗಿ, ಸೃಷ್ಟ್ಯಾದಿಗಳು ಕರ್ಮರೂಪವಾಗಿ ಕರ್ಮವೇ ಆಗಿರುವುದರಿಂದ ಯಾವ ಯಾವ ಕರ್ಮಗಳಿಂದ ಸೃಷ್ಟಿಸ್ಥಿತಿಲಯಗಳು ನಿಷ್ಪನ್ನವಾಗುವುವೋ ಅಂತಹ ಕರ್ಮಗಳಿಂದ ಪ್ರಪಂಚವು ತುಂಬಿರುತ್ತದೆ ಮತ್ತು ಮುಂದುವರಿಯುತ್ತಿದೆ. ಋತಕ್ಕೆ ಅನುರೋಧವಾಗಿರುವ ಕರ್ಮಗಳಿಗೆ ಅವಕಾಶವಿರುವಂತೆ ಋತ ವಿರೋಧ ಕರ್ಮಗಳಿಗೂ ಅವಕಾಶವಿದೆ. ವಿರೋಧ ಕರ್ಮಗಳಿಂದಾಗಬಹುದಾದ ಫಲವನ್ನು ಮನೋವಾಕ್ಕಾಯಗಳಿಂದ ಅನುಭವಿಸುವುದರಿಂದಲೂ 'ಗತಿ' ಪ್ರಾಪ್ತಿಗೆ ಸಹಾಯವಾಗುತ್ತದೆ. ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿಯು ವಿರೋಧ ಕರ್ಮವನ್ನಾಚರಿಸಿದರೆ ದುಷ್ಟಫಲವನ್ನು ಕಾಯಕ ವಾಗಿ ಅನುಭವಿಸುವುದರಿಂದ ಪುನಃ ಅದನ್ನು ಆವರ್ತಿ ಮಾಡದಂತೆ ಆಗಿ ಎಚ್ಚೆತ್ತುಕೊಂಡು ಮುಂದುವರಿದು ಉತ್ತಮ ಸಂಸ್ಕಾರವನ್ನು ಹೊಂದಿ ಮೇಲು ಮೇಲಿನ ಹಂತಗಳನ್ನು ಏರಬಹುದು. ಅದೇ ದುಷ್ಟಫಲಾನು ಭವವನ್ನು ವಾಚಾ ವರ್ಣಿಸುವ, ಪಠಿಸುವ ಮತ್ತು ಮನಸ್ಸಿನಿಂದ ಚಿಂತಿಸುವ ವ್ಯಕ್ತಿಗಳು ವಿವೇಕದಿಂದ ಆ ಕರ್ಮವನ್ನು ದೂರೀಕರಿಸಿ ಅನುರೋಧ ಮಾರ್ಗದಲ್ಲಿ ಇರುವುದಕ್ಕೆ ತಕ್ಕ ವ್ಯತಿರೇಕ ದೃಷ್ಟಾಂತ ವಾಗಿ ಪರಿಣಮಿಸುವುದು.

## ಸುಮುಖ, ದುರ್ಮುಖ, ವಿಮುಖ ಕರ್ಮಗಳು

ಋತಕ್ಕೆ ಅನುರೋಧವಾಗಿ ಸಂಸ್ಕೃತವಾದ ಅಥವಾ ಸಂಸ್ಕೃತಿ ಯನ್ನು ಹೊಂದಿಸಬಹುದಾದ ಕರ್ಮ-ವ್ಯಾಪಾರ-ಗಳು ಸುಮುಖ (active) ಕರ್ಮಗಳೆನಿಸುವುವು.

ಮಿತಿಯಲ್ಲಿದ್ದು ಏರದೆ, ಕುಗ್ಗದೆ, ಇಂದ್ರಿಯ ಮಟ್ಟಗಳಲ್ಲಿ ಸ್ವಭಾವ ಪ್ರೇರಣೆಯಂತೆ ಮಾಡತಕ್ಕ ಮತ್ತು ಋಣ ಶೋಧನ (= ಶೂದ್ರ ಗುಣ ಸ್ವಭಾವ) ಕರ್ಮಗಳು ದುರ್ಮುಖ (passive) ಕರ್ಮಗಳೆನಿಸುವುವು. ವಿರೋಧವಾಗಿ ಕೆಳಮುಖವಾಗಿ ನಡೆಸಲ್ಪಡುವ ಕರ್ಮಗಳು ವಿಮುಖ (negative) ಕರ್ಮಗಳೆನಿಸುವುವು. ಇವು ತಮ್ಮ 'ಮಿತಿ'ಯ ಪರಮಾವಧಿ 'ಗೆರೆ'ಯನ್ನು ಸೇರಿದನಂತರ ಇಂದ್ರಿಯ ಗಳು ಬಲಗುಂದಿ, ಪ್ರಕೃತಿಯೇ ಎದುರುಬಿದ್ದಂತಾಗಿ, ಹಿಂತಿರುಗಿ ದುರ್ಮುಖಾವಸ್ಥೆಯನ್ನು ಹೊಂದಿ ಅನಂತರ ಸುಮುಖಮಾರ್ಗವನ್ನೇ ಅನುಸರಿಸುವಂತಾಗುವುದು.

ಸಂಸ್ಕಾರವೆಂಬ ತುಲೆಯನ್ನು ತೂಗಾಡಿಸುವುದರಿಂದ ನ್ಯೂನಾತಿ ರಿಕ್ತಗಳು ಉಂಟಾಗುವಂತೆಯೂ, ಸಮಸ್ಥಿತಿಯಲ್ಲಿರುವಂತೆಯೂ ಸಮಯೋಚಿತವಾಗಿ ವ್ಯಾಪಾರಗಳು ನಡೆಯುವುವು. ಆದುದರಿಂದ ಏತಕ್ಕೆ ಹೀಗೆ ಮಾಡಬೇಕು? ಅಥವಾ ಮಾಡಬಾರದು? ಎಂಬ

---

‡ ಗೀತಾ 3-5, 3-8, 33-3, 18-11 (95 ಪುಟಕ್ಕೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಹಕ ಪ್ರಶ್ನೆಗಳಿಗೆ ಅವಕಾಶವೇ ಇರುವುದಿಲ್ಲ. ಆವರಣಗಳು ವ್ಯಕ್ತಿಯನ್ನು ವಿಚಾರಿಸುವುದೂ, ಆವರಣವನ್ನು ಗೆಲ್ಲುವ ವ್ಯಕ್ತಿಗಳು ಸಾಹಸ ಮಾಡುವುದೂ ಸಹಜವಾಗಿಯೇ ಇರುತ್ತವೆ.

## ಕರ್ಮ ಸ್ವಾತಂತ್ರ್ಯದಿಂದ ಕರ್ಮ ಸ್ವಾತಂತ್ರ್ಯದ ಮಿತಿ

ದೇಹಿಯು ಸರ್ವಶಕ್ತನಾಗಿ ಸರ್ವ ಸ್ವತಂತ್ರನಾಗಿ ವಸ್ತುವನ್ನು ತಿಳಿದು ಅದನ್ನು ಅಪೇಕ್ಷಿಸಿ ಅಥವಾ ದ್ವೇಷಿಸಿ, ಋಣವನ್ನು ಕಲ್ಪಿಸಿ, ಫಲಕ್ಕಾಗಿ ವ್ಯವಸಾಯ ಮಾಡಿ ಫಲಾನುಭವ ಮಾಡಿಕೊಳ್ಳಲು ಅವಕಾಶವಿದೆ. ಪ್ರಕೃತಿಯೂ ಸಹಕರಿಸುವುದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಆವರಣಗಳ ಪ್ರಭಾವದಿಂದಲ್ಲೂ, ದೇಹಿಯ ಇಚ್ಛೆಗೆ ತಕ್ಕಂತೆಯೂ ಯಾವ ಕೆಲಸವಾದರೂ ನಿರ್ವಾಹವಾಗಬಹುದಾಗಿದೆ. ಇದರ ಫಲವು ಕರ್ತೃವಾದ ದೇಹಿಗೆ ಮಾತ್ರವಲ್ಲದೆ ಆವರಣದಲ್ಲಿರುವ ಸರ್ವ ಚರಾಚರ ವಸ್ತುಗಳಿಗೂ ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ಅನುಭವವಾಗಬೇಕಾಗಿದೆ. ಆದುದರಿಂದ ಕರ್ತೃವಿನ ಇಷ್ಟವಾಗಿರಲಿ ಇಷ್ಟವಲ್ಲದಿರಲಿ ಆ ದೇಹಿಯು ಮಾಡುವ ಕೆಲಸದ ಫಲದ ಅನುಕೂಲತೆ, ಅನಾನುಕೂಲತೆಗಳಿಗೆ ತಕ್ಕಂತೆ ಆವರಣಗಳಿಗೆ ಸೇರಿದ ಸರ್ವರೂ ಪ್ರೋತ್ಸಾಹಿಸುವ ಅಥವಾ ತಡೆಮಾಡುವ ಅಧಿಕಾರ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ ರಾಜ್ಯಭಾರಗಳನ್ನು ನಡೆಸುವವರೆಲ್ಲರೂ ಆವರಣಗಳಿಗೆ ಸೇರಿದವರು ಎನಿಸಿಕೊಳ್ಳುತ್ತಾರೆ. ಕರ್ತೃವು ಕಾರ್ಯನಿರ್ವಾಹಕ್ಕೆ ಸ್ವಾತಂತ್ರ್ಯವನ್ನು ಪ್ರಯೋಗಿಸುವಂತೆ ಆವರಣಗಳು ತಮ್ಮ ಸ್ವಾತಂತ್ರ್ಯವನ್ನು ಪ್ರಯೋಗಿಸಿ ಯೋಗಕ್ಷೇಮ ಸಾಧನೆಗೆ ಸಿದ್ಧರಾಗಿರುತ್ತಾರೆ. ಹೀಗೆ ಒಬ್ಬರ ಸ್ವಾತಂತ್ರ್ಯವು ಮತ್ತೊಬ್ಬರ ಸ್ವಾತಂತ್ರ್ಯ ಪ್ರಯೋಗದಿಂದ ಮಿತಿಗೊಳಿಸಲ್ಪಡುತ್ತದೆ. ಅಥವಾ ಪ್ರೋತ್ಸಾಹಿಸಲ್ಪಡುತ್ತದೆ. ಈ ಬಗೆಯ ಮಿತಿಗೆ ಅಥವಾ ಪ್ರೋತ್ಸಾಹಕ್ಕೆ ಅನುಗುಣವಾಗಿ ದೇಹಿಗಳು ಕರ್ಮ ಫಲಗಳನ್ನು ವ್ಯವಸ್ಥೆಗೊಳಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಿಂದ ಮಾನವತೆಯೂ ತನ್ಮೂಲಕ ದೇವತ್ವವೂ (divinity) ಸಿದ್ಧಿಸುವುವು.

## ದುಷ್ಟ-ಫಲ ವಾ ಕರ್ಮ-ವಾರಣ, ಹೊಣೆಗಾರಿಕೆ

ಋಣವು ಪ್ರಾರಂಭವಾಗಿ ಕರ್ಮದಲ್ಲಿ ಪರ್ಯವಸಾನವಾದರೆ ಫಲವು ಕೂಡಲೆ ಪ್ರಾಪ್ತವಾಗುವುದು. ಈ ಫಲದ ದರ್ಶನದಿಂದ ಇಂತಹ ಕರ್ಮವು ನಡೆಯಿತೆಂದು ಆವರಣಗಳಿಗೆ ಗೋಚರವಾಗುವುದು. ಆದುದರಿಂದ ಫಲಾನುಭವಕ್ಕೆ ಸಿದ್ಧರಾದಾಗ ಆ ಕರ್ತೃವಿನ ಮೇಲೆ ಪ್ರಭಾವವನ್ನೂ ಅಧಿಕಾರವನ್ನೂ ಪ್ರಯೋಗಿಸಬೇಕಾಗುತ್ತದೆ. ಒಳ್ಳೆಯ ಫಲಾನುಭವದಿಂದ ಶಾಂತಿಯೂ ವಿರುದ್ಧ ಫಲಾನುಭದಿಂದ ಭಂಗವೂ ಆಗುವುದು. ಆದುದರಿಂದ ಕರ್ಮವು ನಡೆಯುವುದಕ್ಕೆ ಪೂರ್ವಾಂಗವಾದ ಋಣವೇ ರೂಢಮೂಲವಾಗದಂತೆ ತಕ್ಕ ಸನ್ನಿವೇಶಗಳನ್ನು ಹರಡಿದರೆ ಮುಂಜಾಗ್ರತೆಯಿಂದ ದೇಹಿಗಳು ತಮ್ಮ ತಮ್ಮ ವರ್ತನೆಯನ್ನು ಕ್ರಮ ಪಡಿಸಿಕೊಳ್ಳಬಹುದು (Regularise). ಪ್ರಕೃತಿಯಿಂದಲೇ ಸ್ವಭಾವಾಗಿ ಋತದ ಈ ಬಗೆಯ ಏರ್ಪಾಡುಗಳು ನಡೆಯುವುವು. ಪಕ್ಷಿಮೃಗಾದಿಗಳು ಬಹುಪ್ರಕಾರವಾಗಿ ಪ್ರಕೃತಿಯ ರಾಜ್ಯಭಾರ ನಿಯಮಗಳಿಗೆ ತಕ್ಕಂತೆ ನಡೆಯುವುವು. ಸ್ವಾತಂತ್ರ್ಯವನ್ನು ಪ್ರಯೋಗಿಸಲು ಹೆಚ್ಚು ಅವಕಾಶವುಳ್ಳ ಮಾನವರ ವರ್ತನೆಗಳು ನ್ಯೂನಾತಿರಿಕ್ತಗಳಿಗೆ ಕಾರಣವಾಗುವುವು; ಋಣವು ಅಂಕುರಿಸುವುದು. ಆದುದರಿಂದ ಋಣವು ಅಂಕುರವಾಗದಂತೆ ತಕ್ಕ ಪರಿಸ್ಥಿತಿ ಸನ್ನಿವೇಶಗಳನ್ನು ಕಲ್ಪಿಸಿ, ಶಾಂತಿಯ ಅನುಭವಕ್ಕೂ ಕಲ್ಯಾಣ ಪರಂಪರೆಗೂ ವರ್ತನೆಗಳು ಕಾರಣವಾಗುವಂತೆ ಮಾಡಬೇಕಾಗುವುದು.

## ಸನ್ಮಾರ್ಗ ದರ್ಶನ

ಮಾನವ ಕರ್ತವ್ಯ ವಿಷಯದಲ್ಲಿ ಕ್ರಮವಾದ ತಿಳಿವಳಿಕೆಗಳನ್ನು ಕೊಡುವುದಕ್ಕೆ ಸೃಷ್ಟಿಯಲ್ಲಿ ಅನುಕೂಲಗಳಿವೆ. ಇದು ಸಹಕಾರವಾದುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಮಾತ್ಮಾ' ಎಂಬ ಜ್ಞಾನವು ನಾದ ರೂಪದಲ್ಲಿ ವಿವರ್ತವಾಗಿ ಸರ್ವ ಗತವೂ, ಸರ್ವ ವ್ಯಾಪಕವೂ, ಅನಂತವೂ ಆದ ವೇದರಾಶಿಯಲ್ಲಿ ಪ್ರವಹಿಸಿ ಪ್ರಪಂಚವನ್ನು ತುಂಬಿರುತ್ತದೆ. ಋಣ ಕರ್ಮ ಮೊದಲಾದ ವುಗಳ ಸಾಧಕ ಬಾಧಕ ವ್ಯಾಪಾರಗಳು ಚಿತ್ರಿತವಾಗಿವೆ. ದೇಹಿಗಳು ಜೀವಮಾನದಲ್ಲಿ ಸುಖಮಯವಾದ ವರ್ತನೆಯನ್ನು ಇಟ್ಟುಕೊಳ್ಳಲು ಸಾಕಾದಷ್ಟು ಮಾರ್ಗಗಳು ಪ್ರಪಂಚಿತವಾಗಿವೆ. ಋತ-ರಾಜ್ಯ-ಶಾಸನ ಗಳಿಂದ ಕ್ರಮ (-ವ್ಯವಸ್ಥೆ-) ಗೊಳಿಸಲ್ಪಟ್ಟ ಪ್ರಜಾಪತಿ ಪರಮಾತ್ಮ ನಂತೆ ಸ್ವಾತಂತ್ರ್ಯ ಪ್ರಭುಶಕ್ತಿಯೂ ಉಳ್ಳ ಪ್ರಜೆಗಳ ಸ್ವಾತಂತ್ರ್ಯ ಮತ್ತು ಪ್ರಭುತ್ವಶಕ್ತಿಗಳನ್ನು ಮಿತವಾಗಿ, ಸಂಯಮನಗಳಿಗೆ ಗುರಿಪಡಿಸಿ ಸುಖಶಾಂತಿ ಪ್ರದವಾಗುವಂತೆ ಮಾಡುವುದಕ್ಕೆ ಅಸಂಖ್ಯಾತವಾದ ಸನ್ಮಾರ್ಗಗಳು ಪ್ರತಿಪಾದಿತವಾಗಿವೆ. ನಿದರ್ಶನಾದಿಗಳಿಂದಲೂ ಅನು ಭವ ಪ್ರಕಾಶನಗಳಿಂದಲೂ ತರ್ಕ ಬದ್ಧವಾಗಿ ಸಮರ್ಥಿಸಲ್ಪಟ್ಟಿವೆ.

## ಕರ್ಮ – ಸಂಕಲ್ಪ

ಕರ್ಮಗಳೆಲ್ಲಾ ಸಂಕಲ್ಪಪೂರ್ವಕವಾಗಿರುತ್ತವೆ. ಈ ಸಂಕಲ್ಪ ಗಳನ್ನು ನಿತ್ಯ ನೈಮಿತ್ತಿಕ ಕಾಮ್ಯಗಳೆಂಬದಾಗಿ ವಿಂಗಡಿಸಿರುತ್ತಾರೆ. ದೇವಋಣಾದಿಗಳನ್ನು ಪರಿಹರಿಸುವುದಕ್ಕಾಗಿಯೇ ಎಲ್ಲಾ ವ್ಯಾಪಾರಗಳೂ ನಡೆಯಬೇಕಾಗಿರುತ್ತವೆ. ಹೊಸದಾಗಿ ಋಣವು ಪ್ರಾಪ್ತವಾಗದೇ ಹಿಂದಿನ ಋಣಗಳ ಪರಿಹಾರಕ್ಕಾಗಿ ನಡೆಯಬೇಕಾದ ನಿತ್ಯಸುಖಾನು ಸಂಧಾನದ ಸಂಸ್ಕೃತಿಯಿಂದ ಸಾಧಿಸುವ ಕರ್ಮಗಳನ್ನು ನಿತ್ಯವೆಂಬದಾಗಿ ಹೇಳುತ್ತಾರೆ. ಋಣಾನುಬಂಧ ರೀತ್ಯಾ ಸಾಹಸ ಸ್ವಾತಂತ್ರ್ಯಗಳಿಂದ ಐಹಿಕಾಮುಷ್ಮಿಕ ಸಿದ್ಧಿಗಳನ್ನು ಪಡೆಯುವುದಕ್ಕೆ ಸಹಾಯಕಗಳಾದ ಮತ್ತು ಒಂದೊಂದು ನಿಮಿತ್ತಕ್ಕಾಗಿ (ಉದ್ದೇಶಕ್ಕಾಗಿ) ನಡೆಯಬೇಕಾದ ಕರ್ಮಗಳು ನೈಮಿತ್ತಿಕಗಳೆನಿಸುವುವು. ಇವು ದೇವತ್ವ, ಋಷಿತ್ವ, ಪಿತೃತ್ವ, ಮನುಷ್ಯತ್ವ, ಭೂತತ್ವ ಸಂಬಂಧಗಳಾಗಿರುವುವು. ರಾಜ್ಯದ ಪಂಚವಲಯಗಳಲ್ಲಿ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಇಷ್ಟಾನುಸಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆಯಬಹುದಾದ ಕರ್ಮಗಳು ಕಾಮ್ಯಗಳು. ಇವೆಲ್ಲವೂ ವೇದೋಕ್ತ ವಾಗಿ ಕಲ್ಪೋಕ್ತವಾಗಿ ಅನುಭವದಿಂದ ಸಾರ್ಥಕಗಳೂ ಪುರುಷಾರ್ಥ ಪ್ರಾಪಕಗಳೂ ಆಗಿವೆ ಎಂದು ಸಿದ್ಧಾಂತವಾಗಿರುವ ವಿಹಿತಕರ್ಮಗಳೆನಿ ಸುವುವು. ವ್ಯಾವಹಾರಿಕ - ಪಾರಮಾರ್ಥಿಕವಾದ ಕರ್ಮಗಳೆಲ್ಲವೂ ನಿತ್ಯ ನೈಮಿತ್ತಿಕಗಳಾಗಿರುವುವು.

ವೇದೋಕ್ತ ಕಲ್ಪೋಕ್ತಗಳಾಗಿ ಕೇವಲ ಪಾರಮಾರ್ಥಿಕ ಕರ್ಮಗಳ ಸಂಬಂಧದಲ್ಲಿ ಮಾತ್ರ ನಿತ್ಯ ನೈಮಿತ್ತಿಕ ಕಾಮ್ಯಶಬ್ದಗಳನ್ನು ಪ್ರಯೋ ಗಿಸಿ ಪ್ರಾಪಂಚಿಕ (ವ್ಯಾವಹಾರಿಕ = ರಾಜ್ಯ) ಕಾರ್ಯಗಳನ್ನು ನಿತ್ಯ ನೈಮಿತ್ತಿಕ ಕಾಮ್ಯಗಳಿಂದ ಪ್ರತ್ಯೇಕಿಸಿದಂತೆ ವ್ಯವಹಾರ ಮಾಡುತ್ತಿರುವು ದಕ್ಕೆ ವಿವೇಚನೆಯು ದೂರವಾಗಿರುವುದೇ ಕಾರಣ. ತತ್ವತಃ ಪ್ರಪಂಚ ದಲ್ಲಿ ನಿರ್ವಾಹವಾಗಬೇಕಾದ, ನಿರ್ವಾಹವಾಗುತ್ತಿರುವ ಮತ್ತು ನಿರ್ವಾಹ ವಾದ ಸಮಸ್ತ ಕಾರ್ಯಗಳೂ ಈ ನಿತ್ಯಾದಿವಿಭಾಗತ್ರಯಕ್ಕೆ ಸಂಬದ್ಧ ವಾಗಿವೆ. ವೃತ್ತಿಸಂಬಂಧವಾದ ಪ್ರಾಪಂಚಿಕ ಕರ್ಮಗಳೂ ಸಹ ಕಾಮ್ಯ ವಾಗಿ ಜನ್ಮಾಂತರದಿಂದ ಅನುಸರಿಸಿ ಬಂದವುಗಳಾದರೂ ಶ್ರೇಯಸ್ಸಿಗೆ ಸಹಾಯಕವಾಗಿ ನಿತ್ಯಾದಿ ಕರ್ಮಗಳೆನಿಸಿಕೊಳ್ಳುವುವು. ಈ ರಹಸ್ಯ ವನ್ನು ತಿಳಿದು ನಿತ್ಯನೈಮಿತ್ತಿಕ ಕಾಮ್ಯ ಕರ್ಮಗಳು ಪ್ರಾಪಂಚಿಕವಾಗಿ ಪ್ರಜಾ ಮತ್ತು ಪ್ರಜಾಪತಿ ಪ್ರೀತಿಗೆ ನೆರವೇರಬೇಕೆಂಬ ದೃಢಪ್ರಜ್ಞೆ ಯಿಂದ ಆನಂದಾನುಭವವನ್ನೇ ಹೊಂದಬೇಕಾಗಿದೆ.

ಸರ್ವ ಪ್ರಕಾರದಲ್ಲಿಯೂ ಸಂಕಲ್ಪಿತ ಕಾರ್ಯಗಳು ಋತ— ಪ್ರಾಕೃತಿಕ–ಪ್ರಾಪಂಚಿಕ–ಮಾನವೀಯ – ರಾಜ್ಯನಿಯಮಗಳನ್ನು ಪರಿ ಪಾಲಿಸುವುದರಿಂದ ಸಾಧಿತವಾಗಬೇಕಾಗುವುದರಿಂದ ಸಂಕಲ್ಪಗಳು ತನ್ನಿಯಮಾಧೀನವಾಗಿಯೇ ಇರಬೇಕಾಗುವುದು. ವಿರೋಧವಾದರೆ ವಿರುದ್ಧ ಫಲದಲ್ಲಿ ಕೊನೆಗಾಣುವುದು.

'ನಿಯಮೇಷು ತಪಶ್ಶಬ್ದಃ'— (ಅ. ಧ.) ಎಂಬ ಋಷಿಮತ ದಂತೆ 'ನಿಯಮಗಳು' ಎಂಬ ಅರ್ಥದಲ್ಲಿ ಪರ್ಯವಸಾನವಾಗುವ 'ತಪಸ್ಸು' ಎಂಬುದೂ ಕರ್ಮವನ್ನು ವಿಶೇಷಿಸಿ ಹೇಳುವ ಶಬ್ದವಾಗಿದೆ. ಸಂಕಲ್ಪಪೂರ್ವಕವಾಗಿ ... ... ಅನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಧಾನವೇ ತಪಸ್ಸು. – ಬಿಸಿಮಾಡುವುದು, ಒಣಗಿಸುವುದು, ಸುಡುವುದು ' ಎಂದು ತಪ್ ಎಂಬ ಧಾತುವಿನ ಅರ್ಥ. ಕಾಯಿ ಹಣ್ಣಾಗಲು ಶಾಖವು ಬೇಕು. ಎಂದು ಸರ್ವರ ಅನುಭವದಲ್ಲಿರುವಂತೆ ಕರ್ಮವು ಪರಿಪಾಕವಾಗಿ ಫಲವಾಗಬೇಕಾದರೂ ಮನೋವಾಕ್ಕಾಯಗಳ ವ್ಯಾಪಾರ ಅನುಸಂಧಾನದಿಂದ ಒಂದು ವಿಧವಾದ ಶಾಖವು ಉಂಟಾಗಿ ವಿದ್ಯುಚ್ಛಕ್ತಿಯಂತೆ ಹರಿದು ಹರಡುವುದು. ಕೆಲಸ ಮಾಡುವಾಗಲೆಲ್ಲಾ ವಸ್ತುಗಳ ಸಂಪರ್ಕವುಂಟಾಗುವುದು ಮತ್ತು ವಸ್ತುಗಳ ಗುಣಕ್ಕೆ ತಕ್ಕಂತೆ ವಿವಿಧವಾಗಿ ವಿವಿಧ ಪ್ರಮಾಣದಲ್ಲಿ ಶಾಖವುಂಟಾಗುವುದು. ಪದಾರ್ಥಗಳೂ ಸಹ ಪರಸ್ಪರವಾಗಿಯೂ ವ್ಯಕ್ತಿಗಳ ಶಾರೀರಕ ರಚನೆ ಗುಣಗಳಿಗನುಗುಣವಾಗಿಯೂ ಸೇರಿ ಶಾಖಶಕ್ತಿ (ವೈಶ್ವಾನರ ಶಕ್ತಿ) ಯನ್ನುಂಟುಮಾಡುವುವು. ಇಂದ್ರಿಯಗಳಿಗೆ ಗೋಚರವಾಗಿ ಅನುಭವಕ್ಕೆ ಬರುವಂತೆ ಇಂದ್ರಿಯಾತೀತವಸ್ತುಗಳೊಡನೆ ಸಂಪರ್ಕವಿಟ್ಟುಕೊಂಡು ಸಂಕಲ್ಪಿಸಿ ಮಾಡುವ ಕರ್ಮಗಳು ಸಂಕಲ್ಪಾನುಗುಣವಾಗಿ ಅನುಸಂಧಾನ ಮಿತಿಯನ್ನು ಮೀರದೆ ಅಪೂರ್ವ ಶಕ್ತಿಯನ್ನು ಉತ್ಪತ್ತಿಮಾಡುತ್ತವೆ.

ಸಂಸ್ಕೃತಿ ವಿಹಿತ ಕರ್ಮಗಳಾದ ನಿತ್ಯ ನೈಮಿತ್ತಿಕ ಕಾಮ್ಯಗಳೆಂಬ ಪ್ರಾಪಂಚಿಕ, ಪಾರಮಾರ್ಥಿಕ ಕರ್ಮಾನುಷ್ಠಾನಗಳು ನೈಷ್ಕರ್ಮ್ಯಸಿದ್ಧಿಯಲ್ಲಿ ಪರ್ಯವಸಾನ ಹೊಂದುವವುಗಳಾಗಿವೆ. ನಿತ್ಯ ನೈಮಿತ್ತಿಕ ಕಾಮ್ಯಗಳು ಋಣ ಪರಿಹಾರಕ್ಕೂ, ಋಣ ಪರಿಹಾರವಾಗದಿರಲು ಇರುವ ಅಡಚಣೆಗಳನ್ನು ಹೋಗಲಾಡಿಸುವುದಕ್ಕೂ, ಜೀವನಯಾತ್ರೆಯಲ್ಲಿ ಕಾಣುವ ಹೆಚ್ಚು ಕಡಿಮೆಗಳನ್ನು ಹೋಗಲಾಡಿಸುವುದಕ್ಕೂ ಪುನಃ ವ್ಯಕ್ತಿಸ್ವಾತಂತ್ರ್ಯದಿಂದ ಸುಖಸಾಧನವಾದ ಕಾಮನೆಗಳನ್ನು ಪಡೆಯುವುದಕ್ಕೂ, ಹಿಂದಿನಿಂದ ಅನುಸರಿಸಿ ಬಂದಿರುವುದನ್ನು ಮುಂದುವರಿಸುವುದಕ್ಕೂ ಒಟ್ಟಿನಲ್ಲಿ ಯೋಗಕ್ಷೇಮ ಸಾಧನೆಗೂ ದೇಶದ ಸುಖಶಾಂತಿ ಕಲ್ಯಾಣಕ್ಕೂ ಆಯಾ ವ್ಯಕ್ತಿಯ ಋಣ, ವಾಸನೆ, ಯೋಗ್ಯತೆ, ಸಾಮರ್ಥ್ಯಾದಿಗಳಿಗೆ ತಕ್ಕಂತೆ ಸಂಸ್ಕೃತಿ ವಿಧಾನಗಳನ್ನು ಹೊಂದಿರುವ ಕರ್ಮಗಳ ವ್ಯವಸ್ಥೆಯು ಅನುಸಂಧಾನಕ್ಕೆ ತಳಹದಿಯಾಗಿರುವುದು.

ಪುರುಷಾರ್ಥ ಸಿದ್ಧಿಗಾಗಿ ಏರ್ಪಟ್ಟಿರುವ ಈ ಸಂಸ್ಕೃತ ಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯವಸ್ಥೆಯನ್ನು ದುಷ್ಟಕಾಮನೆಗಳಿಗೂ ಸಂಸ್ಕೃತಿ ಹೀನವಾದ ಇಂದ್ರಿಯಾದಿಗಳ ಭೋಗಗಳಿಗಾಗಿ ಜಘನ್ಯರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುವುದಕ್ಕೂ ವ್ಯಕ್ತಿಯ ಸಂಕಲ್ಪ, ಸ್ವಾತಂತ್ರ್ಯ, ಸಾಹಸಗಳೇ ಕಾರಣವಾದುದರಿಂದ ವಿಕರ್ಮಗಳು ಅನಿವಾರ್ಯವಾಗಿರುತ್ತವೆ. ಆದರೆ ಈ ಅನಿವಾರ್ಯ ಸಂದರ್ಭವೇ ಹರಡಿ ಪ್ರಪಂಚವನ್ನು ತುಂಬಿ ಶಾಂತಿ ಭಂಗ ಮಾಡದಂತೆಯೂ ಶಾಂತಿ ಭಂಗವಾದರೆ ಹೋಗಲಾಡಿಸಲು ಪ್ರತಿಭಟಿಸಿ ಯತ್ನಮಾಡಿ ಕಲ್ಯಾಣವನ್ನು ಸಾಧಿಸುವುದಕ್ಕೂ ಸದ್ಬೋಧನೆಗೆ ಕಾರಣವಾದ ಸತ್-ಆವರಣಗಳು ಪ್ರಕೃತಿಯಲ್ಲಿ ತುಂಬಿರುವುದರಿಂದ ಸಮತಾ ಸಂಸ್ಥಾಪನೆಯಾಗುವುದು.

## ಕರ್ಮ ಫಲ

ಋಣ ಮತ್ತು ಸಾತ್ವಿಕಾದಿ ಗುಣಗಳಿಗೆ ಪ್ರಕೃತಿ ಪ್ರೇರಿತವಾಗಿ ನಡೆಯುವ ಕರ್ಮಗಳಿಗೆ ಉಂಟಾಗುವ ಫಲಗಳು ತಪಃಫಲವಾದ ದಿವ್ಯ ಜ್ಞಾನಕ್ಕೆ ಗೋಚರವಾಗಿ ನಿದರ್ಶನಗಳ ಪೂರ್ವಕ ಉಲ್ಲೇಖಿಸಲ್ಪಟ್ಟಿವೆ. ಅಂತೆಯೇ ದುಷ್ಕರ್ಮ ದುಷ್ಫಲಗಳೂ ಕರ್ಮವಿಪಾಕಾದಿ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿರುವುವು. ದುಷ್ಟಫಲಾನುಭವವನ್ನು ಸಹ್ಯವನ್ನಾಗಿ ಮಾಡಿಕೊಳ್ಳುವ ಉಪಾಯಗಳೂ ಉಕ್ತವಾಗಿವೆ. ಪ್ರಯೋಗಶಾಲೆಗಳಲ್ಲಿ ನಡೆಯುವ ಪ್ರಯೋಗಗಳು ಸಿದ್ಧಾಂತಕ್ಕೆ ಮಾರ್ಗದರ್ಶಕವಾಗಿರುವಂತೆ ಪ್ರತಿಯೊಂದು ಕರ್ಮದ ಫಲವು ಪ್ರಯೋಗಗಳಿಂದಲೂ ಅನುಭವ ನಿದರ್ಶನಗಳಿಂದಲೂ ನಿರ್ದಿಷ್ಟವಾಗಿ ಲಿಖಿತವಾಗಿವೆ. ಕೈ ಹುಣ್ಣಿಗೆ ಕನ್ನಡಿಯು ಬೇಕಾಗಿಲ್ಲವೆಂಬಂತೆ ಪ್ರಪಂಚದಲ್ಲಿ ವ್ಯಕ್ತಿಯ ಸ್ವಂತ ಅನುಭವ, ಪರರ ಅನುಭವಗಳಿಂದ ಕರ್ಮಕ್ಕೆ ತಕ್ಕ ಫಲವುಂಟಾಗುವುದೆಂದು ಪ್ರತಿಕ್ಷಣದಲ್ಲಿಯೂ ತಿಳಿಯಬಹುದಾಗಿದೆ. ಇಂದ್ರಿಯ ಪ್ರತ್ಯಕ್ಷವಾಗದಿರಬಹುದಾದ ಫಲಾನುಭವದ ಮೂಲವನ್ನೂ ದುಷ್ಟ ಫಲಾನುಭವದ ಪರಿಹಾರ ಅಥವಾ ಯಥಾಶಕ್ತಿ ಶಮನೋ[illegible]ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿದು ಜೀವನ-ತುಲೆಯನ್ನು ಸುಸ್ಥಿತವನ್ನಾಗಿ ಮಾಡಿಕೊಳ್ಳಬಹುದು.

ಸಾಮಾನ್ಯವಾಗಿ ಕರ್ಮಗಳಿಗೆ ಫಲವು ಮೂರು ತೆರನಾಗಿರುವುದು. ಇಷ್ಟವಾದುದು (= ಬೇಕಾದುದು ; = ಹಿತವಾದುದು), ಇಷ್ಟವಲ್ಲದ್ದು (= ಬೇಕಿಲ್ಲದುದು = ಅಹಿತವಾದುದು) ಮತ್ತು ಇಷ್ಟವಾಗಿಯೂ ಅನಿಷ್ಟವಾಗಿಯೂ ಇರುವುದು.* ಇಷ್ಟಾನಿಷ್ಟ ನಿರ್ಣಯದ ವಿಚಾರವು ವಿವೇಕ ಮತ್ತು ಅನುಭವ ವೇದ್ಯವಾಗಬೇಕಾಗಿರುವುದು. ಫಲಸ್ವರೂಪವು ಕರ್ಮದ ಜತೆಯಲ್ಲಿಯೇ ಇದ್ದು ಕರ್ತೃವಿಗೆ ತಿಳಿದಿರಬಹುದು; ತಿಳಿಯದೇನೇ ಇರಬಹುದು ; ತಿಳಿದೂ ತಿಳಿಯದಂತೆ ಕರ್ತೃವಿಗೆ ಕಾಣಬಹುದು.

## ಕರ್ಮಫಲ ವಿವೇಚನೆ

ಕರ್ಮವು ಒಂದು ಕಡೆ ಒಬ್ಬ ವ್ಯಕ್ತಿಯಿಂದ ನಡೆದರೂ ಅದರ ಇಷ್ಟಾನಿಷ್ಟಫಲಗಳು ಸುತ್ತಲೂ ವ್ಯಾಪಿಸುವುವು. ಯಾವುದಾದರೂ ನಿರ್ದಿಷ್ಟವಾದ ವಸ್ತುವನ್ನು ನಿರ್ದೇಶಿಸಿ ಕರ್ಮವನ್ನೆಸಗಿದರೆ ಸ್ವಾಭಾವಿಕವಾಗಿ ತತ್ಫಲ ಸಂಬಂಧವಾದ ಇತರ ವಸ್ತುಗಳೂ ಆವಿರ್ಭವಿಸುವುವು. ಅಮೃತ ಪ್ರಾಪ್ತಿಗೆ ನಡೆಯುವ ಮಂಥನ ಕ್ರಿಯೆಯಿಂದ ಸಂದರ್ಭ ಸಮಯೋಚಿತವಾಗಿ ಅಮೃತಾನುಯಾಯಿಗಳಂತೆ ಅನೇಕ ಫಲಗಳು ಪ್ರಾಪ್ತವಾಗುವುವು. ಫಲೋದ್ದೇಶದಿಂದ ನಟ್ಟ ಬೀಜದಿಂದ ಹುಟ್ಟಿದ ಸಸ್ಯ, ವೃಕ್ಷಗಳಿಂದ ದಾರು, ಪರ್ಣ ಪುಷ್ಪಗಳೂ ನೆರಳು ಸುವಾಸನೆಗಳೂ ಲಭಿಸುವುವು.† ಕೇವಲ ಫಲೋದ್ದೇಶದಿಂದ ಬೆಳೆಸಿದ ವೃಕ್ಷವು ನೆರಳನ್ನು ಕೊಡದಿರಲಾಗುವುದಿಲ್ಲ. ಪುಷ್ಪದ ಸುವಾಸನೆಯು ಪುಷ್ಪದಲ್ಲಿಯೇ ಅಡಗಿರಲು ಸಾಧ್ಯವಿಲ್ಲ. ಆ ವಾಸನೆಯನ್ನು ಅನುಭವಿಸುವುದಿಲ್ಲವೆಂದು ಉಸಿರು ಹಿಡಿಯುವ ವ್ಯಕ್ತಿಯು ಹಾಸ್ಯಾಸ್ಪದ ಸ್ಥಿತಿಯಿಂದ ವಿಫಲವಾಗಬೇಕಾಗುವುದು. ನಾವು ನೋಡುವ ಸಾಮೂಹಿಕ ಅಪಘಾತ

---

* ಗೀತಾ 3–5.

† ಆಪಸ್ತಂಬ ಧರ್ಮಸೂತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು, ಬೆಂಕಿ ಪ್ರವಾಹಗಳಿಂದ ಆಗುವ ಪ್ರಳಯಗಳು ಒಂದೊಂದು ವ್ಯಕ್ತಿಯ ದುಷ್ಕರ್ಮದಿಂದಲೇ ಉಂಟಾಗಬಹುದು. ಅದರಂತೆ ಲೋಕ ಕಲ್ಯಾಣಕ್ಕೆ ಮಾಡುವ ಕರ್ಮವು ಬಹುಜನಗಳಿಗೆ ಫಲವೀಯುವುದ ದುಷ್ಕರ್ಮ ಫಲಾನುಭವ ಭಯದಿಂದ ಕರ್ತೃಗಳ ಸಾಧುತ್ವ ಮತ್ತು ಅಸಾಧುತ್ವವೇ ಮೊದಲಾದ ವಿವರವು ತಿಳಿಯದಿರುವಾಗ — "ಯಾರೊಬ್ಬರೊಡನೆಯೂ ಯಾರೂ ಬೆರೆಯಬಾರದು.' ಎಂಬುದು ರಾಜನೀತಿಯ ಸೂಕ್ತಿಯಾಗಿರುತ್ತದೆ. ಅದರಂತೆ ಸತ್ಕರ್ಮ ಕರ್ತೃಗಳ ವಿವರವೂ ತಿಳಿಯದಿರುವುದರಿಂದ ತಪ್ಪಿಸಿಕೊಂಡರೆ ಸತ್ಸಂಗವು ದೂರೀಕೃತವಾಗವುದು. ಇಂತಹ ಸಂದರ್ಭಗಳಲ್ಲಿ ನೀತ್ಯನುಶಾಸನ ಶಿಕ್ಷಿತನಾದವನು ರಾಜನೀತಿಯೆಂಬ ಕಣ್ಣಿನಿಂದ ಔಚಿತ್ಯವನ್ನೂ ಕರ್ತವ್ಯವನ್ನೂ ತಿಳಿಯಬಲ್ಲನು.‡

## ಕರ್ಮಫಲ ವ್ಯಾಪ್ತಿ

ಒಬ್ಬ ವ್ಯಕ್ತಿಯಾಗಲೀ ಕುಟುಂಬ, ಸಮಾಜ, ಪ್ರದೇಶ, ದೇಶ (ರಾಷ್ಟ್ರ)ಗಳಾಗಲೀ ರಾಜ್ಯದ ಪಂಚವಲಯಗಳಲ್ಲಿ ಋತಕ್ಕೆ ಅನುರೋಧವಾಗಿ ಮತ್ತು ವಿರೋಧವಾಗಿ ನಡೆಯುವ ಸಮಸ್ತ ಕರ್ಮಗಳಿಗೂ ಅವುಗಳ ಫಲಾನುಭವಕ್ಕೂ ಬದ್ಧವಾಗುವುದು, ಆಶ್ಚರ್ಯವಾಗಿ ಕಾಣಬಹುದು. ಅವರವರ ಹೊಣೆಗಾರಿಕೆಯ ಪ್ರಮಾಣಕ್ಕೆ ತಕ್ಕಂತೆ ಫಲವು ಹಂಚಲ್ಪಡಬೇಕಾದುದು ವ್ಯಾವಹಾರಿಕವಾಗಿಯೂ ಪಾರಮಾರ್ಥಿಕವಾಗಿಯೂ ನ್ಯಾಯಸಮ್ಮತವಾಗಿರುವುದು ಮತ್ತು ಋಣಪರಿಹಾರ-ಅನುಭವ ಸಿದ್ಧಾಂತಕ್ಕೆ ಸರಿದೂಗುವುದು.

## ಕರ್ಮಫಲ ಕಾಲವಿವೇಚನೆ – ವಿಭಾಗ

ಪ್ರಪಂಚದಲ್ಲಿ ಆರಂಭವಾದ ಕರ್ಮಗಳು ಪೂರ್ತಿಯಾಗುವುದರೊ

‡ ಪುಟ 86, ಸಾಲು 23-26.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಳಗೆ ಕರ್ತೃವಿನ ಆಯುಃ ಪ್ರಮಾಣವು ಅವಕಾಶ ಕೊಡದಿದ್ದರೆ ಅಥವಾ ಕರ್ತೃವಿಗೆ ಆ ಕರ್ಮದ ಫಲವನ್ನು ಅನುಭವಿಸಲು ತಕ್ಕ ಉಪಾಧಿಯು ಇಲ್ಲದಿದ್ದರೆ ಋಣಶೇಷವಾಗಿ ಕೂಡಿಸಲ್ಪಟ್ಟು ಪುನಃ ಆ ಸಂಘಾತಾತ್ಮನು ತಕ್ಕ ಉಪಾಧಿಯನ್ನೂ ಆಯುಸ್ಸನ್ನೂ ಹೊಂದಿ ಋಣಶೇಷದ ಅನುಭವಕ್ಕೆ ಸಿದ್ಧನಾಗುವನು. ಈ ಸಂದರ್ಭದಲ್ಲಿ ಆ ಕರ್ಮಕ್ಕೆ ಹೊಣೆಗಾರರಾದ ಸರ್ವರೂ ಆ ಕರ್ತೃವು ಅನುಭವಿಸುವ ಫಲಕ್ಕೆ ಹೊಣೆಗಾರರಾಗಿ ಅದನ್ನು ಹಂಚಿಕೊಳ್ಳಬೇಕಾದುದರಿಂದ ಅವರು ಯಾವ ರೂಪದಲ್ಲಿಯಾದರೂ ಸಹ ಜನ್ಮವೆತ್ತಲೇ ಬೇಕಾಗುವುದು. ಕರ್ಮವು ಪೂರ್ತಿಯಾಗದಿದ್ದಾಗ ಅದೇ ಕರ್ಮವು ಇತರ ಜನ್ಮಗಳಲ್ಲಿ ಮುಂದುವರಿಯುವಂತಾಗುವುದಕ್ಕೆ ಋಣ ಬಂಧನವೇ (commitment) ಕಾರಣ. ಹೀಗೆ, ಫಲಾನುಭವಕ್ಕೆ ಅಡಚಣೆಯಾಗಿ ಹೊಸಹೊಸದಾಗಿ ಋಣಪ್ರಾಪ್ತಿಯಾಗಿ ಹಳೇ ಋಣವೂ ಕರ್ಮವೂ ಫಲವೂ ಫಲಾನುಭವವೂ ರಾಶಿರಾಶಿಯಾಗಿ ಸಂಚಿತವಾಗುವುವು. ಕಾಲ ಸನ್ನಿವೇಶಗಳು ಒದಗಿದಂತೆಲ್ಲಾ ಕರ್ಮವೂ ಫಲವೂಪರಿಪಕ್ವವಾಗಿ ಪೂರ್ತಿಯಾಗಿ ಅನುಭವವಾಗುವುದಕ್ಕೆ ಕ್ರಮವಾಗಿ ಆರಂಭವಾಗುವುದು. ಹೀಗೆ ಆರಂಭವಾದದ್ದು (ಪ್ರಾರಬ್ಧ) ಎನಿಸುವುದು.

ಹೊಸಹೊಸ ಋಣಪ್ರಾಪ್ತಿಯು ವ್ಯಕ್ತಿಗಳ ಸ್ವಾತಂತ್ರ್ಯ, ಶಕ್ತಿ ಸಾಹಸಗಳ ಮತ್ತು ಪ್ರಕೃತಿಲೀಲೆಗಳ ಪರಿಣಾಮವಾಗಿ ಉಂಟಾಗುವುದು. ಮತ್ತು ಉದ್ದಿಷ್ಟ ಫಲಕ್ಕೆ ತಕ್ಕಂತೆ ವ್ಯವಸಾಯ ನಡೆಯಲು ಕಾಲ ಸನ್ನಿವೇಶಗಳನ್ನು ಉತ್ತರೋತ್ತರ ಕಲ್ಪಿಸುವ ಆಗಾಮಿ ಕರ್ಮ ಮತ್ತು ಆಗಾಮಿ ಕರ್ಮಫಲವೆನಿಸಿ ವಿಕಾಸಲಾಗಿರುವುದು ಮತ್ತು ಸಂಚಿತಕ್ಕೆ ಕೂಡುವುದು.

ಋಣ ಸಂಬಂಧದಿಂದ ಕರ್ಮಗಳು ನಡೆದು ಮತ್ತು ನಡೆಯುವುದಾಗಿ ಸಂಚಿತ, ಪ್ರಾರಬ್ಧ, ಆಗಾಮಿಗಳೆನಿಸಿ ಫಲಪ್ರದಗಳಾಗುವುವು. ವರ್ತಮಾನ ಕರ್ಮವು ಅದರ ಮಿತಿಯಲ್ಲಿ ತಾತ್ಕಾಲಿಕವಾಗಿಯೇ ಫಲಪ್ರದವಾಗುವುದರಿಂದ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವುದು.

ಪ್ರಾರಬ್ಧವಾದ ಕರ್ಮಫಲವು ಅನುಭವ ಕಾಲದಲ್ಲಿ ಹಿತವಾಗಿ ಕಾಣಬಹುದು; ಅಹಿತವಾಗಿ ಕಾಣಬಹುದು; ಮಿಶ್ರವಾಗಿರಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲದೆ, ತಾತ್ಕಾಲಿಕ ಕರ್ಮಫಲವು ಹಿತವಾಗಬಹುದಾಗಿರುವಾಗ ಅದರ ಜತೆಗೆ ಅಹಿತವನ್ನೂ ತಾತ್ಕಾಲಿಕ ಕರ್ಮ ಫಲವು ಅಹಿತವಾಗಬಹುದಾಗಿರುವಾಗ ಹಿತವನ್ನೂ ತಂದು ಒಡ್ಡುವುದು. ಹೇಗಾದರೂ ಕರ್ತೃವಿನ ಕರ್ಮಕ್ಕೆ ತಕ್ಕ ಫಲವಾಗುವುದೇ ಹೊರತು ಹೆಚ್ಚು ಕಡಿಮೆ ಫಲಾನುಭವಕ್ಕೆ ಲೇಶವೂ ಅವಕಾಶವಿರುವುದಿಲ್ಲ.

ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳಲ್ಲಿ ವ್ಯಷ್ಟಿ ಮತ್ತು ಸಮಷ್ಟಿಕ್ರಮದಲ್ಲಿ ನಡೆದ ಆಗಾಮಿ, ಪ್ರಾರಬ್ಧ ಮತ್ತು ಸಂಚಿತಗಳು ಅವರವರ ಕರ್ಮ ಮತ್ತು ಋಣದ ಹೊಣೆಗಾರಿಕೆ ಪ್ರಮಾಣಕ್ಕೆ ತಕ್ಕಂತೆ ಇಷ್ಟಾನಿಷ್ಟ ಮಿಶ್ರ ಫಲಗಳನ್ನು ಕೊಡುತ್ತಾ ಹೋಗುವುವು. ವ್ಯಕ್ತಿಕುಟುಂಬಾದಿ ಪಂಚವಲಯಾಂಗಗಳೂ ಇವುಗಳನ್ನು ಸಾಕ್ಷಾತ್ತಾಗಿ, ಪರೋಕ್ಷವಾಗಿ ಮತ್ತು ಪರಂಪರೆಯಾಗಿ ಅನುಭವಿಸಬೇಕಾಗುವುದು. ಯಾವ ರೂಪದಲ್ಲಿ ಯಾವ ಕಾಲದಲ್ಲಿ ಎಂತಹ ಫಲವಾಗುವುದು? ಎಂತಹ ಕರ್ಮವು ಯಾರಿಂದ ನಡೆದಿತ್ತು? ಫಲವನ್ನು ಅನುಭವಿಸುವವರು ಎಷ್ಟರಮಟ್ಟಿಗೆ ಹೊಣೆಗಾರರು; ಇವೆಲ್ಲವೂ ತಿಳಿವಳಿಕೆಗೆ ಬರುವ ಪರಿಸ್ಥಿತಿಯಿದ್ದರೂ ಸಾಮಾನ್ಯರ ಮಿತಿಗೆ ಮೀರಿರುತ್ತವೆ. ಇಂತಹ ಸಂದರ್ಭದಲ್ಲಿ "ಈ ರಹಸ್ಯವನ್ನು ತಿಳಿದಿರುತ್ತೇನೆ." ಎಂದು ವೇಷ ಹಾಕಿಕೊಂಡವರಿಂದ ವಂಚಿತರಾಗಿ ವಂಚನೆಗೆ ಸಹಾಯಕವಾಗುವ ದುಷ್ಟಕರ್ಮವನ್ನೇ ಮಾಡಿ ದುಷ್ಟ ಫಲಕ್ಕೆ ಕಾಯಬೇಕಾಗುವುದನ್ನು ತಪ್ಪಿಸಿಕೊಳ್ಳಲು ವಿವೇಕವನ್ನು ಸದಾ ಆಶ್ರಯಿಸಬೇಕು.

ಒಬ್ಬ ಕರ್ತೃವು ಮಾಡಿದ ಫಲವನ್ನು ಇತರರು ಅನುಭವಿಸಬೇಕಾದ ವಿಷಯವೂ ವಿವೇಕ ವಿಮರ್ಶೆಗೆ ಒಳಗಾಗಿರುತ್ತದೆ. ಒಬ್ಬನಿಂದ ನಡೆದ ಕರ್ಮವು ಸತ್ಫಲವೀಯುವುದಾಗಿ ಬಹು ಜನರು ಅದನ್ನು ಅನುಭವಿಸುವುದಾದರೆ ಆ ಬಹು ಜನರು ಆ ಕರ್ಮಕರ್ತೃವಿಗೆ ಋಣಿಯಾಗಿ ಪರಿಹರಿಸಿಕೊಳ್ಳಬೇಕಾಗುವ ಸಂಭವವು ಇದ್ದೇ ಇದೆ; ಅಂತೆಯೇ ಒಬ್ಬನ ಕರ್ಮವು ಕೊಡುವ ದುಷ್ಟಫಲವನ್ನು ಅನುಭವಿಸುವವರೆಲ್ಲರೂ ಆ ಕರ್ಮಕರ್ತೃವಿನಿಂದ ಪರಿಹಾರವನ್ನು ಪಡೆಯುವುದಕ್ಕೂ ಕರ್ತೃವು ಪರಿಹಾರವನ್ನು ಉಂ[illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯನ್ನು ಏರ್ಪಡಿಸಿರುವುದು. ಅಖಂಡವಾಗಿ ಅನುಸ್ಯೂತವಾಗಿ ಅವ್ಯಾಹತವಾಗಿ ಮುಂದುವರಿಯುವ ಈ ಋಣ ಪ್ರಪಂಚದಲ್ಲಿ ಬಾಧೆಗಳಿಗೊಳಗಾದ ಸಂತರೂ, ಬಾಧೆಯನ್ನು ಉಂಟುಮಾಡಿದ ದುಷ್ಟರೂ ಸಹ ತಕ್ಕ ವಿಕೃತಿ ಕ್ರಿಯಾಫಲಕ್ಕೆ ಸಿದ್ಧರಾಗಿರುತ್ತಾರೆಂಬುದಕ್ಕೆ ಅನೇಕ ದೃಷ್ಟಾಂತಗಳು ಪುರಾಣೇತಿ ಹಾಸಗಳಲ್ಲಿ ತುಂಬಿವೆ.*

ಫಲಾನುಭವ ಕಾಲದಲ್ಲಿ ವ್ಯಕ್ತಿ, ಕುಟುಂಬಾದಿಗಳು ತಮ್ಮ ಸ್ವಂತವಾದ ಋಣ ಕರ್ಮಗಳ ಹೊಣೆಗಾರಿಕೆ ಮತ್ತು ಫಲಗಳ ವಿವೇಚನೆಯನ್ನು ಮರೆತು ಸುಖ ದುಃಖಗಳು ಎಲ್ಲಿಂದಲೋ ಯಾರ ಮೂಲಕವೋ ಹಠಾತ್ತಾಗಿ ತಲೆಯಮೇಲೆ ಹೊರಿಸಲ್ಪಟ್ಟಂತೆಯೂ, ಜ್ಯೋತಿರ್ಗ್ರಹಗಳ ಚಾರದಿಂದಲೇ ಇಷ್ಟಾನಿಷ್ಟ ಪ್ರಾಪ್ತವಾದಂತೆಯೂ, ತಪ್ಪು ಭಾವನೆಯಿಂದ ಜೀವನವು ಭಾರಭೂತವಾದುದೆಂದು ತಿಳಿದು ಸ್ವಕರ್ಮಫಲದ ಮೂಲವನ್ನೂ ತತ್ವವನ್ನೂ ತಿಳಿಯದೆ, ತಿಳಿಯಲೆತ್ನಿಸದೆ ಅನ್ಯರ ಮೇಲೆ ದೋಷಾರೋಪಣೆ ಮಾಡುತ್ತಾರೆ.† ಇದು ಪ್ರಾಣಿವರ್ಗದ ಮಟ್ಟಕ್ಕಿಂತ ಮೇಲಿನ ಮಟ್ಟವನ್ನು ಸೂಚಿಸುವುದಿಲ್ಲ. ಜ್ಯೋತಿರ್ಗ್ರಹಗಳು ವಿವಿಧ ಪ್ರಮಾಣದಲ್ಲಿ ಸೇರಿ ಫಲವನ್ನು ಸಾಧಿಸುವ ಶಕ್ತಿ, ಗುಣ, ಕರ್ಮಗಳ ಸಂಕೇತಗಳಾಗಿವೆ. ಇದನ್ನು ತಿಳಿದು ಜ್ಯೋತಿರ್ಗ್ರಹ ನಾಮಗಳ ಸದ್ವಿನಿಯೋಗವನ್ನೂ ಸಾಧಕತೆಯನ್ನೂ ಗೊತ್ತುಮಾಡಬೇಕಾಗುತ್ತದೆ.

## ಕರ್ಮಕ್ಕೆ ತಕ್ಕ ಫಲ ಫಲಾಧಿಕ್ಯವು ಅವಸ್ಥೆಗೆ ಸೇರಿದ್ದು

ಕರ್ಮವು ಅದಕ್ಕೆ ತಕ್ಕ ಫಲವನ್ನು ಹೊಂದುವುದು; ಫಲಕ್ಕೆ ತಕ್ಕಷ್ಟು ಕರ್ಮವು ನಡೆಯಬೇಕಾಗಿರುವುದು. ವಸ್ತುತಃ ಫಲವು ಕರ್ಮ

* ವಾಲಿ, ರಾಮ; ಕೃಷ್ಣ — ಇತ್ಯಾದಿ.
ಪುನರಪಿ ಜನನಂ, ಪುನರಪಿ ಮರಣಂ ಪುನರಪಿ ಜನನೀ–
ಜಠರೇ ಶಯನಂ' — ಅಮೃತ!

† ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ ಪರೋ ದದಾತೀತಿ ಕುಬುದ್ಧಿರೇಷಾ ಸ್ವ ಕರ್ಮಸೂತ್ರ ಗ್ರಥಿತೋ ಹಿ ಲೋಕಃ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಕಿಂತಲೂ ಹೆಚ್ಚಾಗಿ ಕಂಡುಬಂದರೆ ಅದರ ಅನುಭವಕ್ಕೆ ಬಾಧ್ಯತೆಯಿಲ್ಲದೆ ಹೋಗುವುದು. ಬಲಾಧಿಕ್ಯದಿಂದ ಅನುಭವಕ್ಕೆ ಯತ್ನಿಸಿದರೆ ಬೇರೆ ವಿಧವಾದ ಕರ್ಮ-ಋಣ-ವು ಪ್ರಾಪ್ತವಾಗಿ ತಕ್ಕ ಫಲಗಳೇ ಉಂಟಾಗುವುವು. ಪ್ರಕೃತಿಯಲ್ಲಿ ಋತಾನುಗುಣವಾಗಿ ಯಾರೂ ಕರ್ಮವು ಕೊಡುವ ಫಲಕ್ಕಿಂತ ಅಧಿಕವಾದ ಫಲವನ್ನು ಹೊಂದಲಾರರು ಎಂಬುದು ಸಿದ್ಧಾಂತ. ಪ್ರಾಪಂಚಿಕವಾಗಿ ಮತ್ತು ಆರ್ಥಿಕವಾಗಿ ಅಧಿಕ ಫಲವೂ ಐಶ್ವರ್ಯವೂ ಸೇರಿದರೆ ಅದು ಅವಸ್ಥೆಯ ವೈಶಿಷ್ಟ್ಯವನ್ನು ತಿಳಿಸುವುದು. ಆ ಅವಸ್ಥೆಗೆ ತಕ್ಕಂತೆ ಹಂಚಿಕೆಯಾಗದಿದ್ದರೆ ಧನ, ವಿದ್ಯಾ, ಪುತ್ರ, ಕಳತ್ರ, ಭೂಮಿ, ಆರೋಗ್ಯ, ಕೀರ್ತಿ, ಸಂಪತ್ ಮೊದಲಾದುವುಗಳಲ್ಲಿ ಪ್ರಮಾಣಕ್ಕೆ ತಕ್ಕಂತೆ ಶೂನ್ಯತೆ ಪ್ರಾಪ್ತವಾಗುವುದು. ಆ ಸಂಬಂಧದಲ್ಲಿ ಬಲಾತ್ಕಾರದಿಂದ ವಿನಿಯೋಗವಾಗಲು ಟೊಳ್ಳಾದ ವಿಜೃಂಭಣೆಯ ವ್ಯಾಪಾರಗಳು ನಡೆಯುವುವು.* ಈ ಬಗೆಯ ವಿನಿಯೋಗದ ಕರ್ಮಕ್ಕೂ ತಕ್ಕ ಫಲವು ಕಾದಿದ್ದೇ ಇರುವುದು.

ಕರ್ಮವನ್ನು ಆರಂಭಿಸಿ ಕರ್ಮ ನಿರ್ವಾಹಕ್ಕೆ ಬೇಕಾದ ಸಹಾಯಕ್ಕಿಂತಲೂ ಅಧಿಕವಾದ ಪ್ರಯೋಜನವನ್ನು ಹೊಂದಿ ಅದನ್ನು ಉದ್ದೇಶಕ್ಕೆ ತಕ್ಕಂತೆ ವಿನಿಯೋಗಿಸದಿದ್ದರೂ, ಪಡೆದ ಅಥವಾ ಪಡೆಯುವ ಸಹಾಯ ಮತ್ತು ಪ್ರತಿಫಲಕ್ಕೆ ತಕ್ಕಂತೆ ಕರ್ಮವನ್ನೆಸಗದಿದ್ದರೂ ಸಹ ಅದು ಋಣಶೇಷವಾಗಿ ಪರಿಣಮಿಸಿ ಕ್ಲೇಶಭಾರವನ್ನು ಋಣಪರಿಹಾರವಾಗುವವರೆಗೂ ಹೊರಿಸುವುದು.

ಕರ್ಮವೇ ಅಧಿಕವಾಗಿ ಸಹಾಯವಾಗಲೀ ಪ್ರತಿಫಲವಾಗಲೀ ಆಯಾ ಸನ್ನಿವೇಶಕ್ಕೆ ತಕ್ಕಂತೆ ದೊರೆಯಬೇಕಾದುದಕ್ಕಿಂತ ಕಡಿಮೆಯಾದರೂ ಋಣ ಋಣೀ ಭಾವಗಳ ಬಂಧನವು ಪ್ರಾಪ್ತವಾಗಿ ಬಿಡುಗಡೆ

---

* ಕೆಲವು ಸರ್ಕಾರಗಳೂ ಇದನ್ನು ಸೂಚಿಸುವುವು. ಲಾಭದಲ್ಲಿ ಅಧಿಕ ಪಾಲು ಸರ್ಕಾರಕ್ಕೆ ವಿನಿಯೋಗವಾಗಬೇಕಾದ ಕರ್ಮಕ್ಕೆ ಫಲವು ಸಮನಾಗಿದೆ ಎಂದು ತಿಳಿಯಬೇಕು. ಹೀಗೆಯೇ ಕಟ್ಟಳೆ, ನಮ್ಮ ಮತ್ತು ರೀತಿಗಳ ಸಮನ್ವಯ ಮಾಡಿಕೊಳ್ಳಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯಾಗುವವರೆಗೂ ಕರ್ತೃವನ್ನೂ ಮತ್ತು ಲಬ್ಧಾಲ್ಪಪ್ರಯೋಜನ ಕರ್ಮವನ್ನೂ ಋಣ ಸಂಕೋಲೆಯಿಂದ ಬಂಧಿಸುವುದು.†

## ಕರ್ಮ ಯಂತ್ರ – ಏಕಪ್ರಕಾರ

ಪ್ರಕೃತಿಯಲ್ಲಿ ಎಲ್ಲರೂ ಕರ್ಮವನ್ನೆಸಗುವುದೆಂಬ ಒಂದೇ ವಿಧವಾದ ಯಂತ್ರದಲ್ಲಿ ಬದ್ಧರಾಗಿರುವರು. ಭಾರವನ್ನು ಹೊರಲಿ, ಭೂಮಿಯನ್ನು ಉಳಲಿ, ವಸ್ತುಗಳನ್ನು ಸಾಗಿಸಲಿ, ದೇಶವನ್ನಾಳಲಿ ವಿದ್ವತ್ತನ್ನು ಹೊಂದಲಿ, ಪರಾಕ್ರಮವನ್ನು ಪ್ರಕಾಶಪಡಿಸಲಿ — ಕರ್ಮನಿರ್ವಾಹವು ಏಕ ಪ್ರಕಾರವಾಗಿರುವುದು. ರಾಜ್ಯ ಎಂಬ ಪ್ರಭುತ್ವವು ಪಂಚವಲಯಗಳಿಗೆಲ್ಲಾ ಸಾಮಾನ್ಯವಾಗ್ಗಿರುವುದು. ಇವೆಲ್ಲವೂ ಅವಸ್ಥಾವಿಶೇಷವೆನಿಸಿ ಲಘುತಮ ಸಾಮಾನ್ಯ ಅಪವರ್ತ್ಯರೀತ್ಯಾ ಸುಖಶಾಂತಿ ಎಂಬ ಒಂದೇ ವಿಧವಾದ ನಿಷ್ಪಳ ಫಲಕ್ಕೆ ಭಾಗಿಗಳು; ಮಹತ್ತಮ ಸಾಮಾನ್ಯ ಅಪವರ್ತನ ರೀತ್ಯಾ ಒಂದೇ ವಿಧವಾದ ಸಾಧನವುಳ್ಳವರು. ಆದರೆ ಇಂದ್ರಿಯ ಮಟ್ಟದಲ್ಲಿ ಅವುಗಳ ಹೆಚ್ಚು ಕಡಿಮೆಗಳನ್ನು ನೋಡಿ ಉದಾಸೀನರಾದರೆ ಪ್ರಕೃತಿಯು ಋಣವೆಂಬ ಚಾಟಿಯಿಂದ ಹೊಡೆದು ಎಬ್ಬಿಸಿ ಆಯಾ ಸೋಪಾನ–ಹಂತ–ದಲ್ಲಿ ವಿಸಿಯೋಗಿಸುವುದು.

ತಪಸ್ಸಿಗೆ (ಕರ್ಮಕ್ಕೆ) ತಕ್ಕ ಫಲವೆಂದು ಹೇಳಿದೆಯಷ್ಟೆ. ಸಾಮೂಹಿಕ ಕರ್ಮಕ್ಕೆ ಸಾಮೂಹಿಕ ಫಲ; ಕರ್ಮಕ್ಕೆ ಹೊಣೆಯಾಗಿದ್ದುದರ ಫಲ ಇತ್ಯಾದಿ ಕರ್ಮ ಫಲಗಳು ಋಣವನ್ನು ಕಲ್ಪಿಸಿ ಋಣ

---

† ಕರ್ಮ ಮತ್ತು ಕರ್ಮಫಲಗಳು ಪ್ರಜೆಗಳ ಪ್ರತ್ಯೇಕ ಪ್ರಭುತ್ವ ಶಕ್ತಿಗೂ ಮತ್ತು ರಾಜ್ಯ ಪಂಚವಲಯ ನಿರ್ವಾಹಕ್ರಮದ ಪರಸ್ಪರ ಹೊಂದಿಕೆಗೂ ಸಂಬಂಧಪಟ್ಟು ಕಾಲೋಚಿತವಾಗಿ ನಿರ್ದಿಷ್ಟವಾಗುವುವು. ಕರ್ಮಕ್ಕೆ ಅತಿಶಯ ಫಲಪ್ರಾಪ್ತಿಯುಂಟೆಂಬ ವರ್ಣನೆಗಳು ಅರ್ಥವಾದವಾಗಿ ಪ್ರವೃತ್ತಿಪರವಾಗಿ ಪರ್ಯವಸಾನವಾಗುವುವು. ವಸ್ತುತಃ ಅತಿಶಯ ಫಲಪ್ರಾಪ್ತಿಗೆ ಕಾರಣವಿರುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ಕರ್ಮ, ಕರ್ಮದಿಂದ ಋಣ ಎಂಬಂತೆ ಚಕ್ರಾಕಾರವಾಗಿ ಅನಂತವಾಗಿ ಅನವಸ್ಥಾ ಪರಂಪರೆಯಾಗಿ ಪರಿಣಮಿಸುವುದರಿಂದ ಸ್ವಸ್ವರೂಪಾವಸ್ಥಾನ ಪ್ರಾಪ್ತಿಗೆ ಅಡ್ಡಿಯಾಗಬಹುದೆಂಬ ಸಂದೇಹವುಂಟಾಗಬಹುದು. ಕರ್ಮ ಸಾಕ್ಷಾತ್ಕಾರ ಮಾಡಿಕೊಂಡಿರುವ ವಿಭೂತಿ ಪುರುಷರು ಪ್ರಾಪಂಚಿಕ–ಪಾರಮಾರ್ಥಿಕ ಕರ್ಮಾನುಷ್ಠಾನದಿಂದ ನೈಷ್ಕರ್ಮ್ಯಸಿದ್ಧಿಯುಂಟಾಗುವ ವಿಚಾರವನ್ನು ಮನಗಂಡು ಸಂಸ್ಕೃತಿ ವಿಧಾನದಲ್ಲಿ ಸೇರಿಸಿ ಆಚಾರವಾಗುವಂತೆ ಅಭ್ಯಾಸಕ್ಕೆ ಕೊಟ್ಟಿರುತ್ತಾರೆ.

## ಕರ್ಮಫಲ – ನೈಷ್ಕರ್ಮ್ಯ ಸಿದ್ಧಿ

ತಪಸ್ಸು ನಡೆದರೂ ನಡೆಯದಂತೆ ಆಗಬಹುದಾದ ನೈಷ್ಕರ್ಮ್ಯ ಸಿದ್ಧಿ ಮೂಲಕ ಜೀವನ್ಮುಕ್ತಿ ಮತ್ತು ವಿದೇಹ ಮುಕ್ತಿಗಳು ತಾವಾಗಿಯೇ ಕಾಣಿಸಿಕೊಳ್ಳುವುವು. ಗುಣ ದೋಷ ವಿಶಿಷ್ಟವಾದ ತಪಸ್ಸಿನ ಫಲವನ್ನು ವ್ಯವಹಾರದಲ್ಲಿ (ಪ್ರಾಪಂಚಿಕವಾಗಿ) ಪುಣ್ಯ ಪಾಪಗಳೆನ್ನುವರು. ಪುಣ್ಯ ಫಲವುಳ್ಳ ತಪಸ್ಸು ಹೇಗೆ ನಡೆಯುವುದು? ಮತ್ತು ದೋಷ ವಿಶಿಷ್ಟವಾದ ಪಾಪಫಲವು ಹೇಗಾಗುವುದು ಎಂಬುದನ್ನು ರಸಾಭಿಜ್ಞವಿಮರ್ಶೆಯಿಂದ ತಿಳಿಯುವುದೇ ಒಂದು ದೊಡ್ಡ ಗುಣ. ಪುಣ್ಯ ಪಾಪಗಳಿಗೆ ಸಂಬಂಧಿಸದೆ ಇರುವ ಕರ್ಮದ ಸ್ಥಿತಿಯು ನೈಷ್ಕರ್ಮ್ಯವೆನಿಸುವುದು. ಅಂದರೆ ಶರೀರದಿಂದ ಚೇಷ್ಟೆಗಳು ನಡೆದರೂ ಸಂಕಲ್ಪವಿಲ್ಲದಿರುವ ಮನಸ್ಸಿನ ಪರಿಪಕ್ವ ಸ್ಥಿತಿ ಮತ್ತು ಆತ್ಮಾನುಸಂಧಾನದ ಪರಾಕಾಷ್ಠ ಸ್ಥಿತಿಗಳ ಪ್ರಭಾವದಿಂದ ಜೀವನಿಗೆ (ಋಣವನ್ನು ಕಲ್ಪಿಸುವ ಅಥವಾ ಜೀವನನ್ನು ಬದ್ಧನನ್ನಾಗಿ ಮಾಡುವ) ಕರ್ಮದ ದೆಸೆಯಿಂದ ಬಿಡುಗಡೆಯುಂಟಾಗಿ ಕರ್ಮವೇ ನಡೆಯಲಿಲ್ಲವೆಂಬಂತೆ ಆಗುವ ಸ್ಥಿತಿಯು ನೈಷ್ಕರ್ಮ್ಯಸಿದ್ಧಿಯೆನಿಸುವುದು. ಪ್ರಕೃತಿಯ ಪ್ರಭಾವದಿಂದ ಮಾತ್ರವೇ ಶೋಧನವೆಂಬ ಶೂದ್ರನ್ಯಾಯಾನುಸಾರ ನಡೆಯುವ ಕರಚರಣಾದ್ಯವಯವಗಳ ಚೇಷ್ಟೆಗಳು ಋಣಶೇಷವನ್ನು ಹರಿಸುವುವೇ ಹೊರತು ಹೂರಿಸುವುದಿಲ್ಲ. ಬಹಿಃ ಪ್ರಪಂಚಕ್ಕೆ ಉಪಾಧಿಗಳು ಪ್ರಕಟಿಸಿರುವುದರಿಂದ ಅಂತಶ್ಚಿತ್ –

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಋಣವು ಪರಿಹಾರವಾಗಿ ಹೋಗುವುದು. ಉಪಾಧಿಯಲ್ಲಿರುವ ಚೈತನ್ಯವು ಅನುಭವಿಸುವ ಈ ಸ್ಥಿತಿಗೆ ಜೀವನ್ಮುಕ್ತಿ ಎಂದು ಹೆಸರು. ದೇಹವಿರುವ ಪರ್ಯಂತ ಋಣವನ್ನು ಹೊರಿಸದೆ ಋಣಶೇಷದ ಪರಿಹಾರಕ್ಕಾಗಿ ಕರ್ಮಗಳು ನಡೆದು ದೇಹಾವಸಾನವಾದನಂತರ ಋಣ ಕರ್ಮಶೇಷಗಳಿಲ್ಲದೆ ಸ್ವಯಂ ವ್ಯಕ್ತವಾಗುವ ಸ್ವಸ್ವರೂಪಾವಸ್ಥಾನಾನಂದಸ್ಥಿತಿಯು ವಿದೇಹ ಮುಕ್ತಿಯೆನಿಸುವುದು.

ದೇಹೀ ಅಥವಾ ಆತ್ಮ-ಜೀವನ ವ್ಯಾಪಾರವೆನಿಸುವ (ಸ್ವಧರ್ಮ) ಸ್ವಾಚಾರಾನುಷ್ಠಾನ ಸೋಪಾನಗಳು ಕ್ರಮೇಣ ನೈಷ್ಕರ್ಮ್ಯಸಿದ್ಧಿಯನ್ನು ಹೊಂದಿಸುವುದಕ್ಕಾಗಿ ಮನಸ್ಸಿಗೆ ಶಿಕ್ಷಣವು ದೊರೆಯುವಂತೆ ಮಾಡಲು ಉಚಿತವಾದ ಸಾಹಿತ್ಯರಾಶಿಯು ವಾತಾವರಣದಲ್ಲಿ ಮೊಳಗುತ್ತಿರುವುದು. ಶಿಕ್ಷಣವನ್ನು ಸಂಸ್ಕೃತಿ ವಿಧಾನದಲ್ಲಿ ಹೊಂದುವುದಕ್ಕೆ ತಕ್ಕ ಯೋಗ್ಯತೆಯು -(ಅಥವಾ ಅನುಭವದಿಂದ 'ಪರಿಪಕ್ವವಾದ ಮನೋಭಾವವು)- ಉಂಟಾದಾಗ ಪ್ರಯತ್ನಪೂರ್ವಕವಾಗಿ ನೈಷ್ಕರ್ಮ್ಯ ಸಿದ್ಧಿಯ ಪ್ರಾಪ್ತಿಗೆ ಆಚರಿಸಬಹುದಾದ ಅನುಷ್ಠಾನ ಕ್ರಮವು ಸ್ವತ ಏವ ದೊರೆಯುವುದು. ಈ ಸನ್ನಿವೇಶದಲ್ಲಿ ಧರ್ಮ - ಕರ್ತವ್ಯ ಕರ್ಮ - ಆಚಾರ - ಅನುಷ್ಠಾನವನ್ನು ಗೊತ್ತಾದ ಮಿತಿಗೆ ಒಳಪಡಿಸಿ ಮನೋವಾಕ್ಕಾಯಗಳ ಮತ್ತು ತತ್ಕರ್ಮಗಳ ಪರಿಶುದ್ಧತೆಗೆ ಅಪಾರವಾದ ಮತ್ತು ವಿವಿಧವಾದ ಅಂತಸ್ತಿಗೆ ತಕ್ಕಂತಿರುವ ಪ್ರಯತ್ನಗಳು ನಡೆಯ ತಕ್ಕ ಸೌಕರ್ಯಗಳನ್ನೂ ಅನುಭವ ನಿದರ್ಶನಗಳನ್ನೂ ಸಾಹಿತ್ಯದ ಮೂಲಕ ಪ್ರಕೃತಿಯು ವಿಶ್ವದಲ್ಲಿ ನಿರಂತರವೂ ಪ್ರಕಾಶ ಮಾಡುತ್ತಿರುವುದು. ಈ ಮಟ್ಟದಲ್ಲಿ ಧರ್ಮ ≡ ಗುಣ ವಿಶಿಷ್ಟ ಕರ್ಮ ≡ ಆಚಾರವನ್ನು ದೇವತೋದ್ದೇಶದಿಂದ ದ್ರವ್ಯತ್ಯಾಗ ಮಾಡುವ ಯಾಗವೆಂದು ವಿವರಿಸುತ್ತಾರೆ. ಚೋದನಾಲಕ್ಷಣವುಳ್ಳ ಅರ್ಥವೆಂಬ 'ಧರ್ಮ'ವು ನಡೆಸುವ ಮತ್ತು ವಿಶ್ವದಲ್ಲಿ ನಡೆಯುವ ವ್ಯಾಪಾರಗಳೆಲ್ಲವೂ ದೇವತೋದ್ದೇಶವೆಂಬ ಅನುಸಂಧಾನದಿಂದ ನಡೆಯುವ ದ್ರವ್ಯ ತ್ಯಾಗವೇ ಆಗಿರುತ್ತದೆ.* ವರಿವಸ್ಯಾ ರಹಸ್ಯದಲ್ಲಿಯೂ ಆರಾಧ್ಯ

---

* ಮಾನಸಿಕ, ವಾಚಿಕ, ಕಾಯಿಕ, ಆರ್ಥಿಕ ಸಂಪದಾದಿ ವ್ಯಾಪಾರಗಳೆಲ್ಲವೂ ದ್ರವ್ಯದಲ್ಲಿ ಅಡಕವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರಾಧಕ ಆರಾಧನಗಳಿಗೆ ಭೇದವಿಲ್ಲವೆಂಬ ಅನುಸಂಧಾನಕ್ರಮವನ್ನು ಶ್ರೀ ಭಾಸ್ಕರರಾಯರು ವಿವರಿಸಿದಾರೆ. ಪೂರ್ಣ ಸ್ಥಿತಿಯು ಸಾಕ್ಷಾತ್ಕಾರವಾಗುವ ಮಟ್ಟಕ್ಕೆ ಏರಲು ಕೋಟಿಗಟ್ಟಲೆ ಹಂತಗಳಿರುವುದರಿಂದ ಯಾವುದು ಸರಿ ಯಾವುದು ಶ್ರೇಯಃ ಪರವಾದುದು ? ಯಾವುದು ಯಾವ ಹಂತಕ್ಕೆ ಸೇರಿದುದು ? ಎಂಬುದು ಸಂಸ್ಕೃತರಾದ ಶುದ್ಧಾತ್ಮರಿಗೆ ಗೋಚರವಾಗುವುದು. ಅತೀಂದ್ರಿಯವಾದ ಈ ವಿಷಯವನ್ನು ಬಿಚ್ಚಿ ಬಿಡಿಸಿ ಹೇಳತಕ್ಕದ್ದಲ್ಲ. ಒಡೆದು ತೋರಿಸತಕ್ಕದ್ದೂ ಅಲ್ಲ ; ಸ್ವಾನುಭೂತಿಯಿಂದಲೇ ವೇದ್ಯವಾಗಬೇಕಾಗಿರುತ್ತದೆ. "ಸ್ವಾನುಭೂತಿ" ಅನುಭವವು ಸರ್ವರಿಗೂ ಲಭಿಸುವುದಾಗಿರುತ್ತದೆ. ಸ್ವಾನುಭೂತಿಯು ಕೊಡಲ್ಪಡತಕ್ಕದ್ದಲ್ಲ. ಸ್ವಾನುಭೂತಿಯನ್ನು ಕೊಡುವುದಿಲ್ಲ ; ಕೊಡಲಿಲ್ಲವೆಂದು ಯಾರನ್ನು ಯಾರೂ ಆಕ್ಷೇಪಿಸತಕ್ಕದ್ದಲ್ಲ. ಉತ್ತಮ ಸಂಸ್ಕೃತಿಯನ್ನು ಹೊಂದಿ ಉತ್ತಮೋತ್ತಮ ಸೋಪಾನಗಳನ್ನು ಏರುತ್ತಾ ಕಾರ್ಯವನ್ನೆಸಗುವ ಕರ್ತೃಗಳಿಗೂ ಸಹ ಆವರಣದ ತೆರೆಮರೆಯು ಬಲವಾಗಿರುವುದಾದರೆ ಗೋಚರವಾಗುವುದಿಲ್ಲ. 'ಆದ್ದರಿಂದ ತಿಳಿವಳಿಕೆಗೆ ಬರುವುದಿಲ್ಲ ; ಅಥವಾ ನಿಲುಕುವುದಿಲ್ಲ. ಎಂಬುದನ್ನೇ' ಪ್ರಧಾನವಾಗಿ ಎಣಿಸಿ ಪ್ರಾಪಂಚಿಕವಾದ ಭೋಗ ಭಾಗ್ಯಗಳ ಮಿತಿಯಲ್ಲಿ ಭೇದವನ್ನೇ ತಂದೊಡ್ಡುವ ಊಹಕವನ್ನು ಆಶ್ರಯಿಸದೆ ಮತ್ತು ತಿಳಿವಳಿಕೆಗೆ ತಂದುಕೊಳ್ಳಬೇಕೆಂಬ ತೀವ್ರತೆಯಿಂದ ವೇಷಧಾರಿಗಳ ವಂಚನೆಗೆ ಗುರಿಯಾಗದೆ, ಕೇವಲ ಅನುಸಂಧಾನ ಶರಣರಾಗಿ ವರ್ತಿಸುವುದರಿಂದ, ಸ್ವಾನುಭೂತಿಯು ತಾನಾಗಿಯೇ ಒಲಿದು ಬಂದು ಸಿದ್ಧಿಸುವುದು.

## ನಿಷ್ಕಾಮವು ವ್ಯವಹಾರಾತೀತ

ನೈಷ್ಕರ್ಮ್ಯ ಸಿದ್ಧಿ ಪ್ರಾಪ್ತಿಗೆ ನಿಷ್ಕಾಮ ಕರ್ಮವನ್ನು ಮಾಡಬೇಕೆಂದು ಉದಾಹರಿಸಿರುವುದು ವ್ಯವಹಾರ ಪ್ರಪಂಚಕ್ಕೆ ವಿಚಿತ್ರವಾದ ಸಂಗತಿಯಾಗಿದೆ. ನಿಷ್ಕಾಮ ಕರ್ಮವನ್ನು ಮಾಡುತ್ತೇನೆಂಬ ಸಂಕಲ್ಪವೇ ಬಂಧನಕ್ಕೆ [illegible] (ವ್ಯವಹಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಟ್ಟದಲ್ಲಿ ನಡೆಯುವ ಮತ್ತು ನಡೆಸಬೇಕಾದ ಕರ್ಮಗಳೂ ಅನುಷ್ಠಾನಗಳೂ ನಿಷ್ಕಾಮವಾಗಿರುವುದಿಲ್ಲ. ಹಾಗೂ ನಿತ್ಯಕರ್ಮಗಳೆನಿಸಿದ ವೀಳ್ಯದೆಲೆ ಮಾರುವ, ಶಾಕ ಪರ್ಣಗಳನ್ನು ಮಾರುವ, ಬೀದಿ ಗುಡಿಸುವ ಕರ್ಮಗಳೂ ಒಂದು ಮಟ್ಟದಲ್ಲಿ ನಿಷ್ಕಾಮ ಕರ್ಮಗಳ ಪಟ್ಟಿಗೆ ಸೇರುವುವು. ನಿಷ್ಕಾಮ ಕರ್ಮಾನುಷ್ಠಾನಕ್ಕೆ ಕರ್ಮಶಾಸ್ತ್ರದಲ್ಲಿ ಎಡೆಯೇ ಇಲ್ಲ. ಆದರೆ 'ನಿಷ್ಕಾಮ' ಶಬ್ದವು ಅರ್ಥವಿಲ್ಲದೆ ಬಳಕೆಯಲ್ಲಿ ಬಂದಿದೆಯೆಂದು ಯಾರೂ ಭಾವಿಸಲಾಗದು. ಪರಮಹಂಸಾವಸ್ಥೆಯನ್ನು ದಾಟಿ ಅವಧೂತಾವಸ್ಥೆಯು – (ಸಿದ್ಧಿಯು) – ದೇಹಿಗೆ ಉಂಟಾಗಿರುವಾಗ ಅವಧೂತ ಸಿದ್ಧಿಯನ್ನು ಹೊಂದಿದ ದೇಹಿಯ ಕರಚರಣಾದಿಗಳಲ್ಲಿ ವ್ಯಾಪಾರಗಳು ಕಾಣುವುವು. ಈ ವ್ಯಾಪಾರಗಳ ಹಿಂದುಗಡೆ ಸಾಮಾನ್ಯವಾಗಿ ಇರಬೇಕಾದ ಕಾಮ, ಋಣ ಸಂಕಲ್ಪಗಳು ಯಾವುವೂ ಇರುವುದಿಲ್ಲವಾಗಿ ನಿಷ್ಕಾಮದಿಂದ ನಡೆದ ವ್ಯಾಪಾರಗಳೆಂದು ಹೇಳಬೇಕಾಗಿದೆ. ವ್ಯವಹಾರಾತೀತರಾದ ಅವಧೂತರ ವಿಷಯದಲ್ಲಿ ಉದಾಹರಿಸಲ್ಪಟ್ಟ ನಿಷ್ಕಾಮ ಕರ್ಮದ ವಿಚಾರವನ್ನು ವ್ಯಾವಹಾರಿಕವಾಗಿ ಉಪಯೋಗಿಸುವುದರಿಂದ ವಂಚನಾದಿಗಳೂ ವ್ಯಾಮೋಹಗಳೂ ತತ್ಸಂಬಂಧವಾದ ದುಷ್ಟಪರಿಣಾಮಗಳೂ ಉಂಟಾಗುವುವು. ಎಂಬುವನ್ನು ಅನುಭವಗಳು ಬೆಳಗುತ್ತವೆ.

## ಜೀವನ–ಪ್ರಯೋಗ–ಯಜ್ಞ

ಹಿಂದೆ ಹೇಳಿದಂತೆ ಪರಿಣಾಮಕಾರಿಯಾದ ಸಂಬಂಧವೆಂಬ ಋಣದಿಂದ ಇಷ್ಟವನ್ನು ಪೂರೈಸಿಕೊಳ್ಳುವುದಕ್ಕೆ ಸಂಕಲ್ಪವುಂಟಾಗುವುದು; ತಕ್ಕ ಸಾಮಗ್ರಿಗಳನ್ನು ಹೊಂದಿಸಿಕೊಂಡನಂತರ ಕರ್ಮವು ಆರಂಭವಾಗುವುದು. ಈ ಕರ್ಮವನ್ನೇ "ಪೂಜಿಸು, ಸೇವಿಸು, ಆರಾಧಿಸು" ಎಂಬ ಅರ್ಥವುಳ್ಳ 'ಯಜ್' ಧಾತುವಿನಿಂದ ಉಂಟಾದ ಯಜ್ಞಶಬ್ದದಿಂದ ವ್ಯವಹರಿಸುತ್ತಾರೆ. ಇದೇ (ಯಜ್ಞವೇ) ಜೀವನವೆನಿಸುವುದು. ದೇಹಿಯನ್ನು ಆರಾಧಿಸುವುದೇ ಜೀವನ. ಅತೀಂದ್ರಿಯ ವಿಷಯಕವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಜ್ಞ ವಿಧಾನಗಳನ್ನೂ ಪ್ರಾಣಿ ಮಟ್ಟದ-ಇಂದ್ರಿಯ ಮಟ್ಟದ-ಜೀವನವನ್ನೂ ಆಯಾ ಮರ್ಯಾದೆಯ ಔಚಿತ್ಯದಿಂದ ಭಾವಿಸಬೇಕು. ಕುತರ್ಕ ವಿತರ್ಕಗಳೆಂಬ ಬುದ್ಧಿಭೇದವನ್ನು ತಂದುಕೊಳ್ಳಬಾರದು; ಅಂದರೆ ವಿವೇಕ ವಿಮರ್ಶೆಯಿಲ್ಲದೆ ಪರಿಗ್ರಹಿಸಲೂಬಾರದು.

ಆಯಾ ಫಲ ಪ್ರಾಪ್ತಿಗೆ ತಕ್ಕಂತೆ ವ್ಯವಸಾಯ ಮಾಡಿದರೆ ಆಯಾ ಫಲಪ್ರಾಪ್ತಿಯಾಗುವುದು; ಅನುಭವವೂ ಆಗುವುದು. ಪೂರ್ಣವಾದ ಮತ್ತು ನಿರ್ದಿಷ್ಟವಾದ ಫಲಪ್ರಾಪ್ತಿಗೆ ಅತ್ಯಂತ ಜಾಗರೂಕತೆಯಿಂದ ಋತದ ನೆರಳಿನಲ್ಲಿ ಕರ್ಮವು ನಡೆಯಬೇಕಾಗುವುದು. ಪ್ರಪಂಚದಲ್ಲಿ ಸ್ವಾಭಾವಿಕವಾಗಿ ಕರ್ಮವು ಸಾಗುವುದನ್ನು ನೋಡಿ ತಿಳಿದುಕೊಳ್ಳಬೇಕಾಗುವುದು. ಪಂಚಭೂತಾತ್ಮಕವಾದ ಪ್ರಯೋಗ ಶಾಲೆಗಳಲ್ಲಿ ಫಲಾನುಭವಕ್ಕೆ ತಕ್ಕಂತೆ ಕರ್ಮವನ್ನು ಮಾಡಲಾಗುವುದು. ಕರ್ಮಕ್ಕೆ ತಕ್ಕ ಫಲವಾಗುವುದು.

ಗುಣತ್ರಯಗಳ ಪ್ರಭಾವಕ್ಕೂ ಮೋಹಕ್ಕೂ ಒಳಗಾದ ಪ್ರಜೆಗಳ ವಿವಿಧ ಕರ್ಮಗಳಿಂದ ಯೋಗಕ್ಷೇಮಗಳಲ್ಲಿ ನ್ಯೂನಾತಿರಿಕ್ತಗಳು ತಲೆದೋರುವುವು. ಪ್ರಜೆಗಳು ವಿವೇಕವುಳ್ಳವರಾದುದರಿಂದ ತಮ್ಮ ಮತ್ತು ಹೊರಗಿನ ಸಮಾಜ, ದೇಶ, ರಾಷ್ಟ್ರ, ವಿಶ್ವಗಳ ಹಿತಸಾಧನೆಗಾಗಿ ಗುಣಶಕ್ತಿ ಕರ್ಮ ದೇವತೆಗಳನ್ನು ಆರಾಧಿಸಿ ಅವರ ಪ್ರೀತಿಗೆ ಪಾತ್ರರಾಗಿ ಇಷ್ಟ ಕಾಮಗಳನ್ನು ಪಡೆದು ಅನುಭವಿಸುವುದಕ್ಕೆ ಸಹಾಯಕವಾಗಿರುವ ಶಾಸ್ತ್ರ ಸಂವಿಧಾನವೇ ಯಜ್ಞವೆನಿಸುವುದು, ಅಂದರೆ ಶ್ರೇಯಃಪ್ರಾಪ್ತಿಗಾಗಿ ಪುರುಷಾರ್ಥಗಳನ್ನು ಸಾಧಿಸಲು ಪ್ರಜೆಗಳು ಕೈಗೊಳ್ಳುವ ಸುಸಂಸ್ಕೃತ ಕರ್ಮವು ಯಜ್ಞವೆನಿಸುವುದು. ಆರಾಧಕ, ಆರಾಧನ ಆರಾಧ್ಯಗಳೆಲ್ಲವೂ ಸಮಾನವೆಂಬ ಭಾವನೆಯನ್ನೂ ಮತ್ತು ಅವುಗಳ ಐಕ್ಯಭಾವನೆಯನ್ನೂ ತಾಳುವುದೇ ವರಿವಸ್ಯಾರಹಸ್ಯ. ಅಂತೆಯೇ ಸೇವಕ ಸೇವೆ, ಸೇವ್ಯಗಳ ಪರಸ್ಪರ ಸಂಬಂಧವನ್ನು ಅರಿತು ಮಿತಿಯಲ್ಲಿ ಅನುಷ್ಠಾನ ಮಾಡುವುದೇ ಜೀವನಯಜ್ಞದ ರಹಸ್ಯ. ಪರಬ್ರಹ್ಮರೂಪವಾದ ಶಬ್ದ, ಪದ ಅಥವಾ ವಾಕ್ಯಗಳ ಘೋಷಣೆಯಿಂದ ಪರಬ್ರಹ್ಮರೂಪವಾದ ಕರ್ಮ ಅಥವಾ ಯಜ್ಞಗಳನ್ನು ಪರಬ್ರಹ್ಮ ಪರಮಾತ್ಮ ಪ್ರೀತಿಗಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಸ್ತಾರವಾಗಿ ನಡೆಸುವ ವಿಧಾನಗಳು ಅನಂತವಾಗಿ ವೇದಗಳಲ್ಲಿ ಉಕ್ತವಾಗಿರುತ್ತವೆ. ಸೃಷ್ಟಿ, ಸ್ಥಿತಿ, ಲಯಾತ್ಮಕವಾದ ಜೀವನವೂ ಯಜ್ಞವೆಂಬ ಉನ್ನತ ಭಾವನೆಯಿಂದ ಜೀವನವನ್ನು ನಡೆಸುವ ರಹಸ್ಯವೂ ವಿವೇಕವುಳ್ಳ ಮಾನವನ ತಿಳಿವಳಿಕೆಗೆ ಬರುವುದು. ಪರಬ್ರಹ್ಮ ಸ್ವರೂಪವಾದ ವಿಶ್ವದ ಯೋಗಕ್ಷೇಮ ಸಾಧನೆಗಾಗಿ ಅಸಂಖ್ಯಾತವಾದ ಶಕ್ತಿ ಗುಣ ಕರ್ಮಗಳೆಂಬ ದೇವತೆಗಳು ವಿಶ್ವವನ್ನೂ ಪ್ರಜೆಗಳನ್ನೂ ಅನುಗ್ರಹಿಸುತ್ತಾರೆ.

ಕರ್ಮಮಯ ಪ್ರಪಂಚದಲ್ಲಿ ಕರ್ಮಾನುಷ್ಠಾನವು ನಡೆಯಲು **ಚೇತನಾಚೇತನಗಳು** ತಮ್ಮ ಪ್ರಭಾವವನ್ನು ಬೀರುತ್ತವೆ. ಪ್ರತಿಯೊಂದು ಪಂಚಭೂತಾತ್ಮಕ ವಸ್ತುವೂ ವಸ್ತುವಿನ ಅಣುಶಕ್ತಿಗಳೂ ಪ್ರಪಂಚದ ಮೇಲೆ ಪ್ರಭಾವವನ್ನು ಬೀರುವುವು. ಶಕ್ತಿ ಕರ್ಮಗಳಿಗೆ ತಕ್ಕಂತೆ ಫಲವಾಗುವುದು. ದೇಹಿಯ ಸಂಕಲ್ಪವನ್ನು ನೆರವೇರಿಸಲು ಸಿದ್ಧಳಾಗಿರುವ ಪ್ರಕೃತಿಯು ಸೃಷ್ಟಿ ಸ್ಥಿತಿ ಲಯಗಳನ್ನು ದೇಹಿಗಳ ಸಂಕಲ್ಪಾನುಸಾರ ನೆರವೇರಿಸಲು ತಕ್ಕ ಸುವಿಧಾನವನ್ನು ಏರ್ಪಡಿಸಿರುತ್ತದೆ. ಇದಕ್ಕನುಗುಣವಾಗಿ ದೇಹಿಯ ಜನ್ಮ-ಸಂಚಾರ ಅವತಾರ ಕ್ರಮಗಳು ,ಸೂಚಿತವಾಗುವುವು. ಗುಣ ಶಕ್ತಿಪ್ರಕಾಶಕವಾದ ಕರ್ಮವೂ ಜ್ಯೋತಿಸ್ತರಂಗ ರೂಪವಾಗಿಯೇ ವಿಶ್ವವನ್ನು ತುಂಬಿರುವುದು. ಖಗೋಳದ ಜ್ಯೋತಿರ್ಘನಗಳೂ ತತ್ತತ್ಕರ್ಮಾನುಸಾರ ಪಂಚಭೂತಾತ್ಮಕಗಳಾಗಿದ್ದು, ಜ್ಯೋತಿರೂಪದಿಂದ ಆತ್ಮನ-ದೇಹಿಯ-ದೇಹಿಗಳ ಸೇವೆ ಮಾಡುವುವು. ಮತ್ತು ದೇಹಿಗಳ ಒಂದೊಂದು ಅಂಶವನ್ನು ನಿಯಂತ್ರಿಸಿ ಸಾರಥಿಯಂತೆ ಸಹಕರಿಸುವುವು. ದೇಹಿಯ ಜನ್ಮಕ್ಕೂ ಸ್ಥಿತಿಗೂ ದೇಹದ ಲಯಕ್ಕೂ ಜೀವಗಳು ದೇಹದ ಲಯದಿಂದ ಮುಂದೆ ದೇಹವನ್ನು ಪಡೆಯುವವರೆಗೂ ಇರುವ ಅಂತರದಲ್ಲಿರುವ ಸ್ಥಿತಿಗೂ ಪಂಚಭೂತಗಳೂ ಪಂಚಭೂತಾತ್ಮಕ ಜ್ಯೋತಿಸ್ತರಂಗಗಳೂ ಹೊಣೆಯಾಗಿರುತ್ತವೆ. ಸಂಯೋಜನ ವಿಭಜನ ಕ್ರಮದಲ್ಲಿ ಜ್ಯೋತಿಸ್ತರಂಗ ರೂಪದ ಕರ್ಮ ಮತ್ತು ಕರ್ಮ ಫಲಗಳಿಗೆ ತಕ್ಕಂತೆ 27 ನಕ್ಷತ್ರ ಜ್ಯೋತಿಗಳೂ ಸೂರ್ಯಾದಿ ಜ್ಯೋತಿರ್ಘನ ತತ್ವಗಳೂ ಪ್ರಭಾವವನ್ನು ಬೀರಿ ಪಂಚಭೂತಗಳ ವ್ಯಾಪಾರವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಮಪಡಿಸುವುವು. ಈ ನಕ್ಷತ್ರ ಮತ್ತು ಜ್ಯೋತಿರ್ಗ್ರಹಗಳ ನಕ್ಷತ್ರತತ್ವ ಮತ್ತು ಸ್ಥಿತಿ ದಿಕ್ ಸಂಚಾರಾದಿಗಳು ಜನ್ಮವೆತ್ತುವ ದೇಹಿಯ ಪರಿಸ್ಥಿತಿಯನ್ನು ನಿರ್ದೇಶಿಸುವುವು. ಈ ನಿರ್ದೇಶನವನ್ನು ತಿಳಿಯುವುದಕ್ಕಾಗಿ ದಿವ್ಯವಾದ ಜ್ಯೋತಿಶ್ಶಾಸ್ತ್ರವು ಸಹಕರಿಸುವಂತೆ ವಿವರಣೆಗಳು ರಚಿತವಾಗಿವೆ. ಇವುಗಳ ಗಣಿತದಿಂದಲೇ ದೇಹಿಯ ಹಿಂದಿನ, ತಾತ್ಕಾಲಿಕ ಮತ್ತು ಮುಂದಿನ ಕರ್ಮಫಲದ ಆಗುಹೋಗುಗಳ ಸೂಚನೆಯಾಗುವುದು ಇವುಗಳ ಆಧಾರದಿಂದ ದೇಹಿಯು ಯಥಾಶಕ್ತಿ ಯಥಾಮತಿ, ಸಂಸ್ಕೃತಿ ಸಂವಿಧಾನಗಳನ್ನು ಅಳವಡಿಸಿಕೊಂಡು ಕರ್ಮ ಫಲಾನುಭವವು ಸಂಗಮವಾಗುವಂತೆಯೂ ಮುಂದೆ ಸುಖಪ್ರದ ಕರ್ಮವನ್ನು ಮಾಡುವುದಕ್ಕೂ ಅವಕಾಶವಿರುತ್ತದೆ.

ಜ್ಯೋತಿಸ್ತತ್ವಗಳಿಂದ ಈ ಬಗೆಯ ಸಂಸ್ಕೃತಿಜ್ಞಾನವು ಲಭ್ಯವಾಗುವುದು. ಕೇವಲ ಸ್ಥೂಲವಾದ ಜ್ಯೋತಿರ್ಘಟನೆಗಳು ದೇಹಿಯ ಕರ್ಮ ನಿರಪೇಕ್ಷೆಯಿಂದ ಸ್ವತಃ ಕಷ್ಟ ನಷ್ಟ ಸುಖ ದುಃಖಪ್ರದಗಳೆಂದು ಭಾವಿಸುವುದು ತಪ್ಪಾಗುವುದು. ಸುಖಸ್ಯ... ನ ಕೋಽಪಿ ದಾತಾ (ಪು. 108)

ಜೀವನ ಯಜ್ಞ ಯಾತ್ರೆಯು ಆರಂಭವಾಗಿ ಸ್ವಸ್ವರೂಪಜ್ಞಾನವಾಗುವ ವರೆಗೂ ಪ್ರಕೃತಿಯು* ತನ್ನ ಲೀಲೆಯನ್ನು ತೋರಿಸಿ, ದೇಹಿಯು ಸ್ವಸ್ವರೂಪಜ್ಞಾನವನ್ನು ಹೊಂದುವುದಕ್ಕೆ ಮಾರ್ಗದರ್ಶಕವಾಗಿ, ಗುರುವೆನಿಸುವುದು. ದೇಹಿಯ ಜೀವನಯಾತ್ರೆಯು ಸ್ವಸ್ವರೂಪ ಜ್ಞಾನದಲ್ಲಿ ಅಂತ್ಯವಾಗಿ ಸುಖಶಾಂತಿ ಸಮಾಧಿಗಳು ಲಭಿಸುವುವು. ಇದೇ ಮೋಕ್ಷವೆನಿಸುವುದು.

ಋತ ಶಾಸ್ತ್ರ ನಿಷ್ಣಾತಳಾದ ಪ್ರಕೃತಿಯು ಪ್ರಪಂಚವೆಂಬ ಪ್ರಯೋಗ ಶಾಲೆಯಲ್ಲಿ ಎಷ್ಟು ಸೂಕ್ಷ್ಮವಾಗಿ ಕರ್ಮವನ್ನು (ಲೀಲೆ

---

* ಪ್ರಕೃತಿ : 1) ಬ್ರಹ್ಮಾಂಡ – ಪಂಚಭೂತಾತ್ಮಕ
2) ಪಿಂಡಾಂಡ – ಸೂಕ್ಷ್ಮಶರೀರಾದಿ
3) ಅನುಭವಕ್ಕೆ ಸಮಯವನ್ನು ಕಾಯುತ್ತಿರುವ ಕರ್ಮ ಫಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನು ) ನಡೆಸುವುದೋ ಅಷ್ಟು ಸೂಕ್ಷ್ಮವಾಗಿ ಕರ್ಮವನ್ನು ನಡೆಸುವ ಸಾಮರ್ಥ್ಯವು ಆವರಣದಲ್ಲಿರುವ ದೇಹಿಯ ಮಿತಿಗೆ ಮೀರಿದ್ದು. ಆದರೆ ಗುರುಸ್ವರೂಪಿಣಿಯ (ಹೈಮವತಿ = ಬುದ್ಧಿ = ವಿವೇಕ ಶಕ್ತಿ) * ಸಹಾಯದಿಂದಲೇ ಉನ್ನತ ಮಟ್ಟದ ಫಲಾನುಭವಗಳಾಗಲು ಅವಕಾಶವಿರುವುದು.

ಕರ್ಮ (ಯಜ್ಞ – ಜೀವನ) ವು ಸ್ವಸ್ವರೂಪಾನುಸಂಧಾನಗರ್ಭಿತ ವಾಗಿರುವುದು. ಸಸ್ಯಾದಿಗಳಲ್ಲಿಯೂ ಗುಪ್ತವಾದ ಮತ್ತು ಕುರುಡಾದ ಅನುಸಂಧಾನವು ಇದ್ದೇ ಇರುವುದು. ವಿವೇಕದ ಹಂತವನ್ನು ಏರಿದ ದೇಹಿಗಳು ವಿವೇಕ – ವಿವೇಚನ – ತಪಸ್ಸೆಂಬ ಕರ್ಮವನ್ನು ಬೆಳಗಿ ಬ್ರಹ್ಮ ವಿವರ್ತವಾದ ನಾದ – ಬ್ರಹ್ಮ–ಶಬ್ದ ಬ್ರಹ್ಮವನ್ನು ಸಾಕ್ಷಾತ್ಕರಿಸಿ ಕೊಳ್ಳುವುದಕ್ಕೆ ಅವಕಾಶವಿದೆ. ಶಬ್ದಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ದೇಹಿಗಳು ಸುಖ ಜೀವನ ಯಾತ್ರೆಗೂ ತನ್ಮೂಲಕ ಸ್ವಸ್ವರೂಪಜ್ಞಾನಾನುಭವಕ್ಕೂ ಯುಕ್ತವಾದ ಮತ್ತು ಉಕ್ತವಾದ ಕರ್ಮಗಳನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಕೋಟಿಗಟ್ಟಲೆ ಕ್ರಮ ( = ಹಜ್ಜೆ ), ಹಂತಗಳಿರುವ ಜೀವನ ಯಜ್ಞ–ಸೋಪಾನ–ವಾ–ವಲಯಗಳ ಶ್ರೇಣಿಯನ್ನು 'ಒಂದಾದಮೇ ಲೊಂದು' ಎಂಬ ಕ್ರಮದಲ್ಲಿ ಏರು ( ದಾಟು) ತ್ತಿದ್ದರೆ ಕೊನೆಯದಾದ ಸ್ವಸ್ವರೂಪಜ್ಞಾನವೇ ನಿತ್ಯಸುಖವಾಗುವುದು. ಮೇಲಿನ ಹಂತದಲ್ಲಿ ಇರುವ ಮಾನವರು ಹಿಂದು ಮುಂದಿನ ಸಮಸ್ತ ಅನುಭವಗಳನ್ನು ಇಂದ್ರಿಯಗಳಿಗೆ ವಿಷಯಗಳಾದ ಇತರ ಸಸ್ಯಾದಿದೇಹಿಗಳ ವ್ಯಾಪಾರ ದಲ್ಲಿ ನೋಡಬಹುದು. ದೇಹಿಗಳು ಪರಸ್ಪರ ಆಧಾರದಿಂದಲೂ ಮತ್ತು ಸ್ವಂತ ಪರಿಸ್ಥಿತಿಗಳಿಂದಲೂ ಬೆಳೆದು ಜೀವನಯಜ್ಞವನ್ನು ನಡೆಸುವ ಸಂವಿಧಾನವೂ ಪ್ರಕೃತಿಯಲ್ಲಿ ಕಾಣುವುದು.

---

* ಹೈಮವತೀ – ಕೇನೋಪನಿಷತ್ : ಪಿಂಡಾಂಡದ ತಲೆಬುರುಡೆ ಎಂಬ ಪರ್ವತದಲ್ಲಿ ಹಿಮವೆಂಬ ಮಿದುಳಿನ ಆಶ್ರಯದಲ್ಲಿ ಸ್ಫೂರ್ತಿಗೆ ಬರುವ ಬುದ್ಧಿಶಕ್ತಿ. ಬ್ರಹ್ಮಾಂಡದಲ್ಲಿಯೂ ಹೀಗೆಯೇ ಬುದ್ಧಿಶಕ್ತಿಯು ಆವಿರ್ಭವಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಣದಿಂದ ಪ್ರಾಣವೃದ್ಧಿ; ಪ್ರಾಣ = ಆತ್ಮಾ; ಪ್ರಾಣಿಯು ಪ್ರಾಣಿಗಾಗಿ ಆಹಾರಾದಿ ಪ್ರಯೋಜನಗಳನ್ನು ಋಣಾನುಬಂಧರೀತ್ಯಾ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಉಂಟುಮಾಡುವುದು. ಈ ಸನ್ನಿವೇಶದಲ್ಲಿ ಪ್ರಕೃತಿಲೀಲೆಗೆ ಹೆಚ್ಚು ಹೆಚ್ಚಾಗಿ ಬಲಿಯಾಗಿ ಬಂಧನ–ಸಂಬಂಧ–ಋಣವನ್ನು ಹೆಚ್ಚಿಸಿಕೊಳ್ಳುವ ಪರಿಸ್ಥಿತಿಯುಂಟಾಗುವುದು. ಆದುದರಿಂದ ಸಸ್ಯಾದಿ ಮೃಗಪಕ್ಷಿಗಳೇ ಮೊದಲಾದ ದೇಹಿಗಳ ಭಾರಭೂತವಾದ ಆವರಣಗಳು ಸ್ವಸ್ವರೂಪಾನುಸಂಧಾನವನ್ನು ಮರೆಮಾಡುವುವು; ಋಣ ಕರ್ಮ ಜನ್ಮಗಳು ಪ್ರಾಪ್ತಿಯಾಗುವಂತೆ ಮಾಡುವುವು; ಇದನ್ನೆಲ್ಲಾ ತಿಳಿಯಬಲ್ಲ ಮಾನವ ಹಂತದಲ್ಲಿರುವ ದೇಹಿಗಳು ಕರ್ಮಾನುಸಾರವಾಗಿ ಲಬ್ಧವಾದ ಬುದ್ಧಿಶಕ್ತಿಯಿಂದ ತಪಸ್ಸುಮಾಡಿ ಜೀವನಯಜ್ಞದಲ್ಲಿ ಸ್ವಸ್ವರೂಪಾನುಸಂಧಾನವು ಹೆಣೆದು (ಕೂಡಿ) ಕೊಂಡಿರುವಂತೆ, ಜೀವನ ಕರ್ಮಗಳನ್ನು ನೆರವೇರಿಸುವುದಕ್ಕೂ ಕಾರಣಾಂತರಗಳಿಂದ ದೋಷ ಭೂಯಿಷ್ಠವಾದ ಕರ್ಮ ಮಾರ್ಗದ ದೋಷಗಳನ್ನು ನಿವಾರಿಸಿಕೊಳ್ಳುವುದಕ್ಕೂ ಅನುಷ್ಠಾನ ಮತ್ತು ಪರಿಹಾರಕ್ರಮಗಳನ್ನು ಋತಕ್ಕೆ ಅನುಗುಣವಾಗಿ ಗೊತ್ತುಮಾಡಿರುತ್ತಾರೆ.

ನ ದೇವಾ ಯಷ್ಟಿಮಾದಾಯ ರಕ್ಷಂತಿ ಪಶುಪಾಲವತ್ । ಯಂ ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಮ್ ॥ ಎಂಬಂತೆ ಕರ್ಮಕ್ಕೆ ಅಧಿದೇವತೆಗಳು ಕರ್ಮವನ್ನೆಸಗುವವನಿಗೆ ಅಭ್ಯುದಯವಾಗುವಂತೆ ಅನುರೋಧ – ವಿರೋಧ – ಅನ್ವಯ ವ್ಯತಿರೇಕಗಳ ಅನುಭವಗಳನ್ನು ಉಂಟುಮಾಡುತ್ತವೆ. ಆ ಅನುಭವದಿಂದ ಸಂಸ್ಕೃತವಾದ ಬುದ್ಧಿಯು ಸ್ವಯಂ ಪ್ರಕಾಶವಾಗಿ ಇತಿ ಕರ್ತವ್ಯತೆಯನ್ನು ಗೊತ್ತುಮಾಡಿಕೊಂಡು ಮುಂದುವರಿಯುವುದು ಮತ್ತು ಶ್ರೇಯಸ್ಸನ್ನು ಹೊಂದುವುದು.

## ಜೀವನ ಯಜ್ಞದ ಧ್ಯೇಯ

ದೇಹಿಗಳು ಸರ್ವಸ್ವತಂತ್ರರೂ ಸರ್ವಶಕ್ತರೂ ಆಗಿದ್ದರೂ ಪ್ರಕೃತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಣಗಳ ಮತ್ತು ಪ್ರಕೃತಿಯ ಆವರಣಗಳಲ್ಲಿ ಸಿಕ್ಕಿಕೊಳ್ಳುವುದರಿಂದ ಶಕ್ತಿ ಸ್ವಾತಂತ್ರ್ಯಗಳನ್ನು ನಿರ್ಬಾಧಕವಾಗಿ ಪ್ರಯೋಗಿಸಲು ಅವಕಾಶ ಕಡಿಮೆಯಾದುದರಿಂದ ಮಿತಿಯರಿತು ಜೀವನ ನಿರ್ವಾಹವನ್ನು ಮಾಡಬೇಕಾಗಿರುತ್ತದೆ. ಕರ್ಮವು ದೋಷಯುಕ್ತವಾದುದರಿಂದ ಕರ್ಮ-ಯಜ್ಞ-ದ ಸಮಸ್ತವಿಧ (ಸಮಸ್ತ ಮುಖ) ಗಳನ್ನು ಬ್ರಹ್ಮವಿವರ್ತವಾದ ಪ್ರಕೃತಿ (= ನಾದ) ರೂಪದಲ್ಲಿ ಶ್ರುತಿ ಗೋಚರ ಮಾಡಿಕೊಂಡು ಕರ್ಮ ನಿರ್ವಾಹಕ್ಕೆ ತಕ್ಕ ದಿಗ್ದರ್ಶನಗಳನ್ನು ಹೊಂದಬೇಕಾಗಿರುತ್ತದೆ. ಪ್ರಕೃತಿಯ (ಋತದ) ಮರ್ಮವನ್ನು ತಿಳಿದು, ಅಪೂರ್ಣವಾದುದು ಪೂರ್ಣವಾಗಿ ಆಗುವ ರಹಸ್ಯವನ್ನು ಸಂಗ್ರಹಿಸಿ, ಪರೀಕ್ಷಿಸಿ, ಅನುಭವಿಸಿ, ಸರ್ವರ ಸದನುಷ್ಠಾನಕ್ಕೆ ದಾರಿ ತೋರಿಸುವ ಸಂವಿಧಾನಗಳು ಮಾನವ ದೇಹಿಗಳಿಗೆ ವಿಾಸಲಾಗಿರುತ್ತವೆ; ಮತ್ತು ಕರ್ಮವು ಫಲಿಸುವ ವಿಧಾನಗಳನ್ನೂ, ಫಲವನ್ನು ಅನುಭವಿಸುವ ವಿಧಾನಗಳನ್ನೂ ಮಾನವ ದೇಹಿಗಳು ತಪಸ್ಸಿನಿಂದ (ಅಂದರೆ ನಿಯಮದಿಂದ ಮಾಡುವ ಅಧ್ಯವಸಾಯದಿಂದ) ತಿಳಿಯಬಲ್ಲರು.

ಜೀವನಯಜ್ಞದ - ಯಾತ್ರೆಯ ಪರಮಧ್ಯೇಯವಾದ ಸ್ವಸ್ವರೂಪ ಜ್ಞಾನಾನುಭವವನ್ನು ಅನುಸಂಧಾನವಾಗಿಟ್ಟುಕೊಂಡು ಜೀವನ(ಯಜ್ಞ) ಕರ್ಮವನ್ನು ಅನುಷ್ಠಾನ ಮಾಡುವ ವಿವರಣೆಯು "ಉತ್ತಮಗೊಳಿಸುವ ಸಂಸ್ಕೃತಿ" ಯ ಪರಿಮಿತಿಯಲ್ಲಿ ಪ್ರಕಾಶಿತವಾಗಿರುವುದು.

ಕರ್ಮ ಮಾರ್ಗವು ಸುಲಭವಾಗಿ ಸಾಮಾನ್ಯವಾಗಿರುವುದೆಂದು ತೋರಿಬರುವುದಾದರೂ ಅದೂ ಸಹ ಗಹನವಾದುದೇ. ಋಣದಿಂದ ಕರ್ಮವೂ ಕರ್ಮದಿಂದ ಫಲವೂ ಫಲಾನುಭವವೂ ತದಂಗವಾಗಿ ಜನ್ಮವೂ ಉಂಟಾಗುವುವು. ಜನ್ಮ, ಮರಣ, ಕರ್ಮ, ಋಣಗಳನ್ನು ದೂರೀಕರಿಸಿ ಶಾಶ್ವತಾನಂದವು ಲಭಿಸುವುದಕ್ಕೆ ವ್ಯಾವಹಾರಿಕ, ಪಾರಮಾರ್ಥಿಕಗಳಾದ ಸರ್ವವಿಧಗಳಲ್ಲಿಯೂ ಅನುಸಂಧಾನ ಪೂರ್ವಕ ಅನುಷ್ಠಾನ ಮಾಡುವ ತತ್ತ್ವ (ಮಾರ್ಗ)ವೇ ಸಂಸ್ಕೃತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೫. ಸಂಸ್ಕೃತಿ

## ಸ್ವಾಭಾವಿಕ

ಪ್ರಕೃತಿಲೀಲೆಯನ್ನು ಅನುಭವಿಸುವ ಸಮಕಾಲದಲ್ಲಿಯೇ ಸಂಸ್ಕೃತಿಯೂ ಅನುಭವಕ್ಕೆ ಬರುವುದು. ಮೊಟ್ಟೆಯೊಡೆದು ಹೊರಕ್ಕೆ ಬಂದ ಕಂಬಳಿಹುಳುಗಳು ಗೂಡು ಕಟ್ಟಿ ಸ್ವಲ್ಪಕಾಲಾನಂತರ ಪೂರ್ಣಾವಸ್ಥೆಯನ್ನು ತೋರಿಸುವ ಪತಂಗಗಳಾಗಿ ಹೊರಕ್ಕೆ ಬಂದು ಭ್ರಮರಕೀಟ* ನ್ಯಾಯಕ್ಕೆ ಪ್ರಸಿದ್ಧವಾಗಿರುವುವು. ಪ್ರಪಂಚದಲ್ಲಿ ಕಾಣುವ ಅವಸ್ಥಾ ವಿಶೇಷಗಳೆಲ್ಲವೂ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿರುವುವು. ಕರ್ಮಕ್ಕೆ ಸಂಬಂಧಿಸಿದ ಈ ವಿಷಯವನ್ನು ಸಂಸ್ಕೃತಿದೃಷ್ಟಿಯಿಂದ ವಿಮರ್ಶಿಸಿ ತಿಳಿಯುವುದರಲ್ಲಿ ಔಚಿತ್ಯವಿದೆ: (ಪುಟ 105)

ಮಾವಿನ ಓಟೆಯಲ್ಲಿ, ತೆಂಗಿನಕಾಯಿಯಲ್ಲಿ ಬೀಜವು ಸುರಕ್ಷಿತವಾಗಿದ್ದು ಅದರಿಂದ ಅಂಕುರವು ಹೊರಟು ಗಿಡವಾಗಿ, ಮರವಾಗಿ, ಫಲಪ್ರದವಾಗಲು ಅನೇಕವಾದ ಅವಸ್ಥಾಂತರಗಳು ಅವಾಂತರಾವಸ್ಥೆಗಳು ತಲೆದೋರುವುವು. ಒಂದು ಬೀಜವು ಸಸ್ಯವಾಗಿ, ಎಲೆ ಕೊಂಬೆಗಳಿಂದ ತುಂಬಿ ಮೊಗ್ಗು ಅರಳಿ ಹೂವಾಗಿ, ಕಾಯಾಗಿ, ಕಾಯಿ ಹಣ್ಣಾಗಿ ಫಲಿಸಬೇಕಾದರೆ ಎಷ್ಟೆಷ್ಟು ಮಾರ್ಪಾಡುಗಳು ಹೇಗೆ ನಡೆಯುವುವು! ಎಂಬುದು ಇಂದ್ರಿಯಗಳಿಗೆ ಸಾಮಾನ್ಯವಾಗಿ ಗೋಚರವಾಗುವುದಿಲ್ಲ. ಬಲಿತ ಕಾಯಿ ಹಣ್ಣಾಗಬೇಕಾದರೆ ತಕ್ಕಷ್ಟು ಕಾವು ಉಚಿತರೀತಿಯಲ್ಲಿ

---

* ಕೀಟವೆಂಬ ಕಂಬಳಿಹುಳು ರೆಕ್ಕೆಗಳುಳ್ಳ ಪತಂಗ=ಭ್ರಮರ=ದುಂಬಿಯ ಅವಸ್ಥೆಯನ್ನು ವಿಚಿತ್ರವಾದ ಪ್ರಕೃತಿಯ ಸ್ವಾಭಾವಿಕ ಸಂಸ್ಕೃತಿ ವಿಶೇಷದಿಂದ ಮೂರು-ನಾಲ್ಕು ಹಂತಗಳಲ್ಲಿ ತಾನೇ ತಾನಾಗಿ ಹೊಂದುವುದು. ಇದು ಸಿದ್ಧವಾದ ವಿಷಯವಾದ್ದರಿಂದ ಭ್ರಮರಕೀಟ ನ್ಯಾಯವೆಂದು ಹೇಳಲ್ಪಡುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊರೆಯಬೇಕು; ಕೆಲವು ಬಿಸಿಲಿನಿಂದ ಹಣ್ಣಾಗುವುವು. ಕೆಲವು ಅಗ್ನಿಯ ಶಾಖದಿಂದಲೂ ಆಗುವುವು: ಕೆಲವು ಶಾಖವನ್ನುಂಟುಮಾಡುವ ದ್ರವ್ಯಗಳ ಸಂಪರ್ಕದಿಂದಲೇ ಹಣ್ಣಾಗುವುವು. ಇವುಗಳಿಗೆಲ್ಲಾ ಸಂಬಂಧಪಟ್ಟ ಸ್ಥಳವಿಶೇಷ, ಕಾಲವಿಶೇಷ, ದ್ರವ್ಯವಿಶೇಷ ಮೊದಲಾದ ಸಂಸ್ಕಾರಕರಣಗಳು ಕರ್ಮದ ರಹಸ್ಯವನ್ನು ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಪುಷ್ಟೀಕರಿಸುತ್ತವೆ. ಎಳೆಗೂಸುಗಳು (ದೇಹಿಗಳು) ಈ ಕ್ರಮದಲ್ಲಿ ಪ್ರಕೃತಿಗನುಗುಣವಾಗಿ ಬೆಳೆಯುವುವು. ಮಕ್ಕಳಲ್ಲಿ ಕಾಣುವ ಈ ಅಭ್ಯುದಯ ಶ್ರೇಣಿಯ ಪ್ರತಿಹಂತ (ಘಟ್ಟ) ದಲ್ಲಿಯೂ ಶುಭೋದಯ ಶಾಂತಿ ಕರ್ಮಗಳನ್ನು ಕುಟುಂಬಿಗಳು ನಡೆಸುವರು. ಇದು ಸ್ವಭಾವವಾಗಿ ಪ್ರಕೃತಿಪತ್ತವೂ ಪ್ರಕೃತಿ ಪ್ರೇರಿತವೂ ಮತ್ತು ಪ್ರಕೃತಿ ದರ್ಶಿತವೂ ಆದ ಬೆಳವಣಿಗೆ ಕ್ರಮಗಳಾಗಿರುತ್ತವೆ. ಪ್ರಾಣಿ ಮತ್ತು ಸಸ್ಯವರ್ಗಗಳಲ್ಲಿ ಈ ಅಭ್ಯುದಯ ಸೋಪಾನವು ಸ್ವಭಾವವಾಗಿರುವುದನ್ನು ನೋಡಿದರೆ ಆಶ್ಚರ್ಯವುಂಟಾಗುವುದು. ಆನೆಗಳು ಹುಲ್ಲು (ಜೊಂಡು) ತಿನ್ನುವಾಗ ಅದನ್ನು ಚೆನ್ನಾಗಿ ಶುದ್ಧಿ ಮಾಡುವ ಕ್ರಮವನ್ನು ಎಲ್ಲರೂ ನೋಡಿರುತ್ತಾರೆ. ಹಸು ಮೊದಲಾದುವು ಹುಲ್ಲು ತಿಂದು ಅನಂತರ ಅದನ್ನು ಆಹಾರ ಕ್ರಮದಲ್ಲಿ ಸಿದ್ಧಗೊಳಿಸಲು ಮೆಲುಕು ಹಾಕುವುವು. ಕ್ರಿಮಿಕೀಟಾದಿಗಳಲ್ಲಿಯೂ ಈ ವಿಧವಾದ ರಕ್ಷಣ, ಪಾಲನಾಭ್ಯುದಯ, ಸವಿಾಕರಣ, ಉತ್ತಮೀಕರಣಗಳು ಪ್ರಪಂಚಿತವಾಗಿ ಸರ್ವರ ಅನುಭವದಲ್ಲಿರುವುವು. ಸ್ವಾಭಾವಿಕವಾದ ಜನ್ಮವು ಎರಡು ಹಂತಗಳಲ್ಲಿ-ನಾಲ್ಕು ಹಂತಗಳಲ್ಲಿ ಪೂರ್ಣವಾಗುವುದು. ಇವುಗಳಿಗೆ ದ್ವಿಜ, ತ್ರಿಜಗಳೆಂದು ಹೆಸರು. ಮಾನವ ವರ್ಗದಲ್ಲಿ ಶಿಕ್ಷಣದ ಅಂಗವಾಗಿ ಉಕ್ತವಾಗಿರುವ ದ್ವಿಜ-ಸಂಸ್ಕಾರವು ಅನಂತವಿಧವಾಗಿರುತ್ತದೆ.

---

## ಮಾನವ-ಪ್ರಜಾ ಸಾಮಾನ್ಯ ಸಂಸ್ಕೃತಿ

(ಮಾನವರಿಂದ ಮಾನವರಿಗೆ; ಪ್ರಜೆಗಳಿಂದ ಪ್ರಜೆಗಳಿಗೆ)

ದೇಹಿಯ ವ್ಯಾಪಾರವು ಹಠಾತ್ತಾಗಿ ಎದ್ದು ಕಾಣುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯಾವ ಕ್ರಿಯೆ ನಡೆಯಬೇಕಾದರೂ ಕ್ರಿಯೆಗೆ ವಿಷಯವಾದ ಆಧಾರ (ಆಶ್ರಯ) ಇರಲೇ ಬೇಕು. ( ಪುಟ 89 ); ಮಾನವ ದೇಹಿಗಳಿಗೆ ತಿಳಿವಳಿಕೆ ಬೇಕು; ಅದಕ್ಕೆ ಸಂಬಂಧಪಟ್ಟ ಕಾಮನಾ ಏಳಬೇಕು; ಅನಂತರ ತತ್ಪ್ರಾಪ್ತಿಗೆ ಪ್ರಯತ್ನ ಕಾರ್ಯಗಳು ನಡೆದು ಫಲಾನುಭವವಾಗುವುದು. ಒಂದು ಕೆಲಸವು ಫಲ ಕೊಡಬೇಕಾದರೂ ಮತ್ತು ಕಾರಣವು ಫಲವಾಗಿ ಕಾಣಿಸಬೇಕಾದರೂ (ವಿವರ್ತವಾಗಬೇಕಾದರೂ) ನೂರಾರು ಹಂತಗಳಲ್ಲಿ ಸಾವಿರಾರು ಮುಖಗಳಿಂದ ಅವಸ್ಥಾ ಭೇದವು ನಡೆಯಬೇಕು. ಯಾವ ಹಂತದಲ್ಲಿಯಾದರೂ ವ್ಯವಸಾಯ, ಸಾಮಗ್ರಿ ಮೊದಲಾದುವುಗಳ ಲೋಪಾತಿರೇಕಗಳಿಂದ ಸಂಕಲ್ಪವು ಫಲವಾಗಿ ಪರಿಣಮಿಸದಿರಬಹುದು; ಶೀಘ್ರವಾಗಿ ಅಥವಾ ನಿರೀಕ್ಷಿತ ಕಾಲದಲ್ಲಿ ಫಲವಾಗದಿರಬಹುದು; ಕರಣಾದಿಗಳು ಪರಿಪಕ್ವವಾಗಿ ಫಲವು ಕಾಣಿಸಿಕೊಳ್ಳಲು ಆವಶ್ಯಕವಾಗುವಷ್ಟು ಕಾಲವು ಹೆಚ್ಚಾಗಿ ಬೇಕಾಗಿರಬಹುದು. ಇವೆಲ್ಲವೂ ವಿವೇಕಕ್ಕಿಂತ ಕೆಳಗಿನ ಹಂತದಲ್ಲಿರುವ ದೇಹಿಗಳಲ್ಲಿ 'ಅವಶ್ಯಕತೆ' ಎಂಬ ಋತ ನಿಯಮಾನುಗುಣವಾಗಿ ಪ್ರಕೃತಿಯ ಪ್ರಭಾವಾಧಿಕ್ಯದಿಂದಲೇ ಕೆಲವು ಸನ್ನಿವೇಶಗಳಲ್ಲಿ ತೋರಪಡುವುವು; ಉಳಿಯುವುವು ಅಥವಾ ಅಳಿಯುವುವು. ಕ್ರಿಯಾ ಲೋಪಾದಿಗಳನ್ನೂ, ನಿರ್ವಾಹ ಕ್ರಮವನ್ನೂ ಅನುಭವದಿಂದಲೂ ಪ್ರಕೃತಿಯ ಕಾರ್ಯಗಳಿಂದಲೂ ತಿಳಿದು ಕರ್ಮ ನಿರ್ವಾಹವು ಪೂರ್ಣವೂ ಪವಿತ್ರವೂ ಆಗುವಂತೆ ಅನುಸರಿಸಬೇಕಾದ ಸಮಸ್ತ ಸಂವಿಧಾನಗಳೂ ಮಾನವತೆಗೆ ದತ್ತವಾಗಿರುತ್ತವೆ. ಪ್ರಗತಿ, ಉದ್ಯಮ, ವಿದ್ಯಾ, ಕಲಾ, ಜ್ಞಾನ ಸಂಗ್ರಹ ನಿಮಿತ್ತವಾಗಿ ಪಡೆದ ಸಂಸ್ಕಾರಗಳು ಪ್ರತಿ ಮಾನವನಿಗೂ ದ್ವಿಜತ್ವವನ್ನು ಕೊಡುವುವು.

## ಸಂಸ್ಕೃತಿ ಲಕ್ಷಣ

ಋತದ ದೃಷ್ಟಿಯಿಂದ ಉತ್ತಮವಾಗಬೇಕಾದುದನ್ನೂ ಉತ್ತಮ ಸ್ಥಿತಿಗೆ– [illegible] ಸ್ಥಿತಿಗೆ ಅರ್ಹತೆಯುಳ್ಳದ್ದನ್ನೂ ಉತ್ತಮ ಸ್ಥಿತಿಯಲ್ಲಿ [illegible]ರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವುದನ್ನೂ, ಅಪೂರ್ಣವಾಗಿರುವುದನ್ನೂ ಉತ್ತಮಗೊಳಿಸುವ ವಾ ಪೂರ್ಣಗೊಳಿಸುವ ಮತ್ತು ಉತ್ತಮ ಸ್ಥಿತಿಗೂ ಪೂರ್ಣಸ್ಥಿತಿಗೂ ಕ್ರಮವಾಗಿ ಸಹಕರಿಸುವ ಸಂವಿಧಾನವೇ ಸಂಸ್ಕೃತಿ.*

ಸಂಸ್ಕೃತಿ ವಿಧಾನದಿಂದ ಸಂಸ್ಕಾರವನ್ನು ಹೊಂದಿದ ಪ್ರತಿ ವಸ್ತುವೂ ಪಾರಮಾರ್ಥಿಕ ಮತ್ತು ಪ್ರಾಪಂಚಿಕ ರಂಗಗಳಲ್ಲಿ ಮುಂದೆ ಮುಂದೆ ಸಾಗುವುದು. ‡ ಪ್ರತಿಯೊಂದು ಅಭ್ಯುದಯ ಮತ್ತು ನಿಶ್ಶ್ರೇಯಸದ ಹಂತವು ದ್ವಿಜತ್ವವನ್ನು ಪೂರ್ವರೂಪವಾಗಿ ಹೊಂದುವುದು.

---

* ಸುವರ್ಣಾದಿಗಳನ್ನು ಅಗ್ನಿ ಮೊದಲಾದುವುಗಳಲ್ಲಿ ಸಂಸ್ಕರಿಸುವುದರಿಂದ ಅಂದರೆ ಪುಟ ಹಾಕುವುದರಿಂದ ಆಯಾ ಲೋಹ ಭಸ್ಮಗಳ ಪೂರ್ಣತೆಯು ಸಿದ್ಧವಾಗಿ, ಸಂಜೀವನ ಶಕ್ತಿಯುತವಾಗಿ ಅವು ಉಪಕಾರಕಗಳಾಗುವುವು.

‡ ಕೆಲವರು ಅಧಿಕಾರ, ಪದವೀ ಬಲದಿಂದ – ಉನ್ನತ ಪದವಿಯು ಸಂಸ್ಕೃತಿಯೆಂತಲೂ ಕೆಲವರು ಶಿಲ್ಪ ಸಂಸ್ಕಾರಕ್ಕೆ ಬಲಿಯಾಗಿ ಆಡಂಬರಾದಿ ತೋರಣೆಯೇ ಸಂಸ್ಕೃತಿಯೆಂತಲೂ ಕೆಲವರು ಶಾರೀರಕ ಮಾನಸಿಕ ನ್ಯೂನತೆಗಳನ್ನು ಮರೆ ಮಾಡಲು ಅಲಂಕಾರ, ಸೊಬಗು ದ್ರವ್ಯಗಳನ್ನು ಧರಿಸುವುದೇ ಸಂಸ್ಕೃತಿಯೆಂತಲೂ ಭಾವಿಸುವರು. ಕೆಲವರು ಸಂಸ್ಕೃತಿಯನ್ನು (ಸಂಸ್ಕಾರವನ್ನು) ಸಂಪ್ರದಾಯಾಚಾರವೆಂದು ಸಂಕುಚಿತವಾಗಿ ಗ್ರಹಿಸುವರು. ಕೆಲವರು ಸಾಹಿತ್ಯ ಗ್ರಂಥರಾಶಿಯನ್ನು ಕೆಳಗೆ, ಮೇಲೆ ನೋಡಿ ಅದನ್ನು ಸಂಸ್ಕೃತಿಯೆಂದು ತಿಳಿಯುವರು. ಕೆಲವರು ಸಂಗೀತ ಕಾವ್ಯವಾಚನಗಳೇ ಸಂಸ್ಕೃತಿಯ ಪರಮಾವಧಿ ಎನ್ನುವರು. ಮತ್ತೆ ಕೆಲವರು ಶಿಲ್ಪ, ವಾಸ್ತು ಇತ್ಯಾದಿ ಕೌಶಲಗಳನ್ನು ಸಂಸ್ಕೃತಿಯೆಂದು ಉದಾಸೀನಭಾವದಿಂದಿರುವರು.

ಈ ದೃಷ್ಟಿಕೋಣಗಳನ್ನು ವಿಮರ್ಶೆಗೆ ಗುರಿಮಾಡಿ ಸಂಸ್ಕೃತಿಯ ಸ್ವರೂಪವನ್ನು ವಿಸ್ತಾರವಾಗಿ ಬ್ರಾಹ್ಮಣಧರ್ಮ ಗ್ರಂಥದಲ್ಲಿ (ಪುಟ 169) ಬೆಳಕಿಗೆ ತರಲಾಗಿದೆ. ಇದನ್ನು ತಿಳಿದು ಅನುಷ್ಠಾನಾದಿಗಳಲ್ಲಿ ಪ್ರವರ್ತಿಸುವಷ್ಟು ಉತ್ತೇಜನವಿಲ್ಲದೆ ಪ್ರಪಂಚವು ಕಣ್ಣು ಮುಚ್ಚಿಕೊಂಡು ನಿದ್ರಿಸುತ್ತಿರುವುದು ವಿಷಾದಕರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಇವೆಲ್ಲಕ್ಕೂ ನಂಬಿಕೆಯಿರಬೇಕು ಎಂದು ಹೇಳುತ್ತಾರೆ. ವಿಶ್ವಾಸ, ಒಪ್ಪಿಗೆ ನಂಬಿಕೆ (faith, belief) ಇವೆಲ್ಲವೂ ಪರ್ಯಾಯ ಪದಗಳು. ವಸ್ತುವಿನ ಸ್ವಭಾವ, ಸ್ಥಿತಿ, ಗುಣಗಳನ್ನು ಅಂಗೀಕರಿಸುವುದೇ ನಂಬಿಕೆ. ವಸ್ತುವಿನ ಗುಣ ಕರ್ಮ ಶಕ್ತಿಗಳನ್ನು ಅಂಗೀಕರಿಸುವುದಕ್ಕೆ ವಿವೇಚನೆಯು ಆವಶ್ಯಕ. ವಿವೇಚನೆಯಿಂದ ಉಂಟಾಗುವ ದೃಢವಾದ ಮನೋಭಾವಕ್ಕೆ ನಂಬಿಕೆ, ವಿಶ್ವಾಸ ಎಂದು ಹೆಸರು. ದೇವಪೂಜಾಗೃಹದಲ್ಲಿ ಸುಸಂಸ್ಕೃತವಾಗಿ ಗುಣ ಕರ್ಮ ಶಕ್ತಿಗಳಿಗೆ ಆಕರವಾಗಿರುವ ವಸ್ತುವಿನೊಡನೆ ಆದೇ ಆಕಾರವನ್ನು ಹೊಂದಿದ ಅಂಗಡಿಯ ವಸ್ತುವನ್ನು ಹೋಲಿಸಲು ತೊಡಗಿ ಪೇಟೆ ವಸ್ತುವಿನಲ್ಲಿ ದೇವ ಮಂದಿರದ ವಸ್ತುವಿನ ಪ್ರಭಾವವಿದೆಯೆಂದು ತಿಳಿಯಲಾಗುವುದಿಲ್ಲ. ವಸ್ತುವಿನ ಆಕಾರಸಾದೃಶ್ಯದಿಂದಲೇ ಸಂಸ್ಕೃತಿ ವಿಶೇಷಗಳನ್ನು ಗ್ರಹಿಸಲಾಗುವುದಿಲ್ಲ. ಎಂಬುದೂ ವಿವೇಚನೆಯಿಂದ ತಿಳಿಯಬರುವುದು. "ನಂಬಿದರೆ ಫಲವಾಗುವುದು; ನಂಬಿಕೆಯಿಲ್ಲದಿದ್ದರೆ ಸಿದ್ಧಿಯುಂಟಾಗುವುದಿಲ್ಲ." ಎಂದು ಬಲಾತ್ಕರಿಸಿ ನಂಬಿಕೆಯನ್ನುಂಟುಮಾಡಲಾಗುವುದಲ್ಲ. ವಸ್ತುವಿನ ಸ್ವಾಭಾವಿಕ ಗುಣಗಳು ಜನತೆಯ ನಂಬಿಕೆಯ ಸಂಬಂಧವಿಲ್ಲದೆಯೇ ಪರಿಣಾಮಕಾರಿಗಳಾಗುವುವು. ನಂಬಿಕೆಯು ವಿವೇಚನೆಯ ಫಲ. ಇಂದ್ರಿಯಾನುಭವಕ್ಕೆ ಸಿದ್ಧವಾದ ವಸ್ತುಗಳ ಸಂಸ್ಕೃತಿಯ ಹಂತ, ಮಟ್ಟಗಳನ್ನು ವಿವೇಚನೆಯಿಂದ ತಿಳಿಯಬೇಕು. ಆಗ ವಸ್ತುತತ್ವವು ಮನಸ್ಸಿಗೆ ಬಂದು ನಂಬಿಕೆಯುಂಟಾಗಿ ಆತ್ಮಸಂತುಷ್ಟಿಯಾಗುವುದು; ದೃಢವಾದ ನಿಶ್ಚಿತ ಮನೋಭಾವವೆಂಬ ಈ ನಂಬಿಕೆಯು ತಾನಾಗಿಯೇ ಮೂಡುವುದು.

## ಸಂಸ್ಕೃತಿ ಸೋಪಾನ

ಪ್ರಪಂಚದಲ್ಲಿ ವಸ್ತುಗಳು ಸ್ವಭಾವತಃ ಸೃಷ್ಟಿಸ್ಥಿತಿಲಯ ಕರ್ಮಗಳನ್ನು ಬೇರೆ ಬೇರೆ ಅವಸ್ಥೆಗಳಲ್ಲಿ ಬೇರೆ ಬೇರೆ ಹಂತಗಳಲ್ಲಿ ನಿರ್ವಹಿಸುವುದಕ್ಕೂ ಅದರ ಮೂಲಕ ಮೇಲು ಮೇಲಿನ ಅಥವಾ ಮುಂದು ಮುಂದಿನ ಹಂತಗಳನ್ನು ಏರುವುದಕ್ಕೂ, ವಲಯಗಳನ್ನು ದಾಟುವುದಕ್ಕೂ ಉತ್ತ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಗೊಳಿಸುವ ಸಂಸ್ಕೃತಿ ಕ್ರಮವನ್ನು ಪ್ರಕೃತಿಯೇ ಏರ್ಪಡಿಸಿರುತ್ತದೆ. ಮರಿಯಾಗುವವರೆಗೆ ಮೊಟ್ಟೆಗಳನ್ನು ರಕ್ಷಿಸುವ ವಿಧಾನವು ಸ್ವಭಾವವಾಗಿ ಪಕ್ಷಿಗಳಿಗೆ ಇರುತ್ತದೆ. ಈ ವಿಧವಾದ ಅನುಷ್ಠಾನಕ್ಕೆ ಅರ್ಹತೆಯಿಲ್ಲದ ಕೋಗಿಲೆ ಮೊದಲಾದುವು ಈ ಸಂಸ್ಕಾರವನ್ನು ತಿಳಿದ ಪಕ್ಷಿ (ಕಾಗೆ) ಗಳ ಸಹಾಯದಿಂದ ನೆರವೇರಿಸುವುವು. ಗೂಡುಕಟ್ಟಿ ವಾಸ ಮಾಡುವ ಸಂಸ್ಕೃತಿ; ಪೊಟರೆ, ಬಿರುಕುಗಳಲ್ಲಿ ವಾಸಮಾಡುವ ಸ್ವಭಾವ; ಎಲೆಗಳನ್ನು ಅಂಟಿಸಿ ಗೂಡುಮಾಡುವ ಸಂಸ್ಕೃತಿ; ದಾರದಂತಿರುವ ನಾರುಗಳಿಂದ ನೇತಾಡುವ ಗೂಡುಗಳನ್ನು ಕಟ್ಟುವ ಸಂಸ್ಕೃತಿ; ದಾರವನ್ನು ಶರೀರದಿಂದ ಹೊರಡಿಸಿ ಬಲೆಯನ್ನು ಹೆಣೆದು ಆಹಾರಾರ್ಥವಾಗಿ ವಿಹರಿಸುವ ಸಂಸ್ಕೃತಿ ಮತ್ತು ಅದೇ ದಾರವನ್ನು ಪುನಃ ಶರೀರದೊಳಕ್ಕೆ ಎಳೆದು ಸಂಗ್ರಹಿಸುವ ಸಂಸ್ಕೃತಿ. ಈ ರೀತಿಯಾಗಿ ಒಂದೊಂದು ಬಗೆಯ ಶಾರೀರಕ, ಮಾನಸಿಕ ಸಂಸ್ಕಾರಗಳನ್ನು ಸ್ವಭಾವಿಕವಾಗಿ ಹೊಂದುವ ದೇಹಿಗಳ ಸಮಾಜಗಳಿರುವುವು. ಕೋಗಿಲೆಯ ಪಂಚಮ ನಾದ ಪ್ರಸಾರವು ಕೆಲವು ತಿಂಗಳ ಕಾಲ ಹಠಾತ್ತಾಗಿ ನಿಂತು ಮತ್ತೆ ಪ್ರಕಾಶವಾಗುವುದು. ಋತು, ವಾಯುಗುಣ ಮತ್ತು ಆಹಾರಗಳಿಂದ ಈ ಸಂಸ್ಕೃತಿಯು ಅಡಗುವುದು ಮತ್ತು ಕಾಣಿಸಿಕೊಳ್ಳುವುದು.

ಋತದ ಛಾಯೆಯಲ್ಲಿ ಪ್ರಕೃತಿಯ ಸಂ(ಸ್)ಕೃತಿ ಕ್ರಮವನ್ನು ವಿವೇಕದಿಂದ ತಿಳಿದು ತಮ್ಮ ತಮ್ಮ ಜೀವನಯಜ್ಞದ, ಕರ್ಮದ ಸ್ಥಿತಿಯನ್ನು ಉತ್ತಮಗೊಳಿಸುವ ಸಂವಿಧಾನವನ್ನು ಸ್ವಾತಂತ್ರ್ಯದಿಂದ ರೂಪಿಸಿಕೊಳ್ಳುವ ಶಕ್ತಿಯು ವಿವೇಕಯುತ ದೇಹಿಗಳಿಗೆಲ್ಲಾ ಇರುವುದು. ವಸ್ತುವಿನ ಸೌಂದರ್ಯವು ಪೂರ್ಣವಾಗುವುದಕ್ಕೆ ಅಲಂಕಾರಗಳನ್ನು ಉಪಯೋಗಿಸುವುದು ವಾಡಿಕೆಯಲ್ಲಿದೆ. ಇದೂ ಸಹ ಪ್ರಕೃತಿಯ ಸನ್ನಿವೇಶಕ್ಕೆ ಅನುಗುಣವಾಗಿದೆ.

ಭೂಮಿಯನ್ನು ಸಂಸ್ಕರಿಸಿ ಉತ್ತಮಗೊಳಿಸುವುದು; ಸಸ್ಯಗಳನ್ನು ಬೆಳೆಯುವುದು; ಗಿಡಗಳನ್ನು ಕಸಿ ಮಾಡುವುದು. ಮೂಲಿಕೆಗಳಿಂದ ಸಂಜೀವನೌಷಧಿಗಳನ್ನು ಸಿದ್ಧಪಡಿಸುವುದು; ಆಹಾರವನ್ನು ಒಗ್ಗರಣೆ ಮುಂತಾದ ಕ್ರಮಗಳಲ್ಲಿ ಉತ್ತಮ ರೀತಿಯಲ್ಲಿ ಸಂಸ್ಕರಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಿದ್ಧಪಡಿಸುವುದು ನೀರನ್ನು ವಿವಿಧವಾಗಿ ಸಂಸ್ಕರಿಸಿ ಪಾನಕ್ಕಾಗಿ ಸಿದ್ಧಪಡಿಸುವುದು. ಗಂಧಾದಿಗಳಿಂದ ವಾತಾವರಣವನ್ನು ನಿರ್ಮಲಗೊಳಿಸಿ ಹಿತಕರವಾಗಿ ಮಾಡುವುದು ಇತ್ಯಾದಿ ಅಭ್ಯಾಸಗಳೂ ಕ್ರಮಗಳೂ ರೂಢಿಸಲ್ಪಟ್ಟಿರುತ್ತವೆ. ಹೀಗೆ ಸ್ವಾಭಾವಿಕವಾಗಿ ನಡೆಯುವ ಸಂಸ್ಕೃತಿಯ ಜತೆಗೆ ಮತಾನುಬೋಧವಾದ ಪುರುಷ ಸಂಸ್ಕೃತಿಗಳೂ ಸೇರಿ ಅತಿಶ್ರೇಷ್ಠವಾದ ಮತ್ತು ಪೂರ್ಣವಾದ ಫಲವು – ಅಮೃತವು – ಸಮತೆಯು (ಬ್ಯಾಲೆನ್ಸ್) ದೊರೆಯುವುದು.

'ಗೋವು' ಎಂಬ ದೇಹಿಯಿಂದ ಪ್ರಕೃತಿ – ಸ್ವಭಾವವಾಗಿ ಸಿದ್ಧವಾಗುವ ಹಾಲು ಹಾಲೆನ್ನಿಸುವುದೇ ಹೊರತು ಆಯಾ ಯಂತ್ರಾದಿಗಳಿಂದ ರಸಾಯನ ಶಾಲೆಗಳಲ್ಲಿ ಹುಲ್ಲಿನಿಂದಲೇ ಹಾಲನ್ನು ಸಿದ್ಧಪಡಿಸಿದರೂ ಅದನ್ನು ಗೋಕ್ಷೀರ (ಹಸುವಿನ ಹಾಲು) ಎನ್ನಲಾಗುವುದಿಲ್ಲ; ಕ್ಷೀರಾನುಕೃತ ದ್ರವವೆನಿಸುವುದು. ಗೋವಿನ ದೆಸೆಯಿಂದ ಸ್ವಾಭಾವಿಕವಾಗಿ ಪಡೆದ ಹಾಲಿನಿಂದಾದ ತುಪ್ಪವು ಶಾರೀರಕ, ಮಾನಸಿಕ ಸಂಸ್ಕೃತಿಯನ್ನು ಬಲಪಡಿಸುವ ಶ್ರೇಷ್ಠವಸ್ತುಗಳಲ್ಲಿ ಮೊದಲನೆಯದಾಗಿದೆ. ಇತರ ವಿಧವಾದ ಉದ್ಯಮ ವಿಧಾನಗಳಿಂದ ನಿರ್ಮಿತವಾದ ಅನುಕೃತ ತುಪ್ಪವು ಸಂಸ್ಕೃತಿ ಸಾಧನವಾಗುವುದಿಲ್ಲ. ಒಂದೊಂದು ಗೋವಿನ ಹಾಲು ಒಂದೊಂದು ವಿಧವಾಗಿ ಪ್ರಯೋಜನಕ್ಕೆ ಬಂದು ಮಂತ್ರ ಪ್ರಯೋಗಾದಿಗಳ ಸಂಸ್ಕಾರಕ್ಕೆ ಸಹಕರಿಸಿ ಇಂದ್ರಿಯಾತೀತ ದೇವತಾ (ಡಿವಿನಿಟಿ) ನಿರ್ಮಾಣಕ್ಕೆ ಅತ್ಯಂತ ಉಪಯುಕ್ತವಾಗಿರುತ್ತದೆ.

ಪ್ರಕೃತಿಯಿಂದ ಗೊತ್ತಾದ ಜಗದಲ್ಲಿ ಜೀವನವನ್ನು ನಡೆಸುವ ಮತ್ತು ಋಣಾನುಬಂಧದಿಂದ ಜನ್ಮವನ್ನು ಹೊಂದಿದ ಪ್ರಾಣಿಗಳ ಮಧ್ಯೆ ಗೋವಿನ ಶಾರೀರಕ ಸ್ಥಿತಿಗಳು ಉತ್ತಮವಾದ ಸಂಸ್ಕೃತಿಗೆ ಪಾತ್ರವಾಗಿರುತ್ತವೆ (ಸುಸಂಸ್ಕೃತವಾಗಿರುತ್ತವೆ); ಗೋಗಳ ವರ್ಣವೇ ಮೊದಲಾದ ಬಾಹ್ಯ ಚಿಹ್ನೆ-ಲಕ್ಷಣ-ಗಳಿಂದಲೂ ಸಂಸ್ಕೃತಿ ವೈಶಿಷ್ಟ್ಯವು ಪ್ರಕಾಶವಾಗುವುದು. ಗೋಮಯ 'ಗೋ ಮೂತ್ರಗಳನ್ನು ಪ್ರಯೋಗಶಾಲೆಯಲ್ಲಿ ವಿಭಜಿಸಿ ಅದರಲ್ಲಿರುವ ಧಾತು ವಸ್ತುಗಳನ್ನು ಗೊತ್ತುಮಾಡಬಹುದು [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜನಮಾಡಿದರೆ ಆ ಸಂಯೋಜಿತ ಅನುಕೃತ ಮೂತ್ರಾದಿಗಳು ಸ್ವಾಭಾವಿಕ ಗೋಮಯ ಗೋಮೂತ್ರಗಳ ಸಂಸ್ಕಾರ ವಿಹೀನವಾಗಿ, ತುಚ್ಛವೂ ಹೇಯವೂ ಆಗಿರುತ್ತವೆ. ಸ್ವಭಾವವಾಗಿ ಪ್ರಕೃತಿಯಿಂದ ದೇಹಿಯಲ್ಲಿ ಸಂಸ್ಕೃತವಾದ ಆ ವಸ್ತುಗಳು ಇಂದ್ರಿಯ ಪ್ರತ್ಯಕ್ಷವೂ ಇಂದ್ರಿಯಾತೀತವೂ ಆದ ಫಲಗಳನ್ನು ಉಂಟುಮಾಡುವುವು. ಇಂತಹ ಸುಸಂಸ್ಕೃತವಾದ ಮತ್ತು ಗೋ ಸಂಬಂಧವಾದ ಪಂಚಗವ್ಯವು ಅತ್ಯುನ್ನತ ಫಲಪ್ರದ ಸಂಜೀವನವಾಗಿರುವುದು *

---

* 1) ಇಂತಹ ಭವ್ಯವಾದ ಪದಾರ್ಥವನ್ನು ಪಡೆದು ಅನುಭವಿಸುವುದಕ್ಕೆ ಸಹನೆಯಿಲ್ಲದಿದ್ದರೂ ಮಿತಿಯನ್ನರಿಯದವರೂ ಬುದ್ಧಿಶಕ್ತಿಯನ್ನು ಪ್ರಯೋಗಿಸಿ ಪ್ರಜೆಗಳ ಸಂಸ್ಕೃತಿಗೆ ಕುಂದನ್ನುಂಟುಮಾಡುವ ಆಹಾರವಸ್ತುಗಳನ್ನು ಮಾಡುವ ಉದ್ಯಮವು "ಗತಿಗೆಟ್ಟದು, ಮಿತಿಗೆಟ್ಟದು." ಎನ್ನಬೇಕಾಗಿದೆ. ಇವುಗಳೆಲ್ಲಾ ಅನವಶ್ಯಕವಾದ ವಿಮುಖ ಸಂಸ್ಕೃತಿಯ ಸ್ಥಿತಿಯನ್ನು ಸೂಚಿಸುವುವು. ಇಂತಹ ದುಷ್ಟ ಪ್ರವೃತ್ತಿಗಳು ಮನಸ್ಸಿನಲ್ಲಿ ಉದಯವಾಗದಂತೆ ಮತ್ತು ಮನಸ್ಸಿಗೆ ಉತ್ತಮೋದ್ಯಮಗಳು ಸ್ಫೂರ್ತಿಸುವಂತೆ ಆವರಣವನ್ನು ಕಲ್ಪಿಸುವುದು ಸಂಸ್ಕೃತರ ಲಕ್ಷಣ ಮತ್ತು ವೃತ್ತಿಯಾಗಿರುತ್ತದೆ; ರಾಜನೀತಿಯು ಕರ್ತವ್ಯವಾಗಿರುತ್ತದೆ. (ಚಕ್ಕನಿ ರಾಜಮಾರ್ಗಮು ಉಂಡೆಗಾ, ಸಂದುಲ ದೂಡುವು ದೇಲ ಮನಸಾ— ತ್ಯಾಗರಾಜ)

2) ಈ ಫಲವು ಯಂತ್ರೋಪಕರಣಗಳಿಂದ ವಾ ವಸ್ತುವಿನಿಂದ ದೊರೆಯುವುದಿಲ್ಲ. ಇದರ ತಿಳಿವಳಿಕೆಯ ಅಭಾವವು ಮಾನವ ಸೋಪಾಕ್ಕಿಂತ ಇನ್ನೂ ಕೆಳಮಟ್ಟದಲ್ಲಿರುವವರ ಸ್ಥಿತಿಯನ್ನು ಸೂಚಿಸುವುದು. ಮತ್ಸ್ಯಗಳಂತೆ ಮತ್ತು ಕೂಪಕೂರ್ಮಗಳಂತೆ ಇರುವ ಇಂತಹವರಿಗಾಗಿ ಮತ್ಸ್ಯಾವತಾರ ಮಿತಿಯಲ್ಲಿ ಜ್ಞಾನ ಸೂರ್ಯೋದಯವಾಗಲಿದೆ. ವಿದೇಶೀ ಜನಗಳು ಈ ರಹಸ್ಯವನ್ನು ತಿಳಿಯದೆ ಅಯೋ ಯಂತ್ರದ ಪ್ರಾಣಿಗಳಂತೆ ವರ್ತಿಸುವುದು ದೂಷ್ಯವಾಗಿ ದಂಡಕ್ಕೆ ಪಾತ್ರವಾಗಿರುತ್ತದೆ. (ಮಿಸ್ ಮೆಯೋ ಇತ್ಯಾದಿ)

3) ಕೃತಕವಾಗಿ ಗರ್ಭೋತ್ಪತ್ತಿಯ ವಿಧಾನಗಳನ್ನು ಅನುಸಂಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಸುಮುಖ, ದುರ್ಮುಖ ಮತ್ತು ವಿಮುಖ ಸಂಸ್ಕೃತಿಗಳು

ಸಂಸ್ಕೃತಿಯು ವಿವಿಧ ಅಂತಸ್ತುಗಳನ್ನು ಹೊಂದಿರುವುದು ಎಂಬ ವಿಚಾರವು ವ್ಯಕ್ತವಾಯಿತು. ಒಂದು ಹಂತದಿಂದ (ಅವಸ್ಥೆಯಿಂದ) ಮತ್ತೊಂದು ಮೇಲಿನ ವಾ ಮುಂದಿನ ಅವಸ್ಥೆಗೆ ಏರುವ ಮತ್ತು ಮೇಲಿನ ಹಂತ ಅಥವಾ ಅವಸ್ಥೆಗಳಿಂದ ಕೆಳಗಿನ ಹಂತ ಅವಸ್ಥೆಗಳಿಗೆ

---

ಪುದು ಮಾನವತೆಯ ಬುದ್ಧಿಯ ಪರಾಕಾಷ್ಠವಶೆಯನ್ನು ತೋರಿಸುತ್ತದೆ. ಆದರೆ ಅದನ್ನೇ ಉದ್ಯಮವನ್ನಾಗಿ ಪರಿಭಾವಿಸಿದರೆ ವಿಮುಖವಾದ ವೈಶ್ಯವೆನಿಸಿ ಗತಿ ವಿಹೀನವಾದ ಜೀವನಕ್ಕೆ ಅವಕಾಶವಾಗುವುದು. ಆ ಗರ್ಭವನ್ನು ಧರಿಸಿದ ದೇಹಿಯೂ ಗರ್ಭದಿಂದಾದ ದೇಹಿಯೂ ಅನೇಕ ಕ್ಲೇಶಗಳಿಗೆ ಗುರಿಯಾಗುವುವು. ಎಂಬು ಆಗಲೇ ಪ್ರತ್ಯಕ್ಷಾನುಭವವಾಗಿದೆ.

4) ಪ್ರಕೃತಿಯಲ್ಲಿ ದೊರೆಯುವ ಸ್ವಾಭಾವಿಕವಾದ ಹಾಲು ಮೊದಲಾದ ವಸ್ತುಗಳಂತೆ ಕೃತಕಾಹಾರ ವಸ್ತುಗಳನ್ನು ನಿರ್ಮಿಸುವ ಸಂಸ್ಕೃತಿಯನ್ನು ಹೊಂದಿದ ಮಾನವರು ದೇಹಿಗಳ ಸರ್ವ ಶಕ್ತತೆಯನ್ನು ಪ್ರದರ್ಶಿಸುವುದು ಸ್ತುತ್ಯವೇ ಸರಿ. ತಮ್ಮೊಳಗೆ ತಮಗೆ ನಂಬುಗೆಯಿಲ್ಲದವರು ಇಂತಹ ಪ್ರಚಂಡ ಬುದ್ಧಿಶಾಲಿಗಳ ಕಾರ್ಯಗಳನ್ನು ನೋಡಿ ವಿಸ್ಮಿತರಾಗಿ, ಚಕಿತರಾಗಿ ತನ್ಮೂಲಕ ಪರಮಾತ್ಮನ ವಿಚಾರವನ್ನು ತಿಳಿಯಬಲ್ಲವರಾಗಬಹುದು. ಅವರ ಪ್ರಕೃತಿಯ ಪೈಪೋಟಿಯಿಂದ ನಡೆವ ಈ ಯತ್ನವು, ಪ್ರಯೋಜನದ, ಸಾರ್ಥಕತೆಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ವಿಮರ್ಶಿಸಿದರೆ ತುಚ್ಛವೂ ಕುಹಕವೂ ಆದ ಕೃತಕವಾಗುವುದು. ಸ್ವಭಾವ ಸಿದ್ಧವಾದ ಕ್ಷೀರ ಘೃತಾದಿಗಳು ಮಾನವ ಶಾರೀರಕ ಮಾನಸಿಕ ವ್ಯಾಪಾರಗಳನ್ನು ಕುದುರಿಸುವಂತೆ (ಪ್ರಚೋದಿಸುವಂತೆ) ಕೃತಕ ಪದಾರ್ಥಗಳು ಮಾಡಲಾರವು. ಅಲ್ಲದೆ ಒಂದು ಹಂತ ಕೆಳಕ್ಕೆ ತಳ್ಳುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಇಳಿಯುವ ಸಂದರ್ಭಗಳಿರುವುವು. ತಾಮ್ರದ ಪಾತ್ರೆಯನ್ನು ಪಂಚ ಭೂತ ವ್ಯಾಪಾರಗಳಿಗೆ ಗುರಿಯಾಗುವಂತೆ ಇಟ್ಟಿದ್ದರೆ ಅದು ಪ್ರಕೃತಿಯ ವ್ಯಾಪಾರಕ್ಕೆ ಒಳಗಾಗಿ ಕ್ಷಣಕ್ಷಣಕ್ಕೂ ಒಂದು ವಿಧವಾದ ಒದಲಾವಣೆಯನ್ನು ಹೊಂದುವುದು. ವಿರೋಧವಾದ ಮಾಲಿನ್ಯವು ಗಂಟೆಗಂಟೆಗೂ ದಿನದಿನಕ್ಕೂ ಹೆಚ್ಚಿ ಪಾತ್ರೆಯು ತುಂಬಾ ವಿವರ್ಣವನ್ನು ಹೊಂದುವುದು. ಪಾತ್ರೆಯನ್ನು ಅದರ ಪೂರ್ವ ಸ್ಥಿತಿಗೆ ತರಬೇಕಾದರೆ ಹುಳಿ ಮೊದಲಾದುವುಗಳಿಂದ ತೊಳೆದು, ತೊಳೆದು ಕ್ರಮ ಕ್ರಮವಾಗಿ ಉತ್ತಮ ಸಂಸ್ಕಾರವನ್ನು ಕೊಡಬೇಕಾಗುವುದು; ಮೊದಲಿನ ಹೊಳಪು ಉಂಟಾಗುವುದು. ಪುನಃ ಮಾಲಿನ್ಯವನ್ನು ಹೊಂದದಂತೆಯೂ ಉಂಟಾದ ಮಾಲಿನ್ಯವನ್ನು ದಿನೇ ದಿನೇ ಹೋಗಲಾಡಿಸುವಂತೆಯೂ ಸಂರಕ್ಷಣ ಪಾಲನಗಳಿಂದ ಎಚ್ಚತ್ತುಕೊಂಡಿದ್ದರೆ ಪಾತ್ರೆಯು ಸದಾ ಸದುಪಯೋಗಕ್ಕೆ ಸಿದ್ಧವಾಗಿರುವುದು. ಹೀಗೆ ಸ್ವಸ್ವರೂಪಸ್ಥಿತಿಗೆ ವಸ್ತುಗಳನ್ನು ತರುವ ಸಂಸ್ಕಾರಗಳು ಉನ್ನತ ಸಂಸ್ಕಾರಗಳೆನಿಸುವುವು.

ಅಮೃತವಾದ ಹಾಲನ್ನು ಸುಮುಖವಾಗಿ ಸಂಸ್ಕರಿಸುವುದರಿಂದ ಅಮೃತ ಸಂಜೀವನವಾದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪಗಳನ್ನು ಪಡೆಯಬಹುದು. ಮಾವಿನಕಾಯಿ, ನೆಲ್ಲಿಕಾಯಿಗಳನ್ನು ಸಿಹಿಯಾಗುವಂತೆ ಅಥವಾ ಖಾರವಾಗುವಂತೆ ಸಂಸ್ಕರಿಸಿದಂತೆಲ್ಲಾ ವಿವಿಧವಾದ ಗುಣವುಳ್ಳ ಉಪದಂಶಗಳಾಗುವುವು. ಮೂಲಿಕೆ, ನಾರು ಬೇರುಗಳನ್ನು ಉಕ್ತ ಪ್ರಮಾಣದಲ್ಲಿ ಸೇರಿಸಿ ಸಂಸ್ಕರಿಸಿದರೆ ಸಂಜೀವನಗಳಾಗುವುವು. ವೇದ ವೈದ್ಯದಲ್ಲಿ ಹೇಳಿರುವ ಔಷಧಿಗಳು, ತೈಲಗಳು ಎಲ್ಲವೂ ಆತ್ಮಮಯ ಬ್ರಹ್ಮಾಂಡದಲ್ಲಿ ಆತ್ಮಮಯಗಳಾಗಿ ಶಾಶ್ವತಾನಂದಸುಖ ಪ್ರದಗಳಾಗುವುವು. ಲೋಹ ಮತ್ತು ಮೂಲಿಕೆಗಳನ್ನು ಸೂರ್ಯನ ಅಥವಾ ಅಗ್ನಿಯ ಶಾಖಕ್ಕೆ ಗುರಿಮಾಡಿ ಪುಟ ಹಾಕಿ ಸಂಸ್ಕರಿಸಿದರೆ ಉತ್ತಮೋತ್ತಮ ಲಾಭದಾಯಕಗಳಾದ ಸಂಜೀವನ ಭಸ್ಮಗಳಾಗುವುವು. ಹೀಗೆ ಅರಿಷ್ಟಗಳು, ಆಸವಗಳು, ದ್ರಾಕ್ಷಾ ರಸಾದಿಗಳೂ ಸಹ ಜೀವನವನ್ನು ಸುಖಮಯವನ್ನಾಗಿ ಮಾಡುವುವು ಮತ್ತು ಬಾಧೆಗಳನ್ನು ಪರಿಹರಿಸುವುವು. ಇವೆಲ್ಲವೂ ಸುಮುಖ ಸಂಸ್ಕೃತಿಯ ಫಲಿತಾಂಶಗಳಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತುಗಳಿಗೆ ಉಂಟಾಗುವ ಕುತ್ಸಿತವಾದ ಬದಲಾವಣೆಗಳು ಮಾನವ ಪ್ರಪಂಚದಲ್ಲಿ ಕ್ರಮೇಣ ಉತ್ತಮ ಸ್ಥಿತಿಯನ್ನು ಏರುವುದಕ್ಕೆ ಎಚ್ಚರಿಕೆ ಕೊಡುವ ಸಹಕಾರಿಗಳಾಗಿರುವುದರಿಂದ ದುರ್ಮುಖಸಂಸ್ಕೃತಿ ವ್ಯಾಪಾರಗಳೆಂದು ಹೇಳಲ್ಪಡಬಹುದು.

ಇಂದ್ರಿಯ ದೌರ್ಬಲ್ಯಾದಿಗಳಿಂದ ಪ್ರಕೃತಿಯಲ್ಲಿ ಆಪಾತತಃ ಹಿತವೆಂದು ಕಂಡುಬಂದು ಪರಿಣಾಮದಲ್ಲಿ ಅಸಹ್ಯವಾದ ಅನುಭವಗಳನ್ನು ಉಂಟುಮಾಡಿ ದೇಹಿಯನ್ನು ವಿಮುಖ ಕ್ರಮದಲ್ಲಿ ಎಚ್ಚರಿಸಿ ಪುನಃ ಪುರ್ಗತಿಗೆ ಇಳಿಯದಂತೆ ಉತ್ತಮಾಭ್ಯಾಸಗಳನ್ನು ಪಡೆಯಲು ಪರೋಕ್ಷವಾಗಿ ಪ್ರಚೋದಿಸುವ ಸಂಸ್ಕಾರ ವಿಶೇಷಗಳು ವಿಮುಖ ಸಂಸ್ಕೃತಿಯಾಗಿರುವುವು. ದೇಹಿಗಳ ಉದಾಸೀನ ಭಾವಾದಿಗಳು ಸಂಸ್ಕಾರಗಳನ್ನು ಕೆಡಿಸುವುವು ; ವಿಮುಖ ಸಂಸ್ಕೃತಿಗೆ ಕಾರಣವೆನಿಸುವುವು. ಔಷಧಿಗಳು, ಭಸ್ಮಗಳು, ತೈಲಗಳು. ಆಹಾರಪದಾರ್ಥಗಳು ಮೊದಲಾದುವನ್ನು ಸಂಸ್ಕರಿಸುವಾಗ ಕ್ರಮ ವ್ಯತ್ಯಾಸವಾದರೆ ಕೆಟ್ಟ ಫಲಗಳನ್ನು ಕೊಡುತ್ತವೆ. ಅಕ್ಕಿಯನ್ನು ಕಣ್ಣಿಗೆ ಸುಂದರವಾಗಿ ಕಾಣಬೇಕೆಂದು ಯಂತ್ರದ ಸಹಾಯದಿಂದ ಅಕ್ಕಿಯ ಮೇಲಿರುವ ಅಮೃತ ಸಂಜೀವನವಾದ ಆಹಾರ ಪದಾರ್ಥವನ್ನು ಉಜ್ಜಿ ತೆಗೆದರೆ ಅಕ್ಕಿಯು ದುರಾಹಾರವಾಗಿ ವಿಮುಖ ಸಂಸ್ಕೃತಿಗೆ ಆಶ್ರಯ ಅಥವಾ ಸಾಧನವಾಗಿ ಪರಿಣಮಿಸುವುದು. ಪರದೇಶೀಯ ಧಾತು ಮಿಶ್ರಿತ ಗೊಬ್ಬರಗಳು ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ಸತ್ವಹೀನತೆಯನ್ನುಂಟುಮಾಡುವುವು.

## ಅಪೂರ್ವ–ಅಲೌಕಿಕ–ಯೋಗ ಸಂಸ್ಕೃತಿ

ನಾನಾವಿಧವಾದ ಋಣ ಬಂಧನ ಸಂಬಂಧದಿಂದುಂಟಾದ ಆವರಣಗಳು ದೇಹಿಯನ್ನು ಸುತ್ತುಗಟ್ಟಿ ಕ್ಲೇಶವನ್ನೊಡ್ಡಿ ಶಾಂತಿಯನ್ನು ದೂರೀಕರಿಸುವುವು. ಇಂತಹ ಋಣ ಬಂಧನವು ಪರಿಹಾರವಾಗುವುದಕ್ಕೂ ಅಂತಹ ನೀಚನಾದ ಋಣಾದಿಗಳು ದೇಹಿಯನ್ನು ಸೋಕದಂತೆ ಮಾಡುವುದಕ್ಕೂ ಪ್ರತಿ ದೇಹಿಗೂ ಆಯಾ ದೇಹಿಯ ಸಂಸ್ಕೃತಿಯ ಮಟ್ಟಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತಕ್ಕಂತೆ ಹಿತಕರವಾದ ಸಂಸ್ಕೃತಿಗಳು ದೊರೆಯುವುವು. ಇವುಗಳನ್ನು ಆಯಾ ಮಟ್ಟದಲ್ಲಿ ಅಳವಡಿಸಿಕೊಂಡು ಅದರಿಂದುಂಟಾಗುವ ಅಪೂರ್ವ (ಅಲೌಕಿಕ ಯೋಗ) ದ ಬಲದಿಂದ ಕ್ರಮಕ್ರಮವಾಗಿ ಮೇಲಕ್ಕೆ ಏರಲು ಅಥವಾ ಮುಂದೆ ಹೋಗಲು ಪ್ರತಿ ದೇಹಿಗೂ ಸ್ವಾತಂತ್ರ್ಯವಿರುವುದು. ಎಷ್ಟೇ ಪ್ರಾಪಂಚಿಕವಾದ ಅಭ್ಯುದಯಗಳು ದೇಹಿಯನ್ನು ಆವರಿಸಿದ್ದರೂ ಅವು ಸುಖಶಾಂತಿ ಪ್ರದವಾಗದಿದ್ದರೆ "ಅವು ಕೇಡಿಗಾಗಿ ಇವೆ" ಎಂದೇ ಭಾವಿಸಬೇಕು. ಅಂತಹ ಅಭ್ಯುದಯಗಳು ದೇಹಿಗೆ ಸುಖಶಾಂತಿಪ್ರದ ವಾಗುವುದಕ್ಕೂ ಸುಖಶಾಂತಿಗೆ ಭಂಗಗಳನ್ನು ಉಂಟುಮಾಡುವ ಅಭ್ಯುದಯಾದಿಗಳನ್ನು ನಿವಾರಿಸುವುದಕ್ಕೂ ಪ್ರತಿಯೊಬ್ಬರಿಗೂ ನಿಲುಕುವಂತೆ ಇರುವ ಅಪೂರ್ವ ಸಂಸ್ಕೃತಿ ವಿಧಾನಗಳು ಜೀವನಯಜ್ಞ ಕರ್ಮದಲ್ಲಿ ಅಳವಡಿಸಲ್ಪಟ್ಟಿವೆ. ಹೀಗೆಯೇ ಕ್ರಮಶಃ ಅಪರೋಕ್ಷ ಜ್ಞಾನಾನಂದಕ್ಕೆ ತಕ್ಕ ಅನುಸಂಧಾನವಿಧಾನಗಳನ್ನು ಸರ್ವರಿಗೂ ತೋರಿಸುವುದೇ ಬ್ರಾಹ್ಮೀಸಂಸ್ಕೃತಿಯೆನಿಸುವುದು ; ಬ್ರಹ್ಮಾಂಡಕ್ಕೆಲ್ಲಾ ಅನ್ವಯಿಸುವುದು, ಬ್ರಾಹ್ಮೀ ಸಂಸ್ಕೃತಿ ; ಬ್ರಾಹ್ಮೀ ಸಂಸ್ಕೃತಿಯು ಸಮಸ್ತ ಸಾಮಾನ್ಯ ಮತ್ತು ವಿಶಿಷ್ಟ ಕ್ರಮಗಳೆಲ್ಲಾ ಜೀವನದಲ್ಲಿಯೇ ಕಾಣುವಂತೆ ಗೊತ್ತಾಗಿರುವ ಬ್ರಾಹ್ಮಣಾಚಾರವೇ ಬ್ರಹ್ಮಾಂಡದ ಚರಾಚರ ವಸ್ತುಗಳಿಗೆಲ್ಲಾ ಅನುಸರಣೀಯವಾಗಿರುವುದು. ಬ್ರಹ್ಮಾಂಡದಲ್ಲಿ ಕಾಣುವ ಸಮಸ್ತ ಪಂಥಗಳೂ ಮಾರ್ಗಗಳೂ ಅವುಗಳ ತತ್ವಗಳೂ ಬ್ರಾಹ್ಮಣಾಚಾರದಲ್ಲಿ ಅಡಕವಾಗಿವೆ. ದೇಹಿಗಳು ತಮ್ಮ ಶಕ್ತಿ, ಸಾಮರ್ಥ್ಯ, ಅರ್ಹತೆ, ಸಂಸ್ಕೃತಿ, ಮಿತಿಗಳಿಗೆ ತಕ್ಕಂತೆ ತತ್ತತ್ಕಾಲೋಚಿತವಾದ ಆಶ್ರಯವನ್ನು ಹೊಂದಿ ಜೀವನಯಾತ್ರೆ ನಡೆಸಬಹುದು. ಋಣಾನುಸಾರವಾಗಿ ಜೀವನ ಕರ್ಮದ ಪ್ರಯೋಗಗಳೆಲ್ಲಾ ನಡೆದ ಮೇಲೆ ಯೋಗ್ಯತೆಯನ್ನು ಹೊಂದಿ ಬ್ರಾಹ್ಮೀ ಸಂಸ್ಕೃತಿಯ ಹಂತವನ್ನು ಏರಿ ಬ್ರಾಹ್ಮಣಾಚಾರಾನುಷ್ಠಾನ ದಿಂದ ಸ್ವಸ್ವರೂಪಜ್ಞಾನ ಸುಖಶಾಂತಿಗಳನ್ನು ಸ್ವಾಭಾವಿಕವಾಗಿಯೇ ಹೊಂದುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ಬಾಧಾ ಪರಿಹಾರಕ ಸಂಸ್ಕೃತಿ

ಒಂದು ಹಂತದಲ್ಲಿ ದೇಹಿಗೆ ಉಂಟಾಗಬಹುದಾದ ನೋವು ತನ್ನ ಈಗಿನ ಅಥವಾ ಸ್ವಲ್ಪ ಹಿಂದಿನ ದುಷ್ಕರ್ಮದ ಫಲವೆಂದು ತಿಳಿದು ಆ ಸಂಬಂಧದ ಋಣವನ್ನು ಪರಿಹರಿಸಲು ಸ್ವತಂತ್ರಿಸಿ ಯತ್ನಮಾಡಿ ಅದರಿಂದ ಪಾರಾಗಬಹುದು. ಈ ಪರಿಹಾರಕ್ಕಾಗಿ ಮಾಡುವ ಯತ್ನವೂ ನೋವನ್ನುಂಟುಮಾಡದೇಯಿಲ್ಲ. ನೋವಿನಿಂದಲೇ ನೋವನ್ನು ಪರಿಹರಿಸಬೇಕು ಕಾಯಿಲೆ ಎಂಬ ಕ್ಲೇಶವನ್ನು ಕಹಿಯಾದ ಔಷಧಿ ಸೇವನೆಯ ಕ್ಲೇಶದಿಂದಲೇ ಹೋಗಲಾಡಿಸಿಕೊಳ್ಳಬೇಕು — ಎಂಬುದು ಸಮಸ್ತ ವಿವೇಕಯುತ ದೇಹಿಗಳಿಗೆ ಮನವರಿಕೆಯಾಗಿರುತ್ತದೆ ಅಸಹ್ಯವಾದ ಮತ್ತು ಕ್ಲೇಶಾಧಿಕ್ಯವನ್ನುಂಟುಮಾಡುವ ನೋವನ್ನು ಸಹ್ಯವಾದ ನೋವಿನಿಂದ ಪರಿಹರಿಸಬೇಕೆಂಬುದು ತಾತ್ಪರ್ಯ. ದುಷ್ಕರ್ಮಕ್ಕೆ ತಕ್ಕಂತೆ ಉಂಟಾಗುವ ಫಲವನ್ನು ಎದುರಿಸಿ, ತತ್ಸಮಾನವಾದ ಅನುಭವವನ್ನು ಐಚ್ಛಿಕವಾಗಿ ಸ್ವಯಮೇವ ಆಹ್ವಾನಿಸಿ, ಸಹಿಸಲು ಯೋಗ್ಯವಾದ ವಿಧಾನದಿಂದ ಆ ಋಣವನ್ನು ಪರಿಹರಿಸಿಕೊಳ್ಳುವ ವ್ಯವಸ್ಥೆಯೆಂಬ ಸಂಸ್ಕೃತಿಯು ಏರ್ಪಟ್ಟಿರುವುದು. ಕಾರಣಾಂತರದಿಂದ ವಿರೋಧಫಲವನ್ನುಂಟುಮಾಡುವ ಕೆಲಸವನ್ನು ಮಾಡಿ ನೋವಿಗೆ ಗುರಿಯಾದ ಮೇಲೆ ವಿವೇಕವುಂಟಾದಾಗ ಸ್ವಯಮೇವ ತನ್ನನ್ನು ತಾನೇ ದಂಡನೆಗೆ ಗುರಿಮಾಡಿ ನೋವಿನ ರೂಪದಲ್ಲಿ ಬಾಧಿಸುವ ಋಣವನ್ನು ತಡೆದು ಬೇರೇ ರೂಪದಲ್ಲಿ ತಿರುಗಿಸಿ ಪರಿಹರಿಸಿಕೊಳ್ಳುವುದಕ್ಕೆ (ಅನುಭವಿಸುವುದಕ್ಕೆ) ತಕ್ಕ ಉಪಾಯಗಳಿವೆ. ಶಂಖಮಹರ್ಷಿಯ ವರ್ತನೆಯೂ ಈ ವಿಷಯದಲ್ಲಿ ನಿದರ್ಶನವಾಗಿರುತ್ತದೆ: ಅಜಾಗರೂಕತೆಯಿಂದ ಕಳ್ಳತನವು ತನ್ನಿಂದ ನಡೆದಾಗ ವಿವೇಕದಿಂದ ತಪ್ಪನ್ನು ತಿಳಿದು ಅದರ ವಿಪ್ರತಿಕ್ರಿಯೆಯ ಫಲವು ಮುಂದೆ ಬಾಧಿಸದಿರುವಂತೆಯೂ ತತ್‌ಕ್ಷಣವೇ ಪರಿಹಾರವಾಗುವಂತೆಯೂ ಯೋಚಿಸಿ ರಾಜನ ಬಳಿಗೆ ಹೋಗಿ ತನ್ನ ತಪ್ಪನ್ನು ವಿವರಿಸಿ ಶಿಕ್ಷೆಯನ್ನು ಹೊಂದಿ ತಪ್ಪಿನ ಫಲವನ್ನು ಪರಿಹರಿಸಿಕೊಂಡು (ಅನುಭವಿಸಿ) ... ಹೊಂದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದನು. ಇಂತಹ ವ್ಯತಿರಿಕ್ತ — ನ್ಯೂನಾತಿರಿಕ್ತ - ಕರ್ಮಗಳ ಫಲವನ್ನು ತಪ್ಪಿಸಿಕೊಳ್ಳುವೆವೆಂದು ಕೆಲವು ದೇಹಿಗಳು ಕುಹಕವನ್ನು ಮಾಡಿ ಪುನಃ ದೋಷವನ್ನೇ ಹೆಚ್ಚಿಸಿಕೊಳ್ಳುವರು. ಒಳ್ಳೆಯದಾಗಲೀ ಕೆಟ್ಟದಾಗಲೀ ಕರ್ಮದ ಫಲವನ್ನು ಈ ಜನ್ಮ (ಶರೀರ) ದಲ್ಲಿಯಾಗಲೀ ಅನ್ಯ ಜನ್ಮ (ಶರೀರ) ದಲ್ಲಿಯಾಗಲೀ ಆಯಾ ಪ್ರಮಾಣ, ಪರಿಮಾಣಗಳಲ್ಲಿ ಕಾಲ, ದೇಶ, ಪಾತ್ರಗಳಿಗೆ ತಕ್ಕಂತೆ ಹೊಂದಲೇಬೇಕು. ಇದು ಋತ ; ಇದೇ ನಿಯಮ.

ದೇವ ಗುಣ ಕರ್ಮ ಶಕ್ತಿಗಳುಳ್ಳ ಮೂಲಿಕೆ, ಸಸ್ಯ, ತರು, ಧಾತು, ಹಣ್ಣು ಮೊದಲಾದುವುಗಳ ಸಂಯೋಜನ ವಿಭಜನವೆಂಬ ಸಂಸ್ಕೃತಿ ಪ್ರಯೋಗದಿಂದ ಬಾಧಾ ಪರಿಹಾರವಾಗುವುದು. ಅಲ್ಲದೆ ಸಂಭವಿಸಬಹುದಾದ ಬಾಧೆಗಳನ್ನು ಇದರಿಂದ ತಡೆಯಬಹುದು. ಈ ಅಮೃತ ಸಂಜೀವನದಿಂದ ಪ್ರಕೃತಿಯ ಸ್ಥಿತಿ, ಆರೋಗ್ಯ, ಬಲ, ವೀರ್ಯಗಳನ್ನು ಹೆಚ್ಚಿಸಬಹುದು. ಅರಿಶಿನ, ಕರ್ಪೂರ, ಗಂಧ ಮೊದಲಾದ ವಸ್ತುಗಳು ಪೂಜಾ ಮಂಟಪಕ್ಕೆ ಕ್ರಿಮಿ ಮೊದಲಾದುವು ಸೇರದಂತೆ ಶುಚಿಯಾಗಿ ಡುವುವು ಇದನ್ನು ತಿಳಿಯದೆ ಪೂಜಾ ದ್ರವ್ಯವಾದ ಮೋದಕಾದಿಗಳಿಂದ ಆಕೃಷ್ಟವಾದ ಕ್ರಿಮಿಗಳ ಹಾವಳಿಗೆ ಅವಕಾಶ ಕೊಡುತ್ತದೆಂದು ಪೂಜೆಯನ್ನೇ ಹಳಿದು ತ್ಯಾಗಮಾಡುವುದರಿಂದ ಸುಸಂಸ್ಕೃತಿಯು ದೊರೆಯದೆ ನಷ್ಟ ಸಂಭವಿಸುವುದು ದೇಹಿಗಳ ಜೀವನಭಾಗ್ಯದಲ್ಲಿ ವಿಷಮ ಸ್ಥಿತಿಯು ಹೋಗಿ ಸಮಸ್ಥಿತಿಯು ನೆಲೆಗೊಳ್ಳುವುದಕ್ಕಾಗಿ ವಿವೇಕಿಗಳ ಗಮನದಲ್ಲಿರುವಂತೆ ದೇವಪೂಜಾ ಸಂಸ್ಕೃತಿಯಲ್ಲಿ ಜೀವನ ಸಂಸ್ಕೃತಿ ಸಾಧನಗಳನ್ನು ಅಳವಡಿಸಿರುತ್ತಾರೆ. ಇದರಿಂದ ದೇವಪೂಜೆಯು ದೇಹಿಯ ಸ್ವಂತ ಜೀವನಲಾಭಕ್ಕಾಗಿಯೇ ವ್ಯವಸ್ಥಿತವಾಗಿರುವುದು.

ನಾದ, ಶಬ್ದೋಚ್ಚಾರಣೆಗಳು ಗಾನ ರೂಪದಲ್ಲಿಯೂ ಮಂತ್ರ ರೂಪದಲ್ಲಿಯೂ ಬಾಧೆಯನ್ನು ತಡೆಯುವುದಕ್ಕೂ ಬಾಧೆಯನ್ನು ಪರಿಹರಿಸುವುದಕ್ಕೂ ಉತ್ತಮೋತ್ತಮ ಸ್ಥಿತಿಯ ಲಾಭಕ್ಕೂ ಉತ್ತಮವಾದ ಸಂಸ್ಕೃತಿಸಾಧನಗಳಾಗಿರುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


# ಆವರಣ ಬಾಧಾ ಪರಿಹಾರಕ ಸಂಸ್ಕೃತಿ

## ಆವರಣ ನಿಗ್ರಹ, ಆಗಾಮಿ ವಾರಣ

ಅನಂತವಾದ ಸಂಸ್ಕೃತಿಗಳು ಅನಂತಮುಖವಾಗಿ ದೇಹಿಗಳ ಉದ್ಧರಣಕ್ಕೆ ಅನುಭವ ಪೂರ್ವಕ ಶಾಸ್ತ್ರೀಯವಾಗಿ ವಿವರಿಸಲ್ಪಟ್ಟಿವೆ. ಆದರೆ, ಋಣ ಕರ್ಮ ಮತ್ತು ಆವರಣಗಳ ತಡೆಯಿಂದ ಸಂಸ್ಕೃತಿಯನ್ನು ಅವಲಂಬಿಸುವುದಕ್ಕೂ ದಿಕ್ಕು ತೋರದಂತಾಗುವುದು ಕರ್ಮವು ದೋಷ ಮಿಶ್ರಿತವೆಂದು ತಿಳಿಸಿದೆ. ರಸಾಯನ, ಭೌತಿಕ, ಶಾಸ್ತ್ರ ಪ್ರಯೋಗಶಾಲೆಗಳಲ್ಲಿ ಸ್ಥೂಲವಸ್ತುಗಳ ವಿಭಜನ ಸಂಯೋಜನಗಳಿಂದ ಪ್ರಯೋಜನವನ್ನು ಹೊಂದುವಂತೆ ಅನಿರ್ದಿಷ್ಟ ಗುಣಶಕ್ತಿ ವ್ಯಾಪಾರಗಳುಳ್ಳ ದೇಹಿಗಳಿಂದ ನಿರ್ದೋಷವಾದ, (ಸಮ ಮತ್ತು ಬ್ರಹ್ಮವೆನಿಸಿದ) ಅತೀಂದ್ರಿಯ ವಿಷಯಕವಾದ ಕರ್ಮಗಳು ನಡೆಯುವ ಅವಕಾಶ ಕಡಿಮೆಯಾಗಿರುತ್ತದೆ. ಗಂಧಕ ದ್ರಾವಕವನ್ನಾಗಲೀ ಸಾರಜನಕ ದ್ರಾವಕವನ್ನಾಗಲೀ ಸಿಡಿಮದ್ದುಗಳನ್ನಾಗಲೀ ಪ್ರಯೋಗಶಾಲೆಗಳಲ್ಲಿ ಸಂಸ್ಕರಿಸಿ ಪ್ರತ್ಯಕ್ಷವಾಗಿ ಸಿದ್ಧಪಡಿಸಬಹುದು. ಇಂತಹ ಪ್ರಯೋಗಗಳನ್ನು ನಡೆಸುವ ದೇಹಿಗಳ ಸಂಸ್ಕೃತಿಯು ಶಿಕ್ಷಣದ ಮೊದಲನೆಯ ಹಂತದಲ್ಲಿರುವುದರಿಂದ ಈ ಬಗೆಯ ವಿಭಜನ ಸಂಯೋಜನಗಳು ಜೀವನಯಜ್ಞದಲ್ಲಿ ಪ್ರಗತಿಪರವಾಗಲಾರವು. ಅಲ್ಲದೆ ಅತೀಂದ್ರಿಯ ವಿಷಯವಾದ ಅಪೂರ್ವ ಸಾಧನೆಗಾಗಿ ಪರೋಕ್ಷವಾಗಿ ನಡೆಸುವ ದೇವತಾ ಕಾರ್ಯಗಳೂ ಸಹ ಮಾನವ ಮಿತಿಯಲ್ಲಿ ದೋಷಸಮ್ಮಿಶ್ರವಾಗಿಯೇ ಇರುವುವು.

ಚರಾಚರವಸ್ತುಗಳ ವ್ಯವಹಾರಕಾರ್ಯಗಳೆಂಬ ದೇವತಾಯಜ್ಞವನ್ನು ಚರಾಚರ ವಸ್ತುಗಳೊಡನೆ ಕೂಡಿ ಸಾಕ್ಷಾತ್ತಾಗಿ ಇಂದ್ರಿಯಗಳ ಮಿತಿಯಲ್ಲಿ ನಡೆಸುವುದರಲ್ಲಿಯೂ ಕರಚರಣಾದಿ ಚೇಷ್ಟೆಗಳ ಲೋಪಗಳೂ ಮನೋವಾಕ್ಕಾಯಗಳ ನ್ಯೂನಾತಿರಿಕ್ತ ಚರ್ಯೆಗಳೂ ಇದ್ದೇ ಇರುತ್ತವೆ. -ಎಂಬುದು ಅನುಭವದಲ್ಲಿದೆ. ಇಂತಹ ದೋಷಗಳು ಕ್ಷಣಕ್ಷಣಕ್ಕೂ ಉಂಟಾಗಿ ವಾತಾವರಣದಲ್ಲಿ [illegible] ಪರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಿತಿಯು ಪ್ರಾಣಿ, ಸಸ್ಯ, ಪಕ್ಷಿಗಳ ವರ್ತನೆಗಳ ಮಿತಿಯಲ್ಲಿಯೂ ಕಂಡು ಬರುವುದು. ಈ ದೋಷಗಳನ್ನು ಹೋಗಲಾಡಿಸುವುದಕ್ಕೂ ಮಾಡಿದ ಕೆಲಸವೆಲ್ಲವೂ ಋಜುವಾಗಿ ಸತ್ಫಲವೀಯುವುದಕ್ಕೂ ಮಾನವ ಶ್ರೇಷ್ಠರು ದಿವ್ಯತೆಯ ತೇಜಸ್ಸಿನ ಫಲವಾಗಿ, ದಿವ್ಯವಾಗಿ ಋತವನ್ನು ಸಾಧಿಸುವ ತಂತ್ರರಹಸ್ಯಗಳನ್ನು ತಿಳಿದು ಯೋಗ ಸಂಸ್ಕೃತಿ ವಿಧಾನಗಳನ್ನು ಅನುಗ್ರಹಿಸಿರುತ್ತಾರೆ.

ತಪ್ಪು ನಡೆದೊಡನೆ ಅದರ ಫಲವನ್ನು ತಪ್ಪಿಸಿಕೊಳ್ಳಲು ತಾತ್ಕಾಲಿಕವಾಗಿ ಶಿಕ್ಷಾರೂಪವಾದ ವಿಪ್ರತಿಕ್ರಿಯಾಫಲವನ್ನು ಪಶ್ಚಾತ್ತಾಪದಿಂದ ಆರೋಪಿಸಿಕೊಂಡು ಪರಿಹರಿಸಿಕೊಳ್ಳಬಹುದಾದ ಪರಿಸ್ಥಿತಿಯು ಸಂಸ್ಕೃತಿಗೆ ಸೇರಿದುದಾಗಿ ವಿವರಿಸಲ್ಪಟ್ಟಿರುತ್ತದೆ. ಇಂತಹ ವ್ಯವಸ್ಥಾಕ್ರಮಗಳನ್ನು ತಿಳಿದು, ದುಷ್ಟ ಫಲದ ಅನುಭವವು ಸಹ್ಯವಾಗುವಂತೆ ಮಾಡುವ ಸಂಸ್ಕೃತಿ ಮಾರ್ಗವನ್ನು ಅನುಸರಿಸಿ ಆನಂದಿಸಬೇಕು. ಮತ್ತು ದುಷ್ಟಫಲ ದುಷ್ಟ ಕರ್ಮಗಳಿಗೆ ಎಡೆಗುಡುವ ಋಣವನ್ನೇ ಮಿತಿಯಲ್ಲಿಟ್ಟುಕೊಂಡು ದುಷ್ಟ ಫಲಾನುಭವವಾಗದಂತೆ ಯತ್ನಿಸುವ ಕ್ರಮವೂ ಸಂಸ್ಕೃತಿಯೆನಿಸುವುದು.

ಸಂಸ್ಕೃತಿಯ ವಿವಿಧ ಸೋಪಾನಗಳಲ್ಲಿ ನಿಂತಿರುವ ದೇಹಿಗಳು "ಒಬ್ಬರು ಮೇಲೆ ವಾ ಮುಂದೆ ಮತ್ತು ಒಬ್ಬರು ಕೆಳಗೆ ವಾ ಹಿಂದೆ" ಎಂದು ಭಾವಿಸಿ ದ್ವೇಷ ಅಸೂಯೆಗಳನ್ನು ಪ್ರಕಾಶಪಡಿಸಿದರೆ ದ್ವೇಷವೂ ದೋಷವೂ ಹೆಚ್ಚಿ ಸಂಸ್ಕೃತಿ ಸ್ಥಾನಕ್ಕೆ ಕಿಂಕೃತಿಯಾಗಿ, ಇರುವ ಹಂತದಿಂದ ಕೆಳಕ್ಕೆ ಜಾರಬೇಕಾಗುವುದು. ಕೆಳಗಿನ ಹಂತಗಳಲ್ಲಿ ತಪಸ್ಸು, ವಿವೇಕ, ಸಹನೆ, ವೈರಾಗ್ಯಗಳಿಗೆ ಹೆಚ್ಚು ಅವಕಾಶವೇ ಇಲ್ಲದೆ ಮಾನವೋನ್ನತಿಗೆ ಅಡಚಣೆಯಾಗುತ್ತದೆ. ಸ್ವಸ್ವರೂಪಜ್ಞಾನಾನುಸಂಧಾನ ಪ್ರಧಾನವಾದ ವ್ಯಾವಹಾರಿಕ, ಪಾರಮಾರ್ಥಿಕ ಜೀವನ ಕರ್ಮ-ಯಜ್ಞಯಾಗಾದಿಗಳಲ್ಲಿ ಪ್ರಾಪಂಚಿಕವೂ ಬಾಹ್ಯವೂ ಆದ ಅವಸ್ಥೆಗಳು ಪ್ರಧಾನವಲ್ಲವಾದುದರಿಂದ ಹೆಚ್ಚು, ಕಡಿಮೆ ಎಂಬ ಭಾವನೆಗೆ ಅವಕಾಶವೇ ಇಲ್ಲ. ಎಲ್ಲಾ ದೇಹಿಗಳೂ ಪ್ರಗತಿಪರವಾದ ಅವರವರ ಋಣಕರ್ಮ ಜನ್ಮಗಳ ಬಂಧನಕ್ಕೆ ಸಿಕ್ಕಿದುದರ ಫಲವಾಗಿ ಮೇಲೆ ಹೇಳಿದ ಅವಸ್ಥೆಗಳೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬದಲಾವಣೆಯಾಗುತ್ತಲೇ ಇರುವುದರಿಂದಲೂ ಎಲ್ಲಾ ಅವಸ್ಥೆಗಳೂ ಎಲ್ಲರಿಗೂ ಲಭ್ಯವಾಗುವುದಾದುದರಿಂದಲೂ, ಅನುಸಂಧಾನ-ಅನುಷ್ಠಾನ ರಹಸ್ಯಗಳನ್ನು ತಿಳಿಸುವ ಸಂಸ್ಕೃತಿಗೆ ಶರಣಾಗತರಾಗಿ ವಿನಯವೆಂಬ ರಾಜನೀತಿಯನ್ನು ಅನುಸರಿಸಬೇಕಾಗುವುದು. ಸಂಸ್ಕೃತಿ ಪೋಷಕವಾದ ರಾಜನೀತಿಯ ಪರಿಪಾಲನೆಯೇ ಪ್ರಾಯಶ್ಚಿತ್ತವಾಗಿ ನಿರ್ದೋಷ ಸ್ಥಿತಿಗೆ ಕ್ರಮೇಣ ಒಯ್ಯುವುದು.

## ಪುರುಷಾರ್ಥಪ್ರಾಪಕ ಸಂಸ್ಕೃತಿ ; ವಿವಾಹಸಂಸ್ಕೃತಿ

ಜೀವನವು ನಾಲ್ಕು ಬಗೆಯಾದ ಪುರುಷಾರ್ಥಗಳನ್ನು ಒಳಗೊಂಡಿದೆ. ಅನುಸಂಧಾನ ಗರ್ಭಿತವಾದ ಅನುಷ್ಠಾನವೆಂಬ ಧರ್ಮ (ಆಚಾರ) ; ಅದಕ್ಕೆ ಸಹಾಯಕಗಳಾದ ದ್ರವ್ಯ ; ಇವುಗಳನ್ನು ಸಂಬಂಧಿಸಿ ಪ್ರಚೋದಕವಾಗುವ ಕಾಮ ಎಂಬ ಮೂರು ಪುರುಷಾರ್ಥಗಳು ದೇಹಿಗಳ ಅನುಭವಕ್ಕೆ ಬರುವವುಗಳಾಗಿವೆ. ಪುರುಷಬ್ರಹ್ಮನು ಪ್ರಕೃತಿಲೀಲೆಯನ್ನು ಅನುಭವಿಸುವುದರಿಂದ ಆರಂಭವಾದ ಜೀವನವು ಸಾಗುವ ಬಗೆಗಳು ಪ್ರಸಿದ್ಧವಾಗಿವೆ. ಜೀವನ ಜನ್ಮ ಕರ್ಮ ಋಣಾದಿಗಳ ವ್ಯಾಪಾರವು ಪೂರೈಸಿ ಸ್ವಸ್ವರೂಪಜ್ಞಾನಾನುಭವವೆಂಬ ನಿತ್ಯಸುಖವು ಮೋಕ್ಷವೆನಿಸುವ ನಾಲ್ಕನೆಯ ಪುರುಷಾರ್ಥವಾಗಿರುವುದು. ನಿತ್ಯಸುಖವಾದ ಮೋಕ್ಷವು ಜೀವನದ ಪ್ರತಿ ಹಂತದಲ್ಲಿಯೂ ನಿತ್ಯಜೀವನದಲ್ಲಿಯೂ ಅಂತರ್ಗತವಾಗಿದ್ದೇ ಇರುವುದು. ಪುರುಷಾರ್ಥಗಳ ಸಾಧನೆಗೆ ಅನುಕೂಲವಾಗಿರುವಂತೆ ಸಂಸ್ಕೃತಿಯ ದೃಷ್ಟಿಯಿಂದ ಸಂಶೋಧಿಸಿ, ಪರಿಶೋಧಿಸಿ ಋತಕ್ಕೆ ಅನುರೋಧವಾಗಿಯೂ ಋಣ ವ್ಯಾಪಾರವು ಸಾಗುವಂತೆಯೂ ಇರುವ ಕರ್ಮ ಮಾರ್ಗಗಳನ್ನು ವ್ಯಕ್ತಿಗಳ ಜ್ಞಾನ ಮತ್ತು ಸಂಸ್ಕೃತಿಗಳ ಮಟ್ಟಕ್ಕೆ ನಿಲುಕುವಂತೆ ಅನುಭವದಿಂದ ಗೊತ್ತುಮಾಡಿ ಉಲ್ಲೇಖಿಸಿರುತ್ತಾರೆ. ಅಸಂಖ್ಯಾತವಾದ ಈ ಮಾರ್ಗಗಳನ್ನು ಸ್ವಭಾವದಿಂದುಂಟಾಗುವ ಗುಣಗಳಿಗೆ ತಕ್ಕಂತೆ ವಿಂಗಡಿಸಿ ಸಂಗ್ರಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮಾಡಿರುತ್ತಾರೆ* ಇವೆಲ್ಲವೂ ಸಂಸ್ಕೃತಿಗಳಿಂದ ಪರಿಷ್ಕೃತವಾಗಿ ಪುಷ್ಟವಾಗುತ್ತವೆ. ಪ್ರಾಪಂಚಿಕವೂ ಪಾರಮಾರ್ಥಿಕವೂ ಆದ ಸಂಪದಭ್ಯುದಯ ಕರ್ಮಗಳಿಗೆಲ್ಲಾ ಆಯಾ ದ್ವಿಜಸಂಸ್ಕಾರವು ಅಂದರೆ ಗುರು ಮೂಲಕ ಉಪದೇಶ ಶಿಕ್ಷಣಾದಿಗಳು ಪೂರ್ವಭಾವಿಯಾಗಿರುವುವು.

ಪುರುಷಾರ್ಥ ಪ್ರಾಪಕ ಸಂಸ್ಕೃತಿಗಳು ಪ್ರತಿಪ್ರಜೆಯ ವಯೋನುಗುಣವಾಗಿ ದೊರೆಯುವಂತೆ ಏರ್ಪಡಿಸಲ್ಪಟ್ಟಿವೆ ಬಾಲ್ಯ, ಯೌವನ, ಕೌಮಾರ ಮತ್ತು ವಾರ್ಧಕ್ಯಗಳೆಂಬ ಅವಸ್ಥೆಗಳಿಗೆ ಉಚಿತವೂ ಮತ್ತು ಅಭ್ಯುದಯ ಪ್ರದವೂ ಆದ ಸಂಸ್ಕಾರಗಳು ಉಕ್ತವಾಗಿವೆ. ದೈನಂದಿನ ಸಂಸ್ಕೃತಿಗಳೂ ಹೇರಳವಾಗಿವೆ. ಶರೀರದೊಳಗಿನ ವ್ಯಾಪಾರಗಳಿಗೂ ಮತ್ತು ಹೊರಗಿನ ಆವರಣಗಳಲ್ಲಿ ನಡೆಯುವ ವ್ಯಾಪಾರಗಳಿಗೂ ಅನ್ವಿತಪ್ರದವಾಗಿ ಆನಂದದಾಯಕವಾದ ಸಂಸ್ಕೃತಿಗಳು ವೇದವೈದ್ಯಶಾಸ್ತ್ರದಲ್ಲಿ ಸಿದ್ಧಾಂತೀಕೃತವಾಗಿವೆ.

ಸ್ವಾಭಾವಿಕ ಸಂಸ್ಕೃತಿಯೊಂದು ರೂಢವಾಗಿರುವ, ಪ್ರಾಪ್ತ ವಯಸ್ಕರಾದ ಪ್ರೌಢ ಸ್ತ್ರೀ ಮತ್ತು ಪುರುಷರ ಸಮಾಗಮವೆಂಬ ವಿವಾಹ ಸಂಸ್ಕೃತಿಯು ಮಾನವರಲ್ಲಿ ಅದರಲ್ಲಿಯೂ ಭಾರತೀಯ ಬ್ರಹ್ಮಣಾಚಾರದಲ್ಲಿ ಅತ್ಯುನ್ನತ ಮಟ್ಟದಲ್ಲಿ ವಿಧಾಯಕವಾಗಿರುತ್ತದೆ.

ಸ್ತ್ರೀತ್ವ ಪ್ರಧಾನವಾದ ಜಲಚರಸಸ್ಯತರುಲತಾಕೃಮಿಕೀಟಮೃಗಪಕ್ಷಿಮಾನವ ದೇಹಿಗಳಿಗೆ, ಸೃಷ್ಟಿಮೂಲವಾದ ಕ್ಷೇತ್ರಗಳ ಸಂಸ್ಕೃತಿಯು ಪ್ರಾಪ್ತ – ಪ್ರೌಢ – ವಯಸ್ಸಿನಲ್ಲಿ ಸ್ವಾಭಾವಿಕವಾಗಿ ಉಂಟಾಗುತ್ತದೆ. ಮತ್ತು ಸ್ವಾಭಾವಿಕವಾಗಿಯೇ ಅವುಗಳ ಯೋಗಕ್ಷೇಮವು ಸಾಧಿಸಲ್ಪಡುತ್ತವೆ. ವಿವೇಕಕ್ಕೆ ಆಶ್ರಯವಾದ ಮಾನವ ದೇಹಿಗಳಲ್ಲಿ ಹೆಚ್ಚುಕಡಿಮೆಗೆ ಅವಕಾಶವಿರುತ್ತದೆ. ದೋಷಕ್ಕೆ ಎಡೆಗುಡದೆ ಉತ್ತಮ ಫಲವನ್ನು ಹೊಂದುವಂತೆ ಮಾನವ ದೇಹಿಗಳಿಗೆ ಸಂಸ್ಕಾರಗಳು ಹೇಳಲ್ಪಟ್ಟಿವೆ. ಇವುಗಳ ಅನುಷ್ಠಾನದಿಂದ ಉತ್ತಮ ಪ್ರಜಾ ದೇಹಿಗಳು ಬೀಜರೂಪದಲ್ಲಿ

---

* ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥

ಗೀತಾ 18-41.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೃದ್ಧಿಯಾಗಲು ಪೂರ್ಣವಾದ ಸೌಕರ್ಯಗಳುಂಟಾಗುವುವು.

ಸ್ತ್ರೀ ಪುರುಷರು ಮಾತಾಪಿತೃಗಳಾಗುವ ಸಂವಿಧಾನವು ಕುಟುಂಬವೆಂಬ ರಾಜ್ಯದಲ್ಲಿ ಅಪ್ರತಿಹತವಾದ ಆನಂದ ಗ್ರಂಥಿಯನ್ನು ಒದಗಿಸುವುದಾಗಿದೆ. ವಧೂವರರಿಗೆ, ಕನ್ಯಾ ಮತ್ತು ಸ್ನಾತಕರಿಗೆ ಸಮಾಗಮವನ್ನುಂಟುಮಾಡುವ ವಿವಾಹ ಸಂಸ್ಕೃತಿಯು ಅಮೋಘವಾದುದು. ಬ್ರಾಹ್ಮಣಾಚಾರಾನುಯಾಯಿಗಳಾದ ಶ್ರೋತ್ರಿಯ, ಕ್ಷತ್ರಿಯ. ವೈಶ್ಯ, ಶೂದ್ರ, ನಿಷಾದ ಪ್ರಜೆಗಳ ಈ ವಿವಾಹ ಸಂಸ್ಕೃತಿಯು ಆಸೇತುಹಿಮಾಚಲ ಪ್ರದೇಶದಿಂದ ಹೊರಗಿನ ಮಾನವರಲ್ಲಿರಬಹುದಾದ ಸಂಕುಚಿತಪದ್ಧತಿಗಿಂತ ಅಧಿಕಾಂಶ ಪ್ರಮಾಣದಲ್ಲಿ ಸಂಪತ್ಕರವಾಗಿರುತ್ತದೆ. ಪ್ರಜಾವೃದ್ಧಿ ಮತ್ತು ರಾಜ್ಯಭಾರಕ್ಕೆ ಅತ್ಯವಶ್ಯಕವಾಗಿ ಅರ್ಥಕಾಮಗಳನ್ನು ಮಿತಿಯಲ್ಲಿಡಬೇಕು. ಮಾನವೇತರ ಪ್ರಾಣಿಗಳಲ್ಲಿ ಕಾಣಬಹುದಾದ ಕುತ್ಸಿತ ವರ್ತನೆಯನ್ನು ದೂರೀಕರಿಸಿ, ಪರಮ ಶ್ರೇಯಃಪ್ರದವಾದ ಮಾರ್ಗದಲ್ಲಿ ನಡೆದು, ಜನ್ಮ ಸಾರ್ಥಕತೆಯನ್ನು ಹೊಂದಿಸುವ ಪುರುಷಾರ್ಥ ಪ್ರಾಪ್ತಿಗೆ ವಿವಾಹ ಸಂಸ್ಕೃತಿಯೊಂದೇ ಹೆದ್ದಾರಿಯಾಗಿರುತ್ತದೆ.

ವಾನಪ್ರಸ್ಥ ಮತ್ತು ಪರಿವ್ರಾಜಕ ಸಂಸ್ಕೃತಿಗಳು ಹಂಸ, ಪರಮಹಂಸ, ಜೀವನ್ಮುಕ್ತ ಸಮಾಧಿಸ್ಥಿತಿಯನ್ನೂ ಸ್ಥಿತಪ್ರಜ್ಞತೆಯನ್ನೂ ಉಂಟುಮಾಡುವುವು. ಬ್ರಾಹ್ಮಣಧರ್ಮ, ಆಚಾರದಲ್ಲಿ ಉಕ್ತವಾದ ಊರ್ಧ್ವ ದೈಹಿಕ ಸಂಸ್ಕೃತಿಗಳೂ ಸಹ ಬ್ರಾಹ್ಮಣದೇಶದಲ್ಲಿ ಹೊರತು ಬೇರೆ ಪ್ರದೇಶಗಳಲ್ಲಿ ಇಷ್ಟು ಸಮೀಚೀನವಾಗಿರುವಂತೆ ಕಂಡುಬರುವುದಿಲ್ಲ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಸಾಧನೆಗೆ ವಿವಾಹ ಸಂಸ್ಕೃತಿಯೇ ಅಂಕುರಾರ್ಪಣವಾಗುವುದು. ಇದು ಬ್ರಹ್ಮತತ್ವ ಪ್ರತಿಪಾದನೆಯ ಭೂಮಿಯ ವೈಶಿಷ್ಟ್ಯ. ಪುನರ್ಜನ್ಮ, ಜನ್ಮಾಂತರ ಮತ್ತು ಸೃಷ್ಟಿ, ಸ್ಥಿತಿ, ಲಯಗಳ ರಹಸ್ಯವನ್ನು ಸಾಕ್ಷಾತ್ಕರಿಸಿರುವ ಬ್ರಾಹ್ಮಣ ದೇಶ (ಭಾರತದೇಶ) ದಲ್ಲಲ್ಲದೆ ಮತ್ತೆಲ್ಲಿಯೂ ಈ ಬಗೆಯ ಸಂಸ್ಕೃತಿ ವೈಶಿಷ್ಟ್ಯವನ್ನು ನೋಡಲಾಗುವುದಿಲ್ಲ.

ಭಾರತೀಯ ವಿವಾಹ ಸಂಸ್ಕೃತಿಗಳು ರಾಸಾಯನಿಕ ಶಾಸ್ತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪಾಠಕರಿಗೆ ಅರ್ಥವಾಗಿಲ್ಲ. ಈಗ ರಾಜ್ಯ ಪ್ರಭಾವಕ್ಕೆ ಒಳಪಟ್ಟ, ಪ್ರೌಢ ವಯಸ್ಸಿನ. ಋತುಮತೀ ವಿವಾಹವು ಶಾಸ್ತ್ರೀಯ ಸಂಸ್ಕೃತಿ. ಆಳ್ವಿಕೆಯ ದೌರ್ಜನ್ಯದ ಪರಿಸ್ಥಿತಿಯಲ್ಲಿ ಅದನ್ನು ಎದುರಿಸುವುದಕ್ಕಾಗಿ ಬಾಲ್ಯ ವಿವಾಹವೂ ಸಾಧುವಾಗಿ ಶಾಸ್ತ್ರೀಯವಾಗಿರುವಂತೆ ಸುಧಾರಿಸಲ್ಪಟ್ಟಿತ್ತು. ಆ ಬಗೆಯ ದುಸ್ಥಪರಿಸ್ಥಿತಿಗೆ ಒಳಪಟ್ಟ ಜನತೆಯು ವಿವಾಹ ಸಂಸ್ಕೃತಿಯ ಪರಿಚಯವಿಲ್ಲದೆ ದೂರೀಕರಿಸುವಷ್ಟು ಕೀಳು ಮಟ್ಟಕ್ಕೆ ಇಳಿಯುವವರಾಗುವುದನ್ನು ತಪ್ಪಿಸಲು ಜಾಗರೂಕತೆಯಿಂದ ಯತ್ನಿಸಬೇಕಾಗಿರುವುದು.

ಪುರುಷಾರ್ಥವೇ ಸಾಮ್ರಾಜ್ಯವೆಂಬ "ಸಮ್ರಾಜ್ಞೀ ಭವ" ಎಂಬ ವಿಷಯವು ವೇದೋಕ್ತ ಆಶೀರ್ವಾದ ಮಂತ್ರಗಳಲ್ಲಿ ಸ್ಪಷ್ಟವಾಗಿರುತ್ತದೆ.

ಇದನ್ನು ಅನುಸರಿಸಿ ಗಾನರೂಪವಾಗಿ ರಚಿಸಿರುವ ಕೃತಿಯು ಇದರ ಅರ್ಥವನ್ನು ವಿವರಿಸುವುದು —

ಸಾಮ್ರಾಜ್ಯವೇ ಧರ್ಮ ಜೀವನದ ನಾಡೀ ॥ ಪ ॥ ಸರ್ವ ಮಂಗಳಕಾರಿ ವಿಜಯ ವೈಭವವು ॥ ಅ. ಪ ॥ ಪ್ರಜೆಗಳನು ಸಂತವಿಸ ರಂಜನವೇ ಸಾಮ್ರಾಜ್ಯ । ನೀತಿಯೊಳು ಸಮತೆಯನು ನೆಲೆಗೊಳಿಪ ರಾಜ್ಯ । ಕರ್ಮಫಲ ಭೋಗಿಸುವ ಶಕ್ತಿ ಗುಣ ಸಾಮ್ರಾಜ್ಯ । ಭೋಗ ಭಾಗ್ಯವನೀವ ಸಿದ್ಧಿ ಸಾಮ್ರಾಜ್ಯ ॥ ೧ ॥ ಸಾಮ್ರಾಜ್ಯವುಳ್ಳವರು ಸಮ್ರಾಜ್ಞಿ ನಾರಿಯರು । ಸಾಮ್ರಾಜ್ಯವಂತರೇ ಗೃಹಪತಿಗಳವರು । ಸಾಮ್ರಾಜ್ಯ ತಿಳಿದವರು ರಾಷ್ಟ್ರನಾಯಕರಯ್ಯ । ಸಾಮ್ರಾಜ್ಯಲಾಭವೇ ವೇದಗಳ ತಿರುಳು ॥ ೨ ॥ ವಂಚಕರನೋಡಿಸುವ, ನಡತೆಯನು ಸಂಸ್ಕರಿಪ ಮನೆಮಂದಿಗಳಿಗೆಲ್ಲ ನೆಮ್ಮದಿಯನೀವ । ಐದನೆಯ ವೇದಕ್ಕೆ ಗಣಿಯು ತಾ ಸಾಮ್ರಾಜ್ಯ । ಯಜ್ಞ ಮಂಟಪದಲ್ಲಿ ರಂಜಿಸುವ ಸಾಮ್ರಾಜ್ಯ ॥ ೩ ॥ ಸಾಮ್ರಾಜ್ಯವಿಲ್ಲದಿಹ ಬಾಳು ಬಂಡಾಟ । ಸಾಮ್ರಾಜ್ಯ ಬೆಳಗದ ವೃತ್ತಿ ಹಾಳು ಹಗರಣವು । ಸಾಮ್ರಾಜ್ಯನಿಷ್ಠೆಯಲಿ ನಡೆವ ಜನಗಳಿಗೆಲ್ಲ ಶ್ರೀಗುರುವು ತಾನಾಗಿ ಒಲಿದು ವರವೀವ ॥ ೪ ॥ ರಾಜಧರ್ಮವು ಸರ್ವ ಧರ್ಮಗಳನೊಳಗೊಂಡು । ಶ್ರೀ ಮಹೀಸುರ ದಿವ್ಯ ಭೂಮಿಯೊಳ್ನೆಲಸಿ । ಸಿಂಹಾಸನವೇರಿ ಬಿಳಿಗೊಡೆಯನಾಶ್ರಯಿಸಿ । ಸಾಮ್ರಾಜ್ಯದಿಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಲಿಪ್ಪುದು ಋತಬ್ರಹ್ಮ-ಕ್ಷತ್ರಗಳ ॥೫॥ (— ಪ್ರಜಾಸಾಮ್ರಾಜ್ಯಂ)

ವಿವಾಹ ಸಂಸ್ಕೃತಿಯು ಅಂಗವಾಗಿ ಮತ್ತು ವ್ಯಕ್ತಿಗಳ ಗುಣ, ಕರ್ಮ, ಶಕ್ತಿಗಳಿಗೆ ಅನುಗುಣವಾಗಿ ನಡೆಯುವ ವಿವಿಧ ಪೂಜಾ, ವ್ರತ, ಉಪಚಾರ, ಸತ್ಕಾರಗಳು ಅಪೂರ್ವಸಂಸ್ಕೃತಿಯನ್ನುಂಟುಮಾಡಿ ಜೀವನವು ಶ್ರೇಯಸ್ಸುಖಮಯವಾಗುವಂತೆ ಮಾಡುವುದು.

ಸೃಷ್ಟಿ ಸ್ಥಿತಿ ಲಯಗಳಿಗೆ ಮೂಲವಾದುದು, ಆಧಾರವಾದುದು, ವಿವಾಹ ಸಂಸ್ಕೃತಿ. ಸಸ್ಯ ಲತಾ ತರು ಜಲಚರ ಕ್ರಿಮಿ ಕೀಟ ಮೃಗ ಪಕ್ಷಿ ಮಾನವರಲ್ಲಿ ಸ್ತ್ರೀ ಪುರುಷ ದೇಹಿಗಳು ಸ್ವಾಭಾವಿಕವಾಗಿಯೇ ವಿವಾಹ ಸಂಸ್ಕೃತಿಯನ್ನು ಹೊಂದುವುವು. ವಿವೇಕಿಗಳಾದ ಮಾನವರಲ್ಲಿ ವಿವಾಹ ಸಂಸ್ಕೃತಿಯನ್ನು ಋಷಿಗಳು ಸಮಿಚೀನವಾಗಿ ಸಾಕ್ಷಾತ್ಕರಿಸಿಕೊಂಡು ಉನ್ನತ ಮಟ್ಟದಲ್ಲಿ ಸುಧಾರಿಸಿ ರೂಪಿಸಿರುತ್ತಾರೆ. ವಿವಾಹ – ಪಾಣಿಗ್ರಹಣಕಾಲದಲ್ಲಿ ಸ್ತ್ರೀ ದೇಹ ಪುರುಷದೇಹಧಾರಿಗಳಾದ ವ್ಯಕ್ತಿ (ದೇಹಿ) ಗಳು ಋಣಾನುಬಂಧರೀತ್ಯಾ ಪ್ರಕೃತಿ – ಪುರುಷ, ಪಂಚಭೂತಗಳ ಸಾಕ್ಷಿತ್ವದಲ್ಲಿ ದೇವತಾ ಗುಣ ಕರ್ಮ ಶಕ್ತಿಗಳ ಸಮತೆ, ಸಂತೋಷ, ಅನುಗ್ರಹಗಳನ್ನು ಬಯಸಿ ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿಗಳಿಗೆ ಸಾಧನವಾದ ದಾಂಪತ್ಯವನ್ನು ಧರಿಸುತ್ತಾರೆ. ನಿಯಮಾನುಸಾರವಾಗಿ ನಡೆಸಿದ ಭೌತ, ರಾಸಾಯನಿಕ ಪ್ರಯೋಗಗಳು ಉತ್ತಮಫಲವೀಯುವವು; ನಿಯಮಗಳು ಭಗ್ನವಾದರೆ ಅಪಾಯಗಳು ಸಂಭವಿಸುವವು. ಹಾಗೆಯೇ ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಸಂಕಲ್ಪ ಮತ್ತು ಋತಕರ್ಮಗಳಿಗೆ ಅನುರೂಪವಾಗಿ ನಡೆಯುವ ವೈಶ್ವ ಶಕ್ತಿಗಳ ಪ್ರಯೋಗಗಳು ಸಮತೆಯಿಂದ ಮುಂದುವರಿಯುವುದಕ್ಕೂ ವಿಷಮಸ್ಥಿತಿಗಳನ್ನು ಹೋಗಲಾಡಿಸುವುದಕ್ಕೂ ಆತ್ಮ ಸಂಸ್ಕೃತಿ ಕಾರ್ಯಗಳನ್ನು ಕೈಗೊಳ್ಳಬೇಕು. ಅತೀಂದ್ರಿಯವೂ ಉತ್ತಮೋತ್ತಮ ಸುಖಸಂಪತ್ಕರವೂ ಆಗಬೇಕಾದ ದಾಂಪತ್ಯವನ್ನು ಸಾಕ್ಷಾತ್ಕರಿಸಲು ಅತೀಂದ್ರಿಯ ವೈಶ್ವಶಕ್ತಿಗಳ ದೈವಿಕ ಪ್ರಯೋಗವನ್ನು ಆತ್ಮ ಸಂಸ್ಕಾರಗಳಲ್ಲಿ ಒಂದಾದ ವಿವಾಹ ಸಂಸ್ಕೃತಿಯಲ್ಲಿ ಗೊತ್ತಾದ ಕ್ರಮದಲ್ಲಿ ನಿರ್ವಹಿಸಬೇಕಾಗಿರುತ್ತದೆ. ಪ್ರಯೋಗನೇತೃತ್ವ ಸಹಾಯದಿಂದಲೂ ಜಾಗರೂಕತೆಯಿಂದಲೂ ನಿಷ್ಠೆಯಿಂದಲೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆಸಿದ ಪ್ರಯೋಗಗಳಿಂದ ವಿಮುಖ ವಿರೋಧಶಕ್ತಿಗಳೂ ಸಹ ಸುಮುಖಗಳಾಗಿ ಅನುರೋಧವಾಗಿ ಸುಖ ಸಾಧನೆಗೆ ಮಾರ್ಗದರ್ಶಕವಾಗುವುವು. ಆದುದರಿಂದ ಇಂತಹ ಸಂಸ್ಕೃತಿ ಕಾರ್ಯಗಳು ರಾಸಾಯನಿಕ ಪ್ರಯೋಗಶಾಲೆಯ ನಿಯಮಗಳಿಗೆ ಒಳಪಟ್ಟಂತೆ ನಡೆಯಬೇಕಲ್ಲದೆ, ಕೇವಲ ಪ್ರಾಪಂಚಿಕನಾಗಿ ಹೊಗಳಿಕೆಯ ಆಡಂಬರವಾಗಿರಬಾರದು. ಬಂಧುಜನಾದಿಗಳ ಸಂಪರ್ಕದಿಂದ ವಾತಾವರಣವು ಕೆಟ್ಟು ಸಂಸ್ಕೃತಿಯು ನಷ್ಟವಾಗಿ ದುಷ್ಟಫಲವೀಯುವುದು. ಈ ಬಗೆಯ ದಾಂಪತ್ಯದಿಂದ ಜನಿಸಿದ ದೇಹಿಗಳು ತಮ್ಮ ಸ್ವಾಭಾವಿಕವಾದ ಸದ್ಗುಣ ಸಚ್ಚರಿತ್ರೆಗೆ ಮಾಲಿನ್ಯವನ್ನು ತಂದುಕೊಂಡಂತಾಗಿ ವಿಷಮ ಪರಿಸ್ಥಿತಿಯು ದೇಶದಲ್ಲಿ ತುಂಬುವಂತೆ ಮಾಡುತ್ತಾರೆ. ಸಾಧುಸಂತರಾದ ವಧೂವರರು ವಿವಾಹ ಸಂಸ್ಕೃತಿಯ ವೈಪರೀತ್ಯದಿಂದ ಬಾಧೆಗೊಳಗಾಗುವರು.

ಅದ್ವೈತಂ ಸುಖದುಃಖಯೋರನುಗುಣಂ ಸರ್ವಾಸ್ವವಸ್ಥಾಸು ಯ-
ದ್ವಿಶ್ರಾಮೋ ಹೃದಯಸ್ಯ ಯತ್ರ ಜರಸಾ ಯಸ್ಮಿನ್ನಹಾರ್ಯೋ ರಸಃ ।
ಕಾಲೇನಾವರಣಾತ್ಯಯಾತ್ ಪರಿಣತೇ ಯತ್ ಸ್ನೇಹಸಾರೇ ಸ್ಥಿತಂ
ಭದ್ರಂ ತಸ್ಯ ಸುಮಾನುಷಸ್ಯ ಕಥಮಪ್ಯೇಕಂ ಹಿ ತತ್ಪ್ರಾಪ್ಯತೇ ॥

— ಎಂದು ಭವಭೂತಿಯು ಶ್ರೀ ರಾಮಚಂದ್ರನ ಮುಖದಿಂದ ಹೇಳಿಸಿರುವಂತೆ ದಾಂಪತ್ಯವು ಜಗತ್ತಿಗೆ ಅತ್ಯವಶ್ಯಕವಾಗಿರುವ ತಳಹದಿಯಾಗಿದೆ.

ಸಮ್ರಾಜ್ಞ್ಯಃ ಸ್ತ್ರೀಪ್ರಜಾಸ್ಸಂತು ಸಮ್ರಾಜಃ ಪುರುಷಪ್ರಜಾಃ ।

ಕುಟುಂಬದಲ್ಲಿ ಸ್ತ್ರೀಯರು ಸಮ್ರಾಜ್ಞಿಗಳಾಗಿಯೂ ಪುರುಷರು ಸಮ್ರಾಟ್ ಆಗಿಯೂ ಕುಟುಂಬದ ಮತ್ತು ಜಗತ್ತಿನ ಸುಖಕ್ಕೆ ಕಾರಣರಾಗಿರುವ ಸ್ಥಿತಿಯನ್ನು ಸೂಚಿಸುವುದೇ ವಿವಾಹ ಸಂಸ್ಕೃತಿ.

ಕಾರ್ಯೇಷು ದಾಸೀ ಕರಣೇಷು ಮಂತ್ರೀ
ರೂಪೇ ಚ ಲಕ್ಷ್ಮೀಃ ಕ್ಷಮಯಾ ಧರಿತ್ರೀ ।
ಭೋಜ್ಯೇಷು ಮಾತಾ ಶಯನೇಷು ವೇಶ್ಯಾ
ಷಡ್ಧರ್ಮಯುಕ್ತಾ ಖಲು ಧರ್ಮಪತ್ನೀ ॥

ಸ್ತ್ರೀಪ್ರಜೆಗಳೆಲ್ಲರೂ ಆರು ವಿಧವಾದ ಮೇಲ್ಮಂಡ ಹೊಣೆಗಾರಿಕೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕಾರ್ಯ ನಿರ್ವಾಹ ಮಾಡುವವರಾಗಬೇಕು. 'ದಾಸೀ' ಎಂದ ಮಾತ್ರಕ್ಕೆ ಸಾರ್ವಜನಿಕ ಸೇವೆಗೂ ದೇಶ, ರಾಜ್ಯ - ನಿರ್ವಾಹಗಳಿಗೂ ಸಿದ್ಧವಾಗುವುದಾದರೆ ಕುಟುಂಬ ರಾಜ್ಯವು ಹದಗೆಟ್ಟು ಇಡೀ ರಾಷ್ಟ್ರಕ್ಕೆ ಹಾನಿಯುಂಟಾಗುವುದು. ಸಾರ್ವಜನಿಕ ಸೇವೆಯನ್ನು ಕೈಕೊಂಡ ಸ್ತ್ರೀಯರು ಸ್ವಂತ ಕುಟುಂಬದ, ಸಮಾಜದ, ದೇಶದ, ರಾಷ್ಟ್ರದ ಸಂಸ್ಕೃತಿಯನ್ನು ನಾಶಮಾಡಿ ಆತ್ಮ ದ್ರೋಹ, ರಾಷ್ಟ್ರದ್ರೋಹಕ್ಕೆ ಪಾತ್ರರಾಗುತ್ತಾರೆ. ಏಕೆಂದರೆ ಸಾರ್ವಜನಿಕ ಸೇವೆಯಲ್ಲಿರುವ ಸ್ತ್ರೀಯು ಸ್ತ್ರೀ ಜೀವನದ ಕರ್ತವ್ಯ ನಿರ್ವಾಹವನ್ನು ಮರೆತು, ತನ್ನನ್ನು ತಾನು ಕೆಡಿಸಿಕೊಳ್ಳುವುದಲ್ಲದೆ ಇತರರ ಜೀವನಕ್ಕೂ ಬಾಧೆಯನ್ನು ತರುತ್ತಾಳೆ.

ಪ್ರತಿಯೊಬ್ಬ ಪುರುಷನು ತನ್ನ ತನ್ನ ವರ್ಣದ ಮಿತಿಯಲ್ಲಿ ಗೃಹಸ್ಥಾಶ್ರಮದ ಉಚಿತವಾದ ಕಾರ್ಯನಿರ್ವಾಹಮಾಡುವವನಾಗುತ್ತಾನೆ ವರ್ಣ ಮಿತಿಯಲ್ಲಿರುವವರೂ, ವರ್ಣ ಬಂಧನಾತೀತರೂ (ನಿಷಾದ) ನಡೆಸುವ ಗೃಹಯಜ್ಞಾದಿಗಳಿಗೆ ಆವಶ್ಯವಾಗಬೇಕಾದ ಕುಟುಂಬ ಕ್ಷೇತ್ರವು ವಿವಾಹ ಸಂಸ್ಕೃತಿಯಾದನಂತರ ಲಬ್ಧವಾಗುವುದು.

ಧರ್ಮೋ ರಕ್ಷತಿ ರಕ್ಷಿತೋ ನಯುರತ್ಯೈಃ ಧರ್ಮಾಶ್ರಿತಾ ಬ್ರಾಹ್ಮಣಾಃ
ಧರ್ಮೇಣ ಧ್ರಿಯತೇ ಸಮಸ್ತಭುವನಂ ಧರ್ಮಾಯ ತಸ್ಮೈ ನಮಃ ।
ಧರ್ಮಾತ್ ಸಂಭವಮೇತಿ ಸಿದ್ಧಿರಖಿಲಾ ಧರ್ಮಸ್ಯ ರಕ್ಷಾಧ್ವಜಃ
ಧರ್ಮೇ ತಿಷ್ಠತಿ ಸರ್ವಮೇತದಖಿಲಂ ಹೇ ಧರ್ಮ ಸಂಶಾಧಿ ನಃ ॥

(ಬ್ರಾಹ್ಮಣಧರ್ಮ, ಮುಖಪತ್ರ)

ಭ್ರೂಮಧ್ಯದಲ್ಲಿ ಧರಿಸುವ ರಕ್ಷೆಯೇ ಧ್ವಜವಾಗಿ ಉಳ್ಳ ಧರ್ಮಕ್ಕೆ ದಾಂಪತ್ಯವೇ ಮೂಲ. ವಿವಾಹ ಸಂಸ್ಕೃತಿಯಿಂದ ಶೋಧಿತವಾದ ದಾಂಪತ್ಯದ ಪರಿಪಾಲನೆಯಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣವಾದ ಧರ್ಮ ಪರಿಪಾಲನೆಯಾಗುವುದು. ಬ್ರಹ್ಮತತ್ವವನ್ನು ಅಂಗೀಕರಿಸಿ ಬ್ರಾಹ್ಮಣರೆನಿಸುವವರು ಬ್ರಹ್ಮ ಲಕ್ಷ್ಯವಾದ ಧರ್ಮವನ್ನು ಆಶ್ರಯಿಸುತ್ತಾರೆ. ಸಂಸ್ಕೃತಿ ಪ್ರಯೋಗಗಳಿಗೆ ಆವಶ್ಯಕವಾದ ಅಗ್ನಿಯ ಪೂಜಾ ಸೇವೆಗಳ ಅಂಗವಾಗಿ ಪ್ರಸಾದ ಧರಿಸುವ ರಕ್ಷೆಯೇ ಬ್ರಾಹ್ಮಣ ದೇಶದಲ್ಲಿ ಧರ್ಮ ಸೂಚಕವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಜೀವ, ಗರ್ಭ, ಜನನ ಸಂಸ್ಕೃತಿ

ಗರ್ಭಾಶಯ ಸಂಸ್ಕೃತಿಯು ತಾನೇ ತಾನಾಗಿ ಸ್ವತಃ ಶರೀರದಲ್ಲಿ ನಡೆಯುವಂತೆ ಪ್ರಕೃತಿಯು ಏರ್ಪಡಿಸಿರುವುದು. ವಿವಾಹಾದಿ ಸಂಸ್ಕೃತಿ ವಿಶೇಷಗಳಿಂದ ವಿವಿಧೋದ್ದೇಶಗಳಿಗೂ ಜನನತತ್ವಕ್ಕೂ ಅನುಗುಣವಾಗಿ ಶಾರೀರಕ, ಮಾನಸಿಕ ಸಂಸ್ಕೃತಿಗಳಿಂದ ತತ್ತತ್ಫಲವನ್ನು ಪಡೆಯುವ ಸಂಸ್ಕೃತಿ ವಿಧಾನಗಳು ಹೇರಳವಾಗಿವೆ. ಆದುದರಿಂದ ಸಂಸ್ಕೃತಿ ಗಳಲ್ಲಿ ಬಹುಮುಖ್ಯವಾದ ವಿವಾಹ ಸಂಸ್ಕೃತಿಯ ವಿವರಣೆಗಳು ಬ್ರಾಹ್ಮಣಾಚಾರ ಗ್ರಂಥಗಳಲ್ಲಿ ತುಂಬಿರುವುವು. ಮನಶ್ಶಾಸ್ತ್ರ, ಶಾರೀರಕ ಶಾಸ್ತ್ರಗಳ ದೃಷ್ಟಿಯಿಂದ ಇವುಗಳ ತತ್ವವನ್ನು ಅನ್ವೇಷಣ ಮಾಡುವ ಗುರುತರ ಕಾರ್ಯವು ಮಾನವನ, ವಿದ್ವತ್ತನ್ನು ಪಡೆದ ಮಾನವನ ಮೇಲೆ ಬಿದ್ದ ಹೊರೆಯಾಗಿರುವುದು.

ಸ್ತ್ರೀ ದೇಹವು ಬೆಳೆದು ಸಂತಾನಾಭಿವೃದ್ಧಿಗೆ ಅವಶ್ಯಕವಾದ ಕ್ಷೇತ್ರವನ್ನು ಸ್ವಾಭಾವಿಕವಾಗಿ ಸಿದ್ಧಪಡಿಸಿಕೊಳ್ಳುವ ಸ್ಥಿತಿಯು ಅಪ ರಿಮಿತವಾದ ಸೌಂದರ್ಯ ಸೊಬಗುಗಳಿಂದ ಮಿಳಿತವಾಗಿ ಅದ್ಭುತವೂ ಆಶ್ಚರ್ಯಕರವೂ ಅತೀಂದ್ರಿಯ ವಿಷಯವೂ ಆಗಿರುವುದು. ಈ ಕ್ಷೇತ್ರವು ಗೊತ್ತಾದ ಕಾಲಗಳಲ್ಲಿ ಆಗಾಗ್ಗೆ ಶುದ್ಧವೂ ಬೀಜಾವಾಪಕ್ಕೆ ಹದವಾಗಿ ಯೂ ಆಗುವುದು. ಪವಿತ್ರವಾದ ಸಂತಾನವೃದ್ಧಿ, ಪ್ರಜೋತ್ಪತ್ತಿ ಯೆಂಬ ಯಜ್ಞಕ್ಕೆ ಮೂಲವಾಗಿರುವುದು. ರಜಸ್ವಲಾ ಶಬ್ದದಿಂದ ವ್ಯವಹೃತವಾದ ಒಂದು ಅವಸ್ಥೆಯು ಕನ್ಯೆಯ ಯೌವನವನ್ನು ಸೂಚಿಸಲು ಪ್ರಥಮತಃ ಕಾಣಿಸಿಕೊಂಡು ಗರ್ಭ ಧಾರಣಕ್ಕೆ ಅರ್ಹತೆ ಯನ್ನು ವ್ಯಕ್ತಪಡಿಸುವುದು. ಈ ಬಗೆಯ ಅವಸ್ಥೆಯು ಸಸ್ಯ ಮೊದಲಾದ ದೇಹಿಗಳಿಗೆಲ್ಲಾ ಸಾಮಾನ್ಯವಾಗಿರುವುದು. ಸಾಮಾನ್ಯವಾಗಿ ಗರ್ಭದಲ್ಲಿ ಜೀವನು ಪ್ರವೇಶಿಸಿದಂದಿನಿಂದ 9 ತಿಂಗಳು ಅಲ್ಲಿ ಬೆಳೆದು ದೇಹಿಯಾಗಿ ಹೊರಕ್ಕೆ ಬಂದನಂತರ ಸ್ತ್ರೀ ಕ್ಷೇತ್ರವು ಪುಷ್ಪವಾಗಿ ರಜಸ್ವಲಾವಸ್ಥೆಯನ್ನು ಹೊಂದುವುದು. ಸಾಮಾನ್ಯವಾಗಿ ತಿಂಗಳಿ ಗೊಂದಾವೃತ್ತಿ ಉಂಟಾಗುವ ಆರೋಗ್ಯ, ಪುಷ್ಟಿ, ಸತ್ವಾ ಭಾಗ್ಯ ಸಂಪತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚಕವಾದ ಈ ಅವಸ್ಥೆಯ ಕಾಲದಲ್ಲಿ ಸ್ತ್ರೀಯರು ಶರೀರವನ್ನು ಅತ್ಯಂತ ಸೂಕ್ಷ್ಮವಾಗಿ ಇಟ್ಟುಕೊಳ್ಳಬೇಕಾಗುವುದು. ಮುಟ್ಟಿದರೆ ಬಾಡಿ ಹೋಗುವ ಪುಷ್ಪದ ಸ್ಥಿತಿಯನ್ನು ಹೋಲುವ ಈ ಸ್ಥಿತಿಯನ್ನು ಅತ್ಯಂತ ಜಾಗರೂಕವಾಗಿ ಸಂಸ್ಕರಿಸಿ ಪೋಷಿಸುವ ಸಂಸ್ಕೃತಿ ವಿಧಾನಗಳು ಮಾನವ ಜನ್ಮದಲ್ಲಿ ಅತ್ಯಂತ ಪ್ರಧಾನವಾಗಿವೆ. ಪ್ರಪಂಚದ ಸೃಷ್ಟಿಗೆ ಮೂಲಾಧಾರವಾದ ಕ್ಷೇತ್ರ ಪರಿಪಾಕವು ರಜಸ್ವಲಾ ಮುಖವಾಗಿ ತೋರಿಸಿಕೊಳ್ಳುವುದು. ಇದರ ಪಾವಿತ್ರ್ಯತೆ, ಶುದ್ಧಿ, ಆರೋಗ್ಯಗಳನ್ನು ಜನಸಂಪರ್ಕವಿಲ್ಲದಂತೆ ಗೋಪ್ಯವಾಗಿ ತಪಸ್ಸು, ಯೋಗಾಭ್ಯಾಸಗಳ ಸನ್ನಿವೇಶಗಳಿಗೆ ಸಮಾನವಾಗಿರುವಂತೆ ಕಾಪಾಡಬೇಕು. ಇದಕ್ಕಾಗಿ ಅಸ್ಪೃಶ್ಯತೆಯನ್ನು ಆರೋಪಿಸಿ ಜನಸಂಗಸ್ಪರ್ಶ ಬಾಧೆಯನ್ನು ತಪ್ಪಿಸುವ ಅತ್ಯಂತ ಅಮೋಘವಾದ ರಾಜನೀತಿ ತತ್ವವನ್ನು ಅಳವಡಿಸಲಾಗಿದೆ.

ಈ ತತ್ವವೇ ಜನ್ಮಭೂಮಿಗೂ ಹೊಂದಿಕೊಳ್ಳುವುದು. ತಾಯಿಯ ಗರ್ಭದಿಂದ ಶಿಶುವು ಹೊರಕ್ಕೆ ಬಂದ ಸ್ಥಳವು ಮಾತ್ರ 'ಜನ್ಮಭೂಮಿ' ಎಂದಲ್ಲ. ದೇಹಿಯ ಸಂಸ್ಕಾರಗಳನ್ನು ರೂಪಿಸಿ ರೂಢಿಸಿ ಬೆಳಗುವ ಮತ, ಧರ್ಮ, ಸಂಸ್ಕೃತಿ, ನಡೆ, ನುಡಿ, ವೇಷ, ಭೂಷಣಗಳ ವ್ಯಾಪ್ತಿಗೆ ಒಳಪಟ್ಟಂತೆ ಇರುವ ಜನನ ಸ್ಥಾನ, ಕುಟುಂಬ, ಕುಲ, ಸಮಾಜ, ಗ್ರಾಮ, ಪ್ರದೇಶ, ದೇಶಗಳನ್ನು ಒಳಗೊಂಡ ರಾಷ್ಟ್ರವು ಜನ್ಮಭೂಮಿ ಎನಿಸುವುದು. ಈ ದೃಷ್ಟಿಯಿಂದ ಯಜ್ಞಭೂಮಿ, ಯೋಗಭೂಮಿ, ಕರ್ಮಭೂಮಿ, ಧರ್ಮಭೂಮಿ, ಬ್ರಹ್ಮಭೂಮಿ, ಜ್ಞಾನಭೂಮಿ, ಗೀರ್ವಾಣಭೂಮಿ ಮೊದಲಾದ ನಾಮಗಳಿಂದ ಹೇಳಬಹುದಾದ ಆ ಸೇತು ಹಿಮಾಚಲ ಪರ್ಯಂತ ವ್ಯಾಪಿಯಾದ ಭೂಭಾಗವು ಬ್ರಾಹ್ಮಣ ರಾಷ್ಟ್ರವಾಗಿರುವುದು.

ಜನನ ಸ್ಥಾನದಿಂದ ರಾಷ್ಟ್ರದ ವ್ಯಾಪ್ತಿ ಪರ್ಯಂತ ಆಯಾ ಹಂತಗಳಲ್ಲಿ ಗರ್ಭವೆನಿಸಿದ ಕ್ಷೇತ್ರದಲ್ಲಿ ಬ್ರಾಹ್ಮಣ ಧರ್ಮಾನುಯಾಯಿಗಳಾದ ಪ್ರಜೆಗಳು ಶ್ರೇಯಸ್ಸನ್ನು ಸಾಧಿಸುವವರಾಗುವರು. ಈ ಜನ್ಮಭೂಮಿಯ ಹೊರಗೆ ಇರುವವರಿಂದ ಜನ್ಮಭೂಮಿಯು ರಕ್ಷಿಸಲ್ಪಡಬೇಕಾದುದು ಅವಶ್ಯಕ. ಬಹಿಃ, ಹೊರಗು (ಹೊರ – ಹೊಲೆ) ಎನಿಸುವ ವಸ್ತು ಮತ್ತು ದೇಹಿಗಳಿಂದಲೂ ಅಶುಚಿ, ರೋಗ, ಸಾಂಕ್ರಾಮಿಕ ಮೊದಲಾದ ಬಾಧೆಗಳಿಂದಲೂ ತಪ್ಪಿಸಲು ರಕ್ಷಕರು ಸದಾ ಸಿದ್ಧರಿರುತ್ತಾರೆ. ಈ ರಕ್ಷಕರ ರಕ್ಷಣೆಯ ಒಳಗೆ ಇರುವ ವಸ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಂತೆ ಇಂದ್ರಿಯ ಸ್ಪರ್ಶವಾಗದಂತೆ ಅಸ್ಪೃಶ್ಯರಾಗಿ ಕೇವಲ ಪವಿತ್ರಸ್ಥಿತಿಯಲ್ಲಿರುವವುಗಳಾಗಿವೆ. ಹೀಗೆ ಹೊರಗಿನ ಹೊಲೆಯನ್ನು ದೂರೀಕರಿಸುವ ಪವಿತ್ರ ಕಾರ್ಯ ಕರ್ತರನ್ನು ಶಬ್ದ ಪಲ್ಲಟ ಮಾಡಿ ಅಸ್ಪೃಶ್ಯ ಶಬ್ದಗಳಿಂದ ಹೇಳುವ ಸಂಕುಚಿತ ವ್ಯವಹಾರವು ಕಾಲೂರಿ ನಿಂತಿದೆ, ಇದನ್ನು ಕಿತ್ತು ಒಗೆಯಬೇಕಾದುದು ವಿವೇಕಿಗಳಾದ ಧಾರ್ಮಿಕರ ಕರ್ತವ್ಯ. ಹೀಗೆಯೇ ವೇದಗಳು, ಬ್ರಹ್ಮ, ಧರ್ಮ ಗ್ರಂಥಗಳು, ಯೋಗ, ಜ್ಞಾನ, ಯಜ್ಞ ಮೊದಲಾದುವುಗಳಿಗೆ ದೂರವಾಗಿ ಅಜ್ಞಾನ, ಅಲ್ಪಜ್ಞಾನ, ಅಶುಚಿ ವಸ್ತು ದೇಹಿಗಳೂ ತತ್ಸೂಚಕ ವೇಷಭೂಷಣ ನಡೆನುಡಿಗಳೂ ಹೊರಗಾಗಿ ಹೊಲೆ ಎನಿಸಿಕೊಂಡು ನಿಲ್ಲುವುವು. ಇವುಗಳ ನಿವೃತ್ತಿಯೆಂಬುದೇ ವೇದ, ಯಜ್ಞ, ಬ್ರಹ್ಮ, ಧರ್ಮ ಮೊದಲಾದವುಗಳ ಸಾಕ್ಷಾತ್ಕಾರವೆನಿಸಿ ಇಂದ್ರಿಯ ಸ್ಪರ್ಶಕ್ಕೆ ನಿಲುಕುವುವು. ಅದುವರೆಗೂ ವೇದಾದಿಗಳು ಅಸ್ಪೃಶ್ಯರಾಗಿ ರಕ್ಷಣೆಯ ಒಳಗೆ ಇರುವುವು. "ವೇದಗಳು ಅಸ್ಪೃಶ್ಯಗಳು" ಎಂದು ಶ್ರೀ ಜಹಗೀರ್ ದಾರ್ ಅವರು ತಮ್ಮ ಸಂಸ್ಕೃತ ವಾಙ್ಮಯ ಗ್ರಂಥದಲ್ಲಿ ಹೇಳಿ ಅಸ್ಪೃಶ್ಯ ಶಬ್ದದ ವ್ಯಾಪ್ತಿಯನ್ನು ಸ್ಪಷ್ಟಪಡಿಸಿರುವರು, ಇಂತಹ ಅಮೋಘವಾದ ವ್ಯವಹಾರ ತತ್ವಗಳನ್ನು ರಾಜನೀತಿಯ ದೃಷ್ಟಿಯಿಂದ ತಿಳಿದು ಆನಂದಪಡುವುದಲ್ಲದೆ ಅನುಷ್ಠಾನದಲ್ಲಿ ಬೆಳಗುವುದು ಪ್ರತಿಯೊಬ್ಬ ಸ್ತ್ರೀ ಪುರುಷ ಸದಾಚಾರಿ ಸತ್ಪ್ರಜೆಯ ಕರ್ತವ್ಯ. ಸ್ವದೇಶದ ಸ್ವಾಭಾವಿಕ ವಿಷಯಗಳೊಡನೆ ವಿದೇಶದವರ ಸಹವಾಸ, ಅವರ ಪದ್ಧತಿಯ ಅನುಕರಣಾದಿಗಳಿಂದ ಮಿಶ್ರಿತವಾಗಿ ಸ್ವಜನ್ಮಭೂಮಿಗೆ ವಿರೋಧವಾಗಿ ವರ್ತನೆಗಳು ನಡೆಯುವುದರಿಂದ ಭೂಗುಣ, ವಾಯುಗುಣಗಳು ಕಲುಷಿತವಾಗಿ ಅತಿವೃಷ್ಟಿ, ಅನಾವೃಷ್ಟಿ, ಧಾನ್ಯನಾಶಕ ಪ್ರಾಣಿ ಮತ್ತು ಪಕ್ಷಿಗಳು, ಪ್ರಜಾಕಂಟಕ ರಾಜ್ಯಭಾರ, ಪ್ರಳಯ, ಭೂಕಂಪಾದಿಗಳು, ಸಾಂಕ್ರಾಮಿಕ ರೋಗಾದಿಗಳು ಕ್ಷಾಮಪೀಡೆ, ದುರ್ಘಟನೆ ಇವುಗಳಿಂದ ಪ್ರಜೆಗಳು ತೊಂದರೆಗೀಡಾಗುವರು. ತೊಂದರೆಗಳ ಅನುಭವ ಕ್ರಮದಲ್ಲಿ ದೋಷಿಗಳು ಪಾರಾದಂತೆ ನಿರ್ದೋಷಿಗಳು ಬಾಧೆಪಟ್ಟಂತೆ ಆಪಾತತಃ ಕಂಡರೂ ವಾಸ್ತವವಾದ ಗುಣವು ಗುಣವಿಮರ್ಶೆಯ ಅಂತರಾತ್ಮನಿಗೆ ಸೇರಿದುದಾಗಿ ನ್ಯಾಯವೇ ಎದ್ದು ನಿಲ್ಲುವುದು.

ಈ ಸಂಸ್ಕೃತಿನಿಯಮಗಳು ಸ್ಪಷ್ಟವಾಗಿ ಉಕ್ತವಾಗಿವೆ. ಇವುಗಳನ್ನು ಭಾರತದಲ್ಲಿ ಬ್ರಾಹ್ಮಣಾಚಾರದ ಅನುಯಾಯಿಗಳು ಆಚರಣೆಯಲ್ಲಿ ಇಟ್ಟುಕೊಂಡಿರುವುದು ವಿವೇಚನೆಯ ಫಲ. ಬ್ರಾಹ್ಮೀ ಸಂಸ್ಕೃತಿಗಳ ಮೂಲಕ ಸ್ವಾಭಾವಿಕವಾದ ರಜಸ್ವಲಾ ಸ್ಥಿತಿಯ ಸಂರಕ್ಷಣವು ಸೃಷ್ಟಿ ಪ್ರಪಂಚದಲ್ಲಿ, ವಿಶ್ವದಲ್ಲಿ ಅಗ್ರಸ್ಥಾನವನ್ನು ಹೊಂದಿದೆ. ಮಾನವೇತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಿಗಳಲ್ಲಿ ರಜಸ್ವಲಾ ಪ್ರಕರಣವು ಸ್ವಾಭಾವಿಕವಾಗಿರುವಂತೆ ಪ್ರಕೃತಿಯು ವ್ಯವಸ್ಥೆ ಮಾಡಿರುತ್ತದೆ. ಪುರುಷಬೀಜವು ಸಮೀಚೀನ ಕ್ಷೇತ್ರದೊಡನೆ ಸಂಸರ್ಗವಾದಾಗ ಜೀವನು ದೇಹವನ್ನು ಧರಿಸಿ ಜನಿಸಿದನಂತರ 'ಕುಂಭಸಂಭವ' ಯೆಂತಲೂ 'ಅಗಸ್ತ್ಯ' ಎಂತಲೂ ನಾಮಗಳನ್ನು ಹೊಂದಬಹುದಾಗಿದೆ.

ಮಾನವ ಗರ್ಭದಲ್ಲಿ 9 ತಿಂಗಳ ಪರ್ಯಂತ ಶಿಶುವು ಸುಸಂಸ್ಕಾರವನ್ನು ಹೊಂದಿ ನಿರಾಕಾರ ಸ್ಥಿತಿಯಿಂದ ಕ್ರಮವಾಗಿ ಸಾಕಾರ ಸ್ಥಿತಿಯನ್ನು ಹೊಂದುವುದು. ಗರ್ಭಿಣಿಯರಿಗೆ ಆಹಾರ ವಿಹಾರಗಳ ಸಂಸ್ಕಾರಗಳನ್ನು ಉಂಟುಮಾಡಿ ಗರ್ಭಸ್ಥ ಶಿಶುಗಳಿಗೂ ಸಂಸ್ಕಾರಗಳನ್ನು ಕೊಟ್ಟು ಸತ್ಪ್ರಜೆಗಳಾಗುನಂತೆ ಮಾಡುವ ಸಂವಿಧಾನಗಳಿರುತ್ತವೆ. ಕ್ಷೇತ್ರ ಶುದ್ಧಿ, ಬೀಜಶುದ್ಧಿ ಸಂಸ್ಕಾರಗಳನ್ನೂ ಗರ್ಭಾಧಾನ ಸಂಸ್ಕಾರಗಳನ್ನೂ ಪಡೆದು ಉತ್ತಮ ಶ್ಲೋಕರೆನಿಸಿದ ಪ್ರಜೆಗಳು ಅವತರಿಸುನಂತೆ ಮಾಡುವ ಕ್ರಮವಿರುತ್ತದೆ. ಧನ್ವಂತರಿ (ಆಯುಸ್) ಶಾಸ್ತ್ರ (ಜೀವನಶಾಸ್ತ್ರ)ದಲ್ಲಿ ಹೇಳಿರುವ ಸಂಸ್ಕಾರಗಳನ್ನು ಅನುಸರಿಸುವುದರಿಂದಲೇ ದೇವತ್ವವು ಸಾಕ್ಷಾತ್ಕೃತವಾಗುವುದು. ಹೀಗೆಯೇ ಜ್ಯೋತಿಷ್ಯ, ಸಂಗೀತ, ವಾತ್ಸ್ಯಾಯನ ಕಾಮ ಮೊದಲಾದ ಕಲೆಗಳೂ ಈ ಸಂದರ್ಭದಲ್ಲಿ ದೇವ ಸಾಕ್ಷಾತ್ಕಾರಕ್ಕೆ ಸಹಕಾರವಾಗುವುವು. ಕ್ರಿಮಿಕೀಟಪಕ್ಷಿಗಳಲ್ಲಿ ಮತ್ತು ಸಸ್ಯಾದಿಗಳಲ್ಲಿ ಎರಡು ಮೂರು ಹಂತಗಳಲ್ಲಿ ಜನ್ಮವನ್ನು ಪಡೆಯುವ ಸಂವಿಧಾನವಿದೆ. ಪ್ರಕೃತಿಯಲ್ಲಿ ಇದ್ದಂತೆ ಮತ್ತು ದೊರಕಿದಂತೆ ಪದಾರ್ಥಗಳನ್ನು ಸಂಗ್ರಹಿಸಿ ಉಪಯೋಗಿಸುವುದು ಸರ್ವ ಪ್ರಾಣಿ ಸಾಮಾನ್ಯವಾಗಿದೆ ವಿವೇಕಗರ್ಭಿತವಾದ ಸಂಸ್ಕೃತಿಯ ಪ್ರಭಾವದಿಂದ ಉತ್ತಮಗುಣವನ್ನು ಅನುಭವಿಸಿರುವವರು ಪ್ರಕೃತಿ ವ್ಯಾಪಾರದ ಜತೆಗೆ ಮಾನವವ್ಯಾಪಾರವೆನ್ನಬಹುದಾದ ಸಂಸ್ಕರಣವನ್ನು ಪ್ರಯೋಗಿಸಿಯೇ ಜೀವನ ಕಾರ್ಯಗಳನ್ನೂ ನೆರವೇರಿಸುವರು

ಋಣ, ಸಂಕಲ್ಪ, ಕರಣ, ಕರ್ಮ, ಕರ್ತೃ, ಪ್ರಭುತ್ವ, ಸೇವಾ ಮೊದಲಾದ ಸನ್ನಿವೇಶಗಳನ್ನೆಲ್ಲಾ ಸೂಕ್ಷ್ಮವಾಗಿ ಸಂಸ್ಕರಿಸಿ ಅನಂತರ ನಿಷ್ಪನ್ನವಾದ ಉತ್ತಮ ಫಲಗಳನ್ನು ಭೋಗಿಸುವ ಮತ್ತು ಉಪಯೋಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸುವ ಕ್ರಮವನ್ನು ಬ್ರಾಹ್ಮೀ ಸಂಸ್ಕೃತಿಯು ಹೇಳಿದೆ. ಬ್ರಾಹ್ಮಣ ಜೀವನದಲ್ಲಿ ಅದೆಲ್ಲವೂ ಅಡಕವಾಗಿದೆ.

ಬೀಜ ಕ್ಷೇತ್ರ ಸಂಯೋಗದಿಂದ ಜೀವಕ್ಕೆ ಆಶ್ರಯು (ದೇಹ) ವುಂಟಾಗಿ ದೇಹದಿಂದ ಹೊರಕ್ಕೆ ಬಂದಂದಿನಿಂದ ದೇಹಿಯ ದೇಹವು ಬಿದ್ದುಹೋಗುವವರೆಗೂ ದೇಹವನ್ನು ಬಿಟ್ಟ ಮೇಲೂ ನಡೆಯಬೇಕಾದ ಸಂಸ್ಕೃತಿ ಸೋಪಾನಗಳು ಅತ್ಯಂತ ಸುಖದಾಯಕಗಳಾಗಿ ಶಾಂತ್ಯಾವರಣ ವನ್ನು ಕಲ್ಪಿಸುವುವು.* ಲೋಕದಲ್ಲಿ ಪಿತೃತ್ವ, ಮಾತೃತ್ವ, ಪತ್ನೀತ್ವ ಪುತ್ರತ್ವಗಳ ಅನುಸಂಧಾನವನ್ನೂ ಋಣಾನುಬಂಧ ರಹಸ್ಯವನ್ನೂ— ಗರ್ಭಾಧಾನಾದಿ ಶ್ರಾದ್ಧ ಪರ್ಯಂತ ಉಕ್ತವಾದ ಸಂಸ್ಕಾರ ಕರ್ಮಗಳು ಒಳಗೊಂಡಿರುವುವು. ಅತೀಂದ್ರಿಯವೆಂಬಷ್ಟು ಸೂಕ್ಷ್ಮವಾದ ಈ ವಿಷಯವು ವಿವರಣೆಗಳನ್ನು ಅಣಕಿಸುವುದು ಮತ್ತು ಸ್ವಾನುಭೂತಿ ವೇದ್ಯವಾಗಿರುವುದು. ಈ ವಿಷಯದಲ್ಲಿ ಅನುಸಂಧಾನವು ಕಡಿಮೆ ಯಾಗಿರುವವರಿಗೆ ಸಂದೇಹ ಸಂದೋಹವು ಇದ್ದೇ ಇರುವುದು. ಅನುಸಂಧಾನ ರಹಸ್ಯಜ್ಞರಿಗೆ ಜನ್ಮದ ರಹಸ್ಯವು ಗೋಚರವಾಗುವುದು.

ಮನುಷ್ಯನ ಉಪಯೋಗಕ್ಕೆ ಪ್ರಕೃತಿಯಲ್ಲಿ ದೊರೆಯುವ ವಸ್ತು ಗಳನ್ನು ಸಂಸ್ಕರಿಸಿ, ಶುದ್ಧಿಗೊಳಿಸಿ ನಿರ್ಮಲಗೊಳಿಸಿ ವಿವಿಧವಾದ ಪ್ರಯೋಜನ ಲಾಭಗಳಿಗೆ ಉಪಯೋಗಿಸುವಂತೆ * ಮನುಷ್ಯನ ಭೌತಿಕ ಶರೀರವನ್ನೂ ಶರೀರದ ಒಳಭಾಗವನ್ನೂ ನಿರ್ಮಲಗೊಳಿಸುವ ಪದ್ಧತಿ

---

* ಇದು ಶ್ರಾದ್ಧಾದಿ ಪ್ರಕರಣದಲ್ಲಿ ಮರಣ ರಹಸ್ಯತಂತ್ರಾದಿಗಳಲ್ಲಿ ವಿಸ್ತೃತವಾಗಿ ಹೇಳಲ್ಪಟ್ಟಿದೆ.

* ಭತ್ತ, ಅಕ್ಕಿ (ಫಲೀಕೃತ, ವಿಫಲೀಕೃತ), ಅಕ್ಕಿಹಿಟ್ಟು, ಅರಳು, ಅವಲಕ್ಕಿ, ಹುರಿದವಲಕ್ಕಿ, ಅರಳಿನ ಹಿಟ್ಟು, ಆವಿಯಿಂದ ಪಕ್ವವಾದ ಮತ್ತು ನೀರಿನಲ್ಲಿ ಬೆಂಕಿಯಿಂದ ಪಕ್ವವಾದ ಅನ್ನ, ಅಕ್ಕಿ ಹಿಟ್ಟಿನಿಂದ ಆದ ವಿವಿಧ ಭಕ್ಷ್ಯಗಳು ಇವುಗಳಲ್ಲಿ ಪ್ರತಿಯೊಂದೂ ಗುಣ, ಶಕ್ತಿಗಳ ವಿವಿಧ ಪ್ರಮಾಣಗಳನ್ನು ಹೊಂದಿ ವಿವಿಧೋದ್ದೇಶಗಳಿಗಾಗಿ ಉಪಯುಕ್ತವಾಗಿ ವಿವಿಧ ಫಲಗಳನ್ನು ಕೊಡುವುದಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು (ಆತ್ಮ ಲಾಭಾದಿಯೋಗಾಭ್ಯಾಸಗಳು) ಕಂಡುಹಿಡಿಯಲ್ಪಟ್ಟಿವೆ. ಮಣಿ ಮಂತ್ರ ಔಷಧಿಗಳ ಸಹಾಯದಿಂದ ಆಕಸ್ಮಿಕ ಘಟನೆಗಳನ್ನೂ ದುರ್ಘಟನೆಗಳನ್ನೂ ನಿವಾರಿಸಿಕೊಳ್ಳುವ ಸಂವಿಧಾನಗಳು ಅಪಾರವಾಗಿವೆ.

ಸೀಮಂತೋನ್ನಯನ, ಜಾತಕರ್ಮ, ನಾಮಕರಣ ಸಂಸ್ಕಾರಗಳ ಔಚಿತ್ಯವನ್ನು ಮನಶ್ಶಾಸ್ತ್ರ, ಶಾರೀರಶಾಸ್ತ್ರ ನಿಯಮಗಳಲ್ಲಿ ವಿವರಿಸಿರುತ್ತಾರೆ, ಕರ್ಣವೇಧೆಯು ಶಾರೀರಕ ಸಂಸ್ಕಾರವಾಗಿ ಅನಿಷ್ಟ ರೋಗಗಳನ್ನು ದೂರೀಕರಿಸಿ ಧರ್ಮ ಅಥವಾ ಆಚಾರ ಅನುಷ್ಠಾನ ಸೂಚಕವಾಗಿ ಪುರುಷಾರ್ಥಪ್ರದವಾಗಿರುತ್ತದೆ.

ಭಾರತೇತರ ದೇಶಗಳಲ್ಲಿ ಸ್ತ್ರೀಯರಿಗೆ ಕರ್ಣವೇಧೆಯು ಉಕ್ತವಾದುತಿದ್ದರೂ ಸಂಸ್ಕಾರವೆಂದೆನಿಸುವುದಿಲ್ಲ; ಪುರುಷರಿಗೆ ಚರ್ಮ ಛೇದನವು ಕೆಲವು ಜನಾಂಗಗಳಲ್ಲಿ ಉಕ್ತವಾಗಿದೆ. ಸ್ತ್ರೀ ಪುರುಷರಿಗೆ ಸಾಮಾನ್ಯವಾಗಿ ಉಕ್ತವಾದ ಈ ಕರ್ಣವೇಧಾ ಸಂಸ್ಕೃತಿಯು ಭಾರತ ದೇಶಕ್ಕೆ ವಿಶೇಷವಾಗಿದೆ ಮತ್ತು ಭಾರತೇತರ ದೇಶಗಳ ಪ್ರಜೆಗಳು ಮೆಚ್ಚಿ ಅನುಸರಿಸುವಂತೆಯೂ ಇರುತ್ತದೆ.

ಜನನ, ಜನನೇಂದ್ರಿಯಗಳು, ಜನನ ಕ್ಷೇತ್ರಗಳು ಮತ್ತು ಬೆಳೆವಣಿಗೆ ಇವೆಲ್ಲವೂ ಅತ್ಯಾಶ್ಚರ್ಯಕರಗಳಾಗಿಯೂ ತಿಳಿವಳಿಕೆಗೆ ಸಿಲುಕಲಾರದವುಗಳಾಗಿಯೂ ಇವೆ. ದೇಹಿಯ ಸಂಕಲ್ಪ, ಕರ್ಮ, ಫಲಾನುಭವಶೇಷ, ವಾಸನಾಸಂಸ್ಕಾರಗಳಿಗೆ ತಕ್ಕಂತೆ ಸುರ ಮತ್ತು ಅಸುರ ಗುಣ ಕರ್ಮ ಶಕ್ತಿಗಳು ಸಮಯೋಚಿತವಾಗಿ ಹೊರಪಡುವ ಸೃಷ್ಟಿ ಸ್ಥಿತಿ ಲಯ ವ್ಯಾಪಾರಗಳು ಗೋಚರವಾಗುವುದಿಲ್ಲ. ಅತ್ಯದ್ಭುತವಾದ ಪುರುಷ ಪ್ರಕೃತಿಗಳ ವಿದ್ಯಾ, ಕಲಾ, ಶಿಲ್ಪ ನೈಪುಣ್ಯದಿಂದಲೂ ಸಂಕಲ್ಪ ಲೀಲೆಗಳಿಂದಲೂ ಸಾಧಿತವಾದ ಮತ್ತು ದೇಹೀ ಎಂಬ ದೇವನಿಗೆ ಆಲಯವಾಗಿರುವ ದೇಹವನ್ನು ತಿಳಿಯಬೇಕಾದುದು ಅತ್ಯವಶ್ಯಕವೇ ಸರಿ. ದೇಹಿಗಳ ಶಾರೀರಕ, ಮಾನಸಿಕ ಮತ್ತು ಇಂದ್ರಿಯ ವ್ಯಾಪಾರಗಳು ಸ್ವತಂತ್ರವಾಗಿಯೂ ಪ್ರತ್ಯೇಕವಾಗಿಯೂ ಸಂಯುಕ್ತವಾಗಿಯೂ ಸಮಯೋಚಿತವಾಗಿ ಚೈತನ್ಯಾತ್ಮಕವಾದ ದೇಹದಲ್ಲಿ ನಡೆಯುವ ವಿಚಾರವು ಆಶ್ಚರ್ಯ, ಭಯ, ಭಕ್ತಿ ಮತ್ತು ಆನಂದಗಳನ್ನು ಬೀರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬೆಳೆವಳಿಗೆಗೆ ಬೇಕಾದುದನ್ನೂ ಬೇಡವಾದುದನ್ನೂ ಬೇರ್ಪಡಿಸಿ ಆವಶ್ಯಕವಾದುದನ್ನು ಉಪಯೋಗಿಸಿಕೊಳ್ಳುವುದಕ್ಕೂ ಆವಶ್ಯಕವಲ್ಲದುದನ್ನು ಬಿಡುವುದಕ್ಕೂ ಶರೀರಕ್ಕೆ ಉಂಟಾದ ಬಾಧೆಯನ್ನು ನಿವಾರಿಸಿಕೊಳ್ಳುವುದಕ್ಕೂ ಸ್ವಾಭಾವಿಕವಾಗಿ ತಾನೇ ತಾನಾಗಿ ಶರೀರದಲ್ಲಿ ನಡೆಯುವ ವ್ಯಾಪಾರಗಳೂ ಪರಮಾಶ್ಚರ್ಯವನ್ನುಂಟುಮಾಡುವುವು. ಇದನ್ನು ತಿಳಿಯುವ ಸಾಮರ್ಥ್ಯವನ್ನು ಆವರಣದ ಮಿತಿಯಲ್ಲಿರುವ ದೇಹಿಗಳು ಹೊಂದಿರುವುದಿಲ್ಲ. ಗಹನವಾದ ಇಂತಹ ವ್ಯಾಪಾರಗಳು ಹೆಚ್ಚು ಕಡಿಮೆಯಾದರೆ ಶರೀರಕ್ಕೂ ವಿಶ್ವಕ್ಕೂ ಬಾಧೆಯನ್ನುಂಟುಮಾಡುವುವು. ಆದುದರಿಂದ ಧರ್ಮ ಸಾಧನಗಳಲ್ಲಿ ಪ್ರಥಮವಾದ ಶರೀರವನ್ನು ಪ್ರತಿಕ್ಷಣದಲ್ಲಿಯೂ ಪ್ರತಿ ಹಂತದಲ್ಲಿಯೂ ಶ್ರೇಯಃಪ್ರದವಾದ ಸಂಸ್ಕೃತಿ ಕಾರ್ಯಕ್ರಮ ಅಭ್ಯಾಸಗಳಿಂದ ಸಂರಕ್ಷಿಸಿ ದೇಹಿಗಳು ಆರೋಗ ದೃಢಕಾಯರಾಗಿರುವಂತೆ ಎಚ್ಚರಿಕೆಯಿಂದಿರಬೇಕಾದ ಕಾರ್ಯಭಾರ, ಹೊಣೆಗಾರಿಕೆಯನ್ನು ಗಮನಿಸಬೇಕೇ ಹೊರತು ಒಡವೆ, ಆಭರಣ, ಉಡುಪುಗಳ ವೇಷ ಧಾರಣೆಗೆ ಎಳ್ಳಿನಷ್ಟೂ ಅವಕಾಶ ಕೊಡಬಾರದು ಎಂಬುದನ್ನು ಬಹಳ ಗಂಭೀರವಾಗಿ ಪರಿಶೀಲಿಸಿ ಸಂಸ್ಕೃತಿ ವಿಧಾನಗಳನ್ನು ನಿರೂಪಿಸಲಾಗಿದೆ. ದೇಹಿಗಳು ವೃಥಾ ಸಾಹಸ ಮಾಡದೆಯೂ ಅಲಸರಾಗದೆಯೂ ಸ್ವಾಭಾವಿಕವಾದ ತಮ್ಮ ಮಿತಿಯಲ್ಲಿ ಸಂಸ್ಕೃತಿ ಕರ್ಮಗಳ ಅನುಷ್ಠಾನದಿಂದ ಶಾಂತಿಸುಖಗಳನ್ನು ಅನುಭವಿಸಬಹುದು. ಈ ಬಗೆಯ ಆನಂದಾನುಭವಕ್ಕೆ ಪ್ರತಿಯೊಂದು ದೇಹಿಯೂ ತನ್ನದೇ ಆದ ವಿಶಿಷ್ಟ ಅಧಿಕಾರವನ್ನು ಹೊಂದಿರುವುದೆಂಬುದು ಆಯಾ ದೇಹಿಯ ಸಂಸ್ಕೃತಿ ಮಟ್ಟದಿಂದ ಸ್ಪಷ್ಟವಾಗುವುದು. ಯಾವ ವ್ಯಕ್ತಿಯೂ ಮತ್ತೊಬ್ಬರ ಸ್ಥಿತಿ ಗತಿಗಳನ್ನು ನೋಡಿ ಅಸೂಯೆ, ತಿರಸ್ಕಾರ ಮೊದಲಾದ ಮನೋವಿಕಾರಗಳನ್ನು ಹೊಂದಿ ಕ್ಲೇಶಪಡಬಾರದೆಂಬ ಖಚಿತ ನಿಯಮವನ್ನು ತಿಳಿಯಬೇಕು.

ಜೀವನು ಸಂಕಲ್ಪ ಕರ್ಮ ಫಲಾನುಭವಕ್ಕೋಸ್ಕರ ದೇಹವನ್ನು ಧರಿಸುವನು. ಇದೇ ಸೃಷ್ಟಿ ಅಥವಾ ಜನ್ಮವೆನಿಸುವುದು. ಹೀಗೆ ಸೃಷ್ಟಿ ಸಂತಾನವು ಹರಡುವುದಕ್ಕೆ ಜಲಚರ ಸಸ್ಯ ತರು ಕ್ರಿಮಿ ಕೀಟ ಸರ್ಪ ಮೃಗ ಪಕ್ಷಿ ಪಶುಗಳಲ್ಲಿಯೂ ಸ್ತ್ರೀ ಪುರುಷ ಸಮಾಗಮ ವ್ಯವಸ್ಥೆ ಇರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಜಾತೀಯ, ವಿಜಾತೀಯ ಸಂಸರ್ಗದಿಂದ ದೇಹದ ಗುಣ ಕರ್ಮ ಶಕ್ತಿಗಳಲ್ಲಿ ಬದಲಾವಣೆ ಚಮತ್ಕಾರಗಳು ಉಂಟಾಗುವುವು. ಆತ್ಮಮಯ ಜೀವಾಣುಮಯ ಪ್ರಪಂಚದಲ್ಲಿ ಕೆಲವು ವೃಕ್ಷಗಳ ಶಾಖೆಗಳಲ್ಲೆಲ್ಲಾ ಇರುವ ಜೀವಾಣುಗಳು 'ಜೀವ'ಕ್ಕೆ ಆಶ್ರಯ ಕೊಡುವುವು. ಮೂಲ ವೃಕ್ಷದಿಂದ ಸ್ವತಂತ್ರವಾಗಿ ಶಾಖೆಗಳನ್ನು ಬೇರ್ಪಡಿಸಿ ಸಂತಾನಾಭಿವೃದ್ಧಿಯ ಅವಕಾಶವಿರುವ ಸಂದರ್ಭಗಳಲ್ಲಿ ಯೋಜನೆ ಮಾಡಿದರೆ ಜೀವನು ಶರೀರವನ್ನು ಧರಿಸಿ ದೇಹಿಯಾಗಿ ಬೆಳೆಯುವುದು. ವಾಯುವಿನ ಮೂಲಕ ಪುಷ್ಪ ಪರಾಗ ರೂಪದಲ್ಲಿ ಪುರುಷಬೀಜವು ಹರಡಿ ಪುಷ್ಪ ಸ್ತ್ರೀ ಕ್ಷೇತ್ರವನ್ನು ಸೇರಿ ಸಂತಾನಾಭಿವೃದ್ಧಿಗೆ ಕಾರಣವಾಗುವುದು. ಕಾಯಿ ಅಥವಾ ಹಣ್ಣುಗಳನ್ನು ಹೊಂದದ ಕೇವಲ ಪುಷ್ಪಲತೆಗಳು ಶಾಖೆಗಳಿಂದಲೇ ಸಂತಾನವನ್ನು ಬೆಳೆಸುವುವು.

ಒಂದು ವೃಕ್ಷವು ಬೆಳೆದನಂತರ ಅದರೊಳಗೆ ಸೇರಿಕೊಂಡಂತೆ ಅನ್ಯ ಜಾತಿ ವೃಕ್ಷವು, ವೃಕ್ಷಗಳು ತಲೆದೋರಿ ಜತೆಯಲ್ಲಿ ಬೆಳೆಯುವುವು. ಇದರಿಂದ ಆಯಾ ವೃಕ್ಷ ದೇಹಿಗಳ ಸಂಕಲ್ಪ ಕರ್ಮ ಫಲವು ಸೂಚಿತವಾಗುವುವು. ಹೀಗೆ ದೇಹಿಯ ಸಂಕಲ್ಪಗಳ ಪೂರೈಕೆಗೆ ತಕ್ಕಂತೆ ಅನೇಕ ವಿಧವಾದ ಕ್ಷೇತ್ರ ಬೀಜಗಳ ಸಮಾಗಮ ಸಂವಿಧಾನಗಳು ಏರ್ಪಟ್ಟು, ಜೀವವು ಶರೀರಾದಿಗಳನ್ನು ಧರಿಸುವುದಕ್ಕೆ ಸ್ವಾಗತವನ್ನೀಯುವುವು. ಬೇರೆ ಬೇರೆ ಚೇತನಗಳ ಸಮಾಗಮದಿಂದ ಅತಿ ಚಮತ್ಕೃತಿಯನ್ನು ಬೆಳಗುವ ವಸ್ತು ಜನನವಾಗುವುದು. ಒಂದು ಮಾವಿನಮರದ ಕೊಂಬೆಯೊಡನೆ ಮತ್ತೊಂದರ ಕೊಂಬೆಯನ್ನು ಜಂಟಿಸಿ ಪೋಷಿಸಿದರೆ ಸಂಸ್ಕೃತಿ ವಿಶೇಷದಿಂದ ಮೂರನೇ ಬಗೆಯ ಗುಣವುಳ್ಳ ಮರವಾಗಿ ಆಕರ್ಷಕವಾದ ಫಲವೀಯುವುದು. ಪುಷ್ಪ ಸಸ್ಯಗಳೂ ಸಹ ಸಂಸರ್ಗ ಪ್ರಭಾವದಿಂದ ವಿಚಿತ್ರವಾಗಿಯೂ ವಿಶೇಷವಾಗಿಯೂ ಪುಷ್ಪಗಳನ್ನು ಕೊಡುವುವು. ಆದರೆ ಕೃತಕೋಪಾಯಗಳಿಂದ ಉಂಟಾದವಸ್ತುಗಳು ಸ್ವಾಭಾವಿಕವಾಗಿ ದೊರೆಯುವ ವಸ್ತುಗಳಿಗಿಂತ ಕೀಳುಮಟ್ಟದ್ದೆಂದು 'ಋತ'ವು ಸಾರುತ್ತದೆ.

ಮಾನವಸ್ತ್ರೀ ಪುರುಷ ದೇಹಗಳ ಕರುಳುಗಳಲ್ಲಿ ಉದ್ಭವವಾಗಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದುಂಡು ಜಂತುಗಳು ಜನನವಾಗುವುವು. ಇರುವಿಕೆಯೇ ಗೋಚರವಾಗದೆ ದೇಹಿಗಳ ದೇಹದಲ್ಲಿ ಉತ್ಪತ್ತಿಯಾದ ಈ ಜಂತುಗಳ ಬಾಧೆಯಿಂದ ದೇಹಿಗಳಿಗೆ ಆಲಸ್ಯಾದಿ ಜಾಡ್ಯಗಳು ತಲೆದೋರಿ ಸಂಸ್ಕೃತಿ, ಧರ್ಮ, ನ್ಯಾಯ, ಆಚಾರ ಮೊದಲಾದ ಕಾರ್ಯಕ್ರಮಗಳು ದೂರೀಕರಿಸಲ್ಪಡುವುವು. ವ್ಯಕ್ತಿ, ಕುಟುಂಬ, ಸಮಾಜ, ರಾಜ್ಯ ವಲಯಗಳಿಗೆ ಹಾನಿ ತಟ್ಟುವುದು. ವ್ಯಕ್ತಿಗಳಿಗಿರುವ ಪರಸ್ಪರ ಋಣಾನುಬಂಧಗಳು ಇದರಿಂದ ಸ್ಪಷ್ಟವಾಗಿ ಜ್ಞಾನ ಪ್ರಚೋದನೆಯಾಗುವುದು ಮತ್ತು ವಿಶ್ವವೆಲ್ಲವೂ ಆತ್ಮಮಯ ಪ್ರಾಣಮಯವೆಂದು ಗೊತ್ತಾಗುವುದು.

ಮಣ್ಣು, ಕೊಟ್ಟಿಗೆ ಗೊಬ್ಬರ ಮತ್ತು ಕೆಸರು ಕಲ್ಮಷಗಳಲ್ಲಿ ಕ್ರಿಮಿ ದೇಹಿಗಳು ಋಣಾನುಸಾರ ದೇಹಗಳನ್ನು ಧರಿಸಿ ಋಣವನ್ನು ಪರಿಹರಿಸಿಕೊಳ್ಳುವ ಅನುಭವವನ್ನು ಹೊಂದುವುವು.

ದೇಹಿಗಳ ಚೈತನ್ಯಮಯವಾದ ದೇಹಗಳಲ್ಲಿ ಪ್ರತಿಯೊಂದು ಅಣುವೂ ಕ್ರಿಯಾತ್ಮಕವಾಗಿರುವುದು. ಇಂದ್ರಿಯಗಳೂ ಸಹ ತಿಳಿಯಲಾರದ ಸಂಯೋಜನ, ವಿಭಜನ ವ್ಯಾಪಾರಗಳನ್ನು ದೇಹವು ತುಂಬಿರುವುದು. ಅತ್ಯದ್ಭುತವಾದ ಈ ಪ್ರಕೃತಿ ವ್ಯಾಪಾರಗಳು ಇಂದ್ರಿಯಾತೀತವಾಗಿಯೇ ಉಳಿದಿರುತ್ತವೆ. "ಅಗೋಚರವಾದ ಮಾನವ (ದೇಹಿ)" ಎಂಬ ಗ್ರಂಥದಲ್ಲಿ ವೈದ್ಯ ಪ್ರಪಂಚದಲ್ಲಿ ಖ್ಯಾತಿ ಪಡೆದ ಅನ್ವೇಷಣಕಾರನು ಇದನ್ನು ಸ್ಪಷ್ಟವಾಗಿ ವರ್ಣಿಸಿರುತ್ತಾನೆ.

ಸಂತಾನ ನಿರೋಧಕ ಮತ್ತು ಕೃತಕ ಗರ್ಭಧಾರಣ ಗರ್ಭಪಾತ ವಿಧಾನಗಳು ಪ್ರಕೃತಿಗೆ, ಋತಕ್ಕೆ ವಿರೋಧವಾದುದರಿಂದ ಕೆಡಕುಂಟುಮಾಡುವ ಋಣವಾಗಿ ಪರಿಣಮಿಸಿ ಸ್ವಹಾನಿ, ದೇಶಹಾನಿ, ಸಮಾಜಹಾನಿ, ರಾಷ್ಟ್ರಹಾನಿಗಳಿಗೂ ಸ್ವಾಭಾವಿಕ ಸಂಸ್ಕೃತಿ ನಾಶಕ್ಕೂ ಕಾರಣವಾಗುವುವು. ಉತ್ಕಟವಾದ ಋಣಾನುಬಂಧದ ಫಲವಾಗಿ ಈ ಬಗೆಯ ನಿರೋಧ ಕಾರ್ಯಗಳು ನಡೆದರೂ, ಪ್ರಕೃತಿಯ ಪ್ರಕೋಪಕ್ಕೆ ಕಾರಣವಾಗುವುದರಿಂದ ಆ ಬಗೆಯ ಸಂಕಲ್ಪಾದಿಗಳು ಉದಯಿಸದಂತೆ, ನಿವಾರಣೆ ಮಾಡಿಕೊಳ್ಳುವುದರ ಮೂಲಕ ಸಂಸ್ಕೃತಿಯ ಮೆಟ್ಟಲನ್ನು ಏರಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಅರ್ಥಾಃ ಬಹಿಶ್ಚರಾಃ ಪ್ರಾಣಾಃ" ಎಂಬಂತೆ ಧನದ್ರವ್ಯಾದಿಗಳೆಂಬ ಅರ್ಥಗಳ ಪ್ರಾಪ್ತಿ ನಿಷ್ಪತ್ತಿ ಮಾರ್ಗಗಳಿಗೆ ತಕ್ಕಂತೆ ಇಷ್ಟಾನಿಷ್ಟಗಳು ಒದಗುವುವು. ಅನುನಯದ ಅಥವಾ ಒತ್ತಾಯದ ಶುಲ್ಕ, ತೆರಿಗೆಗಳಿಂದ ವಿರೋಧದ ಅಥವಾ ಪರಕೀಯ ಪಂಥಕ್ಕೆ ಒಳಪಡಿಸುವುದರ ಮೂಲಕ ಅರ್ಥವನ್ನು ಮತ್ತೊಬ್ಬರಿಂದ ಪಡೆಯುವ ವ್ಯಾಪಾರವು ಒಂದು ಬಗೆಯ ಮೋಸ, ಕಳ್ಳತನ, ದರೋಡೆಗಳಿಗೆ ಸಮಾನವಾಗಿ ಪ್ರಾಣಾಪಹಾರ ಮಾಡಿದ ವ್ಯಾಪಾರವಾಗುವುದು. ಈ ಬಗೆಯ ಅನೀತಿ ವ್ಯಾಪಾರವು ದುಷ್ಟಫಲಪ್ರದವಾಗುವುದು.

## ದ್ವಿಜ ಸಂಸ್ಕೃತಿ

ಮನಸ್ಸು ಬುದ್ಧಿಗಳು ಕರ್ಮಾನುಸಾರವಾಗಿ ಸಂಸ್ಕೃತವಾಗುತ್ತವೆ. ಕರ್ಮಗಳಿಂದ ಸಂಸ್ಕೃತವಾಗಿ ಬುದ್ಧಿಯು ಪೂರ್ಣವಾದ ಉತ್ತಮ ಸ್ಥಿತಿಯನ್ನು ಪಡೆಯಬೇಕಾಗಿರುತ್ತದೆ. ಮಣಿ ಮಂತ್ರೌಷಧಿಗಳ ಸಹಾಯವೂ ಕರ್ಮಗಳಲ್ಲಿ ಸೇರಿಕೊಳ್ಳುತ್ತವೆ. ಜತೆಗೆ ವಿದ್ಯಾ ಪ್ರಾಪ್ತಿಗಾಗಿ ಲಿಪಿ, ಪಠನ, ಲೇಖನಗಳ ಅಭ್ಯಾಸ ಸಂಸ್ಕಾರವು ಏರ್ಪಟ್ಟಿರುವುದು. ವಿದ್ಯಾಭ್ಯಾಸವೆಂದರೆ ಮಾನವರು ವ್ಯವಹಾರ ಸೌಲಭ್ಯಕ್ಕೆ ಭಾಷೆಯ ಉಚ್ಚಾರಣೆಗನುಗುಣವಾಗಿ ಗುರುತುಗಳನ್ನು ಮಾಡಿಕೊಂಡಿರುವ ಲಿಪಿಗಳ ಪರಿಚಯವಲ್ಲ. ಲಿಪಿಗಳ ಮೂಲಕ ತಿಳಿಯುವ ಪ್ರಾಪಂಚಿಕ ವಿಷಯಗಳ ಸಂಗ್ರಹವಲ್ಲ; ಉಲ್ಲೇಖಿತವಾದ ವಿಷಯಗಳನ್ನು ಲಿಪಿಗಳ ಮೂಲಕ ಪರಿಚಯ ಮಾಡಿಕೊಳ್ಳಬಹುದೇ ಹೊರತು ವಿದ್ಯಾಭ್ಯಾಸವಾಗುವುದಿಲ್ಲ. ವಿದ್ಯಾಭ್ಯಾಸವು ಸಂಸ್ಕೃತಿಗೆ, ಆತ್ಮಸಂಸ್ಕೃತಿಗೆ ಮೂಲಾಧಾರವೂ ಪರಮ ಶ್ರೇಯಃಪ್ರದ ಪ್ರಯೋಜನವೂ ಆಗಿರುತ್ತದೆ. ವಿದ್ಯಾಭ್ಯಾಸವು ಸ್ವಸ್ವರೂಪ ಜ್ಞಾನಾನುಭವಕ್ಕಾಗಿಯೇ; ಶಾರೀರಕ ಮಾನಸಿಕ ವ್ಯಾಪಾರಗಳ ಸಂಯಮನಾದಿಗಳಿಂದ ಇದು ಸಾಧ್ಯ * ಯಂತ್ರಾದಿಗಳು

* [ ಜ್ಞಾನಲಕ್ಷಣಂ — ಭಗವದ್ಗೀತಾ ಅ. ೧೩ – ಶ್ಲೋ. ೭–೧೧ ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನುಷ್ಯರ ವ್ಯವಹಾರ ಸೌಕರ್ಯಗಳನ್ನು ಹೆಚ್ಚಿಸುವುವು. ಸೌಕರ್ಯವು ಹೆಚ್ಚಿದಷ್ಟೂ ಸಂಸ್ಕೃತಿ ಕರ್ಮಗಳು ದೂರೀಕೃತವಾಗಿ ಮಾನವರು ಯಂತ್ರಗಳಂತೆ ಪರಾವಲಂಬಿಗಳಾಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವರು; ಆತ್ಮಸಂಸ್ಕೃತಿಗೆ ಲೋಪವಾಗುವುದು. ಉನ್ನತ ಸೋಪಾನವನ್ನು ಏರುವುದಕ್ಕೆ ಅಡ್ಡಿಯಾಗಿ ಪಶುಗಳ ಇಂದ್ರಿಯ ಚಾಪಲ್ಯಗಳ ಮಟ್ಟದಲ್ಲಿ ಇರುವಂತಾಗುವುದರಿಂದ ಯಂತ್ರೋಪಯೋಗವು ವಿಮುಖ ಸಂಸ್ಕೃತಿ ಎಂದು ಹೇಳಬೇಕಾಗುವುದು. ಸುಖಶಾಂತಿಗಳಿಗೆ ಭಂಗವನ್ನುಂಟುಮಾಡುವುವರಲ್ಲಿ ಇದು ಮೊದಲನೇ ಸ್ಥಾನವನ್ನು ಹೊಂದಿರುತ್ತದೆ. ಇದರಂತೆ ಮಂತ್ರ ಪ್ರಯೋಗಗಳೂ ಮಾನವ ಶಾಂತಿಗೆ ಭಂಗ ತರುವ ಪ್ರಸಂಗಗಳಿದ್ದಾಗ್ಗೂ ಪ್ರಜಾನೀತ್ಯನುಶಾಸನ ಕ್ರಮದಲ್ಲಿ ನಡೆಸುವ ತಪಃಫಲವಾದ ಮಂತ್ರ ಪ್ರಯೋಗಗಳಿಂದ ಪರಮಲಾಭವೂ ಶ್ರೇಯಸ್ಸೂ ಲಭಿಸುವುವು.

ವಿದ್ಯಾಭ್ಯಾಸ ಸೋಪಾನಗಳ ವೀಕ್ಷಣೆಯಿಲ್ಲದ ಆರ್ಥಿಕ ಸಂಪದ್ವೈಭವಗಳು ಡಾಂಭಿಕವೆನಿಸುವುವು. ಇವು ವ್ಯವಹಾರವನ್ನೂ ಅನುಸಂಧಾನವನ್ನೂ ಪ್ರತ್ಯೇಕಿಸುವುವು. ಅಧಿಕಾರಾದಿ ಬಲಪ್ರಯೋಗಗಳಿಗೆ ಬಲಿಯಾಗಿರುವವರು ಸ್ವೋತ್ಕರ್ಷ ಪ್ರಕಾಶಕ್ಕೆ ತಮ್ಮದೇ ವಿದ್ಯಾಭ್ಯಾಸ ಎಂದುಕೊಳ್ಳಬಹುದು. ಇದು ವಿಮುಖ ವಿದ್ಯಾಭ್ಯಾಸ ಕ್ರಮವೆನಿಸುವುದು. ವಿವೇಕವು ತಲೆದೋರಿದಂತೆ ವಿಮುಖ ಹಂತಗಳಿಂದ ದುರ್ಮುಖವಾ ಸುಮುಖ ಹಂತಗಳನ್ನು ಏರುವ ಕ್ರಮಗಳು ಬುದ್ಧಿಗೆ ಪ್ರಕಾಶವಾಗುವುವು. ಕರಕಮಲಸಂಜನನವೆಂಬ ಸಂಸ್ಕೃತಿಯು ಪರಮಹಂಸ ಅವಸ್ಥೆಗೆ ಸೇರಿಕೊಂಡಿರುವುದು.

ವಿದ್ಯೆಯು ಅಭ್ಯಾಸದಿಂದ ಅಂದರೆ ಪುನಃ ಪುನಃ ಆವರ್ತಿಮಾಡುವುದರಿಂದ ಅನುಸೃತವಾಗಿ ಬರುವುದು. (ಅಭ್ಯಾಸಾನುಸಾರಿಣೀ ವಿದ್ಯಾ) ವಿದ್ ಎಂದರೆ ಕೇವಲ ತಿಳಿವಳಿಕೆ ಎಂದಾಗುವುದಿಲ್ಲ. ಅನುಷ್ಠಾನ, ಅನುಭವ ಪರವಾದ ತಿಳಿವಳಿಕೆಯಾಗಿರುತ್ತದೆ. ವಿದ್ಯೆಯು ಶ್ರೇಯಃ ಪ್ರಾಪ್ತಿಗೆ ನೇರವಾಗಿ ಅಥವಾ ಪರಂಪರೆಯಾಗಿ ಸಹಕರಿಸುವ ಅನೇಕ ಸಂಖ್ಯೆಯ ಕಲೆಗಳನ್ನು ಅಭ್ಯಾಸ ಮಾಡುವುದಕ್ಕೆ ತಕ್ಕ ಸಂಸ್ಕೃತಿ ಕಲಾಪಗಳು ಉಕ್ತವಾಗಿವೆ. ವಯಸ್ಸು, ಭೂಸನ್ನಿವೇಶ, ಆವರಣ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಣ ಕರ್ಮ ಶಕ್ತಿ; ಶಿಕ್ಷಕರ ಸಾನ್ನಿಧ್ಯಗಳಿಗೆ ತಕ್ಕಂತೆ ಶಾಸ್ತ್ರಕಲೆಗಳು ಅಭ್ಯಾಸಕ್ಕೆ ನಿಲುಕುವುವು. ಈ ಅಭ್ಯಾಸದಿಂದ ಜೀವನದಲ್ಲಿ ಮಾರ್ಪಾಡಾಗುವುದು; ಜೀವನವು ಸುವ್ಯವಸ್ಥಿತವಾಗುವುದು. ಉಚಿತವಾದ ಸಂಸ್ಕಾರಗಳ ಪೂರ್ವಕ ಅಭ್ಯಾಸಕ್ಕೆ ಆರಂಭಿಸಿದರೆ ಯಶಸ್ವಿಯಾಗಿ ಸಿದ್ಧಿಯನ್ನು ಪಡೆಯಬಹುದು. ಇದು ಜೀವನದಲ್ಲಿ ಶರೀರದ ಜನ್ಮಕ್ಕಿಂತಲೂ ವಿಲಕ್ಷಣವಾಗಿ ಕರ್ಮ ಕ್ಷೇತ್ರದಲ್ಲಿ ಜನ್ಮವೆತ್ತಿದಂತಾಗುವುದು. ಇದು ದ್ವಿಜ ಸಂಸ್ಕೃತಿ.

ಕೇವಲ ಶ್ರುತಿಗಳನ್ನು ಅಧ್ಯಯನ ಮಾಡುವ ಸಂಪ್ರದಾಯದಲ್ಲಿ ವೇದಾಭ್ಯಾಸಕ್ಕೆ ಅಧಿಕಾರವನ್ನು ಕೊಡುವ ಸಂಸ್ಕೃತಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಉಪನಯನ, ದ್ವಿಜ ಸಂಸ್ಕಾರಗಳನ್ನು ಉಲ್ಲೇಖಿಸಿರುತ್ತಾರೆ. ವಸ್ತುತಃ ಜೀವನ ಕಾರ್ಯದ ಅಭ್ಯಾಸಕ್ಕೆ ಆರಂಭವಾಗುವಾಗಲೂ ಒಂದು ಬಗೆಯ ಅಭ್ಯಾಸವು ಮುಗಿದು ಬೇರೊಂದಕ್ಕೆ ಪ್ರವೇಶಿಸುವಾಗಲೂ ವಿಶಿಷ್ಟವಾದ ಪ್ರತಿಯೊಂದು ಶಿಕ್ಷಣದ ಹಂತದಲ್ಲಿಯೂ ದ್ವಿಜ ಸಂಸ್ಕಾರವು ಸ್ತ್ರೀಪುರುಷರಾದಿ ಪ್ರಜಾವರ್ಗಕ್ಕೆಲ್ಲಾ ಸ್ವತ ಏವ ವಿವಿಧವಾಗಿ ಮತ್ತು ಸಮಯೋಚಿತವಾಗಿ ದೊರೆಯುವುದು.

ಅಖಂಡವಾಗಿ ತುಂಬಿರುವ ಆತ್ಮನು ಸಂಕಲ್ಪ ಸಿದ್ಧಿಗಾಗಿ ಸ್ತ್ರೀ ದೇಹವನ್ನೂ ಪುರುಷದೇಹವನ್ನೂ ಋತ, ಸಂಸ್ಕೃತಿ, ಪ್ರಕೃತಿ ನಿಯಮಗಳಿಗೆ ಅನುಸಾರವಾಗಿ ಧರಿಸಬೇಕಾಗಿರುತ್ತದೆ. ಸ್ತ್ರೀ ದೇಹದಲ್ಲಿಯೂ ಪುರುಷ ದೇಹದಲ್ಲಿಯೂ ಇರುವ ಆತ್ಮವು ಒಂದೇ ಆಗಿರುತ್ತದೆ; ಸಂಕಲ್ಪಾನುಸಾರ ಬೇರೆ ಬೇರೆಯಾಗಿರುವಂತೆ ಕಾಣುವುದು. ಒಂದೇ ಆತ್ಮವು ಒಂದು ಜನ್ಮದಲ್ಲಿ ಪುರುಷ ದೇಹಿಯಾಗಿ ಇನ್ನೊಂದು ಜನ್ಮದಲ್ಲಿ ಸ್ತ್ರೀ ದೇಹಿಯಾಗಿ ಆಯಾ ಸಂಕಲ್ಪೇಷ್ಟಾರ್ಥಗಳನ್ನು ಅನುಭವಿಸುವುದಾಗಿದೆ. ಆದುದರಿಂದ ಸ್ತ್ರೀ ಪುರುಷರು ತಮ್ಮ ಜನ್ಮ-ಜೀವಾವಧಿ ಜೀವನ ವಿಚಾರಗಳ ಕರ್ತವ್ಯ ನಿರ್ವಾಹ ಮಾಡುವುದಕ್ಕೆ ತಕ್ಕಂತೆ ವಿವೇಕವನ್ನುಂಟು ಮಾಡುವ ಅಭ್ಯಾಸಗಳನ್ನು ಹೊಂದಬೇಕು. ಮೋಹದಿಂದ ತಮ್ಮ ಕರ್ತವ್ಯ ನಿರ್ವಾಹದ ಶಿಕ್ಷಣ ಅಭ್ಯಾಸಗಳನ್ನು ಬಿಟ್ಟರೂ ವ್ಯಾಮೋಹದಿಂದ ತಮ್ಮ ಜೀವನ ಕರ್ತವ್ಯ ನಿರ್ವಾಹಕ್ಕೆ ಬೇಕಾದ ಶಿಕ್ಷಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅಭ್ಯಾಸಗಳನ್ನು ಹೊಂದಿದರೂ ಆತ್ಮ ದ್ರೋಹ, ಜೀವನ ದ್ರೋಹ, ರಾಷ್ಟ್ರ ದ್ರೋಹಗಳನ್ನು ಮಾಡಿದಂತಾಗಿ ತಾವೂ ಇತರರೂ ದುಃಖಾನುಭವಿಗಳಾಗುವಂತೆ ಮಾಡುವರು. ಕರ್ತವ್ಯ ನಿರ್ವಾಹಕ್ಕೆ ಅನುರೂಪವಾದ ಶಿಕ್ಷಣಾಭ್ಯಾಸಗಳು ಸ್ತ್ರೀಯರಿಗೆ ವಿವಾಹಾನಂತರ ಭರ್ತೃ ಗುರುಮುಖೇನ ಲಬ್ಧವಾಗುವುವು. ಬಾಲ್ಯದಲ್ಲಿ ಮಾತಾಪಿತೃಗಳು ಸರ್ವ ಸಾಮಾನ್ಯವಾದ ನಡೆ ನುಡಿಗಳಲ್ಲಿ ಶಿಕ್ಷಣಾಭ್ಯಾಸಗಳನ್ನು ಕೊಡುತ್ತಾರೆ.

ಪ್ರಕೃತಿಯಲ್ಲಿ ಸೃಷ್ಟಿ ಸ್ಥಿತಿ ಲಯಗಳೆಲ್ಲವೂ ವಿದ್ಯಾ ಮತ್ತು ಕಲಾ ಸಂಸ್ಕೃತಿಮಯವಾಗಿವೆ. ಸಂಸ್ಕೃತಿಯು ಒಂದೊಂದು ಹಂತವೂ ಸಂಸ್ಕೃತವಾದ ಪೂರ್ಣ ವಸ್ತುವಿನಲ್ಲಿ ಕಾಣುತ್ತದೆ. ಸಂಸ್ಕೃತಿ ಲಬ್ಧವಾದ ವಸ್ತುಗಳು, ಪೂರ್ಣ ವಸ್ತುಗಳು ವಿಶಿಷ್ಟವಾದ ಗುಣಶಕ್ತಿಕರ್ಮಗಳನ್ನು ಹೊಂದಿ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಗಳಾಗುತ್ತವೆ. ಸೃಷ್ಟಿಯಲ್ಲಿ ಕಾಣುವ ಸೌಂದರ್ಯವೇ ಸ್ಥಿತಿಯಲ್ಲಿಯೂ ಸ್ಥಿತಿಯಲ್ಲಿರುವ ಸೌಂದರ್ಯವು ಸೃಷ್ಟಿಯಲ್ಲಿಯೂ ಕಾಣುವುದು. ಮತ್ತು ನಾಶವೆಂದು ಜನತೆಯು ತಿಳಿದಿರುವ ಲಯದಲ್ಲಿಯೂ ಸೃಷ್ಟಿಸ್ಥಿತಿಗಳ ಸೌಂದರ್ಯವು ಎದ್ದು ಕಾಣುವುದು. ಸೃಷ್ಟಿ ಸ್ಥಿತಿಗಳಲ್ಲಿ ಲಯದ ಸೌಂದರ್ಯವು ಅಡಕವಾಗಿರುವುದೂ ಸೌಂದರ್ಯವೇ ಆಗಿರುತ್ತದೆ. ಬಾಲ್ಯದ ಸೌಂದರ್ಯಕ್ಕೂ ತಾರುಣ್ಯದ ಸೌಂದರ್ಯಕ್ಕೂ ವೃದ್ಧಾಪ್ಯದ ಸೌಂದರ್ಯಕ್ಕೂ ಆಪಾತತಃ ವ್ಯತ್ಯಾಸವಿದೆ. ಅವುಗಳಲ್ಲಿ ಏಕಪ್ರಕಾರವಾಗಿ ಕೂಡಿ ಇರುವ ಗುಣಶಕ್ತಿಕರ್ಮಗಳನ್ನು ಸಾಕ್ಷಾತ್ಕರಿಸಿಕೊಂಡು ಆನಂದವನ್ನು ತಾಳಬೇಕು.

ಜಗತ್ತಿನಲ್ಲಿ ದೃಶ್ಯಮಾನವಾದುದೆಲ್ಲವೂ ಪ್ರಕೃತಿ ಪುರುಷರ ವಿದ್ಯೆ ಮತ್ತು ಕಲೆಗಳ ಫಲ. ಮತ್ತು ಅವುಗಳೇ ಸಂಸ್ಕೃತಿಯ ಕಾರಣಗಳಾಗಿ ನವೀನ ಗುಣಶಕ್ತಿಕರ್ಮಗಳನ್ನು ಸಮಯೋಚಿತವಾಗಿ ಹೊಂದಿ ಜಗದಭ್ಯುದಯಾದಿ ಚಲನವಲನಗಳನ್ನು ಉಂಟುಮಾಡುವುವು. ಆದುದರಿಂದ ಜಗತ್ತಿಗೆ ಜಗತ್ತೇ ಗುರುವಾಗಿ ಜಗತ್ತನ್ನು ಪೂರ್ಣವನ್ನಾಗಿಯೂ ವಿದ್ಯಾ ಮತ್ತು ಕಲಾಮಯವಾದುದನ್ನಾಗಿಯೂ ಮಾಡುವುದು. ಸಸ್ಯತರು ಗುಲ್ಮಮೂಲಿಕಾದಿಧಾತುಗಳೂ ಸ್ವತಃ ಪ್ರಕೃತಿ ಸ್ಥಿತಿಯಲ್ಲಿ ಸುಸಂಸ್ಕೃತಗಳಾಗಿ ನಾಮರೂಪವನ್ನು ಹೊಂದಿವೆ. ಅವುಗಳೇ ಸಪ್ತ ಮತ್ತು ವಿಷಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕೋಟಗಳಿಂದ ವಿಶಿಷ್ಟ ಗುಣಶಕ್ತಿಕರ್ಮಗಳನ್ನು ಪ್ರತ್ಯೇಕವಾಗಿ ಹೊಂದಿ ಆತ್ಮ ಸಂಸ್ಕೃತಿ ಸಾಧನಗಳಾಗುವುವು.

ವಿಶ್ವವನ್ನು ಎಡೆಬಿಡದೆ ತುಂಬಿರುವ ನಾದದ ಅಂತಸ್ತುಗಳನ್ನು ಸಾಕ್ಷಾತ್ಕರಿಸಿ ತಿಳಿದುಕೊಂಡು, ಸಂಗೀತ ಶಾಸ್ತ್ರ, ಗಾನ ಕಲೆಗಳಲ್ಲಿ ಅಳವಡಿಸಿ ವಿಶದಪಡಿಸಿರುತ್ತಾರೆ. ವಿಶ್ವಾಕಾಶದಲ್ಲಿ ನಾದದ ಅಂತಸ್ತುಗಳೂ ಸಮ, ವಿಷಮ ಸಂಪರ್ಕಗಳಿಂದ ಸಮ, ವಿಷಮ ಅವಸ್ಥೆಗಳಿಗೆ ಗುರಿಯಾಗಿ ಹಿತ ಮತ್ತು ಅಹಿತವಾದ ಪರಿಣಾಮಗಳಿಗೆ ಪಂಚಭೂತ ವ್ಯಾಪಾರಗಳು ಗುರಿಯಾಗುವಂತೆ ಮಾಡುವುವು. ಅವುಗಳ ವಿಷಮಾವಸ್ಥೆಗಳನ್ನು ದೂರೀಕರಿಸಲು ಮಾನವಾತೀತವಾಗಿ ಪ್ರಕೃತಿಯಿಂದ ಸ್ವಾಭಾವಿಕವಾಗಿ ಸಮತಾ ಕಾರ್ಯಗಳು ನಡೆಯುತ್ತವೆ. ಮಾನವರೂ ಸಮೀಕರಣ ಕಾರ್ಯಗಳನ್ನು ಕೈಕೊಳ್ಳಬೇಕು. ಸಮೀಕರಣ ಸಾಧನಗಳಲ್ಲಿ ಒಂದಾದ ಗಾನಕಲೆಯ ಪ್ರದರ್ಶನದಿಂದ ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಪಂಚಭೂತಗಳ ವ್ಯಾಪಾರಗಳು ಸಮಸ್ಥಿತಿಗೆ ನೆಲೆಗೆ ಬಂದು ವೃದ್ಧಿ ಹೊಂದುವಂತೆ ಮಾನವಪ್ರಯತ್ನಕ್ಕೆ ಅವಕಾಶವಿರುವುದು ಜಗದ್ವ್ಯಾಪಾರಗಳಿಗೆ ಸಮಾನವಾಗಿ ಶರೀರದೊಳಗೆ ಕಾಣಬಹುದಾದ ವ್ಯಾಪಾರಗಳು ಶರೀರಜನ್ಯವಾದ ಸಮೀಕರಣ ಗಾನಕಲೆಗಳಿಂದ ಉಪದೇಶಾನ್ವಿತವಾಣಿಯಿಂದ ಸುಸಂಸ್ಕೃತಗಳಾಗಿ ಶಾಂತಿಯನ್ನು ಸಮತೆಯನ್ನು ಹೊಂದಿ ಪೂರ್ಣವಾಗಿ ಸಮಾಧಿಯಲ್ಲಿರುವಂತಾಗುವುವು. ಚಿತ್ತಶುದ್ಧಿಯನ್ನುಂಟುಮಾಡುವುವು. ಶಾಸ್ತ್ರ, ಕಲೆಗಳು ಬೆಳೆದು ಬಂದಿರುವ ಕ್ರಮದಲ್ಲಿ ಶಿಕ್ಷಣಾಭ್ಯಾಸಗಳಿಂದ ಗಾನ ಶಾಸ್ತ್ರಕಲೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅದೇ ಕ್ರಮದಲ್ಲಿ ನಾದವನ್ನು ಹೊರಹೊಮ್ಮಿಸಿ ಅರ್ಪಿಸುವಾಗ ಸ್ವಂತ ಮತ್ತು ಸ್ವೇತರ ದೇಹಿಗಳ ಸಮತಾ ಆನಂದವು ಸಾಧಿಸಲ್ಪಡುವುದು. ಸಂಗೀತವನ್ನು ಅಭ್ಯಾಸ ಮಾಡಿ ಆನಂದವು ಸ್ವಾನುಭವಕ್ಕೂ ಮತ್ತು ಶ್ರೋತೃಗಳಾದ ಪರರ ಅನುಭವಕ್ಕೂ ಬರುವಂತೆ ಗಾನ ಮಾಡಬಹುದು. ನಾದದ ತರಂಗಗಳು ಅಂತಃ ಬಹಿಃ ಏಕರೂಪವಾಗಿ ಇರುವುದೇ (ಅಂದರೆ ಮನಸ್ಸಿನಲ್ಲಿ ನಾದವು ಮತ್ತು ನಾದದಲ್ಲಿ ಮನಸ್ಸು ಲಯವಾಗುವಂತೆ ಐಕ್ಯವಾಗುವುದೇ) ಜೀವ ಬ್ರಹ್ಮೈಕ್ಯವೆನಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅದರಂತೆಯೇ ಶಾಸ್ತ್ರಾಭ್ಯಾಸಗಳಿಂದಲೂ ಕವಿತೆಯಿಂದಲೂ ಪ್ರಕೃತಿ ವ್ಯಾಪಾರಗಳ ವಿವರಣೆಗಳನ್ನು ಹೃದಯಂಗಮವಾಗುವಂತೆ ಅಮೃತವಾಣಿಯಿಂದ ತಿಳಿಸಿದರೆ ಅಮೃತವಾಣಿಯು ಮನಸ್ಸಿನಲ್ಲಿ ಐಕ್ಯವಾಗಿ ಆನಂದ ಜನಕವಾಗುವುದು. ಚಿತ್ತ ಶುದ್ಧಿಯಾಗುವುದು. ಚಿತ್ರ ಶಿಲ್ಪಗಳೂ ಆಹಾರ ಪಾಕಗಳೂ ಪಚನಾದಿ ಕ್ರಿಯೆಗಳೂ ಹೀಗೆಯೇ ಆನಂದಜನಕಗಳಾಗುವುವು. ಇವೆಲ್ಲವೂ ಸ್ವತಃ ಸುಸಂಸ್ಕೃತಗಳಾಗಿ ಆತ್ಮ ಸಂಸ್ಕೃತಿಯ ಸಾಧನಗಳಾಗುವಂತಾಗಲು ಶಿಕ್ಷಣಾಭ್ಯಾಸಗಳು ಬೇಕಾಗುವುವು. ಸಂಸ್ಕೃತಿಯ ಪರಮಾವಧಿಯು ಆತ್ಮ ನಿಷ್ಠೆಯಲ್ಲಿ ಪರ್ಯವಸಾನವಾಗುವುದಾಗಿರಬೇಕು. ಜಗತ್ತಿನಲ್ಲಿ ದೃಶ್ಯವೆಲ್ಲವೂ ಸಂಸ್ಕೃತಿ ಜನ್ಯವೂ ಸಂಸ್ಕೃತಿ ಸಾಧನವೂ ಆಗಿರುವುದರಿಂದ ಪೂರ್ಣತೆ ಎಂಬ ಆತ್ಮನಿಷ್ಠೆಯು ಅನುಭವಕ್ಕೆ ಬರುವುದು. ಶಾಸ್ತ್ರಗಳಲ್ಲಿ ಕಂಡಂತೆ ಶಬ್ದಗಳ ಉಚ್ಚಾರಣೆ ಮತ್ತು ನಾದ ಇವುಗಳ ಸಂಸರ್ಗದಿಂದ ವಿದ್ಯುತ್ ಶಕ್ತಿಯು ಆವಿರ್ಭವಿಸಿ ಸಂಸ್ಕಾರಾನುಗುಣವಾಗಿ ಹಿತ ಮತ್ತು ಅಹಿತ ಫಲಗಳನ್ನು ಕೊಡುವುದು.

ಪ್ರಕೃತಿಯೆನಿಸಿಕೊಳ್ಳುವ ಶರೀರವುಳ್ಳ ದೇಹಿಯು ವಿಶಾಲವಾದ ಪಂಚಭೂತ ಪ್ರಕೃತಿಯ ಮತ್ತು ಧಾತು ಲತಾ ಗುಲ್ಮ ಮೂಲಿಕಾ ತರು ವನಸ್ಪತಿ ಪ್ರಕೃತಿಯ ಮಧ್ಯೆ ಜೀವನಯಾತ್ರೆಯನ್ನು ನಡೆಸಲು ಸ್ವೇತರವಾಗಿರುವ ಪ್ರಕೃತಿಯ ಸಹಾಯ ಸೌಕರ್ಯಗಳನ್ನು ಹೊಂದಲೇಬೇಕು. ಯಾವ ದೇಹಿಗೆ ಯಾವ ಪ್ರಕೃತಿ ವಸ್ತುಗಳಿಂದ ಸೌಕರ್ಯವಾಗುವುದೆಂಬುದನ್ನು ಪರೀಕ್ಷೆ ಮಾಡಿ ಶಾಸ್ತ್ರಜ್ಞರು ತಿಳಿದು ಉಲ್ಲೇಖಿಸಿರುತ್ತಾರೆ. ಸ್ನಾನ ಅಭ್ಯಂಗನಸ್ನಾನಾದಿ ಶೌಚವಿಷಯಗಳೂ ಆಹಾರ ವಸ್ತುವಿಷಯಗಳೂ ಚಿಕಿತ್ಸಾ ವಿಷಯಗಳೂ ಆಯುರ್ವೇದ ಆರೋಗ್ಯಶಾಸ್ತ್ರದಲ್ಲಿ ವರ್ಣಿತವಾಗಿವೆ. ಜ್ಯೋತಿಷ್ಯ ಶಾಸ್ತ್ರದ ಸಹಾಯದಿಂದ ದೇಹಿಯ ಭೂತ, ವರ್ತಮಾನ, ಭವಿಷ್ಯ ವಿಚಾರಗಳನ್ನು ಗೊತ್ತುಮಾಡಿಕೊಂಡು ದೇವತಾನುಸಂಧಾನ ಮಾಡಿ ದೈವಿಕವಾದ ಸಹಾಯದಿಂದ ಇಷ್ಟಾರ್ಥ ಸಿದ್ಧಿಗಳನ್ನು ಪಡೆದು ಸುಖ ಸಂಪತ್ತನ್ನು ಸಾಧಿಸಬಹುದು.

ಈ ವಿಧವಾದ ಶಾಸ್ತ್ರಗಳಲ್ಲಿ ಕಂಡ ಸಂಸ್ಕೃತಿ ಸಾಧನ ಅನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಧಾನ ವಿಷಯಗಳನ್ನು ತಿಳಿದು ಕಾರ್ಯ ರೂಪಕ್ಕೆ ತರುವುದರ ಮೂಲಕ ಪ್ರಕೃತಿಯನ್ನು ಅನುನಯದಿಂದ ಒಲಿಸಿಕೊಳ್ಳುವುದು ಭಾರತೀಯರಿಗೆ ನಿತ್ಯಾಭ್ಯಾಸವಾಗಿರುತ್ತದೆ. ಋತುಗಳ ಬದಲಾವಣೆಗೆ ತಕ್ಕಂತೆ ಸ್ವಾಭಾವಿಕವಾದ ಸಂಸ್ಕೃತಿ ಕ್ರಮದಲ್ಲಿ ತಾನೇ ತಾನಾಗಿ ಪ್ರಕೃತಿಯನ್ನು ಅನುಸರಿಸಿ ನಡೆಯುವುದು ಸಕಲ ಚರಾಚರಗಳಿಗೆ ರೂಢಿಯಾಗಿ ನೆಲೆಸಿರುತ್ತದೆ. ದೇಹಿಗೆ ದೃಷ್ಟವಾಗಿಯೂ ಅದೃಷ್ಟವಾಗಿಯೂ ಜೀವನದಲ್ಲಿ ಒದಗಲಿರುವ ನ್ಯೂನತೆ ಮತ್ತು ಅತಿರೇಕಗಳನ್ನು ಅಪೂರ್ಣತೆಯನ್ನು ಹೋಗಲಾಡಿಸಿ ಪೂರ್ಣತೆಯನ್ನು ಪಡೆಯುವ ಸಂಸ್ಕೃತಿಯನ್ನು ಪಾಲಿಸುವುದು ಕರ್ತವ್ಯವಾಗಿರುತ್ತದೆ. ಯೋಗಾಭ್ಯಾಸ, ದಿಂದಲೂ ಆಯುರ್ವೇದದ ಸೂಕ್ತಿ ಪಾಲನೆಗಳಿಂದಲೂ ಸಂಗೀತ, ಚಿತ್ರ ಶಿಲ್ಪ ಮೊದಲಾದವುಗಳಿಂದಲೂ, ಸಂಚಾರ, ತೀರ್ಥಯಾತ್ರಾದಿಗಳಿಂದ ಲೂ ನಿತ್ಯಕರ್ಮ, ಪೂಜಾ, ವ್ರತಾಚರಣೆಗಳಿಂದಲೂ ಮನಶ್ಶಾಂತಿಯನ್ನು ಪಡೆದು ಸಮಾಧಾನದ ಸಮಾಧಿಯಲ್ಲಿರಬಹುದಾದ ಸ್ಥಿತಿಯು ವಿದ್ಯಾಕಲಾಜ್ಞಾನಾನುಭವ ಸಂಸ್ಕೃತಿಯಿಂದಲೇ ಉಂಟಾಗಬೇಕಾಗಿದೆ.

ದ್ವಿಜ ಸಂಸ್ಕೃತಿ ಯೆನಿಸುವ ವಿದ್ಯಾಭ್ಯಾಸಾದಿಗಳು ಮನುಷ್ಯ ಜೀವನದಲ್ಲಿ ನಿಶ್ಶ್ರೇಯಸಾಭ್ಯುದಯ ಪ್ರದವಾಗಿರುವಂತೆ ಅನುಭವದಿಂದ ಕಂಡುಬಂದಿದೆ. ವ್ಯಕ್ತಿಗಳು ಅವರವರ ಗುಣ ಕರ್ಮಶಕ್ತಿಗಳಿಗೆ ತಕ್ಕಂತೆ ಆಯಾ ಗುರುವಿನ, ಶಿಕ್ಷಕನ ಆಶ್ರಯ (ಉಪನಯನ) ವನ್ನು ಹೊಂದ ಬಹುದಾದುದರಿಂದ ಬ್ರಾಹ್ಮಣಾಚಾರವನ್ನು ಪಾಲಿಸುವ ಸರ್ವರಿಗೂ ಸಾಮಾನ್ಯವಾಗಿರುತ್ತದೆ. ಅಲ್ಲದೆ ವಿಶ್ವದಲ್ಲೆಲ್ಲಾ ತತ್ವಾನ್ವೇಷಕರಿಗೆ ಈ ತತ್ವವು ಗೋಚರವಾಗುವುದು. ಮಾನವೇತರ ದೇಹಿಗಳಲ್ಲಿಯೂ ಸ್ವಾಭಾವಿಕವಾಗಿ ನಡೆಯುವ ಶಿಕ್ಷಣ ದ್ವಿಜಸಂಸ್ಕೃತಿಯು ಸರ್ವರಿಗೂ ಸಂತೃಪ್ತಿ, ಸಮಾಧಾನ ಮತ್ತು ಆನಂದವನ್ನುಂಟುಮಾಡುವುದು.

ಸ್ವಭಾಷಾ, ಪರಭಾಷಾ ಪುಸ್ತಕ ಪಠನವಾಗಲೀ ಲೇಖನಾಭ್ಯಾಸ ವಾಗಲೀ ವಿದ್ಯಾಭ್ಯಾಸವೆಂದು ತಿಳಿಯುವುದರಿಂದ ಆತ್ಮವಂಚನೆ, ದೇಶ ವಂಚನೆಗಳಿಗೆ ಅವಕಾಶವಾಗುವುದು. ಸದಾಚಾರ, ಶಿಷ್ಟಾಚಾರ, ಸಂಪತ್ತುಗಳ ಲಾಭದಿಂದ ಸದ್ಗೃಹಸ್ಥಾಶ್ರಮ ಕರ್ತವ್ಯ ಕಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ವಾಹವಾಗಬೇಕಾಗಿದೆ. ಇದಕ್ಕೆ ಕೇವಲ ಪುಸ್ತಕ ಪಠನವಾಗಲೀ ಪ್ರಾದೇಶಿಕಾದಿ ಸಂಕುಚಿತ ಭಾವನೆಗಳಾಗಲೀ ಅಡಚಣೆಯಾಗಬಹುದು. ಜೀವನಕ್ಕೆ ಅವಶ್ಯಕವಾದ ವಿವಿಧ ವೃತ್ತಿಗಳನ್ನು ಹೊಂದಿರುವ ಸಂಸಾರ ನೌಕೆಯಲ್ಲಿ ಕೇವಲ ಭಾಷಾ ಲೇಖನೋದ್ಯಮಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ತ್ರೀಯರಾಗಲೀ ಪುರುಷರಾಗಲೀ ಪರಿಗ್ರಹಿಸಿದರೆ ಜೀವನ ಸಾಧನಗಳಾದ ವೃತ್ತಿಗಳ ಸಮತೆಯು ತಪ್ಪಿ ವೈಷಮ್ಯವು ತಲೆದೋರಿ ಸಂಸಾರ ನೌಕೆಯು ಕುಂದು ಕೊರತೆಗಳಿಗೆ ಒಳಗಾಗಿ ದುಃಖದಲ್ಲಿ ಮುಳುಗುವುದು. ಅಂತಹ ಋಣಾನುಬಂಧವು ಅಂಕುರಿಸದಂತೆ ಸಂಕಲ್ಪಾಧ್ಯಯನ ಸಾಯಗಳನ್ನು ಹೊಂದಲು ಸದಾ ಯತ್ನಿಸಬೇಕು.

## ಪರಸ್ಪರಭಾವನಾ ಸಂಸ್ಕೃತಿ

ಋತಕ್ಕೆ ತಕ್ಕಂತೆ ಪ್ರಕೃತಿಯು ಪ್ರಜಾಪತಿಯ ಪ್ರಜೆಗಳಿಗೆ ಹಿತವಾಗುವ ಲೀಲೆಯನ್ನು ತೋರಿಸುವುದು. ಪ್ರಜೆಗಳೂ ಸಹ ಪ್ರಕೃತಿ ಲೀಲೆಯ ಮರ್ಮವನ್ನು ತಿಳಿದು ತಮ್ಮ ಪ್ರಭುತ್ವ (ಪ್ರಜಾಪತಿತ್ವ) ಶಕ್ತಿಯನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು. ಪ್ರಕೃತಿ ಮತ್ತು ಪ್ರಜೆಗಳ ಈ ವಿಧವಾದ ಪರಸ್ಪರ ಭಾವನೆಯಿಂದ (ಸೆನ್ಸ್ ಆಫ್ ಕೋ-ಆಪರೇಷನ್) ಜೀವನಕರ್ಮ ಯಾತ್ರೆಯು ನಿರ್ವಾಹವಾಗುವುದು. ಪ್ರಜೆಗಳೂ ಸಹ ತಮ್ಮ ತಮ್ಮಲ್ಲಿಯೂ ಪರಸ್ಪರ ಭಾವನೆಯನ್ನು ಹೊಂದುವರು. ಸರ್ವರಲ್ಲಿಯೂ ದೇವತ್ವವಿದ್ದು ಸರ್ವರೂ ದೇವತ್ವ (ಸ್ವಸ್ವರೂಪಜ್ಞಾನ) ವನ್ನು ಸಾಧಿಸುವವರೇ ಆಗಿರುವುದರಿಂದ ಪರಸ್ಪರ ಉಪಕಾರ, ಸಹಾಯ, ಸಹಕಾರ ಕರ್ಮಗಳನ್ನೇ ನೆರವೇರಿಸಬೇಕೆಂಬ ತತ್ವವು ಪರಮಾದರ್ಶವಾಗಿರುತ್ತದೆ. ಈ ಪರಸ್ಪರ ಭಾವನಾ ವಿಚಾರವಾಗಿ ತಪಸ್ಸು ನಡೆಯಿಸಿ ಜೀವನಯಜ್ಞ, ಅನುಸಂಧಾನ, ಅನುಷ್ಠಾನ ಮಾರ್ಗಗಳನ್ನು ಬ್ರಹ್ಮವಿವರ್ತವಾದ ಶಬ್ದಬ್ರಹ್ಮವು ಶ್ರುತಿಮೂಲಕ ಗೋಚರಪಡಿಸುತ್ತದೆ. "ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ" —ಪರಸ್ಪರ ಭಾವನೆಯಿಂದಲೇ ಶ್ರೇಯಸ್ಸು ಲಭಿಸಬೇಕು. ಬ್ರಹ್ಮಮಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಪಂಚದಲ್ಲಿ ಒಂದು ಅಥವಾ ಒಬ್ಬ ದೇಹಿಯ ಶ್ರೇಯಸ್ಸಿಗೆ ಪ್ರಪಂಚದ ಉಳಿದ ಚರಾಚರಾತ್ಮಕ ದೇಹಿಗಳ ಪ್ರಭಾವವು ಆವಶ್ಯಕ. ದೇಹಿಗಳಿಗೆ ಆವಶ್ಯಕವಾದ ಆಹಾರದಲ್ಲಿ ಪೃಥ್ವೀ ತತ್ವ ಪ್ರಧಾನವಾಗಿರುವುದು. ಬ್ರಹ್ಮಸ್ವರೂಪವಾದ ಅನ್ನವು ಬ್ರಹ್ಮಸ್ವರೂಪವಾದ ಅಗ್ನಿ, ಸೂರ್ಯ, ಜಲ, ವಾಯು, ಆಕಾಶ ತತ್ವಗಳಿಂದಲೇ ಬೃಂಹಿತವಾಗಬೇಕು. ಹೀಗೆ ಪಂಚಭೂತಗಳು ಪರಸ್ಪರ ಭಾವನೆಯಿಂದ ಸೇರಿ, ಸೃಷ್ಟಿ ಸ್ಥಿತಿ ಲಯ ಗಳನ್ನು ಪರಿಪೋಷಿಸುವಂತೆ ದೇಹಿಗಳೂ ಸಹ ಸ್ವಕರ್ಮಗಳನ್ನು ಪರಸ್ಪರ ಭಾವನೆಯೆಂಬ ಹೊಂದಿಕೆಯಿಂದ ಆಚರಿಸಬೇಕು. ದೇಹಿಗಳು ಪರಸ್ಪರ ಸಮೀಪದಲ್ಲಿರುವುದರಿಂದ, ಒಂದುಗೂಡುವುದರಿಂದ ಮತ್ತು ದೂರಸರಿಯುವಿಕೆಯಿಂದ ಪರಸ್ಪರ ಭಾವನೆಯ ಸಹಕಾರವು ನೆರವೇರುವು ದೆಂಬುದನ್ನು ನೆನಪಿನಲ್ಲಿಡಬೇಕು. ಪರಸ್ಪರ ಭಾವನಾ ಸಂಸ್ಕೃತಿಯು ಧನ್ವಂತರಿ, ಪ್ರಕೃತಿ ಶಾಸ್ತ್ರಗಳ ಆಧಾರದ ಮೇಲೆ ರೂಢಿಸಲ್ಪಟ್ಟಿರುವುದ ರಿಂದ ಆಯಾಯ ಮಿತಿಯಲ್ಲಿ ಈ ಸಂವಿಧಾನವನ್ನು ಅಳವಡಿಸಿ ಕೊಳ್ಳಬಹುದಾದ ಅತ್ಯುತ್ತಮವಾದ ಮಾರ್ಗಗಳಿರುವುವು.

ಪರಸ್ಪರ ಭಾವನೆಯೆಂದರೆ ಯಾವ ವ್ಯಕ್ತಿಯಾದರೂ ಮತ್ತಾವ ವ್ಯಕ್ತಿಯೊಡನೆಯಾದರೂ ಕೂಡಿಯಾಡುವುದೆಂದಲ್ಲ. ಸ್ತ್ರೀ ಪುರುಷರ ವಿವಾಹವೂ ಬ್ರಾಹ್ಮೀ ಸಂಸ್ಕೃತಿಯ ಮಿತಿಯಲ್ಲಿ ನಿಯಮಕ್ಕೆ ಒಳಗಾಗಿ ರುವುದು. ಇದು ಸ್ವಾಭಾವಿಕ. ಮಾನವಹಂತದ ಕೆಳಗಿರುವ ಪ್ರಾಣಿಗಳು ವಿವೇಚನೆಯಿಲ್ಲದೆ ವರ್ತಿಸುವವುಗಳೆಂಬದಾಗಿ ಭಾವಿಸಬಹುದಾದರೂ ಋತ, ಋತು, ಶಾರೀರಕ ನಿಯಮವಾದಿಗಳನ್ನು ಅವು ಮೀರಲಾರವು. ಈ ವಿಧವಾದ ಉತ್ತಮ ಆದರ್ಶ ಪಾಠವನ್ನು ಮಾನವರೂ ಪ್ರಾಣಿ ಗಳಿಂದ ಕಲಿಯಬೇಕಾಗಿದೆ. ಆವರಣಗಳ ಮತ್ತು ಋಣಾನುಬಂಧದ ಮಿತಿಯಲ್ಲಿ ವಿವಾಹಾದಿಗಳು ಯುಕ್ತಿಯುಕ್ತವಾಗಿ ಉನ್ನತ ಸೋಪಾನ ಗಳನ್ನು ಏರುವ ಕ್ರಮದಲ್ಲಿಯೇ ಒದಗುವುವು. ಸಂಸ್ಕೃತಿಯ ವಿಚಕ್ಷಣೆಗೆ ಮೀರಿದ ವ್ಯಾಪಾರಗಳೂ ನಡೆದು ಋಣ ಕರ್ಮಸಾಧನೆಗಳಾಗುವುವು. ಆದರಂತೆ ವಿಶ್ವದಲ್ಲಿ ಸರ್ವರೂ ವಿವೇಚನೆಯಿಲ್ಲದೆ ಸರ್ವರೊಡನೆ ಬೆರೆದು ಶಾರೀರಕ ಮಾನಸಿಕ ವ್ಯಾಪಾರಗಳಲ್ಲಿ, ಆಹಾರ ವಿಹಾರಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆರೆಯುವುದು ಅಪಾಯಕರವೆಂಬುದು ಸಂಶೋಧನಾದಿ ಶಾಸ್ತ್ರೀಯ ಪ್ರಯೋಗಗಳಿಂದ ಸಿದ್ಧಾಂತವಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಬಂಧನಕ್ಕೆ ಸಿಕ್ಕಿದರೆ ತಕ್ಕ ಸಂಸ್ಕೃತಿ ವಿಧಾನದಿಂದ ಬಾಧೆಯನ್ನು ತಪ್ಪಿಸಿಕೊಳ್ಳಬಹುದು. ಈ ಬಗೆಯ ಮಿತಿಯ ತಿಳಿವಳಿಕೆಯ ಪ್ರಸಾರವು ರಾಜಶಾಸನಕ್ಕೆ ಸೇರಿದುದು. ವ್ಯಕ್ತಿ ಕುಟುಂಬಾದಿಗಳ ರಾಜರು ಕೇವಲ ಇಂದ್ರಿಯ ಚಾಪಲ್ಯಗಳಿಗೆ ಮರುಳಾಗಿ ವಿವಿಧವಾಗಿ ಪರಿಚಿತಾಪರಿಚಿತರೊಡನೆ ಸೇರಿ ಶಾರೀರಕ, ಮಾನಸಿಕ, ವ್ಯಾವಹಾರಿಕ, ಪಾರಮಾರ್ಥಿಕ ಕೆಲಸಗಳನ್ನು ಹಠಾತ್ತಾಗಿ ನಡೆಸುವುದರಿಂದ ಯೋಗಭಂಗವಾಗುವುದು.

ಕೇವಲ 'ಪ್ರಾಣಿಧರ್ಮ' ವಾದ ಊಟ ಉಪಚಾರಗಳಲ್ಲಿಯೂ ಬಹುಜನಸಂದಣಿಯನ್ನು ತಪ್ಪಿಸಬೇಕೆಂದು ಸಂಸ್ಕೃತಿಯು ಸಾರುವುದು. ಸಂಘಾನ್ನವು ದೂಷ್ಯವಾದುದರಿಂದ ವೈಶ್ವದೇವಾದಿ ಸಂಸ್ಕೃತಯೋಗಾನುಷ್ಠಾನಾಸಕ್ತರು ಸ್ವಯಂಪಾಕಾದಿ ಯೋಗದಿಂದ ಸಿದ್ಧಿಯನ್ನು ಪಡೆಯುವುದರ ರಹಸ್ಯವೇ ಪರಸ್ಪರ ಭಾವನಾ ಸಂಸ್ಕೃತಿ. ಇಂತಹ ವೈಶ್ವದೇವಾದಿ ಯಜ್ಞಗಳ ತತ್ತ್ವವನ್ನು ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ ವ್ಯಾವಹಾರಿಕವಾಗಿ ಕಾರ್ಯರೂಪಕ್ಕೆ ತಿರುಗಿಸಬೇಕಾಗಿರುತ್ತದೆ. ಇದರಿಂದ ಪ್ರತಿಯೊಬ್ಬ ಪ್ರಜೆಯೂ ವಿಷಸಂಘಟನೆಗಳಿಂದ ಪಾರಾಗಿ ಮೃತ್ಯುಂಜಯರಾಗಬಹುದೆಂಬ ಯೋಗಕ್ಷೇಮಲಾಭಕ್ಕೆ ಪಾತ್ರರಾಗುವವರಾಗುತ್ತಾರೆ.*

ಶ್ರೀ ಶಂಕರಾಚಾರ್ಯರು ಉಪದೇಶ ಮಾಡಿರುವಂತೆ ಸ್ವ ಮತ್ತು

---

* ದೇಶರಾಜ್ಯ ವಿಪ್ಲವಾದಿ ಕಾರಣಾಂತರದಿಂದ 'ಅನ್ನಸಂತರ್ಪಣೆ'ಯ ನೆಪದಲ್ಲಿ ನೂರಾರು, ಸಾವಿರಾರು ಜನರನ್ನು ಊಟಕ್ಕೆ ಸೇರಿಸುವುದೂ, ಪ್ರೋತ್ಸಾಹಿಸುವುದೂ ಬ್ರಾಹ್ಮೀ ಸಂಸ್ಕೃತಿಗೆ ದೂರವಾದುದು. ಪ್ರಜೆಗಳ ದುಃಸ್ಥಿತಿಗೆ ಇದು ಪ್ರಥಮ ಕಾರಣವಾಗಿರುತ್ತದೆ. ಆಲಸ್ಯ, ಜಡತಾ, ತೃಪ್ತಿ, ಪಕ್ಷಪಾತ, ಆರೋಗ್ಯಹಾನಿ, ರೋಗಪ್ರಾಪ್ತಿ, ಧನಹಾನಿ, ಮಾನಹಾನಿ, ಶಾಪಲಾಭಗಳಿಗೆ ಬಲಿಯಾಗಿಸುವ ಈ ಸಾಮೂಹಿಕ ಭೋಜನಕೂಟವನ್ನು ಸರ್ವಥಾ ತಪ್ಪಿಸುವುದು ವೈಯಕ್ತಿಕಾದಿ ರಾಜಶಾಸನಕ್ಕೆ ಸೇರಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪರರ ಹಿತಕ್ಕಾಗಿ ಯತ್ನಿಸುವ ಬಾಳು ಸಂಸಾರದಲ್ಲಿ ಸಾರಭೂತವಾದುದು (ಕಿಂ ಸಂಸಾರೇ ಸಾರಂ ಬಹುಶೋಽಪಿ ವಿಚಿಂತ್ಯಮಾನಮಿದಮೇವ | "ಮನುಜೇಷು ದೃಷ್ಟತತ್ತ್ವಂ ಸ್ವಪರಹಿತಾಯೋದ್ಯತಂ ಜನ್ಮ" ||).

## ದೇವತ್ವಸಾಧನ ಸಂಸ್ಕೃತಿ

ಸಸ್ಯಾದಿ ಮಾನವವರ್ಗ ಪರ್ಯಂತ ಚೇತನಗಳೆನಿಸುವ, ಪಿಂಡಾಂಡಗಳಾದ ದೇಹಿಗಳಲ್ಲಿಯೂ, ಅಚೇತನಗಳಲ್ಲಿಯೂ, ಬ್ರಹ್ಮಾಂಡದಲ್ಲಿಯೂ ದೇವತ್ವವನ್ನು ಸಾಕ್ಷಾತ್ಕರಿಸುವುದೊಂದು ಸಂಸ್ಕೃತಿಯು ಕಲ್ಪವಾಗಿರುತ್ತದೆ. ಪಿಂಡಾಂಡದಲ್ಲಿ ದೇವತ್ವವನ್ನು ಸಾಕ್ಷಾತ್ಕರಿಸುವುದಕ್ಕೆ ಶಿಕ್ಷಣರೂಪವಾದ ಮತ್ತು ಬ್ರಹ್ಮಾಂಡದಲ್ಲಿ ದೇವತ್ವವನ್ನು ಸಾಕ್ಷಾತ್ಕರಿಸಬಹುದಾದ ಉಪಾಯಗಳಿವೆ. ಪಿಂಡಾಂಡದಲ್ಲಿನ ದೇವತ್ವವು ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ಮಿತಿಯಲ್ಲಿದ್ದರೆ ಆ ಮಿತಿಯಲ್ಲಿಯೇ ಮುಂದುವರಿಯಬೇಕಾಗುವುದು. ಇದನ್ನು ಜನ್ಮದ ಆವರಣವು ಸಾಮಾನ್ಯವಾಗಿ ತಿಳಿಯಪಡಿಸುವುದು. ಇದೇ ಕುಲದೇವತಾ ಎಂದು ಹೇಳಲ್ಪಡುವುದು. ತಾತ್ಕಾಲಿಕವಾಗಿ ವ್ಯಕ್ತಿಯ ಸ್ವಾತಂತ್ರ್ಯ ಸಾಹಸಗಳಿಗೆ ತಕ್ಕಂತೆ ಇಷ್ಟ ದೇವತೆಯನ್ನೂ ಸಾಕ್ಷಾತ್ಕರಿಸಬಹುದಾಗಿದೆ. ಈ ಬಗೆಯ ಅನುಷ್ಠಾನವು ಸೋಪಾನಗಳಂತಿರುವುದೆಂದು ಸಂಸ್ಕೃತಿಯು ತಿಳಿಸುತ್ತದೆ. ಇಷ್ಟ ದೇವತೆ, ಕುಲದೇವಗಳ ತೇಜೋಂಶಗಳು ವ್ಯತ್ಯಸ್ತವಾದ ಪ್ರಮಾಣಗಳಲ್ಲಿದ್ದರೆ ವ್ಯವಸಾಯವೂ ಫಲವೂ ವಿರುದ್ಧಫಲಗಳನ್ನು ಕೊಡುವಂತಾಗಿ ಅನುಷ್ಠಾತೃವೂ ಸುತ್ತಮುತ್ತಲಿನವರೂ ದುಷ್ಟಫಲಾನುಭವಕ್ಕೆ ಗುರಿಯಾಗುವರು. ಈ ವಿವರವನ್ನು ಸಂಸ್ಕೃತಿವಿಧಾನವು ಪ್ರಯೋಗಗಳಿಂದ ಸ್ಪಷ್ಟಪಡಿಸಿ ಎಚ್ಚರಿಸಿ ಲೋಕೋಪಕಾರಕವಾಗಿದೆ. ವೈಯಕ್ತಿಕವಾಗಿ ಹೊಂದಿಕೊಂಡಿರುವ ದೇವತ್ವಸಾಕ್ಷಾತ್ಕಾರಾನುಷ್ಠಾನಗಳಿಗೆ ಬೇರೆಯಾಗಿ ಕಂಡು ಬಂದ ಅನುಷ್ಠಾನಗಳನ್ನು ದ್ವೇಷಿಸುವುದರಿಂದ ಪಾಷಂಡ ದೋಷವುಂಟಾಗಿ ಕರ್ಮದ, ಜೀವನದ ದೋಣಿಯನ್ನು ಅಜ್ಞಾ [illegible] ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಷಂಡ ದೋಷ ವಿದೂರೀಕರಣವೆಂಬ ಸಂಸ್ಕೃತಿಯಿಂದ ವಿಶ್ವದಲ್ಲಿ ಕಾಣಬರುವ ಪಂಥ ವೈವಿಧ್ಯಗಳನ್ನು ಸಹನೆಯಿಂದ ನೋಡಿ ಸಮಾಧಾನ ಹೊಂದಬಹುದಾದ ಸಂವಿಧಾನವೂ ಪರನೋಪಕಾರಕವಾಗಿ ಜಗದ್ರಕ್ಷಕವಾಗಿರುತ್ತದೆ. ಹೀಗೆ ದೇವಋಣ, ಋಷಿ ಋಣಾದಿಗಳನ್ನು ಪರಿಹರಿಸುವ ಮಾರ್ಗವನ್ನು ತೋರಿಸುವ ಪ್ರತಿಯೊಂದು ಸಂಸ್ಕೃತಿವಿಧಾನವೂ ರಕ್ಷಾಕವಚವಂತೆಯಿದ್ದು ಸರ್ವದಾ ದೇಹಿಯನ್ನು ಸನ್ಮಾರ್ಗ ಪ್ರವರ್ತಕವಾಗುವಂತೆ ಮಾಡುವುದಾಗಿರುವುದು.

ಸ್ತ್ರೀ ಪುರುಷರ ದಾಂಪತ್ಯಾಶ್ರಯವಾದ ಗೃಹದಲ್ಲಿ ಪಂಚಮಹಾಯಜ್ಞಗಳನ್ನೂ ಸೋಮಯಾಗಾದಿ ಸತ್ರಗಳನ್ನೂ ಆಚರಿಸಲು ಗೊತ್ತಾಗಿರುವ ಋತ ಪೋಷಿತ ದೇವತಾ ಸಂಸ್ಕೃತಿ ವಿಶೇಷಗಳು ಜಗದಾಧಾರವಾಗಿರುತ್ತವೆ. ಸ್ತ್ರೀ ಪುರುಷ ದೇಹಿಗಳು ಶ್ರೇಯಸ್ಸಾಧನಕ್ಕಾಗಿ ಋತದ ರಹಸ್ಯವನ್ನು ತಿಳಿಯುವುದು ಸ್ವಾಭಾವಿಕವಾಗಿರುತ್ತದೆ. ಇಂದ್ರಿಯಗಳ ಮತ್ತು ಮನಸ್ಸಿನ ಮೂಲಕ ಬಹಿಃ ಪ್ರಪಂಚದಲ್ಲಿ ಕಾಣುವ ಗುಣಕರ್ಮ ಶಕ್ತಿಗಳನ್ನು ಅನುಭವಿಸುವುದರಿಂದಲೇ ಅವುಗಳ ಮೂಲತತ್ವಗಳನ್ನು ಭಾವಿಸುವಂತೆಯೂ ಮತ್ತು ವಾಚಾ ವಿವರಿಸುವಂತೆಯೂ ಆಗುತ್ತದೆ. ಹೀಗೆ ವರ್ಣಿತವಾದ ವಿಷಯಗಳಿಂದ ಮೂಲ ತತ್ವಗಳು ಭಾವನೆಗೂ ಅನುಭವಕ್ಕೂ ಗುರಿಯಾಗಿರುತ್ತವೆ.

ಸೃಷ್ಟಿ ಸ್ಥಿತಿ ಲಯಗಳಿಗೆ ಬೇಕಾಗಿರುವ ಈ ಸಮಸ್ತ ತತ್ವಗಳೂ, ಋತ ಸಮುತ್ವ ವ್ಯಾಪಾರಗಳೂ ಬ್ರಹ್ಮವಿವರ್ತವಾದ ಗುಣ ಕರ್ಮ ಶಕ್ತಿಗಳೂ ಪ್ರಪಂಚದಲ್ಲಿ ತುಂಬಿವೆ. ಬ್ರಹ್ಮವಿವರ್ತವಾದ ವ್ಯಕ್ತಾವ್ಯಕ್ತವಾದ ನಾದ ಮತ್ತು ಶಕ್ತಿ ವಿಶೇಷಗಳೂ ಋಷಿತ್ವಕ್ಕೆ ಗೋಚರವಾಗುವುವು. ಗುಣ ಕರ್ಮಶಕ್ತಿಗಳು ಅವುಗಳನ್ನು ಸೂಚಿಸುವ ನಾದ ಶಬ್ದಗಳಿಂದ ವ್ಯವಹೃತವಾಗುವುವು. ಪದಗಳೂ ಗುಣಕರ್ಮಶಕ್ತಿಸೂಚಕವಾದ ಸಂಕೇತವುಳ್ಳವುಗಳಾಗಿ ಆಯಾ ಗುಣಕರ್ಮಶಕ್ತಿ ವಿಶಿಷ್ಟಗಳಾದ ಪದಾರ್ಥಗಳನ್ನು ಸೂಚಿಸುವುವು. ಅನುರೋಧ ಕ್ರಮದ ಮತ್ತು ವಿರೋಧಕ್ರಮದ ಗುಣ ಕರ್ಮಶಕ್ತಿಗಳು ಸಂಸರ್ಗವಾದರೆ ಕ್ರಮವಾಗಿ ಸಮ ಮತ್ತು ವಿಷಮ ಫಲಗಳನ್ನು ಹರಡುವುವು. ಮನಸ್ಸು ಮತ್ತು ಇಂದ್ರಿಯಗಳು ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪದಾರ್ಥಗಳನ್ನು ಆಶ್ರಯಿಸಿ, ಅನುಸಂಧಾನ ಮಾಡುವುದರಿಂದ ಆಯಾ ಗುಣಕರ್ಮಶಕ್ತಿಗಳು ವೃದ್ಧಿಯಾಗುವುವು. ಶಬ್ದಗಳನ್ನು ನಾಲಿಗೆಯಿಂದ ಉಚ್ಚರಿಸುವುದರಿಂದಲೂ ಕಿವಿಯಿಂದ ಕೇಳುವುದರಿಂದಲೂ ಕಣ್ಣಿನಿಂದ ನೋಡುವುದರಿಂದಲೂ ಸ್ಪರ್ಶ ಮಾಡುವುದರಿಂದಲೂ ಬ್ರಹ್ಮವಿವರ್ತವಾದ ಈ ಗುಣಕರ್ಮಶಕ್ತಿಗಳು ಆಯಾ ಮಿತಿಯಲ್ಲಿ ಅನಿವಾರ್ಯವಾಗಿ ಪ್ರಕಾಶಿಸಲ್ಪಡುತ್ತವೆ. ವಸ್ತುಗಳು ಚಿತ್ರಗಳ, ಪ್ರತಿಕೃತಿಗಳ ಮತ್ತು ಶಬ್ದಗಳ ಮೂಲಕ ಗೋಚರವಾಗುವುವು. ಇವೆಲ್ಲವೂ ಸದಾ ಪ್ರಕಾಶಮಾನವಾಗಿ ನಿದ್ದೆಯಿಲ್ಲದಂತೆ ಇರುವ ದೇವತೆಗಳೇ ಆಗಿರುತ್ತವೆ. ವಾಸನಾ, ಸಂಬಂಧ, ಋಣ, ಸಂಕಲ್ಪ, ಸ್ನೇಹ, ಪ್ರೇಮ ಭಾವನೆಗಳಿಂದ ತುಂಬಿದ ಜೀವಗಳು ಆಯಾ ಸಂಬಂಧ, ಋಣ, ಸ್ನೇಹ, ಪ್ರೇಮಗಳಿಗೆ ಆಶ್ರಯವಾದ ವಸ್ತು ವಿಶೇಷಗಳನ್ನು ಆಶ್ರಯಿಸಿ, ಸೇವಿಸಿ, ಪೂಜಿಸಿ, ಗೌರವಿಸಿ, ಅತಿಶಯವಾಗಿ ರೂಢಿಸಿಕೊಂಡು ಆಯಾ ಗುಣಶಕ್ತಿಕರ್ಮಗಳನ್ನು ವೃದ್ಧಿಪಡಿಸಿಕೊಳ್ಳುತ್ತಾರೆ. ಈ ಸಂಸ್ಕೃತಿಯು ಶ್ರೇಯಸ್ಸಾಧನವೆನಿಸಿ ಬ್ರಹ್ಮಸ್ವರೂಪ ವಿಷಯಗಳೊಡನೆ ಬ್ರಹ್ಮಸ್ವರೂಪ ಜೀವಗಳು ವಾಸನಾ, ಸಂಕಲ್ಪ ಗುಣಕರ್ಮಶಕ್ತಿಗಳಿಗೆ ತಕ್ಕಂತೆ ಐಕ್ಯವಾಗುವುವೆಂಬ ಫಲಸಾಪ್ರಪ್ತಿಯಾಗುತ್ತದೆ.

ದೇವತಾ ಧ್ಯಾನ, ಚಿತ್ರ, ವಿಗ್ರಹಗಳಲ್ಲಿ ಕಾಣುವ ಶಂಖ, ಚಕ್ರ, ತ್ರಿಶೂಲ, ಪದ್ಮ, ಪಾಶ, ಗದಾ ಮೊದಲಾದ ಆಕಾರಗಳಿಂದ ಆಯಾ ವಸ್ತುಗಳು ಸೂಚಿತವಾಗುವುವು. ಆಯಾ ಆಕಾರ ಗುಣ ಕರ್ಮಗಳಿಂದ ದ್ಯೋತವಾಗುವ ವಸ್ತುಗಳನ್ನು ಹೇಳುವ ಈ ಪದಗಳು ಪದಾರ್ಥಗಳೊಡನೆ ಸಮನ್ವಯವಾಗುವುವು. ಪ್ರಣವಾಕಾರದ ಸೊಂಡಿಲಿನ ಆಕಾರವು ಪ್ರಣವ ಪದಾರ್ಥವನ್ನು ಬೋಧಿಸುವುದು. ಈ ಪದಾರ್ಥಗಳಲ್ಲಿರುವ ದೇವತಾ (ದಿವ್ಯ) ಗುಣಕರ್ಮಶಕ್ತಿಗಳು ಪ್ರಪಂಚವನ್ನು ತುಂಬಿರುತ್ತವೆ. ಆದುದರಿಂದ ಈ ವಸ್ತುಗಳ ಮತ್ತು ವಸ್ತುಗಳನ್ನು ಸೂಚಿಸುವ ಪದಗಳ ಅರ್ಥ ಮತ್ತು ಅವುಗಳ ಆಕಾರ, ಗುಣಕರ್ಮಶಕ್ತಿಗಳನ್ನು ಅನುಸಂಧಾನ ಮಾಡುವ ಆಯಾ ದೇಹಿಗಳ ಗುಣ ಶಕ್ತಿ ಕರ್ಮಗಳಿಗೆ ಅನುಸಾರವಾಗಿ ಆಯಾ ಗುಣಶಕ್ತಿ ಕರ್ಮಗಳು ಅಭಿವೃದ್ಧಿಹೊಂದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯುಗಳು ಸಮವಾಗಿ ಸಮವ್ರ ವೃದ್ಧಿಯಾಗಿ ಸಾಕ್ಷಾತ್ಕೃತವಾಗುವ್ರವು. ಆನಂದಾನುಭೂತಿಯಾಗುವುದು.

ದೇಹಿಗಳು ಸ್ವಯಂ ಕಲ್ಪಿಸಿದ ಋಣ, ಸಂಕಲ್ಪ, ನಿಯಮ, ಗುಣಶಕ್ತಿಕರ್ಮ ಸಂವಿಧಾನಗಳನ್ನು ಸ್ವಯಂ ಅನುಸಂಧಾನ ಮಾಡಿ ಸ್ವಯಂ ಆನಂದರೂಪರಾಗುವರು. ಪಿಂಡಾಂಡ ಬ್ರಹ್ಮಾಂಡ ಗುಣ ಶಕ್ತಿವ್ಯಾಪಾರಗಳು ಏಕವಾಗುವುವು.

## ಪೂಜಾ ಸಂಸ್ಕೃತಿ

ದೇವತಾಯಜ್ಞವು ಸರ್ವಸಾಧಾರಣವಾಗಿರುವಂತೆ ಪೂಜಾದಿಗಳು ಏರ್ಪಟ್ಟಿವೆ. ಪೂಜೆಯು ಗುರುಹಿರಿಯರಿಗೆ ಸಲ್ಲಿಸುವ ಗೌರವದ ಸತ್ಕಾರ ವಿಶೇಷ. ಮಾನವ ಜೀವನಕ್ಕೆ ಆವಶ್ಯಕವಾದುವುಗಳ ಪೂರೈಕೆಗಾಗಿ ಆರೋಗ್ಯ ವೈದ್ಯ ಶಾಸ್ತ್ರಾನುಗುಣವಾಗಿ ಸಮಯೋಚಿತವಾಗಿ ಬೇಕಾದುದನ್ನು ಒಪ್ಪಿಸುವ ಉಪಚಾರವೇ ಸತ್ಕಾರ. ಏಕ, ತ್ರಯ, ಪಂಚ ಷೋಡಶ ಸಂಖ್ಯೆಗಳ ಉಪಚಾರಗಳು ಅತ್ಯವಶ್ಯಕವಾಗಿ ನಡೆಯಬೇಕಾದ ಸತ್ಕಾರ ಸಂಸ್ಕೃತಿಯಲ್ಲಿ ಪರಿಗಣಿಸಲ್ಪಟ್ಟಿವೆ. ಸಗುಣವಾದ ಪರವಸ್ತುವಿನ 'ದೇವ' ಗುಣಕರ್ಮಶಕ್ತಿಗಳು ರೇಖಾಯಂತ್ರ, ಮಂತ್ರ, ಪೃಥಿವ್ಯಾದಿ ಭೂತಗಳು, ಜೀವರಾಶಿಗಳು ಮೊದಲಾದ ನಾಮರೂಪಗಳಲ್ಲಿ ಸ್ಥೂಲವಾಗಿ ಪ್ರಕಟವಾಗುವುವು. ಪೃಥ್ವೀತತ್ವ, ಅಪ್‌ತತ್ವಾದಿಗಳು ಆಯಾ ಮೂರ್ತಿಯಲ್ಲಿ ದೇವತ್ವವನ್ನು ಪ್ರಕಟಿಸುವುವು. ಪಂಚಭೂತಗಳಲ್ಲಿ ಪ್ರತಿಯೊಂದರಲ್ಲಿಯೂ ಉಳಿದ ನಾಲ್ಕು ಭೂತಗಳು ಉಕ್ತ ಪ್ರಮಾಣದಲ್ಲಿ ಹೆಣೆದುಕೊಂಡೇ ಇರುವುವು. ಮಂತ್ರಗಳೂ ರೇಖಾಯಂತ್ರಾದಿ ಚಿಹ್ನೆಗಳೂ, ಆಕಾರಗಳೂ ದೇವತ್ವಸಾಧನ ಸಂಸ್ಕೃತಿಯ ಶಿಕ್ಷಣಕ್ರಮಕ್ಕೆ ಅನುಗುಣವಾಗಿರುವುವು. ಅಭ್ಯಾಸಾರಂಭದಲ್ಲಿ ಸಾಧನಗಳು ಸ್ಥೂಲತರವಾಗಿರುವುವು. ಆಯಾ ವಿಶಿಷ್ಟ ಗುಣಕರ್ಮಶಕ್ತಿತತ್ವಗಳಿಗೆ ಅನುಗುಣವಾಗಿ ಸಸ್ಯತರು ತಿರ್ಯಗ್ಜಂತುಗಳು, ಮೃಗಗಳು, ಜಲಚರ ಪಕ್ಷಿಗಳು, ಮಾನವರು ಮೊದಲಾದ ನಾನಾ ರೂಪಗಳಲ್ಲಿ ಆಯಾ ವಿಶಿಷ್ಟ ಗುಣಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನ್ನು ಅಳವಡಿಸಿ ದೇವತ್ವವನ್ನು ಕಲ್ಪಿಸುವ ಸಂಸ್ಕೃತಿ ವಿಧಾನವು ಪರಿಣಾಮಕಾರಿಯಾಗಿರುತ್ತದೆ. ದೇಹಿಗಳು ದೇಹಿಯಲ್ಲಿ ವಿವಿಧ ಗುಣಕರ್ಮಶಕ್ತಿಗಳಿಗೆ ಸಂಬಂಧಿಸಿದ ದೇವತ್ವ ಭಾವವನ್ನು ಧ್ಯಾನಿಸಿ ಸಾಕ್ಷಾತ್ಕರಿಸುವರು; ಮತ್ತು ದೇಹದ ಹೊರಗಿರುವ ವ್ಯಕ್ತಿಗಳಲ್ಲಿ ರೇಖಾಯಂತ್ರಗಳಲ್ಲಿ ಪಂಚ ಭೂತಾದಿಗಳಲ್ಲಿ ಆವಾಹಿಸಿ ಮಾನಸಿಕವಾಗಿ, ಸಾಧನ ಸಾಮಗ್ರಿಗಳಿಂದ, ಆನಂದದಿಂದ ಏಕೋಪಚಾರ, ತ್ರಯೋಪಚಾರ, ಪಂಚೋಪಚಾರ, ಷೋಡಶೋಪಚಾರಗಳಿಂದ ಪೂಜಿಸಿ ಸಮತೆಯ ಆನಂದವನ್ನು ಹೊಂದುವರು. ಚತುಷ್ಷಷ್ಟಿ ಉಪಚಾರಗಳ ಈ ಪೂಜೆಯು ಆಯಾ ವ್ಯಕ್ತಿಗೆ ರೂಢವಾಗಿ ಬಂದಿರುವ ಹಿಂದು ಹಿಂದಿನ ಅಭ್ಯಾಸ, ಹುಟ್ಟು (ಜನ್ಮ), ಮುಂದೆ ಶ್ರೇಯಃ ಪ್ರಾಪ್ತಿಗಾಗಿ ಏರಬಹುದಾದ ಹಂತ ಇವುಗಳಿಗೆ ತಕ್ಕಂತೆಯೂ, ಮನಸ್ಸಿನ ಭಾವ, ಕಲೆ ಶಾಸ್ತ್ರತತ್ವಗಳನ್ನೊಳಗೊಂಡ ಸನ್ನಿವೇಶ ಪರಿಸ್ಥಿತಿಗಳನ್ನು ಮೀರದಂತೆಯೂ ಶ್ರೇಯಸ್ಸೋಪಾನಗಳನ್ನು ಏರುವುದಕ್ಕೆ ಸಹಾಯಕವಾಗಿಯೂ ಇರುವುದು. 'ಅಹಂ' ಎಂಬ ಆಸುರೀಭಾವದ ಪರಿಣಾಮವಾಗಿ ಅಧಃ ಪತನವಾಗದೇ ಇರುವಂತೆ ದೇಹಿಗಳನ್ನು ತಡೆಯುವುದು.

ಈ ಉಪಚಾರ ದ್ರವ್ಯಗಳೆಲ್ಲವೂ ಆರಾಧಕನ ಸಂಪ್ರದಾಯ ಅಭ್ಯಾಸಗಳನ್ನು ಮೀರದೆ ಇರಬೇಕು. ಮಾನವರಿಗೆ ಅಭ್ಯಂಗಸ್ನಾನವು ವಿಹಿತವಾದ ಅತ್ಯುನ್ನತ ಸಂಸ್ಕೃತಿಗಳಲ್ಲಿ ಒಂದು. ವಿವಿಧವಾದ ಮೂಲಿಕಾ, ಓಷಧಿ, ಧಾತುಗಳಿಂದ ಸಂಸ್ಕೃತವಾದ ತೈಲವನ್ನು ಉಪಯೋಗಿಸುವುದರಿಂದ ತನಗೂ, ಕುಟುಂಬಕ್ಕೂ, ಸಮಾಜಕ್ಕೂ ಶ್ರೇಯಸ್ಸುಂಟಾಗುವುದು. ದೇವರಿಗೂ ಅದೇ ಬಗೆಯಲ್ಲಿ ಪೂಜೆಯನ್ನು ಸಲ್ಲಿಸುವುದರಿಂದ ಲೋಕ ಕಲ್ಯಾಣವುಂಟಾಗುವುದು. ಪಂಚಾಮೃತಗಳು, ಫಲರಸಗಳು ಮೊದಲಾದವುಗಳಿಂದ ಅಭಿಷೇಕ ಮಾಡುವ ಸಂಸ್ಕೃತಿಯಿಂದ ಮಾನವರೂ ಅತ್ಯವಶ್ಯಕವಾಗಿ ಅವುಗಳನ್ನು ಉಪಯೋಗಿಸಬೇಕೆಂದು ಸ್ಪಷ್ಟವಾಗುವುದು.

ಗುರುಪೂಜಾ, ಭಗವತ್ಪೂಜಾ, ಅತಿಥಿ ಅಭ್ಯಾಗತಪೂಜಾ ಮನೋಭಾವಗಳೂ ದೇವತಾ ಧ್ಯಾನಾದಿಗಳೂ ಪೂಜಾ ಸಂಕಲ್ಪ, ಉದ್ದೇಶ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಮ, ಲೋಪದೋಷ ನಿವಾರಣೋಪಾಯ, ಫಲಸಂನ್ಯಾಸ(ಸಮರ್ಪಣ) ಗಳು ಅದ್ಭುತ ಪರಿಣಾಮಕಾರಿಯಾದ ಸಂಸ್ಕೃತಿಯ ಅಂಗಗಳಾಗಿವೆ.

'ಸರ್ವವೂ ಬ್ರಹ್ಮ'ವೆಂಬ ಈಶಾವಾಸ್ಯ ಜಗತ್ತಿನಲ್ಲಿ ತದಿತರವಸ್ತು ಭಾವನೆಗೆ ಅವಕಾಶವಿಲ್ಲದಿರುವಾಗ ವ್ಯಾವಹಾರಿಕವಾಗಿ ಪೂಜಾಸಂಸ್ಕೃತಿ ಶಿಕ್ಷಣ ಕ್ರಮಗಳು ಸ್ವತ ಏವ ಹೊರಪಡುತ್ತವೆ. ವಿವಿಧವಾದ ಆಯುಧ ಗಳು, ಹೆಚ್ಚು ಸಂಖ್ಯೆಯ ಅವಯವಗಳು, ಆಭರಣಗಳು ಮೊದಲಾದುವು ಆಯಾ ವ್ಯಕ್ತಿಯ ಮನೋಧರ್ಮ ಮತ್ತು ಉಪಾಸನೆಗೆ ತಕ್ಕಂತೆ ಹೊಂದಿಕೊಂಡಿರುತ್ತವೆ.

ಲಲಿತೆ ಮೊದಲಾದ ದೇವತಾ ರೂಪಗಳಲ್ಲಿ, ಪ್ರಕೃತಿಯ ಸ್ಥೂಲ ಸೂಕ್ಷ್ಮರೂಪಗಳು, ಅಜ್ಞಾನ ನಾಶಕ ಸಾಧನ, ಸುಖ ಜೀವನ ಸಾಧನ, ಶ್ರೇಯಸ್ಸಂತೋಷಾನುಭವಗಳೆಂಬ ಗುಣಕರ್ಮಶಕ್ತಿಗಳು ಪ್ರಕಟವಾಗು ವಂತೆ ಆಕಾರಗಳನ್ನು ಭಾವಿಸುತ್ತೇವೆ. ಈ ರೂಪಗಳಲ್ಲಿ ಕಾಣುವ ಗುಣಕರ್ಮಶಕ್ತಿಗಳೂ ಅವುಗಳ ಸಂಘಾತವೂ ಪೂಜಿಸಲ್ಪಡುವ ಪುರುಷ ಭಗವಾನ್ ಅಥವಾ ಪ್ರಕೃತಿ ಭಗವತೀ ಆಗಿ ಪೂಜ್ಯ, ಪೂಜನ, ಪೂಜಕರ ಏಕತ್ವದ ಅನುಸಂಧಾನವಾಗಿರುತ್ತದೆ. ಇದೇ ವರಿವಸ್ಯಾರಹಸ್ಯವೆನಿಸು ವುದು. ಈ ಸಂದರ್ಭದಲ್ಲಿ ಗಣಪತಿ ರೂಪದ ವಿವರಣೆಯು ಸುಲಭವಾಗಿ ತಿಳಿವಳಿಕೆಗೆ ಬರುವುದು. ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಆವಶ್ಯಕ ವಾದುದು ಆಹಾರ – ಅನ್ನಬ್ರಹ್ಮ. ದೇವಾಲಯವೆಂಬ ಶರೀರದಲ್ಲಿ ಆಹಾರ ಕೋಶವೆಂಬುದು ಉದರ. ಆ ಉದರವೂ ದೇವರು. ಆ ಉದರ ಮತ್ತು ಅನ್ನಗಳನ್ನು ದೇವರೆಂದು ಗೌರವಿಸುವುದರಿಂದ ಕೇವಲ ಮೃಗ ಪಕ್ಷಿಗಳ ಹಾಗಲ್ಲದೆ ವಿವೇಕದಿಂದ ದೇಹಿಯು ಮಿತಿಯನ್ನು ಅರಿತು ಸುಖ ಸಂಪದನುಭವವನ್ನು ಹೊಂದುವರು.

ಮುಖವು ಪ್ರಣವ ಸ್ವರೂಪ, ಪ್ರಣವವೇ ದೇವರು. ನಾದ, ವರ್ಣ, ಪ್ರಣವವನ್ನೇ ಪೂಜಿಸುವೆವು. ಪರಿವ್ರಾಜಕರಿಗೆ ಪ್ರಣವವಲ್ಲದೆ ಬೇರೆ ಅನುಸಂಧಾನವಿಲ್ಲ. ಗೃಹಸ್ಥಾದಿಗಳ ಆಶ್ರಮಕ್ಕೆ ಅನುರೋಧ ವಾಗಿರುವಂತೆಯೂ ವಿರೋಧವಾಗಿಲ್ಲದಂತೆಯೂ ಪ್ರಣವವನ್ನು ಪರೋಕ್ಷ ವಾಗಿ ಪೂಜಿಸುವ ಕ್ರಮವು ವಿಹಿತವಾಗಿರುತ್ತದೆ. ಪ್ರಕೃತಿಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಾಕ್ಷಾತ್ತಾಗಿ ಈ ಅಂಶವನ್ನು ಬೋಧಿಸುವುದಕ್ಕೆ ದೀರ್ಘವಾದ ಸೊಂಡಿಲನ್ನೂ (ನಾಸಿಕ) ಆನೆಯ ಮುಖದಲ್ಲಿ ರೂಪಿಸಿರುತ್ತದೆ. ಇದೇ ಕೇನೋಪನಿಷತ್ತಿನಲ್ಲಿ 'ಯಕ್ಷ' ಎಂದು ಹೇಳಲ್ಪಟ್ಟಿದೆ. ಗಜಮುಖದ ಆಕಾರದಿಂದ ಸರ್ವದಾ ಸ್ಥೂಲವಾಗಿ ಸಾಕ್ಷಾತ್ತಾಗಿ ಪ್ರಣವೋಪದೇಶವು ದೇಹಿಗಳಿಗೆ ಗೋಚರವಾಗುವುದು ; ಜ್ಞಾನೋದಯವಾಗುವುದು.

ಗುಣಕರ್ಮಶಕ್ತಿಯುತವಾಗಿರುವ ಕಿವಿ, ಕಣ್ಣು, ಮೂಗು ಮೊದಲಾದ ಇಂದ್ರಿಯಗಳೂ ಅವಯವಗಳೂ ದೇವರೇ. ಅವುಗಳ ಪೂಜೆಯೇ ಶ್ರೇಷ್ಠವು. ಅವುಗಳಿಗೂ, ಪೂಜಾ ದ್ರವ್ಯಗಳಿಗೂ ಪೂಜಕರಿಗೂ ಅನುಸಂಧಾನ ದ್ವಾರಾ ಏಕತ್ವವು ಏರ್ಪಡುವುದು. ದೇವ ಗುಣ ಕರ್ಮ ವಿಶಿಷ್ಟವಾದ ಗಣೇಶ ಎಂಬ ರೂಪದಲ್ಲಿ ಇದು ಪ್ರಧಾನವಾಗಿ ಎದ್ದು ಕಾಣುವುದು.

ಹಾವು (– ಸರ್ಪ – ಕುಂಡಲಿನೀ – ಶಕ್ತಿಯು) ದೇವರು. ಅದನ್ನು ಎದುರಿಗೆ ಪ್ರಧಾನವಾಗಿ ನಿಲ್ಲಿಸಿಕೊಂಡಂತೆ ಪೂಜಾಕ್ರಮವಿರುವುದು. ವಸ್ತುಗಳ ದುಷ್ಟ ಗುಣ ಕರ್ಮ ಶಕ್ತಿಗಳನ್ನು ಕಟ್ಟಿಹಾಕುವುದಕ್ಕೂ ಸದ್ವಸ್ತುವಿನ ಲಕ್ಷ್ಯವನ್ನು ಬಿಡದೆ ಇಂದ್ರಿಯಗಳು ಯೋಗವನ್ನು ಮುಂದುವರಿಸುವುದಕ್ಕೂ ಪಾಶವು ಅವಶ್ಯಕ. ಪಾಶವೂ ದೇವರು. ಪಾಶವನ್ನೊಳಗೊಂಡ ಲಕ್ಷ್ಯವನ್ನು ಅನುಸಂಧಾನ ಮಾಡಬೇಕು. ಅಂಕುಶವೂ ದುಷ್ಟವ್ಯಾವೃತ್ತಿ, ಸದ್ಯೋಗ ಸಹಾಯಕವಾದ ಸಾಧನ. ಅಂಕುಶವೂ ದೇವರು. ಮೋದಕವು ಜ್ಞಾನಕರ್ಮಗಳಿಗೆ ಪ್ರತೀಕ, ಸಮತಾ ಜ್ಞಾನ ವಿವರ್ಧಕ. ಸರ್ವೇಂದ್ರಿಯ ವಸ್ತುಗಳನ್ನು ಮೋದಕ ಗುಣಕರ್ಮಶಕ್ತಿಗಳಿಂದ ತುಂಬಿಸಲು ದೇವರಾದ ಮೋದಕವನ್ನು ಪೂಜ್ಯ ವಸ್ತುವಿನಲ್ಲಿ ಐಕ್ಯಗೊಳಿಸಿ, ಪೂಜಿಸಿ ಸಂಸ್ಕಾರದ ಉನ್ನತ ಸೋಪಾನವನ್ನು ಏರಲು ಅರ್ಹತೆಯನ್ನು ಪಡೆಯಬೇಕು. ಮೂಷಕವು ಚಂಚಲವಾದ ಮತ್ತು ದಿವಾ ರಾತ್ರಿ ಕ್ಷಣ ಕಾಲವೂ ಕರ್ಮವಿಲ್ಲದಿರುವಂತೆ ಚಟುವಟಿಕೆಯುಳ್ಳ ಗುಹೆ (ಮರೆ) ಯಲ್ಲಿರುವುದಾದ ಮನಸ್ಸನ್ನು ಸೂಚಿಸುವುದು. ಬುದ್ಧಿ (ವಿವೇಕ) ದಿಂದ ಅದನ್ನು ಮೆಟ್ಟಿ ಹತೋಟಿಯಲ್ಲಿಟ್ಟುಕೊಳ್ಳುವ ಮತ್ತು ಸ್ವಾರ್ಥಕ್ಕೆ ಬಿಡದಂತೆ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದಾದ ಮನಸ್ಸೆಂಬ ಮೂಷಕವೇ, ಮೂಷಕವೆಂಬ ಮನಸ್ಸೇ ದೇವರು. ಶಬ್ದ ಮತ್ತು ಅದರ ಅರ್ಥಗಳು ಪ್ರಧಾನವಾಗಿವೆ. ಏಕ ದೇಶದಲ್ಲಿ ಮನಸ್ಸಿಗೆ ಬರುವ ಇಲಿ ಎಂಬ ವ್ಯಕ್ತಿಯಲ್ಲ. ಶ್ರೇಯಃ ಪ್ರದವಾದ ನಿಯಂತ್ರಣ ಸಾಕ್ಷಾತ್ಕಾರ ಭಾವನೆಯಿಂದ ಅದನ್ನು ಪೂಜಿಸಬೇಕು. ಮೂಷಕದ (ಮನಸ್ಸಿನ) ಸಂಕಲ್ಪಾನುಸಾರ ಶ್ರೇಯೋಲಾಭವಾಗುವುದು.

ಕೈಯಲ್ಲಿ ಹಿಡಿದಿರುವ ದಂತಭಾಗವು ಆಸುರೀ ಅಹಂಕಾರಭಾವ ವನ್ನು ಅಡಗಿಸುವ ಚಿಹ್ನೆಯುಳ್ಳ ಆಯುಧ. ಅಹಂಕಾರವನ್ನು ಅಡಗಿಸುವ ಕ್ರಮಗಳನ್ನು ಯೋಗಶಾಸ್ತ್ರ ನಿದರ್ಶನಾದಿಗಳಿಂದ ಪ್ರಕಟ ಪಡಿಸುವ ಗುಣಕರ್ಮಶಕ್ತಿಗಳುಳ್ಳ ಭಗ್ನದಂತಸ್ಥಿತಿಯು ದಂತಭಾಗವೂ ದೇವರು. ಆಭರಣಗಳು, ಆಸನಗಳು, ಕಿರೀಟಗಳು, ಛತ್ರಚಾಮರಾದಿಗಳು ಆಯಾ ವ್ಯಾಪಾರವನ್ನು ಸೂಚಿಸುವ ದೇವತೆಗಳೇ ಆಗಿರುತ್ತವೆ. ಅವುಗಳ ಪೂಜೆಯಿಂದ ಅವು ದೇವರೆಂದು ದೃಢ ಬುದ್ಧಿಯುಂಟಾವಾಗ ಪ್ರಾಪಂಚಿಕ ವಾದ ಆಭರಣಾದಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವುದು ತಪ್ಪಿಹೋಗಿ ನೆಮ್ಮದಿಗೆ ಕಾರಣವಾದ ಯೋಗವು ಸಿದ್ಧಿಸುವುದು.

ಭಗವತ್ಸೃಷ್ಟವಾಗಿ ಸೃಷ್ಟಿಸ್ಥಿತಿಲಯಗಳಿಗೆ ಆವಶ್ಯಕಗಳಾದ ವಸ್ತು ಜಾತಿಗಳು ಆತ್ಮನಿಗೆ ಬೇಕಾಗುವುವು ಎಂಬುವನ್ನು ಚಮಕಾಧ್ಯಾಯದಲ್ಲಿ "ಮೇ" ಶಬ್ದವು ಸೂಚಿಸುವುದು. ಚಮಕದಲ್ಲೂ ಪೂಜಾ ದ್ರವ್ಯಗಳು ಸಾಧನಗಳು, ಸಂಖ್ಯೆಗಳು ಸೂಚಿತವಾಗಿರುವುವು. ಇಂತಹ ಪೂಜಾ ದ್ರವ್ಯಾದಿಗಳೆಲ್ಲವೂ ಉತ್ತಮೋತ್ತಮ ಗುಣಕರ್ಮಶಕ್ತಿಗಳುಳ್ಳ ದೇವತೆ ಗಳೇ ಆಗಿವೆ. ಆಯಾ ದ್ರವ್ಯಗಳ ಧ್ಯಾನ ಸ್ಪರ್ಶಗಳೂ ಪೂಜಾಂಗವಾಗಿವೆ ಪೂಜೆಗೆ ಉಕ್ತವಾದ ಮೂಲಿಕೆಗಳ, ಪತ್ರಗಳ, ಪುಷ್ಪಗಳ, ಸ್ಪರ್ಶನಾದಿ ಅನುಭವಗಳು ತಾತ್ಕಾಲಿಕವಾಗಿ ತಕ್ಕ ಫಲಪ್ರದಗಳಾಗಿವೆ. ಅಲ್ಲದೆ ಶರೀರಾರೋಗ್ಯ ಸಾಧನಗಳಾದ ತುಲಸೀ, ಬಿಲ್ವ, ದೂರ್ವಾದಿಗಳ ಉಪ ಯೋಗವನ್ನು ವಿಧಿಸುವುವು. ರಕ್ಷಾ, ಪ್ರಸಾದಗ್ರಹಣ, ಜಪ, ಪುಷ್ಪಾಂಜಲಿ ನಮಸ್ಕಾರ, ಪ್ರಾರ್ಥನಾ ಗುಣಕರ್ಮಶಕ್ತಿಗಳೆಂಬ ದೇವತೆಗಳ ಅನು ಸಂಧಾನದಿಂದ ಸರ್ವವನ್ನೂ ಪೂಜಾನುಸಂಧಾನಸಂಸ್ಕೃತಿಗೆ ಒಳಪಡಿಸಿ ದರಿಂದ ಆಯಾ ಸಂಕಲ್ಪ ಸಿದ್ಧಿಗಳು ಸ್ವತಃ ಉಂಟಾಗುವ ಹಾಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂಜೆಯು ಪರಿಣಮಿಸುವುದು. ವರ್ಣ ಅರ್ಹತೆ ಪರಿಸ್ಥಿತಿ ಸಂಸ್ಕಾರಗಳಿಗನುಗುಣವಾಗಿ ಸರ್ವ ವ್ಯಕ್ತಿಗಳು ಆಚರಿಸಬೇಕಾದ ಪಂಚಮಹಾಯಜ್ಞಾದಿಗಳಿಂದ ದೇಹಿಗಳ, ದಂಪತಿಗಳ ಶಾರೀರಕ, ಮಾನಸಿಕ ದಾರ್ಢ್ಯ ಮತ್ತು ಸಂಸ್ಕಾರಾತಿಶಯಗಳಿಗೆ ಅನುಗುಣವಾಗಿ ದಿನಂ ಪ್ರತಿ, ಪ್ರತಿ ಮಾಸ ಮತ್ತು ಪ್ರತಿವತ್ಸರವೂ ಯಜ್ಞಗಳನ್ನು ಆಚರಿಸಿ ದೇವತಾ ಗುಣ ಕರ್ಮಶಕ್ತಿಮಯವಾದ ವಿಶ್ವದಲ್ಲಿ ದೇವಗುಣಕರ್ಮಶಕ್ತಿಗಳು ಘನೀಭೂತವಾಗಿ ವ್ಯಾಪಿಸಿ ಲೋಕಕ್ಕೆಲ್ಲಾ ಕಲ್ಯಾಣವಾಗುವಂತೆ ನೋಡಿಕೊಳ್ಳಬೇಕು.

ಮಂಗಳ ಕಾರ್ಯಗಳಲ್ಲಿ ನಡೆಯುವ ನಾಂದೀ ಮೊದಲಾಗಿ ಅನೇಕ ಸಂದರ್ಭಗಳಲ್ಲಿ ಕುಲ, ವ್ಯಕ್ತಿ ಸಂಪ್ರದಾಯಾನುಗುಣವಾಗಿ ಸರ್ವರೂ ಆಚರಿಸಬೇಕಾದ ಪಿತೃ ದೇವತೆಗಳ ಆರಾಧನೆಯು, ತರ್ಪಣವು ಪಿತೃತ್ವವನ್ನು ಸಾಕ್ಷಾತ್ಕಾರ ಮಾಡಿಸಿ ನೆಮ್ಮದಿಯನ್ನೂ ಋಣಪರಿಹಾರವನ್ನೂ ಮಾಡುವುದು.

ವಿಶೇಷವಾಗಿ 'ತೇನ ವಿನಾ ತೃಣಮಪಿ ನ ಚಲತಿ' ಎಂಬಂತೆ ಪ್ರಪಂಚದಲ್ಲಿ ನಡೆಯುವ ಸಮಸ್ತ ವ್ಯಾಪಾರಗಳೂ ಪಂಚಮಹಾಯಜ್ಞಾದಿಗಳೂ ಪೂಜೆಯೇ ಆಗಿರುತ್ತವೆಂದು ತಿಳಿಯುವುದಕ್ಕೂ ಅದಕ್ಕೆ ತಕ್ಕಂತೆ ಫಲಾನುಭವಕ್ಕೂ ಸಂಸ್ಕೃತಿ ವಿಶೇಷವೇ ಕಾರಣವೆಂಬುದನ್ನು ಪ್ರತಿಭಾರತೀಯರೂ ತಿಳಿದಿರುತ್ತಾರೆ. ಆದುದರಿಂದ ದುರ್ಭಾವನೆ, ನೀಚ ಭಾವನೆ, ಅತೃಪ್ತಿಗಳನ್ನು ತ್ಯಜಿಸಿ ಸದಾ ಯೋಗಸ್ಥರಾಗಿರುವುದಕ್ಕೆ ಅವಕಾಶವಿರುತ್ತದೆ. ಔದಾರ್ಯದಿಂದಲೂ, ವಿಶಾಲದೃಷ್ಟಿಯಿಂದಲೂ, ರಾಷ್ಟ್ರವನ್ನು, ಭೂಗೋಳ(ಪ್ರಪಂಚ)ವನ್ನು ಸದಾ ಎದುರಿಗಿದ್ದಂತೆ ಭಾವಿಸಿ ಯಜ್ಞ ಸಂಸ್ಕೃತಿಯನ್ನು ಗೀತೆಯು ವಿವರಿಸಿರುತ್ತದೆ. ಷೋಡಶೋಪಚಾರಾದಿ ಪೂಜೆಗಳೆಲ್ಲವೂ 'ನಮಸ್ಕಾರ' ವೊಂದರಲ್ಲಿಯೇ ಅಡಕವಾಗುವುವು. ಮಾನಸಿಕ, ಶಾರೀರಕ ನಮಸ್ಕಾರದಿಂದಲೇ ಪೂಜ್ಯ, ಪೂಜಕ, ಪೂಜಾಸಾಮಗ್ರಿಗಳ ಏಕತ್ವಾನುಸಂಧಾನವು ದ್ಯೋತಕವಾಗುವುದು. ನಮಃಕೋಧ್ಯಾಯವೆಂಬ ವೇದ ಪ್ರಕರಣವು ಕ್ಷಿಪ್ರಫಲದಾಯಕವಾದ ಪ್ರಯೋಗವನ್ನು ಸರ್ವರಿಗೂ ಬೋಧಿಸುವುದು. ಭಾರತೀಯರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಪಂಚದಲ್ಲಿರುವ ಜಲಚರ ಸಸ್ಯಲತಾತರು ಮೊದಲಾದುವುಗಳಲ್ಲಿಯೂ ಮೃಗ ಪಕ್ಷಿಕ್ರಿಮಿ ಕೀಟ ಸರ್ಪಾದಿಗಳಲ್ಲಿಯೂ ಮಾನವರಲ್ಲಿಯೂ ಪೃಥಿವ್ಯಾದಿ ಪಂಚಭೂತಗಳಲ್ಲಿಯೂ ಭಗವಂತನ ಸಾನ್ನಿಧ್ಯವನ್ನು ಮನಗಂಡು ಸಮಯೋಚಿತವಾಗಿ ದರ್ಶನಕಾಲದಲ್ಲಿ ನಮಸ್ತೇ, ನಮಸ್ಕಾರ ಎಂಬ ಗೌರವ ಪೂಜೆಯನ್ನು ಸಲ್ಲಿಸುವ ಅತ್ಯುತ್ತಮ ಸಂಸ್ಕೃತಿ ವಿಧಾನ ವನ್ನು ಸದಾ ಆಚರಿಸುವರು.

ಪೂಜೆಯು ಪೂರ್ಣವಾಗುವ 'ನಮಃ' ಎಂಬ ಪವಿತ್ರಕಾರ್ಯ ದಿಂದ ಕೆಡುಕು (ವಿರೋಧ, ಅಹಿತ) ವಾಗಿರುವ ಚೇತನಾಚೇತನಗಳನ್ನು ಒಲಿಸಿಕೊಳ್ಳುವ ಅಥವಾ ಒಲುಮೆಗೆ ನಿಲುಕದಿದ್ದರೆ ದೂರೀಕರಿಸುವ ಸಂವಿಧಾನವು ಬ್ರಾಹ್ಮೀ ಸಂಸ್ಕೃತಿಯ ಅತಿಶಯವಾದ ಮಹಿಮೆಯನ್ನು ಬೆಳಗುವುದು. ಒಳ್ಳೆಯದಾಗಿಯೂ, ಹಿತವಾಗಿಯೂ ಅನುರೋಧವಾಗಿ ಯೂ ಇರುವವುಗಳನ್ನು ಒಲಿಸಿಕೊಳ್ಳಲು ಯತ್ನಿಸಿ ಆಶ್ರಯ ಮಾಡುವುದ ಕ್ಕೆ ವಿವೇಕವು ಆವಶ್ಯಕ. ಕೆಡಕುಂಟಾಗದಂತೆ ಎಚ್ಚೆತ್ತುಕೊಳ್ಳುವುದಕ್ಕೂ ಉಂಟಾದ ಕೆಡುಕನ್ನು ನಿವಾರಿಸಿಕೊಳ್ಳುವುದಕ್ಕೂ ವಿವೇಕವು ಹೆಚ್ಚು ಆವಶ್ಯಕ. ಅಧರ್ಮಾಯ ನಮಃ, ಅವೈರಾಗ್ಯಾಯ ನಮಃ, ಅನೈಶ್ವ ರ್ಯಾಯ ನಮಃ, ಅಜ್ಞಾನಾಯ ನಮಃ ಎಂಬಂತೆ ವಿರುದ್ಧವಾದ ಗುಣಕರ್ಮಶಕ್ತಿಯುಳ್ಳ ವೈರಾಗ್ಯ ಅವೈರಾಗ್ಯಾದಿ ದ್ವಂದ್ವವಸ್ತುಗಳಿಗೂ ಪೂಜೆಯನ್ನು ಅರ್ಪಿಸುವುದರಿಂದ ಶಾಂತಿ ಶ್ರೇಯಸ್ಸುಗಳು ಅಧಿಕವಾಗಿ ಲಭ್ಯವಾಗುವುವು.

ವ್ಯಾವಹಾರಿಕವಾಗಿಯೂ 'ದುರ್ಜನಂ ಪ್ರಥಮಂ ವಂದೇ ಸಜ್ಜನಂ ತದನಂತರಂ'— ಎಂಬ ನೀತಿ ವಾಕ್ಯವು ಎಚ್ಚರಿಸಿ ಹೇಳುತ್ತದೆ. ಪೂಜಾ ಸತ್ಕಾರಗಳಿಂದ ದುಷ್ಟ ಮತ್ತು ಶಿಷ್ಟ ಚರಾಚರಗಳು ಸುಪ್ರೀತ ರಾಗಿ (ರಾಜ ಪ್ರಜೆಯನ್ನು ಅಥವಾ ಪ್ರಜಾ ರಾಜನನ್ನು ), ಕರ್ತೃವನ್ನು ಅನುಗ್ರಹಿಸಿ ಶ್ರೇಯಸ್ಸಿಗೆ ಪಾತ್ರವನ್ನಾಗಿ ಮಾಡುವ ಸಂವಿಧಾನವು ಅತ್ಯಂತ ಅಮೋಘವಾದುದು.

ಪರಮಾತ್ಮನ ನಾಮ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನಗಳೆಂಬ 9 ಬಗೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri 

ಯಜ್ಞಗಳು ಸಾಕ್ಷಾತ್ಕಾರ ಸಿದ್ಧಿಯನ್ನು ಕೊಡುವುವು. ಆತ್ಮಾರ್ಪಣ ಆತ್ಮ ನಿವೇದನವೆಂಬುದು ವೇದೋಕ್ತ ಯಜ್ಞಗಳೆಂಬ ಪರಮಸಂಸ್ಕೃತಿ ಗಳಲ್ಲಿ ಅಡಗಿರುವ ಯಜ್ಞ ತತ್ವವನ್ನು ಬೋಧಿಸುವುದು. ನಚಿಕೇತ ಎಂಬ ಸೋಪಾನವನ್ನು ಅಡರಿದ ವ್ಯಕ್ತಿಗಳಿಗೆ ಇದು ಸಾಧ್ಯವಾಗುವುದು. ಅಜ್ಞಾನ, ಪಕ್ಷಭಾವನೆ, ದಾರ್ಢ್ಯವಿಲ್ಲದಿರುವಿಕೆ, ಅಸೂಯಾದಿಗಳಿಂದ ಹಿಂಸೆಯೆಂದು ಅವಹೇಳನ ಮಾಡಲ್ಪಡತಕ್ಕದ್ದಲ್ಲ. ಆತ್ಮಾರ್ಪಣವು ಜೀವನದಲ್ಲಿ ಬಗೆಬಗೆಯ ಹಂತಗಳಲ್ಲಿ ಪ್ರತಿಯೊಬ್ಬನ ಪಾರಮಾರ್ಥಿಕ, ವ್ಯಾವಹಾರಿಕ ಆಚರಣೆಯಲ್ಲಿ ಕಂಡುಬರುವುದು. ದೇಹಿಗಳ ದೈವೀ, ಆಸುರೀ ಮನೋಭಾವಕ್ಕನುಗುಣವಾಗಿ ಫಲವನ್ನು ಕೊಡುವುದಾಗಿದೆ.

ಸಾತ್ವಿಕವಾದ ಆಹಾರ ವಿಹಾರಗಳಿಂದ ಬೆಳೆದ ಪ್ರಾಣಿಗಳ ಮಹಾ ದ್ರವ್ಯದ ಗುಣವಿಶೇಷಗಳಿಗೆ ತಕ್ಕಂತೆ ವೇದೋಕ್ತ ಅಧಿಕಾರ ಅರ್ಹತೆ ಮಿತಿಯಿಂದ ಯಜ್ಞ ಸಂವಿಧಾನದಲ್ಲಿ ನಿಷ್ಪನ್ನವಾದ ಆತ್ಮ ನಿವೇದನವೆಂಬ ಮಹಾ ಹೋಮ ಸಂಸ್ಕೃತಿಯಿಂದ ದೇವ (ಆತ್ಮ) ಗುಣಕರ್ಮಶಕ್ತಿಗಳು ಬ್ರಹ್ಮಾಂಡದಲ್ಲಿ ಹರಡಿ ವೃದ್ಧಿಯಾಗಿ ಪ್ರಜಾ ಯೋಗಕ್ಷೇಮವು ಸಿದ್ಧಿಸು ವುದು ಮತ್ತು ಸೃಷ್ಟಿಸ್ಥಿತಿಲಯಗಳು ಸಮತೆಯ ಆಧಾರವನ್ನು ಹೊಂದಿ ಕ್ರಮಗೊಳ್ಳುವುವು. "ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ" ಎಂಬಂತೆ ನಿತ್ಯನೂ ಅಖಂಡನೂ ಆನಂದನೂ ಆದ ಪರಮಾ ತ್ಮನಿಗೆ ಅಳಿವು, ಹಿಂಸೆ ಎಂಬುವು ಇಲ್ಲವೇ ಇಲ್ಲ. ಹಿಂಸೆ, ಅಹಿಂಸೆ, ಸಾವು, ಹುಟ್ಟು ಇವೆಲ್ಲವೂ ಸಂಕುಚಿತವೂ ಪ್ರಾಪಂಚಿಕವೂ ಆದ ಮಾನಸಿಕ ದೃಷ್ಟಿ ಕೋಣಗಳು. 'ಜೀವ'ನ ವ್ಯವಹಾರದ ಒಂದ ಘಟ್ಟದಲ್ಲಿ ರಾಜನೀತಿಯ ಮಿತಿಯಲ್ಲಿ ಇವು ವಿವಿಧವಾಗಿ ವರ್ಣಿಸಲ್ಪಡು ವುವು. ಯಜ್ಞದಲ್ಲಿಯೂ ಜೀವನದಲ್ಲಿಯೂ ಆತ್ಮ ದೃಷ್ಟಿಯಿಂದ ಈ ಭೇದಗಳಿರುವುದಿಲ್ಲ. ವ್ಯಕ್ತಿಯ ಸೃಷ್ಟಿಸ್ಥಿತಿಲಯಗಳು 'ಜೀವ'ನ ಉಪಾಧಿಗಳ ಮೂಲಕ ನಡೆಯುವುವು. ಈ ಸಂದರ್ಭಗಳಲ್ಲಿ ನಿತ್ಯನಾದ ಜೀವನು ನಿತ್ಯನಾಗಿ ಆನಂದರೂಪನಾಗಿದ್ದು ಸಂಕಲ್ಪ ಕರ್ಮಾನುಗುಣ ವಾಗಿ ಬೇರೆ ಉಪಾಧಿಗಳನ್ನು ಧರಿಸಬಹುದು. ಚೈತನ್ಯ – ಆತ್ಮನಿಂದ ಬಿಡಲ್ಪಟ್ಟ ಉಪಾಧಿಯೇ ರೂಪಾಂತರಗಳನ್ನು ಹೊಂದಿ ಪ್ರಪಂಚದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೃಷ್ಟಿ ಸ್ಥಿತಿ ಲಯಗಳಿಗೂ ಕಲ್ಯಾಣಾಭ್ಯುದಯಗಳಿಗೂ ಕಾರಣ. ವಿವೇಚನೆಯನ್ನು ವಿಸ್ತರಿಸಿ, ವಿಮರ್ಶೆ ಮಾಡಿದಾಗ 'ಜೀವಾಣುಗಳಿಂದ ತುಂಬಿದ ಉಪಾಧಿಗಳೇ 'ಆಹಾರ' ಅನ್ನ ಎಂಬ ಹೆಸರನ್ನು ಹೊಂದುವುವು' ಎಂಬ ಸಾವಪ್ರಿಜ್ಯ ತತ್ವ ದರ್ಶನವಾಗುವುದು. ವ್ಯಾವಹಾರಿಕ ಯುದ್ಧಗಳಲ್ಲಿ ದೇಹತ್ಯಾಗ ಮಾಡಿದ ದೇಹಿಗಳ ವಿಚಾರವನ್ನು ಕೇಳಿದ ಕ್ಷಾತ್ರ ತೇಜಸ್ವಿಗಳು ಆ ಬಗೆಯ ದೇಹತ್ಯಾಗಕ್ಕಾಗಿ ಹಮ್ಮೈಸುವುದು ಸ್ವಾಭಾವಿಕವಾಗಿದೆ. ಪ್ರಪಂಚದಲ್ಲಿ ಸಿದ್ಧಿಲಾಭಕ್ಕಾಗಿ ಆಗುವ ಹೋರಾಟಗಳೆಲ್ಲವೂ ಯುದ್ಧವೇ ಆಗಿವೆ. ವ್ಯಕ್ತಿಗಳಿಗೆ ದೇಹಿಗಳ ದೇಹದೊಳಗೆ ಪರಸ್ಪರ ಯುದ್ಧ, ಘರ್ಷಣೆ, ಸಂಯೋಗ, ವಿಯೋಗಗಳಿಲ್ಲದೆ ಅಳಿವು, ಉಳಿವು ಇರುವುದಿಲ್ಲ. ಸಮರ್ಥ ಸಾಧುವು ದುರ್ಗುಣ ದುರಭ್ಯಾಸ, ರಾಗ, ದ್ವೇಷ ಮೊದಲಾದ ಅಹಿತವೆಂಬ ಅರಿಗಳನ್ನು ಯುದ್ಧಮಾಡಿಯೇ ಜಯಿಸಬೇಕು; ಸಾತ್ವಿಕ ಸೋಪಾನಗಳನ್ನು ಏರಬೇಕು. ನೀತಿ, ನ್ಯಾಯ, ಪೂರ್ಣತೆ, ಯೋಗ, ಸಿದ್ಧಿ ಪ್ರಾಪ್ತಿಗಳಿಗಾಗಿ ಅನೀತಿ, ಅನ್ಯಾಯ, ಅಪೂರ್ಣತೆಯೆಂಬ ಕಳಂಕಗಳನ್ನು ಹೋಗಲಾಡಿಸುವುದು ಆವಶ್ಯಕ. ಇದನ್ನೇ ಯುದ್ಧವೆಂದು ವ್ಯವಹರಿಸಿ ಅನ್ಯಾಯ, ಅವಿದ್ಯಾ ಮತ ವಿರೋಧ, ಜ್ಞಾನದ ಮುಸುಕುಗಳನ್ನು ಎದುರಿಸಿ ಯುದ್ಧ ಮಾಡುವಾಗ ದೇಹಿಯು ದೇಹವನ್ನು ಬಿಡುವ ಸನ್ನಿವೇಶವು ಪ್ರಾಪ್ತವಾಗುವುದು. ಕ್ಷುದ್ಬಾಧೆಯ ನಿವೃತ್ತಿಯಿಂದ ಪ್ರಾಣ ಧಾರಣೆಕ್ಕಾಗಿಯೂ ಸಹ ಜೀವಮಯವ ಲೋಕದಲ್ಲಿ ಜೀವಗಳು ದೇಹಗಳನ್ನು ಧರಿಸಿ ದೇಹಿಗಳಾಗುವ ಮತ್ತು ದೇಹಗಳನ್ನು ಬಿಸಾಡುವ ಸನ್ನಿವೇಶಗಳು ಅವಿಚ್ಛಿನ್ನವಾಗಿ ಸರ್ವತ್ರ ನಡೆಯುತ್ತಲೇ ಇರುವುವು. ಸೃಷ್ಟಿ ಸ್ಥಿತಿ ಲಯಾತ್ಮಕ ಪ್ರಪಂಚದ ಅಸ್ತಿತ್ವಕ್ಕೂ ಜ್ಞಾನಾರ್ಜನೆಗೂ ಪಶುಯಾಗಗಳು ಆತ್ಮಲೀಲೆಯಂತೆ ಉಕ್ತವಾಗಿ ಸ್ವತ ಏವ ನಡೆಯುತ್ತಾ ವೃದ್ಧಿ ಹೊಂದುತ್ತಾ ಸಂಸ್ಕೃತಿ ಪೋಷಕಗಳಾಗಿ ಆನಂದ ದಾಯಕವಾಗಿ ಆನಂದವೇ ಆಗಿರುವುವು. ಆದುದರಿಂದಲೇ ಶ್ರೀ ಶಂಕರಾಚಾರ್ಯರೂ ಸಹ ಆತ್ಮಾರ್ಪಣ ಮಾಡಲು ಒಪ್ಪಿ ಕಾಪಾಲಿಕ ಭೈರವನ ಕೋರಿಕೆಯಂತೆ ದೇಹತ್ಯಾಗಕ್ಕೆ ಸಿದ್ಧರಾದರು. ಅದ್ವೈತವನ್ನು ಸಾಕ್ಷಾತ್ಕರಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬಲಿ ಮೊದಲಾದ ಜ್ಞಾನಿಗಳು ಆತ್ಮಾರ್ಪಣೆ ಮಾಡಿ ಚಿರಂಜೀವಿಗಳಾಗಿರುತ್ತಾರೆ. ತಾನು ಸಾಧಿಸಿದ ಶಾರೀರಕ ಬಲ, ತಪೋಬಲಗಳನ್ನು ನಿದರ್ಶನವಾಗಿ ತೋರಿಸಿ ಶ್ರೀ ಕೃಷ್ಣನಿಗೆ ಆಶ್ಚರ್ಯವನ್ನುಂಟುಮಾಡಿದ ಊರ್ಧ್ವರೋಮ ಎಂಬ ಲೋಕೈಕವೀರನು ಕೃಷ್ಣನ ಆಶಯವನ್ನು ಅರಿತು ಮಹಾಭಾರತ ಯುದ್ಧರಂಗದ ಯೂಪಸ್ತಂಭಕ್ಕೆ ಬಲಿಯಾಗಲು ಸ್ವತಃ ಸಂತೋಷದಿಂದ ಒಪ್ಪಿ ಆತ್ಮಾರ್ಪಣ ಮಾಡಿ ಕೃಷ್ಣನ ಅನುಗ್ರಹಕ್ಕೆ ಪಾತ್ರನಾಗಿ ನಿತ್ಯಾನಂದಾನುಭವವನ್ನು ಹೊಂದಿದನು.

ಶಾರೀರಕ, ಮಾನಸಿಕ ಶ್ರಮ ಸೇವೆಗಳೆಲ್ಲವೂ ಜೀವನಯಾತ್ರೆಯಲ್ಲಿ ಪ್ರಾಣಾರ್ಪಣಕ್ಕೆ ಸಮಾನವಾಗಿರುವುವು. ಮನಸ್ಸಿನಲ್ಲಿ ದಾರ್ಢ್ಯಗುಣವೂ ಸ್ಥೈರ್ಯವೂ ವಿವೇಕವೂ ಕಡಿಮೆಯಾಗಿರುವವರೂ ಆಪಾತತಃ ನಡುಗಿ ಅಂಜುವವರೇ ಹೊರತು ವಸ್ತುತಃ ಮತ್ತು ಕಾರ್ಯತಃ ದಿಟ್ಟತನದಿಂದ ಪ್ರಾಣರಕ್ಷಣೆಗಾಗಿ ಅನೇಕ ಕೋಟಿ ದೇಹಿಗಳನ್ನು ದೇಹಮುಕ್ತರನ್ನಾಗಿ ಮಾಡಿ ಜೀವಿಸುತ್ತಾರೆ. ಅಂತಹವರಿಗೆ ಕ್ಷಾತ್ರದ ಆನಂದವನ್ನು ಅನುಭವಿಸುವ ಭವ್ಯವಾದ ಯೋಗವು ಸಿದ್ಧಿಸದು. ನಿತ್ಯನೂ ಆನಂದರೂಪಿಯೂ ಆದ ಭಗವಂತನಲ್ಲಿ (ಪರಮಾತ್ಮನಲ್ಲಿ) ಸಂನ್ಯಸ್ತವಾದ ಅಂದರೆ ಅರ್ಪಿತವಾದ ಸರ್ವವೂ ನೈಷ್ಕರ್ಮ್ಯ ಸಿದ್ಧಿದಾಯಕಗಳೇ ಹೊರತು ಕ್ಲೇಶಕಾರಿಗಳಲ್ಲ. ಜೀವನ ಯಾತ್ರೆಯ ಅರಿವಿಲ್ಲದವರು ಪ್ರಾಣಿವಧೆ, ಪ್ರಾಣಿಹಿಂಸೆ ಎಂಬ ಅಭಿಪ್ರಾಯವುಳ್ಳವರು. ಯಜ್ಞದಲ್ಲಿ, ಜೀವನಯಜ್ಞದಲ್ಲಿ ವಧೆ, ಹಿಂಸೆಗಳನ್ನು ಎಣಿಸುವ ಕುಹಕ ಕುತಂತ್ರಗಳು ವಸ್ತುತತ್ವ ರೀತ್ಯಾ ಅಪರಾಧವಾಗಿ ಸ್ವತಃ ಪ್ರಾಯಶ್ಚಿತ್ತ ಶಿಕ್ಷೆ, ದಂಡಗಳಿಗೆ ಗುರಿಯಾಗುವುವು. ಹಿಂಸಾ ಶಬ್ದ ಪೂರ್ವಕ ಹೇಳುವ ಅಹಿಂಸೆಯೂ ಧರ್ಮ; ಹಿಂಸೆಯೂ ಧರ್ಮವೇ. ಹಿಂಸಾತ್ಮಕರಾದವರೇ ಅಹಿಂಸಾ ವಾದ ಮಾಡುವವರು ಎಂಬುದು ಮಾನವ ಶ್ರೇಷ್ಠರ ಅನುಭವ.

ವ್ಯಕ್ತಿಯು ಮುಖ್ಯವಾಗಿ ಆತ್ಮಾರ್ಪಣಕ್ಕಾಗಲೀ ಆತ್ಮಾರ್ಪಣಕ್ಕೆ ಸ್ವತಃ ಅವಕಾಶವಿಲ್ಲದಾಗ ಪ್ರತಿನಿಧಿಯ ಮೂಲಕ ಆತ್ಮಾರ್ಪಣಕ್ಕಾಗಿ ರಾಜನೀತಿ ಮತ್ತು ಸಂಸ್ಕೃತಿ ಕ್ರಮಗಳಲ್ಲಿ ಸಿದ್ಧನಾಗಿ ಪ್ರಪಂಚದ ಕಲ್ಯಾಣವನ್ನು ಸಾಧಿಸಬೇಕು. ನಿತ್ಯ ವೈಶ್ವದೇವಾದಿ ಯಜ್ಞಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ರಹಸ್ಯ; ಪಶುಯಾಗದ ಮರ್ಮ; ರಾಷ್ಟ್ರ ರಕ್ಷಕ ಯೋಧರ ತ್ಯಾಗ; ಇದು ಉದ್ಯಮವಲ್ಲ, ವೃತ್ತಿಯೂ ಆಗಬಾರದು. ಕಡ್ಡಾಯವಾಗಿರದೆ, ವ್ಯಕ್ತಿಯ ಸಂಸ್ಕೃತಿಗಳ ಫಲವು ತಾನೇ ತಾನಾಗಿ ಹೊರಹೊಮ್ಮುವ ನಿಷ್ಠೆ ಎಂಬ ಸಿದ್ಧಿಯಾಗಿರುವುದು. ನಿಷ್ಠೆಯಿಂದ ಕೂಡಿದ ಮಾಂಸಾಹಾರವನ್ನು ಅಲ್ಲಗಳೆಯುವುದು ರಾಜನೀತಿಯಲ್ಲ.

ವಿರೋಧವಾದ ಆವರಣದಲ್ಲಿ ಸಿದ್ಧಿ ಪ್ರತಿಬಂಧಕಗಳು ಬಂದಾಗ್ಯೂ ಬಲಿಚಕ್ರವರ್ತಿಯು ಶಿವವಿಷ್ಣು ಭೇದವೆಂಬ ಆಸುರೀ ಭಾವವನ್ನು ತಳ್ಳಿ ಹಾಕಿ ಸ್ವಾತ್ಮ ನಿವೇದನ ಮಾಡಿದ ಅನುಸಂಧಾನದ ಫಲವಾಗಿ ಬ್ರಹ್ಮ ರಂಧ್ರದಲ್ಲಿ ಶ್ರೀ ಗುರುಪಾದವನ್ನು ಸಾಕ್ಷಾತ್ಕರಿಸುವ ಯೋಗಸಿದ್ಧಿಯನ್ನು ವಾಮನ ಗುರುವಿನ ಪೂಜೆಯಿಂದ ಪಡೆದು ಅಮರನಾಗಿರುತ್ತಾನೆ. ಈ ಗುಟ್ಟನ್ನು ತಿಳಿಯದೆ ಬಲಿಯು ಪರಾಜಿತನಾದ ಎಂದು ಪ್ರಾಪಂಚಿಕವಾಗಿ ಭಾವಿಸುವುದು ಶ್ರೇಯಸ್ಸಿಗೆ ಕುಂದಕ. ಈ ರೀತಿಯಾದ ಸಂಸ್ಕೃತಿಯ ಸೋಪಾನವು ಲಾಭವಾಗುವವರೆಗೂ ಸರ್ವ ಸಾಮಾನ್ಯವಾದ ಪಂಚಾಯತನ ಪೂಜಾ ಸಂಸ್ಕೃತಿಯ ಅಭ್ಯಾಸವು ಯೋಗಕ್ಷೇಮಕ್ಕೆ ಸಹಕಾರಿಯಾಗುವುದು; ಹಾನಿಯಾಗುವುದಿಲ್ಲ. ಶ್ರೇಯಃ ಪ್ರದವಾಗುವುದು.

ಅರ್ಚಂತಃ ತರುಣೇಂದುಚೂಡಮಸಕೃತ್ ಸಂಕೀರ್ತಯಂತೋ ಹರಿಂ
ಧ್ಯಾಯಂತಃ ಪ್ರಣವಸ್ವರೂಪತರಣೀ ಶಕ್ತಿಂ ಪರಾಂ ಶಾಂಭವೀಂ।
ಯೋಗಂ ಕರ್ಮಣಿ ಆಸ್ಥಿತಾ ನಯವಿದೋ ಬ್ರಾಹ್ಮೇಪ್ರಿಯೇ ಬ್ರಾಹ್ಮಣೇ
ದೇಶೇ ಶಂ ವಿತರಂತಿ ಧರ್ಮ ಸುಭಗಂ ಸಾಮ್ರಾಜ್ಯಮಾಮಂಡಲಂ ॥ *

— ಎಂಬಂತೆ ರಾಜನೀತಿಯನ್ನು ಬಲ್ಲ ಶ್ರೀ ಶಂಕರಾಚಾರ್ಯರು ಪಂಚಾಯತನ ಪೂಜಾ ಕ್ರಮವನ್ನು ಬೋಧಿಸಿರುತ್ತಾರೆ.

ಗಂಗಾಗೌರೀಸಮೇತ ಪರಮೇಶ್ವರ, ಭೂದೇವೀ ಲಕ್ಷ್ಮೀ ಸಮೇತ ನಾರಾಯಣ, ಸಿದ್ಧಿ ವಿದ್ಯಾ ಬುದ್ಧಿ ಸಮೇತ ಪ್ರಣವ ಮುಖಗಣೇಶ, ಛಾಯಾ ಸಂಜ್ಞಾ ಸಮೇತ ಶ್ರೀ ಸೂರ್ಯನಾರಾಯಣ, ಜಗನ್ಮಾತೆ

---

* ನೀಲಕಂಠ ದೀಕ್ಷಿತರ ಕೃತಿಯನ್ನು ಅಳವಡಿಸಿ ಬ್ರಾಹ್ಮಣಧರ್ಮ ಗ್ರಂಥದಲ್ಲಿ ಪ್ರಕಟಿಸಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾವ, ಆದಿಶಕ್ತಿ ಪ್ರಕೃತಿ (ಹೈಮವತೀ) ಪರಶಿವಗಳೆಂಬ ಪಂಚಭೂತಾತ್ಮಕ ಪಂಚದೇವತಾ ದಾಂಪತ್ಯವನ್ನು ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಭಾವಿಸಿ ಅರ್ಚಿಸುವುದು ಉತ್ತಮ ಸಂಸ್ಕೃತಿ. ಯಾವ ದೇಹಿಯೂ ದೇವತೆಗಳಾದ ಗುಣಕರ್ಮಶಕ್ತಿಗಳ ಮೋಹಕ್ಕೆ ಒಳಗಾಗಿ, ಸ್ವಕಪೋಲ ಕಲ್ಪಿತವಾಗಿ ಪೂಜೆಯನ್ನು ಕೈಕೊಳ್ಳುವಂತಿಲ್ಲ. ಸ್ವಾನುರೋಧವಾಗಿರುವುದನ್ನು ಮಾತ್ರ ಪುರಸ್ಕರಿಸಬೇಕು. ಈ ರಹಸ್ಯದ ಅರಿವು ಸಿದ್ಧಿಸೂಚಕವಾಗುವುದು. ದೇಹಿಯ ಸಂಪ್ರದಾಯ ಮತ್ತು ವಿಶಿಷ್ಟಗುಣಕರ್ಮಶಕ್ತಿಗಳನ್ನು ತಿಳಿದು ಉಪದೇಶ ಮಾಡುವವರು ವಿರಳ. ಸಾಮಾನ್ಯವಾಗಿ ಗುರು ಆಚಾರ್ಯ ಪದವಿಯನ್ನೇರಿದವರು ಈ ಮರ್ಮವನ್ನು (ಶಿಷ್ಯನ ಅಧಿಕಾರ – ಅರ್ಹತೆಯನ್ನು) ತಿಳಿಯದೆ ಉಪದೇಶಿಸಿದರೆ ವಿಮುಖ ಸಂಸ್ಕೃತಿಯ ಮಟ್ಟಕ್ಕೆ ಇಳಿಯಬೇಕಾಗುವುದು.

ದೇಹಿಯ ಗುಣ ಕರ್ಮಶಕ್ತಿ ಋಣಾನುಬಂಧಗಳಿಗೆ ಅನುರೋಧವಾಗಿರುವ ಮತ್ತು ವಿರೋಧವಾಗದಿರುವ ಪ್ರಧಾನವಾದ ಏಕೈಕ ದೇವತಾ ದಾಂಪತ್ಯವನ್ನು ಕುಲದೇವತೆಯನ್ನಾಗಿಯೂ ಇಷ್ಟದೇವತೆಯನ್ನಾಗಿಯೂ ಸದಾ ಅಂತಃ, "ಸೋಹಂ – ಸ್ವಾತ್ಮ" ನಲ್ಲಿ ಭಾವಿಸಬೇಕು ಹೊರಗಡೆಯಲ್ಲಿ ಸರ್ವತ್ರ ಸಾಕ್ಷಾತ್ಕರಿಸಿ ಅರ್ಚನಾದಿ ಕಾರ್ಯ ನಿರ್ವಾಹಗಳಿಗಾಗಿ ವಸ್ತುಗಳಲ್ಲಿಯೂ ರೇಖಾಯಂತ್ರಗಳಲ್ಲಿಯೂ ಪಂಚಭೂತ ದ್ರವ್ಯಗಳಲ್ಲಿಯೂ ಅಂತಃ, ಬಹಿಃ, ಧ್ಯಾನಿಸಿ ಷೋಡಶೋಪಚಾರ ಪೂಜೆಗಳಿಂದ ಗುರುವನ್ನೂ ಪರಮಾತ್ಮನನ್ನೂ ಸೇವಿಸಬೇಕು. ಜ್ಞಾನಭಕ್ತಿಯುತವಾದ, ಕರ್ಮಯೋಗವೆಂಬ ಕರ್ಮಸಂನ್ಯಾಸ ಅಥವಾ ಕರ್ಮ ಸಂನ್ಯಾಸವೆಂಬ ಕರ್ಮಯೋಗ ಇವುಗಳ ಅಭ್ಯಾಸದಿಂದಲೂ ನಿಯಮಗಳಿಂದಲೂ ಸಂಸ್ಕೃತವಾದ ಸಾಮ್ರಾಜ್ಯ ಸಮತಾ ಶಕ್ತಿಯನ್ನು ಕೊಡುವ ಆತ್ಮಾರ್ಚನ, ಆತ್ಮಯಜ್ಞ ಸಂಸ್ಕೃತಿಯು ಸಕಲದೇಹಿಗಳಿಗೂ ಲಭ್ಯವಾಗುವುದು.

ಚೇತನ ಮತ್ತು ಅಚೇತನವೆಂದು ವ್ಯಾವಹಾರಿಕವಾಗಿ ಕಲ್ಪಿತವಾದುವುಗಳೆಲ್ಲಾ ಚೈತನ್ಯದಲ್ಲಿಯೇ ಐಕ್ಯವಾಗಿ ಅಡಕವಾಗುವುವು. ಅಚೇತನಗಳೆನಿಸುವ ಧಾತು ಮೊದಲಾದ ವಸ್ತುಗಳಲ್ಲಿಯೂ ಚೇತನದಿಂದ ಅನುಭವಕ್ಕೆ ಬರುವ ಗುಣಕರ್ಮಶಕ್ತಿಗಳು ತೋರಿಬರುವುವು. ಅಯಸ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಾಂತ ಧಾತುವಿನ ಆಕರ್ಷಣೆ; ವಸ್ತು ಘರ್ಷಣದಿಂದ ಶಾಖೋತ್ಪತ್ತಿ; ಜಲಪಾತದಿಂದ ವೈದ್ಯುತಶಕ್ತಿ ಇವುಗಳು, "ವಸ್ತುಗಳೆಲ್ಲಾ ಚೇತನಾತ್ಮಕಗಳೆಂದೂ ಆತ್ಮಮಯ"ವೆಂದೂ ದೃಢೀಕರಿಸುತ್ತವೆ. ಅಣುವಿಚ್ಛೇದನವೂ ಸಹ ಚೇತನ ಗುಣಕರ್ಮಶಕ್ತಿ ವ್ಯಂಜಕವೇ ಆಗಿರುತ್ತದೆ.

ನಿರಾಕಾರ, ನಿರ್ಗುಣ ವಸ್ತುವನ್ನು ಸ್ಥೂಲವಾಗಿ ಪೂಜಿಸಲು ಅವಕಾಶವಿಲ್ಲ. ಅದನ್ನು ಸಾಕಾರ, ಸಗುಣವಾದಂತೆ ಅನುಭವಿಸುವಾಗ, ಅದು 'ನಿರಾಕಾರ, ನಿರ್ಗುಣ ವಸ್ತುವಿಗಿಂತ ಬೇರೆ' ಯೆಂದು ತಿಳಿಯಕೂಡದು. ನಿರಾಕಾರ, ನಿರ್ಗುಣ ವಸ್ತುವಿಗೆ ಸಾಕಾರ, ಸಗುಣ ಪ್ರಪಂಚ ವಸ್ತುಗಳ ಪೂಜೆಯು ಸಲ್ಲುವುದು. ಇವುಗಳನ್ನು 'ಮೂರ್ತಿ, ವಿಗ್ರಹ' ಎಂದು ಭಾವಿಸಿ, 'ಇವು ದೇವರಲ್ಲ' ಎಂದು ಹೇಳುವ ಮೌಢ್ಯವು ಭಾರತೀಯರಿಗೆ ಸಲ್ಲದು. ಸ್ಮರಣ, ಕೀರ್ತನ, ಭಜನಗಳೂ ಸಹ ನಿರ್ಗುಣವಸ್ತುವನ್ನೊಳಗೊಂಡ ಸಗುಣ ದೇವತೆಗೇ ಸಲ್ಲತಕ್ಕವು.

ಮರುಭೂಮಿಯು ಬೆಂಗಾಡಿನಲ್ಲಿ, ಕಾರಾಗೃಹದಲ್ಲಿ, ಅವಶ್ಯವಾದ ಸಾಮಗ್ರಿ ವಾ ವಸ್ತುಗಳ ಸಂಪರ್ಕಕ್ಕೆ ಅವಕಾಶವಿಲ್ಲವಾದುದರಿಂದ ಕೇವಲ ಮಾನಸಿಕವಾಗಿ ಸಗುಣ ದೇವತಾ ಸ್ಮರಣಾದಿಗಳನ್ನು ಮಾಡಬಹುದು. ನೀರಿಲ್ಲದೆಡೆಯಲ್ಲಿ ಶೌಚಕ್ಕಾಗಿ ಬೇರೇ ದ್ರವ್ಯವನ್ನು ಉಪಯೋಗಿಸಬಹುದು. ಶೌಚ ಸಂಸ್ಕೃತಿ ಪೂಜಾ ಸಂಸ್ಕೃತಿಗಳು ಮಾನವೀಯತೆಗೆ ಸೇರಿದುವು. ಇವು ಅಂತಃ ಅಥವಾ ಬಹಿಃ ಅಥವಾ ಉಭಯಾತ್ಮಕವಾಗಿ ಸಮಯೋಚಿತವಾಗಿ ಸಂದರ್ಭಾನುಸಾರ ಸ್ವತ ಏವ ನಡೆದುಹೋಗುತ್ತವೆ.

ಭಾರತದಲ್ಲಿ ಮೃಗ ಪಕ್ಷಿ ಪಶು ತಿರ್ಯಗ್ಜಂತುಗಳೂ ಸಹ ದೇವತಾರಾಧನ ತತ್ವಗಳನ್ನು ಸ್ವಭಾವತಃ ತಿಳಿದಿರುವಂತೆ ವರ್ತಿಸುತ್ತವೆ. ಈ ಜ್ಞಾನವು ಆತ್ಮಗುಣವೆನಿಸಿ ಅನಿವಾರ್ಯವಾಗಿರುತ್ತದೆ. ಗಜೇಂದ್ರ ದೇಹವನ್ನು ಧರಿಸಿದ ಮಾನವ ಜೀವನೂ, ಮೊಸಳೆಯಾದ ಗಂಧರ್ವ ಜೀವನೂ, ಸರೋವರವೂ, ಕಮಲಪುಷ್ಪವೂ, ಕಮಲಪುಷ್ಪಾಪಚಯವೂ ಮತ್ತು ಆಕಾಶವೆಂಬ ವಿಷ್ಣುಪದದಲ್ಲಿ ಪುಷ್ಪಾರ್ಪಣವೂ ಇವುಗಳ ದೇವತ್ವಾನುಸಂಧಾನವು ಪೂಜಾಸಿದ್ಧಿಯನ್ನು ಉಂಟುಮಾಡುವುದು.

CC-0. In Public Domain. Gurukul Kangri Collection, Haridwar

ಮನುಷ್ಯಕೃತವಾದ ಅಥವಾ ಸ್ವಾಭಾವಿಕವಾಗಿ ಜನ್ಮವೆತ್ತಿದ

Digitized by Arya Samaj Foundation Chennai and eGangotri

ಮೂರ್ತಿಗಳಲ್ಲಾಗಲೀ, ಕೇವಲ ವಸ್ತುಗಳಲ್ಲಾಗಲೀ ಖಗೋಳ ಭೂಗೋಳ ಗಳ ಪಂಚಭೂತಗಳಲ್ಲಾಗಲೀ ಜಲಚರ ಸಸ್ಯಲತಾತರುಕ್ರಿಮಿಕೀಟಸರ್ಪ ಮೃಗಪಕ್ಷಿಪಶುಮಾನವರಲ್ಲಾಗಲೀ ಸ್ವಂತದೇಹದಲ್ಲಾಗಲೀ ದೇವತ್ವವ ನ್ನು ಸಾಕ್ಷಾತ್ಕರಿಸಿ ಪೂಜೆಯನ್ನು ಸಲ್ಲಿಸುವರು. ಇದನ್ನು ತಿಳಿಯದ ವ್ಯಕ್ತಿಗಳು ಭಾರತದ ಗಜೇಂದ್ರನಂತಹ ವನಮೃಗಕ್ಕಿಂತಲೂ ಕೀಳಾಗಿ ಭಾವಿಸಲ್ಪಡಬೇಕಾಗುತ್ತದೆ. "ಮಂತ್ರಾಸ್ತ್ರಭೂಮಿ"ಯಲ್ಲಿ ಈ ಬಗೆಯ ಪೂಜಾ ವಿಧಾನಗಳು ತತ್ವಶಾಸ್ತ್ರ ವಿಚಾರಗಳನ್ನೂ ಜನ್ಮಾಂತರ ತತ್ವ ವನ್ನೂ ತಿಳಿದವರಿಗೆ ಕರತಲಾಮಲಕದಂತೆ ಸ್ಪಷ್ಟವಾಗುವುವು. ದಾರಿ ಯಲ್ಲಿ ಕಂಡ ವೃಕ್ಷಾದಿಗಳೆಲ್ಲವನ್ನೂ ಅಂಗಡಿ ಬೀದಿಗಳಲ್ಲಿ ಮಾರಾಟಕ್ಕೆ ಇಟ್ಟಿರುವ ವಿಗ್ರಹಾದಿಗಳನ್ನೂ ಯಾವ ಭಾರತೀಯನೂ ಪೂಜಿಸುವುದಿಲ್ಲ. ಕಲ್ಲು ನಾಗರಕ್ಕೆ ವಿಗ್ರಹವೆಂದು ಪೂಜೆಯನ್ನು ಸಲ್ಲಿಸುವುದಿಲ್ಲ. ಕಲ್ಲು ನಾಗರಲ್ಲಿ ದೇವತ್ವವನ್ನು ಪೂಜಾ ನಿಮಿತ್ತ ಆವಾಹಿಸಿದನಂತರ ಪೂಜೆ ಯು ದೇವರಿಗೆ ಸಲ್ಲುವುದು. ಅದರಂತೆಯೇ ದೇವ ಗುಣಕರ್ಮಶಕ್ತಿಗಳ ನ್ನು ಪಡೆದು ದೇವತ್ವ ಸಾಕ್ಷಾತ್ಕಾರಕ್ಕೆ ಅರ್ಹವಾದ ವಿಷಜಂತುಗಳಾಗಲೀ ಕ್ರೂರ ಮೃಗಗಳೇ ಆಗಲೀ ಪೂಜೆಯನ್ನು ಹೊಂದುವುವು. ಶಿವನು ಕಲ್ಲಾದನು ಎಂದು ಭಾವಿಸುವವರು ಅಜ್ಞಾನದ ಕಗ್ಗತ್ತಲೆಯಲ್ಲಿ ತಡವ ರಿಸುವವರೇ ಆಗಿರುತ್ತಾರೆ.

### ಪೂಜಾಫಲ ವಿನಿಯೋಗ

ಪೂಜಾ ಸತ್ಕಾರಗಳನ್ನು ಸಾಕ್ಷಾತ್ತಾಗಿ ನಿರ್ವಾಹ ಮಾಡುವವ ರಿಂದ ನಡೆಯುವ ವ್ಯಾಪಾರಗಳು ಆಯಾ ಕಾರ್ಯಕ್ಷೇತ್ರ ವಲಯಗಳಿಗೆ ಸಂಬಂಧಪಟ್ಟ ಜನ ಸಮೂಹಕ್ಕೆಲ್ಲಾ ಅನ್ವಯಿಸುವುವು. ಸಾರ್ವಜನಿಕ ಕಾರ್ಯಾಲಯಗಳಲ್ಲಿ, ಯಜ್ಞಾಲಯಗಳಲ್ಲಿ, ಪ್ರಯೋಗ ಶಾಲೆಗಳಲ್ಲಿ, ಕುಟುಂಬದಲ್ಲಿ ಒಬ್ಬೊಬ್ಬರು ಒಂದೊಂದು ಕಾರ್ಯಾಂಗವನ್ನು ನಿರ್ವಹಿ ಸಿದರೆ ಆಯಾ ಕಾರ್ಯಕ್ಷೇತ್ರದವರೆಲ್ಲರೂ ಆ ಕಾರ್ಯವನ್ನು ನಿರ್ವಹಿಸಿದಂತೆ ಆಗುವುದೆಂಬುದನ್ನು ಮರೆಯಬಾರದು. ಅದರಂತೆ ಪ್ರತಿನಿಧಿ ತತ್ವಕ್ಕೆ ಅನುಗುಣವಾಗಿ ಒಬ್ಬೊಬ್ಬರೇ ಸತ್ಕಾರ ಕಾರ್ಯಗಳಲ್ಲಿ ಪ್ರವರ್ತಿಸಿದಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅವರವರ ವಲಯಕ್ಕೆ ಸಂಬಂಧಪಟ್ಟ ಜನರೆಲ್ಲರೂ ಸಾಮೂಹಿಕವಾಗಿ ಭಾಗವಹಿಸಿದಂತಾಗುವುದು. ಪ್ರತಿನಿಧಿಗೆ, ಪ್ರಮುಖ ಅಥವಾ ಮುಖ್ಯಸ್ಥನಿಗೆ ದತ್ತವಾದ ಪ್ರಸಾದವಾಗಲೀ ಮರ್ಯಾದೆಯಾಗಲೀ ಅವನ ಹಿಂದೆ ಇರುವ ಸರ್ವರಿಗೂ ಸೇರಿದುವೆಂಬುದನ್ನು ಆ ಸನ್ನಿವೇಶದಲ್ಲಿ ಸರ್ವರ ಸಾಕ್ಷಿಯಾಗಿ ಪ್ರಸಾದ ಮರ್ಯಾದೆಯನ್ನು ಸ್ವೀಕರಿಸುವ ವ್ಯಕ್ತಿಗಳು ಭಾವಿಸಬೇಕು ; ಮತ್ತು ಅವರ ಹೆಸರಿನ, ಅಧಿಕಾರದ ಹಿಂದೆ ಪರಿಗಣಿಸಲ್ಪಡಬಹುದಾದ ಬಹು ಸಂಖ್ಯೆಯ ವ್ಯಕ್ತಿಗಳೂ ತಿಳಿಯಬೇಕು. ಪ್ರತಿನಿಧಿಗಾಗಲೀ ಆರಿಸಿದ ಕೆಲವು ಪ್ರಮುಖ ವ್ಯಕ್ತಿಗಳಿಗಾಗಲೀ ಮಹಾತ್ಮರಿಂದ ಕೊಡಲ್ಪಟ್ಟ ಪ್ರಸಾದವು ಆ ವ್ಯಕ್ತಿಗಳ ಸಮುದಾಯಕ್ಕೆ, ವಲಯಕ್ಕೆ ಸೇರಿದವರಿಗೆಲ್ಲಾ ಸಂದಾಯವಾದಂತಾಗಿ ಫಲವು ಲಭಿಸುವುದು ಸ್ವತಸ್ಸಿದ್ಧವೆಂಬುದು ಸಂಸ್ಕೃತಿಯ ಸಂವಿಧಾನದ ರಹಸ್ಯ. ಪಂಚಭೂತಾತ್ಮಕವಾದ ಪ್ರಸಾದ ಅನುಗ್ರಹ ವಚನಗಳು ದೂರದಲ್ಲಿರುವವರಿಗೆ ವಾಯು ತರಂಗ ತತ್ವದ ಮೂಲಕ ಸೂಕ್ಷ್ಮರೂಪದಲ್ಲಿ ಒಯ್ಯಲ್ಪಟ್ಟು ದೇಹಿಗಳನ್ನು ಸೇರುವುದು.

ಗೃಹದಲ್ಲಿ, ಕುಟುಂಬದಲ್ಲಿ ಪ್ರಧಾನರಾದ ದಂಪತಿಗಳಲ್ಲಿ ಗೃಹಪತಿಯು ನಡೆಸಿದ ಯಜ್ಞ ಪೂಜಾ, ಜಪ ಮೊದಲಾದ ಪವಿತ್ರ ಕಾರ್ಯಗಳ ಫಲದಲ್ಲಿ ಅರ್ಧಭಾಗಕ್ಕೆ ಗೃಹಿಣಿಯು ಅರ್ಹಳೆಂದೂ ಫಲವು ಸ್ವತ ಏವ ಸ್ವಾಭಾವಿಕವಾಗಿಯೇ ಗೃಹಿಣಿಯ ಲೆಕ್ಕಕ್ಕೆ ಅಳವಡಿಸಲ್ಪಡುವುದೆಂದೂ ಮನಗಂಡಿರುವ ಋಷಿಗಳ ದಿವ್ಯತೆಯು ಪ್ರಶಸ್ತವಾದುದು. ಗೃಹಪತಿಯ ಪಾಪಕಾರ್ಯಗಳ ಫಲವು ಗೃಹಿಣಿಯನ್ನು ಬಾಧಿಸುವುದಿಲ್ಲವೆಂಬ ಸತ್ಯಾಂಶವೂ ಸುಲಭವಾಗಿ ಗೋಚರವಾಗುವುದು. ಇದರಿಂದಲೇ ಒಂದು ಕುಟುಂಬದಲ್ಲಿ ಲೌಕಿಕ ಮತ್ತು ವೈದಿಕ ಕ್ಷೇತ್ರಗಳಲ್ಲಿ ಇದಕ್ಕೆ ಅನುಗುಣವಾದ ಪ್ರಮಾಣ ವಚನವೂ ಸಹ ವಿವಾಹ ಸಂಸ್ಕೃತಿಯ ಒಂದು ಭಾಗವಾಗಿರುವುದು. ಸ್ತ್ರೀಯರ ಸೇವಾಕಾರ್ಯವೂ ಪುರುಷರ ಕಾರ್ಯವೂ ಸಮಾನವಾದ ಹೊಣೆಗಾರಿಕೆಯುಳ್ಳದ್ದೆಂದು ಸಂಸ್ಕೃತಿಯು ಘೋಷಿಸುವುದು. ಇದನ್ನು ಮರೆತು ಉಚ್ಚನೀಚ ಭಾವನೆಗೆ ಅವಕಾಶ ಕೊಡುವುದು ವಿವೇಚನೆಯಿಲ್ಲದಿರುವಿಕೆಯ ಫಲವಾಗಿರುತ್ತದೆ ಮತ್ತು ಅದಕ್ಕೆ ತಕ್ಕಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿರೋಧಾಸುಭವವಾಗುವುದು. ಪತಿಪತ್ನಿಯರ ಸಚ್ಚಾರಿತ್ರ್ಯಕ್ಕಾಗಲೀ ದುಷ್ಟ ಚಾರಿತ್ರ್ಯಕ್ಕಾಗಲೀ ಪತಿಪತ್ನಿಯರೇ ಪರಸ್ಪರ ಹೊಣೆಗಾರರೆಂಬ ಖಚಿತ ನಿಯಮವನ್ನು ಸರ್ವರೂ ಪೃಥವಾಗಿ ತಿಳಿಯಬೇಕು.

ವ್ಯಕ್ತಿ, ಕುಟುಂಬ, ಸಮಾಜ, ದೇಶ, ರಾಷ್ಟ್ರ ವಲಯಗಳ ಪ್ರಜೆಗಳು ಸ್ವಕರ್ಮಫಲದ ಮರ್ಮವನ್ನು ತಿಳಿದು ಹಿಗ್ಗದೆಯೂ ತಗ್ಗದೆಯೂ ಮನೋವಿಕಾರಾದಿ ಕಳಂಕವನ್ನು ತಂದುಕೊಳ್ಳದೆಯೂ ಸಮಾಧಾನ ಸಂತುಷ್ಟಿ ಭಾವನೆಗಳಿಂದ ಸರ್ವರಿಗೂ ಸರ್ವ ವಿಧವಾದ ಸಂಕಲ್ಪಗಳೂ, ಕಾಮನೆಗಳೂ ಇಷ್ಟಾನಿಷ್ಟ ಪ್ರಾಪ್ತಿಗಳೂ ಸ್ವಸ್ವರೂಪಜ್ಞಾನವಾಗುವ ಪರ್ಯಂತ ಉಂಟಾಗುವುವೆಂದು ಮನಗಂಡು ಉಚ್ಚ, ನೀಚ, ದ್ವೇಷ, ಅಸೂಯೆ ಮೊದಲಾದ ದುರ್ಭಾವನೆಗಳನ್ನು ತಳ್ಳಿಹಾಕಬೇಕು. ಸರ್ವರಿಗೂ ಸಮಾನವಾದ ಪೂಜಾಯಜ್ಞಸತ್ಕಾರಗಳೇ ಮೊದಲಾದ ನಲವತ್ತು ಬಗೆಯ ಯಜ್ಞಗಳ ಸಂಸ್ಕೃತಿ ಪ್ರಭಾವವು ವಾತಾವರಣದಲ್ಲಿ ತುಂಬಿ, ಹರಡಿ ಸನ್ನಿವೇಶವನ್ನು ಶುದ್ಧಿಗೊಳಿಸಿ ಅಪೂರ್ಣವಾದುದು ಪೂರ್ಣವಾಗುವ ಸಂಸ್ಕೃತಿಯ ಪರಿಸ್ಥಿತಿಯನ್ನು ಪ್ರಜೆಗಳು ಪರಿಗಣಿಸಿ ಚಿತ್ತಶುದ್ಧಿ ಲಹರಿಯಲ್ಲಿ ನಲಿಯುವಂತೆ ಮಾಡುವುದು.

ಪೂಜಾ ಪರಿಣಾಮ ತತ್ವ

ನ ದೇವಾ ಯಷ್ಟಿಮಾದಾಯ ರಕ್ಷಂತಿ ಪಶುಪಾಲವತ್ ।
ಯಂ ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಮ್ ॥

ಎಂಬದಾಗಿ ಫಲ ವಿನಿಯೋಗ, ಫಲಾನುಭವ ಕ್ರಮವು ಘೋಷಿಸುತ್ತದೆ. ದೇವತ್ವ ಸಾಧನಸಂಸ್ಕೃತಿಗೆ ಒಳಪಟ್ಟ ಕರ್ಮಗಳಿಂದ ಪಿಂಡಾಂಡ ಮತ್ತು ಬ್ರಹ್ಮಾಂಡಗಳಲ್ಲಿ ವ್ಯಕ್ತಿಗೆ ಸಾಮರಸ್ಯ ಸುಖಶಾಂತಿಗಳನ್ನು ಉಂಟುಮಾಡುವ ಅಥವಾ ಉಂಟುಮಾಡಬೇಕಾದ ಆವರಣ ಪರಿಸ್ಥಿತಿಗಳೂ ದೇಹಿಗಳೂ ಪೂಜಾ ಪ್ರಭಾವ ತರಂಗ ಶಕ್ತಿಗಳಿಗೆ ಒಳಪಟ್ಟು ತಾನೇ ತಾನಾಗಿ ಸದ್ಬುದ್ಧಿ ಸತ್ಪ್ರವರ್ತನೆಗಳಿಗೆ ಅವಕಾಶವನ್ನು ತಂದುಕೊಳ್ಳುವುವು ಮತ್ತು ಸಂಬಂಧಪಟ್ಟ ಪಿಂಡಾಂಡ, ಬ್ರಹ್ಮಾಂಡ ವಸ್ತುಗಳಲ್ಲಿ ಸುಖಾದಿ ಫಲಸಿದ್ಧಿಗಳನ್ನು ಕಲ್ಪಿಸುವುವು. ಸಾಮಾನ್ಯವಾಗಿ ದೇವ ಗುಣ ಕರ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಕ್ತಿಗಳ ಪ್ರಯೋಗಗಳು ಶಬ್ದಸೌಷ್ಠವ, ಶುದ್ಧವಾದ ಉಚ್ಚಾರಣೆಗಳ ಸಹಾಯದಿಂದ ನಡೆಯುವುವು. ದುರ್ಭಾವನೆ (ದುರ್ಬುದ್ಧಿ), ದುಷ್ಟ ಸಂಕಲ್ಪದ ಆಸುರೀ ವರ್ತನೆಗಳೂ ಅಪಶಬ್ದ ಪ್ರಯೋಗಗಳೂ ದುಷ್ಟ ಪರಿಣಾಮವನ್ನುಂಟುಮಾಡುವುವು. ಪಿಂಡಾಂಡ, ಬ್ರಹ್ಮಾಂಡವೆಲ್ಲವೂ ದುಷ್ಟ ಪರಿಣಾಮ ವ್ಯಾಪನೆಯಿಂದ ಅಶಾಂತವಾಗುವುವು. ಯಾರೇ ಆಗಲಿ ತಮಗೆ ಹೊಂದಿಕೊಳ್ಳದಿರುವ ಮತ್ತು ಅಡಿ ಮೇಲು ಮಾಡುವ ಅಥವಾ ಕೆಳಗಿನ ಅಂತಸ್ತಿನ ಗುಣಕರ್ಮಶಕ್ತಿಗಳ ಪ್ರಭಾವಕ್ಕೆ ಒಳಪಟ್ಟ ಪೂಜೆಯನ್ನು ಪ್ರೋತ್ಸಾಹಿಸಿದರೂ, ಪ್ರಸಾದಾದಿಗಳನ್ನು ಸ್ವೀಕರಿಸಿದರೂ ವ್ಯಭಿಚಾರ ದೋಷ ಭಾಗಿಗಳಾಗಿ ವ್ಯತ್ಯಸ್ತವಾದ ಫಲವನ್ನು ಅನುಭವಿಸುವುದರಲ್ಲಿ ಆಶ್ಚರ್ಯವೇನೂ ತೋರಲಾರದು.

ಪೂಜ್ಯವೂ ಪ್ರತಿಷ್ಠಿತವೂ ಆದ ದೇವತೆಗಳ ಪೂಜಾ ಪ್ರಯೋಗ ಮಂಟಪದ ಸ್ಥಾನದಲ್ಲಿ ಅಪ್ರಿಯವಾದ ವಸ್ತುಗಳು ಪ್ರವೇಶಿಸುವುದರಿಂದ ಮತ್ತು ಅಪಶಬ್ದ ಅಥವಾ ಅವಾಚ್ಯ ಶಬ್ದಗಳ ಪ್ರಯೋಗದಿಂದ ಪೂಜಾ ಕರ್ಮ ಸಂಸ್ಕೃತಿಗೆ ಕುಂದಕವಾಗುತ್ತದೆ. ಪ್ರಯೋಗಶಾಲೆಯಲ್ಲಿ ಭೌತ ಮತ್ತು ರಾಸಾಯನಿಕ ಪ್ರಯೋಗಗಳು ವಿರುದ್ಧ ವ್ಯಾಪಾರಗಳಿಂದ ಪರಿಣಾಮದಲ್ಲಿ ಆಭಾಸವಾಗುವಂತೆ ಉಂಟಾಗುವ ಅಮಂಗಳವನ್ನು ತಪ್ಪಿಸಲು ಆಸನಶುದ್ಧಿ ಭೂತಶುದ್ಧಿ ಮೊದಲಾದ ಅವಾಂತರ ಸಂಸ್ಕಾರಗಳು "ಅಪಹತಾ ಅಸುರಾಃ" ಮೊದಲಾದ ಪವಿತ್ರ ಮಂತ್ರಗಳ ಪೂರ್ವಕ ನಡೆಯಬೇಕಾಗಿರುವುದು. ಎಲ್ಲರಿಗೂ ತಿಳಿದಿರುವಂತೆ, ಪರಮಾತ್ಮನ ಪ್ರಭಾವದಿಂದ ಸರ್ವವೂ ಅದರದರ ಪರಿಮಿತಿಯಲ್ಲಿ ಸಾಮಾನ್ಯವಾಗಿ ಪ್ರಿಯವೇ ಆದರೂ, ಸಂಸರ್ಗವು ನ್ಯೂನತೆ ಮತ್ತು ಅತಿರೇಕಗಳಿಗೂ ವಿಶೇಷ ಗುಣಲಾಭಕ್ಕೂ ಕಾರಣವಾಗುವುದು. ಅಪ್ರಿಯವಾದ ಸಂಸರ್ಗವನ್ನು ತಪ್ಪಿಸಲು ಸಜಾತೀಯ ವಿಜಾತೀಯ ಗುಣಕರ್ಮ ಶಕ್ತಿಗಳುಳ್ಳ ಪೂಜಾ ದ್ರವ್ಯಗಳನ್ನು ಪೂಜಾ ಸಂಸ್ಕೃತಿಯಲ್ಲಿ ಸೇರಿಸಿರುವುದರಿಂದ ಅಪ್ರಿಯವಾದ ಗುಣಕರ್ಮಶಕ್ತಿಗಳು ಅಡಗಿಹೋಗುವುವು.

ಸರ್ವ ಶಕ್ತನೂ ಉಪಾಸ್ಯನೂ ಆದ ಆತ್ಮನ ಗುಣ ಕರ್ಮ ಶಕ್ತಿಗಳೆಲ್ಲಾ ಉಪಾಸಕ – ಆತ್ಮನಲ್ಲಿಯೇ ಇದ್ದು ವಿಶ್ವಮೈತ್ರೀ ಅನುಸಂಧಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದಿಂದ ಇಷ್ಟ ಸಿದ್ಧಿಯನ್ನೂ ಶಾಂತಿಯನ್ನೂ ತೃಪ್ತಿಯನ್ನೂ ಉಂಟುಮಾಡುವ ಸಂಸ್ಕಾರ ವಿಶೇಷವು ಪೂಜೆಯೆನಿಸುವುದು. ಇದೇ ಈಶಾವಾಸ್ಯ ವಸ್ತುವಿನ ಹಿರಿಯತನವನ್ನು ಹಿರಿಯತನದ ಅಸ್ತಿತ್ವವನ್ನು ಅರಿಯುವಿಕೆ ಅಥವಾ ಸಾಕ್ಷಾತ್ಕರಿಸುವಿಕೆ. ಆಕಾಶಾದಿ ಪಂಚಭೂತ ಲಿಂಗಗಳಲ್ಲಿ ಒಳಗೂ ಹೊರಗೂ ಪೂಜೆಯು ಸ್ವಾಭಾವಿಕವಾಗಿಯೇ ನಡೆದು ಜಗತ್ತಿಗೆ ಆಧಾರವಾಗಿರುವುದು.

## ಸಂತರ್ಪಣ ಸಂಸ್ಕೃತಿ

ದೇವತಾಸೇವೆಯ, ಕ್ರತುಗಳ, ಯಜ್ಞಗಳ ಅಂಗವಾಗಿ ಶಾಂತ್ಯರ್ಥವಾಗಿ ಪರಿಪೂರ್ಣತೆಗಾಗಿ ಸಂತರ್ಪಣೆಯಾಗಬೇಕೆಂದು ಕಲ್ಪವಿರುತ್ತದೆ. ಸಂತೃಪ್ತಿಯು ಮನಸ್ಸು ಮತ್ತು ಇಂದ್ರಿಯಗಳ ಪ್ರೀತಿಗೆ ಮತ್ತು ಸಮಾಧಾನಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಉದ್ದಿಷ್ಟ ದೇವತೆಯ ಸಾನ್ನಿಧ್ಯವನ್ನು ಪ್ರತ್ಯಕ್ಷವಾಗಿ ದೇಹಗಳಲ್ಲಿ ಆವಾಹನೆ ಮಾಡಿ ದೇವತೆಗೆ ನೇರವಾಗಿ ದ್ರವ್ಯಗಳನ್ನು ದೇಹಗಳ ಪಂಚಪ್ರಾಣಾಗ್ನಿಗಳ ಮತ್ತು ವೈಶ್ವಾನರ ಜಠರಾಗ್ನಿಯ ಮೂಲಕ ಅರ್ಪಿಸಬೇಕೆಂಬುದು ಸದ್ಭಾವನೆಯಾಗಿ ಸತ್ಪ್ರಯೋಜನಕಾರಿಯಾಗಿರುತ್ತದೆ. ಆದರೆ ಆರಾಧಕನು ಸಾಕ್ಷಾತ್ತಾಗಿ, ಶಕ್ತಿಗೆ ತಕ್ಕಂತೆ ಸ್ವಯಂ ಸೇವೆಯನ್ನು ಎಷ್ಟರಮಟ್ಟಿಗೆ ಸಲ್ಲಿಸಬಹುದೋ ಆ ಮಿತಿಯಲ್ಲಿ ಅರ್ಪಿಸುವುದೇ, 'ಸಂತರ್ಪಣೆ' ಎಂಬ ಉತ್ಸವದ ರಹಸ್ಯ. ಸಂತರ್ಪಣೆಗಾಗಿ ಸಾವಿರಾರು ಸಂಖ್ಯೆಯಲ್ಲಿ ದೇಹಗಳನ್ನು ಕೂಡಿಸಿ ಸೇವೆ ಸಲ್ಲಿಸುವುದಕ್ಕೆ ಒಬ್ಬ ಕರ್ತೃವಿಗಾಗಲೀ ಸಂಘಕ್ಕಾಗಲೀ ಸಾಧ್ಯವಿಲ್ಲ. ಅಶಕ್ತರಾದ ಕರ್ತೃಗಳ ಪರವಾಗಿ ಇತರರು ಯಾರೇ ಆಗಲೀ ಹೆಚ್ಚು ಸಂಖ್ಯೆಯ ಅತಿಥಿಗಳಿಗೆ ಪದಾರ್ಥಗಳನ್ನು ಪಾಕಮಾಡಿ ನಡೆಸುವ ಸಂತರ್ಪಣೆ ಸೇವೆಯು ಪರಾನ್ನವೆನಿಸಿ ದೋಷ ಭೂಯಿಷ್ಠವಾಗಬಹುದಾಗಿರುತ್ತದೆ. ಅರ್ಪಿಸುವ ದ್ರವ್ಯಗಳು ಆರೋಗ್ಯಕ್ಕೆ ವಿರೋಧವಾಗಿದ್ದು ಅವುಗಳನ್ನು ಭುಂಜಿಸುವ ಭೋಕ್ತೃಗಳು ತಮ್ಮ ಆಚಾರ, ಅನುಷ್ಠಾನ, ಕರ್ತವ್ಯಗಳನ್ನು ಉ[illegible] ದುಷ್ಪರಿಣಾಮವನ್ನುಂಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡುವುವು. ಇದರಿಂದ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ರಾಜ್ಯವಲಯಗಳು ಕೆಟ್ಟು ಸರ್ವತ್ರ ಉಪದ್ರವಕ್ಕೆ ಅವಕಾಶವಾಗುವುದು. ಸಂತರ್ಪಣೆಗಾಗಿ ಅರ್ಪಿಸುವ ಮಾದಕ ದ್ರವ್ಯವನ್ನು ಮಿತಿ ಮೀರಿ ಉಪ ಯೋಗಿಸುವುದಾದರೆ ಅದನ್ನು ಸೇವಿಸಿದ ಉನ್ಮತ್ತನೊಬ್ಬನಿಂದ ಅನೇಕರಿಗೆ ಕಿರುಕುಳವುಂಟಾಗುವ ವಿಚಾರವು ಸರ್ವರ ಊಹೆಗೂ ನಿಲುಕುವ ವಿಷಯವಾಗಿದೆ. ಇಂತಹ ಸಂತರ್ಪಣೆಯು ದುಷ್ಟ ಪರಿಣಾಮವನ್ನು ಉಂಟುಮಾಡಿ ಹರಡಿದಂತಾಗುವುದು. ಸಂತರ್ಪಣೆ ಎಂಬ ಸಂಸ್ಕೃತಿಯು ಕೇವಲ ಮಾನಸಿಕವಾಗಿ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿ ಸಂತೃಪ್ತಿ ಮನೋಭಾವನನ್ನು ಹೊಂದಿಸಬೇಕಾಗಿರುತ್ತದೆ. ಕೇವಲ ಸಾನ್ನಿಧ್ಯ, ಅಲ್ಪವಾದ ಮತ್ತು ಮಿತಿಯಾದ ಉಪಭೋಗಗಳಿಂದ ಇಂದ್ರಿಯಗಳನ್ನು ತೃಪ್ತಿಪಡಿಸಬಹುದು. ಹಿತವಾಗುವ ಅಹಿತವಾಗುವ ದ್ರವ್ಯಗಳಿಂದ ಪದಾರ್ಥಗಳ ವಿಷಯವನ್ನು ತಿಳಿಯದೆ ಉದರವನ್ನು ತುಂಬಿಸುವುದರಿಂದ ಸಂಕಟ ಮನೋಭಾವಕ್ಕೆ ಅವಕಾಶವಾಗುವುದು. ಶುದ್ಧೋದಕವು ಮಿತಿ ಪ್ರಮಾಣದಲ್ಲಿ ದಾಹವನ್ನು ಹೋಗಲಾಡಿಸಿ ತೃಪ್ತಿಯನ್ನುಂಟುಮಾಡುವುದು ಸಹಜ. ಹೀಗೆ ನಸ್ಯ, ಧೂಮಪಾನಾ ದಿಗಳಿಂದಲೂ ತೃಪ್ತಿಯುಂಟಾಗುವುದು. ಕ್ಷುದ್ವ್ಯಾಧಿಯನ್ನು ಹೋಗ ಲಾಡಿಸುವ ಮಿತಿಯಲ್ಲಿ ದತ್ತನಾದ ಮತ್ತು ಭುಕ್ತವಾದ ಶಾಕಾಹಾರ, ಮಾಂಸಾಹಾರ ದ್ರವ್ಯಗಳು ತೃಪ್ತಿಯನ್ನುಂಟುಮಾಡುವುವು. ಸಂತರ್ಪ ಣೆಯು ಭಗವತ್ಸ್ವರೂಪ ದೇಹಿಗಳಾದ ದಾನಪಾತ್ರರ ಶಾರೀರಕ, ಮಾನ ಸಿಕ ಸಂಪತ್ತುಗಳ ಮಿತಿಗೆ ಅಧೀನವಾಗಿರುವುದರಿಂದ ದೇಹಿಗಳ ಸ್ಥಿತಿಗತಿ ಸನ್ನಿವೇಶಗಳ ತಿಳಿವಳಿಕೆಯು ಆವಶ್ಯಕ. ಆದರೆ ದಾತೃಗಳೇ ಆಗಲೀ ಭೋಕ್ತೃಗಳೇ ಆಗಲೀ ಸ್ವತಃ ತಿಳಿಯಲು ಸಾಧ್ಯವಿಲ್ಲ. ವೈದ್ಯ, ಜ್ಯೋತಿಷ್ಯ, ಕರ್ಮ ವಿಪಾಕ ಶಾಸ್ತ್ರಗಳಲ್ಲಿ ಪರಿಶ್ರಮವುಳ್ಳವರಿಗೆ ಮಾತ್ರ ಇದು ಸಾಧ್ಯ. ಹಾಗೆ ರಹಸ್ಯವನ್ನು ತಿಳಿದವರು ಇಂತಹ ಸಂತರ್ಪಣಾದಿ ಗಳಲ್ಲಿ ಭಾಗವಹಿಸುವುದಿಲ್ಲ; ಈ ಪ್ರಕಾರವಾಗಿ ಅನೇಕ ವಿಧವಾಗಿ ಬಾಧೆ ಗೊಳಗಾದ ಸಂತರ್ಪಣೆಯೆಂಬ ಕಾರ್ಯವು ಸಂಸ್ಕೃತಿ ವಿಧಾನವನ್ನೂ ದೇಶಾಭ್ಯುದಯ, ವ್ಯಕ್ತಿಗಳ ಅಭ್ಯುದಯವನ್ನೂ ನಾಶಪಡಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದಲೇ ಪರಾನ್ನವು ನಿಂದ್ಯವೆಂದು ಪ್ರಮಾಣ ಗ್ರಂಥಗಳು ಮೊಳಗುವುವು. ಪುರಾಣಾದಿ ಗ್ರಂಥಗಳಲ್ಲಿ ಹೇಳಿರುವ ಸಹಸ್ರ-ಲಕ್ಷ ಸಂಖ್ಯೆಯ ದೇಹಿಗಳಿಗೆ ಮಾಡಿದ ಅನ್ನದಾನ ಸಂತರ್ಪಣೆಯ ವರ್ಣನೆಯು ಕೇವಲ ಅರ್ಥವಾದದ ಹೊಗಳಿಕೆಯೆನಿಸಿ ಪ್ರೋತ್ಸಾಹಕವೂ ಪ್ರಚೋದಕವೂ ಆದ ಕರ್ತವ್ಯದ ಮಹಿಮೆಯನ್ನು ತಿಳಿಸುತ್ತದೆ. ಅಕ್ಷರಶಃ ಅನುಕರಣೀಯವೆಂದು ಭಾವಿಸಿದರೆ ತಪ್ಪಾಗುವುದು. ಸಹಸ್ರ-ಲಕ್ಷ ಸಂಖ್ಯೆಗಳು ಸಾಮಾನ್ಯವಾಗಿ ಸಂತೋಷಾತಿಶಯ ಸೂಚಕಗಳೇ ಹೊರತು ಗಣಿತ ಶಾಸ್ತ್ರದ ಮಿತಿಯಲ್ಲಿ ಬರುವವುಗಳಲ್ಲ. ಯಥಾಶಕ್ತಿ ಎಂಬ ಸೂಕ್ತಿಯು ಇದನ್ನು ನಿರ್ಣಯಿಸುವುದು. ಕೇವಲ ಅಲ್ಪ ಸಂಖ್ಯೆಯ ದೇಹಿಗಳಿಗೆ ಹಿತವೂ, ಅತ್ಯವಶ್ಯಕವೂ, ಆರೋಗ್ಯಕರವೂ, ಸಂಪತ್ಕರವೂ, ಆಚಾರೋತ್ತೇಜಕವೂ, ಸಮಯೋಚಿತವೂ, ಅನುಷ್ಠಾನ ಪ್ರಚೋದಕವೂ ಆಗುವಂತೆ ದ್ರವ್ಯವನ್ನು ಮಿತಿಯಾಗಿ ಅರ್ಪಿಸುವುದರಿಂದಲೇ ಸಹಸ್ರ-ಲಕ್ಷ ಸಂತರ್ಪಣೆ-ಭೂತತೃಪ್ತಿಯು ನಡೆದು ಮನುಷ್ಯಯಜ್ಞ, ಅತಿಥಿ ಸತ್ಕಾರ ಎಂಬ ಯಜ್ಞ ಸಂಸ್ಕೃತಿಗಳು ಫಲಪ್ರದಗಳಾಗುವುವು. 'ಶುಚೀನ್, ಮಂತ್ರವತಃ ಸರ್ವಕೃತ್ಯೇಷು ಭೋಜಯೇತ್' * | ಬ್ರಹ್ಮಸ್ವರೂಪರಾದ ಇರುವೆ ಮೊದಲಾದ ಸಾತ್ವಿಕವಾದ ಜೀವರಾಶಿಗಳಿಗೆ ದಾನಮಾಡಿದ ಆಹಾರಾದಿಗಳಿಂದಲೂ ಸಂತರ್ಪಣ ಸಂಸ್ಕೃತಿಯು ಪೂರ್ತಿಯಾಗುವುದು. 'ಸರ್ವಾನ್ ವೈಶ್ವದೇವೇ ಭಾಗಿನಃ ಕುರ್ವೀತ ಆಶ್ವಚಾಂಡಾಲಾದಿಭ್ಯಃ'* ಇದನ್ನರಿಯದೇ, 'ಅಂಯದು' ಎಂಬುದನ್ನೂ ಸಹ ತೋರಿಸಿಕೊಳ್ಳದೇ ಆಡಂಬರದ ಕ್ರಮದಲ್ಲಿ, ಸಂತರ್ಪಣೆಗೆ ತೊಡಗುವುದರಿಂದ ಆಹೂತರೂ, ಆರಾಧಕರೂ ಮೋಹಕ್ಕೆ, ವ್ಯಾಮೋಹಕ್ಕೆ ಬಲಿಯಾಗಿ ಅನ್ನದಾನ ಮತ್ತು ಅನ್ನಪ್ರತಿಗ್ರಹಣ ಕಾರ್ಯದಿಂದ ಆಗಬೇಕಾದ ಸತ್ಫಲಕ್ಕೆ ಬದಲಾಗಿ ದುಷ್ಟಫಲವನ್ನು ಹೊಂದುವುದಲ್ಲದೆ ಅದನ್ನು ಸುತ್ತಲೂ ಹರಡುವವರಾಗುತ್ತಾರೆಂಬುದರಲ್ಲಿ ಲೇಶವೂ ಸಂಶಯವಿಲ್ಲ. ಈ ವಿಷಯವನ್ನು ತಿಳಿಯಲಿಲ್ಲವೆಂದ ಮಾತ್ರಕ್ಕೆ ಶಾರೀರಕವಾಗಿ ಉಂಟಾಗುವ ದುಷ್ಟ

* ಆಪಸ್ತಂಬ ಧರ್ಮಸೂತ್ರ ಮಂಜರೀ | ಪುಟ 14 ಸೂ.16-17.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಫಲವು ತಪ್ಪುವುದಿಲ್ಲ. ಜ್ಞಾನಾಗ್ನಿಯು ದುಷ್ಟ ಫಲವನ್ನು ಸುಡುವಂತೆ ಜ್ಞಾನದ ಮೇಲಿನ ಮುಸುಕೆಂಬ ದಾವಾಗ್ನಿಯು ಸತ್ಫಲವನ್ನೂ ಶ್ರೇಯಸ್ಸನ್ನೂ ಸುಟ್ಟು ಬೂದಿಮಾಡುವುದು.

ಅತಿಥಿಯನ್ನು ಆದರಿಸುವ ಆತಂಕದಿಂದ ಆತ್ಮೀಯ ಬಂಧು ಮಿತ್ರರು ಇಲ್ಲದಿರುವ ನೆರೆಮನೆಯಲ್ಲಿ ಸ್ವತಂತ್ರಿಸಿ ತಂದ ಆಹಾರ ವಸ್ತುವುಳ್ಳ ಭೋಜನದಲ್ಲಿ ಭಾಗವಹಿಸಿದ ಯೋಗಿಯು ಪದಾರ್ಥದ ಗುಣಕರ್ಮಶಕ್ತಿಯ ಪ್ರಭಾವದಿಂದ ಉಂಡ ಮನೆಯಲ್ಲಿದ್ದ ಹಸುವನ್ನೇ ರಾತ್ರಿವೇಳೆ ಅಪಹರಿಸಿ ಆ ಆಹಾರ ವಸ್ತುವಿನ ಪ್ರಭಾವದ ವ್ಯಾಪ್ತಿಯು ಮುಗಿದನಂತರ ಉಂಟಾದ ವಿವೇಕದಿಂದ ಅಪಹರಣ ಕ್ರಿಯೆಯ ದೋಷವನ್ನು ಹೋಗಲಾಡಿಸಿಕೊಳ್ಳಬೇಕಾಯಿತು — ಎಂಬಂತೆ ಜೀವಮಾನದಲ್ಲಿ ಕಾಣಬಹುದಾದ ಸಂಭವವನ್ನು ನಿದರ್ಶನದ ಮೂಲಕ ಉಪನಿಷತ್ ಲಕ್ಷಣದ ವೇದೋಕ್ತಿಗಳು ಘೋಷಿಸುವುವು.

ಧರ್ಮರಾಯನು ಅರ್ಪಿಸಿದ ದೈವೀ ಗುಣಕರ್ಮಶಕ್ತಿ ಪೂರಿತವಾದ ಆಹಾರ ಪದಾರ್ಥಗಳನ್ನು ಸ್ವತಃ ಪಾಕಮಾಡಿ ಉಪಯೋಗಿಸುತ್ತಿದ್ದ ಯೋಗಿಗಳು ಮಾಡಿದ ತಪಸ್ಸಿನ ಅತಿಶಯವಾದ ಸಿದ್ಧಿಯನ್ನು ನೋಡು ಪರೀಕ್ಷಾರ್ಥವಾಗಿ ಆಹಾರ ಪದಾರ್ಥಗಳನ್ನು ಕೊಡದೆ ಇದ್ದುದರಿಂದ ಯೋಗಿಗಳು ಪರಾನ್ನ ಭೋಜನವನ್ನು ಅವಲಂಬಿಸಿದಾಗ ತಪಸ್ಸು ಸಿದ್ಧಿಯಾಗದೆ, ಆರ್ಜಿಸಿದ್ದ ತಪಶ್ಶಕ್ತಿಯೂ ನಷ್ಟವಾದಾಗ ಪರಾನ್ನ ಭೋಜನ ಪ್ರಯೋಗದಿಂದ ಉಂಟಾಗಬಹುದಾದ ಆಸುರೀ ಗುಣ ಕರ್ಮ ಶಕ್ತಿ ಪ್ರಭಾವವು ಪ್ರತ್ಯಕ್ಷವಾಯಿತು. — ಎಂದು ಮಹಾಭಾರತದಲ್ಲಿ ಉದಾಹೃತವಾಗಿದೆ.

ಭುಕ್ತವಾದ ಆಹಾರವು ದೊರಕುವ ಸ್ಥಳ, ಮೂಲ, ಭೋಜನಕ್ಕೆ ಸಿದ್ಧವಾಗುವವರೆಗೂ ಅದು ಸಂಕ್ರಮಿಸಿದ ಘಟ್ಟಗಳ ವಿಚಾರ, ಆಹಾರ ವಸ್ತುವಿನಲ್ಲಿರಬಹುದಾದ ದೈವೀ ಅಥವಾ ಆಸುರೀ ಗುಣಕರ್ಮಶಕ್ತಿಗಳ ಪ್ರಭಾವ, ಪ್ರಯೋಗ ಇವುಗಳ ವಿವೇಚನೆಗಳು ಭಾರತದಲ್ಲಿ ಕಂಡುಬಂದ ಸಂಸ್ಕೃತಿ ವಿಶೇಷವಾಗಿರುವುವು. ಬಾಂಧವ್ಯ, ಸ್ನೇಹ ವ್ಯಂಜಕವಾದ [illegible] ದೇಹಿಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಟ. ಗುಂಪು ಭಾವನೆಗಳು ಬೇರೂರಬಹುದಾಗಿದೆ. ಇದರಿಂದ ಆತ್ಮನಿಷ್ಠೆಯು ದೂರೀಕೃತವಾಗುವುದು. ವ್ರತ ಪೂಜಾದಿಗಳಲ್ಲಿ ಹೇಳುವ ಮಹಾಸಂಕಲ್ಪದಲ್ಲಿ ಕಂಡ ಸಂಘಟನೆ ವಿವರಗಳೂ ಸಹ ಸ್ಪಷ್ಟವಾಗಿ ಪ್ರಜೆಗಳನ್ನು ಎಚ್ಚರಿಸಿ ತಿಳಿಸುವುವು.

ಅನ್ನ ಸಂತರ್ಪಣೆಯ ಉದ್ದೇಶದಿಂದ ಆಹ್ವಾನಿಸಲ್ಪಟ್ಟರೂ ಸಾಮಾನ್ಯವಾಗಿ ಗೃಹಸ್ಥರಾದವರು ಪರಾನ್ನ ಭೋಜನದಲ್ಲಿ ಭಾಗವಹಿಸುವುದಿಲ್ಲವೆಂದೂ ಅಂತಹ ಶ್ರೋತ್ರಿಯರು ಬೇರೆ ಕಡೆ ಹೋಗದೆ ಸ್ವಗೃಹದಲ್ಲಿ ವೈಶ್ವದೇವ ಮೊದಲಾದ ಸಂಸ್ಕೃತಿಗಳ ಮೂಲಕ ಪರಿಷ್ಕೃತವಾದ ವಸ್ತುಗಳ ಸ್ವೀಕಾರದಿಂದ ಸಂತೃಪ್ತರಾಗಿರುವುದೇ ಶ್ರೇಷ್ಠವೆಂದೂ ಬಲಿಚಕ್ರವರ್ತಿಯು ಅಪ್ಪಣೆ ಕೊಡಿಸಿರುತ್ತಾನೆ. ಬ್ರಾಹ್ಮಣಧರ್ಮ (ವೇದ ಧರ್ಮ) ಅನುಯಾಯಿಗಳೆಲ್ಲರೂ ಸಾಕ್ಷಾತ್ತಾಗಿ, ಪರೋಕ್ಷವಾಗಿ ಮತ್ತು ಪರಂಪರೆಯಾಗಿ ಅಗ್ನಿಹೋತ್ರ ವೈಶ್ವದೇವಾದಿಗಳನ್ನು ಆಚರಿಸುತ್ತಾರೆಂಬ ದೃಢ ನಂಬಿಕೆಯನ್ನು ಮೋಹಕ್ಕೆ ಬಲಿಕೊಡಬಾರದು. ಆದ್ದರಿಂದ ಆಹ್ವಾನಿಸುವುದಾಗಲೀ ಆಹ್ವಾನವನ್ನು ಮನ್ನಿಸಿ ಉಪಸ್ಥಿತರಾಗುವುದಾಗಲೀ ದೋಷವಾಗುವುದರಿಂದ ಅನಿವಾರಣೀಯ ಸನ್ನಿವೇಶಗಳಲ್ಲಿ ಬಿಟ್ಟು ಇತರ ಸಂದರ್ಭಗಳಲ್ಲಿ ಅದನ್ನು ದೂರೀಕರಿಸುವುದು ಶ್ರೇಯಸ್ಸು.

## ಯೋಗ ಸಂಸ್ಕೃತಿ

ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳು ವಿಷಾದಯೋಗದಷ್ಟೇ ಪ್ರಯೋಜನಕಾರಿಗಳಾಗಿರುವುವು. ಅಹಂಕಾರಿಗಳಿಗೆ ವಿಷಾದವೇ ಗುರುವೆನಿಸುವುದು. ಕರ್ಮ, ಭಕ್ತಿ, ಜ್ಞಾನ, ಸಂಸ್ಕಾರಗಳಲ್ಲಿ ಒಂದನ್ನು ಬಿಟ್ಟು ಒಂದು ಇರುವುದಿಲ್ಲ. ಅನುಷ್ಠಾನದಲ್ಲಿ ಕಾಣಬರುವ ವೈವಿಧ್ಯವನ್ನು ಕುರುಡಾಗಿ ವಿವರಿಸುವುದಕ್ಕೆ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳೆಂದು ವ್ಯವಹರಿಸುವುದರಿಂದ ಚರಿತಾರ್ಥವಾಗುವುದಿಲ್ಲ. ಋಣಾನುಬಂಧಕ್ಕೆ ತಕ್ಕಂತೆ ಆವರಣಗಳ ಮಿತಿಯಲ್ಲಿ ಅಲ್ಪವಾಗಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಹತ್ವಾಗಿಯೂ ಕಾಣುವಂತೆ ನಡೆಯುವ ವ್ಯಾಪಾರಗಳ ರಹಸ್ಯಗಳು ಸಂಸ್ಕೃತಿಗೆ ಸೇರಿವೆ.

"ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಮಂತ್ರವು ಯೋಗಸಾಧಕವಾದ ಸಂಸ್ಕೃತಿಗೆ ಆಧಾರವಾಗಿರುತ್ತದೆ. ಈ ಮಂತ್ರವು "ಫಲದಲ್ಲಿ ಅಧಿಕಾರವಿಲ್ಲ" ಎಂಬ ನಪುಂಸಕತನ, ಬಂಜೆ ತನದ ಕುಂಟು ನೆಪಗಳನ್ನು ತಿಳಿಸುವುದಿಲ್ಲ. ಏಕೆಂದರೆ ಮಾಡಿದ ಕೆಲಸ (ಕರ್ಮ) ದ ಫಲವನ್ನು ಅನುಭವಿಸದಿರುವುದಕ್ಕೆ ಯಾರಿಂದಲೂ ಸಾಧ್ಯ ವಿಲ್ಲ. ಕರ್ತೃವು ಕರ್ಮಗಳನ್ನು ರಾಶಿರಾಶಿಯಾಗಿ ಕೂಡಿ ಹಾಕಿದರೂ ಅವುಗಳ ಬೆಲೆಯು ಗಾತ್ರಕ್ಕೆ ತಕ್ಕಂತೆ ಇಲ್ಲದಿರಬಹುದು; ಗಾತ್ರದಲ್ಲಿ ಅಲ್ಪವಾದುದಾದರೂ ಮಾಡಿದ ಕರ್ಮವು ಅನಂತವಾದ ಬೆಲೆಯನ್ನು ಹೊಂದಬಹುದು. ಇದಕ್ಕೆ ಕರ್ಮವಿಚಾರ ಶಾಸ್ತ್ರದಲ್ಲಿ (ಪುಟ 90.) ಹೇಳಿರುವ ಕರ್ಮಾಂಗಗಳ ಗುಣಗಳೇ ಕಾರಣ. ಆದುದರಿಂದ ಅಲ್ಪ ಪ್ರಮಾಣದಲ್ಲಿ ಕರ್ಮ ಮಾಡಿದವನೂ ಪರ್ವತಾಕಾರದಷ್ಟು ಕರ್ಮ ಮಾಡಿದವನೂ ಸಹ ಮಾಡಿದ ಕರ್ಮದ ಅಲ್ಪತ್ವ, ಮಹತ್ವಗಳನ್ನು ಸ್ಥೂಲವಾಗಿ ಯೋಚಿಸಿ ಅದಕ್ಕೆ ತಕ್ಕಂತೆ ಫಲಪ್ರಾಪ್ತಿಗೆ ಆತಂಕದಿಂದ ಖೇದ ವನ್ನಾಗಲೀ ಸಂತೋಷವನ್ನಾಗಲೀ ಹೊಂದದೆ ಕರ್ಮ ಮಾಡುವಾಗಲೂ, ಮಾಡಿದ ಮೇಲೂ ಒಂದೇ ವಿಧವಾದ ಸಮತೆಯ ಆನಂದವನ್ನು ಹೊಂದ ಬಹುದಾದ ಸಂಸ್ಕೃತಿಯನ್ನು ಈ ಮಂತ್ರವು ವಿವರಿಸುವುದು. ಯಾವ ಇಷ್ಟಸಿದ್ಧಿಯನ್ನು ಪಡೆಯಬೇಕಾದರೂ ಯಾವ ಋಣವನ್ನು ಅನುಭವಿಸ ಬೇಕಾದರೂ ದೇಹಿಯು ಸ್ವಾತಂತ್ರ್ಯದಿಂದ ಎಷ್ಟು ಕೆಲಸವನ್ನಾದರೂ ಮಾಡಲಿ! ಮಾಡುವುದಕ್ಕೂ ಮಾಡಿದುದರ ಫಲಾನುಭವಕ್ಕೂ ಆವರಣ ಸಮೇತವಾದ ದೇಹಿಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಬಾಧ್ಯತೆಗಳು ಇರುತ್ತವೆ. ಆದರೆ ಮಾಡಿದ ಕರ್ಮದ ಗುಣಮಹಿಮೆಯನ್ನು ತಿಳಿಯಲು ಸನ್ನಿವೇಶಗಳ ಪ್ರಾಬಲ್ಯದಿಂದ ಅವಕಾಶವಿಲ್ಲದಿರಬಹುದಾದುದರಿಂದ ಕರ್ತೃವು ಕಾತುರತೆಯಿಂದ ತಿಳಿದುಕೊಂಡಿರುವ ಅಥವಾ ಆಶಿಸುವ ಪ್ರಮಾಣದಲ್ಲಿ ತನ್ನ ಕರ್ಮದ ಫಲವನ್ನು ಒತ್ತಾಯದಿಂದ ಪಡೆಯಲು ಅಧಿಕಾರ (ಅವಕಾಶ) ವಿರುವುದಿಲ್ಲ. ಕರ್ಮದ ಕರ್ತೃವು 'ಅಹಂ'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪದಾರ್ಥವೆಂಬುದೂ ಕರ್ಮಕ್ಕೆ ಎಂದಿಗೂ ಫಲವಿಲ್ಲದಿಲ್ಲವೆಂಬುದೂ ದೃಢ ವಾಗಿರುವುದರಿಂದ 'ಅಹಂ' ಎಂಬುವಕ್ಕೆ ಆಸುರೀ ಸ್ವರೂಪದ ಭಾವನೆಯನ್ನು ಕೊಟ್ಟು ಫಲಪ್ರಾಪ್ತಿಗೆ ಒತ್ತಾಯ ಮಾಡುವ ದರ್ಪವು ಇರಕೂಡದು ಎಂಬ ಮನೋಭಾವದ ಸಂಸ್ಕೃತಿಯೇ– ಮಾಸ್ತು ಫಲೇಷು ಅಧಿಕಾರಃ ಎಂಬುದರ ರಹಸ್ಯ. ಆದುದರಿಂದ —

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋ ಯಜ್ಞಕ್ರಿಯಾದಿಷು,
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ ಪರಂ ||
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಕ್ರಿಯಾ(ಕುಲಾ)ಧಿಪ,
ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ ||

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ |
ಕರೋಮಿ ಯದ್ಯತ್ಸಕಲಂ ಪರಸ್ಮೈ
ಕರ್ಮ ಸ್ವರೂಪಾಯ ಸಮರ್ಪಯಾಮಿ ||
ಕರೋಮಿ ಯದ್ಯತ್ಸಕಲಂ ಚ ತತ್ಸಂ-
ನ್ಯಸ್ಯೇ ಗುಹಾಯಾಂ ಪ್ರಕೃತೇಃ ಪರಸ್ಯ ||

ಎಂಬದಾಗಿ ಕರ್ಮಗಳನ್ನು ಪ್ರಜಾಪತಿ ಪಾದಾರವಿಂದದಲ್ಲಿ ಸಂನ್ಯಾಸ (ಸಮರ್ಪಣ) ಮಾಡುವ ಸಂಸ್ಕಾರ ವಿಶೇಷವು ಉಕ್ತವಾಗಿದೆ. ಇದೇ 'ಕರ್ಮ ಯೋಗ ಮತ್ತು ಕರ್ಮ ಸಂನ್ಯಾಸ. ಜ್ಞಾನ, ಭಕ್ತಿಗಳಿಲ್ಲದೆ ಕರ್ಮವು ನಡೆಯುವುದಿಲ್ಲವಾಗಿ ಕರ್ಮ ಯೋಗವು' ಜ್ಞಾನ, ಭಕ್ತಿ, ಕರ್ಮಗಳನ್ನು ಒಳಗೊಂಡೇ ಇರುತ್ತದೆ.

ಈಶ್ವರೇ ಕರ್ಮ ಸಮರ್ಪಣಂ

ಕಾಮತೋಽಕಾಮತೋ ವಾಪಿ ಯತ್ಕರೋಮಿ ಶುಭಾಶುಭಂ |
ತತ್ಸರ್ವಂ ತ್ವಯಿ ಸಂನ್ಯಸ್ತಂ ತ್ವತ್ಪ್ರಯುಕ್ತಂ ಕರೋಮ್ಯಹಮ್ ||
ನಾಹಂ ಕರ್ತಾ ಸರ್ವಮೇತತ್ ಬ್ರಹ್ಮೈವ ಕುರುತೇ ತಥಾ |
ಏತದ್ಬ್ರಹ್ಮಾರ್ಪಣಂ ಪ್ರೋಕ್ತಂ ಋಷಿಭಿಃ ತತ್ವದರ್ಶಿಭಿಃ ||

CC-0. In Public Domain. Gurukul Kangri Collection, Haridwar
ಎಂದು ನಾಗೋಜೀ ಭಟ್ಟರು ತಮ್ಮ ( ... ಕಾಶೀ

Digitized by Arya Samaj Foundation Chennai and eGangotri

ಪ್ರಕರಣ ಪುಟ 52) ಗ್ರಂಥವಲ್ಲಿ ಹೇಳಿರುತ್ತಾರೆ. ಆರ್. ಎಸ್. ಸೂರ್ಯನಾರಾಯಣ ರವರ ಸಂಪುಟೀಕೃತ ಭಗವದ್ಗೀತೆ ಗ್ರಂಥವಲ್ಲಿ ಈ ರಹಸ್ಯದ ವಿವರಣೆಯನ್ನೂ ಅನುಷ್ಠಾನ ಪ್ರದರ್ಶಕ ಕ್ರಮವನ್ನೂ ಸ್ಪಷ್ಟಪಡಿಸಲಾಗಿದೆ. ಸಮರ್ಪಣ ಅಂದರೆ ಸನ್ಯಾಸವೆಂದು ನಾಗೋಜೀ ಭಟ್ಟರು ಹೇಳಿರುವುದರ ಔಚಿತ್ಯ ವಿವರಣೆಗೆ ಸಂಪುಟೀಕೃತ ಭಗವದ್ಗೀತಾ ಪಠನವು ಅತ್ಯಾವಶ್ಯಕವಾಗಿದೆ.

### ಹಠಯೋಗ ಫಲವು ಸುಸಂಸ್ಕೃತ ಜೀವನ ನಿರ್ವಾಹದಿಂದಲೂ ಸಿದ್ಧಿಸುವುದು

ಅನುಸಂಧಾನ ಕ್ರಮಗಳಲ್ಲಿ 'ಯೋಗ' ವೆಂಬ ಸಂಸ್ಕೃತಿ ವಿಧಾನವು ಇಹ ಪರ ಸಿದ್ಧಿದಾಯಕವಾಗುವುದು. ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿರುವ ಯೋಗಗಳು ಅನೇಕ ಸಂಖ್ಯೆಯ ಯೋಗಗಳನ್ನು ಸೂಚಿಸುತ್ತವೆ ಪ್ರಪಂಚದಲ್ಲಿ ಕಾಣುವ ಅನುಭವಗಳೆಲ್ಲಾ 'ಯೋಗಕ್ಷೇಮ' ವೆಂಬದಾಗಿ ವ್ಯವಹರಿಸಲ್ಪಡುತ್ತವೆ. ಯೋಗಕ್ಷೇಮಾನುಭವಗಳಲ್ಲಿ ಅನುಸಂಧಾನಾತ್ಮಕವಾದುದು ಸಾಧಕನನ್ನು ಉನ್ನತ ಮಟ್ಟಕ್ಕೆ ಏರಿಸುವುದು ಶಾರೀರಕ, ಮಾನಸಿಕ ವ್ಯಾಪಾರಗಳನ್ನು ನಿತ್ಯಾನುಶಾಸನದ ತೀವ್ರವಾದ ಶಿಕ್ಷಣಕ್ಕೆ ಗುರಿಪಡಿಸಿ ಯೋಗವನ್ನು (ಹಠಯೋಗ) ಸಾಧಿಸುವುದೂ ಉಂಟು. ಈ ಹಠಯೋಗದ ಸಿದ್ಧಿ ಮಾರ್ಗಗಳಲ್ಲಿರುವ ದುಷ್ಟ ಅನುಭವಗಳಿಲ್ಲದೆಯೇ ಹಠಯೋಗದ ಸಿದ್ಧಿಯನ್ನು ಮಾತ್ರ ಉಂಟು ಮಾಡುವ ಅನುಸಂಧಾನಯುತ ಕರ್ಮಾನುಷ್ಠಾನವೇ ಶ್ರೇಷ್ಠವಾದುದು. ಶ್ರೌತಸ್ಮಾರ್ತಾದಿ ಪಂಚವಿಧ ಕರ್ಮಗಳೂ ಪಂಚ ತನ್ಮಾತ್ರಗಳ ಹಂತದಲ್ಲಿ ಅತೀಂದ್ರಿಯ ದೇವತಾ ಕಾರ್ಯವನ್ನು ಸಾಧಿಸುವ ಕರ್ಮಾನುಷ್ಠಾನಗಳೂ, ಇಂದ್ರಿಯ ಮಟ್ಟದಲ್ಲಿ, ಸೃಷ್ಟವಾದ ಸಸ್ಯಪ್ರಾಣಿಮನುಷ್ಯವರ್ಗ ಸಮೇತ ಚೇತನಾಚೇತನಗಳ ಸ್ವಸ್ವರಹಿತಕ್ಕೆ ಪಂಚಭೂತಗಳು ಮಾಡುವ ಕರ್ಮಾನುಷ್ಠಾನಗಳೂ ಲೌಕಿಕ (ಪ್ರಾಪಂಚಿಕ), ಕರ್ಮಗಳೂ ಸಹ ಅನುಸಂಧಾನ ರಹಸ್ಯಗರ್ಭಿತವಾಗಿ ಯೋಗವೆನಿಸುವಂತೆ ಅನುಸರಿಸುವ ಸಂಸ್ಕೃತಿಗಳಿಂದ ಜೀವನ ನಿರ್ವಾಹವು ಸುಲಲಿತವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಯೋಗ — ರಾಜನೀತಿ ಸಂಸ್ಕೃತಿ

ಪ್ರಕೃತಿಲೀಲೆಯಂತೆ ಅಖಂಡವಾಗಿ ವರ್ಣನಾತೀತವಾದ ಕರ್ಮದ ಗತಿಯು (ಅರ್ಥ, ಲಕ್ಷಣ, ವ್ಯಾಪ್ತಿ ಫಲಾದಿಗಳ ಜ್ಞಾನವು) ಬಹಳ ಗಹನವಾದುದು. 'ಗಹನಾ ಕರ್ಮಣೋ ಗತಿಃ |' ಇದೆಷ್ಟು ತೊಡಕೆಂದು ಕಾಣುವುದೋ ಅಷ್ಟೇ ಸುಲಭವಾಗಿ ಅದನ್ನು ತಿಳಿಯುವ ಹಾಗೆ ಗೆಲ್ಲುವ ಮಾರ್ಗವು ಸರ್ವರ ಮಿತಿಯಲ್ಲಿರುವಂತೆ ಬೋಧಿಸಲ್ಪಟ್ಟಿರುವುದು.

ಅಂತಃ ಮತ್ತು ಬಹಿಃ ನಡೆಸುವ ಕರ್ಮಗಳು ವ್ಯವಹಾರ ಶಾಸ್ತ್ರದಲ್ಲಿ ತೋರಿಸಿರುವ ಅನುಭವ ಆದರ್ಶ ಮಾರ್ಗಗಳಿಂದ ಪುರಸ್ಕೃತವಾಗುವ ವಿಚಾರಗಳನ್ನು ರಾಜನೀತಿ ಶಾಸ್ತ್ರವು ವಿವರಿಸಿ ವಿಧಾಯಕ ಮಾಡುವುದು. ಕರ್ಮವು ಎಷ್ಟೇ ಗಹನವಾಗಿ ತೊಡಕಾಗಿದ್ದರೂ 'ಸರ್ವ ಸಮತೆ' ಯ ತಳಹದಿಯ ಮೇಲೆ — "ಸರ್ವೇಷಾಮವಿರೋಧೇನ ಬ್ರಹ್ಮ ಕರ್ಮ ಸಮಾರಭೇ" ಎಂಬ ಮಧ್ಯಮಮಾರ್ಗವನ್ನು ಹೇಳುವ, ಹಾಗೂ 'ಪ್ರಭುತ್ವ' ಶಕ್ತಿಯನ್ನು ಮಿತಿಗೊಳಿಸುವ ರಾಜನೀತಿಯ ಸಂಸ್ಕೃತಿಯಿಂದ ಸುಗಮವನ್ನಾಗಿ ಮಾಡಿಕೊಳ್ಳಬಹುದು. ಮತ್ತು ವ್ಯವಹಾರಿಕ ಪಾರಮಾರ್ಥಿಕಗಳಾದ ಸಮಸ್ತ ಯಜ್ಞ, ಕ್ರತು, ಕರ್ಮ ಕಾರ್ಯಗಳನ್ನು ಸಂಸ್ಕೃತಿಯ ನೆರಳಿನಲ್ಲಿ ಸ್ವಪರ ಕಲ್ಯಾಣಕ್ಕಾಗಿ ಸಾಧಿಸಬಹುದು.

ಬ್ರಹ್ಮ–ಕ್ಷತ್ರಯೋಗ ಸಂಸ್ಕೃತಿ

ಲೋಕವೆಲ್ಲಾ ಬ್ರಹ್ಮ ಕ್ಷತ್ರಗಳಿಂದ ತುಂಬಿರುತ್ತದೆ. "ದ್ವಯಂ ವಾ ಇದಂ ಜಗತ್, ಬ್ರಹ್ಮ ಚ ಕ್ಷತ್ರಂ ಚ" ಎಂದು ಶ್ರುತಿವಚನವಿದೆ. ಬ್ರಹ್ಮವೂ ಕ್ಷತ್ರವೂ ಪರಸ್ಪರ ಹೊಂದಿಕೊಂಡು ಪುರುಷಾರ್ಥಸಿದ್ಧಿಯಾಗಬೇಕು. "ಯತ್ರ ಬ್ರಹ್ಮ ಚ ಕ್ಷತ್ರಂ ಚ ಸಮ್ಯಞ್ಚೌ ಚರತಃ ಸಹ | ತಂ ಲೋಕಂ ಪುಣ್ಯಂ ಪ್ರಜ್ಞೇಷಂ ಯತ್ರ ದೇವಾಃ ಸಹಾಗ್ನಿನಾ ||" ಎಂದು ಶ್ರುತಿಯು ಸಾರುವುದು. ಶುದ್ಧವಾದ ಬ್ರಹ್ಮವು ಕೇವಲ ಅತೀಂದ್ರಿಯ ವಿಷಯವಾಗಿದೆ. ಮತ್ತು ಸರ್ವ ಸಾಧಾರಣವಾಗಿ ಸರ್ವರಿಗೂ ಸಾಧನವಾಗಿಯೂ ಸಾಧಕವಾಗಿಯೂ ಸಾಧ್ಯವಾಗಿಯೂ ಸರ್ವವನ್ನೂ ಆವರಿಸಿಯೂ ಇರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮ

'ಬ್ರಹ್ಮ'ದಿಂದ ತಿಳಿಯಬಹುದಾದ ನಿರ್ಗುಣ ಸಗುಣಬ್ರಹ್ಮವಿಚಾರಗಳು ಸರ್ವರಿಗೂ ಬೇಕಾಗಿ ಸರ್ವವನ್ನೂ ಆವರಿಸಿ ಸರ್ವರಲ್ಲಿಯೂ ಅಂತರ್ಯಾಮಿಯಾಗಿದ್ದು ಆಶ್ರಯಿಸಿರುತ್ತವೆ.

ಕ್ಷತ್ರ ಪ್ರಯೋಗ

ಒಳಗೂ, ಹೊರಗೂ, ಯೋಗ, ಕ್ಷೇಮ, ಜ್ಞಾನ, ಇಚ್ಛಾ, ಕ್ರಿಯೆಗಳು ಪ್ರಧಾನವಾಗಿ ಉಳ್ಳ ಬ್ರಹ್ಮ ಮತ್ತು ಕ್ಷತ್ರಗಳಿಂದ ಜೀವನ ಯಜ್ಞವೂ ಪುರುಷಾರ್ಥಗಳೂ ಸುಸಂಸ್ಕೃತಗಳಾಗಿ ನಡೆಯುವುವು. ಪ್ರಕೃತಿ ಲೀಲಾನುಭವಕ್ಕೆ ಗುರಿಯಾದ ಬ್ರಹ್ಮವು ಲೀಲೆಯ ದೆಸೆಯಿಂದ ಚಿತ್ತ ಶುದ್ಧಿಯನ್ನೂ, ಸಮಾಧಿಯನ್ನೂ ಹೊಂದುವ ಪರ್ಯಂತ ಕ್ಷತ್ರವು ಸಹಕರಿಸಬೇಕಾಗಿರುತ್ತದೆ. ಬ್ರಹ್ಮವು ಕ್ಷತ್ರದಿಂದ ಕೂಡಿ ವರ್ಧಿಸುತ್ತದೆಂದು ಹೇಳಿರುವುದರ ರಹಸ್ಯವೇ ಇದು.

ನಾಬ್ರಹ್ಮ ಕ್ಷತ್ರಮೃಧ್ನೋತಿ ನಾಕ್ಷತ್ರಂ ಬ್ರಹ್ಮ ವರ್ಧತೇ ।
ಬ್ರಹ್ಮ ಕ್ಷತ್ರೇಣ ಸಂಯುಕ್ತಂ ಇಹ ಚಾಮುತ್ರ ವರ್ಧತೇ ।
(— ರಾಜನೀತಿ. ಬ್ರಹ್ಮಕ್ಷತ್ರಗಳು ಯಾವ ವ್ಯಕ್ತಿಯನ್ನೂ ಗುಂಪನ್ನೂ ಹೇಳುವುದಿಲ್ಲ. )

ಬ್ರಹ್ಮದ ದೆಸೆಯಿಂದ ವಿವರ್ತವಾದ ಬ್ರಹ್ಮಕ್ಷತ್ರಗಳು ಪರಸ್ಪರ ಸಹಾಯದಿಂದ ವೃದ್ಧಿ ಹೊಂದಬೇಕಾಗಿರುತ್ತವೆ. ಕ್ಷತ್ರವು ಬ್ರಹ್ಮಲಕ್ಷ್ಯವಾಗದಿದ್ದರೆ ವೃದ್ಧಿಯನ್ನು ಹೊಂದಿದಂತೆ ಭಾವಿಸಲಾಗುವುದಿಲ್ಲ. ಅನುಸಂಧಾನವು ಬ್ರಹ್ಮಪರವಾಗಿರುತ್ತದೆ; ಅನುಷ್ಠಾನವು ಕ್ಷತ್ರ ಪರವಾಗಿರುತ್ತದೆ ಎನ್ನಬಹುದು. ಅನುಷ್ಠಾನವು ಸಂರಕ್ಷಣಾತ್ಮಕವಾದುದು. ಸಂರಕ್ಷಕವಾದ ಅನುಷ್ಠಾನದಿಂದ ಬ್ರಹ್ಮಾನುಸಂಧಾನವೂ ಬ್ರಹ್ಮಾನುಸಂಧಾನದಿಂದ ಬ್ರಹ್ಮ ಸಂರಕ್ಷಕವಾದ ಅನುಷ್ಠಾನವೂ ನೆರವೇರುವುದಾಗಿದೆ. ಜೀವನ ಯಜ್ಞಾನುಷ್ಠಾನದ ಮೂಲಕ ಆತ್ಮಾನುಸಂಧಾನವೆಂಬ ದಿವ್ಯೋದ್ದೇಶ ಸಾಧಕನಿಗೆ ಸೂಕ್ಷ್ಮವಾದ ಐದು ವ್ಯಾಪಾರಗಳೂ ಋತದಲ್ಲಿ ವ್ಯವಸ್ಥಿತವಾಗಿ ಪಿಂಡಾಂಡ ಬ್ರಹ್ಮಾಂಡಗಳಲ್ಲಿ ವ್ಯಾಪಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿರುತ್ತವೆ. ಬ್ರಹ್ಮವು ಆನಂದವಾಗಿರುವುದರಿಂದ ದೃಶ್ಯ, ಸಗುಣ, ಮೊದಲಾದ ಗುಣ, ಸ್ಥಿತಿ, ಶಕ್ತಿ ಸ್ವಭಾವಗಳೂ ಇಂದ್ರಿಯ ಗೋಚರವಾದ ವಿಷಯಗಳೂ ಆನಂದವನ್ನು ರಕ್ಷಿಸುವ ಕ್ಷತ್ರವಾಗಿರುವುವು.

## ಕ್ಷತ್ರ ವಿಭಜನೆ — ಜೀವನ ಸಂಸ್ಕೃತಿ

ಕ್ಷತ್ರವನ್ನು ಸಂಸ್ಕೃತಿ ದೃಷ್ಟಿಯಿಂದ ವಿಭಜಿಸಿದರೆ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳೆಂಬ ಐದು ಬಗೆಯ ಗುಣ, ಶಕ್ತಿ ಮತ್ತು ಕ್ರಿಯಾ ರೂಪಗಳು ಜೀವನದಲ್ಲಿ ಕಾಣುವುವು. ಪ್ರಪಂಚದಲ್ಲಿ ನಾನಾ ವಿಧವಾಗಿ ಕಾಣುವ ಗುಣಶಕ್ತಿಕ್ರಿಯಾ ರೂಪಗಳನ್ನು ವಿಂಗಡಿಸಿ, ಸಂಗ್ರಹಿಸಿದರೆ ಚಿತ್ತಶುದ್ಧಿಗೆ ಕಾರಣವಾದ ಈ ಐದು ಬಗೆಯ ರೂಪಗಳಿಗಿಂತ ಬೇರೆಯಾದುದು ಇರುವುದಿಲ್ಲವೆಂದು ಸ್ಪಷ್ಟವಾಗುವುದು.

1) ಋತವನ್ನು ಸಾಕ್ಷಾತ್ಕರಿಸುವ ಸ್ವತಂತ್ರ ವ್ಯಾಪಾರಗಳಿಂದ ಬ್ರಹ್ಮವನ್ನು ಸಂರಕ್ಷಿಸುವುದು, — ಶ್ರೋತ್ರಿಯ ;

2) ದೇಹಿಗಳಿಗೆ ಜೀವನದಲ್ಲಿ ಉಂಟಾಗಬಹುದಾದ ನ್ಯೂನಾತಿರಿಕ್ತಗಳನ್ನೂ ಪ್ರಾಪಂಚಿಕ ಬಾಧೆಗಳನ್ನೂ ಸ್ವಾತಂತ್ರ್ಯ ಪ್ರಯೋಗದಿಂದ ಹೋಗಲಾಡಿಸಿ ಬ್ರಹ್ಮವನ್ನು ಸಂರಕ್ಷಿಸುವುದು, — ಕ್ಷತ್ರಿಯ ;

3) ಋತಾನುಸಾರವಾಗಿ ಪ್ರಕೃತಿಯ ಒಳಹೊಕ್ಕು ಸ್ವ-ಪರಹಿತಕ್ಕಾಗಿ ಸಂಪದಭ್ಯುದಯವನ್ನು ಸ್ವಾತಂತ್ರ್ಯದಿಂದ ರೂಢಿಸಿ ಬ್ರಹ್ಮವನ್ನು ಸಂರಕ್ಷಿಸುವುದು, — ವೈಶ್ಯ ;

4) ಋತದಲ್ಲಿ ಕಂಡಂತೆ ಋಣವನ್ನು ಶೋಧಿಸಿ ವ್ಯಸನವನ್ನು ಹೋಗಲಾಡಿಸಿ ಸ್ವಾತಂತ್ರ್ಯವನ್ನು ಅಡಗಿಸಿ ಪ್ರಕೃತಿ ವಶವಾಗಿದ್ದ ಬ್ರಹ್ಮವನ್ನು ಸಂರಕ್ಷಿಸುವುದು, — ಶೂದ್ರ ;

5) ಋತಾನುಸಾರಿಗಳನ್ನು ದುರ್ಘಟನೆಗಳ ದೆಸೆಯಿಂದ ಸ್ವತಂತ್ರವಾಗಿಯೂ ಅಸ್ವತಂತ್ರವಾಗಿ ಪರಪ್ರೇರಣೆಯಿಂದಲೂ ತಪ್ಪಿಸಿ ಬ್ರಹ್ಮವನ್ನು ಸಂರಕ್ಷಿಸುವುದು, — ನಿಷಾದ —ಎಂಬದಾಗಿ ಪ್ರಧಾನ ಕ್ಷತ್ರವು ವಿಭಕ್ತವಾಗಿರುವುವು. ಇವು ವಿಶಾಲವಾದ ಮತ್ತು ಸೂಕ್ಷ್ಮವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅನುಷ್ಠಾನ ಸಂವಿಧಾನ ಕ್ರಮಗಳು ಬ್ರಹ್ಮಾನುಸಂಧಾನವನ್ನು, ಸಕ್ಕರೆಯಲ್ಲಿ ಸಿಹಿಯೂ, ಸೂರ್ಯನಲ್ಲಿ ಬೆಳಕೂ ಹೊಂದಿಕೊಂಡಿರುವಂತೆ ಒಳಗಿಟ್ಟುಕೊಂಡು (ಗರ್ಭೀಕರಿಸಿ) ತತ್ತದ್ವ್ಯಾಪಾರಗಳನ್ನು ನಡೆಸುತ್ತವೆ. ಬ್ರಹ್ಮಾಂಡದಲ್ಲಿ ಕಾಣುವ ಸೃಷ್ಟವಾದ ಸಮಸ್ತ ವಸ್ತುಗಳಲ್ಲೆಲ್ಲಾ ಈ ಗುಣಶಕ್ತಿಕ್ರಿಯಾ ರೂಪಗಳು ಅನುಸ್ಯೂತವಾಗಿವೆ. ಇವುಗಳ ಕಾರ್ಯನಿರ್ವಾಹ ಪರಿಷ್ಕಾರಕ್ಕೆ ದ್ವಿಜಸಂಸ್ಕಾರವು ಆಯಾ ಕರ್ಮ ಮರ್ಯಾದೆಗೆ ಅನುಗುಣವಾಗಿ ನಡೆಯಬೇಕಾಗಿದೆ.

ಶೂದ್ರ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ಗುಣ ಶಕ್ತಿ ಕ್ರಿಯಾ ರೂಪಗಳು ಕ್ರಮ ಕ್ರಮವಾಗಿ ಏರುವ ಕ್ರಮದಲ್ಲಿ ಹೆಚ್ಚು ಹೆಚ್ಚಾದ ಹೊಣೆಗಾರಿಕೆಯನ್ನೂ ತಪಃ ಕ್ಲೇಶವನ್ನೂ ಹೊರಪಡಿಸುತ್ತವೆ. ಇವುಗಳು ಪರಸ್ಪರ ಬೇರೆ ಬೇರೆ ಎಂದಾಗಲೀ ಸ್ವತಂತ್ರವೆಂದಾಗಲೀ ಭಾವಿಸುವುದು ಅನುಭವಕ್ಕೂ ತರ್ಕಕ್ಕೂ ವಿರೋಧವಾಗುವುದು. ಪ್ರಪಂಚದಲ್ಲಿರುವ ಸಕಲ ಸಸ್ಯ, ಕ್ರಿಮಿ, ಪ್ರಾಣಿ, ಮಾನವ ದೇಹಿಗಳು ಬ್ರಹ್ಮವನ್ನು ಲಕ್ಷ್ಯವನ್ನಾಗಿಟ್ಟುಕೊಂಡು ಸುಖಕರವೂ ಋಣಶೋಧನಪರವೂ ಹೊಣೆಗಾರಿಕೆಯಿಲ್ಲದುದೂ ಆದ ಶೂದ್ರವನ್ನು ಸ್ವಭಾವತಃ ಹೊಂದಿರುವುವು. ಪ್ರತಿ ದೇಹಿಯೂ ತನ್ನ ಹುಟ್ಟಿಗೆ ಕಾರಣವಾದ ಋಣವನ್ನು ಶೋಧಿಸುವುದಕ್ಕೂ ಅಂದರೆ ತೊಳೆದು ನಿವೃತ್ತಿ ಮಾಡಿಕೊಳ್ಳುವುದಕ್ಕೂ (ಪರಿಹರಿಸಿಕೊಳ್ಳುವುದಕ್ಕೂ) ಮುಂದೆ ಋಣ ಕಲ್ಪನೆಯಾಗದಂತೆ ಜಾಗರೂಕವಾಗಿರುವುದಕ್ಕೂ ನಿತ್ಯ ಸುಖ ಪ್ರಾಪ್ತಿಗೂ ಶೂದ್ರ ಗುಣ ಶಕ್ತಿ ಕ್ರಿಯಾ ರೂಪವು ಸಹಕರಿಸುತ್ತದೆ.

## ಶೂದ್ರ ಸಂಸ್ಕೃತಿ

ಋಣದ ಮಿತಿಯಲ್ಲಿದ್ದು ಪ್ರಕೃತಿಯನ್ನು ಓಲೈಸಿ ಸೇವಿಸುವುದರಿಂದ ಋಣಪರಿಹಾರವಾಗುವ ರೀತಿಯು ಶೂದ್ರಸಂಸ್ಕೃತಿಯಾಗಿರುತ್ತದೆ. ಸ್ವಾತಂತ್ರ್ಯವನ್ನು ಮಿತಿ ಮೀರಿ ಪ್ರಯೋಗಿಸದೆ, ಸಾಹಸವನ್ನೆಸಗದೆ ಫಲ ಪ್ರಾಪ್ತಿಯ ಹೊಣೆಗಾರಿಕೆಯನ್ನು ಪ್ರಕೃತಿ-ವಿಧಿ-ಸುತ್ತಮುತ್ತಲಿನ ಆವರಣ ಶಕ್ತಿಗಳಿಗೆ ವಹಿಸಿ ಮಾನಸಿಕ ತಪಃ ಕ್ಲೇಶಕ್ಕೆ ಗುರಿಯಾಗದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಋಣ ಕಲ್ಪನೆಗೆ ಎಡೆಗುಡದೆ ಜೀವನವನ್ನು ಸಾಗಿಸುವುದೆಂಬ ಶ್ರೇಯಃ ಪ್ರಗತಿಪರವಾದ ಶೂದ್ರ ಸಂಸ್ಕೃತಿಯನ್ನು ಅಥವಾ ಸಂಸ್ಕೃತವಾದ ಶೂದ್ರವನ್ನು ಸರ್ವರೂ ಸದಾ ಪರಿಗ್ರಹಿಸಿ ಕಾಲಕ್ಕೆ (ಕರ್ಮ–ಪ್ರಕೃತಿಗೆ) ಶರಣಾಗತರಾಗಿ ಬ್ರಹ್ಮಾನುಸಂಧಾನ ಮಾಡುವ ಪರಮ ಪವಿತ್ರವಾದ ಮಾರ್ಗವು ನಿತ್ಯ ಜೀವನದಲ್ಲಿ ಅಡಗಿರುವುದು.

## ವೈಶ್ಯ ಸಂಸ್ಕೃತಿ

ವೈಶ್ಯವು ಪ್ರಕೃತಿಯ ಒಳಹೊಕ್ಕು ಪಾಂಚಭೌತಿಕ ಪ್ರಕೃತಿ ವ್ಯಾಪಾರಗಳನ್ನು ತಿಳಿದು ಸ್ವಾತಂತ್ರ್ಯದಿಂದ ಮಾನವ ಪ್ರಯತ್ನಗಳನ್ನು ಮಾಡುವುದರ ಮೂಲಕ ಪ್ರಕೃತಿಯನ್ನು ಪ್ರಜೆಗಳ ಸಂಪದಭಿವೃದ್ಧಿಗೂ ಸ್ವಪರಹಿತಕ್ಕೂ ಅಳವಡಿಸಿಕೊಳ್ಳುವ ತಪಸ್ಸಿನ ಹೊಣೆಗಾರಿಕೆಯಿಂದ ಬ್ರಹ್ಮಾನುಸಂಧಾನ ಮಾಡುವುದಾಗಿದೆ. ಪ್ರಕೃತಿಯು ಜನತೆಯ ಜೀವನಕ್ಕೂ ರಕ್ಷಣೆಗೂ ಅವಶ್ಯಕವಾಗುವ ಪದಾರ್ಥಗಳನ್ನು ಋಣ ಶೋಧನ ತತ್ಪರವಾದ ಶೂದ್ರಕ್ಕಾಗಿ ಋತಾನುರೋಧವಾಗಿ ಒದಗಿಸುತ್ತದೆ. ಪ್ರಕೃತಿಯಲ್ಲಿ ದೊರೆಯುವ ಮತ್ತು ಪ್ರಕೃತಿಯ ಗೋಜಿಲ್ಲದೆ ಪಡೆಯಬಹುದಾದ ವಸ್ತುಗಳು ಇಲ್ಲವೇ ಇಲ್ಲ. ಸೃಷ್ಟಿಕ್ರಮದಲ್ಲಿ ಮೊದಲು ಜೀವನಕ್ಕೆ ಆಗ ಬೇಕಾದ ಪದಾರ್ಥಗಳನ್ನು ಸಿದ್ಧಪಡಿಸಿದನಂತರ ಪ್ರಾಣಿಗಳು ಸೃಷ್ಟವಾದುವು. ಎಂಬುದು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧಾಂತವಾಗಿರುತ್ತದೆ ಮತ್ತು ಪ್ರಾಣಿಗಳ ಅನುಭವದಲ್ಲಿದೆ. ಪ್ರಕೃತಿ ದತ್ತವಾದ ವಸ್ತುಗಳನ್ನು ಮಾತ್ರ ಸಂಗ್ರಹಿಸಿ ಜೀವಿಸುವ ಸ್ವಭಾವವು ಶೂದ್ರಕ್ಕೆ ಸೇರಿದುದು.* ವಿವೇಕ ಜ್ಞಾನದಿಂದ ಕೂಡಿದ ಪ್ರಜೆಗಳು ಪ್ರಕೃತಿಯ ತತ್ವವನ್ನೂ ಋತವನ್ನೂ ಮನಗಂಡು ಪ್ರಕೃತಿಯ ಸಹಾಯದಿಂದ ಪ್ರಕೃತಿಯಲ್ಲಿ ಪ್ರವೇಶಿಸಿ ಸಾಹಸ ಸ್ವಾತಂತ್ರ್ಯಗಳಿಂದ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ವೈಶ್ಯ ಗುಣಶಕ್ತಿ ಮತ್ತು ವೈಶ್ಯಾನುಷ್ಠಾನ ಸಾಮರ್ಥ್ಯಗಳನ್ನು ಹೊಂದಿ

* ಪರಿವ್ರಾಜಕಾಶ್ರಮವನ್ನು ಸ್ವೀಕರಿಸಿದವರೂ ಅತ್ಯವಶ್ಯಕವಾಗಿ ಆಚರಿಸಬೇಕಾದ ಶಿಕ್ಷಣ ಸಂವಿಧಾನವು ಹೀಗೆಯೇ ಏರ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರುವುದರಿಂದ ಇಷ್ಟಕ್ಕೆ ಅನುಸಾರವಾಗಿ ಸಂಪತ್ತನ್ನೂ ಪದಾರ್ಥಗಳನ್ನೂ ಹೆಚ್ಚಿಸಿಕೊಳ್ಳುತ್ತಾರೆ.*

## ಕ್ಷತ್ರಿಯ ಸಂಸ್ಕೃತಿ

ಜೀವನದಲ್ಲಿ ರಕ್ಷಣಾಂಗವಾದ ಕ್ಷತ್ರಿಯವು ಪ್ರಕೃತಿಯನ್ನು ಸ್ವಾಧೀನ ಮಾಡಿಕೊಂಡು ಪ್ರಕೃತಿಗೆ ಅವಿರೋಧವಾಗಿಯೂ ವಿರೋಧವಾಗಿಯೂ ದೇಹಿಗಳ ಸ್ವಾತಂತ್ರ್ಯವನ್ನು ಪ್ರಯೋಗಿಸುವ ಮತ್ತು ಸ್ವಾತಂತ್ರ್ಯ ಶಕ್ತಿಯನ್ನು ಪರಸ್ಪರ ಶಾಂತಿದಾಯಕವಾಗುವಂತೆ ಕ್ರಮಪಡಿಸಿ ಸಮತೆಯನ್ನು ಸಂಸ್ಥಾಪಿಸುವ ಸಂವಿಧಾನ ವ್ಯವಸ್ಥೆಗಳನ್ನು ನೆಲೆಗೊಳಿಸುವುದಕ್ಕೂ, ಲೋಕದಲ್ಲಿ ಗುಣತ್ರಯಗಳ ಸಾಮರಸ್ಯದಲ್ಲಿ ನ್ಯೂನಾತಿರಿಕ್ತಗಳಿಂದುಂಟಾಗುವ ಅನಿಷ್ಟನಿವಾರಣೆಗೂ ಬ್ರಹ್ಮವು (ಶಾಂತಿ – ಸಮತೆಯು) ಹೆಚ್ಚಿ ಕಲ್ಯಾಣ ಪರಂಪರೆಗಳು ಸುಸ್ಥಿತವಾಗುವುದಕ್ಕೂ ಸರ್ವರಿಗೂ ಬೇಕಾಗಿರುವ ಅಲಭ್ಯವಾದ ಪುರುಷಾರ್ಥಗಳು ಲಭ್ಯವಾಗುವುದಕ್ಕೂ, ಲಬ್ಧವಾದುದು ಸುರಕ್ಷಿತವಾಗಿ ಶಾಂತಿಯು ನೆಲೆಗೊಳ್ಳುವುದಕ್ಕೂ ಅವಶ್ಯಕವಾದ ಪ್ರಭುತ್ವ ಗುಣಶಕ್ತಿತಪಸ್ಸಂವಿಧಾನದ ಹೊಣೆಗಾರಿಕೆಯನ್ನು ಹೊತ್ತು ಬ್ರಹ್ಮಾನುಸಂಧಾನ ಮಾಡುವುದಾಗಿದೆ.

## ಶ್ರೋತ್ರಿಯ ಸಂಸ್ಕೃತಿ

ಲೋಕ ಶಾಂತಿ ಕಲ್ಯಾಣ ವಿವರಣೆಯ ಹೊಣೆಗಾರಿಕೆಯುಳ್ಳ ಶ್ರೋತ್ರಿಯವು ಪ್ರಕೃತಿಗೆ ಶರಣಾಗತವಾಗಿ ಪ್ರಕೃತಿಯನ್ನೂ ಋತವನ್ನೂ ಪ್ರಕೃತಿಗೆ ಮೀರಿದ ಪರವಸ್ತುವನ್ನೂ ಸಾಕ್ಷಾತ್ಕರಿಸಿಕೊಂಡು ಪ್ರಕೃತಿಗೆ ಅನುರೋಧವಾಗಿ ಸ್ವಾತಂತ್ರ್ಯ ಸಾಹಸಗಳನ್ನು ಪ್ರಯೋಗಿಸಿ ಪ್ರಕೃತಿಯನ್ನು ಗೆದ್ದು ಪುರುಷನ ಆವರಣಾದಿಗಳನ್ನು ಭೇದಿಸಿ ಪುರುಷ ಬಲವನ್ನು ಹೆಚ್ಚಿಸಿ ಪ್ರಕೃತಿಯು ಮಾನವೀಯತೆಗನುಸಾರವಾಗಿ ಸ್ವಪರಹಿತವಾಗುವಂತೆ ಮಾರ್ಪಡಿಸಿ ಆಪನ್ನಿವಾರಣೆಗೂ ಶಾಂತಿ ಸ್ಥಾಪನೆಗೂ ಯತ್ನಿಸುವ

* ಇದು ಗೃಹಸ್ಥಾಶ್ರಮದ ಗೃಹಿಯ ಪುರುಷಾರ್ಥಗಳಲ್ಲಿ ಒಂದಂಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೈವೀ ಶಕ್ತಿಯನ್ನು ಹೊಂದಿ, ಅದನ್ನು ಕಾಪಾಡಿಕೊಂಡು, ಬೆಳೆಸಿ ಸಮಯೋಚಿತವಾಗಿ ಅದರಿಂದ ಲೋಕೋಪಕಾರ ಮಾಡುವ ಮತ್ತು ಈತಿಗಳನ್ನು ಪರಿಹರಿಸುವ ದೈವೀ ಸಂಪತ್ - ತಪೋನುಷ್ಠಾನದ ಹೊಣೆಗಾರಿಕೆಯಿಂದ ಬ್ರಹ್ಮಾನುಸಂಧಾನ ಮಾಡುವುದಾಗಿದೆ.

## ನಿಷಾದ ಸಂಸ್ಕೃತಿ

ಶೂದ್ರಾದಿ ನಾಲ್ಕು ಬಗೆಯ ಗುಣಶಕ್ತಿ ವ್ಯಾಪಾರಗಳು ಜೀವನದ ಸುವ್ಯವಸ್ಥೆಗೆ ನಿರ್ದಿಷ್ಟವಾಗಿರುವುದರಿಂದ ಮಿತಿಯ ಕಟ್ಟುಪಾಡುಗಳಿಗೆ ಒಳಪಟ್ಟಿರುವುವು. ಈ ಕಟ್ಟುಪಾಡುಗಳ ಎಲ್ಲೆಯೊಳಗೆ ಜೀವನ ಯಜ್ಞವು ಸಾಗುವಾಗ ಪ್ರಕೃತಿಯಲ್ಲಿ ಅಸ್ತವ್ಯಸ್ತವ್ಯಾಪಾರಗಳು ಆಕಸ್ಮಿಕವಾಗಿ ತಲೆದೋರುವ ಸಂಭವಗಳು ಹೇರಳವಾಗಿರುತ್ತವೆ. ಅವುಗಳನ್ನು ವ್ಯಾವೃತ್ತಿಗೊಳಿಸಿ ಶಾಂತಿ ಸ್ಥಾಪನೆ ಮಾಡಲು ಕಟ್ಟುಪಾಡಿನ ಆವರಣವೆಂಬ ಬಂಧನಕ್ಕೆ ಒಳಗಾಗದೆ ಸ್ವತಂತ್ರವಾಗಿರುವ ಸಹಾಯಕಾಂಗವು ಅವಶ್ಯಕ. ನಿರ್ದಿಷ್ಟ ವ್ಯಾಪಾರದ ಬಂಧನದ ದೆಸೆಯಿಂದ ಸ್ವತಂತ್ರವಾಗಿದ್ದು ಸಹಕರಿಸುವುದಕ್ಕಾಗಿ ಸದಾ ಒಳಗೆ ಮತ್ತು ಹೊರಗೆ ಸನ್ನಿಹಿತವಾಗಿ ಕಾದು ಕುಳಿತಿರುವ * ಅಮಿತವಾದ ಹೊಣೆಗಾರಿಕೆಯಿಂದ ಬ್ರಹ್ಮಾನುಸಂಧಾನ ಮಾಡುವುದು ನಿಷಾದವು.*

## ಶೂದ್ರಾದಿ ಪಂಚ ಸಂಸ್ಕೃತಿಗಳು

ಪ್ರಜೆಗಳಿಗೆಲ್ಲಾ ಸರ್ವ ಸಾಮಾನ್ಯವಾದ ಮತ್ತು ಅತ್ಯವಶ್ಯಕವಾದ 1) ಶಮ, ದಮ, ತಪಸ್ಸು, ಶೌಚ, ಇಂದ್ರಿಯ ನಿಗ್ರಹ, ಕ್ಷಾಂತಿ, ಆರ್ಜವ, ಜ್ಞಾನ, ವಿಜ್ಞಾನ ಮತ್ತು ಆಸ್ತಿಕ್ಯವೆಂಬುವು ಶ್ರೋತ್ರಿಯದಿಂದ ಸಾಧ್ಯವಾಗಬೇಕಾಗಿವೆ. 2) ಶೌರ್ಯ, ತೇಜಸ್ಸು, ಧೃತಿ,

---

* ನಿಷಾದ ಎಂಬ ಶಬ್ದವು ನಿ + ಸದ್ ಎಂಬ ಧಾತುವಿನಿಂದ ವ್ಯುತ್ಪನ್ನವಾಗಿ ಉಕ್ತವಾದ ಅರ್ಥವನ್ನು ಹೊಂದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾಕ್ಷ್ಯ, (ಪಿಂಡಾಂಡ ಬ್ರಹ್ಮಾಂಡಗಳಲ್ಲಿ ನಡೆಯುವ) ಜೀವನ ಯುದ್ಧ ದಿಂದ ಹಿಮ್ಮೆಟ್ಟದಿರುವಿಕೆ, ದಾನ, ಈಶ್ವರಭಾವಗಳು ಕ್ಷತ್ರಿಯದಿಂದ ಸಾಧ್ಯವಾಗತಕ್ಕವು. 3) ಕೃಷಿ, ಗೋರಕ್ಷಣ, ವಾಣಿಜ್ಯಗಳು ವೈಶ್ಯ ದಿಂದ ಸಾಧ್ಯಗಳು 4) ಶುಶ್ರೂಷೆಯು ಶೂದ್ರದಿಂದ ಸಾಧ್ಯ. † 5) ರಕ್ಷಣೆಗಾಗಿ ಕಾದು ಕುಳಿತಿರುವುದು ನಿಷಾದದಿಂದ ಸಾಧ್ಯ. ಇವೆಲ್ಲವೂ ದೇಹಿಗಳ ಉನ್ನತಿಗಾಗಿ ನಡೆಪು ಪ್ರತಿ ಘಟ್ಟದಲ್ಲಿಯೂ ಪುನರ್ಜೀವನ ವನ್ನುಂಟುಮಾಡುವುದರಿಂದ ಇವುಗಳಿಗೆಲ್ಲಾ ದ್ವಿಜ ಸಂಸ್ಕಾರವೆಂಬ ಒಂದೇ ನಾಮವು ಸಮಸ್ತ ಪ್ರಾಪಂಚಿಕ, ಪಾರಮಾರ್ಥಿಕ ಲಾಭ ಯತ್ನ ಕ್ಕೆ ಪೂರ್ವವೇ ನಡೆಯಬೇಕಾಗಿದೆ.

ಶೂದ್ರವು ಸರ್ವ ಸಾಮಾನ್ಯವಾದುದು ; ವೇದೋಕ್ತವಾದುದು ; ಪವಿತ್ರವಾದುದು ; ವಿಶ್ವಸೇವೆ, ಜನ ಸೇವೆ, ಆತ್ಮಸೇವೆಗಳನ್ನು ಒಳ ಗೊಂಡು ಋಣವನ್ನು ಶೋಧಿಸುವ, ವ್ಯಸನವನ್ನು ಪರಿಹರಿಸುವ ಶೂದ್ರವು ಮಾನವತೆಯ ಮಟ್ಟದಲ್ಲಿ ಸರ್ವರಿಂದಲೂ ಆದರಣೀಯವಾ ದುದು. ಇದು ಸ್ವಾಭಾವಿಕ ಸುಖಮಯ ಶ್ರೇಯಃ ಕಾರಕ. ಶ್ರೋತ್ರಿಯ ವಲ್ಲಿಯೂ ಕ್ಷತ್ರಿಯವಲ್ಲಿಯೂ ವೈಶ್ಯದಲ್ಲಿಯೂ ನಿಷಾದದಲ್ಲಿಯೂ ಶೂದ್ರವು ಅಡಗಿರುತ್ತದೆ. ಪ್ರಕೃತಿಗೆ, ಶಾಸ್ತ್ರಕ್ಕೆ, ಶಾಸನಕ್ಕೆ, ಸ್ವಾಮಿಗೆ ವಿಧೇಯತೆಯಿಂದ ಶುಶ್ರೂಷೆಯನ್ನು ಅರ್ಪಿಸುವುದರಿಂದ ಸಕಲ ಪುರುಷಾ ರ್ಥಗಳೂ ಆಯಾ ಮಿತಿಗೆ ತಕ್ಕಂತೆ ಸಿದ್ಧಿಸುವುವು. ಆದುದರಿಂದಲೇ 'ತಪಸೇ ಶೂದ್ರಂ'* ಎಂದು ತಪೋಯಜ್ಞಕ್ಕೆ ಶೋಧನ ಪ್ರಧಾನವಾದ ಶೂದ್ರವೇ ಯಜ್ಞ ಪಶುವಾಗುವ ಸನ್ನಿವೇಶವು ವೇದದಲ್ಲಿ ಉದಾಹೃತ

---

† ಭಗವದ್ಗೀತಾ ಅ. ೧೮ ಶ್ಲೋ. ೪೨–೪೪.

* ತಪಸ್ ಎಂಬ ಪ್ರಯೋಗವು ನಿಯಮಾನುಸಾರವಾಗಿಯೇ ನಡೆಯಬೇಕೆಂಬುದು ವಿಶ್ವದಲ್ಲಿ ಸರ್ವರ ಅನುಭವಕ್ಕೆ ಬಂದಿದೆ.

ಶುಶ್ರೂಷೆ ಮಾಡಿ, ವಿಧೇಯತೆಯಿಂದ ನಿಯಮಗಳನ್ನು ಪಾಲಿಸು ವುದೆಂಬ ಶೂದ್ರವು ವ್ಯತ್ಯಸ್ತವಾದರೆ ತಪಸ್ಸು ಭಂಗವಾಗಿ ಪ್ರಯೋಗವು ಹಾನಿಕರವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಾಗಿದೆ. ಶೂದ್ರಮಯವಾದ ಸ್ತ್ರೀತ್ವ, ಸ್ತ್ರೀತ್ವಗರ್ಭಿತವಾದ ಶೂದ್ರ ಇವುಗಳು ಕಾರ್ಯಗತವಾಗುವಂತೆ ತಂತ್ರಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟಿವೆ. ಪಶುಪತಿಯ ಅರ್ಥವೂ ಉಪಾಸ್ಯ, ಉಪಾಸಕ, ಉಪಾಸನಾ ವಿವರಣೆಗಳೂ ವರಿವಸ್ಯಾರಹಸ್ಯವನ್ನು ಬೋಧಿಸುವ ಶಾಸ್ತ್ರಗಳಲ್ಲಿ ಕರತಲಾಮಲಕವಾಗುವಂತೆ ವರ್ಣಿಸಲ್ಪಟ್ಟಿವೆ.

'ಅಥರ್ವ ವೇದ' ಎಂಬುದು ಪ್ರತ್ಯೇಕವಾಗಿಲ್ಲದೆ† ವೇದಗಳಲ್ಲೆಲ್ಲಾ ಅಂತರ್ಗತವಾಗಿರುವಂತೆ, ಶೂದ್ರವು ಪ್ರತ್ಯೇಕವಾಗಿಲ್ಲದೆ ಶ್ರೋತ್ರಿಯಾದಿ ಸಂಸ್ಕೃತಿಗಳಲ್ಲಿ ಅಂತರ್ಗತವಾಗಿರುತ್ತದೆ. ಆದರೆ ಋಣಾನುಬಂಧಕ್ಕೆ ತಕ್ಕಂತೆ ಸ್ವತಂತ್ರಿಸಿ ನಡೆಯುವ ವೈಶ್ಯಾದಿಗಳನ್ನು ಬಿಟ್ಟು ಸುಖವಾಗಿ ಋಣ ಶೋಧನವನ್ನು ಮಾತ್ರ ಲಕ್ಷ್ಯವಾಗಿಟ್ಟುಕೊಂಡು ದೇಹಯಾತ್ರೆಯನ್ನು ನಡೆಸುವ ದೇಹಿಗಳು ಶೂದ್ರವನ್ನು ಸಿದ್ಧವಾಗಿ ಅನುಷ್ಠಾನ ಮಾಡುವವರೆಂದು ಹೇಳಬಹುದು. ಅಂತಹ ಶೂದ್ರವು ಸಾಮಾನ್ಯ ಪ್ರಜೆಗಳಲ್ಲಿ ಪ್ರತ್ಯೇಕವಾಗಿ ಕಾಣಬರುವುದಿಲ್ಲ. ಅಶಕ್ತರೂ ರೋಗಿಗಳೂ ಬಲಾತ್ಕೃತರಾಗಿ ಶೂದ್ರವನ್ನು ಅನುಸರಿಸಬೇಕಾಗಬಹುದು. ಅಂತಹವರೂ ವಿರಳರಾಗಿರುತ್ತಾರೆ. ಶೂದ್ರವನ್ನು ತಿರಸ್ಕರಿಸುವ ಶ್ರೋತ್ರಿಯಾದಿಗಳು ಅವನತಿಯನ್ನು ಹೊಂದುತ್ತವೆ. ಗುರುಕುಲದಲ್ಲಿ ಶೂದ್ರವನ್ನು ಅನುಸರಿಸುವುದರಿಂದಲೇ ಅಂತೇ ವಾಸಿಗಳು, ಬ್ರಹ್ಮಚಾರಿಗಳು ಎನಿಸಿಕೊಳ್ಳುವರು. ಗೃಹದಲ್ಲಿ ಶೂದ್ರವನ್ನು ಅನುಷ್ಠಾನಮಾಡುವ ಸ್ತ್ರೀಯರು ಪತ್ನಿಯರು, ಧರ್ಮ ಪತ್ನಿಯರು ಎನಿಸಿಕೊಳ್ಳುವರು. ಹೀಗೆ ಶೂದ್ರವು ಶ್ರೋತ್ರಿಯವನ್ನೂ ಕ್ಷತ್ರಿಯನನ್ನೂ ವೈಶ್ಯವನ್ನೂ ಸಹಕರಿಸಿ ಜೀವನ ಯಜ್ಞದ ಕೆಲವು ಅಂಶಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಶುದ್ಧನಾದ ಶ್ರೋತ್ರಿಯವೂ ಜೀವನವನ್ನು ಸಾಗಿಸಲಾರದು; ಕ್ಷತ್ರಿಯತ್ವಾದಿಗಳ ಸಹಾಯದಿಂದಲೂ ಕ್ಷತ್ರಿಯತ್ವಾದಿಗಳ ಅಂಶಗಳನ್ನು ಅನುಷ್ಠಾನ ಮಾಡುವುದರಿಂದಲೂ ಪ್ರಧಾನವಾದ ಶ್ರೋತ್ರಿಯವು ಸಿದ್ಧಿಯನ್ನು ಹೊಂದುವುದು.

---

† ಪುಟ 226.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಶುದ್ಧವಾದ ಕ್ಷತ್ರಿಯವೂ ಅಬಲವಾದುದು. ಶ್ರೋತ್ರಿಯತ್ವಾದಿಗಳ ಸಹಾಯದಿಂದಲೂ ಅವುಗಳ ಕೆಲಕೆಲವು ಅಂಶಗಳನ್ನು ಅನುಷ್ಠಾನ ಮಾಡುವುದರಿಂದಲೂ ಕ್ಷತ್ರಿಯತ್ವವು ಸಿದ್ಧಿಯನ್ನು ಹೊಂದುವುದು.

ಶುದ್ಧವಾದ ವೈಶ್ಯವೂ ಶಕ್ತಿಹೀನವಾದುದೇ. ಶ್ರೋತ್ರಿಯಾದಿಗಳ ಸಹಾಯದಿಂದಲೂ ಅವುಗಳ ಕೆಲವು ಅಂಶಗಳನ್ನು ಅನುಷ್ಠಾನ ಮಾಡುವುದರಿಂದಲೂ ವೈಶ್ಯತ್ವವು ಫಲಪ್ರದವಾಗುವುದು.

ನಿಷಾದವು ಶುದ್ಧವಾಗಿದ್ದುಕೊಂಡು ಸಮಯೋಚಿತವಾಗಿ ಶ್ರೋತ್ರಿಯತ್ವಾದಿಗಳಿಗೆಲ್ಲಾ ಅವಲಂಬನವನ್ನು ಕೊಟ್ಟು, ಆವಶ್ಯಕವಾದ ಗುಣಶಕ್ತಿ ವ್ಯಾಪಾರಗಳನ್ನು ನೆರವೇರಿಸಿ ಸಿದ್ಧಿಯನ್ನು ಪಡೆಯುವುದು.

## ಶೂದ್ರಾದಿ ಸಂಸ್ಕೃತಿಗಳ ವಿಶ್ವರೂಪ

ವೃಕ್ಷಗಳಲ್ಲಿ ಸಸ್ಯ ವರ್ಗಗಳಲ್ಲಿ ಪಕ್ಷಿಗಳಲ್ಲಿ ಜಲಚರಗಳಲ್ಲಿ ಕ್ರಿಮಿ ಕೀಟಗಳಲ್ಲಿ ಸರ್ಪಗಳಲ್ಲಿ ಪಶುವರ್ಗಗಳಲ್ಲಿ ಮೃಗಗಳಲ್ಲಿ ಖಗೋಲ ಜ್ಯೋತಿರ್ವರ್ಗಗಳಲ್ಲಿಯೂ ಭೂಸಂಪತ್ತುಗಳಲ್ಲಿಯೂ ಮಾನವರಲ್ಲಿಯೂ ಸ್ಥಾವರ ಜಂಗಮಾದಿಗಳಲ್ಲಿಯೂ ವೇದಗಳಲ್ಲಿಯೂ ಛಂದಸ್ಸುಗಳಲ್ಲಿಯೂ ಅಂದರೆ ಸಮಸ್ತ ವಸ್ತುಜಾತದಲ್ಲಿ ಸರ್ವ ಕಾಲದಲ್ಲಿ ಸರ್ವತ್ರ ಶೂದ್ರಶಕ್ತಿ ಶೂದ್ರಕರ್ಮ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ, ನಿಷಾದ ಗುಣಶಕ್ತಿ ಕರ್ಮಗಳು ಯಾವ ಯಾವ ಪ್ರಮಾಣದಲ್ಲಿ ಹೇಗೆ ಪ್ರಕಾಶಿಸುವುವು ಎಂಬುದನ್ನು ದಿವ್ಯ ತಪಃ ಫಲಕ್ಕೆ ಗುರಿ ಮಾಡಿ. ತಿಳಿದು ವಿಂಗಡಿಸಿ ಪ್ರಜಾಕೋಟಿಯ ವಿವೇಕಚಕ್ಷುಸ್ಸಿನ ಮುಂದೆ ಇರುವಂತೆ ಮಾಡಲಾಗಿದೆ. ಇವೆಲ್ಲವನ್ನೂ ಶಾಸ್ತ್ರೀಯ ವಿಮರ್ಶೆಗೂ ಪ್ರಯೋಗಶಾಲೆಯ ಪ್ರಯೋಗಗಳಿಗೂ ಗುರಿಮಾಡಿ ತತ್ವಾರ್ಥವನ್ನು ಬೆಳಗುವುದರಿಂದ ಪ್ರಪಂಚದ ಕ್ಷೋಭೆಯು ನಿವಾರಿಸಲ್ಪಡುವುದು.

## ಚೇತನಾಚೇತನ ಶೂದ್ರಾದಿ ಸಂಸ್ಕೃತಿಗಳು

ಸಸ್ಯ, ಮೃಗ, ಪಶು, ಮಾನವ ದೇಹಿಗಳು ಶರೀರವನ್ನು ಧರಿಸಿ ಜೀವನವನ್ನು [illegible] ಮಾಡಿ [illegible] ನಾಶವಾಗುವವರೆಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶರೀರದ ಬೆಳವಣಿಗೆಯು ಪ್ರತಿಯೊಂದು ಅವಸ್ಥೆಯಲ್ಲಿಯೂ ಪ್ರಕೃತಿ ಪ್ರೇರಿತವಾಗಿ ಋಣಬಂಧನಕ್ಕನುಗುಣವಾಗಿ ನಡೆಯಬೇಕಾದ ಕರ್ಮ ವ್ಯಾಪಾರಗಳಲ್ಲಿ ದೋಷಗಳನ್ನು ಹೋಗಲಾಡಿಸಿಕೊಂಡು ಉತ್ತಮಸ್ಥಿತಿಯನ್ನು ಹೊಂದುವುದಕ್ಕಾಗಿಯೂ ಮತ್ತು ಆಯಾ ದೇಹಿಯು ಮತ್ತು ಮುತ್ತಲಿನವರೂ ವ್ಯವಸಾಯ ಮಾಡಿ ಉತ್ತಮಗೊಳಿಸುವುದಕ್ಕಾಗಿಯೂ ಸಂಸ್ಕೃತಿಗಳು ಗೊತ್ತಾಗಿರುವುದು ಸರಿಯಷ್ಟೆ. ಸಸ್ಯಾದಿಗಳ ಬೆಳವಣಿಗೆಗೆ ಸಂಬಂಧಪಟ್ಟವರು ಸಸ್ಯರಕ್ಷಣೆಗೆ ಮಾಡುವ ಸಂಸ್ಕೃತಿಗಳನ್ನು ತಿಳಿದೇ ಇರುತ್ತಾರೆ. ಮಾನವ ದೇಹಿಗಳು ಈ ಬಗೆಯ ಶಾರೀರಕ ಮಾನಸಿಕ ಸಂಸ್ಕಾರಗಳನ್ನು ಹೊಂದಿ ಉತ್ತಮ ಸ್ಥಿತಿಯನ್ನು ಹೊಂದುವರು.

ಪುಣ್ಯಕಾರ್ಯವಾಗಲೀ ಪಾಪಕಾರ್ಯವಾಗಲೀ ಫಲಾನುಭವವನ್ನು ಉಂಟುಮಾಡುವವುಗಳಾಗಿ ಬಂಧನಕ್ಕೆ ಗುರಿಮಾಡುವುವು. ಇಂತಹ ಬಂಧನಗಳಿಗೆ ಇಂಬುಗೊಡದೆ ಪುಣ್ಯಪಾಪಗಳ ಗೋಜಿಲ್ಲದಂತೆ ಮಾಡುವುದೇ ಶೂದ್ರವು. ಬ್ರಹ್ಮನಿಷ್ಠ ಬ್ರಹ್ಮಸಾಕ್ಷಾತ್ಕಾರ ಪಡೆದ ಜೀವನ್ಮುಕ್ತರ ಸ್ಥಿತಿಯನ್ನು ಹೋಲುವುದೇ ಶೂದ್ರವು.

## ಶೂದ್ರದಿಂದ ಶೂದ್ರಕ್ಕಾಗಿ ಜನ್ಮ; ಶೂದ್ರದಿಂದ ಮುಕ್ತಿ

ಶ್ರೋತ್ರಿಯಾದಿ ಐದು ಬಗೆಯ ಗುಣಶಕ್ತಿಕರ್ಮಗಳು ಶೂದ್ರದ ಆಶ್ರಯವನ್ನು ಹೊಂದಿ ಋಣ ಶೋಧನ ವ್ಯಾಪಾರದಲ್ಲಿ ತೊಡಗಿ * ಸನ್ನಿವೇಶ ಸಮಯೋಚಿತವಾಗಿ ಶ್ರೇಯಸ್ಸಾಧನೆಗೂ ಅವನತಿಗೂ ಒಯ್ಯಬಹು

* 1) ಪರಮ ಶ್ರೋತ್ರಿಯರಾದ ವೇ॥ ಕೊಡೂರು ರಾಮಭಟ್ಟರು ಶೃಂಗೇರಿಯಲ್ಲಿ ತಮ್ಮ ಸ್ವಗೃಹದ ಮುಂದೆ ಮಣ್ಣು ಕೆಲಸ ಮಾಡುತ್ತಿದ್ದಾಗ "ನಾನು ಈಗ ಶೂದ್ರಕೆಲಸದಲ್ಲಿದ್ದೇನೆ" ಎಂದು ೨೦-೧೨-೫೦೫೧ ಕಲಿ ಸಂವತ್ಸರದಲ್ಲಿ ಶಿವಮೊಗ್ಗ ಭಗವಾನ್ ಆಶ್ರಮದ ಶ್ರೀ ಹೆಬ್ಬಾಲೆ ರಾಮಕೃಷ್ಣ ರಾವ್ ಮತ್ತು ರುದ್ರಪಟ್ಟದ ಸೂರ್ಯನಾರಾಯಣ, ಎಂ.ಎ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದಾದ ಋಣ ನಿವೃತ್ತಿ ಋಣ ಕಲ್ಪನೆ ಅನುಭವಗಳನ್ನು ಉಂಟುಮಾಡು ವುವು. ಅವಶೇಷವಾದ ಋಣಾನುಭವಗಳ ಪೂರೈಕೆಗೆ ಶೋಧನ ಪ್ರಧಾನ ವಾದ ಶೂದ್ರವನ್ನು ಆರಂಭಿಸಿಯೇ ಜನ್ಮವನ್ನು ಪಡೆಯಬೇಕಾಗುವುದು. ಪರಮ ಪುರುಷಾರ್ಥವಾದ ನಿತ್ಯಾನಂದ ನಿತ್ಯಸುಖ ಸ್ವಸ್ವರೂಪಾವ ಸ್ಥಾನವನ್ನು ಶೂದ್ರದಿಂದಲೇ ಋಣ ಶೋಧನವು (ಋಣಾನುಭವವು) ನಿಶ್ಶೇಷವಾದಾಗ ಹೊಂದುವಂತೆ ಉಕ್ತವಾಗಿರುವ ಅನುಸಂಧಾನ ಸಂಸ್ಕೃತಿಯು ಅಮೋಘವಾದುದು, ಅಪ್ರತಿಹತವಾದುದು.

## ಶೂದ್ರಾದಿ ಸಂಸ್ಕೃತಿಗಳ ಪ್ರಯೋಗ ನಿರ್ವಾಹ ಸಮಾನತೆ

ಶ್ರೋತ್ರಿಯಾದಿ ಪಂಚವಿಧ ಸಂಸ್ಕೃತಿಗಳು ದೇಹಿಗಳಿಗೆ ದ್ವಿಜತ್ವ ಗಳನ್ನು ಪ್ರತಿ ಘಟ್ಟದಲ್ಲಿಯೂ ಉಂಟುಮಾಡುವವುಗಳಾಗಿ ಪ್ರಪಂಚದಲ್ಲಿ ಸೃಷ್ಟವಾದ ಸಸ್ಯ ಪ್ರಾಣಿ ಮೊದಲಾದ ಸಮಸ್ತ ದೇಹಿಗಳ ಮೇಲೆ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ, ಸಾರ್ವಜನಿಕವಾಗಿ ಸ್ವಭಾವ ಕರ್ಮಗಳಂತೆ ಹೊರಿಸಲ್ಪಟ್ಟಿರುವುದೆಂಬುದು ಜೀವನ ಯಜ್ಞಾನುಷ್ಠಾನದ ವಿಭಜನದಿಂದ ಗೊತ್ತಾಗುತ್ತದೆ.* ಇವುಗಳಲ್ಲಿ ಯಾವುದಾದರೊಂದು ಯಾರಲ್ಲಿಯಾದರೂ ಇಲ್ಲದಿದ್ದರೂ ಅವರ ವೈಯಕ್ತಿಕ ಜೀವನಕ್ಕೆ ಕೊರತೆ ಯಾಗುವುದು. ಆದುದರಿಂದ ಈ ಐದು ಬಗೆಯ ಕ್ರಿಯಾ ರೂಪಗಳು ಸರ್ವರಲ್ಲಿಯೂ ಸರ್ವದಾ ಆಯಾ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ

---

ಯವರೊಡನೆ ಸಂಭಾಷಣೆಯನ್ನು ಆರಂಭಿಸಿದರು.

2) ರಾಜನೀತಿ ವಿಶಾರದ ಶ್ರೀ ಹೆಬ್ಬಾಲೆ ರಾಮಕೃಷ್ಣರಾಯರು ಸನ್ನಿವೇಶ ಪ್ರಾಬಲ್ಯದಿಂದ 'ನಾನು ಈಗ ಚಂಡಾಲನಾಗಿಬಿಟ್ಟಿದ್ದೇನೆ.' ಎಂದು ತಾತ್ಕಾಲಿಕ ಕರ್ತವ್ಯ ನಿಷ್ಠೆಯನ್ನು ವ್ಯಕ್ತಪಡಿಸಿದ್ದರು.

(ಬ್ರಾಹ್ಮಣಧರ್ಮ — ಪುಟ 15 ಟಿಪ್ಪಣಿ)

* ಪುಟ 201 ಟಿಪ್ಪಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತವಾಗುತ್ತಿರುವುವು. ಇವುಗಳಲ್ಲಿ ಒಂದು ಮೇಲು, ಒಂದು ಕೀಳು, ಒಂದು ಮುಂದೆ, ಒಂದು ಹಿಂದೆ ಎಂಬ ದುರ್ಭಾವನೆ ದುರಭಿಮಾನಗಳಿಗೆ ಅವಕಾಶವಿಲ್ಲ. ಈ ಪಂಚ ಚಕ್ರಗಳನ್ನು ಅವಲಂಬಿಸಿ ಮುಂದುವರಿಯುವ ಜೀವನ ರಥದಲ್ಲಿ ಎಲ್ಲಾ ಚಕ್ರಗಳೂ ಸಮಾನವಾದ ಮತ್ತು ಶ್ರೇಷ್ಠವಾದ ಹೊಣೆಗಾರಿಕೆಯನ್ನು ಹೊತ್ತಿವೆ. ಇವುಗಳ ಮೂಲಕ ಪ್ರತಿಯೊಬ್ಬನೂ ಬ್ರಹ್ಮಾನುಸಂಧಾನದಿಂದ ಸಂಸ್ಕೃತವಾದ ಅನುಷ್ಠಾನಗಳನ್ನು ನಿರ್ವಹಿಸಿ ಕ್ರಮಕ್ರಮವಾಗಿಯೂ, ನೇರವಾಗಿಯೂ ಮೇಲಕ್ಕೇರಿ ಸ್ವಸ್ವರೂಪ ಜ್ಞಾನಾನುಭವಕ್ಕೆ ಸದಾ ಸಿದ್ಧರಾಗಿರಬೇಕಾಗಿದೆ. ಯಾವುದಾದರೊಂದು ಗುಣಶಕ್ತಿಕ್ರಿಯಾರೂಪದ ಚಕ್ರವು ಕುಗ್ಗಿದರೂ, ತಗ್ಗಿದರೂ, ಮೇಲಕ್ಕೆದ್ದು ಹಾರಿದರೂ ಪ್ರಜೆಯ ಜೀವನ ಯಜ್ಞರಥವು ಭಗ್ನವಾಗಿ ಹೃದ್ದೇಶಸ್ಥಿತ ವಾದ * ವೇದಪುರುಷನಿಗೆ ಅಂಗ ವೈಕಲ್ಯವು ಪ್ರಾಪ್ತಿಯಾಗುವುದು. ಉಚ್ಚ ನೀಚ ದ್ವೇಷ ಅಸೂಯಾದಿ ಭಾವನೆಗಳಿಂದ ಯಜ್ಞವು ನಾಶವಾಗಿ ಕಾಮಕ್ರೋಧಾದಿಗಳ ಆಧಿಕ್ಯದಿಂದ ಸಂಸ್ಕೃತಿಯೂ ಕೆಟ್ಟು ಶ್ರೇಯಸ್ಸಿನ ಹಂತದಿಂದ ಜಾರಬೇಕಾಗುವುದು.

## ಜೀವನ ಪ್ರಧಾನ-ಅವಸ್ಥಾ ಸಂಸ್ಕೃತಿ

ಸಂಸ್ಕೃತಿಯ ದೃಷ್ಟಿಯಿಂದ ಜೀವನ ಯಜ್ಞವನ್ನು ಪ್ರಧಾನವಾದ ನಾಲ್ಕು ಅವಸ್ಥೆಗಳಾಗಿ ವಿಭಜಿಸಲಾಗಿದೆ. ಜನ್ಮಾರಭ್ಯ ಜ್ಞಾನಾರ್ಜನೆಯೇ ಪ್ರಧಾನವಾದ ಸಂಸ್ಕೃತ ಕರ್ಮವುಳ್ಳುದು ಮೊದಲನೆಯದಾಗಿದೆ. ಯೌವನಾರಂಭದಿಂದ ಇಚ್ಛಾಪೂರಣಾದಿಗಳೆಂಬ ಯಜ್ಞಕಾರ್ಯ ನಿರ್ವಾಹಕ್ಕೆ ಪರಮ ಸಾಧಕವಾದುದು ಎರಡನೇ ಹಂತವಾಗಿದೆ. ಮೂರನೆಯದು ಜೀವನ ಪ್ರಾಪಂಚಿಕ ಯಜ್ಞದಲ್ಲಿ ಔದಾಸೀನ್ಯವನ್ನೂ ತಾಟಸ್ಥ್ಯವನ್ನೂ ಪ್ರಕಟಿಸುತ್ತದೆ. ನಾಲ್ಕನೆಯದು ಪ್ರಾಪಂಚಿಕ ಜೀವನ ಯಜ್ಞವನ್ನೇ ದೂರೀಕರಿಸುವುದಾಗಿದೆ. ಜೀವನವನ್ನೇ ತಳ್ಳಿ ಹಾಕುವುದೆಂಬ ಅಂಶವು ದೂರೀಕರಣಾವಸ್ಥೆಯ ತುರೀಯಭಾಗವಾಗಿ

* ಭಗವದ್ಗೀತಾ ಅ. ೧೮ ಶ್ಲೋ. ೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪರಿಗಣಿಸಲ್ಪಟ್ಟಿದೆ. ಈ ಅವಸ್ಥಾ ಸಂಸ್ಕೃತಿಗಳನ್ನು ದೇಹಿಯು ತನ್ನ ಶಾರೀರಕ ಮಾನಸಿಕ ಸಂಸ್ಕಾರ ಬಲಕ್ಕೆ ಅನುಗುಣವಾಗಿಯೂ ಖುಣ ಕರ್ಮಕ್ಕನುಗುಣವಾಗಿಯೂ ಅವಲಂಬಿಸುವುದರಲ್ಲಿ ಸ್ವತಂತ್ರವಾಗಿರುತ್ತದೆ. ಈ ಅವಸ್ಥಾ ವಿಶೇಷಗಳ ಪ್ರಾಪ್ತಿ, ಸ್ಥಿತಿ, ಅಭ್ಯುದಯಗಳು ಸಂಸ್ಕೃತವಾದ ಕರ್ಮಮಾರ್ಗಗಳನ್ನು ಅನುಸರಿಸುವುದರಿಂದ ಸ್ವತ ಏವ ಕ್ರಮಶಃ ಸರ್ವರಿಗೂ ಲಭ್ಯವಾಗುವುವು.

## ಸಂಸ್ಕೃತಿಯ ಪ್ರಭಾವ ಅನಿವಾರ್ಯ ಮತ್ತು ಅಪ್ರತಿಹತ

ಪೂರ್ಣದಿಂದ ವ್ಯಾಪ್ತವಾದ ವಿಶ್ವದ ವಾತಾವರಣದಲ್ಲಿ ಶ್ರೇಯಸ್ಸಾಧನಗಳು ನಿಬಿಡವಾಗಿವೆ; ಸರ್ವರಿಗೂ ನಿಲುಕುವಂತೆಯೂ, ಹೊರಿಸಲ್ಪಟ್ಟಂತೆಯೂ ಸರ್ವದಾ ಸರ್ವ ಕಾಲದಲ್ಲಿಯೂ ಪ್ರಾಣವಾಯುವಿನಂತೆ ಬಳಸಿ ಇರುತ್ತವೆ. 'ಮನು' ತಿಳಿವಳಿಕೆಯುಳ್ಳ ಮಾನವರಿಗೆಲ್ಲಾ ಸರ್ವ ಸಾಮಾನ್ಯವಾದ ಮಾನವೀಯತೆಗೆ ಮಾರ್ಗಗಳಾಗಿರುತ್ತವೆ.

ಬೆಳೆಯುವ ಸಸ್ಯ ತರುಗಳು ತಮ್ಮ ತಮ್ಮ ಗುಣಶಕ್ತಿಕರ್ಮಗಳ ಮಿತಿಯಲ್ಲಿ ಅವಶ್ಯಕವಾದ ಪದಾರ್ಥಗಳನ್ನು ಮಾತ್ರ ವಿವಿಧ ಸಸ್ಯ ತರುಗಳಿಗೆಲ್ಲಾ ಆಶ್ರಯವಾದ ಒಂದೇ ವಿಧವಾದ ಭೂಮಿಯು ದೆಸೆಯಿಂದ ಗ್ರಹಿಸುವಂತೆ ಸ್ವಾಭಿವೃದ್ಧಿಯ ಕ್ರಮದ ಮಿತಿಯಲ್ಲಿ ಜನತೆಯು ತಮ್ಮನ್ನು ಬಳಸಿರುವ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದಾಗಿದೆ. ಹೀಗೆ ಸಂಸ್ಕೃತಿಯ ಪ್ರಭಾವಕ್ಕೆ ಗುರಿಯಾದ ದೇಹಿಯು ಉತ್ತರೋತ್ತರ ಶ್ರೇಯಸ್ಸಾಧನಗಳಾದ ಮೇಲು ಮೇಲಿನ ಹಂತಗಳ ಸಂಸ್ಕೃತಿಯನ್ನು ಹೊಂದುವುದಕ್ಕೆ ಅರ್ಹತೆಯನ್ನು ಹೊಂದಿ ಸಾಧಿಸುವ ಪರಿಸ್ಥಿತಿಯು ಸ್ವತ ಏವ ಸರ್ವರಿಗೂ ಕಲ್ಪಿತವಾಗಿರುವುದು. ಇವೆಲ್ಲವೂ ದ್ವಿಜ ಸಂಸ್ಕಾರದ ಪರಿಮಿತಿಯಲ್ಲಿ ಜೀವನಯಜ್ಞ ಮೂಲವಾದ ದ್ವಿಜಸಂಸ್ಕಾರವನ್ನು ಹೊಂದಿ, ಗುರು-ದೇಶಿಕರ ಮಾರ್ಗದಲ್ಲಿ ಶ್ರೇಯಸ್ಸನ್ನು ಹೊಂದಬೇಕಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತಪಸ್ಸಂಗ್ರಾಮ ಕವಚಂ   ನಿಯಮದ್ವಿರದಾಂಕುಶಃ ।
ಖಲೀನಮಿಂದ್ರಿಯಾಶ್ವಾನಾಂ ಗೃಹ್ಯತಾಂ ಧರ್ಮಸಾರಥಿಃ ॥

ಶರೀರದ ಮೇಲೆ ಧರಿಸುವ ಯಜ್ಞೋಪವೀತಾದಿಗಳೂ, ಉಡಿಗೆ ತೊಡಿಗೆಗಳೂ, ಅವುಗಳನ್ನು ಧರಿಸುವ ಕ್ರಮಗಳೂ, ಶಿಖಾಧಾರಣವೂ, ಶ್ಮಶ್ರು ಶಿರಃಕೇಶಗಳನ್ನು ಧರಿಸಿರುವುದೂ ಅಥವಾ ಸಂಸ್ಕೃತಿಯ ಅವಸ್ಥೆಗೆ ತಕ್ಕಂತೆ ರೂಪಿಸಿಕೊಳ್ಳುವುದೂ ಸ್ತ್ರೀಯರು ಧರಿಸುವ ಮಂಗಳದ್ರವ್ಯಗಳೂ ಎಲ್ಲವೂ ಧರ್ಮರಥವನ್ನು ನಡೆಸುವ ಆಪ್ತನಾದ ಸಾರಥಿಯಂತೆ ಇರುವುದು.

ಸೃಷ್ಟಿಸ್ಥಿತಿಲಯಗಳಿಗಾಗಿ ಸಂಸ್ಕೃತಿ ವಿಶೇಷಗಳು ಸ್ವಭಾವವಾಗಿ ಯೇ ಕಾರ್ಯರೂಪಕ್ಕೆ ಬರುತ್ತವೆ. ಬ್ರಹ್ಮ ಸೃಷ್ಟಿ, ಬ್ರಹ್ಮ ಸ್ಥಿತಿ, ಬ್ರಹ್ಮ ಲಯಗಳೆಂದರೆ ಸೃಷ್ಟಿಯೂ ಬ್ರಹ್ಮವಸ್ತುವೇ ಸ್ಥಿತಿಯೂ ಬ್ರಹ್ಮ ವಸ್ತುವೇ ಲಯವೂ ಬ್ರಹ್ಮವಸ್ತುವೇ ಆಗಿರುತ್ತದೆ. 'ಬ್ರಹ್ಮ ಹತ್ಯಾ' ಎಂಬುದನ್ನು ಅಪ್ಲುತವಾಗಿ ಭಯಂಕರವಾದುದೆಂದು ಭಾವಿಸುವುದು ಸರಿಯಲ್ಲ. ವ್ಯಕ್ತಿ, ಗೃಹ, ಸಮಾಜ, ದೇಶ, ರಾಷ್ಟ್ರಗಳೆಂಬ ಪಂಚ ವಲಯಗಳಲ್ಲಿ ರಾಜ್ಯಭಾರವು ಸೃಷ್ಟಿ ಸ್ಥಿತಿ ಲಯಗಳಿಂದ ತುಂಬಿರುವುದು. ಬ್ರಹ್ಮನಿಲ್ಲದ ಬೇರೆ ವಸ್ತುವಿಲ್ಲವೆಂಬಂತೆ ಚೇತನವಾಗಲೀ ಅಚೇತನವಾಗ ಲೀ ಬ್ರಹ್ಮವೇ ಆಗಿರುತ್ತದೆ. ಚೇತನಾಚೇತನನಾದ ಬ್ರಹ್ಮ ವಸ್ತುವೇ ಚೇತನಾಚೇತನ ಬ್ರಹ್ಮ ವಸ್ತುವನ್ನು ವೃದ್ಧಿಗೊಳಿಸುವುದು. ಈ ವೃದ್ಧಿ ಕಾರ್ಯದಲ್ಲಿ ಸೃಷ್ಟಿಸ್ಥಿತಿಲಯಗಳು ಅವಶ್ಯಗಳಾಗಿ ನಡೆದುಹೋಗುವುವು.

ವೃದ್ಧಿಗೆ ಅಂಗವಾದ ಲಯವನ್ನು ಹನನ, ಹಿಂಸೆಯೆಂಬದಾಗಿ ಭಾವಿಸಿ ದೋಷವನ್ನು ಕಲ್ಪಿಸಿಕೊಳ್ಳುವುದಾದರೆ ಆ ಕಲ್ಪನೆಯ ಪರಿಹಾರ ಕ್ಕೆ ತಕ್ಕ ಸಂಸ್ಕಾರ ಕಾರ್ಯಗಳನ್ನು ನಡೆಸಬಹುದಾಗಿದೆ. ಈ ಸಂದರ್ಭ ದಲ್ಲಿ ನೀತಿ, ರಾಜನೀತಿಗಳು ಸಂಸ್ಕೃತಿಯೇ ಆಗಿ ಸಹಕರಿಸುತ್ತವೆ. ರಾಜನೀತಿಯೂ ಸಂಸ್ಕೃತಿ, ಸಂಸ್ಕೃತಿಯೇ ರಾಜನೀತಿ, ಸಂಸ್ಕೃತಿ ರಾಜ ನೀತಿಗಳೆರಡೂ ಆಚಾರ ಎನಿಸಿಕೊಳ್ಳುತ್ತವೆ. ಕಾರಣಾಕಾರಣಗಳನ್ನು ತಿಳಿಯಲು ಶಕ್ತಿಯಿಲ್ಲದೆ ದೋಷವೆಂದು ತಿಳಿದ ಕೆಲಸವನ್ನು 'ಪ್ರಕೃತಿಃ ತ್ವಾಂ ನಿಯೋಕ್ಷ್ಯತಿ' ಎಂಬಂತೆ ಪ್ರಕೃತಿಯು ವಿಧಿಯಾಗಿ ಪ್ರೇರಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮಾಡಿಸುತ್ತವೆ. ಅದನ್ನು ನೀತಿಯೂ ಅನುಮೋದಿಸುತ್ತದೆ. ಅದೇ ನೀತಿಯು ಪರಿಹಾರ ಸಂಸ್ಕೃತಿಯನ್ನು ಸೂಚಿಸುತ್ತದೆ.

ಹಿಂದಿನ ಅಧ್ಯಾಯಗಳಲ್ಲಿ ಹೇಳಿದಂತೆ ಋಣ ಕರ್ಮ ವ್ಯಾಪಾರಗಳನ್ನು ನಡೆಸುವುವಕ್ಕೂ ಅನುಮೋದಿಸುವುದಕ್ಕೂ ಪ್ರಕೃತಿಯೇ ಸಿದ್ಧವಾಗಿರುತ್ತದೆ. ಪ್ರಕೃತಿಯೇ ಕರ್ತೃ, ಪ್ರಕೃತಿಯೇ ಕ್ರಿಯೆ, ಪ್ರಕೃತಿಯೇ ಕರ್ಮವಾಗಿರುವ ರಹಸ್ಯವನ್ನು ಗೀತಾದಿ ಶಾಸ್ತ್ರಗಳು ಬೋಧಿಸುವುದನ್ನು ಜ್ಞಾಪಕದಲ್ಲಿಟ್ಟುಕೊಂಡು ಸಂಸ್ಕೃತಿ ಅಥವಾ ಆಚಾರಗಳು ಪೂರ್ಣಫಲಪ್ರದವಾಗಿ ಶಾಂತಿದಾಯಕವಾಗುವಂತೆ ಮಧ್ಯಮ ಮಾರ್ಗದಲ್ಲಿ ರಾಜನೀತಿಯನ್ನು ಅನುಸರಿಸುವುದು ಪ್ರತಿಯೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿರುವುದು ಅವರವರ ಋಣ ಕರ್ಮಗಳ ಮಿತಿಗನುಸಾರವಾಗಿ ಅವಕಾಶವು ಕಲ್ಪನೆಯಾಗಿ ಅನುಷ್ಠಾನವು ಕೂಡಲೆ ಅಥವಾ ಕ್ರಮೇಣ ಸಾಂಗವಾಗಿ ನಡೆದು ಚಿತ್ತಶುದ್ಧಿ ಎಂಬ ಆನಂದ ಸ್ಥಿತಿಯನ್ನು ದೊರಕಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೬. ಆಚಾರ

## ಆಚಾರ ಲಕ್ಷಣ

"ಆವ್ನಾಯಸ್ಯ ಕ್ರಿಯಾರ್ಥತ್ವಾತ್ ಆನರ್ಥಕ್ಯಂ ಅತದರ್ಥಾನಾಂ"

ಕ್ರಿಯಾರ್ಥವೆನಿಸಿದ ಬ್ರಹ್ಮ, ಧರ್ಮ ಆಚಾರವಲ್ಲದ್ದು ಆವ್ನಾಯವೆನಿಸುವುದಿಲ್ಲ. ಉಳಿದುವು ನಶ್ವರವಾದುದರಿಂದ ಬ್ರಹ್ಮ, ಧರ್ಮ ಆಚಾರವೇ ಸತ್ಯವಾದ ಅರ್ಥವಾಗಿರುವುದು.

ಪೂರ್ಣವೆನಿಸಿದ ಬ್ರಹ್ಮ, ಧರ್ಮಗಳು ಯಾವುದರಿಂದ ಸಾಕ್ಷಾತ್ಕೃತವಾಗುವವೋ ಅಂತಹ ಪರಿಮಿತ ಬ್ರಹ್ಮ ಧರ್ಮವು ಜಗತ್ತನ್ನು ಬಳಸಿಕೊಂಡಿದೆ. ಏಕೈಕವಾದ ಪರಿಮಿತ ಬ್ರಹ್ಮ ಧರ್ಮ (ಆಚಾರ)ವು ಅಪರಿಮಿತವಾದ ನಾಮರೂಪಗಳಲ್ಲಿ ಅಸಂಖ್ಯಾತವಾಗಿ ವಿಶ್ವದ ಪ್ರಜೆಗಳಿಗೆ ಆಶ್ರಯವನ್ನು ಕೊಟ್ಟಿರುತ್ತದೆ.

ಸಗುಣ ಬ್ರಹ್ಮ ಎಂಬುವನ್ನು "ಆಕಾರ ನಾಮ ಗುಣಗಳನ್ನು ಹೊಂದಿದ ಚೈತನ್ಯ"ವೆಂದು ಭಾವಿಸಿ ಅವುಗಳನ್ನು ಸರ್ವತ್ರ ಸರ್ವದಾ ವಿವಿಧವಾಗಿ ಆರಾಧಿಸುತ್ತೇವೆ, ಸೇವಿಸುತ್ತೇವೆ ಅಥವಾ ಬಳಸುತ್ತೇವೆ. ಇದು ಇಂದ್ರಿಯಗಳ ಅನುಭವ ಮಟ್ಟದಿಂದ ಪ್ರಾರಂಭವಾಗಿ ಆತ್ಮಾನಂದ ಸ್ಥಿತಿಯವರೆಗೂ ನಡೆಯುತ್ತದೆ. ಹಾಗೆಯೇ ಗುಣ ನಾಮ ರೂಪಗಳ ಮಿತಿಯಲ್ಲಿ ವಿವಿಧವಾಗಿರುವ ವ್ಯಾಪಾರಗಳು ದೇಹಿಗಳಿಂದ ನಡೆಯುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮನೋವಾಕ್ಕಾಯಗಳಿಂದ ನಡೆಯುವುದೆಲ್ಲವೂ ಕರ್ಮವೇ, ಕರ್ಮಾನುಷ್ಠಾನವೇ ಆಗುವುದು. ಆದರೂ, ವ್ಯವಹಾರ ಹಿತಕ್ಕಾಗಿ ಮತ್ತು ಶ್ರೇಯಸ್ಸಿಗಾಗಿ ಉನ್ನತ ಸೋಪಾನಗಳನ್ನು ಏರಿಸುವ ಸಂಸ್ಕೃತಿ ವಿಧಾನದಿಂದ ಕೂಡಿದ — ಅಂದರೆ ಸಂಸ್ಕೃತವಾದ ಮನೋವಾಕ್ಕಾಯ ವ್ಯಾಪಾರಗಳು ಅನುಷ್ಠಾನಕ್ಕೂ ಅನುಕರಣಕ್ಕೂ ಅಭ್ಯಾಸಕ್ಕೂ ಅನುಸರಣೆಗೂ ಯೋಗ್ಯವಾದುವು ; ಚಿತ್ತಶುದ್ಧಿಯನ್ನು ಉಂಟುಮಾಡತಕ್ಕವು. ಸತ್ಫಲಾನುಭವದಿಂದ ಅಭ್ಯಸ್ತವಾಗಿರುವ ಅನುಷ್ಠಾನವು ಆಚಾರ, ಸದಾಚಾರ, ಶಿಷ್ಟಾಚಾರಗಳೆಂದು ಪ್ರಸಿದ್ಧವಾಗಿದೆ.

## ಏಕೈಕವೆನಿಸಿದ ಬ್ರಾಹ್ಮಣಾಚಾರ

ಅಭ್ಯಸ್ತವಾದ, ಅಭ್ಯಾಸಕ್ಕೆ ಯೋಗ್ಯವಾದ ಆಚಾರವು ಪರಂಪರೆಯಾಗಿಯೂ ವಿಶಾಲವಾಗಿಯೂ ಹರಡಿ ಅನೇಕರ ಮನ್ನಣೆಗೆ ಪಾತ್ರವಾಗಿ ಅವಲಂಬಿಸಲ್ಪಡುತ್ತದೆ. ಇಂತಹ ಆಚಾರ ಸ್ಥಾನದಲ್ಲಿ ಧರ್ಮಶಬ್ದವನ್ನು ತಿಳಿದೋ ತಿಳಿಯದೆಯೋ ಸರ್ವಸಾಮಾನ್ಯವಾಗಿ ಬಳಸುತ್ತಿರುವುದರಿಂದ, 'ಧರ್ಮ' ಶಬ್ದಾರ್ಥವು ಅಡಗಿ ಅವಿತುಕೊಂಡಿರುವಂತಾಗಿದೆ. ಪಾರಮಾರ್ಥಿಕವೂ ಅನಂತವೂ ಆದ ಪೂರ್ಣಧರ್ಮದ ದೃಷ್ಟಿಯಿಂದ ನೋಡಿದಾಗ ಖಂಡವಾಗಿ, ವಿವರ್ತವಾಗಿ ನಾಮ ರೂಪಗಳಿಂದ ವಿವಿಧವಾಗಿ ಕಾಣುವ ಸಾಮಯಾಚಾರಿಕ ವರ್ತನೆಗಳೆಲ್ಲವೂ ಏಕೈಕವೆನಿಸಿದ ಬ್ರಾಹ್ಮಣಾಚಾರವೆನಿಸಿ ಬ್ರಹ್ಮಾಂಡವನ್ನು ವ್ಯಾಪಿಸಿರುತ್ತದೆ.

## ಉಪಾಧಿಗಳು ಮತ್ತು ಅನುಭವ

ಪರಿಮಿತ ಧರ್ಮ ಅಥವಾ ಆಚಾರಗಳು ಅಂದರೆ ಸ್ವಾಭಾವಿಕ ಮತ್ತು ಸಂಸ್ಕೃತ – ಕ್ರಿಯಾ ವ್ಯಾಪಾರಗಳು ಸೋಪಾನಗಳಂತೆ ಬೆಳೆಯುವುವು ; ಅಲೆಗಳಂತಿರುವ ವಲಯಗಳಾಗಿ ಹಬ್ಬುವುವು. ಈ ಪ್ರತಿಯೊಂದು ವ್ಯಾಪಾರವೂ ಶಕ್ತಿತ್ರಯ, ಗುಣತ್ರಯ (ಋಣ) ಪ್ರಭಾವದ ಪರಿಣಾಮವಾಗಿ ಕಾಲ ದೇಶ ಪಾತ್ರಗಳ ಮಿತಿಯಲ್ಲಿರುವುದು. ಚರಾಚರ ವಸ್ತುಗಳೆಲ್ಲವೂ ಈ ಆಚಾರದ ಪರಿಮಿತಿಯಲ್ಲಿಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಾಗಬೇಕಾಗಿರುವುದು. ಈ ಆಚಾರ ಸೋಪಾನ ವಲಯಗಳಲ್ಲಿ ಒಂದೊಂದು ಸೋಪಾನ ಅಥವಾ ವಲಯವೂ ಅದರದರ ಮೇಲಿನ ಮತ್ತು ಕೆಳಗಿನ ಅಥವಾ ಹಿಂದಿನ ಮತ್ತು ಮುಂದಿನ, ಒಳಗಿನ ಮತ್ತು ಹೊರಗಿನ ಸೋಪಾನ ಅಥವಾ ವಲಯಗಳ ವಿಶೇಷಾಚಾರ ಕಲ್ಪನೆಗಳನ್ನು ಸಂಬಂಧಿಸಿಕೊಂಡಿರುವುದು. ಮೇಲಿನ ಸೋಪಾನದ ಅಥವಾ ಹೊರಗಿನ ವಲಯದ ಆಚಾರವು ಕೆಳಗಿನ ಸೋಪಾನದ ಅಥವಾ ಒಳಗಿನ ವಲಯದ ಅನುಭವಗಳನ್ನು ಕೂಡಿಕೊಂಡಿರುವುವು. ಕೆಳಗಿನ ಅಥವಾ ಒಳಗಿನ ಸೋಪಾನ-ವಲಯಗಳು ಮೇಲಿನ ಅಥವಾ ಹೊರಗಿನ ಸೋಪಾನವಲಯಗಳ ಕಡೆಗೆ ಆಶ್ರಯ 'ಶಿಷ್ಟಾಚಾರ ದಡವು' ದೊರೆಯುವವರೆಗೂ ಸಾಗುವುವು *

ಉತ್ಕರ್ಷ ಮತ್ತು ಅಪಕರ್ಷಗಳು ಸ್ಥಾನ ವಿವಕ್ಷೆಯಿಂದ ಮೇಲು, ಕೆಳಗು ಎಂತಲೂ ಕಾಲ ವಿವಕ್ಷೆಯಿಂದ ಹಿಂದು ಮುಂದು ಎಂಬದಾಗಿಯೂ ದೇಶ ವಿವಕ್ಷೆಯಿಂದ ಒಳಗು ಹೊರಗು ಎಂತಲೂ ಕಾಣಬರುವುವು. ಪ್ರತಿಯೊಂದು ಚರಾಚರ ವಸ್ತುವೂ ಈ ಸಂಸ್ಕೃತಿಯ ಶ್ರೇಣಿಯಲ್ಲಿ ಕ್ರಮವಾಗಿ ಮುಂದರಿಯುವುದೆಂದು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಅನುಭವಕ್ಕೆ ಬಂದಿರುತ್ತದೆ.

ಪ್ರಪಂಚದಲ್ಲಿ ಕಾಣುವ ಸಮಸ್ತ ಅನುಭಗಳು ಪ್ರಜೆಗಳ ಮನೋವಾಕ್ಕಾಯಗಳಲ್ಲಿ ವ್ಯಕ್ತವಾಗುವುವು. ಕೆಲವರು ಕೆಲವು ಅನುಭವಗಳನ್ನು ಬೇರೆ ಬೇರೆ ಉಪಾಧಿಗಳಲ್ಲಿ ಹಿಂದೆ ಅನುಭವಿಸಿರಬಹುದು; ತಮ್ಮ ಇಚ್ಛೆ, ಸಂಕಲ್ಪ, ಋಣ, ಕರ್ಮಗಳಿಗೆ ತಕ್ಕಂತೆ ತತ್ಕಾಲದಲ್ಲಾಗಲೀ ಮುಂದೆಯಾಗಲೀ ಅನುಭವಿಸಬಹುದು. ಇಂತಹ ಅನುಭವ, ಇಂತಹ ಆಚಾರ ಇಂತಹವರಿಗೆ ಮಾತ್ರ ಎಂದು ಹೇಳುವುದು ಸೃಷ್ಟಿ ಶಾಸ್ತ್ರಕ್ಕೂ ಸ್ವಾತಂತ್ರ್ಯಕ್ಕೂ ವಿರೋಧವಾಗಿದೆ ಮತ್ತು ವಿವೇಚನೆಗೆ ದೂರವಾಗಿದೆ. ಒಂದು ಹೆಚ್ಚು, ಒಂದು ಕಡಿಮೆ; ಒಂದು ಉನ್ನತ, ಒಂದು ಅವನತ; ಒಂದು ಮೇಲು, ಒಂದು ಕೆಳಗು; ಒಂದು ಸರಿ, ಒಂದು ತಪ್ಪು ಎಂದು

---

* ಶಿಷ್ಟಾಚಾರಕ್ಕೆ ವಿರೋಧವಾಗಿದ್ದು ಹಿತವನ್ನು ಎದುರಿಸುವುದೇ ಆಯಾ ಪರಿಸ್ಥಿತಿಯಲ್ಲಿ ದುರಾಚಾರವೆನಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭಾವಿಸುವುದು ವಿವೇಕ ಪ್ರಧಾನವಾದ ಮಾನವತೆಯ ಆಲೋಚನೆಯ ಮಟ್ಟಕ್ಕಿಂತ ಕೆಳಗಿನ ಪರಿಸ್ಥಿತಿಯನ್ನೂ, ಪಕ್ವವಾಗದಿರುವುದರಿಂದ ಪೂರ್ಣ ವಸ್ತುವಿನ ಕಡೆ ಅವಧಾನವಿಲ್ಲದೆ ಸಂಕುಚಿತವಾದ ದೃಷ್ಟಿಕೋಣಗಳಲ್ಲಿ ವರ್ತಿಸುವುದನ್ನೂ ಸೂಚಿಸುತ್ತದೆ.

## ಆಚಾರ ವ್ಯಂಜಕಾವರಣಗಳು

ಮಿತಿಗನುಸಾರವಾದ ಆಚಾರವು ವ್ಯಕ್ತಿಯ ಸ್ವಾತಂತ್ರ್ಯದಿಂದ ಅಭಿವ್ಯಕ್ತವಾಗುತ್ತದೆ. ವ್ಯಕ್ತಿಗಳು 1) ಆಂತರಂಗಿಕ ಸಂಕಲ್ಪವೆಂಬ ಅವ್ಯಕ್ತವಾಗಿರಬಹುದಾದ ಪಿಂಡಾಂಡದ ಒಳಗಿನ ಆವರಣ 2) ಅಖಂಡ ಬ್ರಹ್ಮಾಂಡದಲ್ಲಿನ ಮಿತಿ ಸನ್ನಿವೇಶಗಳ ಒತ್ತಡವೆಂಬ ಹೊರಗಿನ ಆವರಣ 3) ಇವೆರಡನ್ನೂ ಸಾಮರಸ್ಯದಿಂದ ನಿಯಂತ್ರಣಕ್ಕೆ ಒಳಪಡಿಸಿ ದೇಹಿಯನ್ನು ಸದಾಚಾರದಲ್ಲಿ ನೆಲೆಗೊಳಿಸುವ ವಿವೇಕ, ಜ್ಞಾನ ಮತ್ತು ವೈರಾಗ್ಯಗಳು ಎಂಬ ಈ ಆವರಣಗಳ ಪರಿಮಿತಿಯಲ್ಲಿ ಇವೆಲ್ಲವೂ ಪರಸ್ಪರ ಹೊಂದಿಕೊಂಡಂತೆ ಮಧ್ಯಮ ಮಾರ್ಗವೆಂಬ ಆಚಾರವನ್ನು ಆಶ್ರಯಿಸಿ ಉನ್ನತ ಸೋಪಾನಗಳನ್ನು ಅಡರಿ ಸಾಹಸವನ್ನು ಹೆಚ್ಚಿಸಿಕೊಳ್ಳಬಲ್ಲವರಾಗುತ್ತಾರೆ.

ಕ್ರಮಶಃ ಸೋಪಾನಗಳನ್ನು ಏರಿ ಶಕ್ತಿಯನ್ನು ಸಂಪಾದಿಸಿಕೊಳ್ಳದೆ ಮಿತಿಗೆ ಮೀರಿದ ಸೋಪಾನವನ್ನು ಆಶ್ರಯಿಸಲು ಮಾಡುವ ಪ್ರಯತ್ನವು ಫಲಕಾರಿಯಾಗದೇ ಇರಬಹುದು; ಅಲ್ಲದೆ ದುಷ್ಟ ಫಲವನ್ನು ಕೊಡಬಹುದಾಗಿದೆ. ತನ್ನ ಮತ್ತು ಇತರರ ಸುಖಶಾಂತಿ ಜೀವನಕ್ಕಾಗಿ ಪ್ರತಿ ವ್ಯಕ್ತಿಯೂ ತನ್ನ ಮತ್ತು ಇತರರ ಮಿತಿಗಳನ್ನು ಅರಿತು ಬಹಿಃ ಪ್ರಪಂಚದಲ್ಲಿ ಆಚಾರವನ್ನು ಅಳವಡಿಸಿಕೊಳ್ಳಲು ಯತ್ನಿಸುವುದೇ ಪ್ರಶಸ್ತವಾದುದು.

## ಕರ್ತವ್ಯ ಕರ್ಮ ತತ್ವ ವಿಶ್ವವ್ಯಾಪಿ

ಮೂಲ ಭೂತಗಳಾದ ಜೀವನಯಜ್ಞದಲ್ಲಿ ಕರ್ತವ್ಯ ಕರ್ಮ ತತ್ವಗಳು ಸ್ವಾಭಾವಿಕವಾಗಿ ಪ್ರಪಂಚಕ್ಕೆಲ್ಲಾ ಒಂದೇ ವಿಧವಾಗಿರುವುದರಿಂದ ಅವು ಎಂದಿಗೂ ಯಾವ ಚ್ಯುತಿಯನ್ನು ಹೊಂದಲಾರವು; ನಿರೂಪವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಿಸಲಾರವು ; ಮತ್ತು ಮಾನವ ಸಾಮಾನ್ಯಕ್ಕೆಲ್ಲಾ ಅನ್ವಯಿಸತಕ್ಕವು ಗಳಾಗಿವೆ.

## ಬ್ರಹ್ಮಾನುಸಂಧಾನ ವ್ಯಾಪಾರ (ಸುಮುಖ ಕರ್ಮ) ಗಳೆಲ್ಲವೂ ಯಜ್ಞವೇ

ಆಚಾರ ಸಾಮ್ರಾಜ್ಯದಲ್ಲಿ ಆತ್ಮನಿಂದ ಆತ್ಮನಿಗಾಗಿ ಆತ್ಮನ ವ್ಯಾಪಾರಗಳು ನಡೆಯುವುವು. ಭಗವದ್ಗೀತೆಯಲ್ಲಿ ಸ್ಪಷ್ಟವಾಗಿರುವಂತೆ ಸಮ್ಯಗ್ವ್ಯವಸಿತವಾಗಿ ಮತ್ತು ಬ್ರಹ್ಮಾನುಸಂಧಾನ ಕ್ರಮದಲ್ಲಿ ವ್ಯಕ್ತಿಯ ಹೃದಯದಲ್ಲಿ (ಪಿಂಡಾಂಡದಲ್ಲಿ), ಬ್ರಹ್ಮಾಂಡದಲ್ಲಿ, ಮನೆಯ ಒಳಗೆ, ಹೊರಗೆ, ಬೀದಿಯಲ್ಲಿ, ಸಂತೆಯಲ್ಲಿ, ವ್ಯಾಪಾರವೃತ್ತಿಯಲ್ಲಿ, ಶಾಸನ ಕಾರ್ಯಾಲಯಗಳಲ್ಲಿ, ಶಾಲೆಗಳಲ್ಲಿ ಪ್ರತಿಕ್ಷಣದಲ್ಲಿಯೂ ನಡೆಯುವ ವ್ಯಾಪಾರ (ಕರ್ಮ) ಗಳೆಲ್ಲವೂ ಯಜ್ಞವೇ ; ಭಗವತ್ಸೇವೆಯೇ ; ಸಂಸ್ಕೃತ ವಾದುದರಿಂದ ಅಭ್ಯಸ್ತವಾದ ಆಚಾರವೇ ಆಗಿರುತ್ತವೆ.

ಅಪಿ ವಾತ್ಸ್ಯಾಯನಾದೀನಿ ಶಾಸ್ತ್ರಾಣಿ ಕ್ಷುಲ್ಲಕಾನ್ಯಪಿ
ಬ್ರಹ್ಮಣ್ಯೇವ ಯಥೋಕ್ತಾನಿ ಪರ್ಯವಸ್ಯಂತಿ ತತ್ವತಃ ||

ದೇಹಿಗಳ ಸ್ವಾತಂತ್ರ್ಯಕ್ಕೆ ಮೀರಿ ನಡೆಯುವ ಉಸಿರಾಟಗಳನ್ನೂ ಸಹ ಅಜಪಾ ಮಂತ್ರ ಜಪವೆಂದು ಪರಿಗಣಿಸಿ ಸಂಸ್ಕರಿಸಿರುವುದು ಗಮನೀಯವಾದುದು.

ಹಿಂದೆ ಹೇಳಿದಂತೆ ಕರ್ಮಗಳು ಸುಮುಖ, ದುರ್ಮುಖ ವಿಮುಖ ಗಳಾಗಿರುತ್ತವೆ. ಬ್ರಹ್ಮಾನುಸಂಧಾನಗರ್ಭಿತವಲ್ಲದ ಸುಮುಖ ಕರ್ಮ ಗಳು ಮಾನವ ದೃಷ್ಟಿಯಿಂದ ಸಾಮಾನ್ಯ ವ್ಯಾಪಾರಗಳಾಗಿ ಫಲಿಸುವು ವುವು. ಆದರೆ ಕಾಲ ಕ್ರಮೇಣ ಪರಿಪಕ್ವವಾಗಿ ಉತ್ತಮ ಶ್ರೇಣಿಯನ್ನು ಆರೋಹಣ ಮಾಡಲು ಬೇಕಾಗುವ ಸಂಸ್ಕೃತಿಯನ್ನು ಆಯಾ ಮಿತಿಯಲ್ಲಿ ಸ್ವತಃ ಏವ ಹೊಂದುವುವು. ಆದರೆ ಜ್ಞಾನ, ಅಜಪಾಮಂತ್ರಜಪಾದಿಗಳು ಆತ್ಮನಿಗೆ ಹೊಂದಿಕೊಂಡಿರುವುದರಿಂದ ದೇಹಿಯು ಇದ್ದೆಡೆಯಲ್ಲಿ ಇವು ಇದ್ದೇ ಇವೆ. ಋಣ ಕರ್ಮಗಳ ನ್ಯೂನಾತಿರಿಕ್ತ ದೋಷಗಳ ತೆರೆಮರೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬ್ರಹ್ಮಾನುಸಂಧಾನವೆಂಬ ಸಾಕ್ಷಾತ್ ಅನುಷ್ಠಾನವನ್ನು ದೂರೀಕರಿಸುವುದರಿಂದ ಮಾನವ ಪ್ರಪಂಚದಲ್ಲಿ ವೈವಿಧ್ಯವು ಸ್ವಾಭಾವಿಕವಾಗಿ ಕಾಣುವುದು.

ಮತಕ್ಕೆ ಅನುರೋಧವಾಗಿಯೂ ವಿರೋಧವಾಗಿಯೂ ಆಯಾ ವ್ಯಕ್ತಿಯ ಋಣ ಸಂಕಲ್ಪ ವ್ಯವಸಾಯಗಳಿಗೆ ತಕ್ಕಂತೆ ಕ್ರಿಯೆ ಮತ್ತು ವಿಪ್ರತಿಕ್ರಿಯೆಗಳ ಫಲ ಮತ್ತು ಫಲಾನುಭವಗಳು ಉಂಟಾಗುತ್ತಲೇ ಇರುವುವು. ಸಹನೆ, ಸಾಮಾನ್ಯ ವೈರಾಗ್ಯ ಮತ್ತು ಸಮರ್ಪಣ ಬುದ್ಧಿಯಿಂದ ಅವುಗಳನ್ನು ಅನುಭವಿಸುವ ಕರ್ತವ್ಯವೂ ಆಚಾರದ ಅಂಗವಾಗಿರುತ್ತದೆ. ದೇಹಿಗಳು ಅವರವರ ವರ್ತನೆಯನ್ನು ಅವರವರ ರಾಜ್ಯದ ಮಿತಿಯಲ್ಲಿ ರೂಢಿಸಿಕೊಳ್ಳುವುದರಿಂದ ಕುಟುಂಬ, ಸಮಾಜ, ಪ್ರದೇಶ, ದೇಶಗಳ ರಾಜರ ವರ್ತನೆ (ಆಚಾರ) ಗಳೂ ಸುಖಶಾಂತಿಮಯವಾಗಿ ನಿರ್ವಾಹವಾಗುವುವು.

## ಆಚಾರವೇ ವ್ಯವಹಾರ

### ವ್ಯಕ್ತಿಗಳ ದೇವತ್ವ ಮತ್ತು ಅಸುರತ್ವ

ವ್ಯಕ್ತಿಯು (ದೇಹಿಯು) ತಾನೇ ತಾನಾಗಿ ತನ್ನ ರಾಜ್ಯವನ್ನು ಪ್ರಕೃತಿಯ ಆಶ್ರಯದಿಂದಲೂ ಸಂಸ್ಕೃತವಾದ ಆಚಾರದ ನಿಯಮಗಳಿಂದಲೂ ನಿರ್ವಹಿಸುತ್ತಿರಬಹುದಾದ ಸಂವಿಧಾನವು ಶುದ್ಧಸಾತ್ವಿಕವಾದ ಆಚಾರವೆನಿಸುವುದು. ಒಬ್ಬ ದೇಹಿಯು ಮತ್ತೊಬ್ಬ ದೇಹಿ (ಇತರ ದೇಹಿ) ಗಳೊಡನೆ ವರ್ತಿಸಬಹುದಾದ ಸನ್ನಿವೇಶದಲ್ಲಿ ವ್ಯವಹಾರವು ಪ್ರಾಪ್ತವಾಗಿ ಆಚಾರವು ಸಮರ್ಥಿಸಲ್ಪಡುವುದು. ಮತ್ತೊಬ್ಬರ ವಿಷಯದಲ್ಲಿ ನಡೆದುಕೊಳ್ಳುವ (ನಡತೆ, ನಡಾವಳಿ, ಸಂಸ್ಕೃತವಾದ ಅಭ್ಯಸ್ತ ಕರ್ಮ) ಆಚಾರವೇ ವ್ಯವಹಾರವೆನಿಸುವುದು. ಆದುದರಿಂದ ಆಚಾರ ವ್ಯವಹಾರಗಳಿಗೆ ಸಂಸ್ಕೃತ ಕರ್ಮ – ಅನುಷ್ಠಾನವೇ ಮೂಲ ಕಾರಣವಾಗಿರುತ್ತದೆ. ಆಚಾರವು ಕೇವಲ ದೇವತಾ ವಿಷಯವನ್ನೂ ವ್ಯವಹಾರವು ಕೇವಲ ಪ್ರಾಪಂಚಿಕ ವಿಷಯವನ್ನೂ ತಿಳಿಸುತ್ತದೆಂಬುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅನುಭವಕ್ಕೆ ದೂರವಾದುದು. ದೇವತಾಮಯ ಪ್ರಪಂಚದಲ್ಲಿ ಸಕಲವೂ ದೇವತಾ ಸೇವೆಯಾಗಿರುವಾಗ ವ್ಯವಹಾರವನ್ನು ದೇವತಾ ಪ್ರಪಂಚದ ದೆಸೆಯಿಂದ ಬಹಿಷ್ಕರಿಸಲು ಸಾಧ್ಯವಿಲ್ಲ. ಹಾಗೆ ಬಹಿಷ್ಕರಿಸಿದಾಗ ದೇವತ್ವಕ್ಕೆ ವಿರುದ್ಧವಾದ ಅಸುರತ್ವವು ಕಾಣಿಸಿಕೊಂಡು ಅದಕ್ಕೆ ತಕ್ಕ ಫಲವನ್ನೇ ಕೊಡುವುದಾಗುತ್ತದೆ.

"ಅಸುಷು ಪ್ರಾಣೇಷು ಇಂದ್ರಿಯೇಷ್ವೇವ ರಮಂತೆ ಇತ್ಯಸುರಾಃ ಅನಾತ್ಮವಿದಃ ವೈಷಯಿಕಾಃ ಪ್ರಾಣಿನಃ ಅಸುರಾಃ|...ಸ್ವಸ್ಮಿನ್ ಆತ್ಮನಿ ಏವೋಪರಮಂತಿ ಆತ್ಮವಿದಃ ಸುರಾಃ | ... 'ಆತ್ಮನ್ಯೇವ ರತಿಃ ಯೇಷಾಂ ಸ್ವಸ್ಮಿನ್ ಬ್ರಹ್ಮಣಿ ಚಾಚಲೇ | ತೇ ಸುರಾ ಇತಿ ವಿಖ್ಯಾತಾಃ ಸೂರಯಶ್ಚ ಸುರಾಮತಾಃ' ಇತಿ" ಶ್ರೀಶಂಕರಾಚಾರ್ಯಾಃ ಸನತ್ಸುಜಾತೀಯಭಾಷ್ಯಂ 2 5

ಗೊತ್ತಾದ ಒಂದು ಮಿತಿಗೆ ಸಂಬಂಧಪಟ್ಟಂತೆ ಲಿಖಿತವಾದ ಪುರಾಣೇತಿಹಾಸಗಳ ಪಠನದಲ್ಲಿ ಅತಿಶಯವಾಗಿ ಒಂದೇ ವಿಧವಾಗಿ ವರ್ಣಿಸಲ್ಪಟ್ಟಿರುವ ಅಸುರ, ರಾಕ್ಷಸ ವಿಷಯಗಳನ್ನು ಶ್ರವಣ ಮಾಡುವುದರಿಂದ ರಾಕ್ಷಸಗುಣಕರ್ಮಶಕ್ತಿ ವಿಷಯಗಳೇ ಮನಸ್ಸಿನಲ್ಲಿ ಪರಿಣಾಮವನ್ನುಂಟುಮಾಡಿ ವ್ಯಕ್ತಿಗಳಲ್ಲಿ ರೂಢಮೂಲವಾಗುವ ಸಂಭವವಿರುತ್ತದೆ. ಆದುದರಿಂದ ಅಂತಹ ವಿಷಯಗಳಿಗೆ ಸಂಬಂಧಪಟ್ಟ ವರ್ಣನೆಯ ಅಂಶವನ್ನು ತಳ್ಳಿ ಹಾಕಿ ಅವು ಸರ್ವಸಾಮಾನ್ಯವಾಗಿ ವ್ಯಕ್ತಿಗಳ ವರ್ತನೆಯಲ್ಲಿ ಇರಬಹುದಾದ ರಾಕ್ಷಸ ಗುಣ ಕರ್ಮ ಶಕ್ತಿಗಳೆಂದು ಭಾವಿಸಿ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವಾಗದಂತೆ ಎಚ್ಚರಿಕೆಯಿಂದ ಇದ್ದರೆ ದೇವತ್ವ ಅಥವಾ ಸುರತ್ವಗಳು ನಿರಾತಂಕವಾಗಿ ವೃದ್ಧಿಹೊಂದುವುವು. ಮತ್ತು ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಅವುಗಳ ಸಾಕ್ಷಾತ್ಕಾರದಿಂದ ಜೀವನವು ಸರಳವೂ ಸುಲಭವೂ ಆಗುವುದು.

ಪ್ರಜಾ ಬಾಹುಳ್ಯದ ಮಧ್ಯೆ ವ್ಯಕ್ತಿಗಳ ಆಚಾರವು ವ್ಯವಹಾರವನ್ನು ಪುಷ್ಟೀಕರಿಸಿ ಶಾಂತಿ ಪ್ರದವಾಗುವುದಕ್ಕೆ ಆಚಾರವನ್ನು ವ್ಯವಹಾರದಿಂದಲೂ ಸಂಸ್ಕರಿಸಿ ಪರಿಷ್ಕರಿಸಬೇಕಾಗಿರುತ್ತದೆ. ಆಚಾರ ವ್ಯವಹಾರಗಳು ಅಮೃತ ಮಂಥನಕ್ಕೆ ಗುರಿಯಾಗುವುದರಿಂದ ಪ್ರಾಪ್ತವಾದ ಅನುಭವಾಮೃತವು ಶ್ರುತಿ ಗೋಚರವಾಗಿ ವೇದರಾಶಿಗಳಲ್ಲಿ ವಿವರಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಚಾರವೂ ವ್ಯವಹಾರವೂ ಸಂಸ್ಕೃತಿ ವಿಧಾನಗಳಿಂದ ಪರಿಷ್ಕರಿಸಲ್ಪಟ್ಟವುಗಳಾಗಿ ತ್ರಿಕಾಲಾಬಾಧಿತವಾಗಿರುವುದರಿಂದ, ಸರ್ವರೂ ಸರ್ವದಾ ಆಚಾರ ವ್ಯವಹಾರ ಸಂಪನ್ನರಾಗಿ ಶಾಂತಿ ಸಾಧಕರಾಗುವಂತೆ ತಿಳಿವಳಿಕೆ ಕೊಡುವ ಸಂಸ್ಕೃತಿ ವಿಧಾನಗಳಿಂದ ತುಂಬಿದ ಗ್ರಂಥಗಳು ಹೇರಳವಾಗಿರುವುವು. ಆಚಾರವನ್ನೊಳಗೊಳ್ಳದ ವ್ಯವಹಾರವೂ ವ್ಯವಹಾರವನ್ನೊಳಗೊಳ್ಳದ ಆಚಾರವೂ ಸಂಸ್ಕೃತಿಯ ಆಧಾರವನ್ನು ಹೊಂದದ ಆಚಾರ ವ್ಯವಹಾರಗಳೂ ಸಹ ಸತ್ಫಲದಾಯಕಗಳಾಗಲಾರವು ಮತ್ತು ದುಷ್ಟ ಪರಿಣಾಮವನ್ನುಂಟುಮಾಡುತ್ತವೆ.

## ಸಂಸ್ಕೃತಿ – ಆಚಾರ – ವ್ಯವಹಾರಗಳು
## ರಾಜನೀತಿ ಕಲ್ಪ ವೃಕ್ಷದ
## ಬೇರು, ಕಾಂಡ, ಕೊಂಬೆಗಳಂತೆ

ಸಂಸ್ಕೃತಿ ಆಚಾರ ವ್ಯವಹಾರಗಳು ಪರಸ್ಪರ ಸಂಬಂಧಿಸಿಕೊಂಡೇ ಇರುವುವು. ಸರ್ವ ಸಾಮಾನ್ಯವಾಗಿ ಪ್ರಪಂಚದ ಆಗು ಹೋಗುಗಳು ವ್ಯವಹಾರದಲ್ಲಿ ಬೆಳಗುವುವು. ಒಂದೇ ಜನಾಂಗ (ದೇಶ – ರಾಷ್ಟ್ರ) ದ ವ್ಯವಹಾರ ನೀತಿಯು ಪ್ರಜೆಗಳ ಸ್ಥಿತಿಗತಿಗಳನ್ನು (ಸಂಸ್ಕೃತಿ – ಆಚಾರಗಳನ್ನು) ಅಳೆಯುವುದಕ್ಕೆ ಸುಸಾಧನವಾಗಿದೆ. ಆಚಾರವು ಅಂತರಂಗಿಕ ಬ್ರಹ್ಮಶಕ್ತಿಗೂ ವ್ಯವಹಾರವು ಬಹಿರಂಗ ಕ್ಷತ್ರಶಕ್ತಿಗೂ ಹೊಂದಿಕೊಂಡಿರುವಂತೆ ಸರ್ವ ಸಾಮಾನ್ಯವಾಗಿ ಭಾವಿಸಬೇಕು. ಎರಡನೇ ವಸ್ತುವಿನ ದೃಷ್ಟಿಯಿಂದ ವಸ್ತು ವಿಮರ್ಶೆ ನಡೆಯಬೇಕಾಗಿರುವುದರಿಂದ ವ್ಯವಹಾರವು (ವಸ್ತುಗಳ ಪರಸ್ಪರ ಭಾವನೆಯು) ವ್ಯಕ್ತಿಯ ವ್ಯಾಪಾರದಲ್ಲಿಯೇ ಆರಂಭವಾಗುವುದು. ಇದನ್ನೇ ವಿದೇಶೀಯ ಪದದಿಂದ (ಸಿವಿಲಿಸೇಷನ್) ಕೆಲವರು ಸಂಕುಚಿತವಾಗಿ ವ್ಯವಹರಿಸುವರು. ವ್ಯವಹಾರವು ಸದಾಚಾರ ಗರ್ಭಿತವಾಗಿ ಪುರುಷಾರ್ಥ ಸಾಧಕವಾಗಿರುತ್ತದೆ. ಮತ್ತು ಆರ್ಥಿಕ ಪರಿಸ್ಥಿತಿಯು ಅನೇಕ ಹಂತಗಳಲ್ಲಿ ಸರ್ವರ ವರ್ತನೆಗಳನ್ನೂ ನಿಯಂತ್ರಿಸುವುದರಿಂದ ಸರ್ವ ವ್ಯವಹಾರವನ್ನೂ ಉದ್ದೀಪನಗೊಳಿಸಿ ಶಾಂತಿ ಸಮಾಧಾನಗಳನ್ನು ಸ್ಥಾಪಿಸಿ ಹರಡುವ ಹೊಣೆಗಾರಿಕೆಯು ಶಾಸ್ತ್ರಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


'ರಾಜನೀತಿ' ಎಂದು ಹೆಸರು. ಪುರುಷಾರ್ಥ ಪ್ರಧಾನವಾದ ರಾಜನೀತಿ ಶಾಸ್ತ್ರವನ್ನು ಅರ್ಥನೀತಿ ಶಾಸ್ತ್ರವೆಂತಲೂ ಹೇಳುತ್ತಾರೆ.

ಉಪಲಕ್ಷಣ ಲಕ್ಷಿತವಾಗಿ ಇಂದ್ರಾದಿ ದೇವತೆಗಳ ರಾಜ್ಯಭಾರವು ಚಿತ್ರಿತವಾಗಿದೆ. ಈ ವಿಚಾರವು ಜೀವನ (ದೇಹಿಯ) ಸಮಸ್ತ ಅನುಭವಗಳನ್ನು ಪ್ರತಿಪಾದಿಸುವ ವೇದಗಳಲ್ಲಿ ಪ್ರತಿಪಂಕ್ತಿಯಲ್ಲಿಯೂ ಸ್ಪಷ್ಟವಾಗುವಂತಿದೆ. ವ್ಯಕ್ತಿಯ, ಕುಟುಂಬದ, ಸಮಾಜದ, ಪ್ರದೇಶದ ಮತ್ತು ದೇಶದ ವರ್ತನೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಅದ್ವಿತೀಯವಾದ ಆಚಾರ್ಯನಂತೆ ಮತ್ತು ಪ್ರಭುವಿನಂತೆ (ರಾಜನಂತೆ) ಇರುವುದು ರಾಜನೀತಿಶಾಸ್ತ್ರ.

ತನ್ನ ಮತ್ತು ಇತರರ ಮಿತಿಗಳನ್ನರಿತು ಬಹಿಃ ಪ್ರಪಂಚದಲ್ಲಿ ಆಚಾರವನ್ನು (ವ್ಯವಹಾರವನ್ನು) ಅಳವಡಿಸಿಕೊಂಡು ಜೀವನಯಜ್ಞವನ್ನು ರಂಜನೆಗೊಳಿಸುವ ರಾಜನೀತಿಯಿಂದ ಪ್ರಪಂಚದ ವ್ಯವಹಾರ ಕಾರ್ಯಗಳು ಸುಗಮವಾಗಿ ಫಲಿಸುತ್ತವೆ. ದೇಹಿಯ ಅಂತರಂಗಿಕವಾದ ಆಚಾರವನ್ನು ಇತರರು ತಿಳಿಯುವುದು ಸುಲಭವಲ್ಲ. ನೀತ್ಯನುಶಾಸನ ಶಿಕ್ಷಿತನಲ್ಲದ ಮತ್ತು ಪ್ರಭುಗುಣಶಕ್ತಿ ಇಲ್ಲದ ಅಥವಾ ಪ್ರಭುಗುಣಶಕ್ತಿಯನ್ನೇ ತಿಳಿಯದ ದೇಹಿಗೆ ತನ್ನ ಆಚಾರವೇ ತನಗೆ ತಿಳಿಯುವಂತೆ ಇರುವುದರಿಂದ ವರ್ತನೆಯು ಬದಲಾವಣೆಗೆ ಒಳಪಟ್ಟು ಅನಿರ್ದಿಷ್ಟ ವ್ಯಾಪಾರವಂತೆ ಆಗುತ್ತದೆ. ಅಹಿತವಾದ ಸನ್ನಿವೇಶದ ಪ್ರಾಬಲ್ಯವೇ ಮೊದಲಾದ ಪ್ರಭಾವಕ್ಕೆ ಒಳಗಾದ ಅಪರೋಕ್ಷ ಜ್ಞಾನಿಗಳೂ ಸಹ ತಾತ್ಕಾಲಿಕವಾಗಿ ಮಿಡುಕುವವರಾಗುತ್ತಾರೆ ಇಂತಹ ಸಂದರ್ಭಗಳಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುವುದಕ್ಕಾಗಿ ಪರಿಮಿತಿ ಸೂಚಕಗಳಾದ ನಿಯಮಗಳನ್ನು ಮಧ್ಯಮ ಮಾರ್ಗಶೀಲವಾದ ರಾಜನೀತಿಯ ಹೆಸರಿನಲ್ಲಿ ಆಚಾರದ ಮಿತಿಯಲ್ಲಿ ವ್ಯವಸ್ಥೆಗೊಳಿಸಬಹುದಾಗಿದೆ. ಆಚಾರಕ್ಕನುಗುಣವಾಗಿ ವ್ಯವಹಾರವು ರೂಪುಗೊಳ್ಳಬೇಕಾಗಿದೆ. ವ್ಯವಹಾರವು ವ್ಯಕ್ತಿಯ ಆಚಾರಕ್ಕನುಗುಣವಾಗಿಯೂ ಮತ್ತು ವ್ಯಕ್ತ್ಯೇತರ ದೇಹಿಗಳ ಆಚಾರಕ್ಕನುಗುಣವಾಗಿಯೂ ವ್ಯಕ್ತವಾಗುವುದು. ಮತ್ತು ಪರಸ್ಪರ ಸಮಾನ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವ್ಯವಹಾರವು ಸರ್ವರಿಗೂ ಆವಶ್ಯಕವಾಗಿದ್ದು ಏಕಪ್ರಕಾರವಾಗಿರುವುದರಿಂದ ಮಾನವ ಸಾಮಾನ್ಯವಾಗಿರುತ್ತದೆ. ಮತ್ತು ವಿಶೇಷವೆನಿಸಿದ ಆಚಾರದ ತತ್ವವು ವ್ಯವಹಾರದಲ್ಲಿ ಗೂಢವಾಗಿರಬೇಕಾಗುತ್ತದೆ. ಆಚಾರವನ್ನು ಎದುರಿಸಿದ ವ್ಯವಹಾರ ಕ್ರಮಗಳು ಮುರಿದು ಬೀಳುವುವು. ವ್ಯವಹಾರ ಕವಚ (ಕ್ಷಾತ್ರ ರಕ್ಷೆ) ದಿಂದ ರಕ್ಷಿಸಲ್ಪಡದ ಆಚಾರವು (ಬ್ರಹ್ಮವು) ಏಳಿಗೆಯನ್ನು ಹೊಂದಲಾರದು. ಆಚಾರ ವ್ಯವಹಾರಗಳ ಸಮನ್ವಯವು ರಾಜನೀತಿಯನ್ನು ಆಶ್ರಯಿಸಿರುವುದು.

## ವ್ಯವಹಾರಾತೀತ ವಿಷಯ

ವ್ಯವಹಾರಕ್ಕೆ ಮೂಲವಾದ ಆಚಾರವು ಸಂಸ್ಕೃತಿ ಮಾತೃಕವಾದುದು. ವ್ಯವಹಾರದ ವ್ಯಾಪಾರಗಳು ತಾತ್ಕಾಲಿಕವಾಗಿ ಕ್ಷಣಿಕವಾಗಿ ಬದಲಾವಣೆಗಳಿಗೆ ಗುರಿಯಾದರೂ ಮೂಲಭೂತವಾದ ಆಚಾರವೆಂಬ ಸೂತ್ರದಿಂದ ಪೋಣಿಸಲ್ಪಟ್ಟದ್ದಾಗಿ ಸಂಸ್ಕೃತವಾಗಿಯೇ ಇರಬೇಕು. ಅಸಂಸ್ಕೃತವಾದ, ಕುಸಂಸ್ಕೃತವಾದ ಮತ್ತು ವಿಸಂಸ್ಕೃತವಾದ ವ್ಯಾಪಾರಗಳು ಘರ್ಷಣೆಗೆ ಕಾರಣವಾಗಿ ಶಾಂತಿಯನ್ನು ಕಲಕುತ್ತವೆ. ಸಕಲಪ್ರಾಣಿ ಜೀವರಾಶಿಗೆ ಮೇಲ್ಪಟ್ಟದೆಂದು ಹೇಳಲಾದ ಮಾನವ ವರ್ಗವು ವಿವೇಕದಿಂದ ಮಿತಿಯಲ್ಲಿ ಪ್ರಕೃತಿ ಲೀಲೆಯ ಋಣವನ್ನು ಶೋಧಿಸಲು ತಕ್ಕಷ್ಟು ಶೂದ್ರವನ್ನು ಅವಲಂಬಿಸಿ ಸ್ವಾತಂತ್ರ್ಯವನ್ನು ಪ್ರಯೋಗಿಸದೆ ನೇರವಾಗಿ ಸ್ವಸ್ವರೂಪ ಜ್ಞಾನವನ್ನು ಹೊಂದುವ ಆಚಾರವು ಕೇವಲವೂ ಶುದ್ಧವೂ ಆದ ಸಾತ್ವಿಕಾಚಾರವೆನಿಸುವುದು. ಅವಧೂತ ಮಹಾಮುನಿಗಳಾದ ಜೀವನ್ಮುಕ್ತರ ಸ್ಥಿತಿಯನ್ನು ನೋಡಿದರೆ ಸಾತ್ವಿಕಾಚಾರದ ವಿವರಗಳು ಪ್ರತ್ಯಕ್ಷವಾಗಿರುವುವು.

ಜೀವನ್ಮುಕ್ತರಾದ ಸದಾಶಿವ ಬ್ರಹ್ಮೇಂದ್ರರು, "ಕಿಂ ವಚನೀಯಂ ಕಿಮವಚನೀಯಂ ?; ಕಿಂ ಕರ್ತವ್ಯಂ ?, ಕಿಮಕರ್ತವ್ಯಂ ?; ಕಿಂ ಭೋಕ್ತವ್ಯಂ, ಕಿಮಭೋಕ್ತವ್ಯಂ ? — ಸರ್ವಂ ಬ್ರಹ್ಮಮಯಂ" ಎಂಬದಾಗಿ ಉಪದೇಶಿಸಿರುತ್ತಾರೆ. ಇದು ಜೀವನಯಜ್ಞದ ಪರಮಸಾರ; ಅವಧೂತ ದೃಷ್ಟಿ; ತತ್ವಾರ್ಥ ಪರಮಾರ್ಥ ಬೋಧಕವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಿವೇಕ ಹೀನರೂ ತುಚ್ಛರೂ ಆದವರು ಈ ಸೂಕ್ತಿಯನ್ನು ಅಕ್ಷರಶಃ ಪಾಲಿಸುವ ಸಂಕಲ್ಪದಿಂದ ಇಂದ್ರಿಯಗಳನ್ನು ಸಡಲಿಸಿ ವರ್ತಿಸಿದರೆ. ಅಂತಹವರು ನಿಯತ ವಿರೋಧಿಗಳಾಗಿ ಮನಸ್ಸು ಸ್ವಾಧೀನವಲ್ಲಿಲ್ಲದಿರುವವರಂತೆ, ಕೆಲಸ ಮಾಡುವುದರ ಫಲವನ್ನು ಅನುಭವಿಸದೇ ಇರಲಾರರು. ಪ್ರಕೃತಿಯನ್ನು ಎದುರಿಸಿ ತನಗೆ ತಾನೇ ದ್ರೋಹವನ್ನು ಮಾಡಿಕೊಳ್ಳುವವರಾಗುವರು. 'ಅಮೃತವೂ ವಿಷವೂ ಒಂದೇ' ಎಂದು ಭಾವಿಸಿ ವಿಷವನ್ನು ಸವಿದು ಸುಸಂಸ್ಕೃತರು ಅಮರರಾಗುತ್ತಾರೆ; ಸಾಮಾನ್ಯರು ಅದರಂತೆ ನಡೆದರೆ ದೇಹವನ್ನು ದೇಹದ ದೆಸೆಯಿಂದ ಬಿಡುಗಡೆ ಮಾಡುವವರಾಗುತ್ತಾರೆ.

ಮೇಧ್ಯಾಮೇಧ್ಯ ವಿವೇಚನೆಯಿಲ್ಲದೆ ಸರ್ವ ಸಮದರ್ಶಿಗಳಾದ ಸದಾಶಿವ ಬ್ರಹ್ಮೇಂದ್ರರಂತೆ. ವ್ಯವಹಾರಾತೀತವಾಗಿರುವವರು ವ್ಯವಹಾರಕ್ಕೆ ಸಿಕ್ಕಿಕೊಂಡಂತೆ ಸಂಕಲ್ಪಾದಿಗಳಿಂದ ಕೆಲಸವನ್ನು ಮಾಡುವ ಹಂತವನ್ನು ದಾಟಿರುತ್ತಾರೆ. ಅಂತಹವರಿಗೆ ಅಭೋಜ್ಯ ವಿಷಾದಿಗಳೇ ಇಲ್ಲವಾಗಿ ಸರ್ವವೂ ಅಮೃತಗಳಾಗಿ ಮೇಧ್ಯಗಳಾಗಿಯೇ ಇರುತ್ತವೆ. ಪ್ರಹ್ಲಾದನ ಸಂಸ್ಕೃತಿಯ ಪ್ರಭಾವದಿಂದ ವಿಷವು ಪ್ರಹ್ಲಾದನ ಬಾಯಿಗೆ ಬೀಳುವುದಕ್ಕೆ ಪೂರ್ವವೇ ಸುಸಂಸ್ಕೃತವಾಗಿ ಅಮೃತವಾಯಿತು: ಅಮೃತ ಪಾನದ ಫಲವನ್ನೇ ಕೊಟ್ಟಿತು. ಇಂತಹ ಮಹಾವಿಭೂತಿಗಳು ಸಂಸ್ಕೃತವಾದ ಆಚಾರಗಳನ್ನು ತುಚ್ಛವಾಗಿ ಎಂದಿಗೂ ಭಾವಿಸುವುದಿಲ್ಲ; ಭೇದದ ದೃಷ್ಟಿಯಿಂದ ನೋಡುವುದಿಲ್ಲ. ವ್ಯಾವಹಾರಿಕವಾಗಿ ಕಾಣುವ ಸಣ್ಣ ಹಂತಗಳಲ್ಲಿ ನಡೆಯುವ ಆಚಾರ ಭೇದಗಳಲ್ಲಿಯೂ ಅಖಂಡ ಬ್ರಹ್ಮನ ಪೂರ್ಣತೆಯನ್ನು. ಸ್ವಸ್ವರೂಪ ಜ್ಞಾನಾನಂದವನ್ನು ಅನುಭವಿಸುತ್ತಾರೆ.

'ಇಂದ್ರಿಯ ಪ್ರೀತಿಗಾಗಿ ಒಂದು ಕಡೆ ಆಚರಿಸುವುದು. ವಿರಸವಾದಾಗ ತಪ್ಪಿಸಿಕೊಳ್ಳುವುದು.' ಎಂಬ ವಿವಿಧ ಭಾವನೆಗಳನ್ನುಳ್ಳವರು ಭೇದದ ಹಂತಗಳಲ್ಲಿಯೇ ವರ್ತಿಸುತ್ತಾ ಪರಿಪಕ್ವ ಸ್ಥಿತಿಯನ್ನು ಇನ್ನೂ ನಿರೀಕ್ಷಿಸುವವರಾಗುತ್ತಾರೆ. ದೇಹ [illegible] ಭೇದವಿದ್ದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



'ಆತ್ಮಭೇದ' ವಿಲ್ಲವಾದುದರಿಂದ ಗುಣ ದೋಷಗಳನ್ನು ಆತ್ಮನಿಗೆ ಆರೋಪಿಸಕೂಡದೆಂದು ಅನುಭವವು ಸಾರುವುದು.

## ಆಶಾ ನಿರಾಶಾ ವಾದವಲ್ಲ ; ನಿತ್ಯಸುಖಾನುಸಂಧಾನ

ಆಶಾವಾದ ನಿರಾಶಾವಾದಗಳೆಂಬ ವಾದಸರಣಿಯನ್ನು ವ್ಯವಹರಿಸುವ ಪಾಶ್ಚಾತ್ಯರಿಂದ ಬ್ರಾಹ್ಮಣ ದೇಶ ಪ್ರಜೆಗಳಾದ ಬ್ರಾಹ್ಮಣ (ಪ್ರಜೆಗಳ) ಮೇಲೆ ನಿರಾಶಾವಾದವು ಹೊರಿಸಲ್ಪಟ್ಟಿದೆ. ಬ್ರಾಹ್ಮಣಧರ್ಮದಲ್ಲಿ ನಿರಾಶಾವಾದವೂ ಇಲ್ಲ; ಆಶಾವಾದ ಮೊದಲೇ ಇಲ್ಲ ನಿತ್ಯ ಸುಖ ಶಾಂತಿಗೆ ಒಯ್ಯುವ ಅನುಸಂಧಾನವನ್ನು ಗುರಿಯಾಗಿಟ್ಟುಕೊಂಡು ಅದಕ್ಕೆ ತಕ್ಕ ನಿತ್ಯನುಶಾಸನ ಪದ್ಧತಿಗಳನ್ನು ರೂಢಿಸಿಕೊಳ್ಳುವುದು ನಿರಾಶೆಯಿಂದಲ್ಲ; ಆಶೆಯಿಂದಲೂ ಅಲ್ಲ. ಸ್ವಸ್ವರೂಪಾನುಸ್ಥಾನ ಜ್ಞಾನವೇ ಲಕ್ಷಣವಾಗಿವುಳ್ಳ ಆತ್ಮನು ಯಾವಾಗಲೂ ಸ್ವಾಭಾವಿಕವಾಗಿ ನಿತ್ಯಾನಂದನಾಗಿರುತ್ತಾನೆ. ನಿತ್ಯಾನಂದಕ್ಕೆ ಬಾಧಕವಾಗುವ ಆವರಣಗಳು ಸ್ವಕಪೋಲ ಕಲ್ಪಿತವಾಗಿ ಬಂದಿರುವುದರಿಂದ ಆ 'ತೆರೆ'ಯನ್ನು ತೆಗೆಯುವುದೇ ಬ್ರಾಹ್ಮಣ ಜೀವನ ಯಜ್ಞದ ಧ್ಯೇಯ.

## ಕ್ಷತ್ರದಿಂದ – ಪ್ರಭುತ್ವದಿಂದ – ಆಚಾರ ವಿಧಾನ

ಸರ್ವ ಪ್ರಕಾರದಲ್ಲಿಯೂ ದೇಹಿಯು ಬ್ರಹ್ಮವನ್ನು ಕ್ಷತ್ರದಿಂದ ಸಂರಕ್ಷಿಸಿ ವೃದ್ಧಿಗೊಳಿಸಬೇಕಾದುದು ಸ್ವಭಾವವಾಗಿದೆ. ಇಂತಹ ಕ್ಷತ್ರವೆಂಬ ಶ್ರೋತ್ರಿಯತ್ವದಿಂದಲೂ ಕ್ಷತ್ರಿಯತ್ವದಿಂದಲೂ ವೈಶ್ಯತ್ವದಿಂದಲೂ ಶೂದ್ರತ್ವದಿಂದಲೂ ಮತ್ತು ನಿಷಾದತ್ವದಿಂದಲೂ ಬ್ರಹ್ಮವು ಸಂರಕ್ಷಿತವಾಗುವುದು. ಶ್ರೋತ್ರಿಯತ್ವವೇ ಮೊದಲಾದುವುಗಳು ಎಲ್ಲಾ ದೇಹಿಗಳಿಗೂ ಸಮಾನವಾದುವು. ಕ್ಷತ್ರಿಯತ್ವವು ಪ್ರಭುತ್ವ, ಪ್ರಭುಶಕ್ತಿ ಕರ್ಮಗಳನ್ನು ಹೇಳುತ್ತದೆ. "ಆಸ್ಮಿನ್ ರಾಷ್ಟ್ರೇ ಇಷವ್ಯಃ ಶೂರೋ ಮಹಾರಥೋ ಜಾಯತಾಂ" ಎಂಬಂತೆ ಪ್ರತಿ ವ್ಯಕ್ತಿಯೂ ಸ್ವತಃ ಶಾಸಿತನೂ, ಶಾಸಕನೂ ಆಗಿರುತ್ತಾನೆ. ವೇದಗಳಲ್ಲಿ ವರ್ಣಿತವಾಗಿರುವ ಅಂತಹ ದೇವತಾ ರಾಜ್ಯಭಾರದಲ್ಲಿಯೂ ಈ ಬಗೆಯ ಸುವಿಧಾನವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಪಷ್ಟವಾಗಿ ಉಕ್ತವಾಗಿವೆ. ದೇವತಾ ರಾಜ್ಯ– (ಸೂಕ್ಷ್ಮವೂ ಅತೀಂದ್ರಿಯವೂ ಆದ ತನ್ಮಾತ್ರ ರಾಜ್ಯ) –ಭಾರ ಸುವಿಧಾನ ಕ್ರಮದಲ್ಲಿಯೇ ಸ್ಥೂಲವಾದ ವೈಯಕ್ತಿಕಾದಿ ರಾಜ್ಯಭಾರಗಳು ನಿರ್ವಾಹವಾಗುತ್ತವೆ. ಪ್ರಭುಶಕ್ತಿಯುಳ್ಳ ಪ್ರತಿ ದೇಹಿಯೂ ತನ್ನ ವ್ಯಾಪಾರಗಳನ್ನು ಸಂಸ್ಕರಿಸಿಕೊಂಡು, ಅಭ್ಯಾಸ ಮಾಡಿಕೊಂಡು ಆಚಾರದ ಮಿತಿಗೆ ತರಬೇಕು. ಕುಟುಂಬಕ್ಕೆ ಸೇರಿದ ತಾಯಿ ತಂದೆ, ಸಹೋದರ ಸಹೋದರಿ; ಮಿತ್ರ, ಪರಿವಾರ, ಕಳತ್ರ, ಭರ್ತೃ ಇತ್ಯಾದಿ ಅವಸ್ಥೆಗಳಲ್ಲಿ ಪ್ರತಿಯೊಬ್ಬರ ಆಚಾರವೂ ಸ್ವತಂತ್ರವಾಗಿದ್ದು ತಾಯಿ ತಂದೆ ಮೊದಲಾದವರೊಡನೆ ವರ್ತಿಸುವಾಗ ಸುಸಂಸ್ಕೃತವಾದ ವ್ಯವಹಾರ ತತ್ವಗಳನ್ನೂ ಅಳವಡಿಸಿಕೊಳ್ಳಬಹುದಾಗಿದೆ. ಹಾಗೆಯೇ ಸಮಾಜ, ಪ್ರದೇಶ, ದೇಶಗಳ ಮಿತಿಯಲ್ಲಿರುವ ಪ್ರತಿ ದೇಹಿಯೂ ವ್ಯವಹಾರಕ್ಕೆ ತಕ್ಕಂತೆ ಆಚಾರವನ್ನೂ ಆಚಾರಕ್ಕೆ ತಕ್ಕಂತೆ ವ್ಯವಹಾರವನ್ನೂ ಸಮನ್ವಯ ಮಾಡಿಕೊಂಡು ಜೀವನಯಜ್ಞವನ್ನು ನಿರ್ವಹಿಸಬೇಕಾಗಿದೆ. ಇದಕ್ಕೆಲ್ಲಾ ಮೂಲಾಧಾರವಾದ ಶ್ರೋತ್ರಿಯತ್ವಾದಿ ಸಂಸ್ಕೃತವಾದ ಅನುಷ್ಠಾನಗಳನ್ನೂ ಪಾಲಿಸುತ್ತಿರಬೇಕು.

ವ್ಯಕ್ತಿರಾಜ್ಯ, ಕುಟುಂಬರಾಜ್ಯ, ಸಮಾಜರಾಜ್ಯ, ಪ್ರದೇಶ, ದೇಶರಾಜ್ಯಗಳ ರಾಜರುಗಳು ರಾಜಧರ್ಮವೆಂಬ (ನೀತಿಯ) ಕರಣದಿಂದ ವೈಶ್ಯಾದಿ ಪಂಚಪ್ರಾಣಗಳನ್ನು ಆಯಾಮ (ಅನುಶಾಸನ) ಮಾಡುತ್ತಾರೆ ರಾಜಧರ್ಮವನ್ನು ಪ್ರಜೆಗಳು ಕಣ್ಣಿನಂತೆ ಭಾವಿಸಬೇಕಾಗಿದೆ. ರಾಜಧರ್ಮವೆಂಬ ಕಣ್ಣಿಲ್ಲವಿದ್ದರೆ ವ್ಯವಹಾರವು ಸಾಗುವುದಿಲ್ಲ. ಕಾಡಿನಲ್ಲಿ ಮೃಗಗಳು ಮೂಗು ರಾಜ್ಯಭಾರ ನಡಸುತ್ತಾ ಸಿಂಹಕ್ಕೆ ಮೃಗೇಂದ್ರ ಪದವಿಯನ್ನು ಕೊಟ್ಟಿರುವಂತೆ ಅಥವಾ ಪ್ರಭುಶಕ್ತಿ ಪ್ರದರ್ಶನದಿಂದ ಸಿಂಹವೇ ಅದನ್ನು ಪಡೆದಿರುವಂತೆ, ಪ್ರಜೆಗಳು ಕೈಯಲ್ಲಾಗದ ಅಶಕ್ತರಂತೆಯಿದ್ದು ತಮ್ಮ ತಮ್ಮ ಪ್ರಭುಶಕ್ತಿಯನ್ನು ಮರೆತು ಬೊಂಬೆಗಳಂತೆ ಕೇವಲ ಕರಚರಣಾದಿ ಚೇಷ್ಟೆಗಳಲ್ಲಿ ಮತ್ತು ಶುಷ್ಕವಾದ ವಾಗಾಡಂಬರದಲ್ಲಿ ನಿರತರಾಗಬೇಕಾಗುವುದು. ರಾಜಧರ್ಮ, ರಾಜನೀತಿ, ರಾಜಮಾರ್ಗವೆಂಬ ನೇತ್ರವು ವಾ ಶಿರಸ್ಸು (ಜ್ಞಾನ) ಇಲ್ಲದವರು ನೈಸ್ತ್ರ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕ್ಷತ್ರಿಯ, ಶ್ರೋತ್ರಿಯ, ಶೂದ್ರ, ನಿಷಾದಗಳನ್ನು — ಇವರು ಆನೆಯ ಪ್ರತ್ಯೇಕವಾದ ಅಂಗಗಳನ್ನೇ ಆನೆಯ ಸ್ವರೂಪವೆಂದು ತಿಳಿದಂತೆ (ತಿಳಿಯುವಂತೆ) ಸಂಕುಚಿತವಾಗಿ ವ್ಯವಹರಿಸುವ ಪರಿಸ್ಥಿತಿಯುಂಟಾಗುವುದು. ವೈಶ್ಯಾದಿಗಳ ವಿಭಜನ ಸಂಯೋಜನ ವಿಧಾನವು ರೂಢಿಸಲ್ಪಟ್ಟಿರುವುದು ರಾಜನೀತಿಯಿಂದ. ಆದುದರಿಂದ ರಾಜನೀತಿಯು ಯೋಗವೆನಿಸುವುದು. ಇದೇ ಕರ್ಮ ಯೋಗ; ಕರ್ಮ ಸಂನ್ಯಾಸವೆನಿಸಿ ವಿಷಾದ ಭಕ್ತಿ ಜ್ಞಾನ ಮೊದಲಾಗಿ ಗೀತೆಯಲ್ಲಿ ವರ್ಣಿಸಿರುವ ಹದಿನೆಂಟು ಯೋಗಗಳಿಗೆ ಜನ್ಮಭೂಮಿಯಾಗಿರುವುದು. ರಾಜನೀತಿ ಯೋಗ ಜ್ಞಾನವು ತಾತ್ಕಾಲಿಕವಾಗಿ ಮರೆಯಾಗಿದ್ದ ಯೋಧನಿಗೆ ಯುದ್ಧಕಾಲದಲ್ಲಿ ಈ ಯೋಗ ರಹಸ್ಯವು ಜ್ಞಾಪಿಸಲ್ಪಟ್ಟಿತು. ಜೀವನವೆಂಬ ಯುದ್ಧವನ್ನು ಅನುಭವಿಸುವವರು ಕ್ಷತ್ರನೆಂಬ ರಾಜಧರ್ಮವನ್ನು ಧರಿಸಿ ಸಾಮ್ರಾಜ್ಯ ಸಿದ್ಧಿಗೆ ಪಾತ್ರರಾಗುತ್ತಾರೆ.

ರಾಜನೀತಿ, ರಾಜಧರ್ಮ, ಅರ್ಥಶಾಸ್ತ್ರಗಳೆಲ್ಲವೂ ಒಂದೇ ವಿಷಯವನ್ನು ಅಂದರೆ ಶ್ರೋತ್ರಿಯಾದಿ ಪಂಚ ವ್ಯಾಪಾರಾತ್ಮಕವಾದ ಕ್ಷತ್ರವನ್ನು ವಿವರಿಸುವುವು. ಪಾಲಿಟಿಕ್ಸ್ ಎಂಬುದು ಅನುಸಂಧಾನರಹಿತವಾಗಿ ಪಾಲಿಟಿಕ್ಸ್ ಆಗಿಯೇ ಇರುವುದು. ಅದನ್ನು ರಾಜನೀತಿ ಎಂದು ಹೇಳಲಾಗುವುದಿಲ್ಲ. ಪಾಲಿಟಿಕ್ಸ್ ಪ್ರಭಾವಕ್ಕೆ ಸಿಕ್ಕಿಬಿದ್ದು ಇದೇ ರಾಜನೀತಿ ಎಂದು ಸಾಮಾನ್ಯರು ತಿಳಿಯಬಹುದು. ಸಾಮ್ರಾಜ್ಯ ಸ್ವಯಂ ಜ್ಯೋತಿಯ ಪ್ರಕಾಶದಿಂದ ರಾಜನೀತಿಯು ಬೆಳಕಿಗೆ ಬಂದು ಪ್ರಪಂಚವನ್ನು ಬೆಳಗಬೇಕಾಗಿದೆ. ರಾಜ ಶಬ್ದಾರ್ಥ ವ್ಯಾಪ್ತಿಯು ಸನ್ನಿವೇಶ ಪ್ರಾಬಲ್ಯದಿಂದ ಸಂಕುಚಿತವಾಗಿ, ಕುಂಠಿತವಾಗಿ ದೇಶದ ರಾಜನೀತಿಯನ್ನು ನಿಯಂತ್ರಣಗೊಳಿಸಲು ಆರಿಸಿದ ವ್ಯಕ್ತಿಗೆ ಅಥವಾ ಸ್ಥಾನಕ್ಕೆ ಸಂಬಂಧಪಟ್ಟಂತೆ ರೂಢಿಯಲ್ಲಿ ಬಂದಿರುವುದು. "ಸಣ್ಣ ಪುಟ್ಟ ಪ್ರದೇಶಗಳು ಒಂದು ದೊಡ್ಡ ಕುಟುಂಬ"ವೆಂಬ ಭಾವನೆಯಿಂದ ಆಯಾ ಪ್ರದೇಶಗಳ ರಾಜನೀತಿ ನಿರ್ವಾಹ ಪೀಠಕ್ಕೆ ಆರಿಸಲ್ಪಟ್ಟವರು ನಿಸ್ಪೃಹತೆ ನಿರ್ವಂಚನೆಗಳಿಂದ ಪ್ರಜಾಸೇವೆ ಮಾಡುತ್ತಿದ್ದ ಕಾಲದಲ್ಲಿ "ಪದವಿಯನ್ನು ಧರಿಸಿರುವವರೇ ರಾಜರು" ಎಂದು ಭಾವಿಸಿ ಪ್ರಜೆಗಳು ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಮ್ಮ ಹೊಣೆಗಾರಿಕೆಯನ್ನು ಸಡಲಿಸಿ ಜಡತ್ವವನ್ನು ಅವಲಂಬಿಸಿದರು. ಕಾರಣಾಂತರಗಳಿಂದ 2000-2500 ವರ್ಷಗಳ ಹಿಂದೆಯೇ ಪಂಡಿತ ವರ್ಗದವರು ರಾಜ ಪದವಿಯನ್ನು ಗೌರವಿಸುತ್ತಾ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದರೂ ರಾಜನೀತಿಯನ್ನು ಕುಹಕ ಕುತ್ಸಿತ ದೃಷ್ಟಿಗಳಿಂದ ನೋಡುತ್ತಿದ್ದರು. ಶ್ರೀ ಶಂಕರ ಭಗವತ್ಪೂಜ್ಯಪಾದರಿಂದ ಬೆಳಕಿಗೆ ಬಂದ ಗೀತೆಯಿಂದ ರಾಜನೀತಿ ರಾಜಯೋಗವು ವ್ಯಕ್ತವಾಯಿತು; ಸಮಸ್ತ ಪ್ರಜೆಗಳ ವರ್ತನೆಯಲ್ಲಿ ಅಂತರ್ಗತವಾಗಿರುವುದು ಸ್ಪಷ್ಟವಾಯಿತು.

ರಾಜನೀತಿಯನ್ನು ಶಾಸ್ತ್ರವತ್ತಾಗಿ ಅಧ್ಯಯನ ಮಾಡದಿರುವವರು ರಾಜನೀತಿ ಶಾಸ್ತ್ರವೇ ನಿಂದ್ಯವೆಂದು ಮುಖತಃ ಹೇಳುತ್ತಾ ಪ್ರಪಂಚದ ಐಹಿಕಾಮುಷ್ಮಿಕ ವ್ಯಾಪಾರಗಳಲ್ಲಿ ರಾಜನೀತಿಯನ್ನು ಅತ್ಯುನ್ನತ ಮಟ್ಟದಲ್ಲಿ ಪ್ರಯೋಗಿಸುತ್ತಾರೆ. ಈ ಪ್ರಯೋಗಕ್ಕೆ ಗುರಿಯಾದವರೂ, ಪ್ರಯೋಕ್ತೃಗಳೂ ಸಹ ಅಸಂಸ್ಕೃತ ಮಾರ್ಗದಿಂದ ದುಷ್ಟಫಲವನ್ನೇ ಅನುಭವಿಸುವವರಾಗುತ್ತಾರೆ. ಪ್ರತಿಯೊಬ್ಬರೂ ರಾಜನೀತಿ ವೇತ್ತರಾಗಿರುವ ಸಂದರ್ಭದಲ್ಲಿ ಪ್ರಯೋಗಕ್ಕೆ ಪಾತ್ರರೂ ಪ್ರಯೋಕ್ತೃಗಳೂ ಜಾಗರೂಕರಾಗಿರಬೇಕಾಗುವುದರಿಂದಲೂ ಪ್ರತಿಯೊಂದು ಹೆಜ್ಜೆಯಲ್ಲಿಯೂ ಮಿತಿಯರಿತು ವರ್ತಿಸುವುದರಿಂದಲೂ ಸಾಮ್ರಾಜ್ಯವು ಕುದುರುವಂತಾಗುವುದು. ಇದರಿಂದ ಆಮುಷ್ಮಿಕ ವ್ಯಾಪಾರಗಳ ಲಾಘವ ಗೌರವಗಳು ಚೆನ್ನಾಗಿ ಮನವರಿಕೆಯಾಗಿ ಇಹಪರಗಳೂ ಸುಲಭವಾಗಿ ಸಾಧಿಸಲ್ಪಡುವುವು.

ರಾಜನೀತಿ ಶಾಸ್ತ್ರವನ್ನು ಹಳಿಯುವವರು, ಪ್ರಪಂಚದ ರಕ್ಷಣೆ, ಬಾಧಾ ನಿವಾರಣೆಗಾಗಿರುವ ಅಥರ್ವ ಪ್ರಯೋಗಗಳ ದುರುಪಯೋಗವನ್ನು ಭಾವಿಸಿ ವೇದವನ್ನೇ ಹಳಿಯುವವರ ಪರಿಸ್ಥಿತಿಯನ್ನು ತಿಳಿದು ಎಚ್ಚೆತ್ತುಕೊಳ್ಳಬೇಕಾಗಿದೆ. ಪವಿತ್ರವಾದ ಪಂಚಮ ವೇದವೆನಿಸಿದ ರಾಜನೀತಿ ವಿಷಯದಲ್ಲಿ ಶ್ರೋತ್ರಿಯರು ಅದ್ವಿತೀಯವಾದ ಪಾಂಡಿತ್ಯವನ್ನು ಹೊಂದಿ, 'ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಕ್ ರಾಜ್ಯಾದಿ ಲೌಕಿಕಂ' (— ವಿದ್ಯಾರಣ್ಯ) ಎಂಬಂತೆ ರಾಜ್ಯದ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಭುತ್ವ ಪ್ರಜಾತ್ವ ವಿಷಯವನ್ನು ಸ್ಪಷ್ಟಪಡಿಸಬೇಕಾಗಿದ್ದಿತು. ಶ್ರೋತ್ರಿಯಾಗ್ರೇಸರಾಗಿ ಬೃಹಸ್ಪತ್ಯಾಚಾರ್ಯರೂ ಶುಕ್ರಾಚಾರ್ಯರೂ ರಾಜನೀತಿಗೆ ಮೂಲಪುರುಷರಾಗಿ ಪ್ರಜೆಗಳಲ್ಲಿರುವ ದಿತಿತ್ವವನ್ನು ಅಡಗಿಸಿ ಅದಿತಿತ್ವವನ್ನು ಹೆಚ್ಚಿಸುವುದಕ್ಕೆ ಅಧ್ಯವಸಾಯ ಮಾಡಿರುತ್ತಾರೆ ರಾಜನೀತಿ ತತ್ವಗಳನ್ನು ಸಾಕ್ಷಾತ್ತಾಗಿಯೂ, ಪರೋಕ್ಷವಾಗಿಯೂ ಆದರಿಸಿ ಅನುಸರಿಸದಿರುವ ಕುಟುಂಬವಾಗಲೀ ವ್ಯಕ್ತಿಯಾಗಲೀ ಜಗತ್ತಿನಲ್ಲಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಮಕ್ಕಳ ಮೇಲೆಯೂ ತುಚ್ಛವೆಂದು ಭಾವಿಸಿಕೊಂಡ ಕೆಲವು ರಾಜನೀತಿ ತಂತ್ರಗಳನ್ನೂ ಸಾಮದಾನಾದಿಗಳನ್ನೂ ಪ್ರಯೋಗಿಸುವುದರಲ್ಲಿ ಸರ್ವರೂ ಚತುರರಾಗಿರುತ್ತಾರೆ. ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ, ಅಂತರ ರಾಷ್ಟ್ರ ವಲಯಗಳಲ್ಲಿ ರಾಜನೀತಿ ತಂತ್ರವು ಪ್ರಜೆಗಳ ಯೋಗಕ್ಷೇಮಕ್ಕಾಗಿ ತಾಂಡವವಾಡುತ್ತಿದೆ. ಇಂತಹ ಸಂಚಮ ವೇದವಾದ ಮತ್ತು ಪುರುಷಾರ್ಥಸಿದ್ಧಿಗೆ ಅತ್ಯವಶ್ಯಕವಾದ ಅರ್ಥಶಾಸ್ತ್ರ ವ್ಯಾಸಂಗಕ್ಕೆ ವೇದ ಗೀರ್ವಾಣ ಭಾಷಾ ಪಾಠಶಾಲೆಗಳಲ್ಲಿ ಬಹಿಷ್ಕಾರ ಹಾಕಿ ದೂರಸರಿದಿರುವ ವಿದ್ವತ್ತಿನ ಪರಿಸ್ಥಿತಿಯು ಚೋದ್ಯವಾದ ನಟನೆಯಾಗಿರುತ್ತದೆ. "ರಾಜನೀತಿಯ ಜ್ಞಾನ, ಪ್ರಯೋಗಗಳಿಲ್ಲದಿದ್ದರೆ ಶ್ರೋತ್ರಿಯತ್ವಾದಿಗಳು ಸಿದ್ಧಿಸಲಾರವು" ಎಂಬುದನ್ನು ದೇವತಾ ಯಜ್ಞಪ್ರಧಾನವಾದ ಶ್ರೌತ ಪ್ರಯೋಗಗಳೂ ಮೊಳಗುತ್ತಿವೆ. ರಾಜನೀತಿಯು ಮರೆಯಾದ್ದರಿಂದ ಬ್ರಾಹ್ಮಣಾಚಾರ ತತ್ವಗಳು ಮರೆಯಾಗಿ ಅನುಯಾಯಿಗಳಿಂದಲೂ ಪ್ರತಿಭಟಿಸಲ್ಪಟ್ಟು ಅನೇಕ ಸ್ವತಂತ್ರ ಪಂಥಗಳಿಗೆ ಕಾರಣವಾಯಿತು. ಶೋಚನೀಯವಾದ ಈ ಪರಿಸ್ಥಿತಿಯೂ ಕೂಡಲೆ ನಾಮಾವಶೇಷವಾಗಬೇಕಾಗಿರುತ್ತದೆ. ಪ್ರಜೆಗಳು ತಮ್ಮ ಮಿತಿಯನ್ನು ಮರೆತು ಸ್ವಾತಂತ್ರ್ಯವನ್ನು ಮನಸ್ಸು ಹರಿದಂತೆ ಪ್ರಯೋಗಿಸಿ ಕ್ಷಣಕ್ಷಣಕ್ಕೂ ವರ್ತನೆಗಳನ್ನು ಬದಲಾಯಿಸಿಕೊಂಡು ಲೋಕಕಂಟಕರಾಗುವರು. ರಾಜನೀತಿ ಶಾಸ್ತ್ರ ಕಲೆಯು ಒಬ್ಬರಿಗೆ, ಕೆಲವರಿಗೆ, ಒಂದು ರಾಜ್ಯಾಂಗಕ್ಕೆ ಮಾತ್ರ ಸೇರಿದೆ ಎಂಬ ಭಾವನೆಯು ವಿವೇಕಕ್ಕೆ ದೂರವಾದುದು.

ರಾಜನೀತಿ ನೇತ್ರದಿಂದ ವೈಶ್ಯಾದಿಗಳ ಕ್ರಿಯಾ ರೂಪಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾಗರೂಕತೆಯಿಂದ ನೋಡುತ್ತಾ ವಿಮರ್ಶಿಸುತ್ತಿರಬೇಕು. ವೈಯಕ್ತಿಕ ದೋಷಾದಿಗಳು ದೂರಸರಿದು ಶಾಂತಿಯುಂಟಾಗುವ ವ್ಯವಹಾರವು ಗೋಚರವಾಗುವಂತೆ ನಡೆಯಬೇಕು.

## ಯಜ್ಞಗಳಲ್ಲಿ ರಾಜನೀತಿ ವೈಖರಿ

ವೇದೋಕ್ತ ಯಜ್ಞಗಳ ಅನುಷ್ಠಾನದಲ್ಲಿಯೂ ವ್ಯವಹಾರದ ಸೊಬಗು ತುಂಬಿರುವುದು ಸೋಮ ದೇವತೆಯನ್ನು ಪ್ರಭು (ರಾಜ – ಶಾಸಕ) ವೆಂದು ಅಂತಃ ಭಾವಿಸಿ ತದ್ದೇವತಾ ವಿಷಯಕವಾಗಿ ದೇಹಿಗಳು ನಡೆದುಕೊಳ್ಳುವ ಮತ್ತು ಹೊರಗಿನ ವರ್ತನೆಯಲ್ಲಿ ಪ್ರದರ್ಶಿಸುವ ಗೌರವಯುತ ವ್ಯಾಪಾರಗಳು ಮಾನವ ಪ್ರಪಂಚಕ್ಕೆ ಮಾರ್ಗದರ್ಶಕವಾಗಿರುವುವು. ಋಕ್, ಯಜುಸ್, ಸಾಮ್ನ, ಅಥರ್ವ ಮತ್ತು ತದಂಗಗಳಿಂದ ಬ್ರಹ್ಮವನ್ನು (= ಯಜ್ಞವನ್ನು) ರಕ್ಷಿಸಿ ಪೋಷಿಸುವ ಸಂವಿಧಾನವು ಸುವ್ಯವಸ್ಥಿತವಾಗಿರುವುದು. 'ದ್ವಿತೀಯಾದ್ವೈ ಭಯಂ ಭವತಿ' ಎಂಬಂತೆ ಪ್ರಕೃತಿ ಲೀಲೆಯ ಪ್ರಭಾವದಿಂದ ಉಂಟಾಗುವ ಭಯಾದಿಗಳ ನಿವೃತ್ತಿಗಾಗಿ ಕ್ಷತ್ರದ ರಕ್ಷಣೆ ಪೋಷಣೆಗಳಿಂದ ಸ್ವಸ್ವರೂಪಜ್ಞಾನ ಸಿದ್ಧಿಯಾಗುವುದು. (ಸ್ವಾಭಾವಿಕ ಸ್ವರೂಪಾವಸ್ಥಾನಂ – ಅಮೃತತ್ವಂ)

ಸುವ್ಯವಸ್ಥಿತವಾದ ಶ್ರೋತ್ರಿಯಾದಿ ಪಂಚ ಕ್ಷತ್ರ ವ್ಯಾಪಾರಗಳು ದೇಹಿಗಳ ಪಾರಮಾರ್ಥಿಕ, ಆರ್ಥಿಕ, ಪುರುಷಾರ್ಥ ಸಿದ್ಧಿಸಂಪದಭಿವೃದ್ಧಿಗೆ ಪಂಚ ಪ್ರಾಣವಾಗಿರುವುವು (ಆಧಾರವಾಗಿರುವುವು.) ಈ ಪಂಚಪ್ರಾಣ ವಾಯುಗಳಿಲ್ಲದೆ ಯಾವ ದೇಹಿಯೂ ದೇಹವನ್ನು ಧರಿಸಿರಲಾರದು. ದೇಹಿಗಳ ಮತ್ತು ದೇಶದ ಅಭ್ಯುದಯಕ್ಕೆ ಈ ಪಂಚವ್ಯಾಪಾರಗಳನ್ನು ಕ್ರಮಪಡಿಸಿಕೊಳ್ಳುವ ಮಾರ್ಗವನ್ನು ರಾಜನೀತಿ ಶಾಸ್ತ್ರವು ತಿಳಿಸಬೇಕಾಗಿದೆ. ಆದುದರಿಂದಲೇ ಸರ್ವ ಧರ್ಮಗಳು ಅಂದರೆ ಅಭ್ಯಸ್ತ ಮತ್ತು ಸಂಸ್ಕೃತವಾದ ಕರ್ಮಗಳೆಂಬ ಆಚಾರಗಳು ರಾಜಧರ್ಮದಲ್ಲಿ (ರಾಜನೀತಿಯಲ್ಲಿ) ಒಳಹೊಕ್ಕಿರುವುವು.

ಸರ್ವೇ ಧರ್ಮಾಃ ರಾಜಧರ್ಮೇಷು ದೃಷ್ಟಾಃ
ಸರ್ವೇ ಭೋಗಾ ರಾಜಧರ್ಮೇಷು ರಾಜನ್ |

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೇ ಯೋಗಾ ರಾಜಧರ್ಮೇಷು ಚೋಕ್ತಾಃ
ಸರ್ವೇ ಧರ್ಮಾ ರಾಜಧರ್ಮೇ ಪ್ರವಿಷ್ಟಾಃ ॥
(ಶಾಂತಿಪರ್ವ, ರಾಜಧರ್ಮ, ಅ. 62-30)

ಎಂದು ಒತ್ತಿ ಒತ್ತಿ ಮಹಾಭಾರತದಲ್ಲಿ ಹೇಳಿದೆ.

## ರಾಜ ನೀತಿ ರಾಜ ಯೋಗ

ದೇಹಿಗಳು ಅವರವರ ಋಣ ಕರ್ಮಫಲವೆಂಬ ವಿಧಿಗೆ ಶರಣರಾಗಿ ಕೋಟಿ ವಿಧವಾದ ಉಪಾಧಿಗಳನ್ನು ಧರಿಸಬಹುದು. ಆ ಕರ್ಮಫಲಕ್ಕೆ ವಶರಾಗಿ ಅವರವರ ಮಿತಿಯಲ್ಲಿ ಸಾಧ್ಯವಾಗುವ ವೃತ್ತಿ ವ್ಯಾಪಾರಗಳ ಮೂಲಕ ಫಲಾನುಭವಮಾಡಿಕೊಳ್ಳುವರು. ಇವರಿಂದ ಸ್ವಪರಹಿತ ಸಾಧನೆಯಾಗುವುದು.

ಸಂಕಲ್ಪಿಸಿ, ಯತ್ನಿಸಿ ಮಾಡಿದ ವಿವಿಧ ಹಿತಾಹಿತ ಕರ್ಮಗಳ ಫಲವನ್ನು ಅನುಭವಿಸುವ ಕಾಲದಲ್ಲಿಯೂ ಆತ್ಮಗುಣ (ಸ್ವಭಾವ) ಕ್ಕೆ ತಕ್ಕಂತೆ ಸಂಸ್ಕೃತಿ(ರಾಜನೀತಿ)ಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದ ಮುಂದೆ ಸತ್ ಸಂಕಲ್ಪ ಅಥವಾ ಸಂಕಲ್ಪವಿಲ್ಲದಿರುವಿಕೆಗಳಿಂದ ಸತ್ಕರ್ಮ ಸಫಲಗಳು ಋತಾನುಗುಣವಾಗಿ ನಡೆಯುವಂತೆ ಎಚ್ಚರಿಕೆಯಿಂದ ವರ್ತಿಸಬೇಕಾದುದು ಅತ್ಯವಶ್ಯಕವಾದ ನಿತ್ಯ ಕರ್ತವ್ಯವಾಗಿರುತ್ತದೆ. ನೀತಿಗಳಲ್ಲೆಲ್ಲಾ ಪ್ರಧಾನವಾದ ಮತ್ತು ಎಲ್ಲ ನೀತಿಗಳನ್ನು ಬೆಳಗುವ ರಾಜನೀತಿಯು ಇದೇ ಆಗಿದೆ.

ಶ್ರೇಯಃ ಪ್ರಾಪ್ತಿಗಾಗಿ ಋತ ಪ್ರಕೃತಿ ನಿಯಮಗಳಿಗೆ ವಿರೋಧ ವಿಲ್ಲದಂತೆ ಪ್ರಪಂಚವನ್ನು ಅಂದರೆ, ಕೀಟ, ಪಕ್ಷಿ, ಮೃಗ, ಪ್ರಾಣಿ, ಮನುಷ್ಯ ವರ್ಗಗಳನ್ನೂ ಸ್ವಂತ ದೇಹ, ಇಂದ್ರಿಯ ಮತ್ತು ಮನಸ್ಸು ಗಳನ್ನೂ ಸಮನ್ವಯದಲ್ಲಿ ಪ್ರವರ್ತಿಸುವಂತೆ ಮಾಡುವುದು ಆವಶ್ಯಕ. ಇದರಿಂದ ಹಿಂದಿನ ದುಷ್ಟ ಕರ್ಮದ ಫಲಾನುಭವವೂ ಸಹ ಹಿತಕರ ವಾಗುವಂತೆ ಆಗುವುದು; ಮತ್ತು ಅನಿಷ್ಟ ನಿವಾರಣೆಯೂ, ಇಷ್ಟಪ್ರಾಪ್ತಿ ಯೂ ಉಂಟಾಗುವುವು.

ಪ್ರಾಪಂಚಿಕ ಪರಿಸ್ಥಿತಿಗಳಿಂದ ಇಂದ್ರಿಯ ಮತ್ತು ಮನಸ್ಸುಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಉದ್ರೇಕ ಮತ್ತು ಚಪಲತೆಗಳಿಂದ ದಾರಿತಪ್ಪಿ, ಮಿತಿಮೀರಿ, ಮೇಲೇರುವ ಅಥವಾ ಮಿತಿಯಿಂದ ಕೆಳಕ್ಕೆ ಇಳಿಯುವ ಪ್ರಸಂಗಗಳಿಂದ ವೃತ್ತಿಯು ವರ್ಣವು ಅನುಷ್ಠಾನವು ಹದಗೆಡುವುದು. ಇದು ಸ್ವಪರ ಕಲ್ಯಾಣಾಭ್ಯುದಯವಿನಾಶಹೇತುವಾಗುವುದು.

ಸಸ್ಯ, ಕೀಟ, ಮೃಗ, ಪಕ್ಷಿ, ಪಶು, ಮನುಷ್ಯ ವರ್ಗಗಳ ದೇಹಿಗಳು ಈ ಬಗೆಯ ಅನಿಷ್ಟ ಅಸೃಷ್ಟಿಕಾರ್ಯಗಳಲ್ಲಿ ತೊಡಗದಂತೆ ಜಾಗರೂಕತೆಯಿಂದ ನೋಡಿಕೊಳ್ಳುವ ಹೊಣೆಗಾರಿಕೆಯು ಕ್ಷತ್ರಿಯಕ್ಕೆ ಸೇರಿದೆ. ವೃತ್ತಿ ಭಂಗವಾಗಬಹುದಾದ ಸಂದರ್ಭದಲ್ಲಿ ನ್ಯೂನಾತಿರಿಕ್ತಗಳಿಗೆ ಅವಕಾಶವಾಗದಂತೆ ನೀತ್ಯನುಶಾಸನ ಕ್ರಮಗಳಿಂದ ಪೂರ್ವಭಾವವಾಗಿ ಎಚ್ಚರಿಸುವುದಕ್ಕೂ ವೃತ್ತಿಭಂಗಗಳಿಂದ ಶಾಂತಿಭಂಗವಾದರೆ ಅದನ್ನು ಪರಿಹರಿಸಿ ಪುನಃ ಸಂಸ್ಥಾಪಿಸುವುದಕ್ಕೂ ವೈಯಕ್ತಿಕಾದಿ ಪಂಚವಲಯಗಳಲ್ಲಿಯೂ ಕ್ಷತ್ರಿಯವು ತೀವ್ರತೆಯಿಂದ ಯತ್ನಿಸಬೇಕಾಗಿರುತ್ತದೆ.

ಸಸ್ಯ ಕೀಟ ಪಕ್ಷಿ ಮೃಗ ಪಶು ಮನುಷ್ಯಾದಿಗಳ ವೃತ್ತಿಭಂಗವಿಲ್ಲದೇ ಇರುವ ಪ್ರಪಂಚದಲ್ಲಿ ಸ್ವಪರಹಿತವು ಸ್ವತಃ ಸಾಧಿಸಲ್ಪಡುವುದರಿಂದ ವೃತ್ತಿಪರಿಪಾಲನೆಯೇ ರಾಜನೀತಿಯ ಗುರಿಯಾಗಿರುವುದು. ಈ ಕಾರಣದಿಂದ ಪುರಾಣೇತಿಹಾಸಶಾಸ್ತ್ರಗಳಲ್ಲಿ ರಾಜನೀತಿ ಪ್ರಕರಣದಲ್ಲಿ ವೃತ್ತಿ ವಿಚಾರವೇ (ವರ್ಣವೇ) ಪ್ರಧಾನವಾಗಿ ಪ್ರತಿಪಾದಿತವಾಗಿದೆ.*

---

* ಯಾವುದೋ ಒಂದು ಮಿತಿಯಲ್ಲಿ ಮಿತವಾದ ಪ್ರದೇಶದಲ್ಲಿ ನೈತಿಕ ಮಟ್ಟವು ಅತ್ಯುನ್ನತವಾಗಿದ್ದಾಗ, ಪರಸ್ಪರ ಸೌಹಾರ್ದವು ಅತಿಶಯವಾಗಿ ಸ್ಥಾಪಿತವಾಗಿದ್ದಾಗ ಅನಿಷ್ಟವನ್ನು ಕೇವಲ ನಿಕೃಷ್ಟವಾಗಿ ಭಾವಿಸಿ ತಳ್ಳಿ ಹಾಕುವ ಉದ್ದೇಶದಿಂದ ಈ ಬಗೆಯಾಗಿ ಪ್ರೋಕ್ತವೂ ಲಿಖಿತವೂ ಆದದ್ದಾಗಿದೆ. ವಿಶಾಲ ಪ್ರಪಂಚದಲ್ಲಿ ಸಂಚಲನಶೀಲರಾದವರು ಇವನ್ನು ವಿಚಿತ್ರವಾಗಿ ಭಾವಿಸುವಂತಾಗಿದೆ. ಆದರೆ ತತ್ವವು ವಿಶ್ವವ್ಯಾಪಿಯಾಗಿರುವುದರಿಂದ ವಿಶಾಲ ಹೃದಯರು ಗ್ರಂಥಕರ್ತರ - ಋಷಿಗಳ ಹೃದಯ ವೈಶಾಲ್ಯವನ್ನು ಮನಗಂಡು ತದನುಗುಣವಾಗಿ ಸುಮುಖವಾದ, ಪ್ರಸನ್ನವಾದ ಅರ್ಥವನ್ನು ಕಲ್ಪಿಸಿ ಇಷ್ಟಸಿದ್ಧಿ [illegible]ಗೂ

CC-0. In Public Domain. Gurukul Kangri Collection, Haridwar

 Digitized by Arya Samaj Foundation Chennai and eGangotri

ವೃತ್ತಿಪರಿಪಾಲನೆಯು ಪುರುಷಾರ್ಥಫಲಪ್ರದಾಯಕವಾದುದರಿಂದ ವೃತ್ತಿಪರಿಪಾಲನೆಯಿಂದಲೇ ಧಾರ್ಮಿಕ ಆರ್ಥಿಕಕಾಮ್ಯಮೋಕ್ಷಿಕಗಳೆಂಬ ಪುರುಷಾರ್ಥಸಾಧನೆಯಾಗಬೇಕಾಗಿರುತ್ತದೆ.

ವಿಭೂತಿ ಪುರುಷರಾದ ಅವಧೂತ ಮಹಾ ಮುನಿಗಳ ಪರಮ ಪುರುಷಾರ್ಥ ಪ್ರಾಸಕವಾದ ಸೂಕ್ತಿಯನ್ನು ಹೃದಯದಲ್ಲಿ ಹುದುಗಿಸಿಕೊಂಡು ವ್ಯವಹಾರದಲ್ಲಿ ಶಾಂತಿದಾಯಕರಾಜನೀತಿಯಿಂದ ಆಚಾರ-ವೃತ್ತಿ-ವರ್ಣ-ಅನುಷ್ಠಾನಗಳನ್ನು ಸುವ್ಯವಸ್ಥೆಗೊಳಿಸಿರುತ್ತಾರೆ.

ಭೂಮಿಯು ಧ್ರುವದ ಗುರಿಯನ್ನಿಟ್ಟು ಸುತ್ತುತ್ತಿರುವಂತೆ ವಸ್ತುತಃ ವ್ಯಾವಹಾರಿಕಪ್ರಪಂಚದಲ್ಲಿಯೂ ಸಹ ಮಾನವರು ಆ ಅನುಷ್ಠಾನಗಳನ್ನು ಪಾಲಿಸುವುದರಿಂದ ಸುಖಶಾಂತಿಸಂಪತ್ಸಮೃದ್ಧಿಯುಂಟಾಗುವುದು.

[ಆರ್ಯಾಃ ಯತ್ ಕ್ರಿಯಮಾಣಂ ಪ್ರಶಂಸಂತಿ, ಸ ಧರ್ಮಃ (ಸಾಮಯಾಚಾರಿಕಃ), ಯತ್ ಗರ್ಹಂತೇ ಸಃ ಅಧರ್ಮಃ (ಅಸಾಮಯಾಚಾರಿಕಃ) ಎಂದು ಆಪಸ್ತಂಬರು ಹೇಳಿ ಆತ್ಮಲಾಭಯೋಗಕ್ಷೇಮ ಸಂವಿಧಾನವನ್ನು ಉಪದೇಶಿಸಿರುತ್ತಾರೆ.]

ವೈಯಕ್ತಿಕಾದಿಕ್ರಿಯೆಗಳನ್ನು ಸಂಸ್ಕೃತಿ ಆಚಾರಗಳ ದೃಷ್ಟಿಯಿಂದ ನಿಯಂತ್ರಿಸಿ ವ್ಯಕ್ತಿಗಳು ತಮ್ಮ ಸ್ವಾತಂತ್ರ್ಯವನ್ನು ಶಾಂತಿಸುಖಕಲ್ಪನೆಗೆ ವಿನಿಯೋಗಿಸಲು ರಾಜ್ಯಶಾಸನಗಳು ಅವಕಾಶವನ್ನು ಉಂಟು ಮಾಡಬೇಕು ; ಹಿಂದಿನ ಋಣಾನುಬಂಧವು ಅಪವಿತ್ರವಾಗಿ ಪಾತಕಫಲವನ್ನು ಅನುಭವಿಸುತ್ತಿದ್ದರೂ, ಮುಂದಾದರೂ ಅವರ ಸತ್ಸಂಕಲ್ಪಾದಿಗಳಿಗೆ ರಾಜ್ಯಶಾಸನಗಳು ಪ್ರೋತ್ಸಾಹಕರವಾಗುವುವು. ಇಂತಹ ಸತ್ ಆವರಣ

---

ಕ್ಲೇಶದೂರೀಕರಣಕ್ಕೂ ಯತ್ನಿಸಬೇಕಾಗಿದೆ. ಜನತೆಯಲ್ಲಿ ವೈಷಮ್ಯಾದಿ ಮನೋಭಾವಗಳು ದ್ವೇಷಮೂಲವಾಗದಂತೆ ವೇದ (ವೇದಾಂತರ್ಗತ) ಪ್ರಜಾತತ್ವಗಳ ಆಧಾರದ ಮೇಲೆ ರಸಾಭಿಜ್ಞದೃಷ್ಟಿಯಿಂದ ವೃತ್ತಿ-ವರ್ಣವನ್ನು ವಿಮರ್ಶಿಸಿ ನೂತನವಾಗಿ ಪ್ರತಿಪಾದಿಸಿ ರಚಿಸಬೇಕಾಗಿರುತ್ತದೆ.

ಪ್ರಜಾಸಾಮ್ರಾಜ್ಯವು ಪ್ರಜೆಗಳ ಸಹಾಯದಿಂದ ತತ್ವವನ್ನು ಹರಡಿ ಲೋಪವನ್ನು ಹೋಗಲಾಡಿಸಲು ಯತ್ನಿಸುತ್ತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕಲ್ಪನೆಯಾಗುವಂತೆ ರಾಜ್ಯಶಾಸನಗಳನ್ನು ರೂಪಿಸಿ ರಚಿಸಿ ರೂಢಿಸಲು ಪ್ರತಿವ್ಯಕ್ತಿಯೂ ಯತ್ನಿಸಬೇಕಾಗಿದೆ.

ಈ ರಹಸ್ಯಗಳನ್ನು ಪ್ರತ್ಯಕ್ಷಾದಿ ಪ್ರಮಾಣಗಳಿಂದ ತೋರಿಸಿ 'ಪ್ರಮಾ'ಪ್ರಕಾಶನಮಾಡುವ ಕಾರ್ಯಕ್ಕೆ ರಾಜನೀತಿಯಲ್ಲಿ ಅವಕಾಶವಿದೆ. ಸ್ವಪರಹಿತಸಾಧನೆಗಾಗಿ ಇದನ್ನು ಋಜು ಮಾರ್ಗದಲ್ಲಿ ವ್ಯವಹಾರದಲ್ಲಿ ಅಳವಡಿಸಿ ಜನ್ಮಸಾರ್ಥಕ್ಯವನ್ನು ಹೊಂದಬೇಕಾಗಿರುತ್ತದೆ. 'ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್'. ಆತ್ಮನಃ = ಕರ್ತೃವಿಗೆ ದೇಹಿಗೆ; ಪ್ರತಿಕೂಲಾನಿ = ವಿರೋಧವೆಂದು ತೋರುವವುಗಳನ್ನು ಮತ್ತು ಸಾತ್ವಿಕಗುಣದ, ಸರ್ವವ್ಯಾಪಿಯಾಗಿ ಸರ್ವದೇಹಾಂತಸ್ಥನಾದ ಆತ್ಮನಿಗೆ ವಿರೋಧವಾಗುವವುಗಳನ್ನು ; ಪರೇಷಾಂ = (ಕರ್ತೃದೇಹಿಯ ಇಂದ್ರಿಯ ಗಳಿಗೆ ಗೋಚರವಾಗುವ ಸಸ್ಯ, ಕೀಟ, ಪಕ್ಷಿ, ಮೃಗ, ಪಶು, ಮಾನುಷ್ಯ ದೇಹಾಂತರ್ಗತವಾಗಿ) ಬೇರೆ ಬೇರೆ ಉಪಾಧಿಗಳಲ್ಲಿ ಕಾಣುವ ಆತ್ಮರಿಗೆ; ಉಂಟುಮಾಡಬಾರದು. ಈ ಬಗೆಯಲ್ಲಿ ಸದಾ ಸಾಧುಮಾರ್ಗದಲ್ಲಿರ ಬೇಕೆಂದು ಸಾರಿ ಹೇಳುವ ರಾಜನೀತಿಯೇ ಪ್ರಪಂಚದ ಸುವ್ಯವಸ್ಥೆಗೆ ಆಧಾರವಾಗಿರುತ್ತದೆ. ಪ್ರಜಾಪತಿರಾಜ್ಯಭಾರನಿರ್ವಾಹಕ್ಕಾಗಿ ಪ್ರಪಂಚಾ-ಧಿದೇವತೆ ಅಧ್ಯಕ್ಷಿಣೀ, ಪ್ರಕೃತಿಮಹಾರಾಜ್ಞೀ, ತಾನು ನಡೆಸುವ ಲೀಲಾ ವ್ಯಾಪಾರಕ್ಷೇತ್ರದಲ್ಲಿ ಜೀವಗಳು ಋಣಕರ್ಮಫಲಾನುಭವಕ್ಕಾಗಿ ಶರೀರ ವನ್ನು ಧರಿಸಿ ಹುಟ್ಟುವುದಕ್ಕೆ ಅಂದರೆ ನವೀನದೇಹಧಾರಣೆಯಿಂದ ಕಾಣಿಸಿ ಕೊಳ್ಳುವುದಕ್ಕೆ ಮುನ್ನ ಅನ್ನವನ್ನು ಸಿದ್ಧಪಡಿಸಿ ನಿತ್ಯ ಪಂಚ ಮಹಾ ಯಜ್ಞಗಳನ್ನು ನಿರ್ವಹಿಸುವುದಕ್ಕೆ ಅತ್ಯಂತ ದಯಾ, ದಾಕ್ಷಿಣ್ಯ, ವಾತ್ಸಲ್ಯ, ಪ್ರೇಮಾದಿಗಳಿಂದ ದೇಹಿಗಳನ್ನು ಸೇವಿಸುತ್ತಿರುವಳು.

ಜೀವಿತ ಸೌಕರ್ಯಕ್ಕಾಗಿ ಸ್ವಾಭಾವಿಕ ಸಂಸ್ಕೃತಿಗಳಿಂದಲೇ ಸಸ್ಯಕೀಟಪಕ್ಷಿಮೃಗಪಶುಮಾನವ ದೇಹಿಗಳು ಸ್ವತಃ ಸ್ವತಃ ಏವ ದಿನೇ ದಿನೇ ಪ್ರಗತಿಯನ್ನು ಹೊಂದುವುದಕ್ಕೆ ಅನುವಾದ ಸಕಲಸಂಭಾರಗಳೂ ಪ್ರಪಂಚದಲ್ಲಿ (ಪಿಂಡಾಂಡ–ಬ್ರಹ್ಮಾಂಡಗಳಲ್ಲಿ) ತುಂಬಿರುವುವು. ಪ್ರಕೃತಿ ಯ ಸ್ವಯಂ ಕಲನವ್ಯಾಪಾರಗಳು ಅತ್ಯದ್ಭುತವಾಗಿ, ಅತಿವಿಚಿತ್ರವಾಗಿ, ಅನುಸ್ಯೂತವಾಗಿ ನಡೆಯುತ್ತಿರುವುವು. ಸ್ವಯಂಕಲನವ್ಯಾಪಾರವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಶರೀರಗಳಲ್ಲಿ ನಡೆಸು ಶಾಶ್ವತವಾಗಿ ಒಂದು ಶರೀರದಿಂದ ಮತ್ತೊಂದು ಶರೀರವು ರೂಪಿತವಾಗಿ ಕಲನವ್ಯಾಪಾರವು ಅವ್ಯೃತವಾಗಿರುವಂತೆ ಶಾರೀರಕ ರಚನೆಯು ವ್ಯವಸ್ಥಿತವಾಗಿರುವುದು. ಬಹುವಿಧವಾದ ಗುಣಶಕ್ತಿಕರ್ಮಗಳು ಅನಂತಸಂಖ್ಯಾಕಗಳಾಗಿರುವುವು. ಆದ್ದರಿಂದಲೇ ಕಲನವ್ಯಾಪಾರಗಳು ಮನಸ್ಸಿನ ಅನುಭವಕ್ಕೆ ನಿಲುಕದಷ್ಟು ವೇಗವಾಗಿ ನಡೆಯುವುವು ಮತ್ತು ಇವೆಲ್ಲವೂ ರಾಜನೀತಿಶಾಸನಗಳನ್ನು ಪರಿಪಾಲಿಸುವಂತೆ ಗೊತ್ತಾಗಿರುವುವು. ಇವು ಒಂದಕ್ಕೊಂದು ಆಶ್ರಯವಾಗಿ, ಒಂದರೊಡನೆ ಒಂದು ಹೆಣೆದುಕೊಂಡು ಒಂದಕ್ಕೊಂದು (ಪರಸ್ಪರ) ಆಧಾರವೆಂಬಂತೆ ಉತ್ತೇಜಕವಾಗಿದ್ದು ಆವಶ್ಯಕವಾದ ಕ್ಷತ್ರವನ್ನು ಸಾಧಿಸುವುವು ಪರಬ್ರಹ್ಮವಿವರ್ತವಾದ ಸ್ಪಂದನ–ನಾದತರಂಗಗಳು, ತ್ರಿಗುಣ, ಶಕ್ತಿತ್ರಯ, ಪಂಚತನ್ಮಾತ್ರಗಳ, ಪಂಚಭೂತಗಳ ಗುಣಶಕ್ತಿಕರ್ಮಗಳು. ಮನಸ್ಸು ಇಂದ್ರಿಯಾದಿಗಳ ಗುಣಕರ್ಮಶಕ್ತಿಗಳು, ಏಳು ಮಾತೃಕೆಯರ, ಮೂವತ್ತುಮೂರುಕೋಟಿ ದೇವತೆಗಳ, ಅರವತ್ತನಾಲ್ಕು ಯೋಗಿನೀದೇವತೆಗಳ, ಅತ್ರಿಭೃಗುಕುತ್ಸವಸಿಷ್ಠಗೌತಮಕಶ್ಯಪಾಂಗಿರಸಋಷಿಗಳ, ವಾಮದೇವವಿಶ್ವಾಮಿತ್ರಾದಿಗಳ, ಇಂದ್ರಾಗ್ನಿಯಮ ಮೊದಲಾದ ಎಂಟು ಪಾಲಕರ, ಶ್ರೋತ್ರಿಯಾದಿಪಂಚವರ್ಣಗಳ, ಹನ್ನೊಂದು ರುದ್ರರ, ಎಂಟು ವಸುಗಳ, ಹನ್ನೆರಡು ಆದಿತ್ಯರ, ಏಳು ಸೂರ್ಯಾದಿ ಜ್ಯೋತಿರ್ಘನಗಳ, ಎರಡು ಛಾಯಾಗ್ರಹಗಳ, ಇಪ್ಪತ್ತೇಳು ನಕ್ಷತ್ರರಾಶಿಗಳ, ಸುರ ಮತ್ತು ಅಸುರಗಳ, ಅದಿತಿದಿತಿದನು ದಿಕ್ಕುಗಳ ಸೃಷ್ಟಿಸ್ಥಿತಿಲಯಗಳೆಂಬ ಬ್ರಹ್ಮವಿಷ್ಣುಮಹೇಶ್ವರರ, ಕೃತತ್ರೇತದ್ವಾಪರಕಲಿಗಳೆಂಬ ಅವಸ್ಥಾ ವಿಶೇಷಗಳ ಗುಣಕರ್ಮಶಕ್ತಿಗಳೆಲ್ಲವೂ ಏಕಕಾಲದಲ್ಲಿ ಒಂದೊಂದು ಅಣುವಿನಲ್ಲಿಯೂ ಅಡಕವಾಗಿ ಅಡಗಿರುತ್ತವೆ. ಹೀಗೆ ಕ್ಷತ್ರ ಗುಣ ಶಕ್ತಿ ಕರ್ಮಗಳು ಸ್ವತಃ ಪರಿಪೂರ್ಣವಾಗಿ ಸ್ವಯಮೇವ ಶೋಧನ ನಿರ್ವಾಹವು ಅವಿಚ್ಛಿನ್ನವಾಗಿ ಜನನಮರಣಗಳು ಏಕಾಕಾರವಾಗಿ, ತಂತುವಿನಂತೆ ಅನಂತವಾಗಿ, ನಡೆಯುತ್ತಿವೆ.

ಇಷ್ಟಾನಿಷ್ಟ ಜ್ಞಾನ, ಅನಿಷ್ಟ ನಿವಾರಣೆ, ಇಷ್ಟಪ್ರಾಪ್ತಿಗಳಿಗಾಗಿ ವಿಮರ್ಶಾತ್ಮಕ ಬುದ್ಧಿ ವಿವೇಕವೆಂಬ ಖಡ್ಗವನ್ನು ಧರಿಸಿದ ಮಾನವ ಪ್ರಜೆಯು ಖಡ್ಗವನ್ನು ದುರುಪಯೋಗಪಡಿಸಿಕೊಳ್ಳುವ ಮತ್ತು ಸದುಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಗಪಡಿಸಿಕೊಳ್ಳದ ಪರಿಸ್ಥಿತಿಯು ಮೇಲ್ಕಂಡ ಕ್ಷತ್ರಗುಣಾದಿಗಳ ಹೆಚ್ಚು ಕಡಿಮೆ ಪ್ರಮಾಣದ ಸಂಯೋಜನ ವಿಭಜನಗಳ ಕಾರಣದಿಂದ ಉಂಟಾಗುವುದು. ಪುನಃ ಸ್ವತ ಏವ ಸಮತೆಯು ಉಚಿತವಾದ ಕಲನಾದಿಗಳಿಂದ ಸಿದ್ಧವಾಗುವುದು.

ಋಣಕರ್ಮಗಳಿಗನುಸಾರವಾಗಿ ವೃತ್ತಿಗಳು (ವರ್ಣಗಳು) ಅನಂತ ಮುಖಗಳಾಗಿ, ಪ್ರಪಂಚದಲ್ಲಿ ಆಯಾ ಉಪಾಧಿಗಳಿಂದ ಕಾಣಿಸಿಕೊಳ್ಳುವ ಸಸ್ಯ ಕೀಟ ಪಕ್ಷಿ ಮೃಗ ಪಶು ಮಾನವಾದಿ ದೇಹಿಗಳ ಸಂಖ್ಯೆಯಷ್ಟೇ ಇರುವುವು. ಇವುಗಳ ಮಹತ್ತಮ ಸಾಮಾನ್ಯ ಅಪವರ್ತನವೆನಿಸಿದ ಶ್ರೋತ್ರಿಯಾದಿ ಪಂಚವರ್ಣಗಳು, ವೃತ್ತಿಗಳು ಸುವ್ಯವಸ್ಥಿತವಾಗಿರುವುವು.

ಮಾನವ ಪ್ರಜಾ ಹಂತದಲ್ಲಿ ಶೋಧನ (ಕರ್ಮ ಫಲಾನುಭವ) ನಿರ್ವಾಹವು, ಶ್ರೋತ್ರಿಯಾದಿ ವೃತ್ತಿ ವರ್ಣಗಳು ಮತ್ತು ವೃತ್ತಿ–ವರ್ಣ ಪರಿಪಾಲನೆಗಳು ಯಂತ್ರಕಾರ್ಯಗಳಂತೆ ನಡೆಯುವುದರಿಂದ ಸುಮುಖವಾಗಿ ಸ್ವಸ್ವರೂಪಾವಸ್ಥಾನದ ಪರ್ಯಂತ ರಾಜನೀತಿ ಶಾಸನಪದ್ಧತಿಯಲ್ಲಿ ನಡೆಯುವುದು. ಐದು ಬಗೆಯ ವೃತ್ತಿಗಳಲ್ಲಿ ಅವಸ್ಥೆ ಹಂತಗಳಿಗನುಗುಣವಾಗಿ ವಿವಿಧಮುಖವಾದ ಎಷ್ಟೋ ಬಗೆಗಳಿರುವುವು.

ಒಂದು ಬಗೆ ವೃತ್ತಿಯು ಅಥವಾ ಒಂದು ವೃತ್ತಿಯ ಒಂದು ಬಗೆಯು ಮತ್ತೊಂದಾಗದಿದ್ದರೂ ಫಲಾನುಭವ ರೀತ್ಯಾ ಸರ್ವಥಾ ಪರಸ್ಪರ ಸಮವಾಗಿರುವುವು ಮತ್ತು ಋಣಕರ್ಮಫಲಗಳಿಗೆ ಬದ್ಧವಾಗಿ ಅವಶ - ಅಶರಣವಾಗಿ ನಡೆಯಬೇಕಾಗುವುದು. ಉಚ್ಚ ನೀಚವೆಂಬ ಭಾವನೆಯನ್ನು ಕರ್ಮದೇವತೆಯು ಕರ್ಮಕ್ಷೇತ್ರದಲ್ಲಿ ಪರಿಹರಿಸುವುದಕ್ಕಾಗಲೀ, ತಪ್ಪಿಸುವುದಕ್ಕಾಗಲೀ 'ಸರಿ' ಅಥವಾ 'ತಪ್ಪು' ಎಂದು ಹೇಳುವುದಕ್ಕಾಗಲೀ ಮಾಡುವ ಯತ್ನಗಳು ನಿಷ್ಫಲಗಳು ಮತ್ತು ವಿಪ್ರತಿಕ್ರಿಯಾ ಫಲಪ್ರದಗಳು ಆಗುತ್ತವೆ. ಈ ಭಾವನೆಗಳಿಗೆ ವ್ಯಾವಹಾರಿಕವಾದ ಅವಸ್ಥೆಗಳು ಆಧಾರವಾಗಿರಬಹುದು. ಆದುದರಿಂದ ಸಮನ್ವಯತತ್ವದಿಂದ ವೃತ್ತಿಯನ್ನು ಅಳೆದು, ಬಣ್ಣ ಕಟ್ಟಿ ದ್ವೇಷಾಸೂಯೆಗಳನ್ನು ಬದಿಗೊತ್ತಿ ಶಾಂತಿ ತಂದುಕೊಳ್ಳುವುದೇ ರಾಜನೀತಿಶಾಸ್ತ್ರದ ಸಾರ. ರಾಜನೀತಿಯು ರಾಜಮಾರ್ಗವಾಗಿ ಶ್ರೇಯಃ ಪ್ರಾಪಕ ಕರ್ಮ ಗತಿ ಶಾಸನ ಛಾಯೆಯಂತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವರೂ ಆದರಿಸಿ ಅನುಸರಿಸಬೇಕಾದುದು. ರಾಜತೇ ಇತಿ ರಾಜಾ ಎಂಬಂತೆ ಉಪಾಧಿಮೂಲಕ ಇಂದ್ರಿಯಗಳಿಗೆ ಕಾಣುವ ಆತ್ಮನ ನೀತಿಯೇ ಅಪ್ರತಿಹತವೂ ಶ್ರೇಯಃಕಾರಕವೂ ಆದ ರಾಜನೀತಿ.

## ನಿತ್ಯನೈಮಿತ್ತಿಕಯಜ್ಞ–ಅನುಸಂಧಾನವೃತ್ತಿ ಕರ್ಮ

ಜೀವನಯಜ್ಞ ನಿರ್ವಾಹವು ಪ್ರಧಾನವಾಗಿ ನಿತ್ಯಗಳಾದ ಪಂಚ ಮಹಾಯಜ್ಞಗಳ ಅನುಷ್ಠಾನದಿಂದ ನಡೆಯುವುದಾಗಿರುವುದರಿಂದ ಪಂಚ ಮಹಾಯಜ್ಞಗಳ ಅನುಷ್ಠಾನವೂ ಋಣ ಕರ್ಮ ಸಂಸ್ಕೃತಿ ರೀತ್ಯಾ ವೃತ್ತಿ ಕರ್ಮದಲ್ಲಿ ಸಾರ್ವತ್ರಿಕವಾಗಿ ಅಡಗಿರುವುದು. ನೈಮಿತ್ತಿಕವಾದ ಏಳು ಪಾಕಯಜ್ಞಗಳು ಏಳು ಹವಿರ್ಯಜ್ಞಗಳು ಏಳುಸೋಮಯಜ್ಞಗಳು –ಇವುಗಳ ಅನುಷ್ಠಾನವು ಆತ್ಮಗುಣಗಳ ಪೋಷಕಗಳಾದ ಸಂಸ್ಕೃತಿಯಾಗಿರುತ್ತವೆ. ಹೀಗೆಯೇ, ಪೂರ್ಣತೆ ಸಮತೆ ನೈಷ್ಕರ್ಮ್ಯಸಿದ್ಧಿ ಮೊದಲಾದ ಯೋಗಸಿದ್ಧಿಗಳು ಸ್ವತ ಏವ ಸೋಪಾನಕ್ರಮದಲ್ಲಿ ಉಂಟಾಗುವುವು. 40 ಸಂಖ್ಯೆ ಪರಿಮಿತಿಯ ಯಜ್ಞಸಂಸ್ಕೃತಿಗಳು ರಾಜನೀತಿದೃಷ್ಟಿಯಿಂದ ಸರ್ವವರ್ಣಗಳಿಗೂ ಸರ್ವಕಾಲದಲ್ಲಿಯೂ ಸಾಮಾನ್ಯವಾಗಿ ಗೊತ್ತಾಗಿರುವುವು. ತಿಳಿದಿರುವ ಘಟ್ಟದಿಂದ ತಿಳಿಯದಿರುವ ಘಟ್ಟಕ್ಕೆ ಏರಲು ಕ್ರಮಕ್ರಮವಾಗಿ ತಿಳಿವಳಿಕೆಯನ್ನು ಉಂಟುಮಾಡುವ ಸೋಪಾನಕ್ರಮದಲ್ಲಿ ಅರ್ಹತೆಯು ನೂರಾರು ಸಾವಿರಾರು ವರ್ಷಗಳ ಮತ್ತು ನೂರಾರು ಸಾವಿರಾರು ಜನ್ಮಗಳ ಅವಧಿಯಲ್ಲಿ ಕಡ್ಡಾಯವಾಗಿ ಸರ್ವರ ಅನುಷ್ಠಾನಕ್ಕೆ ನಿಲುಕುವುದು, ಸಾಕ್ಷಾತ್ಕೃತವಾಗುವುದು ಮತ್ತು ಪರಿಣಾಮಕಾರಿಯಾಗುವುದು.

ಪಿಂಡಾಂಡ, ಬ್ರಹ್ಮಾಂಡಗಳನ್ನು ಬಳಸಿ (ಆವರಿಸಿ) ಆಕ್ರಮಿಸಿ ವ್ಯಾಪಿಸಿರುವ ಪ್ರಕೃತಿಯ (ಕುಂಡಲಿನೀ ಶಕ್ತಿಯ) ಪ್ರಕಾಶಕವಾದ ಯಜ್ಞೋಪವೀತವನ್ನು ವೈಶ್ಯ, ಕ್ಷತ್ರಿಯ, ಶ್ರೋತ್ರಿಯ, ಶೂದ್ರ, ನಿಷಾದಗಳೆಂಬ ಅನುಸಂಧಾನ ವೃತ್ತಿಕರ್ಮಗಳನ್ನು ನಿರ್ವಹಿಸಬೇಕಾದ ಪ್ರತಿಯೊಬ್ಬ ದೇಹಿಯೂ ಮಿತಿಯರಿತು ಸಂಸ್ಕೃತಿಯ ವೈಜ್ಞಾನಿಕ ಕ್ರಮದಲ್ಲಿ ವೃತ್ತಿ –ಕರ್ಮ– ಆಚಾರಗಳ ಅನುಷ್ಠಾನಕ್ಕೆ ಅವಶ್ಯಕವಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಾಮಾನ್ಯಕಂಕಣವೆಂಬಂತೆ ಧರಿಸಬೇಕು. ಸಂಸ್ಕೃತಗಳಾದ ವೃತ್ತಿಕರ್ಮಗಳಿಂದ ಮಾನವನೂ, ಮಾನವನಿಂದ ವೃತ್ತಿಕರ್ಮಗಳೂ ವೃದ್ಧಿಯಾಗಿ ಮಾನವರಿಂದ ಆಶ್ರಿತವಾದ ವೃತ್ತಿಕರ್ಮಗಳೂ, ವೃತ್ತಿಕರ್ಮಗಳಿಗೆ ಆಶ್ರಯದಾತರಾದ ಮಾನವರೂ ಲೋಕಕಲ್ಯಾಣಕ್ಕೂ ಸರ್ವರ ಸುಖ ಶಾಂತಿದಾಯಕ ಸಂಸ್ಕೃತಿಗೂ ಕಾರಣರಾಗಿರುತ್ತಾರೆ.

## ಋಗಾದಿ ವೇದಗಳಿಗೆ ವೈಶ್ಯಾದಿಬಿರುದುಗಳು

ಬ್ರಹ್ಮಾನುಸಂಧಾನ ಸಂಸ್ಕೃತಿಯಿಂದ ಪರಿಷ್ಕರಿಸಲ್ಪಟ್ಟ ಪ್ರತಿಯೊಂದು ವರ್ಣ (ವೃತ್ತಿ) ಕರ್ಮವೂ 'ಬ್ರಾಹ್ಮಣ'ವಾಗುವುದು. ಹಿಂದೆ ಹೇಳಿರುವಂತೆ ಈ ಬ್ರಾಹ್ಮಣವು ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳಾಗಿ ವಿಭಕ್ತವಾಗಿರುವುದು. ಇವೆಲ್ಲವೂ ಕ್ಷತ್ರದ ಅಂಗಗಳಾಗಿರುವುವು. ಇವು ಮುಂದೆ ವಿಶೇಷ ವರ್ತನೆಯ ಪಂಚ ವಲಯಗಳು ಎಂಬ ಪ್ರಕರಣದಲ್ಲಿ ವಿವರಿಸಲ್ಪಡುವುವು.

ಸಾಮ, ಯಜುಸ್, ಋಕ್, ಅಥರ್ವ, ಉಪನಿಷತ್, ವೇದಗಳು ಕ್ರಮವಾಗಿ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳೆಂಬ ಬಿರುದುಗಳನ್ನು ಆಯಾ ಲಕ್ಷಣಕ್ಕನುಗುಣವಾಗಿ ಹೊಂದಿರುವುವು.

| | |
|---|---|
| 1) ಋಕ್ — ವೈಶ್ಯ — ಹಳದಿ | 2) ಗಾಯತ್ರೀ–ಶ್ರೋತ್ರಿಯ |
| ಯಜುಸ್ – ಕ್ಷತ್ರಿಯ — ಕೆಂಪು | ತ್ರಿಷ್ಟುಭ್ — ಕ್ಷತ್ರಿಯ |
| ಸಾಮ — ಶ್ರೋತ್ರಿಯ– ಶ್ವೇತ | ಜಗತೀ — ವೈಶ್ಯ |
| ಅಥರ್ವ — ಶೂದ್ರ — ಕೃಷ್ಣ | |
| ಉಪನಿಷತ್–ನಿಷಾದ — ವರ್ಣರಹಿತ | |

ಇತ್ಯಾದಿ ವರ್ಣನೆ ವಿವರಣೆಗಳ ರಹಸ್ಯವು ಸರ್ವಸಾಮಾನ್ಯವಾಗುವಂತೆ ಇನ್ನೂ ಪ್ರಕಾಶವಾಗದೆ ಇರುವುವು. ಇವುಗಳ ಪಾರಿಭಾಷಿಕ ರಹಸ್ಯ ಭೇದಕ್ಕಾಗಿ ಅಪರಿಮಿತಸಂಖ್ಯೆಯಲ್ಲಿ ಗ್ರಂಥಗಳು ಹೊರಹೊಮ್ಮಬೇಕಾಗಿವೆ. ವೇದ, ವರ್ಣ, ಆಕಾರಗಳ ಪರಸ್ಪರ ಹೊಂದಿಕೆ, ಹೋಲಿಕೆಗಳು ಇಂದ್ರಿಯ ಮಟ್ಟದ ಮತ್ತು ಇಂದ್ರಿಯಾತೀತವಾದ ಶಾಸ್ತ್ರಗಳನ್ನು ತಲೆ ಬಗ್ಗಿಸುವಂತೆಯೂ ತಲೆದೂಗುವಂತೆಯೂ ಮಾಡುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವೇದೋಕ್ತವಾದ ಜೀವನ ಯಜ್ಞವನ್ನು ಆಚರಿಸುವುದಕ್ಕೆ ಋಕ್ ಸಾಮ ಯಜುರಥರ್ವ ಉಪನಿಷತ್ ಲಕ್ಷಣಗಳು ಮಾರ್ಗದರ್ಶಕವಾಗಿರುತ್ತವೆ. ಉಪನಿಷತ್ತೆಂಬ ನಿಷಾದವು ಋಕ್ಸಾಮಯಜುರಥರ್ವಗಳಲ್ಲಿ ಗರ್ಭೀಕೃತವಾಗಿರುತ್ತದೆ. ಈ ಲಕ್ಷಣಗಳಲ್ಲಿ ಯಾವುದೊಂದು ಇಲ್ಲದಿದ್ದರೂ ಜೀವನಯಜ್ಞವು ಸಾಗುವುದಿಲ್ಲ; ಯಜ್ಞವಾಗುವುದಿಲ್ಲ; ಸಂಸ್ಕೃತಿಯ ಉನ್ನತಿಯ ಸೋಪಾನಗಳ ಆರೋಹಣವಾಗುವುದಿಲ್ಲ.

ಭಾಷೆಯ ಅಪರಿಚಯದಿಂದಲೂ ಆವರಣಗಳ ಭಾರದಿಂದಲೂ ಮೇಲ್ಕಂಡ ವಿಷಯಗಳ ವಿಶ್ವವ್ಯಾಪ್ತಿಯನ್ನು ತಿಳಿಯಲು ಸಾಧ್ಯವಾಗದಿರಬಹುದು. ವೇದೋಕ್ತವಾದ ಆಚಾರದ ಪರಿಮಿತಿಯಲ್ಲಿ ಸುವ್ಯವಸ್ಥಿತವಾದ ಸಮಸ್ತ ಕಾರ್ಯಗಳೂ ದೇಹಿಯಿಂದ ವ್ಯಕ್ತವಾಗುವುದಕ್ಕೆ ವಿವೇಕಯುತ ಯತ್ನವು ಆವಶ್ಯಕ.

[ನಿಷಾದ, ಶೂದ್ರ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ವೃತ್ತಿಕರ್ಮಗಳ ಜ್ಞಾನ ಮತ್ತು ಆಚರಣೆಗಳಿಗೆ ಬ್ರಾಹ್ಮೀ (ಸಂಸ್ಕೃತ) ಭಾಷಾಭ್ಯಾಸವು * ಆವಶ್ಯಕ. ಸಂಸ್ಕೃತಿಯ ತಿಳಿವಳಿಕೆಗೆ ಆವಶ್ಯಕವಾದ ಸಂಸ್ಕೃತ ಭಾಷೆಯ ಜ್ಞಾನವಿಲ್ಲದವರು ಜೀವನಾಧಾರವಾದ ಆಹಾರ ವಸ್ತುಗಳನ್ನು ಬೆಳೆದು ಪಡೆಯುವುದಕ್ಕೆ ಸಂಬಂಧಪಟ್ಟ ವೃತ್ತಿಗಳನ್ನು ಕೈಕೊಳ್ಳುವುದಕ್ಕೂ ಪ್ರಕೃತಿಯಿಂದ ಸಾಕ್ಷಾತ್ತಾಗಿ ದೊರೆಯುವ ವಸ್ತುಗಳನ್ನು ಉಪಯೋಗಿಸಿಕೊಳ್ಳುವುದಕ್ಕೂ ಅನರ್ಹರಾಗಿರುತ್ತಾರೆ. ವೃತ್ತಿಗಳ ಮಹಿಮೆ, ಭೂದೇವೀ ಮಹಿಮೆ, ಸೃಷ್ಟಿಸ್ಥಿತಿಲಯಗಳನ್ನು ಸಂಸ್ಕೃತ ಭಾಷಾಮಯ ಗ್ರಂಥಗಳಿಂದಲೇ ತಿಳಿಯಬೇಕಾಗಿದೆ. ಜಗತ್ತಿಗೆಲ್ಲಾ

---

* ಬ್ರಾಹ್ಮೀ (ಸಂಸ್ಕೃತ) ಭಾಷಾಭ್ಯಾಸಕ್ಕೆ ಅಮರಕೋಶವೆಂಬ ನಿಘಂಟಿನ ಕಂಠಪಾಠವು ಅಪಾಯಕಾರಿ ಎಂದು ಶಿಕ್ಷಕ ಧುರೀಣರ ಅನುಭವ. ಬೋಧನಶಾಸ್ತ್ರ ಮತ್ತು ಕಲೆಗಳ ದೃಷ್ಟಿಯಿಂದ ಶುಷ್ಕವಾದ, ನೀರಸವಾದ ನಿಘಂಟಿನ ಕಂಠಪಾಠವು ಸರ್ವಥಾ ಸಮ್ಮತವಲ್ಲವಾಗಿದ್ದು ಮಾನವನ ವಿವೇಚನಾಶಕ್ತಿ ಪ್ರತಿಭಾಶಕ್ತಿಗಳನ್ನು ಅಡಗಿಸುವುದು ಮತ್ತು ಸಂಸ್ಕೃತಶಿಕ್ಷಣವೇ ವಿಶೇಷವಾಗಿ ಔದಾಸೀನ್ಯಕ್ಕೆ ಗುರಿಯಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತೃಭಾಷೆಯಾದ ಸಂಸ್ಕೃತಭಾಷೆಯಲ್ಲಿ ಶಿಕ್ಷಿತರಾಗಿರುವವರು ಭೂಮಿಯನ್ನು ಉಳುವುದೆಂಬ ಯಜ್ಞವನ್ನು ನಡೆಸುವುದಕ್ಕೆ ಅರ್ಹರು, ಸಂಸ್ಕೃತ ಭಾಷೆಯ ಅರಿವಿಲ್ಲದವರು ಭಾರತದಲ್ಲಾಗಲೀ ವಿಶ್ವದಲ್ಲೇ ಆಗಲಿ ಯಾವ ವೃತ್ತಿಯನ್ನೂ ಚರಿತಾರ್ಥವಾಗುವಂತೆ ಕೈಗೊಂಡು ನಡೆಸಲು ಅರ್ಹರಲ್ಲವೆಂಬುದೂ, ಅಂತಹವರ ಬಾಳು ಮಾನವ ಜೀವನಯಜ್ಞವೆನಿಸುವುದಿಲ್ಲವೆಂಬುದೂ ಸ್ವತಸ್ಸಿದ್ಧವಾಗಿವೆ. ]

ವೃತ್ತಿಕರ್ಮಗಳೇ ಪ್ರಯೋಗಗಳು! ಜೀವನವೇ ಪ್ರಯೋಗಯಜ್ಞ!!

ನಿತ್ಯಜೀವನಯಾತ್ರೆಯಲ್ಲಿ ಶ್ರೋತ್ರಿಯಾದಿ ಪಂಚಗುಣಶಕ್ತಿಕರ್ಮಗಳು ಮತ್ತು ಈ ಪಂಚಗುಣಶಕ್ತಿಕರ್ಮಸಾಧಿತವಾದ ಪಂಚವೃತ್ತಿ(ಆಚಾರ-ವರ್ತನೆ ಅಥವಾ ವರ್ಣ) ಗಳು ಪ್ರತಿದೇಹಿಯನ್ನೂ ಅವಲಂಬಿಸಿರುವುವು. ಇವುಗಳಿಂದ ವ್ಯಷ್ಟಿ–ಸಮಷ್ಟಿಫಲಪ್ರದಗಳಾದ ಅಭ್ಯುದಯಗಳು ನಡೆಯುವುವು. ಸಾಮೂಹಿಕವೂ ವೈಯಕ್ತಿಕವೂ ಆದ ಲೋಪದೋಷಗಳಿಗೆ ಋಣಬದ್ಧದೇಹಿಗಳ ಕರ್ಮಗಳಲ್ಲಿ ಅಸಂಪೂರ್ಣತೆಯೇ ಕಾರಣವು. ಆದುದರಿಂದ ತೂಗುವ ತುಲೆಯನ್ನೂ ಸಮತೆಯನ್ನೂ ಸರಿ ತೂಗಿಸುವುದಕ್ಕಾಗಿ ಪ್ರಭುತ್ವವನ್ನು ಸರ್ವರೂ ಪ್ರಯೋಗಿಸಬೇಕು. ಋಣಾನುಬಂಧದಂತೆ ವೃತ್ತಿ-ವರ್ಣದಲ್ಲಿ ನಿಷ್ಣಾತರಾದವರಿಂದ ಆಯಾ ವೃತ್ತಿಕರ್ಮಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ನಡೆಸಿ ಶಾಂತಿಯು ಪ್ರವಹಿಸುವಂತೆ ಮಾಡಬೇಕಾಗಿದೆ.* ಇಂತಹ ಒಂದು ವರ್ಣದ ಕೆಲಸವು ಪೂರ್ಣವಾಗಿ ಶಾಸ್ತ್ರೀಯವಾಗಿ ನಡೆಯುವುದಕ್ಕೂ ನಡೆಯುತ್ತಿರುವ ಕೆಲಸವನ್ನು

---

* ವಿಶ್ವದಲ್ಲಿ ಭೌತಿಕಶಾಸ್ತ್ರ ಪ್ರಯೋಗ ವಿವರಣೆಯು ಸಾರ್ವತ್ರಿಕವಾದರೂ ನಿಷ್ಣಾತರಿಗೆ ಮಾತ್ರ ಮೀಸಲಾಗಿರುವುದರಿಂದಲೂ, ಅದರ ಸಂರಕ್ಷಣೆ ಮತ್ತು ವಿಸ್ತರಣಕ್ಕೆ ಪ್ರಕೃತಿಯಿಂದ ಪ್ರೋತ್ಸಾಹಿತವಾದ ಆವರಣಗಳುಳ್ಳ ದೇಶ, ಪ್ರದೇಶ, ಸಮಾಜ, ಕುಟುಂಬ, ವ್ಯಕ್ತಿಗಳು ಐಹಿಕ ವ್ಯಾಪಾರಗಳ ಮಿತಿಯಲ್ಲಿ ಬದ್ಧರಾಗಿರುವುದರಿಂದಲೂ ಪಾಶ್ಚಾತ್ಯರಲ್ಲಿ ಮಾತ್ರ ಅದು ಅಭ್ಯುದಯವನ್ನು ಹೊಂದುತ್ತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರೀಕ್ಷಿಸುವುದಕ್ಕೂ ಸಹಕರಿಸುವುದಕ್ಕೂ ನೀತ್ಯನುಶಾಸನಾದಿಗಳಿಂದ ಲೋಪದೋಷಗಳನ್ನು ಹೋಗಲಾಡಿಸಿ, ಕ್ರಮಪಡಿಸಿ ಪೂರ್ಣಫಲದಾಯಕವಾಗುವಂತೆ ಮಾಡುವುದಕ್ಕೂ ಇತರ ನಾಲ್ಕು ವರ್ಣಗಳೂ ಹೊಣೆಗಾರಿಕೆಯನ್ನು ಹೊತ್ತಿವೆ. ತಮ್ಮ ಹೊಣೆಗಾರಿಕೆಯ ಪರವಾಗಿ ಮತ್ತು ಇಂತಹ ಹೊಣೆಗಾರಿಕೆಯುಳ್ಳ ವ್ಯಕ್ತಿಗಳನೇಕರ ಪರವಾಗಿ ನಿರ್ವಾಹ ಮಾಡುವ ಸಮರ್ಥರಾದ ಕೆಲವು ವ್ಯಕ್ತಿಗಳಾದರೂ ವಿಚಾರಪರತೆಯಿಂದ ನಿಯಂತ್ರಗಳಾಗಿರಬಹುದಾದ ಸಂವಿಧಾನವೂ ರಾಜನೀತಿಯಲ್ಲಿ ಹೇಳಲ್ಪಟ್ಟಿದೆ.

ಸಂಸ್ಕೃತಿ ವಿಮರ್ಶೆಪ್ರಯೋಗಗಳಲ್ಲಿಯೂ ಆಚಾರವ್ಯವಸ್ಥಾಕ್ರಮದಲ್ಲಿಯೂ ವಿಶ್ವದಲ್ಲಿ ಕಾಣುವ ಆಚಾರಗಳ ತಾರತಮ್ಯ ಸಾಮ್ಯಗಳ ಪರಿಶೀಲನೆಯಲ್ಲಿಯೂ ಅಪರೋಕ್ಷಜ್ಞಾನಾನಂದಕ್ಕೆ ದಾರಿ ತೋರಿಸುವ ಅತ್ಯುನ್ನತ ಮಟ್ಟದ ಮತ್ತು ಸರ್ವ ಸುಲಭವಾಗಿರುವಂತೆ ಸರ್ವ ಹಿತಕರವಾಗಿರುವಂತೆ ಏರ್ಪಟ್ಟ ಹಂತಗಳಿಂದ ಕೂಡಿದ ಏಕೈಕವಾದ ಬ್ರಾಹ್ಮೀ ಸಂಸ್ಕೃತಿಯೂ ಬ್ರಾಹ್ಮಣಾಚಾರವೂ ಸುಮುಖ(ಆಕ್ಟೀವ್) ವಾದವುಗಳು. ಇವುಗಳೇ ಸಂಸ್ಕೃತಿ-ಆಚಾರವೆಂದು ಸಾಮಾನ್ಯವಾಗಿ ಹೇಳಲ್ಪಡುವವುಗಳು ಇವುಗಳಿಗೆ ಬೇರೆಯಾದುದೆಲ್ಲವೂ ಅನುಸಂಧಾನ ವರ್ಜ್ಯಗಳೆನಿಸುವುವು. ಇವುಗಳು ದುರ್ಮುಖ (ಪ್ಯಾಸಿವ್) ವಿಮುಖ (ನೆಗೆಟಿವ್) ರೂಪಗಳನ್ನು ತಾಳುವುವು. ದುರ್ಮುಖವು ತಟಸ್ಥವಾಗಿರುವುದು. ವಿಮುಖವು ವಿರುದ್ಧವಾಗಿ ಹಿಮ್ಮುಖವಾಗಿರುವುದು; ವಿಮುಖ ದುರ್ಮುಖ ಸುಮುಖ ವೃತ್ತಿಕರ್ಮಗಳು ಮೇಲುಮೇಲಿನ ಸೋಪಾನಗಳನ್ನು ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಕ್ರಮೇಣ ಅನುರೋಧವೃತ್ತಿಗೆ ತಕ್ಕಂತೆ ಸ್ವಕಲ್ಪಿತ ಋಣಾನುಬಂಧರೀತ್ಯಾ ಪಡೆಯುವುವು. ಏಕೆಂದರೆ ಸರ್ವರೂ ಬ್ರಹ್ಮಾನಂದವೆಂಬ ಸ್ವಸ್ವರೂಪಾವಸ್ಥಾನಕ್ಕೆ ಬಾಧ್ಯರೆಂದು ಬ್ರಾಹ್ಮಣಾಚಾರವು ಘೋಷಿಸುವಂತೆ, ಸುಖಶಾಂತಿಯನ್ನು ಸರ್ವರೂ ಹೊಂದಲೇಬೇಕಾಗಿರುತ್ತದೆ. ಸುಮುಖವಾದ ವೃತ್ತಿಕರ್ಮದಿಂದ ಬ್ರಾಹ್ಮಣಾಚಾರವನ್ನು ಪಾಲಿಸುವವರೂ ಸಹ ಸ್ವಕಲ್ಪಿತ ಋಣಪಾಶಕ್ಕೆ ಕಟ್ಟುಬಿದ್ದು ದುರ್ಮುಖ ವಿಮುಖವೃತ್ತಿಕರ್ಮಗಳನ್ನೂ ಸಾಧಿಸುವರು. ಮತ್ತು ಅದಕ್ಕೆ ತಕ್ಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಆವರಣಗಳುಳ್ಳ ದೇಶ ಪ್ರದೇಶ ಸಮಾಜ ಕುಟುಂಬಗಳನ್ನು ಆಶ್ರಯಿಸಿ ಸ್ವೇಚ್ಛೆಯನ್ನು ಪೂರ್ತಿಗೊಳಿಸುವರು. (ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ.)

## ವರ್ತನೆ ಮಿತಿ

ಪ್ರಕೃತಿಲೀಲೆಯಲ್ಲಿ ಕಾಲ, ದೇಶ, ಪಾತ್ರಗಳು ದೇಹಿಗಳ ವರ್ತನೆಯನ್ನು ಮಿತಿಗೊಳಿಸುವುವು; ಮಿತಿ ಮೀರುವಂತೆಯೂ ಮಾಡುವುವು. ಸ್ವಾತಂತ್ರ್ಯ ಸಾಹಸಗಳು ವೃತ್ತಿಗಳಿಗೆಲ್ಲಾ ಸಹಜವಾಗಿರುವುವು. ವೈಯಕ್ತಿಕ ಸಾಹಸಗಳು ಮತ್ತು ವೈಶಿಷ್ಟ್ಯಗಳು ಒಂದೊಂದು ವೇಳೆ ಮಿತಿ ನಿಯಮಗಳನ್ನು ಉಲ್ಲಂಘಿಸುವುವು. 'ಪ್ರಕೃತಿಂ ಯಾಂತಿ ಭೂತಾನಿ' ಎಂಬಂತೆ ದೇಹಿಗಳು ಪ್ರಕೃತಿಶರಣರಾದರೂ 'ಪ್ರಕೃತಿಃ ತ್ವಾಂ ನಿಯೋಕ್ಷ್ಯತಿ' ಎಂಬಂತೆ ದೇಹಿಗಳನ್ನು ಪ್ರಕೃತಿಯು ಪ್ರಚೋದಿಸಿದರೂ ದುರಭಿಮಾನದಿಂದ ಪ್ರಕೃತಿಯನ್ನೇ ಎದುರಿಸುವ ವ್ಯಾಪಾರಗಳು ನಡೆಯುವುವು. ಇಂತಹ ಸಂದರ್ಭಗಳಲ್ಲಿ ವಿವೇಕಿಗಳಾಗಿ ವರ್ತಿಸಲು ದೇಹಿಗಳಿಗೆ ಅನುಭವ ಬೋಧಕರು ಬೇಕು. ಕ್ಷತ್ರದ ಅಂಗಗಳಾದ ವೈಶ್ಯ, ಕ್ಷತ್ರಿಯ, ಶ್ರೋತ್ರಿಯ, ಶೂದ್ರ, ನಿಷಾದಗಳನ್ನು ಸಂಸ್ಕೃತರೀತಿಯಲ್ಲಿ ಪ್ರಯೋಗಿಸಿ ಋತಕ್ಕೆ ಅನುರೋಧ ಕ್ರಮದಲ್ಲಿ ನಡೆದು ಅನುಸಂಧಾನವನ್ನು ನಿರ್ವಹಿಸುವುದಕ್ಕೆ ತಕ್ಕ ಸಂವಿಧಾನಗಳು ಅನುಭವವನ್ನು ಬೋಧಿಸುವ ವೇದಾದಿಗಳಲ್ಲಿ ಪ್ರಜೆಗಳ ಪ್ರಯೋಜನಕ್ಕಾಗಿ ಪ್ರಪಂಚಿತವಾಗಿವೆ. ಈ ಐದು ಬಗೆಯ ವ್ಯಾಪಾರಗಳ ಪರಸ್ಪರ ಸಹಾಯವೂ ಪರಸ್ಪರ ಸದ್ಭಾವನೆಯೂ ಸಹ ಪ್ರತಿ ಪ್ರಜೆಯ ಅನುಷ್ಠಾನ ಮತ್ತು ಅನುಸಂಧಾನಗಳಿಗೆ ಅತ್ಯವಶ್ಯಕವಾಗಿರುವುದರಿಂದ ಪ್ರಮಾಣ ಪರಿಮಾಣಗಳ ಸಂಯೋಜನವಿಭಜನ ರೀತ್ಯಾ ದೇಹಿಗಳು ವಿವೇಕದಿಂದ ವಿಮರ್ಶಿಸಿ ಅಳವಡಿಸಿಕೊಳ್ಳಬೇಕಾಗಿದೆ. ಅಮೃತಪ್ರದವಾದ ಯಜ್ಞಕ್ಕೆ ಅವಶ್ಯಕವಾದ ಋಗಾದಿಪಂಚಕಗಳಂತೆ, ವೈಶ್ಯಾದಿಪಂಚಕಗಳ ಸಮನ್ವಯ–ಸಾಮರಸ್ಯವು ಜೀವನಯಜ್ಞದಲ್ಲಿ ರಸ–ಆನಂದ (ಅಮೃತ) ವನ್ನು ಕರೆಯುವುದು.

ಋಣ ಸಂಕಲ್ಪಗಳಿಗೆ ತಕ್ಕಂತೆ ಸೃಷ್ಟಿಯಲ್ಲಿ ಕರ್ಮವು ವ್ಯವಹಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನಾರಂಭಿಸುವುದು. ಗುಣತ್ರಯಗಳ ಸಮತ್ವ ತುಲೆಯು ತಪಸ್ಸಿನ ಮಹಿಮೆಯಿಂದ ಅಥವಾ ಲೋಪದೋಷಗಳಿಂದ ವ್ಯತ್ಯಾಸವಾಗುವುದು. ಶಾಖದಿಂದ ನೀರು ಕುದಿಯುವಂತೆ ಮತ್ತು ಅದರ ಹೆಚ್ಚು ಕಡಿಮೆಯಿಂದ ಆವಿ, ಹಿಮರೂಪಗಳನ್ನು ಹೊಂದುವಂತೆ, ಶಾಖಾತಿರೇಕದಿಂದ ಕೆನೆಗಟ್ಟಿದ ಹಾಲು ಇದಕ್ಕಿದ್ದ ಹಾಗೆ ಎಂಬಂತೆ ಉಕ್ಕಿ ಸುರಿಯುವಂತೆ ಶಕ್ತಿ ತ್ರಯ ಗಳಿಂದ ಪರಿಣಾಮವನ್ನು ಹೊಂದುವ ಜಗತ್ತಿನಲ್ಲಿ ವ್ಯಾಪಾರಗಳು ಅವಶ್ಯ ವಾಗಿ ಅವಿಚ್ಛಿನ್ನವಾಗಿ ತಲೆದೋರುವುವು. ಇದು ತಪಸ್ಸಿನ ಫಲವಾಗಿ ತಪಸ್ಸಾಗಿ (ಕರ್ಮವಾಗಿ) ರುವುದು. ತಪಸ್ಸು ಸ್ವಾಭಾವಿಕ. ತಪಸ್ಸು (ಕರ್ಮವು) ಇಲ್ಲದಿರಲು ಸಾಧ್ಯವಿಲ್ಲ. 'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್'- ಎಂಬ ಅನುಭವಸೂಕ್ತಿಯು ಯಥಾರ್ಥವಾಗಿರು ತ್ತದೆ. ಕರ್ಮವು ತಪಸ್ಸಾಗಿ ತಪಸ್ಸು ತಪ್ತವಾಗಿ ಗುಣತ್ರಯಗಳ ವಿಭಜನ ಸಂಯೋಜನ ಸಂವಿಧಾನಕ್ಕೆ ಕಾರಣವಾಗುವುದು. ಪ್ರೋತ್ಸಾಹಕರ ಗಳಾದ ಶಕ್ತಿತ್ರಯಗಳೂ ಹಿಂಬಾಲಿಸುವುವು. ಇವೆಲ್ಲವೂ ಪರಸ್ಪರ ಹೊಂದಿಕೊಂಡು ಹೆಣೆದುಕೊಂಡು ಇರುವುವು. ಸುತ್ತುಮುತ್ತಲಿನ ಸನ್ನಿ ವೇಶಗಳೆಂಬ ಪ್ರಕೃತಿ-ಪರಿಸ್ಥಿತಿಯ ಆವರಣವು ಬಲವಾಗಿದ್ದು ಶಕ್ತಿ ಗಳನ್ನು ಪ್ರಚೋದಿಸಿ ಪ್ರಯೋಗಿಸುವುದಕ್ಕೆ ಅವಕಾಶವಾದಾಗ ಇಂದ್ರಿ ಯಗಳ ವಿಕಾರದಿಂದ ಬೇಡಿಕೆಗಳು ಸ್ವಾಭಾವಿಕವಾಗಿ ಹೊರಪಡುವುವು. ಇವು ಋಣ ಸಂಕಲ್ಪ ಕರ್ಮಗಳಿಂದ ಸಿದ್ಧಿಸುವುವು. ದೇಹಿಗಳು ತಮ್ಮ ಸಂಕಲ್ಪಕ್ಕೆ ತಾವೇ ಅಧೀನರಾಗುವಂತೆ ವರ್ತನೆಗೂ ಅಧೀನರಾಗಿ ಫಲ ವನ್ನು ಅನುಭವಿಸುವವರಾಗುತ್ತಾರೆ. (ಋಷ್ಯಶೃಂಗಚರಿತ್ರೆ)

## ಆವರಣಗಳು

ಏಕೈಕ ಆಚಾರದಲ್ಲಿ ಕಂಡ ಶ್ರೋತ್ರಿಯಾದಿ ಪಂಚವಿಧ ಆಚಾರ ನಾನಾರೂಪಗಳಿಗೆ ಕಾರಣವಾದ ಪಂಚಾವರಣಗಳನ್ನು ಗಮನಿಸುವುದು ಪ್ರಥಮ ಕಲ್ಪವಾಗಿರುತ್ತದೆ.

ಮಿತಿ ಸೋಪಾನಗಳಿಗೆ ಮತ್ತು ಪ್ರಕೃತಿ-ಲೀಲೆಗೆ ಒಳಪಟ್ಟು ಸಂಸ್ಕೃತಿಯನ್ನು ಅನುಸರಿಸುವ ಕ್ರಮಗಳಲ್ಲಿ ಋಣಾನುಬಂಧ ರೀತಿಯಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಂಘಾತಾತ್ಮನು ದೇಹವನ್ನು ಧರಿಸುತ್ತಾನೆ. ಇದೇ ಬಹಿರಂಗವಾದ ಮೊದಲನೇ ಆವರಣವಾಗಿರುತ್ತದೆ. ಈ ಆವರಣವು ಜನ್ಮಕಾರಣವಾದ ಸನ್ನಿವೇಶವನ್ನು ಅವಲಂಬಿಸಿ, ಅದರೊಳಗೆ ಐಕ್ಯವಾದಂತೆ, ಕುಟುಂಬ-ಕುಲವೆಂಬ ಸಂಪ್ರದಾಯವೆನಿಸುತ್ತದೆ.

ಹಲವಾರು ಕುಟುಂಬಗಳಿಗೆ ಸಮಾನವಾದ ವೃತ್ತಿ, ಅಭ್ಯಾಸ, ಸಂಸ್ಕೃತಿ, ಮನೋಧರ್ಮ, ಅನುಷ್ಠಾನ (ಆಚಾರ) ಗಳನ್ನು ರೂಪಿಸಿ ತದನುಗುಣವಾಗಿ ಕುಟುಂಬ ಮತ್ತು ವ್ಯಕ್ತಿಗಳು ಆಯಾ ಮಿತಿಯಲ್ಲಿ ಪ್ರವರ್ತಿಸುವಂತೆ ಸಹಕರಿಸುವ ಸಮಾಜ 2 ನೆಯ ಆವರಣವಾಗಿರುತ್ತದೆ.

ಪ್ರಾದೇಶಿಕ ಮತ್ತು ಭೌಗೋಳಿಕವಾತಾವರಣಕ್ಕೆ ಸೇರಿದ ಸಮಾಜಗಳು ಪ್ರಕೃತಿ ನಿಯಮ ಮತ್ತು ವ್ಯಾಪಾರಗಳಿಗೆ ತಕ್ಕಂತೆ ವೇಷ ಭಾಷಾ ಭೂಷಣಗಳನ್ನೂ ವೃತ್ತಿಕರ್ಮಗಳನ್ನೂ ಸಂಸ್ಕರಿಸಿ ಅಭ್ಯಾಸ ಮಾಡಬೇಕಾಗಿರುವುದರಿಂದ ಸುಖಶಾಂತಿ ಪ್ರದಾನುಭವಕ್ಕೆ ಮೂರನೆಯದಾದ ಪ್ರಾದೇಶಿಕಾವರಣವು ಸಹಕರಿಸುತ್ತದೆ.

ಪ್ರದೇಶಗಳ ಪರಸ್ಪರ ಭಾವನೆಗೂ ಮಿತಿಗೂ ಪ್ರಕೃತಿಯು ಕಾರಣವಾಗಿ ಸಮಾನವಾದ ಶಾರೀರಕ, ಮಾನಸಿಕ ವೃತ್ತಿವ್ಯಾಪಾರಗಳುಳ್ಳ ಕೆಲವು ಪ್ರದೇಶಗಳು ರಾಷ್ಟ್ರ-ದೇಶದ ಪರಿಮಿತಿಯ ಏಕೈಕ ಆಚಾರ-ಧರ್ಮ-ರಾಜನೀತಿ ಸಂಪ್ರದಾಯಾದಿಗಳ ನೆರಳಿನಲ್ಲಿ ಸೇರುವುವು ಈ ಹಂತದಲ್ಲಿ ಪ್ರದೇಶಗಳ ವೃತ್ತಿ ವ್ಯಾಪಾರಗಳು ಸಾಮಾನ್ಯವಾಗಿ ಸಂಸ್ಕೃತವಾಗಿ ರಾಷ್ಟ್ರೀಯ-ದೇಶೀಯವೆಂಬ ನಾಲ್ಕನೇ ಆವರಣಛತ್ರದ ನೆರಳಿನಲ್ಲಿ ಒಟ್ಟುಗೂಡುವುವು.*

---

* 1) 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ.' ಸ್ವರ್ಗವು ಸುಖವನ್ನೂ ಸುಖ ಜೀವನವನ್ನೂ ಸೂಚಿಸುತ್ತದೆ. ಸ್ವರ್ಗಕ್ಕಿಂತಲೂ ಜನನೀ ಮತ್ತು ಜನ್ಮಭೂಮಿಗಳು ಹೆಚ್ಚಿನವು ಎಂದರೆ ಸ್ವರ್ಗ ಅಥವಾ ಸುಖಕ್ಕೆ ವಿರೋಧವಾಗಿದ್ದರೂ ಅವು ಗೌರವಿಸಲ್ಪಡತಕ್ಕವುಗಳು. ಜನ್ಮಭೂಮಿವ್ಯಾಪ್ತಿಯು ಎಲ್ಲಾ ಆವರಣಗಳನ್ನೂ ಒಳಗೊಂಡಿರುತ್ತದೆ. ಮರುಭೂಮಿಯು ಜನ್ಮಭೂಮಿಯಾಗಿರುವ ದೇಹಿಗಳಿಗೆ ಅದೇ ಸುಖಕರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ನಾಲ್ಕು ಆವರಣಗಳ ಜತೆಗೆ ದೇಹಿಯ ವೈಯಕ್ತಿಕ ವಾಸನಾ

---

ವಾಗಿರುತ್ತದೆ. ಅತಿವೃಷ್ಟಿ ಪ್ರದೇಶದಲ್ಲಿರುವವರಿಗೆ ಆ ಪ್ರದೇಶವೇ ಹಿತಕರವು. ಕುಟುಂಬ-ಸಮಾಜಗಳೂ 'ಭೂಮಿ' ಎಂದರೆ ಸ್ಥಾನವೆನಿಸಿ ಹಿತವಾಗಿರುತ್ತವೆ. ಆದರೆ ಕುಟುಂಬದಿಂದ ದೇಶದವರೆಗೂ ಜನ್ಮಭೂಮಿಯ ವಿವರಗಳನ್ನು ತಿಳಿದು ಪರಸ್ಪರ ಸಂಭಾವನೆಯೆಂಬ ಋಣಋಣೀಭಾವವನ್ನು ವ್ಯಕ್ತಪಡಿಸಬೇಕಾದುದು ಸ್ವಾಭಾವಿಕ. ಜನ್ಮಭೂಮಿಯ ವ್ಯಾಪ್ತಿಯನ್ನೂ ಅದರ ವಿವರವನ್ನೂ ತಿಳಿದು ಸಂಭಾವನಾದಿ ಮನೋಭಾವಗಳಿಗೆ ಅವಕಾಶ ಕೊಡುವವರು ವಿರಳರಾಗಿರುತ್ತಾರೆ. ಆದರೆ ಶ್ಲೋಕವನ್ನು ಪಠಿಸಿ ಪ್ರತಾರಣೆ ಮಾಡುವವರು ಅಪರಿಮಿತ ಸಂಖ್ಯೆಯಲ್ಲಿರುತ್ತಾರೆ.

2) ಪ್ರಪಂಚದ ಒಂದೊಂದು ಭಾಗದಲ್ಲಿ ಪ್ರಾಕೃತಿಕ ಮಿತಿಗಳಲ್ಲಿ ಹುದುಗಿರುವವರು ಜನ್ಮಭೂಮಿಯನ್ನು ಸಂಕುಚಿತವಾಗಿ ನೋಡುವರು; ಮತ್ತು ಕೂಪಕೂರ್ಮದಂತೆ ಪ್ರಪಂಚವನ್ನು ಅಳೆಯುವವರಾದುದರಿಂದ ಆಚಾರ ವ್ಯವಹಾರಗಳೆಲ್ಲವೂ ಒಂದು ಮಿತಿಯಲ್ಲಿ ಪ್ರವಹಿಸಿದರೂ ಅದೇ ಪೂರ್ಣವೆಂಬ ದುರ್ಭಾವನೆಗೆ ಅವಕಾಶ ಕೊಡುವರು. ಭೂಮಿಯನ್ನೆಲ್ಲಾ ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ಪರೀಕ್ಷೆಗೆ ಗುರಿಪಡಿಸಿ ಭೂಮಿಯ ಸ್ವರೂಪವನ್ನೂ ಜನ್ಮಭೂಮಿಗಳ ಸ್ವರೂಪವನ್ನೂ ತಿಳಿಯುವುದಕ್ಕೆ ವ್ಯವಹಾರದಲ್ಲಿ ಸೌಕರ್ಯಗಳು ಅತಿಶಯವಾಗಿರುವಾಗ ಆಚಾರ ವ್ಯವಹಾರಗಳನ್ನು ಕೇವಲ ಸಂಕುಚಿತ ದೃಷ್ಟಿ ವ್ಯಾಪಾರಕ್ಕೆ ಗುರಿಮಾಡಲಾಗುವುದಿಲ್ಲ. ರಾಜನೀತಿ ನೇತ್ರೋನ್ಮೀಲನವಾಗಿ ಜ್ಞಾನವು ವಿಕಾಸವಾದಂತೆ ಉದಾರ ಮನೋಭಾವವೂ ಉದಾರ ಚರಿತೆಯೂ ಪ್ರಕಾಶವಾಗುವುವು. ಈ ಬಗೆಯ ವಿಕಾಸವು ತಪಸ್ಸಿನಿಂದ ದಿವ್ಯದೃಷ್ಟಿಯನ್ನು ಬಲಪಡಿಸುವುದರ ಫಲವಾಗಿ ವೃದ್ಧಿಯಾಗುವುದು. ಆದರೆ ತಪಃ ಫಲವನ್ನು ಇಂದ್ರಿಯ ಮಟ್ಟದಲ್ಲಿರುವವರಿಗೆ ವಿನಿಯೋಗ ಮಾಡುವುದಕ್ಕೆ ತಕ್ಕ ಸಾಮಗ್ರಿಗಳು ಬೇಕಾಗುವುವು. ಅಂತಹ ಸಾಮಗ್ರಿಗಳು ಈಗ ಹೇರಳವಾಗಿರುತ್ತವೆ. ಈ ಬಗೆಯ ವಿಕಾಸ ಸಾಧನವನ್ನು ಕೈಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಋಣ ಸಂಸ್ಕೃತಿ ವಿಶೇಷ) ಎಂಬ ಅಪ್ರತ್ಯಕ್ಷವೂ ಅನಿರ್ದಿಷ್ಟವೂ, ನಿರ್ದಿಷ್ಟವಾಗಿದ್ದರೂ ಅನಿರ್ದಿಷ್ಟದಂತೆ ಕಾಣಿಸುವುದಾಗಿಯೂ ಇರುವ ಐದನೆಯ ಆವರಣವು ವ್ಯಕ್ತಿಯ ವ್ಯಾಪಾರವನ್ನು ನಿಯಮಗೊಳಿಸುವುದು ಮತ್ತು ಪ್ರಚೋದಿಸುವುದು.

ವೈಯಕ್ತಿಕವಾದ ಋಣ-ವಾಸನೆಯ ಪರಿಮಿತಿಯನ್ನು ಸಾಮಾನ್ಯವಾಗಿ ಕಂಡರಿಯಲು ಸಾಧ್ಯವಿಲ್ಲ. ಗುರುತು ಪರಿಚಯವಿಲ್ಲದ ವ್ಯಕ್ತಿಗಳಿಗೆ ಹಠಾತ್ತಾಗಿ ಗುರು-ಶಿಷ್ಯ, ಪತಿ-ಪತ್ನೀ, ಮೈತ್ರೀ-ದ್ವೇಷ ಸಂಬಂಧಗಳು ಸಂಭವಿಸುವುವು. ಈ ಸಂಬಂಧವು ಕಾರ್ಯಗತವಾಗುವವರೆಗೂ ದೇಹಿಗಳನ್ನು ಪ್ರವರ್ಧಮಾನ ಸ್ಥಿತಿಗೆ ತರುವ ಅನೇಕ ವಿಧವಾದ ಆವರಣಗಳು ಮತ್ತು ಪ್ರಯತ್ನಗಳು ಬಿಡಿಬಿಡಿಯಾಗಾಗಲೀ ಒಟ್ಟಾಗಿಯಾಗಲೀ ಈ (ಹೊಸ) ಸಂಬಂಧಕ್ಕೆ ಅನ್ವಯಿಸದೇ ಇರಬಹುದು ಆದರೂ ವೈಯಕ್ತಿಕವಾದ ಪರಸ್ಪರ ಋಣ ಸಂಬಂಧವೆಂಬ ಆವರಣವೇ ಹಠಾತ್ತಾಗಿ, ತಾತ್ಕಾಲಿಕವಾಗಿ ಪರಿಣಾಮಕಾರಿಯಾಗುವುದು. ಇದು ಹಿಂದಿನ ಕರ್ಮಫಲದ ಪ್ರಭಾವವಾಗಿಯೂ ಇರಬಹುದು. ಈ ಆವರಣವು ಸುಮುಖ (ಪಾಸಿಟಿವ್ ಆಕ್ಟಿವ್), ದುರ್ಮುಖ (ಪಾಸಿಟಿವ್ ಪ್ಯಾಸಿವ್), ವಿಮುಖ (ನೆಗೆಟಿವ್) ವಾಗಿದ್ದು ಅನುರೋಧಫಲ ವಿರೋಧಫಲಗಳನ್ನು ಉಂಟುಮಾಡುವುದು. ಮತ್ತು ಅನ್ವಯ ವ್ಯತಿರೇಕ ದೃಷ್ಟಾಂತಗಳಾಗಿ ಪರಿಣಮಿಸಿ ಸಂಸ್ಕೃತಿ-ಆಚಾರಗಳನ್ನು ಕ್ರಮಪಡಿಸಿ ರೂಪಿಸುವುದು.

ಸುಮುಖ, ದುರ್ಮುಖ ಮತ್ತು ವಿಮುಖಾವರಣಗಳು ವಿಭಜನ ಸಂಯೋಜನವಿಧಾನದ ಪ್ರಮಾಣಗಳಲ್ಲಿ ಅನಂತವಾಗಿರುವುವು. ಒಂದೊಂದು ಕಾಲದಲ್ಲಿ ಒಂದೊಂದು ಆವರಣದಲ್ಲಿ ಒಂದೊಂದು ವಿಧವಾಗಿ ಒಬ್ಬೊಬ್ಬ ದೇಹಿಯು ಅಭ್ಯಸ್ತಕರ್ಮವನ್ನು ನಿರ್ವಹಿಸುವ ಪರಿಸ್ಥಿತಿಯು ವ್ಯಕ್ತಿಗೇ, ಕರ್ತೃವಿಗೇ ಗೋಚರವಾಗದೆ, ಫಲದಿಂದ ಅನುಮೇಯವಾಗಿ,

---

. ಹಿಡಿದು ತಾತ್ಕಾಲಿಕ ವಿಕಸನ ಅನುಭವ ರೀತ್ಯಾ ಸಂಕುಚಿತವಾದ ಮತ್ತು ಅವಶ್ಯಕವೆಂದು ಮಾರೀಕೃತವಾದ ವಿವರಣೆಗಳನ್ನೇ ಒತ್ತಿ ಹೇಳಿ ಎತ್ತಿ ಹಿಡಿದರೆ ಶಾಸ್ತ್ರಾನುಭವಗಳಿಗೆ ಅಪಮಾನ-ದ್ರೋಹವನ್ನೆಸಿದಂತಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರ್ಕಮಾಡಿ ತಿಳಿಯಬೇಕಾಗಿರುತ್ತದೆ. ಅನ್ವಯ ವ್ಯತಿರೇಕ ದೃಷ್ಟಾಂತಗಳಿಂದ ಸಾಮ್ಯವೈಷಮ್ಯಗಳನ್ನು ತುಲನಾತ್ಮಕವಾಗಿ ಪರೀಕ್ಷಿಸಿ ಆಯಾ ಅಭ್ಯಸ್ತಕರ್ಮ(ಆಚಾರ)ಗಳ ಮೂಲತತ್ವಗಳನ್ನು ಮತ್ತು ಶ್ರೇಷ್ಠತ್ವವನ್ನು ತಿಳಿದು ದೃಢಪಡಿಸಿಕೊಳ್ಳುವುದೂ ಸಹ ಕರ್ತವ್ಯಕರ್ಮವೇ ಆಗಿರುತ್ತದೆ.

## ವರ್ತನೆ (– ವರ್ಣ, ವೃತ್ತಿ –) ಲಕ್ಷಣ ; ಸ್ವರೂಪ

ಸ್ವಾತಂತ್ರ್ಯವನ್ನು ಪ್ರಯೋಗಿಸದೆ, ವಿಶ್ವಸೇವೆ, ಜನಸೇವೆ, ಆತ್ಮಸೇವೆಗಳನ್ನು ಒಳಗೊಂಡ ಅನುಸಂಧಾನ ಕ್ರಮದಲ್ಲಿ 'ಶೋಧನಂ ರಾತಿ' ಎಂಬಂತೆ ಋಣವನ್ನು ಶೋಧಿಸುತ್ತಾ (ಕಳೆಯುತ್ತಾ) ಮತ್ತು 'ಶುಚಂ ದ್ರಾವಯತಿ' ಎಂಬಂತೆ ವ್ಯಸನವನ್ನು ಪರಿಹರಿಸುತ್ತಾ ಆರ್ಥಿಕ ಮತ್ತು ಪಾರಮಾರ್ಥಿಕ ಸುಖ ಸಂಪತ್ತುಗಳನ್ನು ಅನುಭವಿಸುವ ಶೂದ್ರವು ಮಾನವತೆಯ ಮಟ್ಟದಲ್ಲಿ ಸರ್ವರಿಂದಲೂ ಆಚರಿಸಲ್ಪಡತಕ್ಕುದು. ಶೂದ್ರವರ್ತನೆಯು (ವರ್ಣವು, ವೃತ್ತಿಯು) ಸ್ವಾಭಾವಿಕವಾದುದು; ಸರ್ವಸಾಮಾನ್ಯವಾಗಿ ಮೋಕ್ಷಮೂಲವಾದುದು. ಪಾದದಂತೆ ವಿಶ್ವಾಧಾರ ವಿಶ್ವವ್ಯಾಪಿಯಾದುದು. (1)

ಶಕ್ತಿ ಸ್ವಾತಂತ್ರ್ಯಗಳನ್ನು ಪ್ರಯೋಗಿಸಿ ಅನುಸಂಧಾನ ಕ್ರಮದಲ್ಲಿ ಭೂ ವ್ಯವಸಾಯ, ವಾಣಿಜ್ಯ, ಧನ ಮತ್ತು ವಿವಿಧ ಉದ್ಯಮಗಳಿಂದ ಪ್ರಪಂಚದಲ್ಲಿ ಪ್ರಜೆಗಳ ಹಿತಕ್ಕಾಗಿ ಸಂಘವಭಿವೃದ್ಧಿಯನ್ನು ಸಾಧಿಸುವುದು ವೈಶ್ಯವರ್ತನೆ (ವರ್ಣ,ವೃತ್ತಿ). 'ತದೇವಾನುಪ್ರಾವಿಶತ್' ಎಂಬಂತೆ "ಊರು" ಎಂದರೆ ವಿಸ್ತರಿಸುವ ಶಕ್ತಿಯಿಂದ ಪ್ರಕೃತಿಯನ್ನು ಒಳಹೊಗುವ (ವಿಶ್) ವೈಶ್ಯವು ಸಾರ್ವಜನಿಕ ಸಾರ್ವತ್ರಿಕವಾಗಿರುತ್ತದೆ. (2)

ಅನುಸಂಧಾನ ಕ್ರಮದಲ್ಲಿ ಪುರುಷಾರ್ಥಸಾಧಕವಾದ, ಸರ್ವರನ್ನೂ ಸರ್ವರ ಮನಸ್ಸನ್ನೂ ಸರ್ವ ವಸ್ತುಗಳನ್ನೂ ರಂಜನೆಗೊಳಿಸುವ ಮತ್ತು ನೀತಿ, ನಿಯಮ ಶಾಸನಗಳಿಂದ ಆಯಾ ಆಚಾರ ಸಂಸ್ಕೃತಿ ನೀತಿಗಳನ್ನು ಉದ್ದೀಪನಗೊಳಿಸಿ ಸುವ್ಯವಸ್ಥೆಗೊಳಿಸುವುದು, ಕ್ಷತ್ರಿಯವು. ಸಂರಕ್ಷಣಾ ಸೂಚಕವಾದ 'ಬಾಹು' ಎಂದರೆ ಪ್ರಯೋಗಿಸತಕ್ಕ ಪ್ರಭುಶಕ್ತಿ ಸ್ವಾತಂತ್ರ್ಯದಿಂದ ಕೂಡಿದುದು ಕ್ಷತ್ರಿಯವರ್ತನೆ (ವರ್ಣ–ವೃತ್ತಿ). (3)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಶಾಂತಿ ಸ್ಥಾಪನೆ ಪ್ರಸಾರಗಳಿಗೆ ಆವಶ್ಯಕವಾದ ದೈವೀಶಕ್ತಿಯನ್ನು ಅನುಸಂಧಾನದಿಂದ ರೂಢಿಸುವ ವರ್ತನೆ, ವರ್ಣ-ವೃತ್ತಿಯು ಶ್ರೋತ್ರಿಯ. ಮುಖವೆಂಬ ನಾದಬ್ರಹ್ಮ-ಶಬ್ದಗಳ ಅಮೃತ ಮಂಥನದಿಂದ ಪ್ರಕೃತಿಯ ಮತ್ತು ಋತದ ಸಮತೆಯನ್ನು ಸರಿದೂಗಿಸುವುದೇ ಶ್ರೋತ್ರಿಯವು. (4)

ಅನುಸಂಧಾನ ಕ್ರಮದಲ್ಲಿ ಮೇಲ್ಕಂಡವುಗಳನ್ನು ಒಳಗೆ, ಹೊರಗೆ ಕಾಯುತ್ತಾ ಸಂರಕ್ಷಿಸುವುದು ನಿಷಾದವೆನಿಸುವುದು. ಪಿಂಡಾಂಡದಲ್ಲಿಯೂ ಬ್ರಹ್ಮಾಂಡದಲ್ಲಿಯೂ ಸಮೀಪಸ್ಥವಾಗಿ (ನಿ + ಸದ್) ಕುಳಿತು ಕಾಯುವುದು ನಿಷಾದ-ವರ್ತನೆ-ವರ್ಣ-ವೃತ್ತಿಯಾಗಿರುತ್ತದೆ. (5)

ಅಪರಂಜಿಯಂತೆ ಇರುವ ಮೇಲ್ಕಂಡ ವರ್ತನೆಗಳಲ್ಲಿ ಒಂದೊಂದೂ ಶುದ್ಧವಾಗಿದ್ದುಕೊಂಡು ಇತರಾಪೇಕ್ಷೆಯಿಲ್ಲದೆ ವ್ಯವಹಾರವನ್ನು ನಡೆಸಲಾಗುವುದಿಲ್ಲ; ಹಾಗೆ ಇತರ ನಿರಪೇಕ್ಷೆಯಿಂದ ಸ್ವತಂತ್ರವಾಗಿರುವುದು ಅಭ್ಯಸ್ತ ಕರ್ಮವಾಗುವುದೂ ಇಲ್ಲ; ಸಂಸ್ಕೃತಿಯೂ ಅಲ್ಲ; ಆಚಾರವೂ ಆಗಲಾರದು; ವ್ಯವಹಾರವನ್ನು ಮುಂದರಿಸುವುದಿಲ್ಲ. ವೃತ್ತಿಪಾಷಂಡತ್ವವೆನಿಸಿ ದೂಷ್ಯವೇ ಆಗುವುದಲ್ಲದೆ ಅಸ್ತಿತ್ವವನ್ನೇ ಕಳೆದುಕೊಳ್ಳುವುದು. ವರ್ತನೆ-ವೃತ್ತಿಯನ್ನು ಯಾರೂ ನಿರ್ಬಂಧದಿಂದ ಹೊರಿಸಲಾರರು. ಸ್ವಕಲ್ಪಿತ ಋಣಪ್ರೇರಿತವಾಗಿ ಸ್ವತಃ ವರಿಸುವುದರಿಂದ (ವೃಞ್ ವರಣೇ -ಆರಿಸುವುದು ಎಂದರ್ಥ) ವರ್ಣವೆನಿಸಿ ವೃತ್ತಿಯಾಗಿ ನಿಲ್ಲುವುದು. ಯಾವ ವರ್ಣ-ವೃತ್ತಿಗಳಾದರೂ ಬಹುಕಾಲದಿಂದ ಅನುಸರಿಸಿಕೊಂಡು ಬಂದ ಋಣಕರ್ಮಗಳ ಚರಿತ್ರೆಯನ್ನು ಸೂಚಿಸುವುವು. ಮತ್ತು ಸಂಸ್ಕೃತಿ ವಿಶೇಷಗಳಿಂದ ಕೂಡಿರುವುವು. ಕರ್ಮ ಶಾಸ್ತ್ರದಲ್ಲಿ ಹೇಳಿರುವಂತೆ (ಪುಟ 90-96) ಒಂದೊಂದು ಬಗೆ ವೃತ್ತಿಯು (ವಿಶೇಷ ವೃತ್ತಿಯು) ಭೂಗೋಲದ ಒಂದೊಂದು ಭಾಗದಲ್ಲಿ ಮಾತ್ರ ನಡೆಯತಕ್ಕದ್ದಾಗಿರುತ್ತದೆ.

[ಋಣ ಶೋಧನ ಕ್ರಮದಲ್ಲಿ ಪ್ರಕೃತಿಯ ಆಜ್ಞಾನುಸಾರ ನಡೆವ ಅನುಸಂಧಾನ ಕಾರ್ಯವು ಶೂದ್ರವು. ಶ್ರೋತ್ರಿಯಾದಿಗಳೂ ಸಹ ಸ್ವಾತಂತ್ರ್ಯ ಪ್ರಯೋಗದಿಂದ ವರ್ತಿಸಿ ಋಣದ ಮತ್ತು ದೇಹಿಯ ಮಿತಿಯನ್ನು ಮೀರಿಯುವ ಘಟ್ಟದಲ್ಲಿ ಕ್ರಿಮಿಗಳಲ್ಲಿ ಕಾಣುವ ಮೂರನೇ ಅವಸ್ಥೆಯಂತಿರುವ ಶೂದ್ರವನ್ನು ಅವಲಂಬಿಸಿದರೆ ಭ್ರಮರಕೀಟನ್ಯಾಯದಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆತ್ಮಾರಾಮರಾಗಿ ಪತಂಗದಂತೆ ಆನಂದ ಮುಕ್ತಿಯನ್ನು ಪಡೆಯು ವಂತಾಗುವುದು.

ಕೇವಲ ಶಾರೀರಕ ಸೇವೆಯನ್ನು ಅರ್ಪಿಸಿ ಮಾನಸಿಕವಾದ ಅನುಸಂಧಾನದಿಂದ ಇರುವ ಶೂದ್ರದಿಂದ ನಿತ್ಯ ನೈಮಿತ್ತಿಕ ಕಾಮ್ಯ ಕರ್ಮಗಳ ಅನುಷ್ಠಾನವಲ್ಲಿ ಉಂಟಾಗುವ ಲೋಪ ದೋಷ-ಋಣಪ್ರಾಪ್ತಿಯನ್ನು ಹೋಗಲಾಡಿಸಿಕೊಳ್ಳಬಹುದು. ಇಂತಹ ಶೂದ್ರದಿಂದ ಸಿದ್ಧಪುರುಷರು ಸದಾ ಪ್ರಸನ್ನರಾಗಿರುತ್ತಾರೆ.

'ಒಕ್ಕಲು' ಎಂದು ಕನ್ನಡದಲ್ಲಿಯೂ 'ಕೃಷಿ' ಎಂದು ಗೀರ್ವಾಣದಲ್ಲಿಯೂ ಪ್ರಸಿದ್ಧವಾದ ಭೂವ್ಯವಸಾಯ ವರ್ತನೆಯು ವೈಶ್ಯಕ್ಕೆ ಸೇರಿದುದು. ಸರ್ವರಿಂದಲೂ ಆದರಿಸಲ್ಪಡುವ ಈ ವೃತ್ತಿಯನ್ನು ಶೂದ್ರತ್ವಕ್ಕೆ ಆರೋಪಿಸುವುದು ವ್ಯವಹಾರ ನೀತಿಗೆ ದೂರವಾಗಿರುವುದು. ಇಂದ್ರಿಯ ಸೇವಾತತ್ಪರತೆ ಎಂಬುದು ಶೂದ್ರ ವಿಮುಖ ವೃತ್ತಿ. ಇದು ಸಾರ್ವತ್ರಿಕವಾಗಿ ಸರ್ವರಲ್ಲಿಯೂ ಕಾಣಬರುವುದು. ವೈಶ್ಯಾದಿಗಳನ್ನು ಇಂದ್ರಿಯ ಸೇವೆ ಎಂಬ ವಿಮುಖ ಶೂದ್ರವೃತ್ತಿಗೆ ವಿನಿಯೋಗಿಸುವುದು ವೃತ್ತಿದೋಷವಾಗುವುದು.

ಸರ್ವ ಸ್ವತಂತ್ರವಾದ ದೇಹಿಯು ಸ್ವಕಲ್ಪಿತ ಋಣ ಸಂಕಲ್ಪಕ್ಕೆ ತಕ್ಕಂತೆ ವ್ಯವಸಾಯ ಮಾಡಲು ಭೂಗುಣ ವಾಯುಗುಣಗಳು ಹಿತವಾಗಿರುವ ಭೂ ಭಾಗದಲ್ಲಿ ಅವತರಿಸಬೇಕಾಗುವುದು.]

## ಸಾಹಸದಿಂದ ಉನ್ನತಿ, ಅವನತಿ

ಪ್ರಕೃತಿ ಲೀಲೆಯನ್ನೂ ಸಂಸ್ಕೃತಿ ಕ್ರಮವನ್ನೂ ಮೀರಿಸಿ ಸಾಹಸದಿಂದ ವ್ಯವಸಾಯ ಮಾಡಬಹುದಾದ ಬುದ್ಧಿ ಕಲ್ಪನೆಗಳಿಂದ ಅನೇಕವೇಳೆ ಉನ್ನತಿಗೆ ಅವಕಾಶವಿರುವುದು; ಅಂತೆಯೇ ಕ್ಲೇಶಕ್ಕೂ ಅವನತಿಗೂ ಅವಕಾಶವಿರುವುದು. ಇದನ್ನು ತ್ರಿಶಂಕುವಿನ ಚರಿತ್ರೆಯು ತಿಳಿಸುತ್ತದೆ. ಸಾಮಾನ್ಯವಾಗಿ ಇಂದ್ರಿಯಗಳಿಗೆ ಕಾಣದ ಅತೀಂದ್ರಿಯ ವಿಷಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವವರೂ ಶುದ್ಧ ಸಾತ್ವಿಕ ತಪಸ್ಸಿನಲ್ಲಿ ಪ್ರವೃತ್ತಿಯುಳ್ಳವರೂ ಅತೀಂದ್ರಿಯ ದಿವ್ಯದೃಷ್ಟಿಯನ್ನು ರೂಢಿಸಿಕೊಂಡಾಗ ತ್ರಿಕಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಜ್ಞಾನಸಿದ್ಧಿಯುಂಟಾಗುವುದು. ಜೀವನು ಎಷ್ಟು ಬಗೆಗಳಲ್ಲಿ ಹೇಗೆ ಹೇಗೆ ಉನ್ನತಿ–ಅವನತಿಗಳ ಸನ್ನಿವೇಶಕ್ಕೆ ಈಡಾಗುತ್ತಾನೆಂಬುದನ್ನು ಕರತಲಾಮಲಕದಂತೆ ನೋಡುವರು. ಈ ಅನುಭವಗಳು ವಾತಾವರಣದಲ್ಲಿ ವ್ಯಾಪಿಸಿ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಸರ್ವ ಸಾಮಾನ್ಯವಾಗಿ ಪ್ರಜಾ ಸಾಮಾನ್ಯಕ್ಕೆಲ್ಲಾ ಗೋಚರವಾಗುವುವು. ಈ ಸಂದರ್ಭದಲ್ಲಿ ಸಹಾನುಭೂತಿಯಿಂದ ಸಹಕರಿಸುವುದಕ್ಕಾಗಿ ಪ್ರಕೃತಿಯು ನಾನಾ ಮುಖವಾಗಿ ನಾನಾ ರೂಪಗಳಲ್ಲಿ ಪ್ರೇರಿಸಿ ಜೀವನ (ದೇಹಿಯ) ಅಭ್ಯಸ್ತ – ಆಚಾರವನ್ನು ತಿಳಿಸುವುದು.

## ವಿಶೇಷ ವರ್ತನೆಗಳು – ರಾಜ್ಯ ಪಂಚವಲಯಗಳು

ವೈಯಕ್ತಿಕವಾದ ಸಂಪದಭ್ಯುದಯಗಳಿಗೂ ಸುಖಶಾಂತ್ಯನುಭವಗಳಿಗೂ ಆಯಾ ವ್ಯಕ್ತಿಯೇ ಪ್ರಧಾನ ಹೊಣೆಗಾರನಾದುದರಿಂದ ಸುಖಶಾಂತಿಗಳನ್ನು ಯಾರೂ ವ್ಯಕ್ತಿಗಳ ಮೇಲೆ ಹೊರಿಸಲಾರರು ಎಂಬುದು ಸಾಮಾನ್ಯ ಜೀವನ ತತ್ವವಾಗಿರುವಂತೆ ತಿಳಿದಿರುವರು. ಆದರೆ ವಸ್ತುತತ್ವದಲ್ಲಿ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಪರಂಪರೆಯಾಗಿಯೂ ಅನೇಕರು ಒಬ್ಬರ ಸ್ಥಿತಿಗತಿಗಳಿಗೆ ಸಹಕರಿಸುವ ಅಥವಾ ಅವುಗಳನ್ನು ವಿರೋಧಿಸುವ ಹೊಣೆಗಾರಿಕೆಯು ಇದ್ದೇ ಇರುತ್ತದೆ.

ಪ್ರತಿ ವ್ಯಕ್ತಿಯೂ ಶೂದ್ರಾದಿ ಪಂಚ ಸಾಮಾನ್ಯ ವರ್ತನೆಗಳನ್ನೂ ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳಿಗೆ ಸಂಬಂಧಿಸಿದ ಪಂಚ ವಲಯಗಳ ರಾಜ್ಯ ಶಾಸನ ಮತ್ತು ಆವರಣಗಳ ಪ್ರೋತ್ಸಾಹಗಳಿಂದ ಸಾಗಬಹುದಾದ ವಿಶೇಷ ವರ್ತನೆಗಳನ್ನೂ, ಆಚರಣೆಯಲ್ಲಿಟ್ಟು ಕೊಳ್ಳುವುದೇ ಜೀವನ ಯಜ್ಞ ನಿರ್ವಾಹತಂತ್ರವೆನಿಸುವುದು. ಅವರವರ ಸ್ವಾತಂತ್ರ್ಯವನ್ನು ಸಮಯೋಚಿತವಾಗಿ ಪ್ರಯೋಗಿಸುವುದಕ್ಕೆ ಮತ್ತು ತತ್ಫಲಾನುಭವಕ್ಕೆ ಸರ್ವರೂ ಸ್ವತಂತ್ರರಾದರೂ, ಒಬ್ಬರು ಮಾಡಿದ ಕರ್ಮದ ಫಲವು ಇತರರಿಗೂ ಅನುಭವಕ್ಕೆ ಬರುವುದಾದುದರಿಂದ ಇತರರೂ ಸಹ ಒಬ್ಬರು ಮಾಡುವ ಕರ್ಮದ ಮೇಲೆ ಅವಧಾನಾಂಕುಶವನ್ನು ಪ್ರಯೋಗಿಸಬೇಕಾಗಿರುತ್ತದೆ. ಇದು ಪ್ರಜೆಗಳ ಪರಸ್ಪರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಹೊಣೆಗಾರಿಕೆಗೆ ಸೇರಿದುದು.

ಪ್ರತಿ ಪ್ರಜೆಯೂ ಸರ್ವ ಜನ ಹಿತಚಿಂತಕನಾಗುವುದಕ್ಕೂ ಅದಕ್ಕೆ ತಕ್ಕಂತೆ ಅನುಷ್ಠಾನ ಮಾಡುವುದಕ್ಕೂ ಸಾಕಾಗುವಷ್ಟು ಪ್ರಭುಶಕ್ತಿಯನ್ನು ಹೊಂದದೆ ಇರುವುದರಿಂದ ಸಮಷ್ಟಿಯ ವ್ಯವಹಾರವನ್ನು ಹದಗೊಳಿಸಿ ಉತ್ತಮ ಮಾಡಬೇಕಾದರೆ ಪ್ರಭುಶಕ್ತಿಯುಳ್ಳ ಬಹುಜನರು ಸೇರಬೇಕು. ಹೀಗೆ ಬಹುಜನರು ಒಟ್ಟುಗೂಡಿ ಕಾರ್ಯನಿರ್ವಾಹ ಮಾಡಲು ಔಚಿತ್ಯ, ಅವಕಾಶಗಳು ಸದಾ ಇಲ್ಲದಿರುವುದರಿಂದ ಸರ್ವರೂ ಗೊತ್ತಾದ ಮಿತಿಯಲ್ಲಿ ಪ್ರಭುಶಕ್ತಿಯ ಅಂಶವನ್ನು ಪ್ರಭುಶಕ್ತಿ ಪ್ರಧಾನವಾದ ಕಾರ್ಯಾಂಗದ ಭಾವವನ್ನು ಹೊತ್ತಿರುವವರಿಗೆ ವಹಿಸಬೇಕಾಗಿದೆ. ಪ್ರಭುತ್ವ ಧುರಂಧರರ ಸ್ವಂತವಾದ ಅಭ್ಯುದಯಗಳಿಗೆ ಸರ್ವರೂ ಸರ್ವರ ಅಭ್ಯುದಯಗಳಿಗೆ ಪ್ರಭುತ್ವದವರೂ ಪರಸ್ಪರ ಬದ್ಧರಾಗಿದ್ದು ಯೋಗಕ್ಷೇಮ ಸಾಧಕರಾಗುವ ಸಂಸ್ಕೃತಿಯ ಸಂವಿಧಾನವನ್ನು ಏರ್ಪಡಿಸಿರುತ್ತಾರೆ.

ಕ್ಷತ್ರದ ಅಂಶಗಳಾಗಿ ಕ್ಷತ್ರ-ಕ್ಷತ್ರಿಯ, ಕ್ಷತ್ರ-ವೈಶ್ಯ, ಕ್ಷತ್ರ-ಶ್ರೋತ್ರಿಯ, ಕ್ಷತ್ರ-ಶೂದ್ರ, ಕ್ಷತ್ರ-ನಿಷಾದಗಳೆಂಬ ಪಂಚವಿಧ ವಿಶೇಷ ಹೊಣೆಗಾರಿಕೆಗಳಿಂದ ಬ್ರಹ್ಮವು ಸಂರಕ್ಷಿತವಾಗಿ ಸಂವರ್ಧಿತವಾಗುತ್ತದೆ. ಮತ್ತು ಸ್ವಸ್ವರೂಪಾವಸ್ಥಾನವೆಂಬ ನಿತ್ಯಾನಂದ ಸ್ಥಿತಿಯನ್ನು ಪ್ರತಿ ದೇಹಿಯೂ ಪ್ರಾಪಂಚಿಕವಾದ ಮಿತಿಯಿಂದ ಛಾಯಾ ರೂಪದಲ್ಲಿಯೂ ಪಾರಮಾರ್ಥಿಕ ಸ್ಥಿತಿಯಲ್ಲಿ ನಿತ್ಯವಾಗಿ ಘನೀಭೂತವಾಗಿಯೂ ಅನುಭವಿಸಿ ಋಣಚಕ್ರವು ಉರುಳುವವರೆಗೂ ಸುಖಸಂತೋಷಗಳಿಂದ ಯಜ್ಞವನ್ನು ನಿರ್ವಹಿಸಲು ಅವಕಾಶವಾಗುತ್ತದೆ.

ಕ್ಷತ್ರದ ವಿಶೇಷ ಹೊಣೆಗಾರಿಕೆಯನ್ನು ಹೊತ್ತ ಕ್ಷತ್ರಿಯವು ಪ್ರದೇಶ ವಾ ದೇಶಗಳ ರಾಜ್ಯಭಾರದ ವ್ಯಾಪ್ತಿಗೆ ಒಳಗಾದವರ ಯೋಗಕ್ಷೇಮಕ್ಕೆ ಸತತವಾಗಿ ಸರ್ವಪ್ರಯತ್ನಗಳನ್ನು ಮಾಡುವುದಾಗಿರುತ್ತದೆ.

ಹೊಣೆಗಾರಿಕೆಗೆ ವಿರೋಧವಾಗಿ ನಡೆದರೆ ತಕ್ಕ ಫಲವನ್ನು ಕೂಡಲೆ ಅನುಭವಿಸಬೇಕಾಗುತ್ತದೆ. ಅನುರೋಧ ವಿರೋಧ ಫಲಗಳಿಗೆ ಸರ್ವರೂ ಅವರವರ ಹೊಣೆಗಾರಿಕೆಗಳ ಮಿತಿಯಲ್ಲಿ ಭಾಗಿಗಳಾಗಿ ಇಹದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅಥವಾ ಬೇರೊಂದು ಜನ್ಮದಲ್ಲಿ ಪಿಪ್ರತಿಕ್ರಿಯೆ ಫಲ ಸಹಿತ ಸ್ವಕರ್ಮ ದೋಷದ ಫಲವನ್ನು ಅನುಭವಿಸದೆ ಇರಲಾಗುವುದಿಲ್ಲ.

ಇದರಂತೆಯೇ ಕ್ಷತ್ರದ ವಿಶೇಷ ಹೊಣೆಗಾರಿಕೆಯನ್ನು ಹೊತ್ತ ವೈಶ್ಯವು ಕೆಲವರಿಗೆ ಮಾತ್ರ ಅವರವರ ಅಭ್ಯಸ್ತ ಕರ್ಮ ಋಣಾನುಬಂಧಗಳಿಗೆ ತಕ್ಕಂತೆ ವಿಧಾಸಲಾಗಿರುತ್ತದೆ. ಸರ್ವರೂ ವೈಶ್ಯ ಪ್ರಾಧಾನ್ಯವನ್ನು ಆಲಿಂಗಿಸಲಾರರು. ವೈಶ್ಯಾನುಷ್ಠಾನಕ್ಕೆ ಶಕ್ತಿಯಿಲ್ಲದವರು ಚಪಲತೆಯಿಂದ ಒಂದುವೇಳೆ- ವೈಶ್ಯವನ್ನು ಆಚರಿಸುವುದರಿಂದ ಪ್ರಪಂಚದ ದುಸ್ಥಿತಿಗೆ ಕಾರಣರಾಗುತ್ತಾರೆ. ಪ್ರಪಂಚದ ಸಂಪದಭ್ಯುದಯವು ಘನತೆಯುಳ್ಳ ವೈಶ್ಯ ವಿಶೇಷ ಹೊಣೆಗಾರಿಕೆಯಿಂದಲೇ ಸಾಧ್ಯವಾಗಬೇಕಾಗಿರುತ್ತದೆ.

ಪ್ರಜೆಗಳ ಆಚಾರ ವ್ಯವಹಾರಗಳಲ್ಲಿ ಉಂಟಾಗುವ ಕುಂದು ಕೊರತೆಗಳು, ಅವುಗಳಲ್ಲಿರುವ ಲೋಪದೋಷಗಳು ಇತ್ಯಾದಿಗಳ ನಿವಾರಣೆಗೂ, ಸನ್ಮಾರ್ಗ ದರ್ಶನಕ್ಕೂ, ಒಬ್ಬರ ಅನುಷ್ಠಾನವು ಮತ್ತೊಬ್ಬರಿಗೆ ಉಪದ್ರವಕಾರಿಯಾಗದಂತೆ ಸತ್ ಆವರಣವನ್ನು ಕಲ್ಪನೆಮಾಡಿ ಪ್ರಜೆಗಳು ಉತ್ತರೋತ್ತರ ಸಂಸ್ಕೃತಿ ಶ್ರೇಣಿಯನ್ನು ಏರುವುದಕ್ಕೂ ಪರಬಾಧಾ ಪರಚಕ್ರಗಳನ್ನು * ನಿವಾರಿಸುವುದಕ್ಕೂ ಹೊಣೆಗಾರಿಕೆಯನ್ನು ಹೊತ್ತಿರುತ್ತಾರೆ.

---

* ಪೋರ್ಚುಗೀಸ್ ಜನಗಳು ಈ ದೇಶದಲ್ಲಿ ನಡೆಸಿದ ಘೋರ ವಂಚಕತನವೆಂಬ ಪೋರ್ಚುಗೀಸ್ ವಿಷಕ್ಕಿಂತ ಕ್ರೂರವಾದುದು ಬೇರೊಂದಿಲ್ಲವೆಂಬುದು ಮಲೆಯಾಳ ಜನಗಳ ಚರಿತ್ರೆಯಿಂದ ವಿಶದವಾಗುವುದು (ಅಬ್ಬಸ್ ದೂಬಾಯ್). ಇಂತಹ ಬಾಧೆಗಳನ್ನು ಪರಿಹರಿಸಲು ಪ್ರಭುಶಕ್ತಿಗಳೆಲ್ಲವೂ ಸಂಘಟಿಸಿದ, ಪಂಚ ವಲಯ ರಾಜ್ಯದ ಮತ್ತು ಪಂಚವರ್ತನೆಗಳ ನಿರ್ವಹವು ಅತ್ಯವಶ್ಯಕ.

ಮ್ಯಾಕ್ಸ್‌ಮುಲ್ಲರ್ ಎಂಬುವನ ಗೀರ್ವಾಣಭಾಷಾ ಮತ್ತು ವೇದಶಾಸ್ತ್ರಾದಿಗಳ ಮೇಲಿನ ಮೋಹವು ಕೇವಲ ನಟನೆ ಮತ್ತು ಕುಹಕಪೂರ್ಣವಾಗಿತ್ತು. ಅವನ ಗ್ರಂಥಗಳು ಧನಾರ್ಜನೆಗೆ ಸಾಧನವಾಗಿದ್ದವು ಮತ್ತು ಕ್ರೈಸ್ತ [illegible] ವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೇವಲ ಅಧ್ಯಯನಾದಿ ಅನುಷ್ಠಾನಗಳಿಂದ ಸಾಧ್ಯವಾಗಬೇಕಾದ ಕ್ಷತ್ರದ ವಿಶೇಷ ಹೊಣೆಗಾರಿಕೆಯನ್ನು ಶ್ರೋತ್ರಿಯವು ನಿರ್ವಹಿಸುವುದು.

ಸಾಹಸ ಯೋಗ್ಯತೆಯುಳ್ಳವರನ್ನು ಅವರ ಅನುಷ್ಠಾನ ಮತ್ತು ತತ್ಫಲಗಳಿಂದ ಕಂಡುಹಿಡಿಯಬೇಕು. ಅವರ ಸಹಾಯದಿಂದ ಆಯಾ ನಿತ್ಯಾನುಷ್ಠಾನಗಳನ್ನು ಮತ್ತು ಅವಶ್ಯಕವಾದ ಇತರ ನೈಮಿತ್ತಿಕಾದಿ ಅನುಷ್ಠಾನಗಳನ್ನು ಪೂರ್ಣವಾಗಿಯೂ ಸತ್ಪರಿಣಾಮಕಾರಿಯಾಗಿಯೂ. ದುಷ್ಟಫಲಪರಿಹಾರಕವಾಗಿಯೂ ಪಂಚ ವಲಯ ರಾಜ್ಯ ಪ್ರಜೆಗಳಿಗೆಲ್ಲಾ ವ್ಯಾಪಿಸುವಂತೆಯೂ ಕಾರ್ಯಗಳನ್ನು ಕೈಗೊಳ್ಳಬೇಕು ಅಥವಾ ಪ್ರೋತ್ಸಾಹಿಸಬೇಕು; ಪ್ರಜೆಗಳ ಪ್ರಭುತ್ವ-ಪ್ರಭುಶಕ್ತಿ ಮತ್ತು ರಾಜ್ಯ ಶಾಸನ, ಹೀಗೆಯೇ ಪ್ರಜೆಗಳು ಶ್ರೋತ್ರಿಯತ್ವ, ವೈಶ್ಯತ್ವ, ಶೂದ್ರತ್ವ, ಕ್ಷತ್ರಿಯತ್ವ, ನಿಷಾದತ್ವಗಳೆಂಬ ಕ್ಷತ್ರದ ವಿಶೇಷ ಹೊಣೆಗಾರಿಕೆಗಳನ್ನು, ಪ್ರಮಾಣ, ಪರಿಮಾಣ ರೀತ್ಯಾ ಹೊಂದಿ ಅನುಷ್ಠಾನ ಮಾಡುತ್ತಾ ಪಂಚವಲಯರಾಜ್ಯ ಮತ್ತು ಪಂಚವರ್ತನೆಗಳ ಯೋಗಕ್ಷೇಮವನ್ನು ಸಾಧಿಸಬೇಕಾಗಿದೆ.

ವಿಶೇಷ ಹೊಣೆಗಾರಿಕೆಯನ್ನು ಹೊತ್ತು ಜೀವನಯಜ್ಞವನ್ನು ನಿರ್ವಹಿಸುವವರ ಸಕಲ ಸಂಪದಭ್ಯುದಯಗಳಿಗೂ ತಪಸ್ಸಂಪತ್ತಿಗೂ, ಯೋಗಕ್ಷೇಮಕ್ಕೂ ವಿಶೇಷ ಹೊಣೆಗಾರಿಕೆಯನ್ನು ಹೊರಿಸಿರುವ ಪಂಚ ವಲಯ ರಾಜ್ಯ ಪ್ರಜೆಗಳು ಒಟ್ಟಾಗಿಯೂ ಬೇರೆ ಬೇರೆಯಾಗಿಯೂ ಹೊಣೆಯಾಗಿರುತ್ತಾರೆ. ಈ ಸಂವಿಧಾನ ಬಲದಿಂದ ಮತ್ತು ಪರಸ್ಪರ ಸಂಭಾವನೆ ಸಹಾಯಗಳಿಂದ ಸರ್ವರ ಆಚಾರ ಅನುಷ್ಠಾನಗಳು ಬ್ರಹ್ಮಾನುಸಂಧಾನದಲ್ಲಿ ಪರ್ಯವಸಾನವಾಗಿ ಯೋಗಕ್ಷೇಮವಾಹಕವಾಗುವಂತೆ ಮಾಡಬೇಕಾಗಿದೆ.

## ಸಮತಾಭಾವನೆಯಿಂದ ಜೀವನ ಸಿದ್ಧಿ

ಪ್ರತಿಯೊಬ್ಬರೂ ಪ್ರತಿಯೊಂದು ವರ್ಣದ ಅಂಶವನ್ನು ಹೊಂದಿ ಜೀವಿತವನ್ನು ಸಾಧಿಸುವರು. ಪ್ರಪಂಚದ ಕಲ್ಯಾಣ ಸಾಧನೆಗೂ ವ್ಯಕ್ತಿ ಋಣ ಪರಿಹಾರಕ್ಕಾಗಿಯೂ ವರ್ಣ ವಿಶೇಷಾಂಶವನ್ನು ಸ್ವಭಾವತಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರಿಸಿಕೊಳ್ಳುವುದರಿಂದ ವರ್ತನೆಯು ತೃಪ್ತಿಕರವಾಗುತ್ತದೆ. ಪರಸ್ಪರ ಸಹಾಯವೆಂಬ ತತ್ವವು ಋತಾನುರೋಧವಾಗಿ ಜೀವಿತಕ್ಕೆ ಆಧಾರವಾಗಿರುತ್ತದೆ.

ಮಕ್ಕಳ, ಅಶಕ್ತರ, ರೋಗಿಗಳ ಜೀವನಕ್ಕೆ ಅವಶ್ಯಕವಾದ ಬೇಡಿಕೆಗಳನ್ನು ಅವರವರ ಶರೀರದ ಅಂಗ ವಿಕಾರಗಳು ಬೆಳಗುವುವು. ಇವು ಪ್ರಪಂಚದಲ್ಲಿ ತಮ್ಮಂತೆಯೇ ಜನ್ಮವೆತ್ತಿ ಜೀವಿಸುವವರ ಋಣಪ್ರಾಪ್ತಿ ಅಥವಾ ಪರಿಹಾರ ಕ್ರಿಯೆಗಳಿಗೆ ದಾರಿಯಾಗುವಂತೆ ಪ್ರೇರಿಸುವುವು. ಜನಗಳಲ್ಲಿ ದಯಾ, ದಾಕ್ಷಿಣ್ಯ ಮೊದಲಾದುವುಗಳಿಂದ ಋಣವು (ಕಮಿಟ್‌ಮೆಂಟ್) ಅಂಕುರವಾಗಿ ಅದನ್ನು ಕ್ರಿಯಾರೂಪದಲ್ಲಿ ತರುವುದಕ್ಕೆ ತಕ್ಕ ವ್ಯಾಪಾರಗಳು ನಡೆಯುವುವು. ಈ ಬಗೆಯ ಪರಸ್ಪರ ಭಾವನೆಯಿಂದ ಸರ್ವರ ಜೀವನವೂ ಸುಗಮವಾಗುವುದು. (ಪುಟ 67, 160)

ಪೃಥಿವೀ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳ ದೈವೀ ಶಕ್ತಿಯೂ, ಸ್ಥಾವರ ಜಂಗಮ ದೇಹಿಗಳ ದೈವೀ ಶಕ್ತಿಯೂ ಪರಸ್ಪರ ಭಾವನೆಯಿಂದ ವರ್ತಿಸಿದರೆ ಸರ್ವತ್ರ ದೇವಮಯ, ಶಾಂತಿಮಯವಾಗಿರುವ ಸಂದರ್ಭವೊದಗುತ್ತದೆ. ಇವುಗಳಲ್ಲಿ ಆಸುರೀ ಶಕ್ತಿಯು ಆವಿರ್ಭವಿಸಿದರೆ ಪರಸ್ಪರ ಘರ್ಷಣವುಂಟಾಗಿ ಶಾಂತಿಭಂಗವಾಗುವುದು. ಲೋಕದಲ್ಲಿ ಚೈತನ್ಯವಿರುವ ಸಸ್ಯವರ್ಗಗಳು ಮೊದಲುಗೊಂಡು ಎಲ್ಲಾ ದೇಹಿಗಳೂ ಸ್ವಾತಂತ್ರ್ಯದಿಂದ ಸ್ವಯಂ ಕೃತ ಋಣ ಕರ್ಮ ಫಲವನ್ನು ಅನುಭವಿಸುವುದಕ್ಕೆ ತಕ್ಕ ಆವರಣದಲ್ಲಿ ಪ್ರದೇಶ ದೇಶಗಳಲ್ಲಿ ಯೋಗ್ಯವಾದ ಶರೀರಗಳನ್ನು ಧರಿಸಿಕೊಳ್ಳುತ್ತಾರೆ. ಆ ಆವರಣದಲ್ಲಿ ಅನುಭವವು ಪೂರ್ಣವಾದನಂತರ ಮುಂದಕ್ಕೆ ಹೋಗುವ ಅಥವಾ ಮೇಲಕ್ಕೆ ಏರುವ ಋಣ ಕರ್ಮವುಯ ಸೋಪಾನಗಳನ್ನು ಮೆಟ್ಟುತ್ತಾರೆ. ಅಥವಾ ಹಿಂದಕ್ಕೆ ಸರಿಯುವ ಮತ್ತು ಕೆಳಗೆ ಇಳಿಯುವ ಋಣ ಕರ್ಮಗಳ ಹಂತಗಳನ್ನು ಹೊಂದುತ್ತಾರೆ.

## ವೃತ್ತಿ ಮಹಿಮೆ ಸರ್ವ ಸಮಾನ

ದೇಹಿಗಳು ಎಲ್ಲಿಯೇ ಇರಲಿ! ಹೇಗೇ ಇರಲಿ! ನಾಯಿ ಹಂದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲಾದ ಯಾವ ಉಪಾಧಿಯನ್ನೇ ಧರಿಸಿರಲಿ ! ಬ್ರಹ್ಮಾನುಸಂಧಾನವನ್ನು ಋಣಾನುಬಂಧ ರೀತ್ಯಾ ಮನೋವಾಕ್ಕಾಯಗಳಲ್ಲಿ ಅಳವಡಿಸಿಕೊಂಡಿರುವ ಕರ್ತವ್ಯ ಕರ್ಮವೇ ಈ ದಿನ ಅಥವಾ ನಾಳೆ, ಶಾಶ್ವತ ಸುಖ ಪದವಿಯಾದ ಸ್ವಸ್ವರೂಪಾವಸ್ಥಾನಕ್ಕೇ ಒಯ್ಯುವುದು. ಇದೇ ವೃತ್ತಿಗಳಲ್ಲಿ ಕಾಣುವ ಮುಖ್ಯ ತತ್ವ. ಯಾವುದೇ ಸ್ಥಿತಿಯಲ್ಲಿದ್ದರೂ ಮಾನವತೆಯ ಜೀವನದ ಗುರಿಯಾದ ಪುರುಷಾರ್ಥ ಸಿದ್ಧಿಯು ಪ್ರತಿಯೊಂದು ಹಂತದಲ್ಲಿಯೂ ಸಂಬಂಧಿಸಿ ಕಾದಿಡಲ್ಪಟ್ಟಿರುತ್ತದೆ. ಈ ಪುರುಷಾರ್ಥಗಳ ಪರಮ ಪುರುಷಾರ್ಥವು ದೇಹಿಯನ್ನು ವಿಶಾಲವಾದ ಪರಿಮಿತಿಯಲ್ಲಿ ನಿಯಂತ್ರಿಸುವುದು. ಸಂಕುಚಿತವೆಂದು ಹೇಳಬಹುದಾದ ಆವರಣಗಳನ್ನು ಮೀರಿ ಧರ್ಮ ವ್ಯಾಧಚರಿತ್ರೆಯಲ್ಲಿ ಕಂಡಂತೆ ಉನ್ನತ ಶ್ರೇಣಿಯನ್ನು ಏರಿಸುವುದು. ವರ್ತನೆಯ ಮಧ್ಯಕಾಲದಲ್ಲಿ ಉಂಟಾಗುವ ಇಂದ್ರಿಯಾನುಭವಗಳೆಲ್ಲವೂ ಸ್ವಕಲ್ಪಿತ ಋಣವೇ ಆಗಿರುತ್ತದೆ. ಋಣಮೂಲವಾದ ವಿವಿಧಾವಸ್ಥೆಗಳ ಅನುಭವಗಳಲ್ಲಿ ಇರುವಂತೆ ಕಾಣುವ ಹೆಚ್ಚು ಕಡಿಮೆಗಳು ದೇಹಿಗೆ ಅಂಟುವುದಿಲ್ಲ (ಪುಟ 75). ಯಾವುದನ್ನು ತಪ್ಪು ಅಥವಾ ಕಡಿಮೆ ಎಂದು ಇತರರು ತಿಳಿಯುತ್ತಾರೋ ಅದನ್ನು ಅನುಭವಿಸುವವರಿಗೆ ತತ್ವತಃ ಅದು ಪರಮಶ್ರೇಷ್ಠವಾಗಿರುತ್ತದೆ. ಯಾವುದು ಹೆಚ್ಚು ಅಥವಾ ಸರಿಯೆಂದು ಭಾವಿಸಲ್ಪಡುತ್ತದೋ ಅದು ಅದನ್ನು ಅನುಭವಿಸುವವರಿಗೆ ವಸ್ತುತಃ ಪರಮಕ್ಲೇಶವೇ ಆಗಿರುತ್ತದೆ. ಇದು ಆಂತರಂಗಿಕವಾದ ಆಯಾ ಋಣ ಸಂಕಲ್ಪ ವ್ಯವಸಾಯದ ಫಲ ಕಳ್ಳತನವಾಗಲೀ, ಲಾಭವಾಗಲೀ, ಹನನವಾಗಲೀ, ರೋಗವಾಗಲೀ, ಸಂತೋಷವಾಗಲೀ, ಪ್ರಕೃತಿ, ಸಂಕಲ್ಪ, ವಿಧಿ ಕಾರ್ಯ ಕಾರಣ ನಿಯಮಗಳಿಗೆ ಒಳಪಟ್ಟಿರುವುದು (ತೇನ ವಿನಾ ತೃಣಮಪಿ ನ ಚಲತಿ). ಎಲ್ಲವೂ ಕೇವಲ ಹಿಂದಿನ ಸಂಕಲ್ಪಾನುಗುಣವಾದ ಕಾರ್ಯವಲ್ಲ. ತಾತ್ಕಾಲಿಕ ಜೀವನದಲ್ಲಿ ವರ್ತಮಾನ ಋಣ ಸಂಕಲ್ಪಗಳಿಗೆ ತಕ್ಕಂತೆ ಸ್ವತಂತ್ರವಾಗಿ ಸಾಹಸಗಳೂ ನಡೆಯುವುವು. ಜನ್ಮಾಂತರ ಕರ್ಮಫಲಶೇಷ ಪ್ರಾಪ್ತಿಯು ವಿಶೇಷವೂ ಸನ್ನಿವೇಶ ಸ್ಥಿತಿಗಳಿಗೆ ಮೀರಿದುದಾಗಿ ಆಕಸ್ಮಿಕವೂ ಆಗಿರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪ್ರಪಂಚದ ಮತ್ತು ಮಾನವತೆಯ ಸಂಪದಭಿವೃದ್ಧಿಗಾಗಿ ಎಲ್ಲವೂ ಎಲ್ಲರಿಗೂ ಆಯಾ ಕಾಲಗಳಲ್ಲಿ ಬೇಕಾಗುವುದು. ಆದರೆ ಎಲ್ಲ ಬಗೆಯ ವರ್ತನೆಗಳನ್ನು ಎಲ್ಲರೂ ಅನುಸರಿಸುವುದಕ್ಕೆ ಯತ್ನಿಸಿದರೆ ಯಾವುದೂ ಸಿದ್ಧಿಯಾಗದಿರಬಹುದು. ಯಾವ ವರ್ತನೆಯಾದರೂ ಅವಿಚ್ಛಿನ್ನವಾದ ತಪಸ್ಸಿನಿಂದ ಸುಸಾಧಿತವಾಗಬೇಕಾಗಿರುವುದು. 'ಚೌ ಚೌ' ಮಿಶ್ರಣದಿಂದ ಸಾಕಾದಷ್ಟು ಘನತೆಯು ಇಲ್ಲದೆ ಹೋಗಿ ಯಾವುದೂ ಸಾಧ್ಯವಾಗದೇ ಹೋಗುವುದು. ಕರ್ಮಶಾಸ್ತ್ರದಲ್ಲಿ ಹೇಳಿದಂತೆ ಏಕಾಗ್ರಚಿತ್ತತೆ, ಕರಣಗಳು ಮೊದಲಾದುವು ಶುದ್ಧವಾದಷ್ಟೂ ಪ್ರಯೋಗಶಾಲೆಗಳಲ್ಲಿ ನಡೆಸಿದ ವ್ಯವಸಾಯ ಪ್ರಯತ್ನಗಳಂತೆ ಉತ್ತಮ ಫಲಪ್ರದಗಳಾಗುವುವು. ಒಂದೊಂದು ವರ್ತನೆಗೆ ಒಂದೊಂದು ವಿಧವಾದ ಕಾಲ ದೇಶ ಪಾತ್ರಗಳು ಪೂರ್ಣತೆಯಿಂದ ಸಜ್ಜಿತವಾಗಬೇಕು. ಆದ್ದರಿಂದ ಒಂದು ವಸ್ತುವು ವಸ್ತುವಾಗಿರಬೇಕಾದರೆ, ಆ ವಸ್ತುವಾಗಿರುವಂತೆ ನಡೆದುಕೊಳ್ಳಬೇಕಾದರೆ ತಕ್ಕ ಸಲಕರಣೆಗಳಿಂದ ಕೂಡಿಕೊಂಡು ಪೂರ್ಣ ಸನ್ನದ್ಧವಾಗಿರಬೇಕು. ಇದೇ ಸೃಷ್ಟಿಯ ಮೂಲಾಧಾರ. ಪೂರ್ಣವಾಗಿ ಸನ್ನದ್ಧವಾಗಿರುವಿಕೆಯೇ ವರ್ತನೆಯ ನಿಷ್ಪತ್ತಿಗೆ ಮೂಲ ಕಾರಣ. ಈ ವರ್ತನೆಗಳು ದೇಹಿಗಳ ಇಷ್ಟಕ್ಕನುಗುಣವಾಗಿ ಆಯಾ ಋಣ ಕಲ್ಪನೆಗೆ ತಕ್ಕಂತೆ ಆರಿಸಲ್ಪಟ್ಟವುಗಳಾಗುವುವು; ಆದುದರಿಂದ ಆರಿಸುವಿಕೆ ಎಂಬ ಅರ್ಥದ ವೃಞ್ ಧಾತುವಿನಿಂದ ಉಂಟಾದ ವರ್ಣ ಶಬ್ದದಿಂದ ವ್ಯವಹರಿಸಲ್ಪಡುತ್ತವೆ. ಯಾವ ವರ್ತನೆಯಾಗಲೀ ಋಣ ಕಲ್ಪನೆಯಾಗಲೀ ವರ್ಣವಾಗಲೀ ವೈಶ್ಯ (ಋಕ್), ಕ್ಷತ್ರಿಯ (ಯಜುಸ್), ಶ್ರೋತ್ರಿಯ (ಸಾಮ), ಶೂದ್ರ (ಅಥರ್ವ), ನಿಷಾದ (ವೇದಾಂತ-ವೇದಗರ್ಭ-ಉಪನಿಷತ್) ಗಳೆಂಬ ಐದು ಬಗೆಯ ಶಾರೀರಕ, ಮಾನಸಿಕ ವ್ಯಾಪಾರಗಳನ್ನು ಒಳಗೊಂಡಿದೆ. ಇವೆಲ್ಲವೂ ಬ್ರಹ್ಮಾಂಡದಲ್ಲಿರುವ ಪ್ರಜಾಪತಿ ರಾಜ್ಯಭಾರಕ್ಕೆ ಸೇರಿದ ಪಿಂಡಾಂಡಗಳಲ್ಲಿ ಕಾಣುವ ಪ್ರಜೆಗಳಿಗೆಲ್ಲಾ ಸಾಮಾನ್ಯವಾಗಿರುತ್ತದೆ. ಯಾರೊಬ್ಬರಿಗೂ ಯಾವುದೊಂದೂ ಮೀಸಲಾಗಿಲ್ಲ. ಯಾವುದನ್ನು ಯಾರು ಎಲ್ಲಿ ಬೇಕಾದರೂ ಅಪೇಕ್ಷಿಸಿ ಶಕ್ತಿ ಸ್ವಾತಂತ್ರ್ಯಗಳನ್ನು ಪ್ರಯೋ[illegible] ಪಡೆದುಕೊಳ್ಳಬಹುದು. [illegible]ಗಳು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ತನೆಗಳು, ವೃತ್ತಿಗಳು ಎಲ್ಲವೂ ಒಂದೇ ವಿಷಯವನ್ನು ಲಕ್ಷ್ಯವಾಗಿಟ್ಟುಕೊಂಡು ಒಂದೇ ಅರ್ಥದಲ್ಲಿ ವಿನಿಯುಕ್ತವಾಗುವುವು. ಒಬ್ಬೊಬ್ಬರು ರೂಢಿಸಿಕೊಂಡ ಒಂದೊಂದು ವರ್ಣ ವ್ಯಾಪಾರದಿಂದ ಜಗತ್ತಿಗೆಲ್ಲಾ ಯೋಗಕ್ಷೇಮ ಸಿದ್ಧಿಯಾಗುವುದು. ಮತ್ತು ಪ್ರತಿಯೊಂದು ವರ್ಣವೂ ಉಳಿದವುಗಳ ಪರಸ್ಪರ ಸಹಾಯದಿಂದಲೇ ಬೆಳಗಬೇಕಾಗಿರುವುದು. ಸೃಷ್ಟಿಯಲ್ಲಿ ಕಾಣಬರುವ ಸಮಸ್ತ ಚೇತನಾಚೇತನ ವಸ್ತುಗಳಲ್ಲೆಲ್ಲಾ ಇವುಗಳು ವ್ಯಷ್ಟಿಯಾಗಿಯೂ ಸಮಷ್ಟಿಯಾಗಿಯೂ ಎದ್ದು ಕಾಣುವುವು. ವೇದದ ರುದ್ರ ನಮಕ ಪ್ರಕರಣದಲ್ಲಿ ಸಕಲ ಗುಣಕರ್ಮಶಕ್ತಿವಿಧಾನಗಳು ಉಕ್ತವಾಗಿವೆ. ಚಮಕ ಪ್ರಕರಣದಲ್ಲಿ 'ಮೇ' ಶಬ್ದ ಪ್ರಯೋಗದ ಔಚಿತ್ಯವು ಗಮನಾರ್ಹವಾಗಿದೆ. ಪ್ರಪಂಚದಲ್ಲಿ ಗೋಚರವಾಗುವ ವಸ್ತುಗಳು ಈಶಾವಾಸ್ಯವಾಗಿ ಆತ್ಮ ಪ್ರೀತಿಗಾಗಿರುವುವು.

ಸಹಜವೃತ್ತಿ : ಒಂದೊಂದು ಕಡೆ ಒಬ್ಬೊಬ್ಬ ದೇಹಿಯಲ್ಲಿ ಸಹಜವಾದ ಒಂದೊಂದು ಪ್ರಧಾನವಾದ ವೃತ್ತಿಯಿರುವುದು. ಕ್ಷೇತ್ರ ಮತ್ತು ಆವರಣಗಳು ಬಹು ವ್ಯಕ್ತಿಗಳಿಗೆ ಆಶ್ರಯವನ್ನು ಕೊಡುತ್ತವೆ. ವ್ಯಕ್ತಿಯ ವರ್ಣ – ವೃತ್ತಿಯನ್ನು ಇವು ಸಾಮಾನ್ಯವಾಗಿ ಸೂಚಿಸುವುದಾದರೂ ವೃತ್ತಿಯು (ವರ್ಣವು) ವೈಯಕ್ತಿಕವಾಗಿ ಋಣ ಕರ್ಮವನ್ನು ಆಶ್ರಯಿಸುವುದು. ವಂಶದ ಪರಂಪರೆ ಮೊದಲಾದ ಗುಣಗಳು ವ್ಯಕ್ತಿಗಳಲ್ಲಿ ಆಕಸ್ಮಿಕವಾಗಿ ಕಾಣುವ ಸಮಾನ ಗುಣಗಳಿಂದ ಗೌಣವಾಗಿ ಹೇಳಲ್ಪಡುವ ಸಂಕೇತವಾಗಿರುತ್ತವೆ. ವಂಶದಲ್ಲಿ ಜನ್ಮವೆತ್ತಿದುದರಿಂದಲೇ ಆರ್ಥಿಕ ಪಾರಮಾರ್ಥಿಕಾದಿ ವಂಶದ ಗುಣಗಳಿಗೂ ಆಯಾ ರಾಜ್ಯವೆಂಬ ಪ್ರಭುತ್ವಕ್ಕೂ ಕರ್ಮಕ್ಕೂ ಅಧಿಕಾರವುಂಟಾಗುವುದಿಲ್ಲ. ವಂಶದಲ್ಲಿ ಉಂಟಾದ ಜನ್ಮದಿಂದ ರಾಜನೀತಿಯು ತಿಳಿಸುವಂತೆ * ಆರ್ಥಿಕ ಸಂಪತ್ತು

---

* ರಾಜನೀತಿ ಮತ್ತು ಸಂಪ್ರದಾಯಗಳ ಅರಿವು ಇಲ್ಲದೆ ಋಣ ಪ್ರಾಬಲ್ಯಕ್ಕೆ ಒಳಗಾಗಿ ವ್ಯವಹಾರವನ್ನು ಕೆಡಿಸುವ ವೃತ್ತಿ ಪಲ್ಲಟಗಳಿಂದ ನೀತ್ಯನುಶಾಸನವು ಸಡಿಲವಾಗಿ ಭೂಮ್ಯಾಕಾಶಗಳಲ್ಲಿ ಶಕ್ತಿಗಳ ವೈಷಮ್ಯವು ತುಂಬಿಕೊಂಡು ಉತ್ಪಾತಗಳಿಗೆ ಕಾರಣವಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಗಳಿಗೆ ಮಾತ್ರ ಋಣಾನುಬಂಧ ರೀತ್ಯಾ ಸಂಸ್ಕೃತಿಯು ಮತ್ತು ಆಚಾರದ ನಿಯಮಗಳನ್ನೂ ವ್ಯವಹಾರವನ್ನೂ ಅನುಸರಿಸಿ ಅಧಿಕಾರ ಪ್ರಾಪ್ತಿಯಾಗುವುದು. ಕಾಕತಾಲೀಯ ನ್ಯಾಯದಂತೆ ವ್ಯಕ್ತಿಯ ಮತ್ತು ಕ್ಷೇತ್ರ-ಆವರಣಗಳ ವಿಶಿಷ್ಟ ಗುಣಕರ್ಮಗಳು ಸಮಾನವಾಗಿರಬಹುದು. ತಂದೆಯಂತೆ ಮಗ ಎಂದು ಹೇಳುವ ಉಪಲಕ್ಷಣವು ಔಪಚಾರಿಕವೇ ಹೊರತು ನಿಯಮವಲ್ಲ, ನಿಯತವಲ್ಲ. ವ್ಯಕ್ತಿಗೆ ಸಾಧುವಾದ ಗುಣಗಳನ್ನು ಮಂತಕ್ಕೆ ಆರೋಪಿಸುವುದು ಯುಕ್ತವಲ್ಲ. ವ್ಯವಹಾರವು ಸಾಮೂಹಿಕವಾಗಿರಬೇಕಾದಾಗ ಚಿಹ್ನ-ಲಕ್ಷಣಗಳನ್ನು ಗೊತ್ತುಮಾಡಿಕೊಂಡು ವ್ಯವಹರಿಸಬೇಕಾಗಿರುತ್ತದೆಯಾಗಿ ರಾಜನೀತಿಯು ಮುಂದೆ ತನ್ನ ವೈಶಿಷ್ಟ್ಯವನ್ನು ಪ್ರಕಾಶಿಸದೆ ಸಾಮಾನ್ಯವಾಗಿ ಕಾಣುವ ವೃತ್ತಿ (ವರ್ಣ) ಗಳನ್ನು ಬೆಳಗಬೇಕಾಗಿರುತ್ತದೆ. ಇದರಿಂದ ವ್ಯವಹಾರ ನೀತಿಗೂ ವ್ಯಕ್ತಿಗೂ ಬಾಧಕವಾಗದೆ ಹೊಂದಿಕೆಯಿಂದ ಶಾಂತಿಕಲ್ಪನೆಯಾಗುವುದು. ವೃತ್ತಿಯೂ ಆವರಣವೂ ವೈಷಮ್ಯವನ್ನು ಹೊಂದಿ ಪರಸ್ಪರ ವಿಮುಖಗಳಾದಾಗ ಸಂಚವಲಯ ರಾಜ್ಯವು ಹಿಡಿತಕ್ಕೆ ಸಿಕ್ಕದೆ ಕ್ಷೋಭೆಯುಂಟಾಗಿ ಮೃಗರಾಜ್ಯಭಾರಕ್ಕಿಂತಲೂ ಕೀಳಾಗುವುದು. ಸಮಾಜದ ಪರಿಮಿತಿಯಲ್ಲಿರುವ ವ್ಯಕ್ತಿಯು ವೈಯಕ್ತಿಕವೂ ಸಾಮಾಜಿಕವೂ ಆದ ಗುಣಗಳಿಂದ ಹೀನವಾಗಿದ್ದರೂ ಸಮಾಜದ ಬಲವೇ ಮೊದಲಾದ ಆವರಣಗಳಿಂದ ಆ ಗುಣಗಳನ್ನು ಆರೋಪಿಸಿಕೊಂಡು ಅಂತಃ ನಿಸ್ಸಾರವಾಗಿದ್ದರೂ ರಾಜರಾಜ್ಯಗಳ ಕ್ಷೋಭೆಗೆ ಕಾರಣವಾಗುವುದು. ಇವು ಇದುವರೆಗಿನ ಚರಿತ್ರೆಗಳಿಂದ ಸ್ಪಷ್ಟವಾಗುವುದು.

## ಜನ್ಮ ಗೌಣ; ವರ್ತನೆಯು ಪ್ರಧಾನ

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ — ಎಂಬಂತೆ ಋಣ ಶೋಧನೆಗಾಗಿ ಶೂದ್ರನು ಜನ್ಮವನ್ನು ಹೊಂದುತ್ತಾನೆ. ಋಣ ಶೋಧನೆಗಾಗಿ ಹೊಂದಿದ ಜನ್ಮವು ಶೂದ್ರವಾಗುತ್ತದೆ. ಶಕ್ತಿ ಸ್ವಾತಂತ್ರ್ಯ ಪ್ರಯೋಗಗಳಿಂದ ಋಣ ಕಲ್ಪನೆ, ಋಣಾನುಭವ, ಋಣ ಪರಿಹಾರ, ಋಣ ನಿವೃತ್ತಿಗಳಿಗೆ ವ್ಯವಸಾಯ ಮಾಡುವುದೇ ದ್ವಿತ್ವವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವಿಜತ್ವ ಶೂದ್ರತ್ವಗಳು ಸರ್ವ ಸಾಮಾನ್ಯವಾದುವು. ಋಣಶೋಧನೆಯು ಶೂದ್ರವು ಒಂದೇ. ದ್ವಿಜವು ಕರ್ಮಕ್ಕೆ ತಕ್ಕಂತೆ ವೈಶ್ಯಾದಿ ಹೆಸರುಗಳನ್ನು ಹೊಂದುವುದು. ನಿಷಾದವು ಶೂದ್ರಾದಿ ಚತುಷ್ಟಯಗಳಿಂದ ಅಂಗವಾಗಿ ಆವಿರ್ಭವಿಸುವುದು. ಇವೆಲ್ಲವೂ ಕುಂಡಲಿನೀ ಶಕ್ತಿ ಪ್ರಕಾಶಕ ಯಜ್ಞೋಪವೀತ ಧಾರಣೆಯ ಸಂಸ್ಕೃತಿಯಿಂದ ಬ್ರಹ್ಮಾನುಸಂಧಾನ ತತ್ಪರವಾದ ದೀಕ್ಷೆಯನ್ನು ಸ್ವೀಕರಿಸುವುವು ಬ್ರಹ್ಮಾನುಸಂಧಾನ ಗರ್ಭಿತವಲ್ಲದ ಪ್ರಪಂಚವ್ಯಾಪಾರಗಳು ವಿವಿಧವಾಗಿರುವುವು; ಬ್ರಹ್ಮಾನುಸಂಧಾನ ವ್ಯಾಪಾರಕ್ಕೆ ಅರ್ಹತೆಯನ್ನು ಹೊಂದಲು ಹೊಂಚುಹಾಕುವವುಗಳಾಗಿ ಬ್ರಹ್ಮಾನುಸಂಧಾನ ರಹಿತ ಶೂದ್ರಾದಿಗಳೆಂಬ ಶಾರೀರಕ ಮಾನಸಿಕ ಭಾವಗಳನ್ನು ಅನುಸರಿಸುತ್ತವೆ.

ಋಣಾನುಬಂಧ, ಬೀಜ, ಕ್ಷೇತ್ರ- ನ್ಯಾಯಗಳಿಗನುಸಾರವಾಗಿ ವೈಯಕ್ತಿಕವಾಗಿಯೂ ಅಭ್ಯಸ್ತ ಕರ್ಮವಾದ ಆಚಾರವ ಸಂಪ್ರದಾಯವನ್ನು ಪರಿಗಣಿಸುವ ವ್ಯವಹಾರದ ಅಂತಸ್ತಿಗನುಗುಣವಾಗಿಯೂ ಜೀವನವನ್ನು ಸಾಗಿಸುವ ಮಾರ್ಗವು ಉದಯಿಸದೇ ಇರುವ ಅವಸ್ಥೆಯನ್ನು ಅಂದರೆ ಶೈಶವ, ಬಾಲ್ಯಗಳನ್ನು ಕುಟುಂಬಕ್ಕೆ ಸಂಬಂಧಿಸಿದಂತೆ ವ್ಯವಹರಿಸಿ ಜನ್ಮಕ್ಕೂ ವರ್ತನೆಗೂ ಐಕ್ಯವನ್ನು ಕಲ್ಪಿಸುವ ವಾಡಿಕೆಯಿದೆ. ಆದರೆ ವರ್ತನೆಯು ವೈಯಕ್ತಿಕವಾದುದು; ಆಕಸ್ಮಿಕವಾಗಿ, ಸಾನ್ನಿಧ್ಯದಿಂದ ಕೌಟುಂಬಿಕವು ಸಾಮಾಜಿಕವು ಎನಿಸಿಕೊಳ್ಳಬಹುದು. ಸುಖಂಕರವಾದ ವಿಧೇಯತೆ, ಶುಶ್ರೂಷೆ, ಋಣ ಶೋಧನಗಳನ್ನು ಜನ್ಮತಃ ಪ್ರಧಾನವಾಗಿಟ್ಟುಕೊಂಡು ಶುಶ್ರೂಷಾದಿಗಳಲ್ಲಿಯೇ ಜೀವನವನ್ನೂ ಸಾಗಿಸುವವರು ಶೂದ್ರವರ್ತನೆಯುಳ್ಳವರಾಗಿರುತ್ತಾರೆ. ಸಮಾಜದ, ಕುಟುಂಬದ ಕರ್ಮವನ್ನು ಎತ್ತಿ ಹಿಡಿದು ವೃದ್ಧಿಗೊಳಿಸುವುದಕ್ಕಾಗಿ ವೈಶ್ಯ, ಕ್ಷತ್ರಿಯ, ಶ್ರೋತ್ರಿಯಾದಿಗಳನ್ನು ಅತಿಶಯವಾಗಿ ಸಾಧಿಸುವವರು, ಅವರವರ ವೈಶ್ಯ ವರ್ತನೆ, ಕ್ಷತ್ರಿಯ ವರ್ತನೆ, ಶ್ರೋತ್ರಿಯ ವರ್ತನೆ, ನಿಷಾದ ವರ್ತನೆಗಳನ್ನೆಲ್ಲಾ ಶೂದ್ರಕ್ಕೆ ಅಧೀನ ಮಾಡಿದಂತೆ ಜೀವನ ವೃತ್ತಿಯನ್ನು ಮುಖ್ಯವಾದ ಯಜ್ಞದಂತೆ ನಿರ್ವಹಿಸುತ್ತಾರೆ.

'ತಪಸೇ ಶೂದ್ರಂ' ಎಂಬಂತೆ ತಪೋಯಜ್ಞಕ್ಕೆ ನಿಯಮೋಲ್ಲಂಘನೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯಿಲ್ಲದಿರುವಿಕೆ, ನಿಯಮ ಪರಿಪಾಲನೆ ಎಂಬ ಶೂದ್ರವನ್ನು ಪಶುವಾಗಿ ಯಿಟ್ಟುಕೊಳ್ಳಬೇಕು. ನಿಧೇಯತೆ, ಶುಶ್ರೂಷೆಯಿಂದ ಋಣಶೋಧನ ವೆಂಬ ಶೂದ್ರವನ್ನು ಬಲಿಯಾಗಿ ಅರ್ಪಿಸಿ ಋಣ ಶೋಧನ ಫಲವಾದ ತಪೋಯಜ್ಞವನ್ನು ಸಾಧಿಸಬೇಕಾಗುವುದು.

ವ್ಯವಹಾರ ರಾಜನೀತಿಯ ದೃಷ್ಟಿಯಿಂದ ಜನ್ಮ ಮತ್ತು ವರ್ತನೆಗಳ ಸಾಮರಸ್ಯವು ಸಾಮ್ರಾಜ್ಯ ಸಿದ್ಧಿಪ್ರದವಾದುದು. ವರ್ತನೆಗಳು ಕಾಲ ಕ್ರಮೇಣ ಪಕ್ವವಾಗಿ ಪ್ರಕಾಶವಾಗುವುವು. ಜನ್ಮಾಂತರದ ಅಥವಾ ತಾತ್ಕಾಲಿಕ ಋಣ ಪರಿಪಾಕರೀತ್ಯಾ ಆಕಸ್ಮಿಕವಾಗಿ ಬದಲಾವಣೆಯನ್ನು ಹೊಂದಬಹುದು. ಆದುದರಿಂದ ವ್ಯಕ್ತಿಗಳ ಆರ್ಥಿಕ ವ್ಯವಹಾರಾದಿಗಳಿಗೆ ಜನ್ಮವನ್ನು ಪ್ರಧಾನವಾಗಿ ಪರಿಗಣಿಸುವುದರ ಔಚಿತ್ಯವು ಚರ್ಚಾಸ್ಪದ ವಾದುದು. ಕುಟುಂಬ ಸಂಪ್ರದಾಯಕ್ಕೆ ವಿರುದ್ಧವಾದ 'ಜನ್ಮ'ವುಳ್ಳ ಸನ್ನಿವೇಶಗಳಲ್ಲಿ ವ್ಯಕ್ತಿಗಳು ತಮ್ಮ ಋಣಕ್ಕೆ ತಾವೇ ಬದ್ಧರಾಗಿರುತ್ತಾರೆ. ವ್ಯಕ್ತಿಗಳ ಆಂತರಂಗಿಕವಾದ ಋಣಕ್ಕೆ ವಿರುದ್ಧವಾದ (ವರ್ತನೆ—ವರ್ಣ) ಜನ್ಮಕ್ಕೂ ಬಾಹ್ಯದಲ್ಲಿ ವ್ಯವಹರಿಸಲ್ಪಡುವ ವರ್ಣ-ವರ್ತನೆಗೂ ಪರಸ್ಪರ ಹೊಂದಿಕೆಯಿಲ್ಲದೆ ಇರುವುದನ್ನು ಉದಾಹರಿಸುವ ಅನೇಕ ನಿದರ್ಶನ ಗಳಿವೆ. ಪಂಚವಲಯ ರಾಜ್ಯಭಾರದ ದೃಷ್ಟಿಯಿಂದ ಪ್ರಜೆಗಳಿಗೆ ಅವರವರ ವರ್ತನೆಯು ಪ್ರಧಾನವಾಗಿ ಐಹಿಕಾಮುಷ್ಮಿಕಗಳನ್ನು ಕೊಡುತ್ತದೆ. ಕೇವಲ ವೈಯಕ್ತಿಕವಾದ ಆರ್ಥಿಕ ಕ್ಲೇಶಗಳಿಂದ ಶಾಂತಿ ಭಂಗವಾಗುವ ಸಂದರ್ಭಗಳಲ್ಲಿ ಸಮಾಜ ರಾಜ್ಯಭಾರವು ವ್ಯಾವಹಾರಿಕ ವಾಗಿ ವರ್ತನೆಯನ್ನು ನಿರ್ಣಯಿಸುವುದಕ್ಕೂ ಶಾಂತಿಯನ್ನು ಕಲ್ಪಿಸುವು ದಕ್ಕೂ ಸಮರ್ಥವಾಗುವುದು.

ಬಾಹ್ಯಪರಿಸ್ಥಿತಿಯು ಸೂಚಿಸುವಂತೆ ವಿರುದ್ಧವಾದ ಸನ್ನಿವೇಶದಲ್ಲಿ ಜನನವನ್ನು ಪಡೆದವರ ನಿಜಾಂಶವು ಮರೆಯಾಗುವ ಸಂಭವವಿರುತ್ತದೆ. ಇಂತಹವರಿಗೆ, ಬಾಹ್ಯ ಪರಿಸ್ಥಿತಿಯಲ್ಲಿ ಕಾಣುವ ಕ್ಷೇತ್ರ ಬೀಜಗಳ ಸಂಪ್ರದಾಯಕ್ಕೆ ತಕ್ಕಂತೆ ಕೆಲವು ಸಂಸ್ಕೃತಿಗಳು ಹೊರಗಿನ ಆವರಣದ ಪ್ರಭಾವದಿಂದ ನಡೆಯಬಹುದು. ಇವು ಪರಿಣಾಮಕಾರಿಗಳಾಗಲಾರವು ಎಂಬುದು ಅನೇಕರ ಅನುಭವಕ್ಕೆ ಬಂದಿದೆ. ವಿವೇಕೋದಯವಾಗುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಆಯುಃ ಪರಿಮಿತಿವರೆಗೂ ಕುಟುಂಬ ವರ್ಣದ ವರ್ತನೆಯು ಹೆಸರು ವ್ಯವಹಾರದಲ್ಲಿದ್ದು ಮುಂದುವರಿಯುತ್ತಿದ್ದರೂ ವರ್ತನೆಗೆ (ಕರ್ಮ-ಆಚಾರ-ಅನುಷ್ಠಾನಾದಿಗಳಿಗೆ) ಮತ್ತು ಅವುಗಳ ಫಲಕ್ಕೆ ಮಾತ್ರ ವ್ಯಾವಹಾರಿಕವಾಗಿ ಗೌರವ ಪುರಸ್ಕಾರಗಳು ಸಲ್ಲತಕ್ಕದ್ದಾಗಿದೆ. ಬಹಿಃ ಕಾಣುವ ಜನ್ಮವರ್ಣ ಮತ್ತು ತಾತ್ಕಾಲಿಕ ಜೀವನದ ವರ್ಣ ವರ್ತನೆಗಳು ಪರಸ್ಪರ ವಿರುದ್ಧವಾದಾಗಲೂ, ವ್ಯಾಮೋಹ ಪರವಶರಾಗಿ ವರ್ತನೆಯು ದೈವಿಕ ಪೈತೃಕಾದಿ ಕರ್ಮಾನುಷ್ಠಾನದಲ್ಲಿ ಬಹಿಃ ಕಾಣುವ ಜನ್ಮವರ್ಣವನ್ನೇ ಉದ್ಘೋಷಿಸಬಹುದು. ಆದರೂ ಜನ್ಮದ ನಿಜವಾದ ಮೂಲ ಕಾರಣವು ಪ್ರಬಲವಾಗುವುದರಿಂದ ಬಾಹ್ಯ ಪರಿಸ್ಥಿತಿಯು ಕರ್ಮಗಳು ಕೇವಲ ಆಡಂಬರವಾಗಿ ಪರಿಣಮಿಸಿ ವೈಯರ್ಥ್ಯವನ್ನುಂಟುಮಾಡುವುವು. ತರ್ಕಬದ್ಧವಾದ ಈ ಅನುಭವಗಳು ಮಂತ್ರಗಳಲ್ಲಿ ಗರ್ಭಿತವಾಗಿವೆ. ಕರ್ಮಗಳು ಸಾರ್ಥಕವಾಗಲು ಉಚಿತವಾದ ಮನೋಭಾವ ಸಂಸ್ಕೃತಿಯು ಅಳವಡಿಸಲ್ಪಟ್ಟಿದೆ.

ವ್ಯಕ್ತಿಯು ಆರಿಸಿದ ಮತ್ತು ನಡೆಸಿದ ಕರ್ಮವನ್ನೂ ಅದರ ಫಲವನ್ನೂ ಮತ್ತು ವರ್ಣ-ವರ್ತನೆಗಳನ್ನೂ ವ್ಯಕ್ತಿಯ ಉಪಯೋಗಕ್ಕಾಗಿ ವ್ಯಕ್ತಿಯ ಇಷ್ಟ ಮತ್ತು ನಿರ್ಣಯದಂತೆ (ವ್ಯಕ್ತಿಯ ಕರ್ಮ ಪುಸ್ತಕದಲ್ಲಿ ಎಂಬಂತೆ) ಪ್ರಕೃತಿಯು ವಿಧೇಯತೆಯಿಂದ ಉಲ್ಲೇಖಿಸಿ ಪಂಜೀನಿಬಂಧನ ಮಾಡುವುದು. ಕರ್ಮವು ಪಾಕವಾದಂತೆ (ಕಾಲಾನುಸಾರ) ಅದು ವರ್ತನೆಯಲ್ಲಿ ಸ್ವಯಂ ಪ್ರಕಾಶವಾಗಿ ವ್ಯಕ್ತಿಯ ನಿಜಸ್ಥಿತಿಯನ್ನು ಘೋಷಿಸುವುದು. ಈ ರಹಸ್ಯವನ್ನು ತಿಳಿದು ಕುಟುಂಬದ ಹೆಸರು ಸತತವಾಗಿ ಮುಂದುವರಿಯಲು ಉಂಟಾಗುವ ವಿಘ್ನವನ್ನು ಪರಿಹರಿಸಲು ಪುತ್ರರನ್ನು ದಾನ ಮಾಡುವುದೂ ಸ್ವೀಕರಿಸುವುದೂ ಆಚಾರವಾಗಿದೆ. ಜನ್ಮ ವರ್ಣವನ್ನೂ ಕುಟುಂಬವನ್ನೂ ಬೇರ್ಪಡಿಸಿ ಅನ್ಯಕುಲವನ್ನು ಸೇರುವುದಕ್ಕೆ ಆಗಬೇಕಾದ ಶಾರೀರಕ ಮಾನಸಿಕ ಸಂಸ್ಕೃತಿಗಳನ್ನು ವಿಧಿಸಿ ಪ್ರಯೋಗಿಸುತ್ತಾರೆ. ಹೀಗೆ ಜನನವನ್ನು ಹೊಂದಿದ ಕುಟುಂಬವನ್ನು ತ್ಯಾಗಮಾಡುವ ಸನ್ನಿವೇಶವಿರುವುದರಿಂದ ಜನ್ಮವು ಗೌಣವೇ ಹೊರತು ಸಾರ್ವಭೌಮಿಕ ಪ್ರಾಧಾನ್ಯವನ್ನು ಹೊಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಲಾರದು ದತ್ತ ಪುತ್ರನಾದವನು ತನ್ನ ವೈಯಕ್ತಿಕ ವರ್ತನೆಯನ್ನು ಸಾಧಿಸುವವನಾಗಿರುತ್ತಾನೆ.*

ಸಂಸ್ಕೃತಿ-ಆಚಾರ-ದೃಷ್ಟಿಯಿಂದ ಯಾವ ವ್ಯಕ್ತಿಯು ಯಾವ ಆಚಾರವನ್ನು ಅಭ್ಯಾಸ ಮಾಡುತ್ತಾನೆಯೋ ಯಾವುದು ಸ್ವಧರ್ಮವೆನಿಸ ಬೇಕೋ ಅಂತಹ ವೈಯಕ್ತಿಕ ರಹಸ್ಯಗಳು † ಅತೀಂದ್ರಿಯ ವಿಷಯ ವಾದುದರಿಂದ ಅದರ ಗೋಜನ್ನು ಬಿಟ್ಟು ಶಾಂತಿ ಪರಿಸ್ಥಿತಿಗೆ ಮೌನಾದಿ ಗಳಿಂದ ವ್ಯವಹರಿಸುವುದು ಮೇಲು. ಜನ್ಮವರ್ಣಕ್ಕೂ ಜೀವನ ವರ್ಣ-ವರ್ತನೆಗೂ ಪರಸ್ಪರ ಸಾಮ್ಯವಿರುವಂತೆ ಕಂಡರೂ ಜನ್ಮವರ್ಣವನ್ನು ರೂಢಿಸುವ ವರ್ತನೆಯು ವ್ಯಕ್ತಿಯ ಅಂತರಂಗದಲ್ಲಿ ಇಲ್ಲದಿರಬಹುದು. ಆದುದರಿಂದ ವ್ಯಕ್ತಿಗಳ ಜನ್ಮ ವರ್ಣದಿಂದಾಗಲೀ ಜೀವನ ವರ್ತನೆ ಯಿಂದಾಗಲೀ ಕುಟುಂಬ, ಸಮಾಜ, ಪ್ರದೇಶ, ದೇಶಗಳ ಪ್ರಜೆಗಳು ವಂಚಿತರಾಗದಂತೆಯೂ, ಒಂದು ವ್ಯಕ್ತಿಯ ಜನ್ಮವರ್ಣ ಮತ್ತು ಜೀವನ ವರ್ಣಗಳ ಪರಸ್ಪರ ಹೊಂದಿಕೆಯಿಂದ ಆಗಬಹುದಾದ ಫಲವು ಶಾಂತಿ ದಾಯಕವಾಗುವುದಕ್ಕೂ ಪರಸ್ಪರ ವೈಷಮ್ಯದಿಂದ ದುಷ್ಫಲವಾಗಲೀ ವಿಪ್ರತಿಕ್ರಿಯಾಫಲವಾಗಲೀ ಪ್ರಜೆಗಳ ಶಾಂತಿಗೆ ಕುಂದಕವನ್ನುಂಟು ಮಾಡದಂತೆ ಎಚ್ಚರಿಕೆಯಿಂದಿರುವುದಕ್ಕಾಗಿಯೂ, ಸರ್ವ (ಧರ್ಮ) ಆಚಾರಗಳನ್ನೂ ವರ್ತನೆಗಳನ್ನೂ ಸಂಶೋಧಿಸಿ ಪರಿಶೋಧಿಸುವ ಕ್ಷತ್ರ-ರಾಜಧರ್ಮದಿಂದ ಪ್ರತಿ ಪ್ರಜೆಯೂ ತನ್ನನ್ನೂ ಇತರರನ್ನೂ ಜಾಗರೂಕತೆ ಯಿಂದ ಪರೀಕ್ಷಿಸಬೇಕಾಗಿರುತ್ತದೆ. ಪ್ರಜೆಗಳು ತಮ್ಮ ಪ್ರಭುಶಕ್ತಿಯನ್ನು ಪ್ರಯೋಗಿಸಿ ಮತಿಶಾಸನಾದಿಗಳಿಂದ ಬದ್ಧರಾದ ಪ್ರಜೆಗಳನ್ನು ಆರಿಸಿ, ಶಾಸಕರನ್ನಾಗಿ ನಿಯಮಿಸಿಕೊಂಡು ನೀತಿಗೆ ವಿಧೇಯರಾಗಿರುವುದು ಪ್ರಜೆಗಳ ಕರ್ತವ್ಯವಾಗಿರುತ್ತದೆ.

---

* ರಾಜ್ಯ ವ್ಯವಹಾರಗಳಲ್ಲಿ ವೃತ್ತಿಯನ್ನು ಪ್ರಧಾನವಾಗಿ ಪರಿಗಣಿಸ ಬೇಕೇ ಹೊರತು ಜನ್ಮ-ಜಾತಿ ಗಣನೆಗೆ ಪ್ರಾಧಾನ್ಯವನ್ನು ಕೊಡುವುದು ರಾಜನೀತಿಯಲ್ಲ.

† ಜಾಬಾಲನ ಜನ್ಮ ರಹಸ್ಯದ ವಿಚಾರ ವೇದದಲ್ಲಿ ವರ್ಣಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವಥಾ, ಸಮ್ಯಗ್ವ್ಯವಹಾರವೂ, ಕರ್ತವ್ಯಾಕರ್ತವ್ಯ ವ್ಯವಸ್ಥೆಗಳೂ ಪ್ರಜೆಗಳ ಪ್ರಭುತ್ವ (ರಾಜ) ಶಾಸನದಿಂದ ಕ್ರಮಗೊಳಿಸಲ್ಪಡಬೇಕಾಗಿರುತ್ತದೆ. ತಮ್ಮ ದೇಶದ ರಾಜಶಾಸನಗಳ ಅರಿವೂ, ಕರ್ಮ, ಕರ್ಮಾನುಷ್ಠಾನಗಳ ಫಲಾಫಲಗಳು ಋಣ ಮೂಲ ಮತ್ತು ಮಿತಿಗಳ ವಿಮರ್ಶೆಯೂ, ಅವಗಾಹನಕ್ಕೆ ಬಂದ ಪ್ರಜೆಯ ವರ್ತನೆಯು ಸರ್ವೋತ್ತಮವಾದುದು. ಆ ಪ್ರಜೆಯ ವರ್ತನೆಯೇ ಆಯಾ ಮಿತಿಯಲ್ಲಿ ಸ್ವಧರ್ಮವೆನಿಸಿಕೊಳ್ಳುತ್ತದೆ. ಅಂತಹ ಕೆಲವು ಮಹಾತ್ಮರು ಸೇರಿ ಸಾಮಾನ್ಯರ ಜನ್ಮ–ವರ್ಣ–ವರ್ತನೆಗಳನ್ನು ಸಾಕ್ಷಾತ್ಕರಿಸಿ * ಎಚ್ಚರಿಕೆ ಕೊಡುವಂತೆ ಶಾಸನ ಸಂವಿಧಾನವನ್ನು ಏರ್ಪಡಿಸುವ ಪ್ರಭುಶಕ್ತಿಯು ಪರಮಶಾಂತಿದಾಯಕವಾಗುವುದು.

## ಜನ್ಮ ಮತ್ತು ವರ್ತನೆಗಳ ಸತ್ವ ಪರೀಕ್ಷೆ

ಜನ್ಮ ವರ್ಣ ಮತ್ತು ಜೀವನ ವರ್ಣಗಳ ಬಾಹ್ಯ ಪರಿಸ್ಥಿತಿ ವಿವೇಚನೆಯಿಂದ ವ್ಯಕ್ತಿಯು ಆದರ್ಶತ್ವವನ್ನು ಕಂಡುಹಿಡಿಯುವ ಸತ್ವ ಪರೀಕ್ಷೆಯು ಅಪೇಕ್ಷಣೀಯವಾಗಿ ಬಂದಿರುತ್ತದೆ. ಅಡಿಗೆಯ ರುಚಿಯು ಊಟಮಾಡುವಾಗ ಕಾಣುವಂತೆ, ಫಲಪುಷ್ಪಾದಿಗಳು ಉಪಯೋಗಕ್ಕನುಗುಣವಾಗಿ ಗೌರವಾರ್ಹತೆಯನ್ನು ಹೊಂದುವಂತೆ ಎಲ್ಲಾ ವ್ಯಕ್ತಿಗಳೂ ತಮ್ಮ ಅಭ್ಯಸ್ತ ವರ್ತನೆಯಿಂದ ಪ್ರಕೃತಿ ಸಾಕ್ಷಾತ್ಕಾರ ಮೊದಲಾದ ಸಿದ್ಧಿಗಳನ್ನೂ ವರ್ತನೆಯ ಸಂಪೂರ್ಣತೆಯನ್ನೂ ಹೊಂದುತ್ತಾರೆ. ಲೇಖಕನು ಲೇಖನ ವೃತ್ತಿಯಲ್ಲಿಯೂ, ಗಣಕನು ಗಣನಾ ಮತ್ತು ಗಣಿತ ವೃತ್ತಿಯಲ್ಲಿಯೂ ಪೂರ್ಣತೆಯನ್ನು ಹೊಂದಿದ್ದರೆ ಆತನ ವರ್ತನೆಯು ಲೇಖನ ಮತ್ತು ಗಣಿತ ವಾ ಗಣನಾ ಆಗಿರುತ್ತದೆ. ಇತರ

---

* ವಸ್ತುಗಳ ತ್ರಿಕಾಲ, ಪರಿಸ್ಥಿತಿಯನ್ನು ಸಾಕ್ಷಾತ್ಕರಿಸಿ ಪೂರ್ವಭಾವವಾಗಿ ಎಚ್ಚರಿಕೆ ಕೊಡುವ ಸಂವಿಧಾನ ಕ್ರಮಗಳು ಬ್ರಾಹ್ಮೀ ಸಂಸ್ಕೃತಿಯಲ್ಲಿ ನಿಬಿಡವಾಗಿ ಸರ್ವರಿಗೂ ಸರ್ವದಾ ಉಪಕಾರಕ್ಕೆ ಸಿದ್ಧವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಧವಾದ ಅನುಷ್ಠಾನಗಳು ಆತನ ಸ್ವಾಧೀನಕ್ಕೆ ಬಂದವುಗಳಾಗುವುದಿಲ್ಲ ; ಅವುಗಳಿಗೆ ಅರ್ಹನೂ ಅಲ್ಲ. ಈ ಬಗೆಯ ಪ್ರಾಪಂಚಿಕ ವ್ಯಾವಹಾರಿಕ-ಸಾಧನಗಳಿಂದ ವೃತ್ತಿ ವರ್ತನೆಗಳ ಪರೀಕ್ಷೆಯು ಸುಲಭ; ಅವುಗಳಿಂದ ಫಲವನ್ನು ಹೊಂದುವುದೂ ಸುಲಭ. ಈ ವರ್ತನೆಗಳು ಬಹುಕಾಲದಿಂದ ಅನುಸರಿಸಿ ಬಂದ ಅನಂತ ಪ್ರಯತ್ನಫಲವೆಂಬುದನ್ನೂ ವೈಶ್ಯಾದಿ ಪಂಚ ವರ್ತನೆಗಳಲ್ಲಿ ಇವು ಅಳವಡಿಸಲ್ಪಟ್ಟಿವೆ ಎಂಬುದನ್ನೂ ಮರೆಯಬಾರದು.

ಅತೀಂದ್ರಿಯವಾದ ದೇವತಾ ಕಾರ್ಯ ನಿರ್ವಾಹಗಳಲ್ಲಿ ತೊಡಗಿರುವವರು ಪೂರ್ಣತೆಯನ್ನು ಹೊಂದಿರುವ ವಿಚಾರವು ಅವರ ಸುರತ್ವ ಆದಿತೇಯತ್ವ ಸಾಕ್ಷಾತ್ಕಾರಗಳ ಹಂತವನ್ನು ಏರಿರುವ ಅಥವಾ ಏರುತ್ತಿರುವ ಸನ್ನಿವೇಶಗಳಿಂದ ತಿಳಿಯಲ್ಪಡುವುದು. ಸಾಮಾನ್ಯರಿಗೆ ಇದು ತಿಳಿಯದೇ ಕೇವಲ ಆಕಾರಕ್ಕೂ ನಾಮರೂಪಕ್ಕೂ ಬೆರಗಾಗಿ ವಂಚಿತರಾಗಬಹುದು ಅತೀಂದ್ರಿಯ ದೇವತಾ ಕಾರ್ಯಾನುಷ್ಠಾನದಿಂದ ಪೂರ್ಣ ಫಲವನ್ನು ಹೊಂದಬೇಕೆಂದು ಎಳಸುವ ವ್ಯಕ್ತಿಯು ತಾನೂ ಆ ಹಂತಕ್ಕೆ ಏರುವವನಾಗಿ ಆ ಹಂತವನ್ನು ಏರಿರುವ ಅಥವಾ ಏರುತ್ತಿರುವ ಪ್ರಜೆಗಳಿಂದ ಸಹಾಯವನ್ನು ಹೊಂದಿದರೆ ಸಾರ್ವಜನಿಕವಾದ ಫಲವು ಹಸ್ತಗತವಾಗುವುದು. ವ್ಯಾಮೋಹಕ್ಕೆ ಒಳಗಾಗಿಯಾಗಲೀ ಪ್ರತಾರಣೆಗಾಗಲೀ ಅನರ್ಹರಿಂದಾಗಲೀ ಕರ್ಮಾನುಷ್ಠಾನವು ನಡೆದರೆ ಅದು ಮಕ್ಕಳಾಟಿಕೆಯಾಗಿ ಮಕ್ಕಳ ಮಾನಸಿಕ ಸಂಸ್ಕಾರಕ್ಕೆಂದು ಕಲ್ಪಿಸುವ ಆಟಪಾಟಗಳಂತಾಗಿ ಅದಕ್ಕೆ ತಕ್ಕಷ್ಟೇ ಒಳ್ಳೆಯ ವಾ ಕೆಟ್ಟ ಫಲವನ್ನು ಕೊಡುವುದು ಇದನ್ನು ತಿಳಿಯುವ ಜನರು ಮಕ್ಕಳಂತೆ ದುಷ್ಟಫಲಪ್ರದವಾದ ಕರ್ಮಗಳನ್ನು ಮಾಡುತ್ತಾ ತಮಗೂ ಇತರರಿಗೂ ತೊಂದರೆ ಕೊಡುವವರಾಗುವರು. ಸಂಪದಭ್ಯುದಯ ವರ್ತನೆಗಳ ಹೆಚ್ಚು ಹೆಚ್ಚಿಗೆ ಹೊಣೆಗಾರಿಕೆಯು ಪ್ರಭುಶಕ್ತಿಯನ್ನು ಪ್ರಯೋಗಿಸುವ ವರ್ತನೆಯು ಆಯಾ ಅರ್ಹತೆಯಿಂದ ದೂರವಾಗಿದ್ದರೆ ಅಪಾರ ನಷ್ಟಗಳೂ ಪ್ರಜಾಕ್ಷೋಭೆಗಳೂ ಉಂಟಾಗುವುವು.

ಇವೆಲ್ಲವನ್ನೂ ವಿಚಾರಿಸಿದ ಮಾನಸಿಕ ಸಂಸ್ಕೃತಿ ಪೂರ್ಣತೆಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಣ ವರ್ತನೆಗಳಲ್ಲಿ ಅತಿ ಶ್ರೇಷ್ಠವಾದುದು. ಮಾನಸಿಕ ನೀತ್ಯನುಶಾಸನದ ಉನ್ನತ ಶ್ರೇಣಿಯಲ್ಲಿರುವವರು ಮಾನಸಿಕ ಸಂಸ್ಕೃತವಾದ ಪರಿಪೂರ್ಣತೆಯಿಂದ ಸರ್ವ ಸಿದ್ಧಿಗಳನ್ನು ಹೊಂದುವರು. ಆದರೆ ಮಾನಸಿಕ ಪರಿಪೂರ್ಣತೆಯು ಅನುಸಂಧಾನವೆಂಬ ತಪಃಫಲವಾಗಿರುವುದರಿಂದ ಅನೇಕ ಹಂತಗಳನ್ನು ದಾಟಿದನಂತರ ದೊರೆಯತಕ್ಕದ್ದಾಗಿರುವುದು.

ಆದುದರಿಂದಲೇ ಕೇವಲ ಮಕ್ಕಳ ನೀತಿಪಾಠವಾದ ಪಂಚಶೀಲ ದಶಶೀಲಾದಿಗಳನ್ನು ಉಪದೇಶಿಸುವವರ ಉಪದೇಶವು (ಟೊಳ್ಳು) ಜಳ್ಳಾಗುವುದರಿಂದ ಪರಿಣಾಮಕಾರಿಯಾಗುವುದಿಲ್ಲ. ಮತ್ತು ಅವುಗಳು ಅನುಸಂಧಾನರಹಿತವಾದ ಶೂದ್ರವನ್ನು ಬೋಧಿಸುವುದರಿಂದಲೂ ಸ್ವಾತಂತ್ರ್ಯಪ್ರಿಯರಾದ ವ್ಯಕ್ತಿಗಳು ಶೂದ್ರವನ್ನು ದಾಟಿ, ಸ್ವತಂತ್ರವಾಗಿ ನಡೆಸಬಹುದಾದ ವಿವರ ಮತ್ತು ಸಂಸ್ಕೃತಿಗಳನ್ನು ಬೋಧಿಸುವುದಿಲ್ಲವಾದುದರಿಂದಲೂ ಅವುಗಳು ತಾವಾಗಿ ಅಡಗಿ ಹೋಗಿ ಬತ್ತಿ ಹೋಗುವುವು.

ಬುದ್ಧನ ಸೂಕ್ತಿಗಳನ್ನು ಪಾಲಿಸುವುದರಿಂದಲೇ ಬುದ್ಧರಾಗುವುದಿಲ್ಲವಷ್ಟೆ! ಬುದ್ಧನಾಗಲು ನಡೆಸಿದ ಅನುಷ್ಠಾನಗಳಿಂದಲೇ ಬುದ್ಧನಾಗುವ ಸಂಭವವೆಂಬುದನ್ನು ಪ್ರಜೆಗಳು ಜಾಗರೂಕತೆಯಿಂದ ನೆನಪಿನಲ್ಲಿಡಬೇಕು.

## ಸಸ್ಯಾದಿಗಳಲ್ಲಿ ಕ್ಷತ್ರಾಂಗ ವರ್ತನೆಗಳು

ವರ್ತನೆಗಳು ಕ್ರಮಗೊಂಡಿರುವ ಬೇಲಿ, ಕ್ಷೇತ್ರ ಮತ್ತು ಸಸ್ಯಾದಿಗಳಲ್ಲಿ ಗುಣಕರ್ಮಶಕ್ತಿಗಳಿಗನುಗುಣವಾಗಿ ಐದು ಬಗೆಯ ವರ್ತನೆಯ ವ್ಯವಸ್ಥೆಗಳು ಕಾಣುವುವು. ಋಣಾನುಸಾರವಾಗಿ ವರ್ತನೆಯ ಬಂಧನಕ್ಕೊಳಗಾದಂತೆ ಕ್ಷೇತ್ರದ ಸಸ್ಯಾದಿಗಳ ವರ್ತನೆಗಳು ಕ್ಷತ್ರದ ಅಂಗಗಳಾದ ಶ್ರೋತ್ರಿಯ, ವೈಶ್ಯ, ಕ್ಷತ್ರಿಯಗಳೆನಿಸಲ್ಪಡುತ್ತವೆ. ಶೂದ್ರಾಂಗವು ಸರ್ವರಿಗೂ ಸಾಮಾನ್ಯವಾಗಿರುತ್ತದೆ. ವರ್ತನೆಯ ಬಂಧನಕ್ಕೆ ಒಳಗಾಗದ ಬೇಲಿಯಲ್ಲಿ ಇರುವ ಸಸ್ಯಾದಿಗಳು ನಿಷಾದವೆನಿಸಿ ಕೇವಲ ಇರುವಿಕೆಯಿಂದಲೇ ಪರಮೋಪಕಾರ ಮಾಡುವುವು. ಕ್ಷೇತ್ರ ಸಂಪದಭ್ಯುದಯಕ್ಕೆ ಇವೆಲ್ಲವೂ ಕಾರಣವಾಗಿ ಅಳಿಲು ಭಕ್ತಿಯಿಂದ ಪರಸ್ಪರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೇಯಸ್ಸನ್ನು ಸಾಧಿಸುವುವು. ಬೇಲಿಯ ಮುಳ್ಳು ಆಕಸ್ಮಾತ್ ಕಾಲಿಗೆ ಚುಚ್ಚಿಕೊಂಡು ಬಾಧೆಯಾದರೆ ಆ ಬಾಧೆಗೆ ಮುಳ್ಳು ಹೊಣೆಗಾರವಾಗುವುದಿಲ್ಲ; ಪರಮೋಪಕಾರಕವಾದ ಬೆಂಕಿಯಿಂದ ಅನಾಹುತವಾದರೆ ಅದಕ್ಕೆ ಸುತ್ತಮುತ್ತಲಿನ ಸನ್ನಿವೇಶವೇ ಹೊಣೆಯಾಗುವಂತೆ ಅವಿಜ್ಞತೆಯಿಂದ ವರ್ತಿಸಿ ಮುಳ್ಳನ್ನು ದುರುಪಯೋಗಪಡಿಸಿಕೊಂಡ ಕರ್ಮವನ್ನು ಮಾಡಿದ ದೇಹಿಯ ಕರ್ಮವೇ ಹೊಣೆಯಾಗಿರುತ್ತದೆ. ಆದುದರಿಂದ ಗೊತ್ತಾದ ಉಪಯೋಗಕ್ಕಾಗಿ ನಿಂತಿರುವ ವಸ್ತುಗಳನ್ನು ಸದುಪಯೋಗಪಡಿಸಿಕೊಳ್ಳುವುದೂ ವರ್ತನೆಯ ಮಿತಿಯಾಗಿರುತ್ತದೆ.

## ಅಂಗವರ್ತನೆ; ಪರಿವರ್ತನೆ

ಇಂದು ಬೇಲಿಯ ವರ್ತನೆಯಲ್ಲಿರುವ ಸಸ್ಯವು ಹಿಂದೆ ಕ್ಷೇತ್ರದ ಸಸ್ಯವಾಗಿ ಶ್ರೋತ್ರಿಯಾದಿ ವರ್ತನೆಯಲ್ಲಿರುವ ಸಸ್ಯೋಪಾಧಿಯನ್ನು ಹೊಂದಿದ್ದಿರಬಹುದು; ಮುಂದೆ ಅಲ್ಲಿಯೋ ಬೇರೇ ಅಂಗವರ್ತನೆಯ ಸಸ್ಯ ಶರೀರವನ್ನು ಧರಿಸಬಹುದು. ಇಂದು ಶ್ರೋತ್ರಿಯಾದಿ ವರ್ತನೆಯಲ್ಲಿರುವ ಸಸ್ಯವು ಮುಂದೆ ಬೇಲಿಯ ಸಸ್ಯವರ್ತನೆಯನ್ನಾಶ್ರಯಿಸಬಹುದು. ಆದುದರಿಂದ ವರ್ತನೆಯಲ್ಲಾಗಲೀ, ವರ್ತನೆಯ ಅವಸ್ಥೆಗೆ ತಕ್ಕಂತೆ ಸಲ್ಲಿಕೆಯಾಗಬೇಕಾದ ಸತ್ಕಾರ ನಡತೆಯಲ್ಲಾಗಲೀ ಹೆಚ್ಚು ಕಡಿಮೆಯು ತೋರಿದರೂ ತತ್ವತಃ ಸಮತೆಯನ್ನು ಭಾವಿಸುವುದೇ ಪರಮೋತ್ಕೃಷ್ಟವಾದ ಸನ್ಮಾರ್ಗ. (ಆತ್ಮ) ಜೀವಗಳು ಸಂಕಲ್ಪ ಗುಣಶಕ್ತಿಕರ್ಮಗಳಿಗನುಗುಣವಾಗಿ ಪರಿವರ್ತನ ಕ್ರಮದಲ್ಲಿ ವಿವಿಧ ವರ್ತನೆಗಳನ್ನು ಅನುಭವಿಸುವುವು.

## ಕ್ಷೇತ್ರ

ಕ್ಷೇತ್ರವು ಬಹ್ವಾಶ್ರಿತವಾದುದು. ಒಂದೇ ಕ್ಷೇತ್ರವು ನಾನಾವಿಧವಾದ ಸಸ್ಯಾದಿ ದೇಹಿಗಳಿಗೆ ಆಶ್ರಯವಾಗಿರುತ್ತದೆ. ಮತ್ತು ಒಂದೇ ಕ್ಷೇತ್ರದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಸಸ್ಯಗಳನ್ನೂ ಮತ್ತು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸಸ್ಯಗಳನ್ನೂ ಬೆಳೆಯಬಹುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕೃತಿಯಲ್ಲಿ ಕ್ಷೇತ್ರದಲ್ಲಿ ಅನೇಕವಾದ ಆಹಾರ ಮತ್ತು ಪೋಷಕ ದ್ರವ್ಯಗಳು ಅನಂತ ಪ್ರಮಾಣಗಳಲ್ಲಿ ಇದ್ದರೂ ಪ್ರತಿಯೊಂದು ಸಸ್ಯ ದೇಹಿಯೂ ತನಗೆ ಬೇಕಾದ ವಸ್ತುಗಳನ್ನು ಆಯಾ ಮಿತಿಯಲ್ಲಿ ಮಾತ್ರ ಆ ಕ್ಷೇತ್ರದಲ್ಲಿ ಸಂಗ್ರಹಿಸುವುದೇ ಹೊರತು ತನ್ನ (ಋಣ-ಕರ್ಮದ) ಮಿತಿಗೆ ಮೀರಿದ ವಸ್ತುಗಳನ್ನು ಅಥವಾ ತನಗೆ ಬೇಕಿಲ್ಲದ ವಸ್ತುಗಳನ್ನು ಮುಟ್ಟುವುದಿಲ್ಲ. ಅಂತಹ ಇತರ ವಸ್ತುಗಳನ್ನು ಸಂಗ್ರಹಿಸಲು ಸಾಧ್ಯವೂ ಅಲ್ಲ. ಇತರ ಆಹಾರ ವಸ್ತುಗಳು ಅನಂತವಾಗಿ ಕ್ಷೇತ್ರದಲ್ಲಿ ತುಂಬಿದ್ದರೂ ಒಂದು ಗೊತ್ತಾದ ಸಸ್ಯ ದೇಹಿಗೆ ಅವೆಲ್ಲವೂ ಶೂನ್ಯವಾದಂತೆಯೇ.

ನಿದರ್ಶನ: 1) ಬೇವು ಸೇಬು ಗಿಡಗಳಿಗೆ ಆಶ್ರಯವನ್ನು ಕೊಟ್ಟಿರುವ ಒಂದು ಕ್ಷೇತ್ರದಲ್ಲಿ ಬೇವಿನ ಗಿಡವು ತನ್ನ ಪ್ರತಿಭೆಗೆ ತಕ್ಕ ವಸ್ತುಗಳನ್ನು ಋಣ-ಕರ್ಮ ರೀತ್ಯಾ ಸಂಗ್ರಹಿಸಿ ಬೆಳೆಯುತ್ತದೆ. ಇದೇ ಅದರ ಅಭ್ಯಸ್ತಕರ್ಮವಾಗಿ ಆಚಾರವಾಗುತ್ತದೆ. ಸೇಬು ತನಗೆ ಬೇಕಾದವುಗಳನ್ನು ಗ್ರಹಿಸಿ ಸೇಬು ಗಿಡವಾಗಿಯೇ ಬೆಳೆದು ತನ್ನ ಅಭ್ಯಸ್ತ ಕರ್ಮ-ಆಚಾರವನ್ನು ಪಾಲಿಸುತ್ತದೆ. ಬೇವು ಗಿಡದ ದೃಷ್ಟಿಯಿಂದ ಸೇಬು ತುಚ್ಛವಾಗಬಹುದು; ಸೇಬಿನ ಗಿಡದ ದೃಷ್ಟಿಯಿಂದ ಬೇವು ನೀಚವಾಗಬಹುದು. ಹೀಗೆಯೇ ಒಂದರ ದೃಷ್ಟಿಯಿಂದ ಮತ್ತೊಂದು ಹೆಚ್ಚು ಮಹಿಮೆಯುಳ್ಳದ್ದಾಗಿ ಶ್ರೇಷ್ಠವೆನಿಸಬಹುದು. ಆದರೆ ಪಾರಮಾರ್ಥಿಕ-ಪ್ರಕೃತಿ ದೃಷ್ಟಿಗಳಲ್ಲಿ ಎರಡು ದೇಹಿಗಳೂ ಸಮಾನವಾಗಿ ಮುಂದುವರಿಯುತ್ತವೆ. ಮಧ್ಯಮಾರ್ಗದಲ್ಲಿ ವಿವಿಧವಾದ ಅವಸ್ಥೆಗಳನ್ನು ಬೇವು, ಸೇಬು ಉಪಾಧಿಗಳಂತೆ ತಾತ್ಕಾಲಿಕವಾಗಿ ಧರಿಸಿ ಋಣ ಕರ್ಮಾನುಭವದನಂತರ ಉಪಾಧಿಗಳನ್ನು ತ್ಯಜಿಸುವುವು. ಸಂಕುಚಿತ ದೃಷ್ಟಿಯಿಂದ ಮಾನವರೂ ಸಹ .ದಿವ್ಯತೆಯ ರಹಸ್ಯವನ್ನು ತಿಳಿಯದೆ ವಾ ತಿಳಿಯಲಾರದೆ, ಒಂದು ನಿಕೃಷ್ಟವೆಂದೂ ಮತ್ತೊಂದು ಉತ್ಕೃಷ್ಟವೆಂದೂ ಹೇಳಬಹುದು. ಸಾಮಾನ್ಯ ಮಾನವದೃಷ್ಟಿಯಿಂದ ಈಗ ಕಾಣುವಂತೆ ನಿಕೃಷ್ಟವೆಂದು ಹೇಳಬಹುದಾದ ಪದಾರ್ಥವು ಅಂದರೆ ಬೇವು, ಉಪಯೋಗದಲ್ಲಿ ಉತ್ಕೃಷ್ಟವಾಗಿಯೂ ಜೀವಿತಕ್ಕೆ ಅವಶ್ಯಕವಾಗಿಯೂ ಇರಬಹುದು; ಉತ್ಕೃಷ್ಟವೆಂದು ಹೇಳಬಹುದಾದ ಸೇಬು ಉಪಯೋಗದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಕೃಷ್ಟವಾಗಿಯೂ ಜೀವಿತಕ್ಕೆ ಅನವಶ್ಯಕವಾಗಿಯೂ ಇರುವ ಸನ್ನಿವೇಶಗಳೇ ಹೆಚ್ಚಾಗಿರಬಹುದು. ಬೇವಿನ ಗಿಡದಿಂದ ಬಹುಜನಗಳಿಗೆ ಬಹು ವಿಧದಲ್ಲಿ ಉಪಕಾರವಾಗುವುದು. ಸ್ವಭಾವಸಿದ್ಧವಾದಂತೆ ವಾಯುವಿನ ಶುದ್ಧೀಕರಣಕ್ಕೆ ಸಹಾಯವಾದ ಬೇವು ಸಮಸ್ತ ಪ್ರಾಣಿಗಳಿಗೂ, ಅವುಗಳ ಗಣನೆಗೆ ಗಮನಕ್ಕೆ ಬಾರದಿರುವಂತೆಯೇ ಉಪಕಾರಕವಾಗಿರುವುದು. ದೇವತಾ ಗುಣಕರ್ಮಶಕ್ತಿವ್ಯಂಜಕವಾಗಿ ಪೂಜಿಸಲ್ಪಡುವುದು. ಅಶ್ವತ್ಥ ವೃಕ್ಷದ ಜತೆಯಲ್ಲಿ ಬೆಳೆದು ದೇವತಾಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು. ಸೇಬಿನಿಂದ ಸ್ವಲ್ಪ ಜನಗಳಿಗೆ ಮಿತವಾದ ಪ್ರಯೋಜನವಾಗಬಹುದು. ವಿವೇಕದಿಂದ ವಿಮರ್ಶಿಸದೆಯೂ, ತನ್ನ ಮಹಿಮೆಯನ್ನು ತಾನೇ ತಿಳಿಯದೆಯೂ ತಿಳಿಯಬಾರದೆಯೂ ಇರಬಹುದಾದ ಬೇವು, ತನ್ನಿಂದ ಉಪಕಾರವನ್ನು ಹೊಂದಿದ ಜನಗಳು ಕುತ್ಸಿತ ಭಾವನೆಯಿಂದ ವಿವೇಕ ಶೂನ್ಯರಾಗಿ ತನ್ನನ್ನು ನಿಕೃಷ್ಟವಾಗಿ ಭಾವಿಸುವುದನ್ನು ನೋಡಿ ತನ್ನನ್ನೂ ತಾನೇ ತಿರಸ್ಕರಿಸಿ ನೊಂದಲಿಸಿ ಸೇಬನ್ನು ಶ್ಲಾಘಿಸಬಹುದು ಅಥವಾ ಅಸೂಯೆಯಿಂದ ದ್ವೇಷಿಸಬಹುದು. ಸೇಬೂ ಸಹ ತನ್ನದು ಉತ್ಕೃಷ್ಟ ಸ್ಥಿತಿಯೆಂದು ಮೆರೆಯುತ್ತಾ ಬೇವಿನ ಲೋಕೋಪಕಾರಕ ಗುಣವನ್ನು ಮರೆತು ಬೇವನ್ನು ಧಿಕ್ಕರಿಸಬಹುದು. ಇದಕ್ಕೆ ರಸಿಕತಾ ವಿಮರ್ಶಾ ಹೀನವಾದ ಬುದ್ಧಿಯೂ ರಾಜನೀತಿ ಎಂಬ ಮಧ್ಯಮ ಮಾರ್ಗ ಗರ್ಭಿತ ವಾದ ಆಚಾರದ ಜ್ಞಾನವೂ ಇಲ್ಲದಿರುವುದೇ ಕಾರಣ. ಇದರಿಂದಲೇ ಲೋಕದಲ್ಲಿ ವಿರಸವೂ ವಿದ್ವೇಷವೂ ಹೆಚ್ಚಿ ಹರಡುವುದು. ಎಷ್ಟು ದ್ವೇಷ ಮಾಡಿದರೂ ಬೇವುಮರ ದೇಹಿಯು ತನ್ನಲ್ಲಿರುವ ಬೇವಿನ ಉನ್ನತಿಯನ್ನು ಕಿತ್ತುಹಾಕಲು ಸಾಧ್ಯವಿಲ್ಲ ಬೇವನ್ನು 'ಸೇಬು' ಎನ್ನಲಾಗದು. ಸೇಬೂ ಸಹ ಸರ್ವಜನೋಪಕಾರಕವಾಗುವ ಸಾಮಾನ್ಯ ಗುಣವನ್ನು ಹೊಂದಲಾರದು. ಸೇಬೂ ಬೇವು ಎಂದೆನಿಸದು. ಆಯಾ ಜನ್ಮದ ಮಿತಿಯಲ್ಲಿ ಅಷ್ಟಷ್ಟೇ ಕೆಲಸವನ್ನು ಸಾಧಿಸಿ ಮುಂದುವರಿದು ಸರ್ವ ಸಾಮಾನ್ಯವಾದ ಸ್ವಸ್ವರೂಪಾವಸ್ಥಾನಾನುಸಂಧಾನ ಮಾಡಬಹುದು ಅಥವಾ ಹೊಸಹೊಸದಾಗಿ ಋಣವನ್ನು ಕಲ್ಪಿಸಿ ಸಂಕಲ್ಪದಿಂದ ವ್ಯವಸಾಯ ಮಾಡಿ ಸಿದ್ಧಿಯನ್ನು ಹೊಂದಬಹುದು. ಇದರಂತೆಯೇ ದೇಹಿಗಳು ಬೇವಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪಾಧಿಯನ್ನು ಬಿಟ್ಟು ಸೇಬಿನ ಉಪಾಧಿಯನ್ನು ಧರಿಸುವುದಕ್ಕೂ, ಸೇಬಿನ ಉಪಾಧಿಯನ್ನು ಬಿಟ್ಟು ಬೇವಿನ ಉಪಾಧಿಯನ್ನು ಧರಿಸುವುದಕ್ಕೂ ಸರ್ವ ಸ್ವತಂತ್ರರೂ ಸರ್ವ ಶಕ್ತರೂ ಆಗಿರುತ್ತವೆ. ಹಾಗಲ್ಲದೆ ವಾತಾವರಣವನ್ನು ಕೆಡಿಸಿ ಹುಳಿ ಹಿಂಡಿ ಹಾಲನ್ನು ಒಡೆದು ಕೆಡಿಸುವ ದುಷ್ಟ ಪ್ರವರ್ತನೆಗೆ ಶಕ್ತಿಸ್ವಾತಂತ್ರ್ಯಗಳನ್ನು ವಿನಿಯೋಗಿಸುವುದರಿಂದ ದುಷ್ಟ ಫಲಾನುಭವಕ್ಕೆ ಸಂಚಕಾರವಾಗುವುದು.

ನಿದರ್ಶನ : 2) ಆಕಾಶದಲ್ಲಿ ಎಡೆಬಿಡದೆ ತುಂಬಿರುವ ಗಾಳಿಯಲ್ಲಿ ಇಂಗಾಲಾಮ್ಲ ಆಮ್ಲಜನಕ ಮೊದಲಾದ ಅನಿಲವಸ್ತುಗಳಿವೆ. ವೃಕ್ಷಗಳು ತಮ್ಮ ಪೋಷಣೆಗಾಗಿ ಬೇಕಾದ ಇಂಗಾಲಾಮ್ಲವನ್ನು ವಾಯುವಿನಿಂದ ಸಂಗ್ರಹಿಸಿ ಆಮ್ಲಜನಕವನ್ನು ಸೂರ್ಯನ ಶಾಖದ ಸಹಾಯದಿಂದ ಬೇರ್ಪಡಿಸುವುದರಿಂದ ವಾತಾವರಣದಲ್ಲಿ ಇಂಗಾಲವು ಕಡಿಮೆಯಾಗಿ ಆಮ್ಲಜನಕವು ಹೆಚ್ಚಾಗಿ ಸೇರುವುದು. ಇಂತಹ ಆಮ್ಲಜನಕ ಭೂಯಿಷ್ಠವಾದ ವಾಯುವು ಶುದ್ಧವೆನಿಸಿ ಮಾನವತೆಯ ಪರಿಶುದ್ಧತೆಗೂ ಜೀವಿತಕ್ಕೂ ಸಹ ಕಾರಣವಾಗುವುದು. ಇದು ಪ್ರಕೃತಿಯ ಋತದಿಂದ ಪ್ರಕೃತಿಯಿಂದ ಗೊತ್ತಾಗಿರುವ ಪರಸ್ಪರ ಸಹಾಯಕ ಮಹಾಯಂತ್ರ ಸಂವಿಧಾನ. ಇದಕ್ಕೆ ವಿರೋಧವಾಗಿ ನಡೆದರೆ ಸಸ್ಯಸರ್ಗಕ್ಕೂ ಅಹಿತವಾಗಿ ಮಾನವ ವರ್ಗಕ್ಕೂ ಕಳಂಕವಾಗುವುದು.* ಪ್ರಕೃತಿಯ ಋತಕ್ಕೆ ತಗ್ಗಿ

---

* ಋತಕ್ಕೆ ವಿರೋಧವಾಗಿ ಮಾನವರು ಕೆಟ್ಟ ಗಾಳಿಯನ್ನು ಸೇವಿಸುವುದರಿಂದ ರಕ್ತವು ಕೆಟ್ಟು ಮನೋವ್ಯಾಪಾರವೂ ಹೊಲಸಾಗಿ ತಕ್ಕ ದುಷ್ಫಲವನ್ನು ಅನುಭವಿಸುವ ಹೊಣೆಗಾರಿಕೆಗೆ ಗುರಿಯಾಗುತ್ತಾರೆ. ಇಷ್ಟೇ ಅಲ್ಲದೆ, ದುಷ್ಟ ಮನೋವ್ಯಾಪಾರದಿಂದ ವರ್ತನೆಯನ್ನು ಕೆಡಿಸಿಕೊಂಡ ಮಾನವರು ಕುಟುಂಬ, ಸಮಾಜ. ಪ್ರದೇಶ, ದೇಶಗಳ ರಾಜ್ಯಭಾರವನ್ನು ಕಲುಷಿತವನ್ನಾಗಿ ಮಾಡುವವರಾಗುತ್ತಾರೆ. ಆದುದರಿಂದ ಸರ್ವರೂ ಸರ್ವರ ವರ್ತನೆಗಳನ್ನೂ ನೀತ್ಯನುಶಾಸನ ಕ್ರಮಗಳಿಂದಲೂ ಸಾಮಾದಿ ಚತುರೋಪಾಯಗಳಿಂದಲೂ ಕ್ರಮಪಡಿಸಬೇಕಾಗಿರುವ ಹೊಣೆಗಾರಿಕೆಗೆ ಸ್ವಾಭಾವಿಕವಾಗಿಯೇ ಬದ್ಧರಾಗಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಗ್ಗೆ ತನ್ನ ಮಿತಿಯಲ್ಲಿ ವರ್ತಿಸುವ (ನಡೆಯುವ - ಇರುವ; ವೃತ್ ಧಾತು - ಇರು ಎಂದರ್ಥ) ಸಸ್ಯವರ್ಗವು ಮಿತಿ ಮೀರಿ ಹೋಗದೇ ಇರುವುದರಿಂದ ಮಾನವ ಬಾಳ್ವಿಗೆ ಅನುಕೂಲವಾಗಿರುವುದು.

ನಿದರ್ಶನ : 3) ಬ್ರಹ್ಮಾನುಸಂಧಾನ ವರ್ತನೆಗಳು (ಅಭ್ಯಸ್ತ ಕರ್ಮಗಳು-ಆಚಾರಗಳು) ಕ್ಷತ್ರದ ನೆರಳಿನಲ್ಲಿರಬೇಕೆಂದು ಹೇಳಿದೆಯಷ್ಟೆ. ಕ್ಷತ್ರವು ಬಹುಮುಖವಾಗಿರುವುದನ್ನು ಸಸ್ಯವೃಕ್ಷಗಳ ವರ್ತನೆಯಲ್ಲಿಯೂ ನೋಡಬಹುದು. ಸಾಧಾರಣವಾದ ಮತ್ತು ವಿಶೇಷವಾದ ಸಂಸ್ಕೃತಿಗಳಿಂದ ಸಸ್ಯ ವೃಕ್ಷಗಳು ಮಾನವರಿಂದ ಬೆಳೆಸಲ್ಪಡುತ್ತವೆ. ಒಂದು ಕ್ಷೇತ್ರದಲ್ಲಿ ನಾನಾ ಬಗೆಯ ವೃಕ್ಷಗಳನ್ನೂ ಸಸ್ಯಗಳನ್ನೂ ಬೆಳೆಯುತ್ತಾರೆ. ಸಸ್ಯತ್ವ, ವೃಕ್ಷತ್ವ ಮೊದಲಾದ ಗುಣಗಳು ಹೊರತು ಉಳಿದ ವಿಷಯಗಳಲ್ಲಿ ಆಯಾ ಸಸ್ಯ ಮತ್ತು ವೃಕ್ಷಗಳು ಪರಸ್ಪರವಾಗಿ ಭಿನ್ನವಾಗಿ ವೈಯಕ್ತಿಕವಾದ ವೈಶಿಷ್ಟ್ಯವನ್ನು ಹೊಂದಿರುತ್ತವೆ. ಈ ಬಗೆಯ ವೈಶಿಷ್ಟ್ಯದಿಂದ ಒಂದು ಹೆಚ್ಚು ಒಂದು ಕಡಿಮೆಯೆಂದು ತಮ್ಮ ತಮ್ಮಲ್ಲಿ ವ್ಯವಹಾರದ ಬಿಕ್ಕಟ್ಟನ್ನು ಒಡ್ಡಿದರೆ ಯಜಮಾನನ ಇಷ್ಟಕ್ಕೆ ವಿರೋಧವಾಗಿ ಕ್ಷೇತ್ರ ಸಂಪದಭ್ಯುದಯಕ್ಕೆ ಕುಂದು ಉಂಟಾಗುವುದು. ಮತ್ತು ಪಿಂಡಾಂಡ ಬ್ರಹ್ಮಾಂಡಗಳಲ್ಲಿರುವ ತಮ್ಮ ಯಜಮಾನನ ವಿಷಯದಲ್ಲಿ ಉಂಟಾಗಿರುವ ತಮ್ಮ ಋಣವನ್ನು ಬಗೆಹರಿಸಿದಂತಾಗುವುದಿಲ್ಲ.

ಈ ಕ್ಷೇತ್ರ ಸಸ್ಯ ವೃಕ್ಷಗಳ ಕಾವಲಿಗಾಗಿ ರಕ್ಷಾ ಕವಚದಂತೆ ಸದಾ ಒಂದೇ ಸಮನಾಗಿ ಸನ್ನಿಹಿತ (ಸಿದ್ಧವಾದ) ವಾಗಿರುವ 'ಬೇಲಿ'ಯು ಅವಶ್ಯಕವಾಗಿರುತ್ತದೆ. ಬೇಲಿಗಾಗಿ ಬೆಳೆಸಲ್ಪಟ್ಟ ಸಸ್ಯ ವೃಕ್ಷಗಳು ಸಾಕ್ಷಾತ್ತಾಗಿ ಕ್ಷೇತ್ರದ ಯಜಮಾನನಿಗೆ ಫಲವನ್ನು ಕೊಡದಿರಬಹುದು. ಕ್ಷೇತ್ರದ ಮಿತಿಯಲ್ಲಿ ಬಂಧನ - ಋಣ (ಕಮಿಟ್‌ಮೆಂಟ್) ಕ್ಕೆ ಒಳಗಾದ ಸಸ್ಯ ವೃಕ್ಷಗಳು ಆದರಿಸಲ್ಪಟ್ಟರೂ ಬೇಲಿಯ ಸಸ್ಯಾದಿಗಳು ಆದರಿಸಲ್ಪಡದೆಯೂ ಇರಬಹುದು. ಆದರೂ ಋಣ ನಿವೃತ್ತಿಗಾಗಿ ಸೇವೆ ಉಪಕಾರ ಕಾರ್ಯಗಳಲ್ಲಿ ಕ್ಷೇತ್ರದ ಸಸ್ಯಾದಿಗಳಿಗೂ ಬೇಲಿಯ ಸಸ್ಯಗಳಿಗೂ ಸಮಾನವಾದ ಹೊಣೆಗಾರಿಕೆಯೂ ಇರುವುದೆಂಬ ಭಾವನೆಯು ಶಾಸ್ತ್ರೀಯವಾಗಿಯೂ ತರ್ಕಬದ್ಧವಾಗಿಯೂ ಅನುಭವಸಿದ್ಧವಾಗಿಯೂ ಇರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದರಂತೆಯೇ ಕ್ಷೇತ್ರದೊಳಗಿನ ಸಸ್ಯಾದಿಗಳು ತಮ್ಮ ತಮ್ಮ ಮಿತಿಯಲ್ಲಿ ಅರ್ಪಿಸುವ ಸೇವೆಯು ಸಮಾನವಾಗಿರುವುದು. ಫಲದ ಪ್ರಮಾಣ ಗಾತ್ರ ತೂಕಗಳಲ್ಲಿ ಪರಸ್ಪರ ಭೇದವಿರಬಹುದು (ಅಳಿಲು ಭಕ್ತಿ ಮಾಳು ಸೇವೆ) ಋಣ ನಿವೃತ್ತಿ ಎಂಬ ಯಜ್ಞಕಾರ್ಯದಲ್ಲಿ ಲೇಶವೂ ಹೆಚ್ಚು ಕಡಿಮೆಯನ್ನು ಎಣಿಸಬಾರದು. ಕೃಮಿಕೀಟಗಳೂ ಕಳೆ ಗಿಡಗಳೂ ಸಹ ಋಣಕರ್ಮಾನುಸಾರ ಬೆಳೆದು, ಅಳಿದು ಋಣನಿವೃತ್ತಿಗೆ ಸಹಕರಿಸುತ್ತವೆ. ಋತದ, ಕ್ಷೇತ್ರಸಂಪತ್ತಿನ ಮತ್ತು ಯಜಮಾನನ ಪ್ರಯೋಜನಗಳ ದೃಷ್ಟಿಯಿಂದ ಈ ಸೇವೆಗಳಲ್ಲಿ ಪರಸ್ಪರ ಭೇದವಿರುವುದಿಲ್ಲ. ಸಮಯದಲ್ಲಿ ಹುಲ್ಲು ಕಡ್ಡಿಯೊಂದರ ಸೇವೆಯ ಆವಶ್ಯಕತೆಯು ಜೀವನದಾನದಷ್ಟು ಅಸದೃಶ ವಾಗಿರುವುದು ಅದರ ಅಭಾವದಿಂದ ಜೀವನ ಕ್ಲೇಶವುಂಟಾಗುವುದು.

## ವರ್ಣ-ವೃತ್ತಿಗಳು ಅನಿತ್ಯ (ಬದಲಾಗತಕ್ಕವು)

ಯಾವ ವೃತ್ತಿಯಾಗಲೀ ವರ್ಣವಾಗಲೀ ವ್ಯಕ್ತಿಗೆ ಶಾಶ್ವತವಾಗಿ ರುವುದಿಲ್ಲ; ಸರ್ವದಾ ವ್ಯಕ್ತಿಗತವಾಗಿ ಕುಟುಂಬಗತವಾಗಿ ಸಮಾಜಕ್ಕೆ ಸೇರಿದುದಾಗಿಯೂ ಇರುವುದಿಲ್ಲ. ವಿಶ್ವವ್ಯಾಪಿಯಾಗಿದ್ದು ಆಯಾ ಆವರಣಗಳ ಮಿತಿಯಲ್ಲಿ ಸಂಕಲ್ಪಾನುಸಾರ ಸರ್ವರಿಗೂ ಸರ್ವವೂ ಅನುಭವಕ್ಕೆ ದೊರೆಯುವುವು. ಋಣ ಕರ್ಮಶಾಸ್ತ್ರದ ಪ್ರಕಾರ ಎಲ್ಲ ದೇಹಿಗಳೂ ಕಾರ್ಯ ಕಾರಣ ನಿಮಿತ್ತವಾಗಿ ಎಲ್ಲ ವೃತ್ತಿ ವರ್ಣಗಳನ್ನೂ ಅನುಭವಿಸಿದಲ್ಲದೆ ಸ್ವಸ್ವರೂಪಾವಸ್ಥಾನವು ದೊರೆಯಲಾರದು. ವರ್ಣ ವೃತ್ತಿಗಳಲ್ಲಿ ಕೆಳಗು ಮೇಲು ಭೇದವಿರುವುದಿಲ್ಲ. ಮತ್ತು ಫಲಾನುಭವದ ವರ್ಣ-ವೃತ್ತಿಗಳಲ್ಲಿ ಅಂತಸ್ತು ಪ್ರಕಾರ ಮೇಲಕ್ಕೇರಬೇಕೆಂಬುವಕ್ಕೆ ಋಣ ಪದ್ಧತಿಯಲ್ಲಿ ಅವಕಾಶವಿಲ್ಲ. ಅನುಸಂಧಾನ ಸಹಿತವಾದ ಪಂಚ ವೃತ್ತಿಗಳಲ್ಲಿ ಪ್ರತಿಯೊಂದೂ ನೇರವಾಗಿ ಸ್ವಸ್ವರೂಪಾವಸ್ಥಾನ ಸಾಧಕ ವಾಗಿರುವುದು. ಬೇರೆ ಬೇರೆ ಸನ್ನಿವೇಶಗಳಲ್ಲಿ ಪಂಚ ವೃತ್ತಿಗಳನ್ನು ಬಳಸಿ ಆವರಿಸಿ ಅನುಭವವನ್ನು ಪಡೆದು ಕೊನೆಯಲ್ಲಿ ಉಳಿಯಬಹುದಾದ ಋಣ ಶೇಷದ ಅನುಭವಕ್ಕೆ ಗುರಿಯಾದ ವರ್ಣದಲ್ಲಿ (ವೃತ್ತಿಯಲ್ಲಿ) ಅನುಭವವನ್ನು ಹೊಂದಿ ಜೀವನ್ಮುಕ್ತನಾಗಬಹುದು. ತಾತ್ಕಾಲಿಕವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅನುಭವಿಸುವ ಯಾವುದಾದರೊಂದು ಪ್ರಧಾನವಾದ ವರ್ಣ(ವೃತ್ತಿ)ಯು ಉಳಿದ ವರ್ಣ (ವೃತ್ತಿ) ಗಳ ಒಂದೊಂದು ಅಂಶವನ್ನು ಒಳಗೊಂಡೇ ಇರುವುದು. ಒಂದೇ ಜೀವಮಾನದಲ್ಲಿ ಸಂಕಲ್ಪಕ್ಕೆ ಸರಿಯಾದ, ಆವಶ್ಯಕವಾದರೆ ಅತ್ಯುತ್ಕಟವಾದ ಪ್ರಯತ್ನಗಳಿಂದ ವರ್ಣವನ್ನು ಬದಲಾಯಿಸಿ ಬೇರೆ ವರ್ಣಕ್ಕೆ ತಕ್ಕ ಅಧಿಕಾರವನ್ನು ಪಡೆದು ನವೀನ ವರ್ಣವನ್ನು ಆಚರಿಸಬಹುದೆಂಬ ಸಂದರ್ಭದಲ್ಲಿ 'ವಿಶ್ವಾಮಿತ್ರ'ಸಂಜ್ಞೆಯ ಸಾಹಸವನ್ನು ಪಡೆಯಬಲ್ಲ ಪುರುಷನ ವಿಚಾರವನ್ನು ಸರ್ವರೂ ತಿಳಿದಿರುತ್ತಾರೆ. ಆಪತ್ಕಾಲದಲ್ಲಿ ಸನ್ನಿವೇಶ-ಪರಿಸ್ಥಿತಿಗಳು ಬಲಾತ್ಕಾರದಿಂದ ಕಡಿಮೆ ಕ್ಲೇಶವುಳ್ಳ ಜೀವನಸಿದ್ಧಿ ಲಾಭಕ್ಕಾಗಿ ವರ್ಣವನ್ನು ಬದಲಾಯಿಸುವುದು ಕೇವಲ ಸ್ವಾಭಾವಿಕವಾಗಿ ನಡೆದು ಬಂದಿರುತ್ತದೆ. ವೃತ್ತಿ ಮೋಹಗಳಿಂದ ಆಲಿಂಗಿಸಿದ ಅಥವಾ ಬದಲಾಯಿಸಲು ಸಂಕಲ್ಪಿಸಿ ಪಡೆದ ವೃತ್ತಿಗಳು ಶ್ರೇಯಃ ಪ್ರಾಪ್ತಿಯನ್ನು ದೂರ ತಳ್ಳುವುವು. ಕ್ಷಿಪ್ರವಾಗಿ ಶ್ರೇಯಸ್ಸನ್ನು ಸಾಧಿಸಬಹುದೆಂದು ತೋರಿ ಮೋಹದಿಂದ ಬದಲಾವಣೆಗೆ ಯತ್ನಿಸುವುದರಿಂದ ಕ್ಲೇಶವು ಹೆಚ್ಚುವುದು; ತಪಃ ಕ್ಲೇಶ ಸಹನೆಗೆ ಯೋಗ್ಯತೆಯು ಸಾಲದೆ ಜಾರಿ ಬೀಳಬೇಕಾಗುವ ಸಂಭವವೂ ಇರುತ್ತದೆ.

## ಆಚಾರ-ವೃತ್ತಿ-ವರ್ಣ ಮತ್ತು ಅವಸ್ಥೆ

ವ್ಯಕ್ತಿಯ ಆಚಾರವು ವ್ಯವಹಾರದ ಅವಸ್ಥೆಗಳಿಗನುಗುಣವಾಗಿ ವಿವಿಧವಾಗಿ ವಿರೂಪವನ್ನು ಹೊಂದುವುದು. ಇವೆಲ್ಲವೂ ಕ್ಷಣಿಕವಾದುವುಗಳು. ಇವುಗಳು ವ್ಯಕ್ತಿಯ ಅಂತರಾಚಾರವನ್ನು ಮರೆಮಾಡುವುವು. ವ್ಯಾವಹಾರಿಕವಾದ ಉನ್ನತ ಹಂತವನ್ನು ಆಶಿಸಿದ ಅಥವಾ ಬಲಾತ್ಕಾರ ಮತ್ತು ಮೋಸಕ್ಕೆ ಸಿಕ್ಕಿದ ವ್ಯಕ್ತಿಗೆ ಈ ಬದಲಾವಣೆಯು ಬಾಧೆಯನ್ನು ಉಂಟುಮಾಡುವುದು. ಋಣ ಕರ್ಮಗಳ ಫಲಾಂಶದ ಬಲ, ಅಬಲತೆಗಳ ಘರ್ಷಣಕ್ಕೆ ಸಿಕ್ಕಿ ಆಧಿವ್ಯಾಧಿಗಳಿಂದ ತೊಳಲಬೇಕಾಗುವುದು. ಈ ಪರಿಸ್ಥಿತಿಯನ್ನು ಅಂತ ಪ್ರತಿ ಪ್ರಜೆಯೂ ಇಂತಹ ಬಲಾತ್ಕಾರ ಬದಲಾವಣೆ, [illegible], ಉನ್ನತಿಯ ಮೋಹ [illegible]ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಭಯ ಪಕ್ಷದವರೂ ಜಾಗರೂಕರಾಗಿ ವರ್ತಿಸುವಂತೆ ರಾಜನೀತಿಯು ವಿಧಿಸಬೇಕಾಗಿದೆ.

ಭೂರ್ಲೋಕ, ಭುವರ್ಲೋಕ, ಸುವರ್ಲೋಕ, ಮಹೋಲೋಕ, ಜನಲೋಕ, ತಪೋಲೋಕ, ಬ್ರಹ್ಮಲೋಕಗಳು ಅತಲವಿತಲಾದಿ ಸಪ್ತ ಲೋಕಗಳು ಎಲ್ಲವೂ ಮರ್ತ್ಯಲೋಕದ ಪ್ರತಿ ಪ್ರಾಣಿಯಲ್ಲಿಯೂ ಸಮಯೋಚಿತವಾಗಿ ಉಂಟಾಗುವ ಕರ್ಮಫಲಾನುಭವ ಸ್ಥಿತಿಗಳನ್ನು ಸೂಚಿಸುವುವು. ಹದಿನಾಲ್ಕು ಲೋಕಗಳಿಗೆ ಪ್ರತ್ಯೇಕವಾಗಿ ಸ್ವತಂತ್ರವಾದ ಸ್ಥಾನಗಳ ನಿರ್ದೇಶವಿರುವುದಿಲ್ಲ. ತ್ರಿಶಂಕುಸ್ವರ್ಗವೆಂಬುದೂ ತ್ರಿಶಂಕುವೆಂಬ ಮನುಷ್ಯನಿಗೆ ವಿಶ್ವಾಮಿತ್ರನು ಅನುಗ್ರಹಿಸಿ ದಾನಮಾಡಿದ ತಪಃಫಲದ ಮಹಿಮೆಯಿಂದ ಉಂಟಾದ ಅನುಭವದ ಸ್ಥಿತಿಯನ್ನು ಸೂಚಿಸುವುದು. ರಪ್ಪೆ ಹಾಕದೆ ಸದಾ ನೋಡುವ ಅನಿಮಿಷವೆಂಬ ಶಕ್ತಿಯು ಜ್ಞಾನಿಗೆ ಉಂಟಾಗುವುದು. ಜ್ಞಾನಿಯಾದರೂ ಸ್ವಕರ್ಮಫಲಶೇಷವನ್ನು ಅನುಭವಿಸಬೇಕಾಗಿರುವುದರಿಂದ ಮರ್ತ್ಯಲೋಕದಲ್ಲಿ ಕೆಳಗಿನ ಮಟ್ಟದ ಅನುಭವವನ್ನು ಕೊಡುವ ಸ್ಥಳದಲ್ಲಿ ಶರೀರವನ್ನು ಧರಿಸಬೇಕಾಗುವುದು.

## ವೃತ್ತಿದೋಷ ಶಾಂತಿಭಂಗ
## ಜೀವನದ ಮುಗ್ಗಟ್ಟು ಮತ್ತು ಬಿಕ್ಕಟ್ಟು

ವೃತ್ತಿಯ (ವರ್ಣದ—ಆಚಾರದ) ವೈಕಲ್ಯದಿಂದ ಜೀವನಯಾತ್ರೆಯು ಕ್ಲೇಶಭೂಯಿಷ್ಠವಾಗಿ ಕುಂಠಿತವಾಗುವುದು. ಒಂದು ದೇಹಿಯ ಅಕ್ರಮ ವೃತ್ತಿಯಿಂದ ಬಹುಜನರಿಗೆ ತೊಂದರೆಯಾಗುವುದು. ಬಹುಜನಗಳ ಆರ್ಥಿಕ ಮೊದಲಾದವುಗಳ ರಕ್ಷಣೆಗೆ ಹೊಣೆಗಾರನಾದ ಅಧಿಕಾರಿಯ ವರ್ಣದ ಅವಿಜ್ಞತೆ ದೋಷದಿಂದ ಆ ಅಧಿಕಾರಕ್ಕೆ ಒಳಪಟ್ಟ ಅಧಿಕಾರಿಗಳ ಮತ್ತು ಪ್ರಜೆಗಳ ಆರ್ಥಿಕಾದಿ ಶ್ರೇಯಸ್ಸುಗಳು ತಲೆಕೆಳಕಾಗುವುವು. ಹಾನಿಕರವಾದ ಪದಾರ್ಥಗಳನ್ನು ಸೃಷ್ಟಿಸುವುದರಿಂದ, ಅವು ಸೃಷ್ಟಿಸಿದ ವ್ಯಕ್ತಿಗಳನ್ನೂ ಕ್ರಮಶಃ ಪ್ರಪಂಚವನ್ನೂ ಕಬಳಿಸುವ ವಿಚಾರ ಸ್ಪಷ್ಟವಾಗಿರುತ್ತದೆ. ಜೀವನ ವ್ಯವಹಾರಕ್ಕೆ ಮುಖ್ಯವಾದ ವೃತ್ತಿಗಳಾದ ಕೃಷಿ ವಾಣಿಜ್ಯಗಳು ವೈಶ್ಯಕ್ಕೆ ಸೇರಿದುದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಪಾರ ವೃತ್ತಿ (ವರ್ಣದ) ಯಲ್ಲಿ ಒಂದು ಗೋತ್ರದ ಅಂಗ (ಅಂಶ) ವನ್ನು ತನ್ನ ಮನೋಭಾವಾದಿ ಸಾಮರ್ಥ್ಯಗಳಿಂದ ಋಣಪದ್ಧತಿ ಯಲ್ಲಿ ಇರಿಸಿ ಜನಗಳ ಅಂಗೀಕಾರ ಸಹಕಾರಗಳನ್ನು ಪಡೆದು ಆರಂಭಿಸ ಬಹುದು; ಅನಂತರ ವೃತ್ತಿ ಮಾರ್ಗದಿಂದ ಚ್ಯುತನಾಗಿ ದುರಾಸೆಯಿಂದ ದೋಷಯುತ ಪದಾರ್ಥಗಳನ್ನು ನಿರ್ದೋಷವಾದುವು ಎಂದು ಹೇಳಿ ವಂಚನೆಯಿಂದ ಮಾರಬಹುದು. ಇದರಿಂದ ಕ್ಲೇಶ ಪರಂಪರೆಗಳು ಪುಂಖಾನುಪುಂಖವಾಗಿ ಉಂಟಾಗುವುವು. ಮಿಶ್ರಿತವಾದ ಹಾಲು, ಬೆಣ್ಣೆ, ಮೊಸರು, ತುಪ್ಪ, ಎಣ್ಣೆ ಮುಂತಾದುವು ಸಂಸ್ಕೃತಗಳೂ, ಬೇರೆ ಬೇರೆ ಮಿಶ್ರಣದಿಂದ ಉತ್ಪತ್ತಿ ಮಾಡಿ ಹಾಲು, ಮೊಸರು, ಬೆಣ್ಣೆ, ಎಣ್ಣೆ ತುಪ್ಪಗಳಂತೆ ಕಾಣುವ ಪದಾರ್ಥಗಳೂ ಆರೋಗ್ಯ, ಸಂಸ್ಕೃತಿ ಪದ್ಧತಿ ಗಳಿಗೆ ವಿರೋಧವಾಗಿ ಬಳಸುವವರಲ್ಲಿ ದುಷ್ಟ ಕರ್ಮ ಪ್ರವರ್ತನೆಯ ಮನೋಭಾವವನ್ನುಂಟುಮಾಡುವುವು; ಅಂತಹ ಘಾತಕರ ಜನನಕ್ಕೆ ಅವಕಾಶವಾಗುವುದು. ಇದರಿಂದ ಕುಲ, ಸಮಾಜ, ದೇಶಗಳೇ ಹೀನಸ್ಥಿತಿಗೆ ಬರುವುವು. ಇದಕ್ಕೆ ಕಾರಣವಾದ ದುಷ್ಟ ವೈಶ್ಯವು ಮೂಲ ವ ದುದರಿಂದ ಆ ರೀತಿ ವೈಶ್ಯವನ್ನು ಆಚರಿಸಿದವರೂ, ಇಹವನ್ನು ಕಳೆದುಕೊಂಡು ಶ್ರೇಯಸ್ಸಿಗೆ ವಿಮುಖರಾಗುತ್ತಾರೆ.

ತಪಸ್ಸಿದ್ಧಿಯಾಗಲೀ, ಪ್ರಯೋಗಶಾಲೆಯಲ್ಲಿ ನಡೆಸಿದ ಪರೀಕ್ಷಾ ಸಿದ್ಧಿಗಳಾಗಲೀ ಮಾನವನ ಪರಮಾವಧಿ ಬುದ್ಧಿಶಕ್ತಿಯನ್ನು ಅಳೆಯಲು ಸಾಧನವಾಗುವುವು. ಆದರೆ ಅವು ಋತಕ್ಕೆ ವಿರೋಧವಾದ ವರ್ಣವನ್ನು (ವೃತ್ತಿಯನ್ನು) ಧರಿಸುವುದಾದರೆ ಪರಮ ನೀಚವಾದ ಕುಲಗೇಡಿತನಕ್ಕೆ ಕಾರಣವಾಗಿ ಸರ್ವನಾಶಕವಾಗುವುವು.

ನಿತ್ಯ ಜೀವನದಲ್ಲಿ 24 ಗಂಟೆಗಳ ಕಾಲ ಒಂದು ದಿನದ ಸುಖ ಯಾಪನಕ್ಕೆ ಅವಶ್ಯಕವಾಗಿ ಬೇಕಾಗುವ ಪದಾರ್ಥಗಳನ್ನು ಪ್ರಕೃತಿಯಿಂದ ನೇರವಾಗಿ ಒದಗಿಸಿಕೊಳ್ಳುವುದು ಮತ್ತು ವೈಶ್ಯದ ಮೂಲಕ ಕೊಟ್ಟು, ತಂದು; ವ್ಯಾಪಾರ ಮಾಡಿ, ಕೊಂಡುಕೊಂಡು ಪಡೆಯುವುದು ಎಂಬ ಸನ್ನಿವೇಶಗಳಲ್ಲಿ ಕುಹಕ, ಕುತಂತ್ರಗಳು ತಾಂಡವವಾಡುವುದಕ್ಕೆ ಅವಕಾಶಕೊಡದ ಜೀವನವನ್ನು ನಿಶ್ಚಯ ಮಾಡಿ ದೇಹಿಗಳೆಲ್ಲರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಕ್ರಿಮಿಗಳಂತೆ ವರ್ತಿಸುವುದನ್ನು ಎದುರಿಸಲು ಪ್ರಕೃತಿಯ ಋಜು ಸ್ವಭಾವ ಮತ್ತು ಸಮತಾ ಭಾವನೆಗಳು ತಕ್ಕ ಪ್ರತೀಕಾರವನ್ನು ಮಾಡಿ ಕುಹಕ, ಕುತಂತ್ರಕಾರರನ್ನು ಅಡಗಿಸಬೇಕಾಗುವುದು. ಆದುದರಿಂದ ವ್ಯಕ್ತಿ ಕುಟುಂಬಾದಿಗಳು ತಮ್ಮ ತಮ್ಮ ಪರಿಸ್ಥಿತಿಯಲ್ಲಿ ರಾಜ್ಯಶಕ್ತಿ-ಪ್ರಭುಶಕ್ತಿಗಳನ್ನು ನೀತ್ಯನುಶಾಸನಕ್ರಮದಲ್ಲಿ ಪ್ರಯೋಗಿಸಿ ಶಾಂತಿಭಂಗ ವಾಗದಂತೆಯೂ, ವೃತ್ತಿಗಳ ಅವ್ಯವಸ್ಥೆಯು ಕೊನೆಗಾಣುವಂತೆಯೂ ಪ್ರತಿಪ್ರಜೆಯೂ ಯತ್ನಿಸಬೇಕಾಗಿದೆ.

## ಸ್ವಧರ್ಮ ಸ್ವಾಚಾರ ಸ್ವಕರ್ಮ
## ಪರಧರ್ಮ ಪರಾಚಾರ ಪರಕರ್ಮ
## ಸ್ವ–ಪರಗಳ ವ್ಯವಹಾರ ಮಿತಿ

ರಾಜನೀತಿಯು ನಿರ್ದೇಶಿಸಿ ಗೊತ್ತುಮಾಡಿರುವ ರಾಷ್ಟ್ರಗಳ ವ್ಯವಹಾರ ಮಟ್ಟದಲ್ಲಿ ಸ್ವಪರ ಶಬ್ದಗಳ ಯಥಾರ್ಥವನ್ನು ತಿಳಿಯುವುದಕ್ಕೆ ಮೊದಲು ರಾಷ್ಟ್ರಗಳನ್ನೂ ರಾಷ್ಟ್ರದ ಆಚಾರ ಮತ್ತು ಪಂಥಗಳನ್ನೂ ತಿಳಿದುಕೊಂಡಿರಬೇಕು. ಜಗತ್ತಿನಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ಕಾಲದಲ್ಲಿ ಪ್ರಮುಖ ಪಾತ್ರಗಳ ಪ್ರಾಬಲ್ಯದಿಂದ ಮಿತಿಯನ್ನು ಕಲ್ಪಿಸಿಕೊಂಡು ವ್ಯವಹರಿಸುವುದು ಪ್ರಜೆಗಳಿಗೆ ಸ್ವಭಾವವಾಗಿರುತ್ತದೆ. ರಾಜನೀತಿಯ ಹಿಡಿತದಲ್ಲಿ ರಾಷ್ಟ್ರಗಳು ವಿವಿಧವಾಗಿರುವುವು. ಒಂದು ರಾಷ್ಟ್ರವು ತನ್ನದನ್ನು ಸ್ವರಾಷ್ಟ್ರವೆಂದು ಹೇಳಿಕೊಂಡು ಮತ್ತೊಂದನ್ನು ಪರರಾಷ್ಟ್ರವೆನ್ನಬೇಕಾಗುತ್ತದೆ. ರಾಜನೀತಿಯಿಂದ ವ್ಯವಸ್ಥಿತವಾದ ಸ್ವಧರ್ಮವೇ ಆ ಒಂದು ಗೊತ್ತಾದ ರಾಷ್ಟ್ರದಲ್ಲಿರುತ್ತದೆ. ಸ್ವಾಚಾರದ ದೃಷ್ಟಿಯಿಂದ ಆಚಾರವನ್ನು ಸಮಾನವಾಗಿ ಆಚರಿಸುವ ಪ್ರಜೆಗಳ ಸಂಖ್ಯೆಯು ಅಸಂಖ್ಯಾತವಾಗಿದ್ದರೆ ಆ ರಾಷ್ಟ್ರದಲ್ಲಿ ಅಥವಾ ಆ ಭಾಗದಲ್ಲಿ ಒಂದು ಗೊತ್ತಾದ ಸ್ವಾಚಾರವು ನೆಲಸುವುದು. ಪರಬಲಾಸಹಿಷ್ಣುಗಳಾದವರೂ ಸ್ವಪ್ರಭಾವವನ್ನು ಹೆಚ್ಚಿಸಿಕೊಳ್ಳಬೇಕೆಂಬ ದುರಭಿಮಾನವುಳ್ಳವರೂ ರಾಷ್ಟ್ರಾಧಿಪತ್ಯವನ್ನು ವಹಿಸಿಕೊಂಡರೆ ಅವರು ಬಲಾತ್ಕಾರವಾಗಿ ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಚಾರವನ್ನು ಪರರ ಮೇಲೂ ಹೊರಿಸುವರು. ಇಂತಹ ಸಂದರ್ಭದಲ್ಲಿ ಬಲಾತ್ಕರಿಸಲ್ಪಟ್ಟ ನೂತನ ಋಣ ಕಲ್ಪನೆಗೆ ಹೊಂದಿಕೊಳ್ಳುವುದಕ್ಕೂ ಹಿಂದಿನ ಋಣವು ಪರಿಹಾರವಾಗುವುದಕ್ಕೂ ತಕ್ಕ ಬದಲಾವಣೆಗಳು ಕಾಲ ಕ್ರಮೇಣ ಉಂಟಾಗಬೇಕಾಗುವುದು. ಈ ನಡುವೆ ದೇಹಿಗಳ ಹೃದಯದಲ್ಲಿ ಗುಪ್ತವಾಗಿದ್ದು ದೇಹಿಗಳನ್ನು ಹಿಂಬಾಲಿಸಿರುವ ಋಣಾನುಬಂಧ - ಸ್ವಾಚಾರಗಳು ತಮ್ಮ ತಮ್ಮ ಪ್ರಭಾವವನ್ನೂ ಬೀರುವುದರಿಂದ ಸ್ವಾಚಾರ ಪರಾಚಾರ ಪರೌಢ್ಯವುಂಟಾಗಿ ಮನುವುಳ್ಳ* ದೇಹಿಗಳು ಪ್ರಾಣಿಗಳ ಹಂತಕ್ಕಿಂತಲೂ ಕಡೆಯಾದ ಹಂತಕ್ಕೆ ಇಳಿದು ಸತ್ ಆವರಣ ಪ್ರಾಪ್ತವಾಗುವವರೆಗೂ ಆ ಹಂತದ ಅನುಭವಕ್ಕೆ ಬದ್ಧರಾಗುವರು ಮತ್ತು ಅಶಾಂತಿ, ಶಾಂತಿಭಂಗವೆಂಬ ವಿಷವನ್ನು ಕಾರಿ ತಮ್ಮನ್ನೂ ಇತರರನ್ನೂ ಆ ವಿಷದ ವೇಗಕ್ಕೆ ಗುರಿಪಡಿಸುವರು.

ರಾಜನೀತಿಯು ಇಂಗಿತವನ್ನು ವಿಶ್ವವ್ಯಾಪಕವಾಗುವಂತೆ ಮಾಡಿದಾಗ ಸ್ವರಾಷ್ಟ್ರ ಪರರಾಷ್ಟ್ರಗಳೆಂಬ ಭಾವನೆಯು ತಲೆದೋರುವುದು ಸಮಾನ ಧರ್ಮ ಆಚಾರಗಳುಳ್ಳ ಕೆಲವು ಸ್ವರಾಷ್ಟ್ರಗಳ ಗುಂಪು ಸೇರಿ ದೊಡ್ಡ ರಾಷ್ಟ್ರವಾಗುವುದು. ಸ್ವರಾಷ್ಟ್ರಗಳ ಗುಂಪಿನಲ್ಲಿಯೇ ಪರಸ್ಪರವಾಗಿ ಸ್ವರಾಷ್ಟ್ರ, ಪರರಾಷ್ಟ್ರ ಭಾವನೆ ತಲೆದೋರುತ್ತದೆ; ಅಲ್ಪ ವ್ಯತ್ಯಾಸಗಳನ್ನು ಬದಿಗೊತ್ತಿ ದೊಡ್ಡ ರಾಷ್ಟ್ರದ ಹಿತವನ್ನು ಸಾಧಿಸುವ ಸನ್ನಿವೇಶಗಳು ಉಂಟಾಗುವುವು. ಈ ದೊಡ್ಡ ಸ್ವರಾಷ್ಟ್ರಕ್ಕೂ ಇದರಂತೆಯೇ ರೂಪುಗೊಳ್ಳುವ ಮತ್ತೊಂದು ದೊಡ್ಡ ಸ್ವರಾಷ್ಟ್ರಕ್ಕೂ ಪರಸ್ಪರ ಪರರಾಷ್ಟ್ರತ್ವ ಭಾವನೆಯು ಸ್ವಭಾವವಾಗಿ ಕಾಣಿಸಿಕೊಳ್ಳುವುದು. ಇವೆಲ್ಲವೂ ರಾಜನೀತಿಯ ಮಿತಿಯಲ್ಲಿ ಸ್ವಾಚಾರಪರಾಚಾರಗಳನ್ನು ನಿರ್ದೇಶಿಸುವುವು.

ರಾಜನೀತಿಗೆ ಮೂಲಾಧಾರವಾದ ಗ್ರಂಥಗಳಲ್ಲಿ ಒಂದಾದ ಭಗವದ್ಗೀತೆಯಲ್ಲಿ ಸ್ವಧರ್ಮ ಪರಧರ್ಮವಿಮರ್ಶೆಯನ್ನು ಪ್ರಜೆಗಳ

---

*. ಮನು - ಜ್ಞಾನ ವಿವೇಕ. - ಮನುವುಳ್ಳವರು - ಮಾನವರು. ಮನುಸ್ಮೃತಿ ಎಂದರೆ - ಮನುವೆಂಬ, ವಿವೇಕವೆಂಬ ಒರೆಗಲ್ಲಿನಿಂದ ಪರೀಕ್ಷಿಸಿ ನಿರ್ಧರಿಸಿದ ಸ್ಮೃತಿ - ಅನುಭವಶಾಸ್ತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಗಾಹನೆಗೆ ತಂದಿರುತ್ತಾರೆ. "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಗೀತೋಕ್ತಿಯಿದೆ. ಅಲ್ಲಿ ಉಕ್ತವಾಗಿರುವ ವರ್ತನೆಯು ವಿಭಾಗ ಪ್ರವಿಭಾಗಗಳನ್ನನುಸರಿಸಿ ಗೀತೆಯ ದೃಷ್ಟಿಯಿಂದ, ಸ್ವ ಎಂದರೆ ಗೀತೆಯ ಧರ್ಮವೇ ಸ್ವಧರ್ಮವೆಂತಲೂ, ಅದಕ್ಕೆ ಬೇರೆಯಾದುದು ಪರಧರ್ಮವೆಂತಲೂ, ಅರ್ಜುನ ಕೃಷ್ಣರ ದೃಷ್ಟಿಯಿಂದ, ಸ್ವಧರ್ಮ ಎಂದರೆ ಕ್ಷತ್ರಿಯ ಧರ್ಮವೆಂತಲೂ, ಪರಧರ್ಮವೆಂದರೆ ಕ್ಷತ್ರಿಯೇತರ ಧರ್ಮವೆಂತಲೂ ತಿಳಿಯಬೇಕಾಗುವುದು. ಸ್ವ ಮತ್ತು ಪರಶಬ್ದಗಳನ್ನೂ ಶಬ್ದಾರ್ಥಗಳನ್ನೂ ರಾಷ್ಟ್ರವ್ಯಾಪಿ ವಿಶ್ವವ್ಯಾಪಿಯಾಗಿ ಭಾವಿಸಿದಾಗ ಆಯಾ ಪ್ರಕರಣಕ್ಕೆ ತಕ್ಕಂತೆ ಅನ್ವಯಿಸಿ ಅರ್ಥಮಾಡಿಕೊಳ್ಳಬೇಕಾದ ಪ್ರಸಂಗವೊದಗಿ ಅನಿರ್ದಿಷ್ಟತೆಯಲ್ಲಿ ಕೊನೆಗಾಣುವುದು.

ಸ್ವಧರ್ಮ ಪರಧರ್ಮ ಶಬ್ದಗಳನ್ನು ವ್ಯವಹರಿಸಿ ಹೇಳುವವರ ದೃಷ್ಟಿಯಿಂದ ಸ್ವಾಚಾರಪರಾಚಾರ ವಿಷಯಗಳನ್ನು ತಿಳಿದುಕೊಳ್ಳಬೇಕು. ಸ್ವಾಚಾರ ಪರಾಚಾರಗಳು ವ್ಯವಹಾರ ಕಲ್ಪನೆಯಾಗಿ ವ್ಯವಹಾರವು ಮುಂದುವರಿಯುವುದಕ್ಕೆ ಅನುಕೂಲವಾಗಿರುವಂತೆ ಆಯಾ ವ್ಯಕ್ತಿಗಳು ತಮ್ಮ ಮಿತಿ ಮತ್ತು ಹಂತಗಳನ್ನು ತಿಳಿಯಲು ಮತ್ತು ತಿಳಿಸಲು ಉಪಯೋಗಿಸಲ್ಪಡುವ ಶಬ್ದಗಳಾಗಿರುತ್ತವೆ. ಹುಲಿ ಮತ್ತು ಮಾನವ ವ್ಯಕ್ತಿಗಳೆರಡನ್ನು ವಿಷಯೀಕರಿಸಿದಾಗ, ಹುಲಿಗೆ ಹುಲಿಯ ಧರ್ಮ ಸ್ವಧರ್ಮ; ಹುಲಿಗೆ ಮಾನವ ಧರ್ಮ ಪರಧರ್ಮ, ಮಾನವನಿಗೆ ಮಾನವನ ಧರ್ಮ ಸ್ವಧರ್ಮ; ಮಾನವನಿಗೆ ಹುಲಿಯ ಧರ್ಮ ಪರಧರ್ಮ ಎಂದಾಗುತ್ತದೆ. ವ್ಯವಹಾರ ದೃಷ್ಟಿಯಿಂದ ಈ ಅರ್ಥವನ್ನು ಸಮರ್ಥಿಸಬೇಕಾದರೆ, ಕಾಲ ದೇಶ ಪಾತ್ರಗಳನ್ನನುಸರಿಸಿ ವ್ಯವಹಾರ ವಿಷಯಗಳನ್ನು ಈ ಕೆಳಗೆ ಕಂಡಂತೆ ಸ್ಪಷ್ಟಮಾಡಿಕೊಳ್ಳಬೇಕಾಗಿದೆ.

ಹುಲಿ :— ಪ್ರಕೃತಿ : ತಿರ್ಯಕ್ ಶರೀರ, ಬಣ್ಣ, ಚತುಷ್ಪಾತ್. ಸ್ವಭಾವಗುಣ : ವೈಯಕ್ತಿಕ ಕಾಮಕ್ರೋಧಾದಿಗಳು. ಕ್ಷೇತ್ರವಾಸ : ಕಾಡು. ಆಹಾರ : ಮಾಂಸಾದಿ. ವ್ಯವಹಾರಕಾಲ : ರಾತ್ರಿ- ಸಹವಾಸ : ಮೃಗಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನವ :— ಪ್ರಕೃತಿ : ದ್ವಿಪಾತ್ ಊರ್ಧ್ವ ಶರೀರ, ಹಸ್ತ. ಸ್ವಭಾವ, ಗುಣ : ಕಾಮ ಕ್ರೋಧಾದಿಗಳು ವಿವೇಕ ವೈರಾಗ್ಯಾದಿಗಳು. ಕ್ಷೇತ್ರವಾಸ : ಒಡನಾಡಿಗಳ ಜತೆಯಲ್ಲಿ, ಕಟ್ಟಡಗಳಲ್ಲಿ. ಆಹಾರ : (ಪ್ರಧಾನ) ಶಾಕ ಫಲಾದಿಗಳು. ಪಕ್ವ-ಅಪಕ್ವ, ಮಾಂಸ ಗೌಣ. ವ್ಯವಹಾರಕಾಲ : ಹಗಲು. ಸಹವಾಸ : ಮಾನವರು, ಸಾಧು ಪ್ರಾಣಿಗಳು ಗ್ರಾಮದ ಪಕ್ಷಿಗಳು ಇತ್ಯಾದಿ.

ಈ ರೀತಿ ವಿಷಯವನ್ನು ಪ್ರತ್ಯಕ್ಷಾನುಭವಕ್ಕೆ ಗುರಿಮಾಡಿ ಸಾಮ್ಯ ವೈಷಮ್ಯಗಳನ್ನು ಮನಸ್ಸಿಗೆ ತಂದುಕೊಳ್ಳಬೇಕು.

ಆತ್ಮ ದೃಷ್ಟಿಯಿಂದ ಹುಲಿಯ ಧರ್ಮವೂ (ಸ್ವ - ಪರಧರ್ಮ) ಒಂದೇ. ಮಾನವ ಧರ್ಮವೂ (ಸ್ವ - ಪರಧರ್ಮ) ಒಂದೇ.

“ಸ್ವಾಮಿ ಭಾವೇನ ದಾಸೋಽಹಂ ಜೀವಭಾವೇ ತ್ವದಂಶಕಃ ।
ಆತ್ಮಭಾವೇನ ಭೋ ಸ್ವಾಮಿನ್ ತ್ವಮೇವಾಹಂ ನ ಸಂಶಯಃ ॥”

ಎಂದು ದೃಷ್ಟಿಭೇದಗಳಿಂದ ಅನುಭವ ವಿಶೇಷ ವಿಷಯಗಳನ್ನು ಶ್ರೀರಾಮನಿಗೆ ಆಂಜನೇಯನು ಹೇಳಿರುತ್ತಾನೆ.

ಬ್ರಹ್ಮ, ಆತ್ಮ, ಸ್ವ ಮತ್ತು ಪರಶಬ್ದಗಳು ಪರ್ಯಾಯ ಪದಗಳು. 'ಸ್ವಾತ್ಮಾ' ಎಂತಲೂ ಪರಂಬ್ರಹ್ಮ ಎಂತಲೂ ಏಕಾರ್ಥದ ಪದದ್ವಯಗಳನ್ನು ಏಕಪದವಾಗಿ ಪ್ರಯೋಗಿಸಿರುತ್ತಾರೆ. ಸ್ವ ಎಂದರೆ ಆತ್ಮಾ; ಸ್ವಾತ್ಮಾ ಎಂಬಲ್ಲಿ ಆತ್ಮ ಶಬ್ದವನ್ನು ಗೌಣವಾಗಿ ಶರೀರಕ್ಕೆ (ಉಪಾಧಿಗೆ) ಅನ್ವಯಿಸಿ ಹೇಳುತ್ತಾರೆ. ಅದರಂತೆಯೇ ಪರಬ್ರಹ್ಮ ಶಬ್ದವು ಸಾಧುವಾಗಿರುತ್ತದೆ. ಪರ ಎಂದರೆ ಬ್ರಹ್ಮ. ಪರಂಬ್ರಹ್ಮ ಎಂಬಲ್ಲಿ ಬ್ರಹ್ಮ ಶಬ್ದವು ನಪುಂಸಕಲಿಂಗ. ಬ್ರಹ್ಮನ್ ಶಬ್ದವು ಪುಲ್ಲಿಂಗ ನಪುಂಸಕಲಿಂಗಗಳೆರಡರಲ್ಲಿಯೂ ಪ್ರಯುಕ್ತವಾಗುವುದು. ಪುಲ್ಲಿಂಗ ಶಬ್ದಾರ್ಥವು ನಪುಂಸಕಲಿಂಗ ಶಬ್ದಾರ್ಥಕ್ಕಿಂತ ಬೇರೆಯಾಗಿದೆ. ಇದನ್ನು ಬೇರ್ಪಡಿಸಿ ತೋರಿಸುವುದಕ್ಕೂ ಅರ್ಥ ಪ್ರಕರ್ಷವನ್ನುಂಟುಮಾಡುವುದಕ್ಕೂ ಪರಂಬ್ರಹ್ಮ ಎಂದು ಪ್ರಯೋಗಿಸಿರುತ್ತಾರೆ.

ಬ್ರಹ್ಮ ಶಬ್ದವು ಸ್ವ ಶಬ್ದದ ಮಟ್ಟಕ್ಕೆ ಇಳಿದಾಗ ಸ್ವಶಬ್ದಕ್ಕೆ ಮಿತಿಯನ್ನು ಕಲ್ಪಿಸುವ ಪರಿಚ್ಛೇದವು ಸ್ಪಷ್ಟವಾಗುವುದು. ಉಪಾಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಹಿತವಾದ ಬ್ರಹ್ಮವು ಉಪಾಧಿಯೊಳಗಿರುವುದೆಂಬುದನ್ನು ಸ್ವಶಬ್ದವು ಸೂಚಿಸುವುದು. ಆದುದರಿಂದ ವಿಶ್ವದಲ್ಲಿ ಎಷ್ಟು ಉಪಾಧಿ ದೇಹಗಳನ್ನು ಧರಿಸಿ ದೇಹಿಗಳ ಸಂಖ್ಯೆ ಇರುತ್ತದೋ, ಅಷ್ಟು 'ಸ್ವ' ರೂಪಗಳಲ್ಲಿ ಬ್ರಹ್ಮವು ಚೈತನ್ಯವಾಗಿರುವುದು. ಧರ್ಮ (– ಕರ್ಮ) ವು ವಿಶ್ವವ್ಯಾಪಿಯಾಗಿರುವಂತೆ ಉಪಾಧಿಗತರಾದ 'ಸ್ವ' ಗಳಿಂದ ತುಂಬಿದ ಪ್ರಪಂಚದಲ್ಲಿ ಸ್ವಕರ್ಮವು ವಿಶ್ವವ್ಯಾಪಿಯಾಗಿ ಅನೇಕ ಕೋಟಿ ಸ್ವಕರ್ಮಗಳಾಗಿ ವಿವರ್ತವಾಗುತ್ತದೆ.*

ಸ್ವ ಕರ್ಮವು ಅನೇಕ ಕಾರಣಗಳಿಂದ ಅನೇಕ ವಿಧವಾಗಿ ಹೊರಪಡುವುದರಿಂದ ಗೆರೆಹಾಕಿದಂತೆ 'ಇಷ್ಟು', 'ಹೀಗೆ' 'ಇದು' ಎಂದಾಗಲೀ 'ಇಷ್ಟಲ್ಲ', 'ಹೀಗಲ್ಲ', 'ಇದಲ್ಲ' ಎಂದಾಗಲೀ ಹೇಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಯೋಗಿಗಳೂ, ಯಾಜ್ಞಿಕರೂ ಪರಮ ತಪಸ್ವಿಗಳೂ ಆದ ಆಪಸ್ತಂಬ ಬ್ರಹ್ಮರ್ಷಿಗಳು ಈ ವಿಷಯವನ್ನು ಮುಕ್ತಕಂಠದಿಂದ ಹೇಳಿ ಜಗದ್ವಂದ್ಯರಾಗಿರುತ್ತಾರೆ. ಧರ್ಮದ ತತ್ವವು (ನೆಲೆಯು) ಗುಹೆಯಲ್ಲಿ ಅಂದರೆ ನಿರ್ಣಯಪರವಾದ ಬುದ್ಧಿಯಲ್ಲಿ ಇರುವುದರಿಂದ ಮಹಾಜನಗಳ ಸಮಯೋಚಿತವಾದ ವಿಮರ್ಶೆಗೆ ಅನುಗುಣವಾಗಿ ಆಚಾರವನ್ನು ಗೊತ್ತುಮಾಡಿ ನಡೆಯಬೇಕೆಂಬ ಅರ್ಥದಲ್ಲಿ ಸಿದ್ಧಾಂತ ಮಾಡಿರುತ್ತಾರೆ.† ಮಹಾಜನ ವಿಮರ್ಶೆಯೂ ಸಹ

---

* ಜನಂ ಬಿಭ್ರತೀ ಬಹುಧಾ ವಿವಾಚಸಂ ನಾನಾ ಧರ್ಮಾಣಂ ಪೃಥಿವೀ ಯಥೌಕಸಂ ಸಹಸ್ರಂ ಧಾರಾ ದ್ರವಿಣಸ್ಯ ಮೇ ದುಹಾಂ ಧ್ರುವೇವ ಧೇನುರನಪಸ್ಫುರಂತೀ ॥ — ಅಥರ್ವ 12.1.45.
– ದೇಹ, ಗೃಹ, ಕುಲೇತ್ಯಾದಿ ಸನ್ನಿವೇಶಗಳಿಗನುಗುಣವಾಗಿ ನಾನಾ ವಿಧವಾದ ಕರ್ಮಗಳು ಮತ್ತು ಬಹುವಿಧ ಭಾಷಾದಿಗಳೂ ಉಳ್ಳ ಜನಗಳನ್ನು ಪೃಥ್ವಿಯು ಧರಿಸಿರುತ್ತದೆ.

† ವಿಪ್ರತಿಷಿದ್ಧಧರ್ಮಾಣಾಂ ಸಮವಾಯೋ
ಭೂಯಸಾಂ ಸ್ಯಾತ್ ಸ್ವಧರ್ಮತ್ವಂ – ಎಂಬ
ವಿವರಣೆಯೂ ಸಮಯ ಸನ್ನಿವೇಶಗಳನ್ನು ಅವಲಂಬಿಸಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅದ್ವಿತೀಯ ಪಾಂಡಿತ್ಯ, ಅನುಷ್ಠಾನಪರತೆ, ಕಾಲ, ದೇಶ, ಪಾತ್ರ, ಸಮಾಜ ರಾಜ್ಯಗಳ ಅಧೀನವಾಗಿರುತ್ತದೆ. ಮತ್ತು ಸಾತ್ವಿಕ, ರಾಜಸ, ತಾಮಸ ವೃತ್ತಿ ಕರ್ಮಗಳಿಗೆ ಬದ್ಧವಾಗಿರುತ್ತದೆ. ಆದರೆ ವಸ್ತು ಸ್ವರೂಪ ಕರ್ಮ ಸ್ವರೂಪಗಳು ಪೂರ್ಣವಾಗಿ ಸ್ವತಂತ್ರವಾಗಿ ಇದ್ದೇ ಇವೆ.

ಸನಾತನವಾದ ಬ್ರಾಹ್ಮಣಧರ್ಮ ಬ್ರಾಹ್ಮಣಾಚಾರವು ಬ್ರಹ್ಮಾಂಡವನ್ನೆಲ್ಲಾ ಆವರಿಸಿ ವ್ಯಾಪಿಸಿರುತ್ತದೆ. ಸರ್ವವೂ 'ಸ್ವ' ಎಂದರೆ ಬ್ರಹ್ಮಕ್ಕೆ ಸೇರಿದ ಧರ್ಮವಾಗಿ ಸ್ವಧರ್ಮವಾಗಿರುತ್ತದೆ. ಅದರಂತೆಯೇ ಸರ್ವವೂ 'ಪರ' ಎಂದರೆ ಬ್ರಹ್ಮಕ್ಕೆ ಸೇರಿದ ಧರ್ಮವಾಗಿ ಪರಧರ್ಮವಾಗುತ್ತದೆ. ಯಾವುದು ಸ್ವಧರ್ಮವೋ ಅದೇ ಪರಧರ್ಮ; ಯಾವುದು ಪರಧರ್ಮವೋ ಅದೇ ಸ್ವಧರ್ಮ. ಸ್ವಧರ್ಮ ಪರಧರ್ಮವೆಲ್ಲವೂ ಬ್ರಹ್ಮಧರ್ಮ – ಬ್ರಾಹ್ಮಣಧರ್ಮ – ಆಚಾರವಾಗಿದೆ.

ಬ್ರಹ್ಮಾಂಡದಲ್ಲಿನ ಪ್ರಜಾಕೋಟಿ ವರ್ಗದಲ್ಲಿ ಪ್ರತಿಯೊಬ್ಬರ ದೃಷ್ಟಿಯಿಂದ ಪ್ರತಿ ಮತ್ತೊಬ್ಬ ದೇಹಿಯ ಧರ್ಮವು ಪರಧರ್ಮವೆಂದು ಭಾವಿಸಲ್ಪಟ್ಟರೂ ಆ ಮತ್ತೊಬ್ಬ ದೇಹಿಯ ಧರ್ಮವು ಆತನಿಗೆ ಸ್ವಧರ್ಮವೇ ಆಗಿರುತ್ತದೆ. ಹೀಗೆಯೇ ಸ್ವಧರ್ಮ ಪರಧರ್ಮಗಳು ಪರಸ್ಪರವಾಗಿ ಆರೋಪಿಸಲ್ಪಡುತ್ತವೆ. ವಿಶ್ವಕ್ಕೆಲ್ಲಾ "ದೇವರು" ಒಬ್ಬನೇ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಭಾರತ ಸಂಸ್ಕೃತಿಯ 'ಬ್ರಹ್ಮ' ತತ್ವವನ್ನು ತಿಳಿಯುವ ಮತ್ತು ತಿಳಿಯಲಾರದ ಜನಗಳು ಅವರ ತಿಳಿವಳಿಕೆಯ ಸಂಸ್ಕಾರದ ಮಟ್ಟದಲ್ಲಿ ಭಾವಿಸಿರುವ "ದೇವರು" ಬ್ರಹ್ಮತತ್ವ ಲಕ್ಷಣವನ್ನು ಹೊಂದಿದೆ ಎಂದು ತಿಳಿದಿಲ್ಲ ಮತ್ತು ತಿಳಿಯುವುದಿಲ್ಲ. ಆದ ಕಾರಣ ಅವರಿಗೆ ಉಪಾಧಿಗಳಲ್ಲಿ ಕಂಡ "ದೇವರು" ಬೇರೆ ಬೇರೆಯಾಗಿರುತ್ತಾರೆ. ಭಿನ್ನ ಜನಾಂಗದವರು ಶಬ್ದ ಮತ್ತು ಅರ್ಥ ಜ್ಞಾನವಿಲ್ಲದೆ ವಿವಿಧ ಜನಾಂಗಗಳಲ್ಲಿ ಕಂಡ ದೇವರ ನಾಮಗಳನ್ನು ಉಚ್ಚರಿಸಿ ಎಲ್ಲವೂ ಒಂದೇ ಎಂದು ಹೇಳುವುದು ಕೇವಲ ಗೌಣವಾಗಿರುವುದೇ ಹೊರತು ನಿಷ್ಠೆ ಮತ್ತು ತತ್ವಜ್ಞಾನಗಳಿಂದ ಕೂಡಿದುದಲ್ಲ.

'ಆತ್ಮ' ಎಂಬ ಅರ್ಥವುಳ್ಳ ಸ್ವ ಮತ್ತು ಪರಶಬ್ದಗಳಿಂದ ಉದಾಹೃತವಾದ ಸ್ವಧರ್ಮ ಪರಧರ್ಮಗಳು ಆತ್ಮಧರ್ಮವೆನಿಸಿ ಭೇದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಕಾಶವನ್ನೀಯುವುದಿಲ್ಲ. 'ಭಯಾವಹವಾದ ಪರಧರ್ಮ' ವೇ ಲೋಕದಲ್ಲಿಲ್ಲ. 'ಪ್ರಕೃತಿಲೀಲೆ' ಇಂತಹುದು ಎಂಬುವನ್ನು ನಿರ್ದೇಶಿಸಿ ಹೇಳುವ ಅಪರೋಕ್ಷ ಜ್ಞಾನವು ಮರೆಯಾಗಿರುವಾಗ, ವ್ಯಕ್ತಿಗಳು ವೈಯಕ್ತಿಕ ಮಿತಿಯಿಂದ ವರ್ತಿಸುತ್ತಾ ಸಂಸ್ಕೃತಿ ಆಚಾರಗಳ ಸೋಪಾನ ಗಳನ್ನು ಏರಬೇಕಾಗಿದೆ. ಇದರ ಪ್ರಕಾರವಾಗಿ 'ರ' ಎಂಬ ದೇಹಿಯು ತನ್ನ ಸ್ವಧರ್ಮದ ದೃಷ್ಟಿಯಿಂದ 'ಸ' ಎಂಬವನ ಧರ್ಮವನ್ನು ಪರ ಧರ್ಮವೆನ್ನಬಹುದು. 'ಸ' ಎಂಬುವನು ತಾನು ಆಚರಿಸುವುದು ಸ್ವ ಧರ್ಮವೆಂಬ 'ದಾರ್ಢ್ಯ'ದಿಂದ 'ರ' ಎಂಬುವನ ಧರ್ಮವನ್ನು ಪರ ಧರ್ಮವೆನ್ನಬಹುದು. ಹೀಗೆ ಪ್ರಪಂಚದಲ್ಲಿ ಒಂದು ಪ್ರಾದೇಶಿಕ. ಸಾಮಾಜಿಕ, ಕೌಟುಂಬಿಕ ಮಿತಿಯಲ್ಲಿ ಪ್ರತಿಯೊಬ್ಬ ದೇಹಿಯ ಸ್ವ ಧರ್ಮವೂ ಪರಧರ್ಮವಾಗಿಯೂ, ಪರಧರ್ಮವು ಸ್ವಧರ್ಮವಾಗಿಯೂ ಪರಿಗಣಿಸಲ್ಪಟ್ಟು ವ್ಯವಹರಿಸಲ್ಪಡಬೇಕಾಗಿರುತ್ತದೆ.

ವ್ಯಕ್ತಿ ವೈಶಿಷ್ಟ್ಯ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಗುಣಕರ್ಮಗಳ ದೃಷ್ಟಿಯಿಂದ ಉಂಟಾಗುವ ವ್ಯಕ್ತಿ ಪ್ರಾಧಾನ್ಯಗಳನ್ನು ಪರಿಗಣಿಸಿ ಸ್ವ, ಪರ ಶಬ್ದಗಳನ್ನು ಪ್ರಯೋಗಿಸಿ ವ್ಯವಹರಿಸುವಾಗ ಒಂದು ಕುಟುಂಬದಲ್ಲಿ ತಂದೆ ಮಕ್ಕಳಲ್ಲಿ, ಒಬ್ಬ ತಂದೆಯ ಅನೇಕ ಮಕ್ಕಳಲ್ಲಿ ದಂಪತಿಗಳಲ್ಲಿ ಒಬ್ಬೊಬ್ಬರಿಗೂ ಸ್ವತಂತ್ರವಾದ ಸ್ವಧರ್ಮವಿವುದರಿಂದ ಒಬ್ಬರ ದೃಷ್ಟಿ ಯಿಂದ ಮತ್ತೊಬ್ಬರ ಸ್ವಧರ್ಮವು ಪರಧರ್ಮವಾಗಲೇ ಬೇಕಾಗುವುದು. ಹೀಗೆ ವ್ಯವಹಾರದ ರಾಜನೀತಿಯ ಮಿತಿಯಲ್ಲಿ ಸಂಸ್ಕಾರ, ಋಣಾನು ಬಂಧ ವಿಶೇಷ, ವ್ಯಕ್ತಿಯ ಸುತ್ತಮುತ್ತಲಿನ ಸನ್ನಿವೇಶಗಳೆಂಬ ಆವರಣ- ಇವುಗಳ ಸಾಮ್ಯ, ವೈಷಮ್ಯಗಳಿಗೆ ತಕ್ಕಂತೆ ಹೋಲಿಕೆ ವ್ಯತ್ಯಾಸಗಳು ಸಾಧುವಾಗಿರುವುವು. ನಿಷ್ಕೃಷ್ಟವಾದ ಮಿತಿ ಕಲ್ಪನೆಗಳ ಪೂರ್ವಕ ಸ್ವ ಪರ ಶಬ್ದಗಳನ್ನು ಅರ್ಥಮಾಡಿಕೊಂಡು ಅನ್ವಯಿಸಿಕೊಳ್ಳಬೇಕಾಗುವುದು.

## ಪೂರ್ಣಕರ್ಮ ಆವೃತಕರ್ಮ ವೈಯಕ್ತಿಕಕರ್ಮ

ವಿಶ್ವವ್ಯಾಪಿಯೂ ಅಖಂಡವೂ ಪೂರ್ಣವೂ ಆದ ಕರ್ಮವು ಪರಿಪೂರ್ಣವಾಗಿದ್ದು ಚರಾಚರಾತ್ಮಕ ವಸ್ತುಗಳನ್ನು ಅಂತಃ ಬಹಿಃ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆವರಿಸಿರುತ್ತದೆ ; ವಿವೇಕ (ಬುದ್ಧಿ) ವುಳ್ಳ ಮಾನವತೆಯು ಬುದ್ಧಿಬಲದಿಂದ ಸಮಯೋಚಿತವಾಗಿ ಕರ್ಮವನ್ನು ಅಳವಡಿಸಿಕೊಳ್ಳುವ ಶಕ್ತಿಯನ್ನು ಒಳಗೊಂಡಿರುತ್ತದೆ ಮತ್ತು ಪ್ರಕೃತಿಗೆ ಸೋತು ಪ್ರಕೃತಿ ನಿಯೋಗದ ಪ್ರಕಾರ ದೇಹಿಗಳು ಕರ್ಮವನ್ನು ಕೈಕೊಳ್ಳುವುದಕ್ಕೆ ಕರ್ಮವು ಸ್ವಾಭಾವಿಕವಾಗಿ ಸಿದ್ಧವಾಗಿರುತ್ತದೆ. ಆದುದರಿಂದ ಪ್ರಪಂಚದ ಮಾನವರಲ್ಲಿ ಪ್ರತಿಯೊಬ್ಬನೂ ತನ್ನದೇ ಆದ ವೈಶಿಷ್ಟ್ಯವನ್ನು ಬೆಳಗಿ ಜೀವನ ಯಜ್ಞವನ್ನು ನಿರ್ವಹಿಸಲು ಪೂರ್ಣಾವಕಾಶವಿರುವುದು. ಇದು ಸ್ವಕರ್ಮದ ಆದಿಮೂಲವಾಗಿರುತ್ತದೆ.

ಈ ಸಿದ್ಧಾಂತಕ್ಕೆ ಅಪವಾದವನ್ನಾಗಲೀ ಬದಲಾವಣೆಯನ್ನಾಗಲೀ ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂಬಂತೆ ತ್ರಿಕಾಲಾಬಾಧಿತವಾಗಿ ‘ದಿಕ್ಕಾಲಾದ್ಯನವಚ್ಛಿನ್ನ’ವಾಗಿದೆ. ಮಾನವತೆಯ ಮಿತಿಯು ರಹಸ್ಯ ತತ್ವಗಳ ಮಧ್ಯೆ ಇದನ್ನೂ ಸರ್ವರೂ ಅಂಗೀಕರಿಸಬೇಕು. ಆದರೆ ಸ್ವಕರ್ಮ ವಾ ಸ್ವಧರ್ಮಕ್ಕೆ ಲಕ್ಷಣವಾಗಲೀ, ಅರ್ಥವಾಗಲೀ ಮಿತಿಯಾಗಲೀ ನಿರ್ದಿಷ್ಟವಾಗಿಲ್ಲವೆಂದು ಹೇಳಲಾಗದು. ಲಕ್ಷಣಾತೀತವಾದ ವ್ಯವಹಾರಾತೀತವಾದ ಮತ್ತು ಅರ್ಥಾತೀತವಾಗಿ ಅನಿರ್ವಚನೀಯವಾಗಿರುವ ಪೂರ್ಣ ಧರ್ಮವನ್ನು ವಿವರಿಸಬೇಕಾಗಿಲ್ಲ; ವಿವರಣೆಗೆ ಸಿಕ್ಕುವುದೂ ಇಲ್ಲ. ವ್ಯವಹಾರ ಪ್ರಪಂಚದಲ್ಲಿ ಅದು ಪ್ರತ್ಯಕ್ಷವಾದುದೂ ಅಲ್ಲ. ವ್ಯವಹಾರದ ಮಿತಿಯಲ್ಲಿ ಸ್ವಧರ್ಮವನ್ನು ತಿಳಿಯದಿದ್ದರೆ, ತಿಳಿಯಪಡಿಸದಿದ್ದರೆ ಶಾಂತಿಯಿಲ್ಲ; ಮತ್ತು ಅದನ್ನು ತಿಳಿಯುವುದೂ ತಿಳಿಯಪಡಿಸುವುದೂ ಸಹ ಸುಲಭಸಾಧ್ಯವಾಗಿರುತ್ತವೆ.

ವ್ಯವಹಾರ ಮಟ್ಟದಲ್ಲಿ ಪಾರಮಾರ್ಥಿಕವನ್ನೂ ಪಾರಮಾರ್ಥಿಕ ಮಟ್ಟದಲ್ಲಿ ವ್ಯವಹಾರವನ್ನೂ ಅಸ್ತವ್ಯಸ್ತವಾಗಿ ಮಿಶ್ರಮಾಡಿ ಭ್ರಾಂತರಾಗುವ ಸ್ಥಿತಿಯಲ್ಲಿ ಜನಗಳು ಕಣ್ಣುಬಿಡುವವರಾಗಿದ್ದಾರೆಯೇ ಹೊರತು ಆಯಾಯ ದೃಷ್ಟಿಯಿಂದ ಮತ್ತು ಶುದ್ಧವಾದ ಸಮನ್ವಯದಿಂದ ತತ್ವಾನ್ವೇಷಣ ಮಾಡಿ ಸಂದೇಹ ನಿವೃತ್ತಿಗಾಗಿ ವ್ಯಷ್ಟಿ ಮತ್ತು ಸಮಷ್ಟಿಭಾವಗಳಲ್ಲಿ ಅರ್ಥವನ್ನು ತಿಳಿಯಲು ಪ್ರಯತ್ನಪಟ್ಟಿಲ್ಲ. ಕಾಲ ದೇಶ ಪಾತ್ರಗಳ ಭೇದವಿರುವುದರಿಂದ ಅವಶ್ಯಕತೆಯು ಕಾಣದಿದ್ದಿರಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದರೆ ಕಾಲ ದೇಶ ಪಾತ್ರಗಳ ಸ್ಥಿತಿಯು ವಿಶಾಲವಾಗಿ ಹರಡಿ ನೆಲೆಯೂ ಸಿಕ್ಕದೆ ಮಿತಿಯೂ ಗೊತ್ತಾಗದೆ ಇರುವ ಈಗಿನ ಆವರಣದಲ್ಲಿ ಸಂದೇಹ ನಿವಾರಣೆಯು ಅತ್ಯವಶ್ಯಕವಾಗಿದೆ.

## ಸ್ವಕರ್ಮ ವಿವರಣೆ

ಸಂಸ್ಕೃತಿಗಳಿಂದ ಅಭ್ಯಸ್ತವಾದ ಸ್ವಾಚಾರ ಎಂಬ ಅರ್ಥವುಳ್ಳ ಸ್ವಧರ್ಮ-ಸ್ವಕರ್ಮವು ಸ್ವತಂತ್ರನಾದ ಆತ್ಮ- ಜೀವನು ಪ್ರಕೃತಿಲೀಲೆಗೆ. ಋಣಕ್ಕೆ ಬದ್ಧನಾಗಿ ಸ್ವತಂತ್ರವಾಗಿ ಸಂಕಲ್ಪಿಸಿ ಆಚರಿಸಲ್ಪಡತಕ್ಕದ್ದಾಗಿ ಇರುತ್ತದೆ.

## ಸ್ವಾತಂತ್ರ್ಯ ಮಿತಿ

ಪ್ರತಿದೇಹಿಯೂ ಅನುಭವ, ಸಂಸ್ಕಾರ, ಕಾರ್ಯಕ್ರಮ, ಋಣಾದಿಗಳಿಗೆ ತಕ್ಕಂತೆ ಕರ್ಮವನ್ನು ಆಚರಿಸಲು ಸ್ವತಂತ್ರನು ಮತ್ತು ಶಕ್ತಿಯುತನು. ದೇಹಿಗಳು ತಮ್ಮ ವಾಸನಾ, ಅನುಭವ ಮತ್ತು ಕಾರ್ಯಕ್ರಮಗಳೇನು ? ಎಂದು ತಿಳಿಯದಿರುವಷ್ಟು ಭಾರಭೂತವಾದ ಮತ್ತು ಬಲವಾದ ಆವರಣಗಳಿಂದ ಸುತ್ತುಗಟ್ಟಲ್ಪಟ್ಟಿರುವರು. ಪ್ರಕೃತಿಯ ನಿರ್ಣಯಕ್ಕೆ ಬಿಟ್ಟು, ಸ್ವಾತಂತ್ರ್ಯವನ್ನು ಪ್ರಯೋಗಿಸದೇ ಇರುವುದೆಂಬ ಮಿತಿಯಲ್ಲಿ ಸ್ವಕರ್ಮವನ್ನಾಚರಿಸಿ ಋಣ ಪರಿಹಾರ - ಅನುಭವಗಳಿಗೆ ಪಾತ್ರರಾಗುವುದು ಒಂದು ಕಲ್ಪವಾಗಿದೆ. ಆದರೆ ಸ್ವಾತಂತ್ರ್ಯ ಪ್ರಿಯರಾದ ಜೀವರು ಸ್ವತಂತ್ರಿಸಿ ಹೊಸಹೊಸದಾಗಿ ಋಣ ಕರ್ಮಗಳನ್ನು ಕಲ್ಪಿಸಿಕೊಂಡು ಋಣವು ಪೂರ್ತಿಯಾಗಿ ಪರಿಹಾರವಾಗುವುದಕ್ಕೆ ಅವಕಾಶವಾಗದಂತೆ ರಾಶಿ ಹಾಕಿಕೊಳ್ಳುತ್ತಾರೆ. ಫಲವಾಗದೇ, ಕಾರಣದ ಅವಸ್ಥೆಯಲ್ಲಿ ನಿಂತುಹೋಗಿರುವ ಹಿಂದಿನ ವ್ಯವಸಾಯದ ಫಲವನ್ನು ಪಕ್ವವಾದಾಗ (ಈಗ ಅಥವಾ ಇನ್ನೂ ಮುಂದೆ) ವಿಧಿಯು (ಪ್ರಕೃತಿಯು - ಋತವು) ಒದಗಿಸುತ್ತದೆ. ಹಿಂದೆ - ನಿನ್ನೆ - ಮಾಡಿರಬಹುದಾದ ಸಂಕಲ್ಪವಾಗಲೀ, ವ್ಯವಸಾಯವಾಗಲೀ, ವಿರೋಧವಾದ ಆವರಣದಲ್ಲಿ ಸಿಕ್ಕಿಕೊಂಡಿರುವ ದೇಹಿಗಳಿಗೆ ಗೊತ್ತಾಗದಿರಬಹುದು. ಆದರೂ ಋತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ನಿಯಮಾನುಗುಣವಾಗಿ ಆಯಾ ಸಂಕಲ್ಪ ವ್ಯವಸಾಯಗಳು ಸ್ವತ ಏವ ಪಕ್ವವಾಗಿ ಫಲಕ್ಕೆ ಬಂದು ದೇಹಿಯನ್ನು ಅನುಭವಕ್ಕೆ ಗುರಿಮಾಡುತ್ತವೆ. ಹಿಂದೆ ಹಿಂದೆ, ಧರಿಸಿದ್ದ ಬೇರೆ ಬೇರೆ ಶರೀರಗಳಿಂದ ಮಾಡಿದ ವ್ಯವಸಾಯದ ಫಲವು ತಾತ್ಕಾಲಿಕವಾದ ಮತ್ತು ಅದೇ ಗುಣವುಳ್ಳ ಸಂಕಲ್ಪ ವ್ಯವಸಾಯಗಳನ್ನು ಅನುರೋಧಿಸಿ ಅವು ಮುಂದುವರಿಯುವಂತೆ ಪ್ರೋತ್ಸಾಹಿಸಬಹುದು ಅಥವಾ ಗುಣಸಾಮ್ಯವಿಲ್ಲದವುಗಳನ್ನು ವಿರೋಧಿಸಿ ಬಾಧಿಸಬಹುದು. ದೇಹಿಗಳು ಈ ಸನ್ನಿವೇಶಗಳನ್ನು ತಿಳಿಯುವ ಸಾಮರ್ಥ್ಯ ಮತ್ತು ಪ್ರಯತ್ನಗಳಿಲ್ಲದೆ ಮರೆತು ತಾತ್ಕಾಲಿಕವಾದ ಇಂದ್ರಿಯ ಮಟ್ಟದ ಆವರಣದಲ್ಲಿ ಸಿಕ್ಕಿ ಪ್ರಯತ್ನಕ್ಕೆ ವಿರೋಧವಾಗಿ ವಿಪ್ರತಿಕ್ರಿಯಾಫಲ (ವಿರುದ್ಧ ಫಲ) ಗಳನ್ನು ಅನುಭವಿಸುವಾಗ ಮತ್ತು ಹೆಚ್ಚಿನ ಫಲಗಳನ್ನು ಅಲ್ಪ ಪ್ರಯತ್ನದಿಂದ ಅಥವಾ ಪ್ರಯತ್ನವಿಲ್ಲದೆ ಪಡೆಯುವಾಗ ಏನೂ ಅರಿಯದ ಸಾತ್ವಿಕರಂತೆ ನಟಿಸಿ ತಾವು ಅನುಭವಿಸುತ್ತಿರುವ ಕೆಡುಕುಗಳು ಅನ್ಯರಿಂದ – ಶತ್ರುಗಳಿಂದ ವಿಧಿ–ಬ್ರಹ್ಮ–ಹಣೆಬರಹ, ಗ್ರಹಗಳು ಮೊದಲಾದವರಿಂದ ಹೊರಿಸಲ್ಪಟ್ಟಂತೆ ಗೋಣಗುವರು. ಇಂತಹ ದೇಹಿಗಳ ಸಂಖ್ಯೆಯೇ ಪ್ರಪಂಚದಲ್ಲಿ ಹೆಚ್ಚಾಗಿ ಕಾಣುತ್ತದೆ.

ವ್ಯಕ್ತಿಯು ಸರ್ವ ಸ್ವತಂತ್ರನು, ಶಕ್ತನು; ತಾನು ಮಾಡಿದುದನ್ನು ಮಾತ್ರ ಅನುಭವಿಸುವವನೇ ಹೊರತು ಬೇರೆಯಲ್ಲ.* ತನಗಾಗಿ,

---

* ಆರಿಗಾರುಪಕಾರಿಗಳು ಮೇಣಾರಿಗಾರಪಕಾರಿಗಳು ತಾ
ನಾರಿಗಾರುಂಟವರವರ ಕೃತ ಕರ್ಮ ಸಂಸ್ಕಾರ ।
ಹೊರಿಸುವುದಳಿಸುವುದು ಸೌಖ್ಯಕೆ ಸೇರಿಸುವುದಿದಕಹಿತ ಹಿತರೆಂ
ದಾರ ಮುಂವುದು ಮನ್ನಿಸುವುದೈ ಭೀಮ ಹೇಳೆಂದ ॥

ಕುಮಾರವ್ಯಾಸ ಭಾರತ ಅರಣ್ಯಪರ್ವ, ಸಂಧಿ 2, ಪದ್ಯ 16.
ಖೇಚರನು ಕೌರವನನ್ನು ಬಂಧಿಸಿದಾಗ ಭಾನುಮತಿಯು ಧರ್ಮಜನನ್ನು ಪ್ರಾರ್ಥಿಸಿದಳು; ಕೌರವನ ಬಂಧವಿಮೋಚನೆ ವಿಷಯದಲ್ಲಿ ಧರ್ಮಜನು ಭೀಮನಿಗೆ ಹೇಳುವ ಸಾಲಿದು । (ಪುಟ 108 ಟಿಪ್ಪಣಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತನ್ನ ಸ್ವಾರ್ಥಕ್ಕಾಗಿ ತಾನೇ ಸ್ವತಃ ತಿಳಿದು, ಇಚ್ಛಿಸಿ ಪ್ರಯತ್ನ ಮಾಡಿ ಪಡೆದ ಕರ್ಮಫಲವೇ ವಿಧಿಯು. ಇದನ್ನು ದೈವ, ಅದೃಷ್ಟವೆಂತಲೂ ಹೇಳುತ್ತಾರೆ. ಈ ಅರ್ಥದಲ್ಲಿ ದೇವರು, ಭಗವಂತ ಇತ್ಯಾದಿ ಶಬ್ದ ಗಳನ್ನು ವ್ಯವಹರಿಸುವುದು ತಪ್ಪು ತಿಳಿವಳಿಕೆಯ ಫಲ. ಈ ನಿಜವನ್ನು ದೃಢವಾಗಿ ನೆನೆದು ಧೈರ್ಯ ಸಾಹಸಗಳಿಂದ ಮುಂದೆ ಸಾಗ ಬೇಕಾದ ಕೆಲಸವನ್ನು ವ್ಯಕ್ತಿಯು ಕೈಕೊಳ್ಳುವುದಕ್ಕೆ ಆವರಣವನ್ನು ಕಲ್ಪಿಸುವ ಭಾರವು ರಾಜ್ಯಕ್ಕೆ ಅಂದರೆ ಪ್ರಜೆಯ ಪ್ರಭುಶಕ್ತಿಗೆ ಸೇರಿದುದು. ಅದರ ಅಭಾವದಿಂದ ಅಥವಾ ದುರುಪಯೋಗದಿಂದ ದೇಹಿಗಳಿಗೆ ಕೊರತೆ ಯುಂಟಾಗುವುದು. ಆಯಾ ದೇಹಿಗಳ ಹಿಂದು ಹಿಂದಿನ, ಈಗಿನ ಮತ್ತು ಮುಂದಿನ ಆವರಣಗಳನ್ನು ತಿಳಿದುಕೊಳ್ಳಲು ಅವಕಾಶವಿದ್ದರೂ, ಈ ತಿಳಿವಳಿಕೆಗೆ ಆವರಣಗಳು ಹಿತಕರವಾಗದೆ ಅವನತಿಗೆ ಕಾರಣವಾದ ಮತ್ತು ಸ್ಥೂಲವಾದ ಅಂಧಾಚಾರಭಾರದಿಂದ ಬಗ್ಗಿರುವ, ಕುಗ್ಗಿರುವ ದೇಹಿಗಳ ಉಪಯೋಗಕ್ಕೆ ಅವು ಬರದಂತಾಗಿದೆ. ಅಂತಹ ತಿಳಿವಳಿಕೆಗೆ ಕಾರಣವಾದ ಸೂಕ್ಷ್ಮವಾದ ಆಚಾರವೆಂಬ ಪ್ರಯೋಗ ನಿಯಮವು ವೈಯಕ್ತಿಕ ಮೇಲ್ಮೆಗೂ ಶ್ರೇಷ್ಠತೆಗೂ ಅವಕಾಶವನ್ನುಂಟು ಮಾಡುವುದು. ಮತ್ತು ಸಮಯೋಚಿತವಾಗಿ ಕಾಣಿಸಿಕೊಂಡು ದೇಹಿಗಳ ಭವಿಷ್ಯವನ್ನು ರೂಪಿಸುವುದಕ್ಕೆ ಸಹಕರಿಸುವುದು.

## ಸ್ವಕರ್ಮ ಮಿತಿ

ಸಾಮಾನ್ಯವಾಗಿ ಜನತೆಯು ಸ್ವಧರ್ಮ, ಸ್ವಕರ್ಮ, ಸ್ವಾಚಾರ ಗಳನ್ನು ಕೇವಲ ಸಂಕುಚಿತ ದೃಷ್ಟಿಯಿಂದ ಸಣ್ಣ ಸಣ್ಣ ಕಿಂಡಿ ಕಿಟಕಿ ಗಳಿಂದ ನೋಡಿ ತುಚ್ಛವಾಗಿ ಅಳೆಯುವ ವಾಡಿಕೆಯಿದೆ. ಆರೋಗ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಶೌಚ, ಸ್ನಾನ, ಭಸ್ಮ, ಮೃತ್, ಗೋಪೀ ಚಂದನ ಧಾರಣಾದಿಗಳು ; ಆರೋಗ್ಯದ ತಳಹದಿಯಲ್ಲಿ ಆಯಾ ಅರ್ವಾಚೀನ ಪಂಥ ಸ್ಥಾಪಕರು ಹೇಳಿರುವ ಕ್ರಮಗಳು ; ಜನತೆಯ ಸಂಸ್ಕಾರ ರೀತ್ಯಾ ಉಂಟಾಗಿರುವ ಏಕ ದೇಶದ ದೇವತಾಕಾರ್ಯಾಸಕ್ತಿ– ಇತ್ಯಾದಿಗಳಿಂದ ಸ್ವಧರ್ಮವನ್ನು ಅಳೆದು ಅದರ ಅರ್ಥವನ್ನು ಸಂಕುಚಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿ ಆ ಸಂಕುಚಿತ ಸಾಧನದಿಂದ ಜಗತ್ತನ್ನೆಲ್ಲವನ್ನೂ ಆಳೆಯುತ್ತಾರೆ.

ಭೂಗುಣ ವಾಯುಗುಣಗಳು, ಶಾರೀರಕ, ಮಾನಸಿಕ ಸ್ಥಿತಿಗತಿಗಳು, ಶಾಸ್ತ್ರಾನುಭವ ಇವುಗಳಿಗೆ ತಕ್ಕಂತೆ ಭಸ್ಮ, ಗೋಪೀಚಂದನ, ಶ್ವೇತ ಮೃತ್, ಅರಿಸಿನ, ಚಂದನ, ಶ್ರೀಗಂಧಾದಿಗಳನ್ನು ಮೈಮೇಲೆ ಧರಿಸುವಂತೆ ಪ್ರೇರಿಸುತ್ತವೆ. ಪುರುಷಾರ್ಥ ಸಾಧನೆಗೆ ಯೋಗ್ಯವಾದ ಶರೀರ ಮತ್ತು ಮನಸ್ಸುಗಳ ಆರೋಗ್ಯವನ್ನು ಕಾಪಾಡಲು ಇವು ಸಹಾಯಕಗಳಾಗುವುವು. ಇವುಗಳನ್ನು ಸಂಸ್ಕರಿಸಿ ಧರಿಸುವುದರಿಂದ ಉತ್ತಮ ಸೋಪಾನಾರೋಹಣ ಸಿದ್ಧಿಯೂ ಉಂಟಾಗುವುದು. ಧಾರಣೆ ಮಾಡದೆ ಉದಾಸೀನ ಮಾಡುವುದರಿಂದ ಆ ವಿಧವಾದ ಔನ್ನತ್ಯ ಮತ್ತು ಶ್ರೇಷ್ಠತೆಗಳು ದೂರವಾಗಿಯೇ ನಿಲ್ಲುವುವು. ಅಲ್ಲದೆ ಭೂ ವಾಯು ಶರೀರಾದಿ ಗುಣಗಳ ನ್ಯೂನಾತಿರಿಕ್ತತೆಗಳ ಸಂದರ್ಭದಲ್ಲಿ ಸುಖಶಾಂತಿಗಳಿಗೆ ನ್ಯೂನಾತಿರಿಕ್ತತೆಗಳು ಒದಗುವುವು. ಇಷ್ಟೇ ಅಲ್ಲದೆ ಒಂದು ಭೂ ಪ್ರದೇಶ, ಒಂದು ವಾಯುಗುಣದ ಪ್ರದೇಶ ಮತ್ತು ವೈಯಕ್ತಿಕ ಸ್ಥಿತಿಗಳಿಗೆ ಹಿತವಾಗಿ ಅವಶ್ಯವಾಗಬೇಕಾದ ಭೂ ವಾಯ್ವಾದಿ ಗುಣ ನಿಯಂತ್ರಕ – ನಿವಾರಕ – ನಿರೋಧಕ ಸಾಮಗ್ರಿಗಳು ಮತ್ತೊಂದು ಭೂ ಪ್ರದೇಶ, ವಾಯುಗುಣ ಪ್ರದೇಶ, ವೈಯಕ್ತಿಕ ಸ್ಥಿತಿಗಳಿಗೆ ಹೊಂದಿಕೊಳ್ಳಲಾರವು. ಒಂದೇ ಭೂ ಗುಣ, ವಾಯುಗುಣಗಳಲ್ಲಿಯೂ ವ್ಯಕ್ತಿಯ ಆಹಾರ, ವಿಹಾರ, ವೈಶಿಷ್ಟ್ಯ, ವೈರೂಪ್ಯಗಳಿಗೆ ತಕ್ಕಂತೆ ಆಗಾಗ್ಗೆ ಬದಲಾಗುತ್ತಿರಬೇಕಾದ ಸಂಭವವನ್ನು ಜ್ಞಾಪಕದಲ್ಲಿಡಬೇಕು. ಮತ್ತು ಇವೆಲ್ಲವೂ ಸನ್ನಿವೇಶ ಪರಿಸ್ಥಿತಿಗಳೆಂಬ ಕಾಲಕ್ಕೆ ತಕ್ಕಂತೆ ರಾಜನೀತಿ ರಾಜಶಾಸನಗಳ ಮೂಲಕ, ರಾಜ್ಯ ಮಂಡಲಯುಗಳನ್ನು ವ್ಯಾಪಿಸಿ ರೂಪಿಸುವ ಶಕ್ತಿಗಳನ್ನು ಪಡೆಯುವುವು.

ಕಲನವ್ಯಾಪಾರಾತ್ಮಕನಾದ ವಿರಾಟ್ (ಕಾಲ) ಪುರುಷನು ಅಮಿತ ಮಿತ, ಅಪರಿಮಿತಗಳೆಂಬ ಅದಿತಿ, ದಿತಿ, ದನುಗಳ ದಿಗ್ದೇವತೆಗಳೆಂಬ ಅವಕಾಶದಲ್ಲಿ ಸ್ಪಂದನ, ಗಮನ, ಮಂಥನ, ಭ್ರಮಣ, ಕಲನ ವ್ಯಾಪಾರವನ್ನು ಅವಿಚ್ಛಿನ್ನವಾಗಿ ವಿಶ್ವಸೃಷ್ಟಿಯನ್ನು ಆರಂಭಿಸುತ್ತಾನೆ. ಈಗಿನ ಮುಂದೆ ನಡೆಯುವ ಸಮಸ್ತವಸ್ತುಜಾತ ಸೃಷ್ಟಿಯಲ್ಲಿ ತೊಡಗಿ ಏಕಾಕಾರವಾಗಿ ಪರಸ್ಪರ ಸಂಬಂಧವನ್ನು ಅನುಸೃತವಾಗಿರುವಂತೆಯೂ ಚ್ಯುತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಲ್ಲದಂತೆಯೂ ಹೊಂದಿಸಿಕೊಂಡು ತರಂಗತರಂಗವಾಗಿ ನಡೆಸುತ್ತಾನೆ.

ಕಲನ, ಭ್ರಮಣ, ಮಂಥನ, ಗಮನ ಮೊದಲಾದ ಶಬ್ದಗಳಿಂದ ವ್ಯಾಹೃತವಾದ ಕರ್ಮವು ದಿಕ್ ಎಂಬ ಅವಕಾಶದಲ್ಲಿ ಅವಿಚ್ಛಿನ್ನವಾಗಿ ಅಮೃತ ಪ್ರಾಪ್ತಿಗೆ ಅಮೃತವಾಗಿ 'ವಿಶ್ವವೇ ಕರ್ಮ' ವೆಂಬಂತೆ ಸಾಗುತ್ತಿರುವುದು.

ಇಂದ್ರಿಯಗಳ ಅನುಭವಕ್ಕೆ ಬಂದ ಇಂದ್ರಿಯಾತೀತವಾದ ಹೃದಯ ಶ್ವಾಸಕೋಶಗಳಲ್ಲಿ ವ್ಯಕ್ತವಾಗುವ ಅವಿಚ್ಛಿನ್ನ ಶಾರೀರಕ ವ್ಯಾಪಾರಗಳೂ ಶರೀರದಿಂದ ಶರೀರಕ್ಕೆ ಪರಂಪರೆಯಾಗಿ ಹಬ್ಬುವ ಆತ್ಮ ಚೈತನ್ಯ ವ್ಯಾಪಾರವೂ ಸಹ ಅವಿಚ್ಛಿನ್ನವಾಗಿ ಸೃಷ್ಟಿ, ಅಂತರ ಸೃಷ್ಟಿ, ಅವಾಂತರ ಸೃಷ್ಟಿಗಳನ್ನು ಸೂಚಿಸುವುವು.

ವಸ್ತುವು ಸ್ಥಿರವಾಗಿ ನಿಂತಂತೆ ಎದುರಿಗೆ ಕಂಡರೂ ನೋಡುವ ಮತ್ತು ನೋಡಲ್ಪಡುವ ವಸ್ತುಗಳು ಅತ್ಯಂತ ವೇಗವಾಗಿ ತಿರುಗುತ್ತಲೇ ಇರುವುದು ನಿರ್ವಿವಾದವಾಗಿರುವ ಮತ್ತು ಅಪ್ರತಿಹತವಾದ, ಶಾಸ್ತ್ರದೃಷ್ಟವಾಗಿ ಸಿದ್ಧಾಂತವಾಗಿರುವ ಸಂಗತಿಯಾಗಿದೆ.

ವ್ಯವಹಾರ ಸಾಮಾನ್ಯದಲ್ಲಿ ನಡೆದು ಇಂದ್ರಿಯಾನುಭವಕ್ಕೆ ಬಂದಿರುವ ಗತಿ, ಗಮನ, ಕಲನ, ಕರ್ಮಗಳನ್ನು ಅಳೆಯಲು ಸೂರ್ಯಾದಿ ಜ್ಯೋತಿರ್ಗ್ರಹಗಳ ನಿರ್ದಿಷ್ಟವಾದ ಕಲನ, ಗತಿ, ಭ್ರಮಣ ವ್ಯಾಪಾರಗಳನ್ನು ಆದರ್ಶವಾಗಿಟ್ಟುಕೊಂಡು ಅಳೆಯುವ ಕರ್ಮ ಮಾನಕ್ಕೆ ಕಾಲವೆಂದು ಹೆಸರು ಕೊಟ್ಟಿದೆ. ಅದನ್ನೇ ಕಣ್ಣಿನ ರೆಪ್ಪೆ ವ್ಯಾಪಾರ, ಹೃದಯ ಸ್ಪಂದ ಶ್ವಾಸಕೋಶಗಳ ಸೂಕ್ಷ್ಮ ವ್ಯಾಪಾರಗಳನ್ನು ಮಾನವಾಗಿ ಅಳತೆಯಾಗಿ ಹೆಸರು ಕೊಟ್ಟು ಅದನ್ನು ವಿಶ್ವಕಾಲಮಾನವೆಂದು ಪರಿಗಣಿಸಿರುತ್ತಾರೆ.* ಏತೇನ: ಕಾಲವೇ ಕರ್ಮ; ಕರ್ಮವೇ ಪ್ರಪಂಚ; ಕಾಲವೇ ಗಮನ, ಭ್ರಮಣವೆಂದು ಗೊತ್ತಾಗಿ 'ರಾಜಾ ಕಾಲಸ್ಯ ಕಾರಣಂ' ಎಂದು ಹೇಳಿದೆ. ಕರ್ಮವು ನಡೆಯುವುದಕ್ಕೆ ಪ್ರಭುಶಕ್ತಿಯೇ (ರಾಜನೇ,

---

* ಆಸ್ಟ್ರಲಾಜಿಕಲ್ ಮ್ಯಾಗ್ಜೈನ್, ಬೆಂಗಳೂರು, 1961, ಪುಟ 779-782 ಮತ್ತು 856-860.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜ್ಯವೇ) ಮೂಲ.* 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ.' 'ತೇನ ವಿನಾ ತೃಣಮಪಿ ನ ಚಲತಿ' 'ಸ್ವಕರ್ಮಫಲವಿಧಿರೇವ ಬಲೀಯರ್ಾ' ಎಂಬುದನ್ನು ಭಯಭಕ್ತಿಗಳಿಂದ ಶ್ರವಣ ಮಾಡಿದರೂ, ದೃಢವಿಲ್ಲದೆಯೂ ಅಹಿತವೆಂದು ಭಾವಿಸಿಯೂ ಅದನ್ನು ಕೊಡವಿಹಾಕುವ ಪರಿಸ್ಥಿತಿಯೇ ಹೆಚ್ಚು.

ಆರೋಗ್ಯಶಾಸ್ತ್ರ, ಆಚಾರ, ಸಂಸ್ಕೃತಿ, 'ಸಂಪ್ರದಾಯ, ಆತ್ಮಾನುಸಂಧಾನಗಳೆಲ್ಲವೂ ಬ್ರಾಹ್ಮಣಧರ್ಮ–ಆಚಾರವೆಂಬ ಹಗ್ಗದಲ್ಲಿ ಹೆಣೆದಂತಿರುವ ದಾರಗಳಾಗಿ ಉನ್ನತ ಸೋಪಾನಗಳನ್ನು ಏರುವುದಕ್ಕೆ ಪೂರ್ಣಾವಕಾಶವನ್ನು ಉಂಟುಮಾಡುತ್ತವೆ. ಇವೆಲ್ಲವೂ ಸ್ವಕರ್ಮವನ್ನು ನಿರ್ದೇಶಿಸಲು ಸಹಕರಿಸುವುವು.

## ಪ್ರಾದೇಶಿಕ ಮಿತಿ

[ಭೂಗುಣ (ಅಕ್ಷಾಂಶ, ರೇಖಾಂಶ); ವಾಯುಗುಣ; ಅಂತರಿಕ್ಷವಲ್ಲಿರುವ ಸೌರವ್ಯೂಹಕ್ಕೆ ಸೇರಿದ ಗ್ರಹನಕ್ಷತ್ರಾದಿಗಳು; ಮೋಡ, ಮಿಂಚು, ಗುಡುಗು, ಸಿಡಿಲು, ಮಳೆ ಇತ್ಯಾದಿ.]

ದೇಹಿಯ ಸ್ವಕರ್ಮವು ದೇಶಗುಣ, ವಾಯುಗುಣಾದಿಗಳನ್ನು ಅವಲಂಬಿಸಿರುತ್ತದೆ. ಒಂದು ಪ್ರದೇಶದಲ್ಲಿ, ಒಂದು ವಾಯುಗುಣದಲ್ಲಿ ಪ್ರಜೆಗಳು ತಮ್ಮ ತಮ್ಮ ಶಾರೀರಕ ಮಾನಸಿಕ ಶಕ್ತಿವಿಶೇಷಗಳಿಗೆ ಅನುಗುಣವಾಗಿರುವಂತೆಯೂ ಒಂದು ದೊಡ್ಡ ಗುಂಪಿಗೆ ಹೊಂದಿಕೊಂಡು ನಿರ್ಯವತ್ತರವಾಗುವಂತೆಯೂ ಅನುಷ್ಠಾನಗಳನ್ನು ಗೊತ್ತುಮಾಡಿ ಕೊಂಡಿರುತ್ತಾರೆ. ಇದೇ ದೊಡ್ಡ ಗುಂಪಿಗೆ (ಸಮಾಜಕ್ಕೆ) ಸೇರಿದ ಪ್ರಜೆಗಳ ಶಾರೀರಕ, ಮಾನಸಿಕ ಶಕ್ತಿ ಪ್ರಮಾಣಗಳನ್ನು ಬೇರ್ಪಡಿಸುವ ವಾತಾವರಣವುಳ್ಳ ಪ್ರದೇಶಕ್ಕೆ ಮೇಲ್ಕಂಡ ಅನುಷ್ಠಾನಗಳು ಅನ್ವಯಿಸುವುದಿಲ್ಲ. ಒಂದೇ ವ್ಯಕ್ತಿಯು ಒಂದು ಪ್ರದೇಶದಲ್ಲಿ ಗೊತ್ತಾದ ಕ್ರಮದಲ್ಲಿ ಇಟ್ಟುಕೊಂಡಿರುವ ಅನುಷ್ಠಾನಗಳನ್ನು ಬೇರೆ ಪ್ರದೇಶಕ್ಕೆ ಹೋದಾಗ

---

* ಪ್ರ. ಸಾ. ಮುದ್ರಣಕ್ಕೆ ಸಿದ್ಧವಾಗಿರುವ ಜ್ಯೋತಿಶ್ಶಾಸ್ತ್ರ ಮಹಿಮೆಯಲ್ಲಿ ಚಂದ್ರ, ಬೃಹಸ್ಪತಿ, ಶಾಸ್ತ್ರ ಸಂಬಂಧದಲ್ಲಿ ವಿವರಿಸಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬದಲಾಯಿಸಬೇಕಾಗುವುದು. ಮತ್ತು ಪ್ರಕೃತಿ ಮಹಿಮೆಯಿಂದ ಅನುಷ್ಠಾನಗಳು ತಾವಾಗಿಯೇ ಮಾರ್ಪಾಡಾಗುವುವು. ಬಾಹ್ಯವಾದ ಅನುಷ್ಠಾನಗಳು ಸ್ವಕರ್ಮವನ್ನು ತಿಳಿಸುವುದಕ್ಕೂ ಶಾರೀರಕ ಮಾನಸಿಕ ಸ್ವಕರ್ಮಗಳನ್ನು ಬಹಿಃ ಪ್ರಕಾಶಪಡಿಸುವುದಕ್ಕೂ ಆವರಣಗಳು ಪ್ರತಿಬಂಧಕಗಳಾಗಿರಬಹುದಾದುದರಿಂದ ಹೊರಗೆ ಕಾಣುವ, ಹೊರಕ್ಕೆ ಕಾಣಿಸುವ ಅನುಷ್ಠಾನಗಳೆಲ್ಲವೂ ಗೌಣವಾಗಿರುತ್ತವೆ. ಆದರೆ ಪ್ರದೇಶ ದೃಷ್ಟಿಯಿಂದ ವ್ಯಕ್ತಿಯ ದೃಷ್ಟಿಯವರೆಗೂ ಸ್ವಕರ್ಮದ ಇಂಗಿತವು ಲೇಶವೂ ಬದಲಾವಣೆ ಹೊಂದುವುದಿಲ್ಲ.

ದೇಶಗುಣ ವಾಯುಗುಣಾದಿಗಳು ವಿವಿಧವಾದ ಪ್ರಕೃತಿಲೀಲೆಯ ಆಶ್ರಯದಲ್ಲಿ ವಿವಿಧವಾಗಿರುವುದರಿಂದ, ಅವುಗಳು ಪ್ರೋತ್ಸಾಹಿಸುವ ಕೆಲವು ಗೊತ್ತಾದ ಕರ್ಮಾನುಷ್ಠಾನಗಳಿಗೆ ಆಶ್ರಯದಾತೃಗಳಾಗಿರುತ್ತವೆ. ಇವು ಪ್ರಜೆಗಳ ಕರ್ಮಾನುಷ್ಠಾನವನ್ನು ಸಂಕುಚಿತಗೊಳಿಸುವುವು, ವಿಕಾಸಗೊಳಿಸುವುವು ಮತ್ತು ಮರೆಮಾಡುವುವು. ಬೇರೆ ಬೇರೆ ರಾಷ್ಟ್ರಗಳಲ್ಲಿ ಪ್ರಜೆಗಳ ಶಾರೀರಕ ಮಾನಸಿಕ ಶಕ್ತಿಗಳು ಮತ್ತು ಋಣಾನುಬಂಧಗಳು ಆಯಾ ರಾಷ್ಟ್ರಗಳ ಮಟ್ಟದಲ್ಲಿ ಪರಸ್ಪರ ಹೆಚ್ಚು ಕಡಿಮೆಯಾಗಿಯೇ ಇರುವುವು.

## ರಾಷ್ಟ್ರದ ಪರಿಮಿತಿ

ಭೂಗುಣಾದಿಗಳ ವೈವಿಧ್ಯವು ಪ್ರದೇಶ ದೇಶಗಳಿಗೆ ಮಾತ್ರವಲ್ಲದೆ ರಾಷ್ಟ್ರಗಳಿಗೂ ಅನ್ವಯಿಸುತ್ತದೆ. ಪ್ರತಿಯೊಂದು ದೇಶವೂ ತನ್ನ ಭೂಸಂಪತ್ತು, ವನಸಂಪತ್ತು ಮೊದಲಾದುವುಗಳಿಂದ ಪ್ರಜೆಗಳ ಮನೋಭಾವ ಋಣಭಾವಗಳ ಆಯಕಟ್ಟನ್ನೂ ಋಣಸಂಕಲ್ಪಾದಿಸಂಸ್ಕೃತಿಗಳನ್ನೂ ಮಿತಿಗೊಳಿಸಿ ಪ್ರಜೆಗಳ ಸ್ವಕರ್ಮವನ್ನು ನಿರ್ದೇಶಿಸುವುದು. ಆದುದರಿಂದ ಭೂಗೋಲದ ಪ್ರಾದೇಶಿಕ, ಪ್ರಾಕೃತಿಕ ಸ್ಥಿತಿಗಳ ಜ್ಞಾನವು ಸ್ವಧರ್ಮಾನುಷ್ಠಾನಕ್ಕೆ ಅತ್ಯಂತ ಸಹಕಾರಿಯಾಗಿರುತ್ತದೆ. ಈ ತಿಳಿವಳಿಕೆಯಿಲ್ಲದವರು ಕರ್ಮಾನುಷ್ಠಾನವನ್ನು ಕೂಲಂಕಷವಾಗಿ ತಿಳಿದು ಶಾಂತಿ ಸಮಾಧಾನಗಳನ್ನು [illegible] ಮಾತ್ರವಲ್ಲದೆ

In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನರ್ಥಕಾರಿಗಳಾಗುತ್ತಾರೆ. ಬ್ರಾಹ್ಮಣ ದೇಶದ ಹೊರಭಾಗದಲ್ಲಿರುವವರು, ಬ್ರಾಹ್ಮಣದೇಶದ ಇಹಪರಸುಖಸಂಪತ್ಸಾಧನಗಳನ್ನು ತಿಳಿದು ಹಮ್ಮೈಸಿ ಬಂದು, ಸಾತ್ವಿಕರಾದ ಬ್ರಾಹ್ಮಣ ಧರ್ಮಾನುಯಾಯಿಗಳ ಮೇಲೆ ಕೀಳು ತರದ ಪ್ರಾಪಂಚಿಕವನ್ನು ಹೊರಿಸಿ, ಸಾಮ ದಾನ ಭೇದ ದಂಡೋ ಪಾಯಗಳಿಂದ ವಂಚಿಸಿ, ಆ ಪ್ರಜೆಗಳು ಆಚಾರ, ಸಂಸ್ಕೃತಿಯನ್ನು ಮರೆತು ದುರವಸ್ಥೆಗೆ ಗುರಿಯಾಗುವಂತೆ ಮಾಡಿದ ತಮ್ಮ ದುಷ್ಕರ್ಮಕ್ಕೆ ವಿಪ್ರತಿಕ್ರಿಯಾ ದುಷ್ಟಫಲವನ್ನು ತಾವೇ ಅನುಭವಿಸುವಂತೆ ಋತವು - ಪ್ರಕೃತಿಯು ವ್ಯವಸ್ಥೆಗೊಳಿಸುತ್ತಿರುವುದು ಸರ್ವರಿಗೂ ಪ್ರತ್ಯಕ್ಷವಾಗಿದೆ. ಬ್ರಾಹ್ಮಣ ದೇಶದ ಸ್ವಕರ್ಮದ ಮಹೌನ್ನತ್ಯವನ್ನು ತಿಳಿಯದೆ ತಿಳಿಯ ಲಾರದೆ, ತಿಳಿಯಲು ಅಪೇಕ್ಷಿಸದೆ, ತಮ್ಮ ಸ್ವಕರ್ಮವು ಕೆಳಗಿನ ಮಟ್ಟ ದ್ದಾದರೂ ಅದನ್ನೇ ಉತ್ತಮವೆಂದು ತಿಳಿದ ಅಲ್ಪಜ್ಞಾನ ಮತ್ತು ಅಹಂಕಾರಗಳ ಫಲವನ್ನು ಹೊಂದಿಯೂ, ಹೊಂದುತ್ತಲೂ, ಮುಂದೆ ಹೊಂದುವವರಾಗಿಯೂ ಇದ್ದಾರೆ.

ಒಂದು ರಾಷ್ಟ್ರದ ಮನೋಭಾವವನ್ನು (ಮನೋಧರ್ಮವನ್ನು) ಮತ್ತೊಂದರ ಮನೋಭಾವದೊಡನೆ ಹೋಲಿಸಿದಾಗ ಒಂದರ ದೃಷ್ಟಿ ಯಿಂದ ಮತ್ತೊಂದು ನೀಚಮಟ್ಟದಲ್ಲಿದ್ದಂತೆ ಭಾವಿಸುವುದು ಪ್ರಾಣಿ ಮಾತ್ರಕ್ಕೆ ಸಹಜವಾದುದು. ಅಂತೆಯೇ ಪ್ರತಿಯೊಂದು ರಾಷ್ಟ್ರವೂ ತನ್ನದೇ ಉನ್ನತಮಟ್ಟದ್ದೆಂದು ಭಾವಿಸುವುದೂ ಸ್ವಾಭಾವಿಕವೇ. ವಿಮರ್ಶೆಗೆ ಸಾಧಕವಾದುದು ಜೀವನದ ಪರಮಲಕ್ಷ್ಯಸಾಧಕವಾದ, ಸುಖಶಾಂತಿಪ್ರದವಾದ ಸಂಸ್ಕೃತಿ ವಿಧಾನವು. ಸುಖಶಾಂತಿಯು ಕೇವಲ ಪ್ರಾಪಂಚಿಕವನ್ನೇ ಅವಲಂಬಿಸದೆ ಶಾಶ್ವತವೆನಿಸುವ ಸ್ವಸ್ವರೂಪಾವಸ್ಥಾನ ಕ್ಕೆ ಸಂಬಂಧಿಸಿರುತ್ತದೆ. ಯಾವ ರಾಷ್ಟ್ರದಲ್ಲಿ ಜೀವನದ ಪರಮಾವಧಿ ಯನ್ನು ಕಂಡುಹಿಡಿದು ಸಂಸ್ಕೃತಿ ವಿಧಾನಗಳಿಂದ ಇಹಪರಗಳಲ್ಲಿ *

* ಸ್ವಸ್ವರೂಪಾವಸ್ಥಾನಾಂಕಿತವಾದ ಜನ್ಮಾಂತರ ಸ್ಥಿತಿ, ಜೀವನ್ಮುಕ್ತ - ವಿದೇಹಕೈವಲ್ಯ — ಎಂಬ ಅರ್ಥದಲ್ಲಿ 'ಪರ' ಲೋಕ ವನ್ನು ತಿಳಿಯಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಖಶಾಂತಿಯನ್ನು ಸಾಧಿಸುವುದಕ್ಕೆ ಅವಕಾಶವಿದೆಯೋ ಆ ರಾಷ್ಟ್ರವೇ ಉನ್ನತವೆಂಬುದನ್ನು 'ಸ್ವಭಾವ'ವೆಂಬ ತುಳಿಯು ನಿರ್ದೇಶಿಸುತ್ತದೆ. ಉನ್ನತಿ ಮತ್ತು ಅವನತಿಗಳನ್ನು ಆಯಾ ರಾಷ್ಟ್ರದವರು, ದುರಹಂಕಾರ, ದ್ವೇಷಾಸೂಯೆಗಳಿಲ್ಲದೆ ನಿಷ್ಪಕ್ಷಪಾತವಾದ 'ತುಲೆ' ಎಂಬ ವಿವೇಕದಿಂದ ಗೊತ್ತುಮಾಡಿಕೊಳ್ಳಬೇಕು.* ನದಿಯ ದಡಗಳಲ್ಲಿರುವ ಗಿಡಗಳ ಹಸುರು ಛಾಯೆಗೆ ಹಮ್ಮೈಸಿ ಒಂದು ದಡದಿಂದ ಮತ್ತೊಂದಕ್ಕೂ, ಮತ್ತೊಂದರಿಂದ ಮೊದಲನೆಯದಕ್ಕೂ ಸುತ್ತಾಡುವ ಪಶುವಿನಂತೆ ಮಾನವರು ವರ್ತಿಸಲಾಗದು. ಕಾಮ, ಅಸೂಯೆ, ಅಹಂಕಾರಾದಿ ದೋಷಗಳನ್ನು ದೂರೀಕರಿಸಿದ ವಿವೇಕದಿಂದ ಸ್ಥಿತಪ್ರಜ್ಞೆಯನ್ನು ಹೊಂದಿ ಸ್ವಕರ್ಮ ಮಹಿಮೆಯನ್ನು ತಿಳಿಯಬೇಕು.

ಪ್ರಾಪಂಚಿಕವಾದ ವೈಚಿತ್ರ್ಯ ವೈಶಿಷ್ಟ್ಯಗಳು ಪ್ರಕೃತಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿ ಹರಡಿರುತ್ತವೆ. ಇವೆಲ್ಲವನ್ನೂ ಏಕಕಾಲದಲ್ಲಿ ಏಕತ್ರ ನೋಡಲು (ಅನುಭವಿಸಲು) ಯಾರಿಂದಲೂ ಸಾಧ್ಯವಿಲ್ಲ. ಆಯಾ ವೈಶಿಷ್ಟ್ಯವೈಚಿತ್ರ್ಯಗಳಿಗೆ ಸಂಬಂಧಿಸಿದ ಋಣಸಂಕಲ್ಪಗಳನ್ನು ನಿರ್ವಹಿಸಿ ಕೊಳ್ಳಲು ಜೀವಿಗಳು ಅಲ್ಲಲ್ಲಿ ಜನ್ಮವೆತ್ತಿ ಆಯಾ ಇಚ್ಛೆಗಳನ್ನು ಸಾಧಿಸುವರು ಒಂದು ರಾಷ್ಟ್ರದ ಪ್ರಾಪಂಚಿಕ, ಪಾರಮಾರ್ಥಿಕ ವೈಭವಗಳನ್ನು ಇತರ ರಾಷ್ಟ್ರದವರು ನೋಡಿ ಕೇಳಿ ಸಂತೋಷಪಟ್ಟು ಪ್ರಕೃತಿಲೀಲೆಯ ಔಚಿತ್ಯವನ್ನು ಗೌರವಿಸಿದರೆ ಸಾಕಾಗುವುದು. ಹೊರ ರಾಷ್ಟ್ರದಲ್ಲಿ ದೊರೆಯಬಹುದಾದ ಅನುಭವವನ್ನು ಸ್ವರಾಷ್ಟ್ರದಲ್ಲಿ ಅನುಕರಿಸುವುದರಿಂದ ಪ್ರಕೃತಿಗೆ ಎದುರುಬಿದ್ದಂತಾಗಿ, ತಪಸ್ಸು ಭಂಗ

* ಐಹಿಕ ಸುಖಭೋಗೈಶ್ವರ್ಯಗಳನ್ನು ವಶೀಕರಿಸಿದ ಮುಂಡನ ಮಿಶ್ರಮಹಾಶಯರು ವಿವೇಕೋದಯದ ಫಲವಾಗಿ ಪ್ರಾಪಂಚಿಕವನ್ನು ತ್ಯಾಗಮಾಡಿ ಪರಮಹಂಸಾವಸ್ಥೆಯನ್ನು ತಾಳಿದರು ಈ ಬಗೆಯ ವಿವೇಕವನ್ನು ಸಾರ್ವಕಾಲಿಕವಾಗಿ ಸರ್ವತ್ರ ಸರ್ವ ಪ್ರಜೆಗಳೂ ಜೀವನ ದಲ್ಲಿ ಅಳವಡಿಸಿಕೊಂಡು ಸ್ವಕರ್ಮವೇತ್ತರಾಗಿ ಆಯಾ ಹಂತದಲ್ಲಿ ಪರಮಸುಖಾನುಭವವನ್ನು ತಂದುಕೊಳ್ಳಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ ಅದಕ್ಕೆ ತಕ್ಕ ಫಲವನ್ನು ಹೊಂದಬೇಕಾಗಿದೆ. ತನ್ನ ಅನುಭವಕ್ಕಿಂತಲೂ ಬೇರೆಯಾದ ಅನುಭವವುಳ್ಳ ರಾಷ್ಟ್ರದ ಅನುಭವಜ್ಞಾನದಿಂದ ಅದರ ಮೇಲೆ ಇಚ್ಛೆಯುಂಟಾಗಿ ಋಣವನ್ನು ಕಲ್ಪಿಸಿ ಸಂಕಲ್ಪ ಮಾಡಿದರೆ ಆ ಅನುಭವ ಪ್ರಾಪ್ತಿಗೆ ಆ ಗೊತ್ತಾದ ಭೂ ಪ್ರದೇಶದಲ್ಲಿ ಜನ್ಮವೆತ್ತುವುದಕ್ಕೆ ಪ್ರಕೃತಿಯು ಋತಕ್ಕೆ ಅನುರೋಧವಾಗಿ ಸಹಕರಿಸುವುದು.

ಮನುಷ್ಯರು ಸಂಕಲ್ಪಾನುಸಾರ ಪ್ರಕೃತಿಯನ್ನು ಅನುಕರಿಸಿ ಪ್ರಕೃತಿಯಂತೆ ಸೃಷ್ಟಿಸ್ಥಿತಿಲಯಕಾರ್ಯಗಳಲ್ಲಿ ತೊಡಗುವ ಕಾರ್ಯಕ್ಕೆ ಆವರಣಗಳು ಸಹಾಯಕವಾಗುವುವು. ಅದರ ಫಲವಿಪ್ರತಿಕ್ರಿಯಾಫಲಗಳೂ ಸಂಭವಿಸುವುವು. ಈ ಬಗೆಯ ಪ್ರಯತ್ನಕ್ಕೆ ಇಂದ್ರಿಯಗಳ ಮಟ್ಟದಲ್ಲಿಯೂ ಇಂದ್ರಿಯಾತೀತ ಮಟ್ಟದಲ್ಲಿಯೂ ಯತ್ನಗಳು ನಡೆಯುವುವು. ಇಂದ್ರಿಯಗಳ ಮಟ್ಟದಲ್ಲಿ ಸರ್ವವನ್ನೂ ಸಾಧಿಸುವುದಕ್ಕೆ ಸಹಾಯ ಸಂಪತ್ತು, ಋಣ, ವಾಸನೆಗಳಿರುವ ಪಶ್ಚಿಮಾರ್ಧಗೋಳದಲ್ಲಿ ಪ್ರಾಪಂಚಿಕಾಭ್ಯುದಯವೇ ಪರಮಲಕ್ಷ್ಯವಾಗಿರುವ ಪ್ರಜೆಗಳಿಂದ ಆಯಾ ಮಿತಿಯಲ್ಲಿ ತಪಸ್ಸು ನಡೆದು ಸರ್ವರೂ ಫಲವನ್ನು ಹೊಂದಿರುತ್ತಾರೆ. ಈ ವಿಧವಾದ ಋಣವಾಗಲೀ ಸಂಕಲ್ಪವಾಗಲೀ ಪ್ರಯತ್ನವಾಗಲೀ ಫಲಾನುಭವವಾಗಲೀ – ಪಾರಮಾರ್ಥಿಕವೇ ಪರಮಲಕ್ಷ್ಯವಾಗಿರುವ ಪೂರ್ವಾರ್ಧಗೋಳಕ್ಕೆ ಸೇರಿದ ಬ್ರಾಹ್ಮಣದೇಶದಲ್ಲಿ ಎಂದಿಗೂ ಸಾಧ್ಯವಿಲ್ಲ. ಪಂಚವಲಯ ರಾಜ್ಯಭಾರಕ್ಕೆ ಸೇರಿದ ಪ್ರತಿಪ್ರಜೆಯೂ ಈ ರಹಸ್ಯವನ್ನೂ ತನ್ನ ಪ್ರಭುಶಕ್ತಿಯ ಸ್ವರೂಪ ವ್ಯಾಪ್ತಿಗಳನ್ನೂ ಸಹ ತಿಳಿದು ತನ್ನ ತನ್ನ ಸ್ವಧರ್ಮವನ್ನು ಅನುಷ್ಠಾನದಲ್ಲಿಟ್ಟುಕೊಳ್ಳಬೇಕು. ಹಾಗಲ್ಲದೆ ಪರಧರ್ಮಾನುಷ್ಠಾನ ಮಾಡಲು ಹೊರಟರೂ ಮತ್ತು ಹಾರಾಡುತ್ತಾ ನೆಗೆದಾಡುತ್ತಾ "ಪಾತಾಲಮಾವಿಶಸಿ ಯಾಸಿ ನಭೋ ವಿಲಂಘ್ಯ" ಇತ್ಯಾದಿ ಭರ್ತೃಹರಿಯು ಹೇಳಿರುವಂತೆ ಭೂ - ವನ - ಖನಿಜ - ವಾಯು ಸಂಪತ್ತುಗಳ ಪ್ರಭಾವದಿಂದ ಅನುಕರಿಸಿದರೂ ಹಳ್ಳಕ್ಕೆ ಬಿದ್ದು ಅಪಘಾತ ಫಲಕ್ಕೆ ಗುರಿಯಾಗಿ ತಾವೂ ಕೆಟ್ಟು ಇತರ ರಾಷ್ಟ್ರಗಳಿಗೂ ಆ ಕೇಡು ಹರಡುವಂತೆ ಮಾಡಿದಂತಾಗುತ್ತದೆ.

ಪರಮಶಾಂತವಾದ ಬ್ರಹ್ಮರ್ಷಿಗಳ ಸ್ಥಿತಿಗೆ ಆಕರವೂ ಆಶ್ರಯವೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರೋತ್ಸಾಹಕರವೂ ಆದ ರಾಷ್ಟ್ರದವರ ಅತ್ಯುನ್ನತ ಮಟ್ಟದ ಸಂಸ್ಕೃತಿ, ಮನೋಭಾವವು (ಮನೋಧರ್ಮವು) ಅನೇಕ ಸಂಸ್ಕಾರ ಸೋಪಾನಗಳನ್ನು ಅಡರಿ ಸಾಕ್ಷಾತ್ಕರಿಸಲ್ಪಟ್ಟದ್ದಾಗಿರುತ್ತದೆ. ಇದನ್ನು ಸಂಸ್ಕಾರವಿಲ್ಲದವರು ಸಂಸ್ಕಾರ ಸೋಪಾನವನ್ನೇ ಕಾಣದವರು, ಪ್ರಾಪಂಚಿಕ ಲೋಲರು ಮನಸ್ಸಿನಲ್ಲಿ ಯೋಚಿಸಲು ಸಾಧ್ಯವಿಲ್ಲ; ಸ್ವಪ್ನದಲ್ಲಿಯೂ ಕಾಣಲಾರರು. ಪರಮ ಪವಿತ್ರವಾದ ಯಜ್ಞಭೂಮಿಯಲ್ಲಿ ಯಜ್ಞದ ಆವರಣದಲ್ಲಿ ವಾಸಿಸುವುದರಿಂದ ಯಜ್ಞಕ್ಕೆ ಆಶ್ರಯವಾದ ಹೃದಯದಲ್ಲಿ ಸ್ವಕರ್ಮಾನುಷ್ಠಾನ ಸೋಪಾನಗಳನ್ನು ಏರುವುದರ ಫಲವಾಗಿ ರಾಷ್ಟ್ರದ ಮಿತಿಯಲ್ಲಿ ಸಂಸ್ಕಾರವು ಲಭಿಸುವುದು.

ವಿಶ್ವದಲ್ಲಿ ಹೊರ ರಾಷ್ಟ್ರಗಳ ಸಂಪದುತ್ಕರ್ಷ ಸ್ಥಿತಿಗೆ ತಕ್ಕಂತೆಯೂ ಸಮತೆಯನ್ನು ತರುವುದಕ್ಕೂ ಬ್ರಾಹ್ಮಣ ದೇಶದಲ್ಲಿ ಬ್ರಾಹ್ಮಣ ದೇಶದವರೂ ಸ್ವಕರ್ಮವನ್ನು ಅಳವಡಿಸಿಕೊಳ್ಳಬೇಕೆಂದು ವಾದಿಸುವವರು ಬಹುಮಂದಿ. ಆಪಾತತಃ ಇಂದ್ರಿಯ ಮಟ್ಟಗಳಲ್ಲಿ ಕಾಣುವ ಸೊಬಗಿಗೆ ಮರುಳಾಗಿ ಹೀಗೆ ವಾದಿಸುವುದೂ ಅನುಭವಿಸುವುದೂ ಸುಲಭ. ಆದರೆ ವಿಶ್ವದ ದೃಷ್ಟಿಯಿಂದ ಬ್ರಾಹ್ಮಣ ದೇಶವು ಕೇವಲ ಋಷ್ಯಾಶ್ರಮವಾಗಿರುವುದು. ಋಷ್ಯಾಶ್ರಮವಾದ ಬ್ರಾಹ್ಮಣ ದೇಶವು ಸಂಪೂರ್ಣವಾಗಿ ಋಷಿತ್ವವನ್ನು ಹೊಂದಿ ಇತರ ದೇಶಗಳಿಗೆ ಅನುಸಂಧಾನ ಸಂಸ್ಕೃತಿಯಲ್ಲಿ ಶಿಕ್ಷಣವನ್ನು ಕೊಡಬೇಕಾಗಿರುತ್ತದೆ. ಆದರೆ ಬ್ರಾಹ್ಮಣ ದೇಶದೊಳಗಿನ ವಿಚಾರಗಳನ್ನು ಗಮನಿಸಿದಾಗ ಶೇ. 99 ಜನಗಳು ಇಂದ್ರಿಯ ಮಟ್ಟದಲ್ಲಿರುವುದು ನಿಜ. ಮತ್ತು ಉತ್ತಮಾಧಿಕಾರಿಗಳಾಗಿರುವುದೂ, ಅವರಿಗೆ ಅದು ಆಜನ್ಮಸಿದ್ಧವಾಗಿ ಲಬ್ಧವಾಗಿರುವುದೂ ನಿಜ. ವಿಶ್ವಸಮಸ್ಯೆಯ ವಿಚಾರವನ್ನು ಮನಸ್ಸಿಗೆ ತಂದುಕೊಂಡಾಗ ಜನತೆಯ ಸ್ವಸ್ವರೂಪಾವಸ್ಥಾನಾಧಿಕಾರ ಸಂಪತ್ತು ಪ್ರಮುಖವಾಗುವುದು. ಆದುದರಿಂದ ತೀವ್ರವಾಗಿ ವಿಶ್ವಶಾಂತಿಗೆ ವಿಶ್ವಕಲ್ಯಾಣಾಭ್ಯುದಯಗಳಿಗೆ ಪ್ರಯತ್ನಪಡುವ ಅಧಿಕಾರವನ್ನು ಕಾರ್ಯರೂಪಕ್ಕೆ ಪರಿವರ್ತಿಸಬೇಕಾಗಿರುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


## ಸಾಮಾಜಿಕ ಮಿತಿ ; ಕೌಟುಂಬಿಕ ಮಿತಿ ; ವೈಯಕ್ತಿಕ ಮಿತಿ

ವ್ಯಕ್ತಿಯು ತನ್ನ ಜೀವನ ಸುಖಭಾವನೆಗೂ ಯೋಗಕ್ಷೇಮಕ್ಕೂ ಅನೇಕ ಕುಟುಂಬಗಳ ಗುಣಕರ್ಮಗಳಿಗೆ ಸಮಾನವಾಗಿರುವ ಸಮಾಜವನ್ನು ಆಶ್ರಯಿಸಬೇಕಾಗುವುದು. ಸಾಮಾಜಿಕ ಮನೋಭಾವವು ವ್ಯಕ್ತಿಗಳ ಗಮನವನ್ನು ಸೆಳೆದು ವ್ಯಕ್ತಿಗಳ ವರ್ಣವನ್ನು ವರ್ತನೆಯನ್ನು ರಕ್ಷಿಸುವುದು. ವ್ಯಕ್ತಿ ಮತ್ತು ಕುಟುಂಬಗಳ ವರ್ತನೆಯ ಗೌರವವನ್ನೂ ಸಂಸ್ಕೃತಿಯನ್ನೂ ಮತ್ತು ಸ್ವಾತಂತ್ರ್ಯವನ್ನೂ ಪುರಸ್ಕರಿಸುವ ಸಮಾಜ ಪದ್ಧತಿಗಳು ಕಾಲದೇಶಾನುಸಾರವಾಗಿ ವಿವಿಧವಾಗಿರುವುವು. ಈ ಸಮಾಜಗಳು ಆಯಾ ಪದ್ಧತಿಯನ್ನೂ ಸ್ವಕರ್ಮವನ್ನೂ ರೂಪಿಸಿ ತಮ್ಮ ಆಶ್ರಯದಲ್ಲಿರುವ ಕುಟುಂಬಗಳ ಉನ್ನತಿಗಾಗಿ ಶ್ರಮಿಸಿ ಪರಸಮಾಜಗಳಿಂದ ಆಕ್ರಮಣ ಮತ್ತು ಬಾಧೆಯುಂಟಾಗದಂತೆ ರಕ್ಷಿಸಿ ಯೋಗಕ್ಷೇಮ ಸಾಧಕಗಳಾಗುವುವು. ವ್ಯಕ್ತಿಗಳೂ, ಕುಟುಂಬಗಳೂ ತಮ್ಮ ಹಿತಕ್ಕಾಗಿ ಸ್ವಕರ್ಮ ವಿವರಗಳನ್ನು ಶಾಸ್ತ್ರಾನುಭವಗಳಿಂದ ನಿರ್ಧರಿಸಿ ಸಮಾಜದ ಮೂಲಕ ತಮ್ಮ ಮೇಲೆ ಹೊರಿಸಿಕೊಳ್ಳುವುವು. ಆದುದರಿಂದ ಸಾಮಾಜಿಕ ಮಿತಿಯಿಂದ ಸ್ವಕರ್ಮ ಮಿತಿಯನ್ನು ಗೊತ್ತುಮಾಡಬೇಕಾಗಿರುತ್ತದೆ. ಆನುವಂಶಿಕವಾಗಿ ಮತ್ತು ಸಾಂಪ್ರದಾಯಿಕವಾಗಿ ವ್ಯಕ್ತಿಯ ವೈಶಿಷ್ಟ್ಯವನ್ನು ಬೆಳಗುವ ಕರ್ಮ ವಿವರಗಳಿಗೂ ಬದಲಾಗುತ್ತಿರುವ ಆಯಾ ಕಾಲ ದೇಶ ಪಾತ್ರಗಳ ಪರಿಸ್ಥಿತಿಗೂ ತಕ್ಕಂತೆ ಕರ್ಮ ವಿವರಗಳು ನಿಯಮಬದ್ಧವಾಗಿ ರಚಿತವಾಗಿ ಮತ್ತು ಅಪವಾದ ನಿಷೇಧಗಳಿಂದ ಕೂಡಿ ದೋಷನಿವಾರಕಸೂಕ್ತಿಯುತವಾಗಿ ಬಹುಜನಹಿತಕರವಾಗಿರುತ್ತದೆ. ಮತ್ತು ಬಹುಜನ ಸುಲಭಸಾಧ್ಯವಾಗಿರುತ್ತವೆ. ಆದುದರಿಂದ ಸಾಂಪ್ರದಾಯಿಕವಾದ ಆನುವಂಶಿಕ ವಿಚಾರಗಳು ಸ್ವಕರ್ಮವನ್ನು ಮಿತಿಗೊಳಿಸುತ್ತವೆ.

ಗೃಹದ ಒಳಗೆ ಮತ್ತು ಹೊರಗೆ ವ್ಯಕ್ತಿಗಳು ಪರಸ್ಪರವಾಗಿ ಭೂತದಯೆ, ದಾಕ್ಷಿಣ್ಯಗಳಿಗೆ [illegible] ಬಾಧೆಗಳಿಗೀಡಾದಾಗಲೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸಾಧಾರಣವಾಗಿ ನಡೆಸಬೇಕಾದ ಕರ್ಮವಿವರಗಳು ಮಾನವತೆಗೆ ಶ್ರೇಯಸ್ಸನ್ನೇ ನೀಡುವುವು. ಆದುದರಿಂದ ಸ್ವಕರ್ಮವನ್ನು ಸನ್ನಿವೇಶ ಪರಿಸ್ಥಿತಿಗಳ ಪ್ರಭಾವಕ್ಕೆ ಗುರಿಮಾಡಿ ಮಿತಿಯನ್ನು ಕಲ್ಪಿಸುವುದು ಸಹಜವಾದುದು. ಕಲ್ಯಾಣಕ್ಕಾಗಿ ಸ್ವಕರ್ಮಗಳನ್ನು ಆಚರಿಸಿದವರಿಗೆ ಎಂದಿಗೂ ಕೆಡುಕು ಉಂಟಾಗುವುದಿಲ್ಲ.

ಅಮೃತಮಯವಾದ ಮತ್ತು ಮರಣವನ್ನೂ ದೂರೀಕರಿಸಬಹುದಾದ ಗೃಹಸ್ಥಾಶ್ರಮಕ್ಕೆ ಆಕರವಾದ ಗೃಹದ ಗೌರವವು ವಿಶೇಷವಾದ ಕರ್ಮ ವಿವರಗಳನ್ನು ಹೊಂದಿರುವುದು. ಆಹಾರ ವಿಹಾರಗಳ ವಿಶೇಷ ಸಂದರ್ಭ ಸಮಯಗಳಲ್ಲಿ ಕರ್ಮ ವಿವರಗಳು ಬಿಗಿಯಾಗಿಯೂ ಸಡಿಲವಾಗಿಯೂ ಸಾರ್ವಕಾಲಿಕವಾಗಿ ಸಾರ್ವತ್ರಿಕವಾಗಿ ಹಿತಕರವಾಗಿರುವಂತೆಯೂ ರಚಿತವಾಗಿವೆ.

ವೈಯಕ್ತಿಕವಾದ ಋಣಕಲ್ಪನೆಗನುಗುಣವಾಗಿ ಸ್ವಕರ್ಮವನ್ನು ರೂಪಿಸಿಕೊಳ್ಳುವುದೂ ಅನಿವಾರ್ಯವಾಗಿರುತ್ತದೆ. ವಿಶೇಷವಾಗಿ ಇಂದ್ರಿಯಾತೀತವಾದ (ಕುಲದೇವತಾ ಇಷ್ಟದೇವತಾದಿ) ಶಕ್ತಿವಿಶೇಷದ ಋಣಕಲ್ಪನೆಯಿಂದ ಕಡ್ಡಾಯವಾಗಿಯೂ ಐಚ್ಛಿಕವಾಗಿಯೂ ಕರ್ಮ ವಿವರಗಳನ್ನು ವ್ಯಕ್ತಿಗಳು ರೂಪಿಸಿಕೊಳ್ಳಬೇಕಾಗುವುದು. ಹೀಗೆ ವ್ಯಕ್ತಿಯನ್ನು ಬಳಸಿ ಆವರಿಸಿ ಹಿಂದಿನಿಂದ ಪ್ರೇರಿಸುವ ಮತ್ತು ಮುಂದಕ್ಕೆ ತಳ್ಳುವ ಮತ್ತು ಎಳೆದುಕೊಂಡೊಯ್ಯುವ ಶಕ್ತಿವಿಶೇಷಗಳು ಅನಂತವಾಗಿವೆ.

ಇವುಗಳನ್ನು ಸರ್ವ ಧರ್ಮಾಂತರ್ಗತವಾದ ಮತ್ತು ಸರ್ವವನ್ನೂ ಆಳೆದು ಮುಗುಚಿ ಸಾಮರಸ್ಯದಿಂದ ವ್ಯಕ್ತಿಗಳ ಮಿತಿಯನ್ನು ನಿರ್ದೇಶಿಸಬಲ್ಲ ರಾಜನೀತಿಯು ಮಾತ್ರ ನಿರ್ಧರಿಸಬಲ್ಲುದು. ರಾಜನೀತಿಯ ಅರಿವಿಲ್ಲದವನು ಸ್ವಕರ್ಮದ ಸ್ವರೂಪ ಮಿತಿಗಳನ್ನು ತಿಳಿಯಲಾರನು. ಒಂದು ವ್ಯಕ್ತಿಯು ಶಿಕ್ಷಣದಿಂದ ಪಕ್ವವಾದ ಅವಸ್ಥೆಯನ್ನು (ಸೋಪಾನವನ್ನು) ಬಿಟ್ಟು ಕೆಳಗಿನ ಅಂತಸ್ತಿಗೆ ಇಳಿಯುವುದೂ ಹೇಯವಾದುದು; ಕ್ರಮೇಣ ಉನ್ನತ ಸೋಪಾನವನ್ನು ಏರಲು ಅಧಿಕಾರವನ್ನು ಸ್ವಭಾವವಾಗಿ ಹೊಂದಿರುವ ವ್ಯಕ್ತಿಯು ಕೆಳಗಿನ ಅಂತಸ್ತಿನಲ್ಲಿದ್ದು

CC-0. In Public Domain. Gurukul Kangri Collection, Haridwar

ಅಸೂಯೆ, ಅಹಂಕಾರಗಳಿಂದ ಹಮ್ಮೈಸಿ, ಹಾರಿ ಉನ್ನತ ಸೋಪಾನವನ್ನು ಏರುವುದಕ್ಕೆ ಆಲೋಚನೆ ಮಾಡುವುದೂ ತಿಳಿಗೇಡಿತನ.

## ಸ್ವಪರ ಶಬ್ದಗಳ ವ್ಯಾವೃತ್ತಿ ಮತ್ತು ವ್ಯಾಪ್ತಿ

### ಅನುಷ್ಠಾನ ಮಿತಿ

ಸ್ವಧರ್ಮವು ಅಪರಿಮಿತವಾದುದು; ಅನಂತವಾದುದು; ಅಖಂಡವಾದುದು; ಪೂರ್ಣವಾದುದು. ಸ್ವಧರ್ಮವೇ ಬ್ರಾಹ್ಮಣಧರ್ಮ – ಬ್ರಾಹ್ಮಣಾಚಾರ; ಆದರಂತೆ, ಪರಧರ್ಮ ಶಬ್ದವೂ ಪಾವನವಾಗಿ ಪೂರ್ಣವಾಗಿದೆ. 'ಸರ್ವಂ ಬ್ರಹ್ಮಮಯಂ' ಎಂಬ ತತ್ವವನ್ನು, ಮನಗಂಡಿರುವ ಪ್ರಪಂಚದಲ್ಲಿ, ಸ್ವಧರ್ಮದ ಪರಿಮಿತಿಯಲ್ಲಿ ಬರದೇ ಇರುವ ವಸ್ತುವೇ ಇಲ್ಲ. ಸ್ವಸ್ಮೈ ಸ್ವೇನ ಸ್ವಸ್ಯ ಧರ್ಮಃ, ಕರ್ಮ ವಾ – ಸ್ವಧರ್ಮಃ, ಸ್ವಕರ್ಮ (ಪರಸ್ಮೈ, ಪರೇಣ, ಪರಸ್ಯ ಧರ್ಮಃ ಪರಧರ್ಮಃ) ಪರಮಾರ್ಥದ ತಿರುಳಿನ ಆಧಾರದ ಮೇಲೆ ಸ್ವ ಮತ್ತು ಪರಶಬ್ದಗಳನ್ನು ರಾಜನೀತಿಯು ಪ್ರಾಪಂಚಿಕವಾಗಿ ಸಂಕುಚಿತಾರ್ಥದಲ್ಲಿ ವಿಧಿಸುವುದರಿಂದ ವ್ಯವಹಾರವು ಸುಗಮವಾಗುವುದು.

ಸ್ವಾಚಾರ, ಸ್ವಧರ್ಮ, ಸ್ವಕರ್ಮ ಪದಗಳನ್ನು ಉಚ್ಚರಿಸಿ ವ್ಯವಹರಿಸುವವರ ದೃಷ್ಟಿಯಿಂದಲೂ ಅವರ ಮಟ್ಟಕ್ಕೆ ಸಿಲುಕುವ ಪರಧರ್ಮ ವ್ಯವಹಾರದ ದೃಷ್ಟಿಯಿಂದಲೂ ಸ್ವಧರ್ಮ ಪರಧರ್ಮ ಶಬ್ದಾರ್ಥಗಳು ಅನುಷ್ಠಾನಪರವಾಗಿದ್ದಂತೆ ತಿಳಿದು ಅನುಷ್ಠಾನಮಿತಿಯನ್ನು ಪ್ರಸ್ತಾಪಿಸಬೇಕಾಗಿರುತ್ತದೆ. ಆದುದರಿಂದ ವಿವೇಕಿಗಳಾದವರು ಸ್ವಧರ್ಮ ಶಬ್ದದ ಅತಿವ್ಯಾಪ್ತಿ, ಅವ್ಯಾಪ್ತಿಗಳನ್ನು ದೂರೀಕರಿಸಿ 'ಅನುಷ್ಠಾನ ಮಿತಿ' ಎಂಬ ಪದವನ್ನು ಬಳಸಬೇಕಾಗಿರುತ್ತದೆ. 'ಅನುಷ್ಠಾನ ಮಿತಿ' ಪದವೂ ಸಹ (ಪರಮಾರ್ಥತಃ ಮತ್ತು ವಸುಧಾ ಕುಟುಂಬದ ದೃಷ್ಟಿಯಿಂದ) ಸ್ವಪರ ಶಬ್ದಗಳಿಂದ ದೂರವಾಗಿರಬೇಕು. ಮತ್ತು ಪಂಚವಲಯ ರಾಜ್ಯದ ಶಾಸನಕ್ಕನುಗುಣವಾಗಿ ದೇಶ, ಪ್ರದೇಶ ವಂಶ, ಗೋತ್ರ, [illegible] ನಾಮರೂಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಇವುಗಳನ್ನು ತಿಳಿದು ಸಮಷ್ಟಿರೂಪದಲ್ಲಿ ವ್ಯವಹರಿಸುತ್ತಾ ವ್ಯಷ್ಟಿರೂಪದಲ್ಲಿ ಆಚರಿಸುತ್ತಾ ಸಮತಾಭಾವಾದಿಗಳಿಂದ ಶಾಂತವಾಗಿ ಕಲ್ಯಾಣಾಭ್ಯುದಯ ಗಳನ್ನು ಸಾಧಿಸುವುದು ರಾಜನೀತಿಯ ಕುಶಲತೆ.

ಬ್ರಹ್ಮಾಂಡ ವ್ಯಾಪ್ತಿ

ಸರ್ವವ್ಯಾಪಿಯಾಗಿ ಸರ್ವಭೂತಗಳ ಹೃದ್ದೇಶಗಳಲ್ಲಿರುವ ದೇವತ್ವದ ಸಾಕ್ಷಾತ್ಕಾರವು ಅಥವಾ ಸ್ವಸ್ವರೂಪಾವಸ್ಥಾನಾನಂದವು ಮಾನವತೆಗೆ ಮುಖ್ಯ ಗುರಿಯಾಗಿದೆ.– ಎಂದು ಪುನಃ ಪುನಃ ನಿರೂಪಿತ ವಾಗಿದೆ. ಅಪರೋಕ್ಷ ಜ್ಞಾನವನ್ನು ಹೊಂದುವವರೆಗೂ ಅನೇಕ ಉಪಾಧಿ ಗಳಲ್ಲಿ ಕೋಟಿಗಟ್ಟಲೆ ಹಂತಗಳಲ್ಲಿ ವಿಭಜನೆ ಸಂಯೋಜನ ಪ್ರಮಾಣ ರೀತ್ಯಾ ಅನಂತ ಭೇದಗಳಾಗಿರುವ ಅಭ್ಯಸ್ತ ಸ್ವಕರ್ಮಗಳುಳ್ಳ ಏಕೈಕ ವಾದ ಆಚಾರದ ಆಶ್ರಯದಲ್ಲಿ ಅನುಷ್ಠಾನಗಳು ನಡೆಯುತ್ತಿರುವುವು. ಒಂದು ಅವಸ್ಥೆಯಲ್ಲಿ ಅಥವಾ ಹಂತದಲ್ಲಿ ಆತ್ಮ ಸಾಕ್ಷಾತ್ಕಾರವೆಂಬುದನ್ನು ಕೇಳದೇ ತಿಳಿಯದೇ ಇರಬಹುದು. ಜ್ಞಾನಕ್ಕೆ ಮರೆಯುಂಟಾಗಿರುವ ಈ ಹಂತದಿಂದ ಬಿಡುಗಡೆಯಾಗಲು ಅವಕಾಶಗಳು ಹೇರಳವಾಗಿ ಸುತ್ತಿ ಕೊಂಡಿರುವುವು. ಇವು ಕಾಲ ಅಥವಾ ಕರ್ಮದಿಂದ ಸ್ವಾಭಾವಿಕವಾಗಿ ಯೋ ಆಕಸ್ಮಿಕವಾಗಿಯೋ ಎಂಬಂತೆ ಸ್ವಂತ ಅನುಭವಕ್ಕೆ ಬರುವುವು. ಜಗತ್ತಿನಲ್ಲಿ ಪ್ರತಿಯೊಂದು ಕ್ರಿಯೆಯೂ ಆತ್ಮಸಾಕ್ಷಾತ್ಕಾರದ ಕಡೆಗೇ ಒಲವನ್ನು ಹೊಂದಿರುವ ವಿಚಾರವು ಸ್ಪಷ್ಟವಾಗುವುದು. ಈ ರಹಸ್ಯದ ವಿವರಣೆಗಳು ಬ್ರಾಹ್ಮಣಧರ್ಮ ಬ್ರಾಹ್ಮಣಾಚಾರ ಗ್ರಂಥಗಳಲ್ಲಿ ತುಂಬಿವೆ. ಬ್ರಹ್ಮಾಂಡವನ್ನು ಆವರಿಸಿ, ವ್ಯಾಪಿಸಿ ಪರಬ್ರಹ್ಮ ಗುರಿಯಾಗಿ ಉಳ್ಳ ಪರಬ್ರಹ್ಮ ಧರ್ಮವೇ ಬ್ರಾಹ್ಮಣ ಧರ್ಮ.*

---

* ಈ ಹೆಸರಿನಲ್ಲಿ ಪಂಥನಾಯಕರ ಸೋಂಕಿಲ್ಲ. ಮಾನವತೆಗೆ ಸಂಬಂಧಿಸಿ ವ್ಯಾವಹಾರಿಕವಾದ ಅಥವಾ ಪ್ರಾಪಂಚಿಕವಾದ ಸಾಮಾನ್ಯ ಆಚಾರಗಳೇ ಪರಮಾವಧಿಫಲವೆಂದು ಕೂಪಕೂರ್ಮದಂತೆ ಸಂಕುಚಿತವಾಗಿ ಭಾವಿಸುವ [illegible] ವ್ಯವಹಾರದ [illegible] ಕಳೆದು ಮೇಲಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri 

ಅಖಂಡವೂ ನಿತ್ಯವೂ ಆದ ಬ್ರಹ್ಮವಸ್ತುವಿನ ಅರಿವು ಸಾಕ್ಷಾತ್ತಾಗಿ ಅಥವಾ ಪರಂಪರೆಯಾಗಿ ಸರ್ವರಿಗೂ ಇದ್ದೇ ಇರುವುದು. ಈ ಅರಿವು ಉಳ್ಳವರೂ, ಅದನ್ನು ವಾಚಾ ವಿವರಿಸಬಲ್ಲವರೂ, ಅದನ್ನು ಯಾವುದಾದರೊಂದು ಮಾರ್ಗದಲ್ಲಿ ಅನುಷ್ಠಾನ ಮಾಡುವ ಆಚಾರದಲ್ಲಿರುವವರೂ ಆದ ದೇಹಿಗಳೆಲ್ಲರೂ ಬ್ರಾಹ್ಮಣವೆನಿಸುವರು. ಕ್ಷತ್ರದ ನೆರಳಿನಲ್ಲಿ ಋತದ ಆಶ್ರಯದಲ್ಲಿ ಬ್ರಹ್ಮಾನುಸಂಧಾನ ಮಾಡುವವರು "ಬ್ರಹ್ಮ-ಜಾನಾತಿ, ಅಧ್ಯೇತಿ, ವದತಿ, ಅನುತಿಷ್ಠತಿ, ಅನುಸಂದಧಾತಿ, ಅನತಿ, ವಿವೃಣೋತಿ, ದರ್ಶಯತಿ, ಕರೋತಿ – ಇತಿ ಬ್ರಾಹ್ಮಣಃ" ಎಂಬಂತೆ ಬ್ರಾಹ್ಮಣವೇ ಆಗಿರುತ್ತಾರೆ.

ಕರ್ಮ ಬ್ರಹ್ಮಾಂಡದಲ್ಲಿ ಬ್ರಹ್ಮಭೂಭಾಗವು ಬ್ರಾಹ್ಮಣಾಚಾರದ ಸಾಕ್ಷಾತ್ ಪ್ರವರ್ತನೆಗೆ ತವರುಮನೆ (ಮಾತೃಭೂಮಿ) ಯಾಗಿರುತ್ತದೆ. ಸ್ವಸ್ವರೂಪಾವಸ್ಥಾನವೆಂಬ ಬ್ರಹ್ಮವನ್ನು ಪಡೆಯುವ ವಿವರಗಳುಳ್ಳ ಧರ್ಮ ಆಚಾರಕ್ಕೆ ಬ್ರಾಹ್ಮಣಾಚಾರವೆಂದು ಹೆಸರು. ಬ್ರಾಹ್ಮಣಾಚಾರವು ಬ್ರಾಹ್ಮೀ ಸಂಸ್ಕೃತಿಯಿಂದ ರೂಪಿಸಲ್ಪಡುತ್ತದೆ ಮತ್ತು ಬ್ರಾಹ್ಮೀ ರಾಜನೀತಿಗೆ ಆಶ್ರಯವಾಗಿರುತ್ತದೆ. ಇವೆಲ್ಲವೂ ಬ್ರಹ್ಮ ವಿವರ್ತವಾದ ನಾದ ಬ್ರಹ್ಮ (ಶಬ್ದ) ರಾಶಿಗಳಿಂದ ದರ್ಶಿತವಾಗುತ್ತವೆ.

ಋಣಾನುಬಂಧವೆಂಬ ಅಂತಃಪರಿಮಿತಿಯ ಕ್ಷೇತ್ರ ಭಾಗದಲ್ಲಿ ಮತ್ತು ವೈಯಕ್ತಿಕ ಕುಟುಂಬ, ಸಮಾಜ, ಪ್ರದೇಶ, ದೇಶಗಳೆಂಬ ಪಂಚ ವಲಯಗಳ ರಾಜಶಾಸನದ ಬಹಿಃ ಪರಿಮಿತಿಯಲ್ಲಿ ಆವರಣಗಳ ಪ್ರಭಾವದಿಂದ ಸ್ವಪರಹಿತಕ್ಕಾಗಿ ಋತಾನುರೋಧ ವಿರೋಧಗಳನ್ನು ಅರಿತು ಬ್ರಹ್ಮಾನುಸಂಧಾನ ಪೂರ್ವಕ ಮಾಡುವ ಶೂದ್ರ, ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ಮತ್ತು ನಿಷಾದಗಳ ಸಮಷ್ಟಿ ರೂಪವಾದ

---

ಹಂತಕ್ಕೆ ಏರುವ ಸನ್ನಿವೇಶಗಳನ್ನು ಕಾಲ ಕ್ರಮೇಣ ಹೊಂದುತ್ತಾರೆಂಬುದು ಬ್ರಾಹ್ಮಣ ಧರ್ಮದ ಸಾರ. "ವೇದಮತ" ಆರ್ಯಮತಾದಿ ಶಬ್ದಗಳು. ಬ್ರಹ್ಮ, ಧರ್ಮ ಶಬ್ದಗಳಂತೆ ನಿರ್ದಿಷ್ಟವಾದ ಅರ್ಥವನ್ನು ಕೊಡಲಾರವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಷ್ಠಾನವೇ ಸ್ವಧರ್ಮಾನುಷ್ಠಾನ – ಸ್ವಕರ್ಮಾಚರಣೆ ಅಥವಾ ಸ್ವಾಚಾರ ಪರಿಪಾಲನೆಯೆನಿಸುವುದು.

ಮೇಲ್ಕಂಡ ಸಮಷ್ಟಿರೂಪವಾದ ಅನುಷ್ಠಾನಕ್ಕೆ ವಿರೋಧವಾದುದೇ ಪರಧರ್ಮ, ಪರಕರ್ಮ, ಪರಾಚಾರವಾಗಿರುವುದು:— ಸಂಕುಚಿತಾರ್ಥವೂ ವ್ಯಾಪಹಾಂಕವೂ ಆದ ಪರ !

ಪ್ರಥಮತಃ ಶರೀರವನ್ನು ಧರಿಸಿದ ದೇಹಿಯ ಸ್ವಕರ್ಮವು ಪ್ರಕೃತಿ ಲೀಲೆಯಿಂದುಂಟಾದ ಋಣಕ್ಕೆ ಸಂಬದ್ಧವಾಗಿರುವುದು. ಅದರ ಫಲಾನುಭವವು ಪೂರ್ತಿಯಾದನಂತರ ಸ್ವಕರ್ಮವು ಪೂರ್ಣವಾಗುವುದು. ಹೀಗೆ ಒಂದಾವರ್ತಿ ಬಂಧನಕ್ಕೆ ಬಿದ್ದು ಪೂರ್ಣವಾದ ಸ್ವಕರ್ಮಫಲವನ್ನು ಅನುಭವಿಸಿ ಬಿಟ್ಟು ಬಿಡಬೇಕೆಂಬುದೇ ಆನಂದಕ್ಕೆ, ಜ್ಞಾನಸ್ವರೂಪನಾದ ಪರಬ್ರಹ್ಮನ ಪರಬ್ರಹ್ಮತ್ವಕ್ಕೆ ಮೂಲ. ಆದರೆ ಫಲಾನುಭವವು ಪೂರ್ಣವಾಗದೇ ಇದ್ದಾಗಲೂ, ಮತ್ತು ಒಂದು ಕರ್ಮದ ಫಲವನ್ನು ಅನುಭವಿಸುವಾಗ ಪುನಃಪುನಃ ಹೊಸ ಸಂಬಂಧಗಳನ್ನು ಕಲ್ಪಿಸಿಕೊಂಡಾಗಲೂ ಅನುಭವವು ಪೂರ್ತಿಯಾಗದೇ ನಿಂತುಹೋಗಬಹುದು. ಈ ಫಲಾನುಭವಶೇಷವನ್ನು ಅನುಭವಿಸಿ ಪೂರೈಸಲು ತಕ್ಕ ಶರೀರವನ್ನು ಧರಿಸಿದಾಗ ದೇಹಿಯು ಶೂದ್ರವನ್ನು ಪರಿಪಾಲಿಸಿ ನಿರ್ಋಣಿಯಾಗಬಹುದು. ಮಿತಿಯನ್ನು ಮೀರಿ ಅಥವಾ ಮಿತಿಯಿಂದ ಇಳಿದು ಶ್ರೋತ್ರಿಯಾದಿ ಸಂಕಲ್ಪಕಾರ್ಯಗಳಿಗೆ ತೊಡಗಿದರೆ ಆದು ಹೊಸದಾದುದರಿಂದ ಪರಕರ್ಮವಾಗಿ ಪರಿಣಮಿಸುವುದು. ಇದರ ಫಲವಾಗಿ ನೂತನ ಬಂಧನಾದಿಗಳು ಉಂಟಾಗುವುವು. ಶ್ರೇಯಸ್ಸಿಗಾಗಿ ಇವು ನಡೆಯುವುದಾದರೆ ಬಂಧನಕ್ಕೆ ಅವಕಾಶವಿಲ್ಲದೆ ಶೂದ್ರವು ನಿರ್ವಾಹವಾಗಿ ಋಣ ಪರಿಹಾರವು ಕ್ಷಿಪ್ರವಾಗಿ ನೆರವೇರುವುದು.

ವಿಶ್ವದಲ್ಲಿ ಅನೇಕ ಕೋಟಿ ಸಂಖ್ಯೆಯ ಪ್ರಜಾವರ್ಗಕ್ಕೆ ಸರ್ವಸಾಮಾನ್ಯವಾದ ವೈಶ್ಯಾದಿ ಕ್ರಿಯಾ ರೂಪಗಳು ಬ್ರಹ್ಮಾನುಸಂಧಾನ ಗರ್ಭಿತವಾಗಿರುತ್ತವೆ. ತದನುಗುಣವಾಗಿ ಅವುಗಳನ್ನು ಅನುಷ್ಠಾನ ಮಾಡಿ ಬ್ರಹ್ಮಾನುಸಂಧಾತೃಗಳಾದ ಪ್ರಜೆಗಳೆಲ್ಲರೂ ಬ್ರಾಹ್ಮಣ ವಿಶೇಷಣವುಳ್ಳವರು. ಬ್ರಹ್ಮಾನುಸಂಧಾನಕ್ಕೆ ಆಕರವಾದ ಬ್ರಾಹ್ಮಣ ದೇಶದಲ್ಲಿರುವ ಪ್ರಜೆಗಳೆಲ್ಲರೂ ಬ್ರಾಹ್ಮಣ ವಿಶೇಷಣ ಪಾತ್ರರೆನಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಹ್ಮಾನುಸಂಧಾನ ತತ್ಪರರಾಗುವ ಸದವಕಾಶವನ್ನು ಹೊಂದಿರುತ್ತಾರೆ.

ಬ್ರಹ್ಮಾನುಸಂಧಾತೃವಾದ ಬ್ರಾಹ್ಮಣ ದೇಶದಲ್ಲಿ ಅಥವಾ ಪ್ರಜಾ ಬ್ರಾಹ್ಮಣದೇಹಿಗಳಲ್ಲಿ ಬ್ರಹ್ಮಾನುಸಂಧಾನವೆಂಬ ಪ್ರಧಾನಕ್ರಿಯಾರೂಪವನ್ನು ಹೊಂದಿರುವ ಬ್ರಾಹ್ಮಣವು ಬ್ರಾಹ್ಮಣಬ್ರಾಹ್ಮಣವೆಂಬ ವಿಶೇಷಣ ಪೂರ್ವಪದ ಕರ್ಮಧಾರಯ ಸಮಾಸದಿಂದ ಉದಾಹರಿಸಲ್ಪಡಬೇಕಾಗಿದೆ. ಭೂಗೋಲದ ಪ್ರದೇಶಗಳ ಮತ್ತು ವಿವಿಧ ಜನಾಂಗ ಮೊದಲಾದುವುಗಳ ಜ್ಞಾನವು ಹರಡಿರುವ ಸನ್ನಿವೇಶದಲ್ಲಿ ಬ್ರಾಹ್ಮಣ ಬ್ರಾಹ್ಮಣ ಶಬ್ದದ ಸ್ಪಷ್ಟತೆಯು ಇತರ ಅನೇಕ ಸಮಸ್ಯೆಗಳನ್ನೂ ಸಂದೇಹಸಂದೋಹಗಳನ್ನೂ ದೂರೀಕರಿಸುತ್ತದೆ. ಬ್ರಾಹ್ಮಣ ಬ್ರಾಹ್ಮಣ ಶಬ್ದದ ಮೊದಲನೇ ಅವಯವವು ಬ್ರಾಹ್ಮಣ. ಇದರಿಂದ ಶ್ರೋತ್ರಿಯ, ವಿಪ್ರ ಎಂಬ ಶಬ್ದಾರ್ಥಗಳು ದ್ಯೋತಕವಾಗುವುವು. ಶ್ರೋತ್ರಿಯ, ವಿಪ್ರಾದಿ ಶಬ್ದಗಳನ್ನು ಸಮಾಸ ಪದದಲ್ಲಿ ಬ್ರಾಹ್ಮಣವೆಂಬ ಮೊದಲನೇ ವಿಶೇಷಣ ಶಬ್ದದ ಸ್ಥಾನದಲ್ಲಿ ಪ್ರಯೋಗಿಸಿ ಶ್ರೋತ್ರಿಯ ಬ್ರಾಹ್ಮಣ ಎಂಬದಾಗಿ ವ್ಯವಹರಿಸುವುದು ಅತ್ಯವಶ್ಯಕವಾಗಿದೆ. – ಎಂಬುದನ್ನು ಪ್ರಕೃತಿಯೇ ಪ್ರೇರಿಸಿ ಎಚ್ಚರಿಸುತ್ತದೆ. ಉಳಿದ ವೈಶ್ಯ, ಕ್ಷತ್ರಿಯ, ಶೂದ್ರ, ನಿಷಾದ ಶಬ್ದಗಳು ವಿಶೇಷಣಗಳೆನಿಸಿ ಬ್ರಾಹ್ಮಣ ಪ್ರಜೆಗಳ ಋಣ ಸಂಬಂಧವನ್ನು ಸೂಚಿಸುವುವು.

ವೇದಾದಿಗಳಲ್ಲಿ ಬ್ರಾಹ್ಮಣ ಶಬ್ದ ಪ್ರಯೋಗವು ಅನೇಕಾರ್ಥಗಳಲ್ಲಿ ಸಮಯೋಚಿತವಾಗಿರುತ್ತದೆ. ಪುರುಷಸೂಕ್ತದ ಬ್ರಾಹ್ಮಣ ಶಬ್ದವು ಯಾವ ವ್ಯಕ್ತಿಯನ್ನೂ ಜನತೆಯನ್ನೂ ಜನಾಂಗವನ್ನೂ ಉದ್ದೇಶಿಸಿ ಹೇಳುವುದಿಲ್ಲ. ಶ್ರೋತ್ರಿಯ ವರ್ತನೆಯೆಂಬ ಸರ್ವ ಸಾಮಾನ್ಯವಾದ ಅರ್ಥವನ್ನೂ ವಿಶೇಷಾರ್ಥವನ್ನೂ ಹೇಳುವುದು. ಇವನ್ನು ಅನುಸರಿಸಿ ವೇದಾಂಗಗಳು, ದರ್ಶನಗಳು, ಸ್ಮೃತಿಗಳು, ಶಾಸ್ತ್ರಗಳು, ಕಾವ್ಯಾದಿಗಳು ಪುರಾಣೇತಿಹಾಸಗಳು — ಎಂಬ ಗ್ರಂಥಸಾಗರಗಳಲ್ಲಿ ಪ್ರೋಕ್ತವಾದ ಬ್ರಾಹ್ಮಣ ಶಬ್ದವನ್ನು ವಿಶೇಷಾರ್ಥ ಕಲ್ಪನೆಯಿಂದ ಶ್ರೋತ್ರಿಯ ಶಬ್ದ ಸ್ಥಾನದಲ್ಲಿ ಉಕ್ತವಾದುದೆಂದೂ ಪ್ರಜಾ ಶಬ್ದವು ಸಾಮಾನ್ಯವಾಗಿ ಬ್ರಾಹ್ಮಣ ಪ್ರಜೆಯನ್ನೂ ಪ್ರಜಾ ಬ್ರಾಹ್ಮಣನನ್ನೂ ತಿಳಿಸುವುದೆಂದೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸರ್ವಶಾಸ್ತ್ರಗಳ ದೃಷ್ಟಿಯಿಂದ ಸಮರ್ಥಿಸುವ ಗುರುತರವಾದ ಹೊಣೆಗಾರಿಕೆಯು ಪ್ರಜೆಗಳ ಮೇಲೆ ಹೊರಿಸಲ್ಪಟ್ಟಿರುತ್ತದೆ.

ವರ್ಣಾನಾಂ ಬ್ರಾಹ್ಮಣೋ ಗುರುಃ -- ಬ್ರಹ್ಮಲಾಭಕ್ಕೆ ಸಾಕ್ಷಾತ್ತಾಗಿ ಸಂಬಂಧಿಸಿದ ವರ್ಣವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬ ನಾಲ್ಕು ವರ್ಣಗಳಿಗೆಲ್ಲಾ ಗುರುಸ್ಥಾನದಲ್ಲಿರುವುದು. ಈ ನಾಲ್ಕು ವರ್ಣಗಳ ಕಟ್ಟಿಗೆ ಒಳಪಡದ ಮತ್ತು ಸರ್ವವರ್ಣಪೋಷಕವಾದ ವರ್ಣವು ಐದನೇ ವರ್ಣವೆಂದು ಪರಿಗಣಿಸಲ್ಪಟ್ಟಿದೆ. ನಾಲ್ಕು ವರ್ಣಗಳ ಲಕ್ಷ್ಯ ಮತ್ತು ಸಾಧನೆಗಳು ಐದನೇ ವರ್ಣಕ್ಕೂ ಸಾಮಾನ್ಯವಾಗಿ ಸಮಾನವಾಗಿರುತ್ತವೆ. ಈ ರೀತಿ ಅನುಸಂಧಾನ ದೃಷ್ಟಿಯಿಂದ ಐದು ವರ್ಣಗಳೂ ಸಮಾನ ಗೌರವವನ್ನು ಹೊಂದಿರುತ್ತವೆ. ಸೂತ್ರರೂಪವಾಗಿ ಸಂಗ್ರಹಿಸಿ ಹೇಳುವುದಾದರೆ, - "ಆತ್ಮಾನುಸಂಧಾನ ಪೂರ್ವಕ ಆತ್ಮಲಾಭಕ್ಕಾಗಿ ನಡೆಯುವ ಅನುಷ್ಠಾನವೇ ಸ್ವಧರ್ಮಾನುಷ್ಠಾನ" ವೆನಿಸುವುದು. ಸುಮುಖ (ಪಾಸಿಟಿವ್ - ಆಕ್ಟಿವ್), ದುರ್ಮುಖ (ಪಾಸಿಟಿವ್ -ಪ್ಯಾಸಿವ್) ಮತ್ತು ವಿಮುಖ (ನೆಗೆಟಿವ್) ವರ್ತನೆಗಳ ಮಿತಿಯಲ್ಲಿ ಅನುಷ್ಠಾನಗಳೆಲ್ಲವೂ ಪ್ರಕಾಶವಾಗುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ೭. ಅನುಷ್ಠಾನ

ಅನುಷ್ಠಾನಗಳಲ್ಲಿ ಸ್ತ್ರೀಯರ ಪಾತ್ರ (ಹೊಣೆ - ಬಾಧ್ಯತೆ)

(ಕ್ರಿಯಾಣಾಮಪಿ ಧರ್ಮಾಣಾಂ ಸತ್ಪತ್ನ್ಯಃ ಮೂಲಕಾರಣಂ ||
— ಕಾಳಿದಾಸ)

ವರ್ಣ, ವೃತ್ತಿ, ವರ್ತನೆ, ಸ್ವಧರ್ಮ, ಸ್ವಕರ್ಮ, ಸ್ವಾಚಾರ, ಅನುಷ್ಠಾನ ವಿವೇಕವನ್ನು ಖಚಿತವಾಗಿ ಉಪಸಂಹರಿಸುವುದಕ್ಕೆ ಮುಂಚೆ ಸ್ತ್ರೀ ಪ್ರಜಾವರ್ಗದವರಿಗೆ ಇರುವ ಜೀವನಯಜ್ಞ ನಿರ್ವಾಹದ ಹೊಣೆ ಗಾರಿಕೆಯನ್ನು ತಿಳಿಯುವುದು ಅವಶ್ಯಕ. ಈ ಹೊಣೆಗಾರಿಕೆಯು ವಿಶೇಷವಾಗಿ ಸ್ತ್ರೀ ಪ್ರಜೆಗಳ ಮೇಲೆ ಬಿದ್ದ ಗುರುತರಭಾರವಾಗಿರುತ್ತದೆ. ಪ್ರಕೃತಿಯ ಈ ಪ್ರಪಂಚದ ಕಲ್ಯಾಣಾಭ್ಯುದಯ ಪರವಾದ ಅನುಷ್ಠಾನ ಕ್ಕೆ ಸ್ತ್ರೀಯರೇ ಹೊಣೆಗಾರರು. - ಎಂದು ಶ್ರದ್ಧಾ ಭಯ ಭಕ್ತಿ ವಿಶ್ವಾಸ ಪೂರ್ವಕವಾಗಿ ಒತ್ತಿ ಹೇಳಬೇಕಾಗಿದೆ.

ಪ್ರಜಾ ಸಂತತಿಗೆ ಕಾರಣರಾದ ಕ್ಷೇತ್ರ ಮತ್ತು ಬೀಜಗಳ ಸಂಸ್ಕಾರ ಗಳು ಅತ್ಯವಶ್ಯಕವಾದುವು. ಕ್ಷೇತ್ರದ ಗುಣ, ಸಂಸ್ಕೃತಿ, ಆಚಾರಗಳೂ ಬೀಜದ ಗುಣ, ಸಂಸ್ಕೃತಿ, ಆಚಾರಗಳೂ ತತ್ತತ್ಸಮಾನವಾದ ಸಂತತಿಗೆ ಆಶ್ರಯಗಳಾಗುವುವು. ಕ್ಷೇತ್ರದ ಗುಣಾದಿಗಳೂ ಬೀಜದ ಗುಣಾದಿಗಳೂ ಪ್ರತ್ಯೇಕವಾಗಿಯೂ, ಕೆಲವು ಸಂದರ್ಭಗಳಲ್ಲಿ ಒಟ್ಟಾಗಿಯೂ ಸಂತತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯಲ್ಲಿ ಋಣದ ಬೆಳಕಿನಿಂದ ಪ್ರತಿಬಿಂಬಿಸುವುವು. ಸಸ್ಯಪ್ರಾಣಿಗಳಲ್ಲಿಯೂ ಆಯಾ ಸಂಸ್ಕಾರಕ್ಕೆ ತಕ್ಕಂತೆ ಸಂತತಿಗಳು ರೂಪುಗೊಳ್ಳುವುವು. ಋಣದ ಪ್ರಯೋಗಕ್ಕೆ ಸ್ವಾತಂತ್ರ್ಯವನ್ನು ಹೊಂದಿರುವ ಮಾನವ ದಂಪತಿಗಳ ಗುಣಾದಿಗಳನ್ನು ಋಣಾನುಬಂಧರೀತ್ಯಾ ಸಂತಾನವರ್ಗದವರ ಗುಣ ಸಂಸ್ಕೃತಿಗಳಿಗೆ ತಕ್ಕಂತೆ ಋಣಾನುಬಂಧ ಮತ್ತು ಕರ್ಮಶಾಸ್ತ್ರ ರೀತ್ಯಾ ಮಾನವ ದಂಪತಿಗಳಲ್ಲಿ ಆಯಾ ಗುಣಾದಿಗಳು ಒಂದು ಪ್ರಮಾಣದಲ್ಲಿ ಮೊದಲೇ ನೆಲೆಸಿದ್ದಿರಬಹುದಾಗಿದೆ.

ಸ್ತ್ರೀಯರಿಗೂ ಪುರುಷರಿಗೂ ಜೀವನ ಯಜ್ಞನಿರ್ವಾಹದಲ್ಲಿ ವೈಯಕ್ತಿಕವಾದ ಹೊಣೆಗಾರಿಕೆಯೂ ಸ್ವಾತಂತ್ರ್ಯವೂ ಶಕ್ತಿಯೂ ಸ್ವಾಭಾವಿಕವಾಗಿರುವುವು. ಸ್ತ್ರೀಯರು ಕ್ಷೇತ್ರದ ಪಾತ್ರವನ್ನು ವಹಿಸುವವರಾದುದರಿಂದ ಪುರುಷರ ಆಚಾರ ವ್ಯವಹಾರಗಳನ್ನೆಲ್ಲಾ ಇಟ್ಟುಕೊಳ್ಳುವುದಕ್ಕೆ ಋತವು ಅವಕಾಶ ಕೊಟ್ಟಿಲ್ಲ. ಹಾಗೆಯೇ ಬೀಜದ ಪಾತ್ರವನ್ನು ವಹಿಸುವ ಪುರುಷರು ಸ್ತ್ರೀಯರ ಗುರುತರವಾದ ಆಚಾರ ವ್ಯವಹಾರಗಳಿಗೆಲ್ಲಾ ಪಾತ್ರರಾಗಲಾರರು. ಸ್ತ್ರೀ ಪುರುಷರಿಬ್ಬರೂ ಜೀವನಯಜ್ಞನಿರ್ವಾಹ ಕಾಲದಲ್ಲಿ ಸಮಾನವಾದ ಭಾಗವಹಿಸಿಕೊಂಡು, ಪ್ರಕೃತಿಯು ನಿಯಮಿಸಿರುವಂತೆ ಕೆಲವು ಕೆಲವು ಕರ್ಮಗಳನ್ನು ಪ್ರತ್ಯೇಕವಾದ ಹೊಣೆಗಾರಿಕೆಯಿಂದ ನಿರ್ವಾಹ ಮಾಡಿ ಏಕ ದೇಹ ನ್ಯಾಯವಂತೆ ಪೂರ್ಣ ಮಾಡಬೇಕಾಗಿರುತ್ತದೆ. ಶೂದ್ರಾದಿ ಪಂಚಶಕ್ತಿಕರ್ಮಗಳಲ್ಲಿ ಸುಖಕರವೂ ಸಂಪತ್ಕಾರಕವೂ ಆಗಿ ಸ್ವಾತಂತ್ರ್ಯಾಧಿಕ್ಯದಿಂದ ಆಗುವ ಸಾಹಸಾದಿಗಳಿಗೆ ಅವಕಾಶವನ್ನು ಹೊಂದದೆ ಇರುವ ಶೂದ್ರವು ಸ್ತ್ರೀತ್ವಕ್ಕೆ ವಿಶೇಷವಾಗಿ ಸಂಬಂಧಪಟ್ಟಿದೆ. ಅಥರ್ವವೆಂಬ ಶಾಸ್ತ್ರೋಕ್ತವಾದ, ಶೂದ್ರ ಪ್ರಯೋಗಾದಿಗಳನ್ನು* ನಡೆಸಿ ಋಕ್, ಯಜುಸ್, ಸಾಮಗಳೆಂಬ ವೈಶ್ಯ, ಕ್ಷತ್ರಿಯ, ಶ್ರೋತ್ರಿಯ ಕರ್ಮಗಳಿಗೆ ನೆರವಾಗುವ, ಪ್ರಚೋದಕವಾಗುವ

---

* ಶಾಸ್ತ್ರದಲ್ಲಿ ವಿಧಿಸಿರುವವುಗಳನ್ನು ವಿಧೇಯತೆಯಿಂದ ಅನುಸರಿಸಿ, ಪಾಲಿಸುವುದರಿಂದ ಪ್ರಯೋಗವು ಫಲದಾಯಕವಾಗುವುದು. ಇದಕ್ಕಾಗಿ ಶುಶ್ರೂಷೆ, ವಿಧೇಯತೆಗಳಿಂದ ಶಾಸ್ತ್ರಗಳನ್ನು ಪಾಲಿಸುವುದೇ ಶೂದ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮತ್ತು ಕಾರಣವಾಗುವ ಶೂದ್ರವು ಜೀವನ ಯಜ್ಞದಲ್ಲಿ ಸ್ತ್ರೀಯರಿಗೆ ಪ್ರಧಾನ ಪಾತ್ರವನ್ನು ಕೊಟ್ಟಿರುತ್ತದೆ. ಈ ಗೌರವಕ್ಕಾಗಿಯೂ ಅನುಷ್ಠಾನದ ಹೊಣೆಗಾರಿಕೆಗಾಗಿಯೂ ಪುರುಷರು ತಾವು ಆರ್ಜಿಸಿದ ಪುಣ್ಯದಲ್ಲಿ ಅರ್ಧಭಾಗವನ್ನು ಅರ್ಧಾಂಗಿಗಳಿಗೆ ಮೀಸಲಾಗಿಟ್ಟು ಸ್ತ್ರೀಯರ ಹೊಣೆಗಾರಿಕೆಯ ಋಣವನ್ನು ಪರಿಹರಿಸಿಕೊಳ್ಳುವ ಸಂವಿಧಾನವು ಸಂಸ್ಕೃತಿಯಲ್ಲಿ ಅಡಗಿದೆ.

ಸ್ತ್ರೀ ಪುರುಷ ವಿವಾಹ ಸಂಸ್ಕಾರ ವಿಧಿಯು, ಬ್ರಾಹ್ಮೀ ಸಂಸ್ಕೃತಿಯಲ್ಲಿ ಅತ್ಯದ್ಭುತವೂ ಅತಿಪವಿತ್ರವೂ ಅತಿಶ್ರೇಷ್ಠವೂ ಆಗಿರುವುದು. ಆದಿತೇಯತ್ವ –(ಸುರತ್ವ–ದೇವತ್ವ)– ಸಿದ್ಧಿಗೂ ಅಸುರತ್ವ, ದಾನವತ್ವ, ದೈತ್ಯತ್ವ ನಿವಾರಣೆಗೂ ಪ್ರತಿ ಸ್ತ್ರೀಪುರುಷ ಪ್ರಜೆಯೂ ಉಕ್ತ ಕ್ರಮದಲ್ಲಿ ಸಂಸ್ಕಾರವನ್ನು ಹೊಂದಬೇಕಾಗಿದೆ. ಗೃಹಸ್ಥಾಶ್ರಮವೆಂಬ ಉನ್ನತ ಪದವಿಯ ಹೊಣೆಗಾರಿಕೆಯನ್ನು ಸಾಧಿಸುವುದಕ್ಕೆ ಪ್ರಕೃತ್ಯಾ ನಿರ್ಮಿತಳಾದ (ನಿಯುಕ್ತಳಾದ) ಸ್ತ್ರೀ ಪ್ರಜೆಯು ಅವಶ್ಯಕವಾಗಿರಲೇ ಬೇಕು. ಶ್ರೋತ್ರಿಯವು ನೆರವೇರಬೇಕಾಗಿರುವ ಸಾಮಾನ್ಯ ಯಜ್ಞನಿರ್ವಾಹಕ್ಕೂ ವಿಶೇಷಯಜ್ಞ ನಿರ್ವಾಹಕ್ಕೂ ಅರ್ಧಾಂಗಿಯು ಸಹಕರಿಸಲೇ ಬೇಕು. ಯಾವ ಗೃಹದಲ್ಲಿ ಗೃಹಸ್ಥನಿಗೆ ಈ ಸಹಕಾರವು ಇರುವುದಿಲ್ಲವೋ ಸ್ತ್ರೀಯು ಸಹಕರಿಸುವುದಿಲ್ಲವೋ, ಸಹಕರಿಸಬಹುದಾದ ಸ್ತ್ರೀಗೆ ಗೃಹಸ್ಥನಿಂದ ಅಡ್ಡಿ ಆತಂಕಗಳಿರುತ್ತವೋ ಆ ಗೃಹವು, ಗೃಹಸ್ಥಾಶ್ರಮ ಕಾರ್ಯನಿರ್ವಾಹಕ್ಕೆ ಯೋಗ್ಯವಾದುವಲ್ಲ. ಕ್ಷತ್ರಿಯ, ವೈಶ್ಯ, ಶೂದ್ರಕರ್ಮಗಳ ನಿರ್ವಾಹ ಕ್ರಮದಲ್ಲಿ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಗೃಹಸ್ಥರಿಗೂ, ಛಾಯೆಯಂತೆ ಶೂದ್ರದ ಶ್ರದ್ಧೆಯನ್ನು ವಹಿಸಿ ಪ್ರದರ್ಶಿಸಿ ಸಹಕರಿಸಬೇಕಾಗಿರುವ ಆಯಾ ಸ್ತ್ರೀಯರಿಗೂ ಪರಸ್ಪರ ಸಹಕಾರವಿರಲೇಬೇಕು. ಇದಕ್ಕಾಗಿಯೇ ಜನ್ಮವೆತ್ತುವ ಸ್ತ್ರೀಯರು ಮತ್ತು ಪುರುಷರು ಹಿಂದಿನ ಜನ್ಮದಲ್ಲಿ ಶುದ್ಧವಾಗದಿದ್ದರೂ ಮುಂದೆ ಉಂಟಾಗುವ ಜನ್ಮದ ಸಂದರ್ಭದಲ್ಲಿ ಶುದ್ಧವಾಗಿರಬೇಕಾದರೂ ಈ ಜನ್ಮದಲ್ಲಿಯೇ ಋಣಕರ್ಮ ಸಂಕಲ್ಪಗಳನ್ನು ಶುದ್ಧಿಗೊಳಿಸಬೇಕಾದ ಸಂಸ್ಕೃತಿಗಳು ದಿವ್ಯಜ್ಞಾನಾನುಭವಕ್ಕೆ ಗೋಚರವಾಗಿ [illegible] ಕೊಡಲ್ಪಟ್ಟಿವೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತನ್ನ ಮತ್ತು ಇತರರ (ಅಂದರೆ ತಾಯಿ, ತಂದೆ, ಸಹೋದರ, ಸಹೋದರಿ ಮತ್ತು ಬಾಂಧವರೆನಿಸಿಕೊಳ್ಳುವವರ) ಋಣ ಪರಿಹಾರರೂಪ ವಾದ ಸಂಕಲ್ಪ ಫಲವನ್ನು ಅನುಭವಿಸಲು ಮತ್ತು ಅನುಭವಿಸುವಂತೆ ಮಾಡಲು ಒಂದು ಕ್ಷೇತ್ರದಲ್ಲಿ ಜನಿಸಿ ತನ್ನ ಮತ್ತು ಅತ್ತೆಮಾವಂದಿರೇ ಮೊದಲಾದವರ ಋಣ ಪರಿಹಾರ ರೂಪವಾದ ಸಂಕಲ್ಪ ಫಲವನ್ನು ಅನುಭವಿಸಲು ಮತ್ತು ಅನುಭವಿಸುವಂತೆ ಮಾಡಲು ಬೇರೆ ಗೋತ್ರ ಮತ್ತು ವಂಶಕ್ಕೆ ಸೇರಿದ ಪತಿಯನ್ನು ಕೈಹಿಡಿದು ಪತಿಗೃಹವೇ ಸ್ವಗೃಹ ವೆಂದು ಗೃಹಸ್ವಾಮಿನಿಯಾಗಿ ಗೃಹಿಣಿಯಾಗಿರುವ ಹೊಣೆಗಾರಿಕೆಯು ಸ್ತ್ರೀಯರಿಗೆ ಸೇರಿದುದು. ಪತಿಸಂತಾನವೃಕ್ಷಗಳಿಗೆ ಭೂದೇವಿಸ್ವರೂಪಳಾಗಿ ಕ್ಷೇತ್ರವಾಗಿರುವ ಋಣಾನುಬಂಧದ ಹೊಣೆಗಾರಿಕೆಯು ಇನ್ನೂ ಅತಿಶಯ ವಾದುದಾಗಿ ಪವಿತ್ರವಾಗಿರುತ್ತದೆ. ಹೀಗೆ ಜನ್ಮವೆತ್ತಿದ ಮತ್ತು ಸೇರಿ ತನ್ನದೇ ಆದುದೆಂದು ಗೊತ್ತಾದ ವಂಶಗಳೆರಡರ ಕೀರ್ತಿಪತಾಕವನ್ನು ಎತ್ತಿ ಹಿಡಿಯುವ ಸ್ತ್ರೀಯರ ಗೌರವ ಸ್ಥಿತಿಯನ್ನು ದಿವ್ಯಜ್ಞಾನದಿಂದ ಸಾಕ್ಷಾತ್ಕರಿಸಿ ಸಂಸ್ಕೃತಿಯನ್ನು ವಿಧಾಯಕ ಮಾಡಿರುವುದೂ ಜ್ಞಾನ ಸ್ವರೂಪವಾದ ಆತ್ಮವೇ ಆಗಿರುತ್ತದೆ ಮತ್ತು ನಿರಸ್ತಕುಹಕಿಗಳಾಗಿ ಸ್ತ್ರೀಯರು ಪರಮ ಪವಿತ್ರವಾದ ಈ ಸಂಸ್ಕೃತಿಯ ಮರ್ಮವನ್ನರಿತು ಶಾಂತಿ ಸಂಯಮನಾದಿಗಳಿಂದ ರಾಜ್ಯಭಾರ ಮಾಡುವುದರಲ್ಲಿ ಪ್ರಥಮ ಸ್ಥಾನವನ್ನು ಹೊಂದಿ ಸಂಸ್ಕೃತಿ ಸ್ವರೂಪಿಣಿಯರಾಗಿರುತ್ತಾರೆ.*

---

* ಹೆಂಡತಿಯರ ಮಾರಾಟವೆಂಬ ಲೇಖನದ ಮೂಲಕ ಕಳತ್ರ ವಿಕ್ರಯವು ಹೇಗೆ ಕಾರ್ಯರೂಪಕ್ಕೆ ಬರುವುದೆಂಬುವನ್ನು ಚಿತ್ರಿಸಿರುತ್ತಾರೆ. ತಾತ್ಕಾಲಿಕವಾದ ಋಣದಿಂದ ಉಂಟಾಗಬಹುದಾದ ಇಂತಹ ಮಾರಾಟ ಗಳು ವಿಮುಖಾಚಾರ, ವಿಮುಖ ಸಂಸ್ಕೃತಿಗಿಂತಲೂ ಕೆಳಗಿನ ಮಟ್ಟದ ಪ್ರಾಣಿವರ್ಗಗಳ ಚರ್ಯೆಯನ್ನೇ ಹೋಲುವುವು. ಪುರುಷಾರ್ಥ ಮಂಟಪಗಳ ಅತ್ಯುನ್ನತ ಗೋಪುರಾಗ್ರವೂ ಸಹ ಇಂತಹವರ ದೃಕ್ಪಥಕ್ಕೆ ಬಾರದಿರುವಷ್ಟು ದೂರದಲ್ಲಿ ವಿಪಕ್ರಿಮಿಗಳಂತಿರುವ ಪರಿಸ್ಥಿತಿಯಾಗುವುದು. ಹಿಂದೂ ಪತ್ರಿಕೆ ಪುಟ 1. 5-10-1958 ರಾಲ್ಫ್ ಮಾರ್ಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ತ್ರೀಯರೂ ತಮ್ಮ ವೈಯಕ್ತಿಕ ಮತ್ತು ಶಾರೀರಕ ಮಿತಿಯಲ್ಲಿ ಸುಸಂಸ್ಕೃತವಾದ ಅಭ್ಯಸ್ತಕರ್ಮಗಳೆನಿಸುವ ಆಚಾರವನ್ನು ಸ್ವಾಚಾರ ಮತ್ತು ಸ್ವಕುಟುಂಬಾಚಾರಗಳನ್ನು ರೂಪಿಸಿಕೊಳ್ಳುವುದಕ್ಕೆ ಮಿತವು ಅವಕಾಶ ಕೊಟ್ಟಿದೆ. ಪತಿಗೃಹವನ್ನು ಸೇರಿದ ಪತ್ನಿಯು ಪತಿಕುಲದ (-ಸ್ವಕುಲದ-) ಸಂಪ್ರದಾಯ ಸಂಸ್ಕೃತಿ ಆಚಾರಗಳನ್ನು ಕಲಿಯುವುದೇ ವಿದ್ಯಾಭ್ಯಾಸವೆಂಬ ಆತ್ಮ ಸಂಸ್ಕೃತಿಯಾಗುತ್ತದೆ. ಅವುಗಳ ಅನುಷ್ಠಾನ ದಿಂದ ಉಂಟಾಗುವ 'ಅಪೂರ್ವ' ಫಲಕ್ಕೆ ಆಕೆಯೇ ಪ್ರಧಾನಪಾತ್ರಳು. ಇದಕ್ಕಾಗಿಯೇ ಆಕೆಯನ್ನು ಸರ್ವಪ್ರಕಾರದಲ್ಲಿಯೂ ಪ್ರತ್ಯಕ್ಷ ದೇವತೆ ಯಂತೆ ಪೂಜಿಸುತ್ತಾರೆ. ಸುಖಮಯವಾದ ಶೂದ್ರವನ್ನು ಅವಲಂಬಿಸಿ ಶುಶ್ರೂಷಾ ತತ್ಪರಳಾದ ಗೃಹಿಣಿಗೆ ಜೀವಿಕೆ ವೃತ್ತಿವಿಚಾರದಲ್ಲಿ ಹೊಣೆ ಗಾರಿಕೆಯು ಸ್ವಲ್ಪವೂ ಇಲ್ಲ. ಹಾಗೆ ಜೀವಿಕೆಯ ಹೊಣೆಗಾರಿಕೆಯನ್ನು ಹೊತ್ತವರು ಗೃಹಿಣಿಯಾಗಲಾರರು; ಗೃಹಸ್ಥಾಶ್ರಮದ ಯಜ್ಞಕಾರ್ಯ ಭಾರವನ್ನು ನಿರ್ವಹಿಸಲಾರರು. ಇದು ಪ್ರತ್ಯಕ್ಷವಾಗಿ, ಸ್ವತಸ್ಸಿದ್ಧವಾಗಿ ಸರ್ವರಿಗೂ ತಿಳಿದ ಅಂಶವೇ ಆಗಿರುತ್ತದೆ.†

ಸ್ತ್ರೀಯರ ಕರ್ತವ್ಯವನ್ನು ಪುರುಷರೂ ಪುರುಷರ ಕರ್ತವ್ಯ ಕರ್ಮ ವನ್ನು ಸ್ತ್ರೀಯರೂ ಮಾಡತೊಡಗಿದರೆ ಶಾರೀರಕಮಾನಸಿಕ ಪರಿಸ್ಥಿತಿಗಳು ಪಲ್ಲಟವಾಗುವುವು. ಇದು ಮಿತ ವಿರೋಧವಾಗಿ ವಿಪ್ರತಿಕ್ರಿಯೆ, ಪ್ರತಿ ಭಟನೆ ಮೊದಲಾದ ದುರ್ಘಟನೆಗಳು ಶರೀರದ ಜತೆಯಲ್ಲಿ ಬೆಳೆವ ರೋಗ

---

† ಸ್ತ್ರೀಯರು ತಮ್ಮ ಮಿತಿಯನ್ನು ಮೀರಿ ಅಥವಾ ಮಿತಿಯಿಂದ ಜಾರಿಬಿದ್ದು ಜೀವಿಕೆಯನ್ನು ಹೊರೆಯುವ (ಹೊಟ್ಟೆ ಹೊರೆಯುವ) ವರ್ಣ ಗಳನ್ನು ಅವಲಂಬಿಸುವ ದುರ್ಗತಿಯು ವಿಮುಖ ಸಂಸ್ಕೃತಿಯಾಗಿರುವುದು. ಇದಕ್ಕೂ ಸಂಕಲ್ಪ ಋಣ ಕರ್ಮ ಬಂಧನವೇ ಕಾರಣವಾದುದರಿಂದ, ಮುಂದೆ ಶ್ರೇಯಃ ಪ್ರಾಪ್ತಿಗಾಗಿ ಪ್ರಕೃತಿಯು ನಾನಾಮುಖಗಳಿಂದ ಎಚ್ಚರಿಸಿ ಬೀರುತ್ತಿರುವ ಒಳ್ಳೆಯ ಆವರಣಗಳ ಪ್ರಭಾವಕ್ಕೆ ಶರಣಾಗತ ರಾಗುವ ಪರಿಸ್ಥಿತಿಯನ್ನು ಲೋಕ ಕಲ್ಯಾಣಕ್ಕಾಗಿ ಸಮಸ್ತ ಪ್ರಜೆಗಳೂ ಹೊಣೆ ಹೊತ್ತು ಆಶಿಸಿ ಪ್ರಾರ್ಥಿಸಬೇಕಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಂತೆ ಅಂಟಿಕೊಂಡು ಆತ್ಮವನ್ನು ಬಳಸುವುವು. ಇದರಿಂದ ಸ್ತ್ರೀಯು ರಾಗಲೀ ಪುರುಷರಾಗಲೀ ಮಾನವತೆಯ ಹಂತದಿಂದ ಧುವ್ವಿಕ್ಕುವಂತಾ ಗುವುದನ್ನು ಚರಿತ್ರೆಗಳಿಂದಲೂ ಪ್ರತ್ಯಕ್ಷವಾಗಿಯೂ ನೋಡಿ ತಿಳಿಯಬಹು ದಾಗಿದೆ. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬುದು ಸರ್ವ ಸ್ವತಂತ್ರ ರಾದ ಸ್ತ್ರೀಯರ ವಿಷಯದಲ್ಲಿ ಉಕ್ತವಾದ ಪರಮ ಪವಿತ್ರವಾದ ಮಂತ್ರ ಮತ್ತು ಉಪದೇಶ. ಈ ಉಪದೇಶವು ಪುರುಷರಿಗೆ ನೇರವಾಗಿಯೂ ಸ್ತ್ರೀಯರಿಗೆ ಪರೋಕ್ಷವಾಗಿಯೂ ಹೇಳಲ್ಪಟ್ಟಿದೆ. ಈ ವಾಕ್ಯವು ವಿಧಿ ವಾಕ್ಯವಾದರೆ ಪುರುಷರಿಗೆ ಎಚ್ಚರಿಕೆಯನ್ನು ಕೊಟ್ಟು ಸ್ತ್ರೀಯರ ಗೌರವ ವನ್ನು ನಿರ್ದೇಶಿಸಿ ರಕ್ಷಿಸುವಂತೆ ಹೇಳಿದಂತಾಗುತ್ತದೆ. ಸ್ತ್ರೀಯರೂ ಸಹ ತಮ್ಮ ಮಿತಿಯಲ್ಲಿ ಅದರ ರಹಸ್ಯವನ್ನು ತಿಳಿದು ಹೊಟ್ಟೆಪಾಡಿಗೋಸ್ಕರ ಧನಪ್ರವ್ಯಾರ್ಜನೆಗಾಗಿ ಸ್ವಂತವಾಗಿ ದೇಹಶ್ರಮಪಡುವ ಹೇಯ ಕರ್ಮ ದಿಂದ ತಪ್ಪಿಸಿಕೊಳ್ಳಬಹುದು. ಸರ್ವ ಸ್ತ್ರೀಯರ ತಿಳಿವಳಿಕೆಗೆ ಬರುವಂತೆ ಇದನ್ನು ಪ್ರಕಟಗೊಳಿಸುವುದು ನಿಷ್ಪಕ್ಷಪಾತವಾದ ರಾಜನೀತಿಗೆ ಸೇರಿದುದು.

ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳ ರಾಜ್ಯಭಾರದ ವಿವರವನ್ನೂ, ಸಂಸ್ಕೃತಿ, ಆಚಾರ, ಅಭ್ಯಸ್ತ ಕರ್ಮಗಳನ್ನೂ, ಅತೀಂದ್ರಿಯವಾದ ಯಜ್ಞಾದಿ ದೇವತಾ ಕಾರ್ಯಗಳ ಮರ್ಮವನ್ನೂ, ನಿತ್ಯಜೀವನದಲ್ಲಿ ಮನುಷ್ಯ ಯಜ್ಞದ ಮೂಲಕ ನೆರವೇರಿಸುವ ದೇವತಾ ಕಾರ್ಯಗಳ ಮರ್ಮವನ್ನೂ ವ್ಯಾಸಂಗ ಮಾಡಿ ಅಧ್ಯಯನ ಮಾಡಿ ಆಚಾರಾದಿಗಳ ಮತ್ತು ರಾಜ್ಯದ ನಿರ್ವಾಹದಲ್ಲಿ ಜ್ಞಾನಾತ್ಮಕ, ಕ್ರಿಯಾತ್ಮಕ ಶಿಕ್ಷಣಗಳನ್ನು ಪಡೆದು, ಆಚಾರ್ಯ ಪದವಿಯನ್ನು ಅಲಂಕರಿಸಿ ಸ್ತ್ರೀಯರು ಗೃಹರಾಜ್ಯಲಕ್ಷ್ಮೀ ಸ್ವರೂಪಿಣಿಯರಾಗುವ ಸಂಸ್ಕೃತಿ ವಿಧಾನವನ್ನು ಎಷ್ಟು ವರ್ಣಿಸಿದರೂ ಸಾಲದು. ಈ ಸಂಸ್ಕೃತಿ ಯನ್ನು ಅಧಿಕರಿಸಿ ಹೇಳಿರುವ,

ಸಮ್ರಾಜ್ಞೀ ಶ್ವಶುರೇ ಭವ, ಸಮ್ರಾಜ್ಞೀ ಶ್ವಶ್ರ್ವಾಂ ಭವ,
ನನಾಂದರಿ ಸಮ್ರಾಜ್ಞೀ ಭವ, ಸಮ್ರಾಜ್ಞೀ ಅಧಿ ದೇವೃಷು ॥
ಋಗ್ವೇದ 10. 85. 46

ಇತ್ಯಾದಿ ವೇದೋಕ್ತಿಗಳು ಅನಂತವಾಗಿವೆ. ಸ್ತ್ರೀಯರು ಸಮ್ರಾಜ್ಞಿಗಳೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಹುದು. ಗೃಹಕೃತ್ಯ ನಿರ್ವಾಹವೆಂಬ ಹೊಣೆಗಾರಿಕೆಯುಳ್ಳ ಕುಟುಂಬ ರಾಜ್ಯವನ್ನು ಹಿತವಾಗಿ ದೀಪನಗೊಳಿಸುವುದರಿಂದ ಸಮ್ರಾಜ್ಞೀತ್ವವು ಸಿದ್ಧಿಸುವುದು. ಸ್ತ್ರೀ ವ್ಯಕ್ತಿಗಳ ಸಮ್ರಾಜ್ಞೀತ್ವದಿಂದ ಪುರುಷರ ಸಮ್ರಾಟ್ ಭಾವವು ಸಿದ್ಧಿಸಬೇಕಾಗಿದೆ. ಇಂತಹ ಕುಟುಂಬ ಕೋಟಿಗಳು ತಮ್ಮ ತಮ್ಮ ಗೃಹರಾಜ್ಯಭಾರವನ್ನು ಪ್ರಜಾಪತಿಯ ರಾಜ್ಯಭಾರದ ಋತದ ಛಾಯೆಯಲ್ಲಿ ನಿರ್ವಹಿಸಿದರೆ ಸಮಾಜ, ಪ್ರದೇಶ, ದೇಶಗಳ ರಾಜ್ಯಭಾರವು ಸುಮುಖವಾಗಿ ಹಿತವಾಗಿಯೇ ಸ್ವತಃ ಪ್ರವರ್ತಿಸುವಂತಾಗುವುವು. ಸಾಮಾನ್ಯವಾಗಿ ಜನರು ತಿಳಿದಿರುವಂತೆ ದೇಶದ ರಾಜ್ಯಭಾರದಲ್ಲಿ ಕಂಡ 20-25 ಅಧಿಕೃತ ವಿಭಾಗಗಳಿಗಿಂತಲೂ ಹೆಚ್ಚಿನ ಸಂಖ್ಯೆಯ ವಿಭಾಗಗಳು ಗೃಹಕೃತ್ಯ ನಡೆಸುವವರ ಅಧಿಕಾರಕ್ಕೆ ಒಳಪಟ್ಟಿವೆ; ಪ್ರತಿಗೃಹದಲ್ಲಿಯೂ ಪಂಚವಲಯ ರಾಜ್ಯಗಳಲ್ಲಿಯೂ ಇವೆ. ಸ್ತ್ರೀಯರ ಆಚಾರವು ಭ್ರಷ್ಟವಾದರೆ ಪ್ರಪಂಚದ ಆಗುಹೋಗುಗಳೂ ಗೃಹರಾಜ್ಯಭಾರ ಕಾರ್ಯಗಳೂ ಅಸ್ತವ್ಯಸ್ತವಾಗುವುವು; ಅನಿಷ್ಟ ಪ್ರದಗಳಾಗುವುವು. 'ಅಪ್ರಮತ್ತಾ ರಕ್ಷಥ ತಂತುಮೇತಂ | ಮಾ ವಃ ಕ್ಷೇತ್ರೇ ಪರಬೀಜಾನಿ ವಾಪ್ಸುಃ' ಎಂದು ಆಪಸ್ತಂಬ ಬ್ರಹ್ಮರ್ಷಿಗಳು ಎಚ್ಚರಿಸಿರುವರು (ಆ. ಧ. ಸೂ. ಮಂಜರೀ ಪುಟ 35. ಸಾಲು 5-6.) ಏಕೆಂದರೆ ಪ್ರಜಾ ಲಾಭವು ಅಮೃತವು; ಶಾಶ್ವತ ಸುಖದಾಯಕವು. "ಅಥಾಪ್ಯಸ್ಯ ಪ್ರಜಾತಿಂ ಅಮೃತಂ ಆಮ್ನಾಯ ಆಹ | ಪ್ರಜಾಮನುಪ್ರಜಾಯಸೇ, ತದು ತೇ ಮರ್ತ್ಯ ಅಮೃತಮಿತಿ | -ಪ್ರಜಾಜನ್ಮವು ಅವಿಚ್ಛಿನ್ನವಾಗಿ ಅಮೃತಮಂಥನರೀತ್ಯಾ ಹರಡಿ ಹಬ್ಬುವುದು; ಅದೇ ಅಮೃತವೆನಿಸುವುದು" (ಆಪಸ್ತಂಬ ಬ್ರಹ್ಮರ್ಷಿಗಳು ಆ. ಧ. ಸೂ. ಮಂಜರೀ ಪುಟ 7. ಸಾಲು 1-2) ಜೀವನ ಯಜ್ಞದಲ್ಲಿ ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳ ರಾಜ್ಯವೆಂಬ ಯಂತ್ರಗಳ ಚಾಲನೆಯು ಶಕ್ತಿಸ್ವರೂಪಿಣಿಯಾದ ಸ್ತ್ರೀಗೆ ಸೇರಿದುದು. ದೃಷ್ಟಿ ಮತ್ತು ಸಾನ್ನಿಧ್ಯಗಳಿಂದ ಘಟನಾಘಟನೆಗಳನ್ನು ರೂಪಿಸುವ ಶಕ್ತಿಯೇ 'ಸ್ತ್ರೀ'. ಅಭ್ಯಸ್ತ ಕರ್ಮ, ಆಚಾರ, ತಪಸ್ಸು ಮೊದಲಾದುವುಗಳ ರಹಸ್ಯವನ್ನು ರಸಾಭಿಜ್ಞ ವಿಮರ್ಶೆ ಮೂಲಕ ಸುಲಭವಾಗಿ ತಿಳಿಯಲು ಮತ್ತು ಅಂಧಪರಂಪರೆಯನ್ನು ತಳ್ಳಿಹಾಕಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂಲ ಸಂಪ್ರದಾಯವನ್ನು ಉದ್ಧರಿಸಲು, ವಿಧೇಯರಾದ ಮತ್ತು ಶುಶ್ರೂಷಾ ಪರರಾದ (ಆದುದರಿಂದಲೇ ಸ್ವಾತಂತ್ರ್ಯವನ್ನವಲಂಬಿಸಿ ಮನಸ್ಸಿಗೆ ತೋರಿದಂತೆ ನಡೆಯದೆ, ನಡೆಸದೆ ಇರುವ) ಸ್ವತಂತ್ರರಾದ ಸ್ತ್ರೀಯರಿಗೆ ಅವಕಾಶವು ಹೆಚ್ಚಾಗಿರುವುದು. ಕ್ರಿಯಾಣಾಮಪಿ ಧರ್ಮ್ಯಾಣಾಂ ಸತ್ಪತ್ನ್ಯಃ ಮೂಲಕಾರಣಂ – ಎಂದು ಕಾಳಿದಾಸನು ಪ್ರಶಂಸಿಸಿರುತ್ತಾನೆ.

ಇಂತಹ ಸಂಸ್ಕೃತಿಯ ಸದವಕಾಶವನ್ನು ಸದುಪಯೋಗಕ್ಕೆ ತಂದು ಕೊಂಡು ಪುರಾಣೇತಿಹಾಸಗಳ ಸಾರವಾದ ಧರ್ಮ–ಆಚಾರರಹಸ್ಯಗಳನ್ನು ರಾಜನೀತಿ ದೃಷ್ಟಿಯಿಂದ ತಿಳಿದು, ಕ್ರಿಯಾಪ್ರಪಂಚದಲ್ಲಿ ಕಾಣದ ಮತ್ತು ಮಾನವತೆಗೆ ಹೇಯಕರವಾದ ವಿಷಯಗಳನ್ನು ದೂರೀಕರಿಸಿ ತನ್ನ ಮತ್ತು ಸುತ್ತು ಮುತ್ತಲಿನ ಜೀವನವನ್ನು ರೂಪಿಸಿ ರೂಢಿಸಿ ಬೆಳಗುವುದಕ್ಕೆ ಗೃಹದೊಳಗೆ ಗೂಢವಾಗಿ ಸುರಕ್ಷಿತರಾದ ಸ್ತ್ರೀಯರು ಸಮರ್ಥರು ಎಂದು ಸರ್ವದಾ ಸರ್ವರೂ ಸ್ತ್ರೀಯರನ್ನೂ ಸ್ತ್ರೀತ್ವವನ್ನೂ ಗೌರವಿಸಿ, ಆರಾಧಿಸಿ ಸೇವಿಸಿ ಆನಂದಿಸುತ್ತಿರುವರು ಧರ್ಮಪತ್ನಿಯರ ಧರ್ಮವನ್ನು ರಕ್ಷಿಸು ವುದಕ್ಕೂ ಪುರುಷದೇಹಿಗಳು ಆಕಸ್ಮಿಕವಾಗಿ ನೂತನವಾಗಿ ಕಲ್ಪಿಸಿ ಕೊಳ್ಳುವ ಪ್ರಾಪಂಚಿಕ ಸಂಕಲ್ಪ ಋಣಗಳ ಅನುಭವದ ಪೂರ್ತಿಗೂ ನೆರವಾಗುವುದೇ ಧರ್ಮವಾಗಿ ಉಳ್ಳ ಸ್ತ್ರೀವರ್ಗದ ಸಂಸ್ಕೃತಿಯು ಪರಮ ಶ್ರೇಯಃ ಪ್ರದವಾಗಿ ರೂಪಿತವಾಗಿರುವುದು. ಪ್ರಕೃತಿಯಲ್ಲಿ ಸಮತೆಯು ನೆಲೆಗೊಳ್ಳುವುದಕ್ಕಾಗಿಯೂ ಕಲ್ಯಾಣಶಾಂತಿ ಸಾಧನೆಗಾಗಿಯೂ ರಾಜ ನೀತಿಯು ವಿಧಿಸಿರುವ ವೇಶ್ಯಾ ಸಂಸ್ಕೃತಿಯಿಂದಲೂ ಶ್ರೇಯೋಲಾಭವಾ ಗುವುದು. ಜಾಗರೂಕತೆಯಿಂದ ಸರ್ವವಿಧದಿಂದಲೂ ಸಂರಕ್ಷಿಸಲ್ಪಡುವ, ಹಾಗೂ ಪೂಜಿಸಲ್ಪಡುವ ಸ್ತ್ರೀಯರಲ್ಲಿ ಸದ್ಗೃಹಸ್ಥರಲ್ಲದ ಪುರುಷರಂತೆ ಉಚ್ಛೃಂಖಲರಾಗಿ ಹೋಗುವ ಸ್ವಭಾವವು ಇರುವುದಿಲ್ಲವಾಗಿ ವೇಶ್ಯಾ ಚಾರಕ್ಕೆ ಸಮಾನವಾದ ಅನುಷ್ಠಾನವು ಪುರುಷರಿಗೆ ವಿಧಾಯಕವಾಗಿಲ್ಲ.

ಸ್ತ್ರೀತ್ವವು ಕೇವಲ ಸ್ತ್ರೀವ್ಯಕ್ತಿಗಳಲ್ಲಿ ಮಾತ್ರ ಮತ್ತು ಪುರುಷತ್ವವು ಕೇವಲ ಪುರುಷರಲ್ಲಿ ಮಾತ್ರ ಇರುತ್ತವೆ ಎಂದು ತಿಳಿಯಬಾರದು. ಪುರುಷವ್ಯಕ್ತಿಗಳಲ್ಲಿ ಸ್ತ್ರೀತ್ವವೂ ಸ್ತ್ರೀವ್ಯಕ್ತಿಗಳಲ್ಲಿ ಪುರುಷತ್ವವೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸ್ವಾಭಾವಿಕವಾಗಿ ಉಚಿತ ಪ್ರಮಾಣಗಳಲ್ಲಿ ಇದ್ದೇ ಇರುತ್ತವೆ. ಇದು ಶಾರೀರಕ ಮಾನಸಿಕ ಶಾಸ್ತ್ರ ವಿಮರ್ಶೆ ಮತ್ತು ಅನುಭವಗಳಿಂದ ಸಿದ್ಧಾಂತವಾಗಿರುತ್ತದೆ. ಸ್ತ್ರೀತ್ವ ಸಾಮಾನ್ಯ ವಿಷಯಕವಾದ ಇಂದ್ರಿಯ ಶೈಥಿಲ್ಯವು ಅಥವಾ ಇಂದ್ರಿಯ ಸುಖಾನುಭವವು ಸಮಸ್ತ ಸ್ತ್ರೀ ಪುರುಷ ದೇಹಿಗಳಲ್ಲಿ ಸರ್ವತ್ರ ಆವರಿಸಿಕೊಂಡಿರುವುದು. ಸ್ತ್ರೀತ್ವವು ಪ್ರಾಪಂಚಿಕವಾದುದು ಮತ್ತು ಪ್ರಕೃತಿಗೆ ಸಹಜವಾದುದು. ಋತವಿರೋಧವಾಗಿರುವ ಇಂದ್ರಿಯ ಸುಖಚಪಲತೆಯು ಅಸುರವೆನಿಸುವುದು. ದಿತಿ ದನು ಗಳ ವ್ಯಾಪಾರವಾಗುವುದು. ಪಾರ್ಶ್ವವರ್ತಿಯಾದ ಪ್ರಾಪಂಚಿಕಾವರಣಗಳಿಗೆ ಸ್ತ್ರೀ ಪುರುಷರಲ್ಲಿರುವ ಸ್ತ್ರೀ ತ್ವ ವು ಬಲಿಯಾಗುವುದು. ಇಂದ್ರಿಯಗಳಿಗೆ ಪ್ರತ್ಯಕ್ಷವಾದ ವಿಷಯಗಳೊಡನೆ ಸ್ತ್ರೀತ್ವವು ಬಹುಜಾಗ್ರತೆ ನೇರವಾಗಿ ವ್ಯಾಪಿಸಿ ಬೆರೆಯುವುದು. ಅಖಂಡವಾದ ದಿಕ್ ಸ್ತ್ರೀಯು ಅದಿತಿ ಎಂದಾಗುವುದು. ಅಖಂಡ ದಿಕ್ ಸ್ತ್ರೀಯು ಗುಣಶಕ್ತ್ಯಾದಿಗಳ ಪ್ರಭಾವದಿಂದ ಖಂಡವಾದರೆ, ಮಿತಿಗೊಳಿಸಲ್ಪಟ್ಟರೆ. ದಿತಿ, ದನುಗಳೆಂಬ ಗುಣಶಕ್ತಿವ್ಯಂಜಕನಾಮಗಳನ್ನು ಹೊಂದುವುದು.

ಪುರುಷತ್ವವೆಂಬ (ಪೌರುಷ) ನೀತ್ಯನುಶಾಸನ ಸಂಯಮನಾದಿಗಳಿಂದ ತಮ್ಮ ತಮ್ಮಲ್ಲಿರುವ ಸ್ತ್ರೀತ್ವವನ್ನು ಸ್ತ್ರೀಪುರುಷರು ಹಿಡಿತದಲ್ಲಿಟ್ಟುಕೊಂಡು ಹಿತಸಾಧನೆಗೆ ಯತ್ನಿಸುತ್ತಾ ಅದಿತಿಯನ್ನು-ಸುರವನ್ನು ಸಾಧಿಸಬೇಕಾದುದೂ ಮತ್ತು ದಿತಿ, ದನು, ಅಸುರಗಳನ್ನು ದಮನಮಾಡಬೇಕಾದುದೂ ಸಮಸ್ತ ಪ್ರಜೆಗಳ ಕರ್ತವ್ಯ. ಪ್ರಪಂಚದಲ್ಲಿ ನೋಡಬಹುದಾದ ಕೇಳಬಹುದಾದ ಪ್ರಾಪಂಚಿಕ ವೈಭವಗಳು ಗೋಚರವಾದೊಡನೆ ವಿದ್ಯುತ್ತಿಗೆ ಬೆರಗಾದವರಂತೆ ಸ್ತ್ರೀತ್ವಪ್ರಧಾನವಾದ ಸ್ತ್ರೀಪುರುಷ ವ್ಯಕ್ತಿಗಳು ವರ್ತಿಸುತ್ತಾರೆ. ಅವರವರ ಸಂಕಲ್ಪಕ್ಕನುಗುಣವಾಗಿ ಋಣಾನುಬಂಧವನ್ನು ಪೂರೈಸಿಕೊಳ್ಳುವುದಕ್ಕಾಗಿ ವ್ಯವಸಾಯಮಾಡಿ ತಾತ್ಕಾಲಿಕವಾಗಿರುವ ಸ್ಥಿತಿಗತಿಗಳನ್ನು ಫಲವಾಗಿ ಪಡೆದು, ಎದುರಿಗೆ ಇರುವ ವ್ಯಕ್ತಿಗಳನ್ನು ನೋಡಿ ಆ ಸ್ಥಿತಿಗಳು ತಮಗೆ ಪ್ರಾಪ್ತವಾಗಬೇಕೆಂದು ದೇಹಿಗಳ ಸ್ತ್ರೀತ್ವವು ಪ್ರಬೋಧಿಸಿ ಹಮ್ಮೈಸುವುದು; ವಿವೇಕವನ್ನು ದೂರೀಕರಿಸುವುದು. ಲೋಕದಲ್ಲಿ ಕಾಣುವ ವೈಭವಗಳು ಸರ್ವರಿಂದಲೂ ಋಣಾನುಸಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಲಭ್ಯವಾಗತಕ್ಕದ್ದಾಗಿರುವುವು. ತಾವೂ ಒಂದಾನೊಂದು ಕಾಲದಲ್ಲಿ ಹಾಗೆಯೇ ಇದ್ದಿರಬಹುದು ಅಥವಾ ಋಣಕಲ್ಪನಾದಿಗಳಿಂದ ಸಂಕಲ್ಪ ವ್ಯವಸಾಯಗಳ ಫಲವಾಗಿ ಮುಂದೆ ಅಂತಹ ವೈಭವಗಳನ್ನು ಪಡೆಯು ವುದು ಸಾಧ್ಯ; ಆದರೆ ಸಹಜವಾದ, ಮಿತವಾದ, ದತ್ತಭುಕ್ತ ಧನವಾದ ಪ್ರಾಪಂಚಿಕ ವಸ್ತುಗಳನ್ನು ಕೂಡಿಹಾಕಿ ರಕ್ಷಿಸುವ ಹೊಣೆಗಾರಿಕೆಯಿಲ್ಲದ, ಸಂತೃಪ್ತಿಗುಣದಿಂದ ಸಂತುಷ್ಟವಾದ ಸಾಮಾನ್ಯ ಜೀವನಕ್ಕಿಂತ ಈ ಪ್ರಾಪಂಚಿಕ ವೈಭವಗಳಲ್ಲಿ ಅತಿಶಯವಿರುವುದಿಲ್ಲ. ಅತಿಶಯವಾಗಿದ್ದಂತೆ ಅವುಗಳನ್ನು ನೋಡಬೇಕಾದುದೂ ಇಲ್ಲ ಮತ್ತು ಸ್ವಸಂಕಲ್ಪ ಕಲ್ಪಿತ ವಾದ್ದರಿಂದ ತಿರಸ್ಕಾರಮಾಡಬೇಕಾದುದಿಲ್ಲ. ಕರ್ಮಶಾಸ್ತ್ರವು ನಿರ್ಧರಿಸಿ ಹೇಳುವಂತೆ ಈ ವೈಭವಗಳನ್ನು ಅನುಭವಿಸುವವರೂ ಸಹ ಅನೇಕವಾದ ಶಾರೀರಕ ಮಾನಸಿಕ ಕ್ಲಿಷ್ಟ ಪರಂಪರೆಗಳನ್ನು ವಿವಿಧವಾಗಿ ಹಿಂದಿನ ಜನ್ಮಗಳಲ್ಲಿ ಅನುಭವಿಸಿರುವ ಕಾರಣ ವೈಭವಪ್ರಾಪ್ತಿಗಾಗಿ ಸಂಕಲ್ಪಿಸಿ ದ್ದಿರಬಹುದು. ಹಾಗೂ ಅಪವಾದವೂ ನಿಷೇಧವೂ ಇಲ್ಲದೆ ಸಮಸ್ತ ವೈಭವಗಳೂ ಸ್ವೇಚ್ಛಾರೂಪದ ಬಂಧನ ಸೂಚಕಗಳಾಗಿರುತ್ತವೆ. ಆದುದರಿಂದ ಅಂತಹ ವೈಭವಗಳನ್ನು ಕಂಡಾಗ ಪರಿತಾಪ ಪಡಬೇಕೇ ಹೊರತು ಅವುಗಳನ್ನು ಗೌರವಿಸುವುದರಿಂದ ಋತದ್ವೇಷಕ್ಕೆ ಒಳಗಾಗಿ ಅಹಿತವನ್ನು ಅನುಭವಿಸಬೇಕಾಗುವುದು ಎಂಬ ಋತನಿಯಮವನ್ನು ಸ್ತ್ರೀತ್ವ ವ್ಯಂಜಕ ವ್ಯಕ್ತಿಗಳು ಮರೆಯುತ್ತಾರೆ. "ನಷ್ಟೋ ಮೋಹಃ ಸ್ಮೃತಿರ್ಲಬ್ಧಾ" ಎಂದು ಹೇಳಿರುವಂತೆ ಧರ್ಮಸಂಮೂಢ ಚೇತಸ್ಸುಳ್ಳ ಅರ್ಜುನನಲ್ಲಿಯೂ ಸ್ತ್ರೀತ್ವವು ಇದ್ದಿತು. ವ್ಯವಸಾಯದಿಂದ ನಿವೃತ್ತಿಯಾಗಿ ಪುರುಷಸ್ವಭಾವಗುಣವಾದ ಜ್ಞಾನವು ಅಂದರೆ ಯೋಗ ಸ್ಮರಣೆಯು ಉಂಟಾಯಿತು. ಆಪತ್ಕಾಲದಲ್ಲಿ ರಕ್ಷಣೆಗೆಂದು ಧನವನ್ನು ಕೂಡಿಡುವುದರಿಂದ ತಮಗೆ ಉಪಯೋಗವಿಲ್ಲದೆ ಇತರರಿಗೆ ದುರುಪಯೋ ಗಕ್ಕೆ ಕೊಟ್ಟು ಋತಕ್ಕೆ ವಿರೋಧವಾಗಿ ನಡೆದಂತಾಗುವುದು; ಆಪತ್ಕಾಲ ದಲ್ಲಿ ಸಂಚಿತಾರ್ಥವೂ ನಾಶವಾಗುವುದು.

ಆಪತ್ಕಾಲೇ ತು ಸಂಪ್ರಾಪ್ತೇ ಸಂಚಿತಾರ್ಥೋಽಪಿ ನಶ್ಯತಿ ॥
ಅಪತ್ಕರ್ಮಫಲೇ ಪ್ರಾಪ್ತೇ ಸಂಚಿತಾರ್ಥೋ ವಿನಶ್ಯತಿ ॥

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಒಂದೇ ಜನ್ಮದಲ್ಲಿ ಏಕಕಾಲದಲ್ಲಿ ತಾವು ಇರುವ ಸ್ಥಿತಿಯಲ್ಲಿಯೇ ತಮಗೆ ಗೋಚರವಾಗುವ ಭೋಗಭಾಗ್ಯಗಳೆಲ್ಲವೂ ಲಭಿಸಬೇಕೆಂದು ಹಂಬಲಿಸುತ್ತಾರೆ. ಹಾಗೆ ಅಷ್ಟು ಭೋಗಭಾಗ್ಯಗಳನ್ನು ಹೊಂದಲು ಅವಕಾಶವಿಲ್ಲ. ಏಕೆಂದರೆ ಆಯಾ ಭೋಗಭಾಗ್ಯಗಳಿಗೆ ತಕ್ಕ ಬೇರೆ ಬೇರೆ ಉಪಾಧಿಗಳನ್ನೂ ಆಶ್ರಯಿಸಬೇಕಾಗುವುದರಿಂದ ಬೇರೆ ಜನ್ಮಗಳನ್ನು ಹೊಂದಬೇಕು. ದೃಗ್ಗೋಚರವಾದ ಭೋಗಭಾಗ್ಯಗಳ ಹಿಂದೆ ನೆರಳಿನೋಪಾದಿಯಲ್ಲಿ ಪಂಚಕ್ಲೇಶಗಳೆಂಬ ಘಟಸರ್ಪವು ಹೊಂಚುಹಾಕಿಕೊಂಡಿದ್ದು ಸರ್ವರನ್ನೂ ವಿಷದ ಬಾಧೆಗೆ ಗುರಿಪಡಿಸುತ್ತದೆಂಬುದನ್ನು ವಿಮರ್ಶೆಮಾಡಿ ತಿಳಿಯಲು ಅವಕಾಶವಾಗದಂತೆ ಮೋಹವೆಂಬ ಸ್ತ್ರೀತ್ವವು ವ್ಯಕ್ತಿಗಳ ವಿವೇಕಕ್ಕೆ ತೆರೆಯನ್ನು ಹಾಕುತ್ತದೆ.

ಸಾಮಾನ್ಯವಾಗಿ ಆಹಾರ ನಿದ್ರಾದಿಗಳು ಸರ್ವಜಂತುಗಳಿಗೂ ಸಾಮಾನ್ಯವಾಗಿರುತ್ತವೆ. ಭಿಕ್ಷುಕರಾಜನಿಗೂ ದೇಶರಾಜ್ಯವನ್ನು ನಡೆಸುವ ರಾಜರಿಗೂ ಮನಶ್ಶಾಂತಿ ಅನುಭವವು ಏಕಪ್ರಕಾರವಾಗಿರುತ್ತದೆ. ಈ ತತ್ವವನ್ನು ಬಡವನಾಗಲೀ ಬಲ್ಲಿದನಾಗಲೀ ತಿಳಿದು ಸುತ್ತಮುತ್ತ ಇರುವ ವೈಭವವಾಗಲೀ ವೈಭವದ ಅಭಾವವಾಗಲೀ ತುಚ್ಛವೆಂದೇ ಸಮರ್ಥನೆ ಮಾಡಿಕೊಳ್ಳುವುದನ್ನು ಅಭ್ಯಾಸಮಾಡಿಕೊಳ್ಳುವುದಕ್ಕೆ ಸ್ತ್ರೀ ಸಂಸ್ಕಾರದ ಕ್ರಮದಲ್ಲಿ ಅವಕಾಶವಿದೆ. ಸಸ್ಯ ವೃಕ್ಷಾದಿಗಳು ಫಲದಿಂದ ತುಂಬಿದ್ದರೆ ಆ ಫಲದಿಂದ ಪ್ರಪಂಚಕ್ಕೆ ಉಪಕಾರ ಸೇವೆಯು ಅತಿಶಯವಾಗುವುದೆಂದು ತಿಳಿದು ಆನಂದಿಸುವಂತೆ, ವೈಭವಗಳಿಂದ ತುಂಬಿದ ಪ್ರಪಂಚದಲ್ಲಿ ಗೋಚರವಾದ ಸಂಪಾದಿಸಿ ಕೂಡಿಹಾಕಲ್ಪಟ್ಟ ಸಂಪತ್ತುಗಳು ಯಾರಿಂಗಾದರೂ ಎಲ್ಲಿಯಾದರೂ ಯಾವಾಗಲಾದರೂ ಕಲ್ಯಾಣಸಾಧನೆಗೆ ಅನುಕೂಲವಾಗಬಹುದೆಂದು ಆನಂದಿಸುವುದೇ ರಾಜಮಾರ್ಗನೀತಿ.

‘ಅವಸ್ಥಾ ಪೂಜ್ಯತೇ ರಾಮ ಶರೀರಂ ನೈವ ಪೂಜ್ಯತೇ’ ಎಂಬಂತೆ ಶರೀರವೂ ಶಾರೀರಕ ವರ್ತನೆಯೂ ಸರ್ವ ಸಾಧಾರಣವಾದುದರಿಂದ ಗೌರವಾದಿಗಳಿಗೆ ಕಾರಣವಲ್ಲ. ಹಸೆಯಮೇಲೆ ಕೂತಾಗ ಸ್ತ್ರೀಪುರುಷ ಬಾಲರಿಗೆ ಪೂಜೆಯು ಲಭಿಸುವಂತೆ ಉಳಿದ ಕಾಲಗಳಲ್ಲಿ ಅದು ಅವರಿಗೆ ದೊರೆಯುವುದಿಲ್ಲ. ಕಾರಣಾಂತರದಿಂದ ಉಂಟಾದ ಅವಸ್ಥಾ ವಿಶೇಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳನ್ನು ಕಾರಣಾಂತರಗಳಿಗಾಗಿ ಆಶ್ರಯಿಸಿ ಕಾರಣಾಂತರಗಳಿಂದಲೇ ಆ ಅವಸ್ಥೆಯ ದೆಸೆಯಿಂದ ವಿರಾಮವನ್ನು ಹೊಂದಬೇಕಾಗಿರುತ್ತದೆ. ಈ ರಹಸ್ಯವನ್ನು ಮೊದಲು ಸ್ತ್ರೀಯರು ಸಾಕ್ಷಾತ್ಕರಿಸಿ ಒಳ್ಳೆಯ-ಹಿತವಾದ-ಆವರಣವನ್ನು ಪ್ರಪಂಚದಲ್ಲಿ ಹರಡಿ ದೇಹಿಗಳೆಲ್ಲರೂ ಕ್ರಮಶಃ ಉತ್ತಮ ಸಂಸ್ಕಾರವನ್ನು ಹೊಂದಿ ಉನ್ನತ ಸೋಪಾನವನ್ನೇರಿ ಸ್ವಸ್ವರೂಪಾನಂದ ಸಾಕ್ಷಾತ್ಕಾರವನ್ನು ಹೊಂದಲು ಅವಕಾಶವನ್ನು ಕಲ್ಪಿಸಬೇಕಾಗಿದೆ. ಇಂತಹ ವಿಷಯಗಳಲ್ಲಿಯೂ ಸ್ತ್ರೀತ್ವವೇ ಹೈಮವತಿಯ-ಬುದ್ಧಿಯ ಆಚಾರ್ಯಪೀಠವನ್ನು ಅಲಂಕರಿಸಬೇಕಾಗಿರುತ್ತದೆ. ಕೇನೋಪನಿಷತ್ತಿನಲ್ಲಿ ವಿವರಿಸಿರುವಂತೆ, ಇಂದ್ರಾದಿ ಪರಮ ಪದಗಳನ್ನು ಏರಿರುವವರಿಗೂ ಹೈಮವತೀರೂಪದ ಸ್ತ್ರೀತ್ವವೇ ಬ್ರಹ್ಮವಿದ್ಯೆಯನ್ನು ಉಪದೇಶಮಾಡುತ್ತದೆ.

ಪುರುಷರಿಗೆ ವಿಧಿಸಿರುವ ಸಾಮಾನ್ಯ ನಿಯಮಗಳೆಲ್ಲವೂ ಸ್ತ್ರೀಯರಿಗೂ ಅನ್ವಯಿಸುವುವು ಎಂದು ಸ್ಮೃತಿಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

"ಪುರುಷೇ ಯದುಕ್ತಂ ತತ್ ಸ್ತ್ರೀಷ್ವಪಿ ಜ್ಞೇಯಂ" –ಫಲದೀಪಿಕಾ.

"ನ ಪೃಥಗ್ವಿದ್ಯತೇ ಸ್ತ್ರೀಣಾಂ ತ್ರಿವರ್ಗಂ ವಿಧಿಸಾಧನಂ" –ವ್ಯಾಸಃ.

"ಸ್ತ್ರೀಭ್ಯಃ ಸರ್ವವರ್ಣೇಭ್ಯಃ ಧರ್ಮಶೇಷಾನ್ ಪ್ರತೀಯಾದಿತ್ಯೇಕೇ |
ಸಾ ನಿಷ್ಠಾ ಯಾ ವಿದ್ಯಾ ಸ್ತ್ರೀಷು ಶೂದ್ರೇಷು ಚ ||
ಅಥರ್ವಣಸ್ಯ ವೇದಸ್ಯ ಶೇಷ ಇತಿ ಉಪದಿಶಂತಿ ||" – ಆಪಸ್ತಂಬ
ಬ್ರಹ್ಮರ್ಷಿ ಆ.ಧ.ಸೂ.ಮಂಜರೀ ಪುಟ 2. ಸಾಲು 9–11.

ಆದುದರಿಂದ ಪುಲ್ಲಿಂಗ ಶಬ್ದಗಳನ್ನು ಪ್ರಯೋಗಿಸಿ ಪುರುಷರಿಗೆ ಅನ್ವಯವಾಗುವಂತೆ ತೋರುವ ಹಾಗೆ ವ್ಯವಹರಿಸಿರುವ ಶಾಸ್ತ್ರವಿಧಿಗಳನ್ನು "ಕೇವಲ ಪುರುಷರಿಗೆ ಸಂಬಂಧಪಟ್ಟುವು" ಎಂದು ಸ್ತ್ರೀಯರು ಉದಾಸೀನ ಮಾಡಕೂಡದು. ಸ್ತ್ರೀತ್ವವನ್ನೂ ಸ್ತ್ರೀಯರನ್ನೂ ದೂಷಿಸಿರುವ ವಾಕ್ಯಗಳು ಪುರುಷರಿಗೂ ಅನ್ವಯಿಸುವುವು; ಮತ್ತು ಆ ವಾಕ್ಯಗಳು ಪುರುಷರ ಪುಂಸ್ತ್ರೀಹೀನತೆಯನ್ನೂ, ರಾಜನೀತಿಯನ್ನು ಕಾರ್ಯರೂಪಕ್ಕೆ ತರದಿರುವ, ತರಲು ಕೈಲಾಗದಿರುವ ಪಂಚವಲಯ ರಾಜ್ಯಭಾರ ನಿರ್ವಾಹಕರ ಅವಿಜ್ಞತೆ ಮೊದಲಾದುವುಗಳನ್ನೂ ಸೂಚಿಸುವುವು. ಗಹನವಾದ ಇಂತಹ ಆಚಾರ ವ್ಯವಹಾರಗಳ ಅಧ್ಯಯನವೂ, ಆಚರಣೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯೂ, ಉಪದೇಶವೂ ಸ್ತ್ರೀಯರ ಪ್ರಥಮ ಕರ್ತವ್ಯವಾಗಿರುವುದರಿಂದ ಸ್ತ್ರೀಯರು ಪರಮ ಗೌರವಕ್ಕೆ ಪಾತ್ರರಾಗಿರುವ ವಿಚಾರವನ್ನೂ ಆ ಹೊಣೆಗಾರಿಕೆಗೆ ತಕ್ಕ ಸಂಸ್ಕೃತಿವಿಧಾನಗಳನ್ನೂ ಸಾಕ್ಷಾತ್ಕರಿಸಿ ವಿವರಿಸಿರುತ್ತಾರೆ.

ಸ್ವಾಭಾವಿಕವೆಂಬಂತೆ ಪ್ರಪಂಚದಲ್ಲಿ ಸ್ವಾಚಾರೋಲ್ಲಂಘನೆಗಳು ನಡೆಯುತ್ತಿರುವುವು. ಇವುಗಳು ಅಂಕುರವಾಗುವುದಕ್ಕೆ ಮೊದಲೇ ಅವುಗಳ ಕಾರಣವಾದ ಋಣವನ್ನು ಮೂಲೋತ್ಪಾಟನ ಮಾಡುವುದಕ್ಕೆ ತಕ್ಕ ನೀತ್ಯನುಶಾಸನದ ಆವರಣಗಳನ್ನು ಉಂಟುಮಾಡಲು ಸ್ತ್ರೀಯರು ಮೊದಲುಗೊಂಡು ಹಿಂದೆ ಹೇಳಿರುವ ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶಗಳೆಂಬ ಪಂಚವಲಯಗಳ ರಾಜ್ಯಸಾಧಕರೂ ಹೊಣೆಗಾರರಾಗಿರುತ್ತಾರೆ. ಏಕೆಂದರೆ – ಒಂದು ವ್ಯಕ್ತಿಯ ನೀತ್ಯನುಶಾಸನದ ಉಲ್ಲಂಘನ ಮತ್ತು ಉಚ್ಛೃಂಖಲ ಪ್ರವೃತ್ತಿಯಿಂದ ಉಂಟಾಗುವ ಫಲವನ್ನು ಸರ್ವರೂ ಸಾಕ್ಷಾತ್ ಅಥವಾ ಪರಂಪರೆಯಾಗಿ ಹಂಚಿಕೊಳ್ಳಬೇಕಾಗುವುದು. ಒಬ್ಬ ವ್ಯಕ್ತಿಯು ಸ್ವಾತಂತ್ರ್ಯದಿಂದ ನಡೆಯುವ ಸಾಹಸವು ಋತಕ್ಕೆ ವಿರೋಧವಾಗಿ ಋಣವನ್ನು ಕಲ್ಪಿಸಿ ಫಲವನ್ನು ಸರ್ವರೂ ಅನುಭವಿಸುವಂತೆ ಮಾಡುವುದರಿಂದ ವ್ಯಕ್ತಿ ದಂಡನೆಗೆ ಮತ್ತು ನೀತಿಶಿಕ್ಷಣಕ್ಕೆ ವ್ಯಕ್ತಿ ಮತ್ತು ವ್ಯಕ್ತ್ಯೇತರ ಅಂಗಗಳು ಯತ್ನಿಸಬೇಕು. ನೀತ್ಯನುಶಾಸನ ಕ್ರಮದಿಂದ ವ್ಯಕ್ತಿಯೇ ಮೊದಲಾದವುಗಳ ಸ್ವಾತಂತ್ರ್ಯವು ಋತಕ್ಕೆ ಅನುರೋಧವಾಗಿರುವಂತೆ ಸನ್ನಿವೇಶಗಳನ್ನು ಕಲ್ಪಿಸಿ ಆಯಾ ಸ್ವಾಚಾರಗಳನ್ನು ಎತ್ತಿ ಹಿಡಿಯಬೇಕಾಗಿದೆ. ಈ ವಿಷಯದಲ್ಲಿ ಸ್ತ್ರೀಯರ ಪಾತ್ರವೇ ಹೆಚ್ಚು ಎಂಬುದನ್ನು 'ಮಹಿಷ' ವೆಂಬ ಮದಾಂಧತೆಯನ್ನು ಪರಿಹರಿಸುವ ಚಾಮುಂಡಾಂಬಿಕಾ ಸ್ತ್ರೀತ್ವವೇ ಘೋಷಿಸುವುದು : ವೈಯಕ್ತಿಕ, ಕೌಟುಂಬಿಕ, ಸಮಾಜ, ಪ್ರದೇಶ, ದೇಶಗಳ ರಾಜ್ಯ ನಿರ್ವಾಹದಲ್ಲಿ 'ನಾತಿಚರಾಮಿ'* ಎಂಬ ಮೂಲ

---

* 'ನಾತಿ ಚರಾಮಿ' ಪ್ರಮಾಣವಚನವು, ವಿಶ್ವವಿದ್ಯಾನಿಲಯಗಳಲ್ಲಿ ಪದವೀ ಗ್ರಹಣ ಕಾಲದಲ್ಲಿ ಮಾಡುವ ಪ್ರಮಾಣವಚನಕ್ಕಿಂತಲೂ, ರಾಜ[illegible] ಕಾಲದಲ್ಲಿ ಪ್ರಜೆಗಳು ಮಾಡುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರಾರ್ಥದ ಅನುಷ್ಠಾನ ದಕ್ಷತೆಯನ್ನು ಪ್ರೋತ್ಸಾಹಿಸುವುದಕ್ಕೆ ಸ್ತ್ರೀ ಪುರುಷರ ಸ್ತ್ರೀತ್ವವೂ ಸ್ತ್ರೀಯರೂ ಪುರುಷರೂ ಬದ್ಧಕಂಕಣರಾಗಬೇಕು

'ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ' ಎಂಬಂತೆ ಜನ್ಮಕರ್ಮ-ವೃತ್ತಿ-ವರ್ತನೆಗೂ ವೈಷಮ್ಯವುಂಟಾಗಿ ಪಂಚ ವಲಯಗಳ ರಾಜ್ಯಸೂತ್ರದ ಅಸ್ತವ್ಯಸ್ತತೆಯುಂಟಾಗುವುದಕ್ಕೆ ಸ್ತ್ರೀ ಪುರುಷರ ಸ್ತ್ರೀತ್ವವು ಮಿತಿ ಮೀರುವುದೇ ಕಾರಣ. ಮೇಲ್ಕಂಡ ಸೂಕ್ತಿ ಯಲ್ಲಿರುವ 'ಸ್ತ್ರೀಷು' ಎಂಬ ಶಬ್ದಪ್ರಯೋಗದಿಂದ ಕೇವಲ ಸ್ತ್ರೀವ್ಯಕ್ತಿಯ ನ್ನು ದೂಷಿಸಿ ಏಕ ಪಕ್ಷದಲ್ಲಿ ಪಕ್ಷಪಾತದಿಂದ ವಿಜೃಂಭಿಸುವುದು ಹಿತಕ್ಕೆ ವಿರೋಧ. ಪುರುಷರು ದುರ್ಮಾರ್ಗ ಪ್ರವರ್ತಕರಾದರೆ ಬಾಧಕವಿಲ್ಲ ವೆಂದೂ, ಪುರುಷರ ಸ್ವೇಚ್ಛಾ ಪ್ರವರ್ತನೆಗೆ ಅವಕಾಶ ಅನುಮತಿಗ ಳುಂಟೆಂದೂ ಭಾವಿಸುವುದು ತಿಳಿಗೇಡಿತನ. 'ಸ್ತ್ರೀಷು' ಎಂಬ ಪದವು ಸ್ತ್ರೀ ಪ್ರಜಾಬೋಧಕವಾಗುವುದಾದರೂ ಅದರ ಹಿನ್ನೆಲೆಯಲ್ಲಿರುವ ಪುರುಷರು

---

ಪ್ರಮಾಣ ವಚನಕ್ಕಿಂತಲೂ, ಬುದ್ಧನ ಸೂಕ್ತಿಗಳಿಗಿಂತಲೂ, ಪಂಚಶೀಲ ಪ್ರಮಾಣಗಳಿಗಿಂತಲೂ ಅತ್ಯುನ್ನತ ಮಟ್ಟದ ಸಂಸ್ಕೃತಿಯನ್ನು ಸೂಚಿಸು ವುದು. ಕೇವಲ ಪ್ರಮಾಣವಚನದಾನದಿಂದ ಚರಿತಾರ್ಥವಾಗಲಾರದು; ಪ್ರಮಾಣ ವಚನ ಪರಿಪಾಲನೆಗೆ ಪ್ರಮಾಣವಚನದಾತನು ಹೊಣೆಗಾರ ನಾಗದೇ, ಹೊಣೆಗಾರನಾಗಲಾರದೇ ಇರಬಹುದು. ಆದರೆ ಈ ಪ್ರಮಾಣ ವಚನಗಳು ಪ್ರಯೋಜಕವಲ್ಲ ಎಂದಾಗಲೀ ಪ್ರಮಾಣವಚನದಾನದಿಂದ ಸ್ವಾತಂತ್ರ್ಯಕ್ಕೆ, ಸ್ವೇಚ್ಛೆಗೆ, ಕೊರತೆಯುಂದಾಗಲೀ ವಿವಾಹ ಸಂಸ್ಕೃತಿ ಯನ್ನು ದೂರಸರಿಸುವುದರಿಂದ ಅವಿವೇಕಕ್ಕೆ ದಾರಿಯಾಗುವುದು.

ವಿವಾಹ ಸಂಸ್ಕೃತಿಯಲ್ಲಿ ಘೋಷಿಸುವ ಈ ಪ್ರಮಾಣವಚನವು ಪಿಂಡಾಂಡ, ಬ್ರಹ್ಮಾಂಡಗಳಲ್ಲಿರುವ ಶಕ್ತಿಗಳನ್ನು ಎಬ್ಬಿಸಿ, ಪ್ರಚೋದಿಸಿ ಹೊಣೆಮಾಡಿ ಅವು ಸಹಾಯಕರವಾಗುವಂತೆ ಮಾಡುವ ಪ್ರಾರ್ಥನೆ ಯಾಗಿರುವುದು. ಮಾನವವ್ಯಕ್ತಿಗಳ ಮುಂದೆ ತೋರಣೆಗಾಗಿ ಒಪ್ಪಿಕೊಂಡು ವಾ ವಿರೋಧಿಸಿ ಸ್ವಹಸ್ತಾಕ್ಷರವನ್ನು ನೀಡುವ ಕೆಳಗಿನ ಮಟ್ಟದ ಉಕ್ತಿಯಲ್ಲ ವಾ ಲೇಖನವಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಚಿಕೆಯಿಂದ ತಲೆಬಾಗಿ ಪುರಸ್ಕರಿಸಬೇಕಾಗುವುದು.

‘ನಾತಿ ಚರಾಮಿ’ ಮೊದಲಾದ ಸೂಕ್ತಿಗಳು ಸಾರ್ಥಕವಾಗುವಂತೆ ಅನುಷ್ಠಾನವನ್ನು ವಿಧಿಸುವುದಕ್ಕೂ ಅನುಷ್ಠಾನದಲ್ಲಿ ಕಾಣುವುದಕ್ಕೂ ಸ್ತ್ರೀಯರು ಸ್ವೇಚ್ಛಾ ನಿವಾರಕವಾದ ಖಡ್ಗಾದಿಗಳನ್ನು ಯಾವಾಗಲೂ ಧರಿಸಬೇಕು. ಸದನುಷ್ಠಾನಪರರನ್ನು ಪಂಚವಲಯಗಳ ರಾಜ್ಯಭಾರ ಕಲಾಪಗಳಲ್ಲಿ ಅನುಗ್ರಹಿಸುವುದಕ್ಕೆ ಪ್ರೋತ್ಸಾಹಕವಾಗಿಯೂ ಉತ್ತೇಜಕವಾಗಿಯೂ ಇರುವಂತೆ ಅಭಯ, ವರದ ಹಸ್ತಗಳನ್ನೂ ಪದ್ಮವನ್ನೂ ಧರಿಸಬೇಕು. ಸ್ವಭಾವತಃ ಸಹನಶೀಲವಾದ ಸ್ತ್ರೀತ್ವಕ್ಕೆ ಅಹಂಕಾರಾದಿಗಳನ್ನು ಅಡಗಿಸುವ ದಮನಶಕ್ತಿ ಎಂಬ ಸಿಂಹವೇ ಧ್ವಜವಾಗಿರಬೇಕು.

ವ್ಯಕ್ತಿ, ಕುಟುಂಬ, ಸಮಾಜ, ರಾಜ್ಯವಲಯಗಳಲ್ಲಿ ಮಾತ್ರ ಸ್ತ್ರೀಯರ ಪಾತ್ರವು ಚರಿತಾರ್ಥವಾಗುವುದು. ಶಾರೀರಕ ಮಾನಸಿಕ ಸ್ಥಿತಿಗತಿಗಳ ರಚನಾಕ್ರಮಗಳು ತದನುಗುಣವಾಗಿರುವುವು. ಸ್ತ್ರೀಯರ ಅಮೋಘವೂ, ಅತಿಸೂಕ್ಷ್ಮವೂ, ಕೋಮಲವೂ ಆದ ಶಾರೀರಕ ತತ್ತ್ವಗಳನ್ನು ಗ್ರಹಿಸದೆ ಗ್ರಹಿಸಲಾರದೆ ಅವರನ್ನು ಸ್ವಗೃಹೇತರಗಳಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ನಿಯೋಗಿಸುವುದರಿಂದ ಕಠಿಣವಾದ ಪ್ರಸಂಗಗಳೊದಗಿ ವೈಯಕ್ತಿಕ ಹಾನಿ, ಕುಟುಂಬ ಹಾನಿ, ಅನುಷ್ಠಾನ ಹಾನಿ, ಆಚಾರ-ಸಂಸ್ಕೃತಿ ಹಾನಿಗಳುಂಟಾಗುವುವು. ಗೃಹಿಣಿಯರು ಸ್ವಕುಟುಂಬ ಕರ್ತವ್ಯನಿಷ್ಠರಾದ ಮಾತ್ರಕ್ಕೆ ಸಾರ್ವಜನಿಕ ಕ್ಷೇತ್ರದಲ್ಲಿ ವೇತನವನ್ನು ಕೊಟ್ಟು ಅವರಿಂದ ಕೆಲಸತೆಗೆದುಕೊಳ್ಳುವುದು ಮಹಾಪರಾಧವೆನಿಸುವುದು; ಸಂಸ್ಕೃತಿಯು ವಿಲಯವನ್ನೈದುವುದು. ಯಾವ ಸ್ತ್ರೀಯೇ ಆಗಲಿ ಸಾರ್ವಜನಿಕ ಕ್ಷೇತ್ರದಲ್ಲಿ ನಿಯಮಗಳ ಗೊತ್ತುವಳಿ ಪ್ರಕಾರ ಕೆಲಸ ಮಾಡುವುದಾದರೆ ರಾಷ್ಟ್ರಕ್ಕೆ ಅವನತಿಯನ್ನು ತಂದಂತೆಯೇ ಸರಿ.

ಪುರುಷತ್ವವೆಂಬ ಜ್ಞಾನವಿವೇಕಗಳುಳ್ಳ ಸ್ತ್ರೀಯರು ಪುರುಷರೆನಿಸಿಕೊಳ್ಳುತ್ತಾರೆ. ರಾಜನೀತಿಯು ಸ್ತ್ರೀಯರ ಪ್ರಥಮ ಕಲ್ಪದ ವ್ಯಾಸಂಗವಾಗಿರಬೇಕೆಂಬುದನ್ನು ವ್ಯಕ್ತಪಡಿಸಲು ಮಹಾಕವಿ ಭಾರವಿಯು ದ್ರೌಪದಿಯನ್ನು ಆಚಾರ್ಯತ್ವಕ್ಕೆ ಏರಿಸಿ ಆಕೆಯ ಪ್ರೋತ್ಸಾಹದಿಂದ ಪಾಂಡವರು ನಯಮಾರ್ಗೋನ್ಮುಖರಾದ ವಿಚಾರವನ್ನು ವರ್ಣಿಸಿರುತ್ತಾನೆ. ಆಚಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಂಸ್ಥಾಪನೆ, ಅನುಷ್ಠಾನಾದಿಗಳಿಗೆ ಸ್ತ್ರೀಯರು ಸುಮುಖ ಪಾತ್ರರು (ಪಾಸಿಟಿವ್–ಆಕ್ಟಿವ್) ಪುರುಷರು ದುರ್ಮುಖ ಪಾತ್ರರು (ಪಾಸಿಟಿವ್–ಪ್ಯಾಸಿವ್) ಇದಕ್ಕೆ ವಿರೋಧವಾಗಿ ಕರ್ತವ್ಯ ಭ್ರಷ್ಟರಾಗಿ ನಡೆಯುವವರು ವಿಮುಖ ಪಾತ್ರರು ( ನೆಗೆಟಿವ್ ) ಆಗಿರುತ್ತಾರೆ. ವಿಮುಖ ಪಾತ್ರರು ಕೆಲವು ಹಂತಗಳಿಂದ ಇಳಿದು ಆಮೇಲೆ ಎಚ್ಚೆತ್ತುಕೊಳ್ಳಬೇಕಾದ ಪ್ರಸಂಗವುಂಟಾಗುವುದು.

## ಅನುಷ್ಠಾನ ವೈವಿಧ್ಯ

ವಿತಿಯಲ್ಲಿ ಅನುಷ್ಠಾನ ಮಾಡಬೇಕಾದ ಆಚಾರವು ಆಯಾ ದೇಹಿಯ ಋಣ ಮತ್ತು ಋಣೀ ಭಾವಗಳನ್ನು ಮನೋವಾಕ್ಕಾಯ ಕರ್ಮಗಳಿಂದ ಪ್ರದರ್ಶಿಸಿ ಪರಿಹರಿಸಿಕೊಳ್ಳುವ ಸ್ವಕರ್ಮಾನುಷ್ಠಾನವಾಗಿರುತ್ತದೆ. ಭೂಗೋಲ, ಖಗೋಲ, ವಾಯುಗುಣ, ಪ್ರಾದೇಶಿಕ ; ವಂಶ, ಸಮಾಜ, ಸಂಪ್ರದಾಯ, ಸನ್ನಿವೇಶ, ಪರಿಸ್ಥಿತಿ ; ಶಾರೀರಕ ಮಾನಸಿಕಸ್ಥಿತಿ (ದಯಾ ದಾಕ್ಷಿಣ್ಯಾದಿಗಳು) ; ಕುಟುಂಬ ಸ್ಥಿತಿ, ಆಹಾರಗಳೆಂಬ ದೃಷ್ಟ ವಸ್ತುಗಳು ; ಕಾಣಬಹುದಾದ ಮತ್ತು ಸಾಮಾನ್ಯವಾಗಿ ಕಾಣಲಾಗದಿರುವ ಹಿಂದು ಹಿಂದಿನ ಋಣಕರ್ಮಫಲಗಳು ಇವೆಲ್ಲವೂ ದೇಹಿಯ ಆಚಾರವನ್ನು ನಿಯಮನಗೊಳಿಸುವುದಾಗಿರುತ್ತವೆ. ಒಂದು ಗುಂಪಿಗೆ ಅಂದರೆ ಸಮಾಜಕ್ಕೆ ಸೇರಿದ ಒಂದು ಕುಟುಂಬದಲ್ಲಿ ದೇಹಧಾರಿಯಾದ ಜೀವನು ವಸ್ತುತಃ ಸುತ್ತಮುತ್ತಲಿನವರಿಗೆ ಅಪರಿಚಿತವಾದ ಯಾವುದೋ ಮತ್ತೊಂದು ಸಮಾಜದ ಅಥವಾ ಕುಟುಂಬದ ಋಣ ಸಂಬಂಧವನ್ನು ಹೊಂದಿದ್ದವನಾಗಿರಬಹುದು. ಸುತ್ತಮುತ್ತಲಿನವರಿಗೆ ಅಪರಿಚಿತವೆಂದೇ ಕಾಣುವ ವಸ್ತುವಿನ ಮೇಲಿನ ಗೀಳನ್ನು ಹೊಂದಿರಬಹುದು. ಆದರೆ ಸ್ಥೂಲವಾದ ಆವರಣಗಳಿಂದ ಕೂಡಿದ ದೇಹದ ಪ್ರಾಪ್ತಿಗೆ ಕಾರಣವಾದ ತಾತ್ಕಾಲಿಕ ಸನ್ನಿವೇಶದಲ್ಲಿ ಸುತ್ತುಗಟ್ಟಿಕೊಂಡಿರುವ ಋಣದ ಸಂಬಂಧವನ್ನು ಬಿಡಲಾಗುವುದಿಲ್ಲ. ಅಂತಹ ವ್ಯಕ್ತಿಗಳು ಉಭಯ ವಿಧವಾದ ಹೊಣೆಗಾರಿಕೆಯನ್ನು ಹೊಂದಿ ಋಣ ದ್ವೈಧೀ ಭಾವವನ್ನು ವ್ಯಕ್ತಪಡಿಸುವುದಾಗಿರುವುದು. ಹೀಗೆ ಅಡ್ಡಗೋಡೆಯ ಮೇಲಿನ ದೀಪದಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ತಿಸುವುದು ವಿದೇಶೀಯ ಪ್ರಭಾವಕ್ಕೆ ಒಳಗಾದ ಜನರ ಪರಿಸ್ಥಿತಿಯಲ್ಲಿ ವಿಶೇಷವಾಗಿದೆ. ಸ್ತ್ರೀಯರೂ ಪುರುಷರೂ ಅಂತಃ (ಅಂದರೆ ಮನಸ್ಸಿನಲ್ಲಿ) ಒಂದು ವಿಧವಾದ ವರ್ತನೆಯನ್ನು ಯೋಚಿಸಿ ವಾಚಾ ಅದಕ್ಕೆ ಬೇರೆಯಾದ ವರ್ತನೆಯ ವಿವರವನ್ನು ಹೇಳುತ್ತಾ ಕಾಯೇನ ಇನ್ನೊಂದು ವಿಧವಾದ ವರ್ತನೆಯನ್ನು ಮಾಡಿ ತೋರಿಸುತ್ತಾರೆ. ಯಾವುದೂ ಸಹ ಪಕ್ವವಾಗದೆಯೂ, ಪುಷ್ಟವಾಗದೆಯೂ ಮಿಶ್ರವಾದ್ದರಿಂದ ಬಲಹೀನವಾಗಿಯೂ ಇರುವ ಕರ್ಮಾನುಷ್ಠಾನದಿಂದ, ತಮ್ಮನ್ನೂ ಪ್ರಪಂಚವನ್ನೂ ವಂಚಿಸುವುದಾಗಿದೆ. ಮತ್ತು ಸದಾಚಾರ ಪ್ರವರ್ತನೆಗೆ ವಿರುದ್ಧವಾದ ಆವರಣವನ್ನು ಕಲ್ಪಿಸುವ ದೋಷಕ್ಕೆ ಭಾಗಿಗಳಾಗಿ ದುಷ್ಟ ಕರ್ಮದ ಫಲವನ್ನು ಅನುಭವಿಸುವವರಾಗಿ ಲೋಕಕ್ಕೂ ಅದರ ಪ್ರಭಾವವನ್ನು ಬೀರುತ್ತಾರೆ.

ಮಿಶ್ರ ಕರ್ಮಾನುಷ್ಠಾನದ ಪ್ರಸಕ್ತಿ ಬಂದಾಗ, ಸ್ಥೂಲಶರೀರಕ್ಕೆ ಸಂಬಂಧಪಟ್ಟ ಋಣಗಳನ್ನು ಪರಿಹರಿಸುವಾಗ ಜಾಗರೂಕರಾಗಿದ್ದು ಆಕಾರವನ್ನು ಬದಲಾಯಿಸಿಕೊಳ್ಳದೆ, ಇತರರಿಗೆ ಮನೋವೈಕಲ್ಯಬುದ್ಧಿಭೇದಗಳುಂಟಾಗದಂತೆ ನೋಡುವ ಋಣ ಪರಿಹಾರ ಕ್ರಮವನ್ನು ನಿರ್ವಂಚನೆಯಾಗಿ ಕೈಕೊಳ್ಳಬೇಕು. ಮತ್ತು ಅನುಸರಿಸಿಕೊಂಡು ಬೆನ್ನುಹತ್ತಿಬಂದಿರುವ ಪರತಂತ್ರ ಋಣವನ್ನು ಆಂತರಂಗಿಕವಾಗಿಟ್ಟುಕೊಂಡು ಸಮಯವನ್ನು ಕಾದು ಬಗೆಹರಿಸಿಕೊಳ್ಳಬೇಕು. 'ಆಚಾರ ಕೆಟ್ಟರೂ ಆಕಾರ ಕೆಡಬಾರದು' ಎಂಬ ನಾಣ್ಣುಡಿಯು ಪ್ರಪಂಚದಲ್ಲಿ ಸಮತೆ-ಶಾಂತಿಗಳನ್ನು ವ್ಯವಸ್ಥೆಗೊಳಿಸುವ ರಾಜನೀತಿಯ ಮರ್ಮವನ್ನು ಸಾರುವುದು. ಆಕಾರವೆಂದರೆ ಕೇವಲ ಮುಖವಿಕಾರ ವೇಷಭಾಷಾದಿ ವಿಕಾರಗಳಲ್ಲ. ಪಂಚ ವಲಯಗಳಲ್ಲಿ ರಾಜ್ಯದ ರಾಜಶಾಸನವನ್ನು ಪರಿಪಾಲಿಸುವುದೇ – 'ಆಕಾರ ಕೆಡಬಾರದು' ಎಂಬುದರ ಅರ್ಥ. ಅನ್ಯರೆಂದು ಭಾವಿಸಿ ಅನ್ಯರ ಆಶ್ರಯದಲ್ಲಿ, ಕಾಗೆಯ ಗೂಡಿನಲ್ಲಿ ಕೋಗಿಲೆ ಮರಿಯಂತೆ ಬೆಳೆದು, ಸ್ವಸ್ವರೂಪಜ್ಞಾನವಾದನಂತರ ತನ್ನ ಆಚಾರ ವೈಶಿಷ್ಟ್ಯವನ್ನು ಅನುಷ್ಠಾನ ಮಾಡುವ ಸಂಭವವಿರುವುದು. ಅನ್ಯರ ಮಧ್ಯೆ ಸ್ಥೂಲ ಶರೀರವನ್ನು ಬೆಳೆಸಿ, ಸ್ವತಂತ್ರರಾದಂತೆ ಅನ್ಯರ ಶತ್ರುತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನಿವಾರಣೆಯನ್ನೂ ಮಾಡಬಹುದು. ಬಹಿಃ ಬಂಧುಗಳಂತೆ ತೋರ್ಪಡಿಸಿ ಅಂತಃ ಶತ್ರುತ್ವವನ್ನು ಬೆಳಸಿ ಬ್ರಾಹ್ಮಣ ದೇಶದ ಕ್ಷೀಣದೆಸೆಗೆ ಕಾರಣ ರಾದ ಮತ್ತು ವಿಷಪ್ರಾಯರಾದ ಪೋರ್ಚುಗೀಸರು ಮೊದಮೊದಲು ಈ ದೇಶಕ್ಕೆ ಕಾಲಿಟ್ಟು ಸ್ವಾರ್ಥವನ್ನು ಸಾಧಿಸಿಕೊಂಡಂತೆ ಯತ್ನಿಸಬಹುದು. ಇಂತಹ ಅನುಭವಗಳೆಲ್ಲಾ ಪೂರೈಸಿದ ಮೇಲೆ ಸತ್ – ಆವರಣದಿಂದ ಕ್ರಮವಾದ ಶಿಕ್ಷಣವು ಪ್ರಾಪ್ತವಾಗಿ ಉನ್ನತ ಹಂತವನ್ನು ಏರಲು ಪ್ರೋತ್ಸಾಹವೂ ಯತ್ನವೂ ನಡೆಯುವುವು. ಆದುದರಿಂದ ಸ್ವಾಚಾರಾ ನುಷ್ಠಾನವನ್ನು ಆಕಾರದಲ್ಲಿ ವ್ಯಕ್ತಪಡಿಸಿ ವಂಚಿತರಾಗದಂತೆ ನಡೆಯುವು ದನ್ನು ಪ್ರಜಾಹಿತವಾದ ಪ್ರಜಾರಂಜಕವಾದ ರಾಜಧರ್ಮವು ಹೇಳುತ್ತದೆ.

ಶ್ರೀ ಶೃಂಗೇರಿ ಶ್ರೀ ಶಂಕರಾಚಾರ್ಯ ಜಗದ್ಗುರು ಶ್ರೀಮತ್ಪರಮ ಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಯಥಾರ್ಥ ಬಿರುದಾಂಕಿತ ರಾದ ಶ್ರೀ ಶ್ರೀ ಚಂದ್ರಶೇಖರಭಾರತೀ ಜಗದ್ಗುರು ಭಗವತ್ಪೂಜ್ಯಪಾದರು ಅಪ್ಪಣೆ ಕೊಡಿಸಿದಂತೆ * ಲೋಕದಲ್ಲಿ ಸ್ವತಂತ್ರವಾದ ಆಚಾರ ವೈವಿಧ್ಯ ವೈರೂಪ್ಯಗಳಿಗೆ ಸ್ಥಳವಿಲ್ಲ. ವಿಶ್ವದ ಪ್ರಜಾವರ್ಗಕ್ಕೆಲ್ಲಾ ಇರುವುದು ಒಂದೇ ಆಚಾರ, ಸ್ವಾಚಾರ, ಬ್ರಾಹ್ಮಣಾಚಾರ. ಏಕೈಕವಾದ ಆಚಾರವು ಕಾಲ, ದೇಶ, ಪಾತ್ರಗಳಿಗೆ ತಕ್ಕಂತೆ ವಿವಿಧವಾಗಿ ಕಾಣುವುದು. ಮನೋ ಭಾವಕ್ಕೆ ತಕ್ಕಂತೆ ಅನುಷ್ಠಾನವು ವಿರೂಪವಾಗುವುದು. ದೇಶಾನುಗುಣ ವಾಗಿಯೂ ಅನುಷ್ಠಾನವು ವಿಕಾರವಾಗಲೇ ಬೇಕು. ವ್ಯಕ್ತಿಗಳ ಸ್ಥಿತಿ, ಶಕ್ತಿ, ಆವಶ್ಯಕತೆಗೆ ತಕ್ಕಂತೆ ಅನುಷ್ಠಾನವು ತಾನಾಗಿಯೇ ಬೇರೆ ಬೇರೆ ಯಾಗುವುದು. ದೇಶ, ಪಾತ್ರಗಳಿಂದ ಹೀಗೆ ನಿರ್ದಿಷ್ಟವಾದ ಅನುಷ್ಠಾನ ವನ್ನು ಮೋಹ, ದ್ವೇಷ, ಹಠವಾರಿತನಗಳ ಕಾರಣದಿಂದ ಬದಲಾಯಿಸು ವುದರಿಂದ ಆತ್ಮವಂಚಕತನಕ್ಕೆ ಎಡೆಯಾಗುವುದು.† ಈ ಬಗೆಯಾಗಿ

---

* ತಿನ್ನವೆಲ್ಲಿ ಬಿಡಾರದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ ಭಾಷಣ (ಪ್ರ|| ಶ್ರೀ ಆರ್. ಕೃಷ್ಣಸ್ವಾಮಿಐಯ್ಯರ್, 1926.)

† ತಮ್ಮ ಹಿತಕ್ಕೆ ತಾವೇ ವಿರೋಧಿಗಳಾಗುವ, ವಿರೋಧಿಗಳಾಗುವಂತೆ ಮಾಡುವ ವಿಚಾರವನ್ನು ಬರ್ಕೆಯವರ ರಾಜ್ಯಭಾರದಲ್ಲಿ ನೋಡಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಅನುಷ್ಠಾನ ವಿಕಾರಾದಿಗಳನ್ನು ಹೊಂದುವವರೂ ಹೊಂದಿಸುವವರೂ ಎಲ್ಲರೂ ಮೋಹವ ಹಡಗಿನಲ್ಲಿ ಕುಳಿತು ಅನಿರ್ದಿಷ್ಟ ಜೀವನ ಯಾತ್ರೆಗೆ ಯತ್ನಿಸಿ ಗುರಿಯಿಲ್ಲದೆ ಕೆಡುತ್ತಾರೆ. ರಾಜನೀತಿಯಲ್ಲಿ ಕಂಡ ಈ ಎಚ್ಚರಿಕೆಯನ್ನೂ ಆತ್ಮಜ್ಞಾನವನ್ನೂ ಹೊಂದದಿರುವ ಮತ್ತು ಸಂಖ್ಯಾಬಲ, ಸಮಾಜ ಬಲ ಹೆಚ್ಚು ಮಾಡಿಕೊಳ್ಳಬೇಕೆಂಬ ಸಾಮಾನ್ಯರಿಂದ ಇಂತಹ ಕುಹಕ ಯತ್ನಗಳು ನಡೆಯುತ್ತವೆಂದು ಬಲ್ಲವರು ಹೇಳುತ್ತಾರೆ. ಸಂಸ್ಕೃತಿಯ ಉತ್ತಮಹಂತದಲ್ಲಿರುವವರು ಈ ಕೆಲಸಕ್ಕೆ ಕೈಹಾಕುವುದಿಲ್ಲ. ಕೆಳಗಿನ ಹಂತದವರನ್ನು ಹಠಾತ್ತಾಗಿ ಮೇಲಕ್ಕೇರಿಸುವ ಕುಹಕಕ್ಕೆ ವ್ಯವಹಾರದಲ್ಲಿ ಅನುಮತಿ ಅವಕಾಶಗಳಿಲ್ಲ. ಆಚಾರವೂ ಒಪ್ಪುವುದಿಲ್ಲ. ಕೆಳಗಿನ ಹಂತದವರು ಮೇಲಿನ ಹಂತದಲ್ಲಿರುವವರನ್ನು ಅಸೂಯಾದಿಗಳಿಂದ ಕೆಳಗಿಳಿಸಲು ಕುಹಕೋಪಾಯಗಳನ್ನು ನಡೆಸುವರು; ಸ್ವಾಚಾರಾನುಷ್ಠಾನ ಭ್ರಷ್ಟರಾಗುವಂತೆ ಮಾಡುವರು. ಯಾರು ಇಂತಹ ಕುಹಕವ್ಯಾಪಾರಗಳಲ್ಲಿ ಪ್ರವೇಶಿಸುವರೋ ಅವರು ಕೆಳಗಿನ ಹಂತದಲ್ಲಿರುತ್ತಾರೆಂಬುದನ್ನು ನಿರ್ವಿವಾದವಾಗಿ ಸ್ವತ ಏವ ಒಪ್ಪಿಕೊಂಡು ಪ್ರಮಾಣ ಮಾಡಿದಂತಾಗುತ್ತದೆ. ಇದು ರಾಜನೀತಿಯನ್ನು ದುರುಪಯೋಗಪಡಿಸಿಕೊಳ್ಳುವ ಕುಹಕವೇ ಹೊರತು ಜನತೆಯನ್ನು ಉದ್ಧರಿಸುವುದಲ್ಲ. ಇದರ ಜತೆಗೆ, ರಾಜನೀತಿಯನ್ನು ತಿಳಿಯದೆ ಆಚಾರವನ್ನೂ ರಾಜನೀತಿಯನ್ನೂ ಪ್ರತ್ಯೇಕಿಸಿ, ರಾಜನೀತಿ ಶಾಸ್ತ್ರಾಧ್ಯಯನಕ್ಕೆ ಬಹಿಷ್ಕಾರ ಹಾಕಿ ಜನತೆಯು ಕುಹಕಕ್ಕೆ ಬಲಿಯಾಗುವುದನ್ನು ಆಚಾರ ಶ್ರೇಷ್ಠರ ಅಸೂಯೆಯು ವೀಕ್ಷಿಸಬಹುದು ಮತ್ತು ಕುಲಕ್ಕೆ ಹುಟ್ಟಿದ ಕೊಡಲಿ ಕಾವಿನಂತೆ ವ್ಯವಸಾಯ ಮಾಡಬಹುದು.

ಬೇರೆಯವರ ಅನುಷ್ಠಾನ ಆಚಾರಗಳನ್ನು ಪ್ರತಿಗ್ರಹಿಸುವ ಅನುಷ್ಠಾನಾಂತರ, ಆಚಾರಾಂತರಗಳು ಋತಕ್ಕೆ ವಿರೋಧವಾಗಿ, ಋಣ ಪರಿಹಾರಕ್ಕೆ ಅವಕಾಶವಿಲ್ಲದೆ, ಹೊಸ ಋಣ ಪ್ರಾಪ್ತಿಯಾಗದೆ ಪ್ರಾಣಿಗಳ ಮೂಕಜೀವನವನ್ನೂ ಬಾವಲಿಗಳಂತೆ(ಬ್ಯಾಟ್) ಉಭಯಭ್ರಷ್ಟತೆಯನ್ನು ಅನುಕರಿಸುವುವು. ಹೀಗೆ ಸಂಸ್ಕೃತಿಯ ಹಂತದಿಂದ ಕೆಳಗಿಳಿದು ಪ್ರಾಣಿವರ್ಗ, ಜಲಚರ ವರ್ಗಕ್ಕೆ ಇಳಿದು ಅನಂತರ ಪುನಃ ಸಂಸ್ಕೃತಿಯ ಹಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನು ಏರಬೇಕಾಗುತ್ತದೆ. ಈ ಮಧ್ಯೆ ಅಸೂಯಾದಿ ಗುಣಗಳು ಜನಿಸುವುದರಿಂದ ವಿಷವು ಹರಡಿ ಸರ್ವಕ್ಲೇಶಕ್ಕೆ ಕಾರಣವಾಗುತ್ತದೆ.

ಮಿತಿಯನ್ನು ಮೀರುವುದರಿಂದ ಅಥವಾ ಮಿತಿಯಿಂದ ಕೆಳಗೆ ಇಳಿಯುವುದರಿಂದ ಸ್ತ್ರೀ ಪುರುಷ ದೇಹಿಗಳ ಅನುಷ್ಠಾನ ವ್ಯಾಪಾರಗಳಲ್ಲಿ ವೈಲಕ್ಷಣ್ಯವು ಕಾಣುವುದು. ಅತಿಯಾಸೆ, ದುರಾಸೆ ಮೊದಲಾದುವು ಗಳಿಂದ ಈ ವಿಲಕ್ಷಣ ವ್ಯಾಪಾರಗಳು ತಾಂಡವವಾಡುವುವು. ಇವು ಆಚಾರ ವ್ಯವಹಾರಗಳಲ್ಲಿ ಆಂದೋಳನಕ್ಕೆ ಕಾರಣವಾಗುವುವು. ಸಮತೆ ಸಮಾಧಾನಗಳು ಕಲಕಲ್ಪಡುವುವು (ಕದಡಲ್ಪಡುವುವು.) ದೈವೀ ಸಂಪತ್ತಿನ ಹೆಸರಿನಲ್ಲಿ ಆಸುರೀ ಸಂಪತ್ತು ಪ್ರಬಲವಾಗಿ ಕೆಲಸಗಳು ಆರಂಭ ವಾಗುವುವು. ಆಚಾರ ವ್ಯವಹಾರ ಶಾಸ್ತ್ರಗಳಲ್ಲಿ ಇರುವುದನ್ನು ಅವರವರ ಕಾಮನಾ ದೃಷ್ಟಿ ಪಥಕ್ಕೆ ತಕ್ಕಂತೆ ವಿವರಿಸಲು ಯತ್ನವಾಗುವುದು ಮನಸ್ಸಿನಲ್ಲಿ ಒಂದು; ಮಾತಿನಲ್ಲಿ ಮತ್ತೊಂದು; ಕಾರ್ಯದಲ್ಲಿ ಇನ್ನೊಂದು ಎಂಬ ಕುಹಕಗಳು ಮನುಷ್ಯ ಸಾಧಾರಣವಾದುದರಿಂದ ಅವುಗಳ ದೆಸೆಯಿಂದ ತಪ್ಪಿಸಿಕೊಳ್ಳಲು ಎಚ್ಚರಿಕೆ ಕಾರ್ಯಕ್ರಮಗಳನ್ನು ರಾಜನೀತಿಯು ಉದಾಹರಿಸುವುದು. ಕುಹಕಗಳನ್ನು ಸಹಿಸುವುದಕ್ಕೂ ಎದುರಿಸುವುದಕ್ಕೂ, ಗೆಲ್ಲುವುದಕ್ಕೂ, ಔದಾಸೀನ್ಯದಿಂದ ತಿರಸ್ಕರಿಸಿ ಮನಸ್ಸನ್ನು ಕ್ಲೇಶಕ್ಕೆ ಗುರಿಪಡಿಸದಿರುವುದಕ್ಕೂ ಉಪಾಯಗಳು ಉಕ್ತವಾಗಿವೆ. ರಾಜನೀತಿ ಜ್ಞಾನವಿಲ್ಲದೆ ಪ್ರಯೋಗಿಸಿದ ಕುಹಕಗಳೂ ತನ್ನಿವಾರಣ ಯತ್ನಗಳೂ ವಿಫಲವಾಗುವುವು. ಆದುದರಿಂದ ಜನಗಳಲ್ಲಿ ಗುಂಪುಗಳು ಏಳುವುವು. ರಾಜನೀತಿ ಜ್ಞಾನ ರಹಿತವಾದ ಗುಂಪುಗಳೂ ಸಹ ಅವನತಿಯ ಕಡೆಗೇ ಚಲಿಸಿ ಅವಸಾನವನ್ನು ಹೊಂದುವುವು. ಪ್ರಗತಿ ಸಾಧನೆಗೆ ಅಡ್ಡಿ ಆತಂಕಗಳು ಉಂಟಾಗುವುವು.

ರಾಜನೀತಿ ಜ್ಞಾನವಿಲ್ಲದಿರುವುದರಿಂದ ಏನೂ ತೋರದೆ, ಧರ್ಮ- ಆಚಾರದ ಹೆಸರಿನಲ್ಲಿ ಆಚಾರ ಪ್ರಮುಖರಿಂದ ಗುಂಪುಗಳು ಉತ್ಸಾಹ ಪೂರ್ವಕವಾಗಿ ಕೆಲಸ ನಡೆಸುವಂತಾದರೂ, ಇವು ಆಚಾರದ ಸೋಗಿನಲ್ಲಿ ಪಕ್ಷಗಳೆನಿಸುವುವು; ಪಂಚವಲಯಗಳಲ್ಲಿ ರಾಜ್ಯದ ಮಿತಿ ದಕ್ಷತೆಗಳು ಇಲ್ಲದಿರುವುದರಿಂದ ವಿಮುಖ (ನೆಗೆಟಿವ್) ಅನುಷ್ಠಾನಗಳಾಗಿರುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೀವನದ ಒಂದೊಂದು ಅಂಶವನ್ನು ಬೆಳಸಿ ತಮ್ಮದೇ ಆದುದೆಂದು ಹೇಳುವ ಪಂಥಗಳಿಗೆ ಅನೇಕರು ಮೂಲ ಪುರುಷರಾಗುತ್ತಾರೆ. ಪ್ರಪಂಚದ ಭಾಗವಿಭಾಗಗಳ ಅರಿವು ಇಲ್ಲದೆ ಕೂಪಕೂರ್ಮದಂತೆ ತಮ್ಮ ಪ್ರಪಂಚವೇ ಅಖಿಲ ಪ್ರಪಂಚವೆಂದು ಹೇಳುವವರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಪ್ರಾಕೃತಿಕ ಮತ್ತು ರಾಜಕೀಯ ಭೂಗೋಲ ವಿಷಯಗಳನ್ನು ತಿಳಿದವರೂ ಸಹ ಆಯಾ ಭಾಗಗಳ ಶಾಸ್ತ್ರಕಲೆಗಳ ಮರ್ಯಾದೆಯ ರಹಸ್ಯವನ್ನು ತಿಳಿಯಲಾರದೆ, ತಿಳಿದರೂ ಸಹ ಮಿತಿ ಮೀರಿ ತಮ್ಮ ಮೇಲ್ಮೆಯನ್ನು ಇತರರ ಮೇಲೆ ಹೊರಿಸಿ ಮೆರೆಯಬೇಕೆಂದು ತೋರಿಸಿ ತಪ್ಪು ತಿಳಿವಳಿಕೆಯನ್ನು ಮತ್ತೊಬ್ಬರ ಮೇಲೆ ಹೊರಿಸಲು ಬಲಾತ್ಕರಿಸುವ ಕುಹಕವೂ ಹರಡುತ್ತಿದೆ.*

---

* ಭೂಗೋಲ ಜ್ಞಾನದಲ್ಲಿ ನಿಷ್ಣಾತರೆನಿಸಿಕೊಳ್ಳುವ ಪಾಶ್ಚಾತ್ಯ ವಿದ್ವಾಂಸರೂ ಸಂಸ್ಕೃತಿ, ಕಲೆಗಳಲ್ಲಿ ತಮಗೆ ತೋರಿರುವ ಮಟ್ಟಕ್ಕಿಂತಲೂ ಬ್ರಾಹ್ಮಣ ದೇಶದವರ ಮಟ್ಟವು ಉತ್ತಮವೆಂದು ತಿಳಿದೂ ತಿಳಿಯದಂತೆ ವರ್ತಿಸಿ ತಮ್ಮವನ್ನೇ ಹೊಗಳಿಕೊಳ್ಳುವ ಪರಿಸ್ಥಿತಿಯು ಹೆಚ್ಚಿ ಅದಕ್ಕೆ ತಕ್ಕಂತೆ ಶಾಸ್ತ್ರವನ್ನು ರಚಿಸುವ ಪ್ರಯತ್ನ ಮಾಡಿದ ಕುಹಕವು ವಿಫಲ ವಾಗುವವನ್ನು ಜನತೆಯು ತಿಳಿಯಲಾರದಷ್ಟು ತಮ್ಮ ಪ್ರಭಾವವನ್ನು ಬೀರಿರುತ್ತಾರೆ. ಭಾರತದಲ್ಲಿಯೂ ಗುಂಪು ಬಲವನ್ನು ಹೆಚ್ಚಿಸಿಕೊಳ್ಳು ವುದೇ ಪರಮ ಧ್ಯೇಯವುಳ್ಳ ಜನಗಳು ತಮ್ಮದು ಕೆಳಗಿನ ಹಂತಕ್ಕೆ ಸೇರಿದ್ದೆಂದು ತಿಳಿದಿದ್ದರೂ ಜನರನ್ನು ವಶೀಕರಿಸಿಕೊಳ್ಳುವ ಸಾಧನ ಸಂಪತ್ತುಗಳಿಂದ ವಂಚಿಸುವವರಾಗಿ ಹೆಚ್ಚುತ್ತಿದ್ದಾರೆ. ಈ ಬಗೆಯ ಹಾವಳಿಯಿಂದ ಸದಾಚಾರ ಸಂಪನ್ನತೆಯನ್ನು ರೂಢಿಸಿಕೊಳ್ಳುವವರ ಸಾಮರ್ಥ್ಯ ಕುಗ್ಗಿಹೋಗುವುದರಿಂದ ಆಚಾರಕ್ಕೆ ಗ್ಲಾನಿಯುಂಟಾಗುತ್ತದೆ ವೇದಾಧ್ಯಯನ ಶಾಸ್ತ್ರಗಳಲ್ಲಿ ಗೀರ್ವಾಣ ಭಾಷೆಯಲ್ಲಿ ಅಧಿಕವಾದ ಪಾಂಡಿತ್ಯವಿದ್ದರೂ ಪ್ರಪಂಚದ ಪ್ರಾಕೃತಿಕ ರಾಜಕೀಯ ಭೂಗೋಲ ಭೂ ಪ್ರದೇಶಗಳ ಜ್ಞಾನದಿಂದ ಧರ್ಮ ಶಾಸ್ತ್ರ ವೇದೋಕ್ತಿಗಳನ್ನು ಸಮರ್ಥನೆಗೊಳಿಸಿ ಸಾರ್ಥಕ ಮಾಡದಿದ್ದರೆ ಅಂತಹ ಪಾಂಡಿತ್ಯದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಜ್ಞಾನಾರ್ಜನೆಯ ಪ್ರತಿ ಸೋಪಾನ ಪಂಕ್ತಿಯಲ್ಲಿಯೂ ಎಲ್ಲಾ ಜ್ಞಾನ ಪಂಥಗಳೂ ಕರ್ಮ ಮಾರ್ಗಗಳೂ ಉಪಾಸನಾ ವೈಶಿಷ್ಟ್ಯಗಳೂ ಕೂಡು ಕುಳಿತಿರುತ್ತವೆ. ಪ್ರಪಂಚದ ಜೀವನ ವರ್ತನೆಯಲ್ಲಿ ಪ್ರವೇಶಿಸುವ ಜೀವಿಗೆ ಸಾಮಾನ್ಯ ವಿಷಯ ಸೂಚಕವಾಗಿರುವಂತೆ ಸಮಸ್ತ ಗ್ರಂಥಗಳು ಸಹಕರಿಸುತ್ತವೆ. ಹೀಗಿದ್ದರೂ ಕ್ರಿಯಾರಂಗದಲ್ಲಿ, ಕಾರ್ಯಕ್ಷೇತ್ರದಲ್ಲಿ ಪ್ರತಿ ವ್ಯಕ್ತಿಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ ಹೊಸ ಹೊಸ ಮಾರ್ಗದಲ್ಲಿಯೇ ನಡೆಯುತ್ತಿರುವ ವಿಚಾರವು ಅವಿವಾದಾಸ್ಪದವಾಗಿದೆ. ಮತ್ತು ಶಾಸ್ತ್ರೀಯವೂ ತರ್ಕ ಬದ್ಧವೂ ಆಗಿ ಆಚಾರದ ನೆರಳಿನಲ್ಲಿ ರಂಜಿಸುವುದು.

### ಪಂಥಕಾರಣ- ಅಹಂಕಾರ :

ಕಾರ್ಯ ಕಾರಣ ರಹಸ್ಯವನ್ನು ಅರಿಯದ ಜನ ಸಮೂಹವು ಬೆರಗಾಗುವಂತೆ ಕೆಲವು ಚಮತ್ಕಾರಗಳು (ಪವಾಡಗಳು)† ಕೆಲವು ಶ್ರೇಷ್ಠ (ಪ್ರಧಾನ) ವ್ಯಕ್ತಿಗಳ ಜೀವನದಲ್ಲಿ ಕಂಡುಬಂದು ಸಾಮಾನ್ಯ ಜನತೆಯು ಅಂತಹವರ ಪ್ರಭಾವಕ್ಕೆ ಬಲಿಯಾಗುವುದು ಸ್ವಭಾವವಾಗಿದೆ.

ಕೆಲವು ಸನ್ನಿವೇಶಗಳಲ್ಲಿ ಅಹಂಕಾರ, ವಿದ್ವಾಂಸರಲ್ಲಿ ಕಾಣುವ

---

ಪಾಂಡಿತ್ಯವುಳ್ಳವರಿಗೂ ಸಮಾಜ, ದೇಶಗಳಿಗೂ ಅಪಾರವಾದ ನಷ್ಟ, ಹಾನಿ, ಉಪದ್ರವಗಳು ಸಂಭವಿಸುವುವು. ಭೂಗೋಲಾಜ್ಞಾನ ರೋಗಕ್ಕೆ ಅನೇಕ ಪಂಡಿತರೂ, ವೈದಿಕರೂ, ಆಧುನಿಕ ಪದವೀಧರರೂ ಗುರಿಯಾಗಿ ರುವ ಪರಿಸ್ಥಿತಿಯು ಶೋಚನೀಯವಾದುದು.

† ಸಾಧಿಸಲ್ಪಟ್ಟ ದೇವತ್ವಸಿದ್ಧಿಗೆ ಸಂಬಂಧಪಟ್ಟ ಪವಾಡಗಳು, ಆಶ್ರಿತರಿಗೆ ಋಣಕರ್ಮಗಳಿಂದುಂಟಾಗಿರುವ ಅಹಿತ ಅನುಭವಗಳನ್ನು ಕರ್ಮ ಮೀಮಾಂಸಾಶಾಸ್ತ್ರರೀತ್ಯಾ ಹಿತವನ್ನಾಗಿ ಮಾಡಲು ಯತ್ನಿಸಬಹುದು. ಈ ಪವಾಡಗಳ ಬಣ್ಣವನ್ನು ಹೊಂದಿದ ಕಣ್ಣುಕಟ್ಟು ಇಂದ್ರಜಾಲಾದಿ ಬುದ್ಧಿ ಕುಶಲತೆಯ ಕಾರ್ಯಗಳು ಶಾಸ್ತ್ರಕ್ಕೂ, ಮತಕ್ಕೂ ವಿರೋಧ ವಾಗಿದ್ದು ಜನತೆಯನ್ನು ಮೋಸಗೊಳಿಸಿ ದುಃಖಕ್ಕೀಡು ಮಾಡುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಪರಸ್ಪರ ತುಚ್ಛ ಭಾವನೆ ಮಾತ್ಸರ್ಯ; ಪ್ರಮುಖರಾದವರ ಆಚರಣೆಗೂ ಸೂಕ್ತಿಗೂ ಶಾಸ್ತ್ರಕ್ಕೂ ಪರಸ್ಪರ ಹೊಂದಿಕೆ ಇಲ್ಲದೇ ಇರುವುದು- ಇತ್ಯಾದಿ ದೋಷಗಳಿಂದ ವೈಷಮ್ಯ ವಿರಸಗಳು ಉಂಟಾಗಿ ಶಾಸ್ತ್ರವನ್ನು ಪ್ರತಿಪಾದಿಸುವವರನ್ನು ಎದುರಿಸುವ ಘಟ್ಟದಲ್ಲಿ ಶಾಸ್ತ್ರವನ್ನೇ ಎದುರಿಸುವ ಪ್ರಯತ್ನಗಳು ನಡೆಯುವುವು, ಗ್ರಂಥಗಳು ಸೃಷ್ಟವಾಗುವುವು. ಸ್ವೋತ್ಕರ್ಷವನ್ನು ಸಮರ್ಥಿಸುವುದಕ್ಕಾಗಿ ಪರದೂಷಣೆ ಎಂಬ ಕುತ್ಸಿತ ವೃತ್ತಿಯನ್ನು ಬೋಧಿಸುವ ಗ್ರಂಥಗಳು ಕಲ್ಪಿತವಾಗುವುವು. ಬರೆವಣಿಗೆ ಪ್ರಚಾರವು ಹೆಚ್ಚಿರುವ ಕಾಲದಲ್ಲಿ ಬರೆದಂಥ ತಾಳೆಗರಿಯ ಪುಸ್ತಕಗಳೆಲ್ಲವೂ ಆರ್ಷೇಯಗಳೆಂಬ ಕುರುಡು ನಂಬಿಕೆಯೂ ಹರಡುವುದು. ಈ ಬಗೆಯ ಸಂಘಟನೆಗಳಲ್ಲಿಯೇ ತ್ರಿಕಾಲಾಬಾಧಿತವಾಗಿರುವ ಏಕೈಕವಾದ ಬ್ರಾಹ್ಮಣಾಚಾರವು ವಿವಿಧ ಪಂಥಗಳಿಗೆ ಗುರಿಯಾಗಿ ಬೇರೆ ಬೇರೆಯಾಗಿ ಕಾಣುವಂತೆ ಪ್ರಸಂಗಗಳು ನಡೆದಿರುತ್ತವೆ. ಬ್ರಾಹ್ಮಣ ದೇಶದಲ್ಲಿಯೇ ಜೈನಾಚಾರ, ಬೌದ್ಧಾಚಾರ, ಬಸವಾಚಾರ, ವಲ್ಲಭಾಚಾರ, ರಾಮಾನುಜಾಚಾರ, ಮಧ್ವಾಚಾರ ಇತ್ಯಾದಿಗಳು ಬೇರೆಯಾಗಿರುವಂತೆ ವಿರುದ್ಧವಾದ ಮತ್ತು ಅನುರೋಧವಾದ ಪ್ರಯತ್ನಗಳು ನಡೆದಿವೆ. ಇತರ ದೇಶಗಳಲ್ಲಿಯೂ ಪರಮಾರ್ಥಜ್ಞಾನಕ್ಕೆ ಸರಿಯಾದ ಆವರಣವಿಲ್ಲದೆ ಸಂಕುಚಿತವಾದ ಪಂಥಗಳು ತಲೆದೋರಿವೆ.

ಪಂಡಿತರಾದ ಶ್ರೋತ್ರಿಯರೂ ಸಹ, ತಾವು ಋಷಿಗಳು, ಋಷಿ ವಂಶಜರು ಎಂಬುದನ್ನು ಮರೆತು ಹಳೆಯ ಗ್ರಂಥಗಳಿಗೆ ಮಾತ್ರ ಬೆಲೆ ಕೊಡುವ ಶೋಚನೀಯ ಪ್ರಸಂಗವನ್ನು ಕಾಳಿದಾಸ, ಭವಭೂತಿಗಳೂ ಉಲ್ಲೇಖಿಸಿರುತ್ತಾರೆ.

ಜೀವನ ಸಂಗೀತ ಪ್ರಸ್ತಾರದಲ್ಲಿ ಸುಮಾರು 250 ಕೋಟಿ ಸಂಖ್ಯೆ ಪ್ರಜೆಗಳಿರುವ ಪ್ರಪಂಚದಲ್ಲಿ ಬ್ರಾಹ್ಮಣಾಚಾರವು ಎಷ್ಟು ಕವಲುಗಳಾಗಿ ಪ್ರವಹಿಸುತ್ತಿದೆ ಎಂಬುದನ್ನು ನಿಷ್ಪಕ್ಷಪಾತವಾಗಿ ರಾಜನೀತಿ ವ್ಯವಹಾರ ಕ್ರಮಗಳಿಂದ ವಿಮರ್ಶಿಸುವವರು ಇನ್ನೂ ವಿರಳರಾಗಿರುತ್ತಾರೆ. ಈ ವಿರಳತೆಯು ಕಡಿಮೆಯಾಗಿ ನಾಶವಾದಷ್ಟೂ ದೇಶೋನ್ನತಿ ಕಲ್ಯಾಣಾಭ್ಯುದಯಗಳು ಸಾಧಿಸಲ್ಪಡುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯ ದೇಹಿಗಳ ಮಟ್ಟದಲ್ಲಿ, ಅಭೇದದ, ಅಖಂಡದ ಬ್ರಹ್ಮಾಂಡದಲ್ಲಿ ಭೇದಗಳೂ ಖಂಡಗಳೂ ವ್ಯವಹಾರದಲ್ಲಿ ಕಾಣುವುದು ಸಹಜ. ಆತ್ಮನ ಲಕ್ಷಣವು 'ಜ್ಞಾನ' ವಾದುದರಿಂದ ಜ್ಞಾನವಿಲ್ಲದ ದೇಹಿಯು ಇಲ್ಲವೇ ಇಲ್ಲ. ಆದರೆ ಜ್ಞಾನಕ್ಕೆ ಮರೆಯುಂಟಾಗಿರುವುದರಿಂದ ಅಜ್ಞಾನಿಗಳೆಂದು ಹೇಳಿಸಿಕೊಳ್ಳಲ್ಪಡುವವರು ಕಾಮಾದಿಗಳಿಗೆ ಬಲಿಯಾಗಿ 'ಐಶ್ವರ್ಯಮದಮತ್ತೋ ಹಿ ಸರ್ವೋಽಹಮಿತಿ ಮನ್ಯತೇ' ಎಂಬಂತೆ 'ತಾವೇ ಸರ್ವವು' ಎಂದು ವಿಜೃಂಭಿಸುತ್ತಾರೆ. ಆದರೆ ಸ್ಥಿತಪ್ರಜ್ಞರ ಮಾತು, ಧ್ವನಿ, ಕೆಲಸ ಸ್ಥಿತಿಗಳಿಂದ 'ಸರ್ವೋಽಹಂ' ಎಂಬ ತತ್ತ್ವಾರ್ಥವು ಸ್ವಯಂ ಪ್ರಕಾಶವಾಗುತ್ತದೆ.

ಹಿಂದೆ ಹೇಳಿದಂತೆ ಬ್ರಾಹ್ಮಣಧರ್ಮ ಬ್ರಾಹ್ಮಣಾಚಾರಾನುಯಾಯಿಗಳು ಬೇರೆ ಬೇರೆ ವಿಧವಾಗಿ ಬೇರೆ ಬೇರೆ ಹಂತಗಳಲ್ಲಿ ಆಚಾರ - ಅನುಷ್ಠಾನ ಶಾಖೆಗಳನ್ನು ಹೊಂದಿದ್ದರೂ ಅನುಸಂಧಾನವೆಂಬ ಆಚಾರ ಮೂಲವನ್ನು ಅಳವಡಿಸಿಕೊಂಡಿರುವುದರಿಂದ ಸರ್ವರೂ ಬ್ರಾಹ್ಮಣ ಬಿರುದಿಗೆ ಅರ್ಹರಾಗಿರುತ್ತಾರೆ. ಮತ್ತು ಬ್ರಾಹ್ಮಣಾಚಾರವನ್ನು ಅವರವರ ಮಿತಿಯಲ್ಲಿ ಆಯಾ ಆವರಣದಲ್ಲಿ ಗುಣಕರ್ಮಾನುಸಾರ ಅನುಷ್ಠಾನ ಮಾಡುವವರಾಗಿರುತ್ತಾರೆ. ದೋಷಯುಕ್ತವಾಗಿದ್ದರೂ ಭಗವದ್ಗೀತೆ (18-47, 48) ಉಪದೇಶಿಸಿರುವಂತೆ ಸ್ವಾಭಾವಿಕ ಸಹಜ ಕರ್ಮಾಚರಣೆಯು ಕಿಲ್ಬಿಷವನ್ನುಂಟುಮಾಡುವುದಿಲ್ಲವಾದುದರಿಂದ, ಮಾನವತೆಯಲ್ಲಿ ಪಂಥ ಬಾಹುಲ್ಯವು ಅಸಂಖ್ಯಾತವಾದ ಸನ್ನಿವೇಶಗಳಲ್ಲಿ ಉಂಟಾಗುವುದು ಯಾರು ಯಾರು ಯಾವ ಯಾವ ಮಿತಿಗೆ ಒಳಪಟ್ಟಿರುತ್ತಾರೋ ಆ ಮಿತಿಯಲ್ಲಿ ಜೀವನದ ಪರಮ ಲಕ್ಷ್ಯವನ್ನು ಪ್ರಧಾನವಾಗಿಟ್ಟುಕೊಂಡು ವರ್ತಿಸುವುದು ಶ್ರೇಷ್ಠವೆಂದೂ ಸಹಜವೆಂದೂ ಹಿಂದೆಯೇ ಹೇಳಿದೆ. ಕುಟುಂಬ, ಸಮಾಜ, ಪ್ರದೇಶ, ದೇಶ, ಮಾನವತೆ ಮೊದಲಾದ ಗುಣಭಾವಗಳು ವ್ಯಕ್ತಿಯನ್ನು ಆಯಾ ವರ್ತನೆಯ ಹೊಣೆಗಾರಿಕೆಗೆ ಗುರಿಪಡಿಸಬಹುದು ಆದರೆ ವ್ಯಕ್ತಿಯು ಆ ಹೊಣೆಗಾರಿಕೆಯ ಮಟ್ಟವನ್ನು ಮೀರಿ ಸ್ವತಂತ್ರವಾಗಿ ಪ್ರವರ್ತಿಸಿ ತನ್ನ ಮಾರ್ಗವನ್ನು ಇತರರ ಮೇಲೆ ಹೊರಿಸುವ ಸಾಮರ್ಥ್ಯವನ್ನು ಹೊಂದಿರಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸಾಮಾನ್ಯವಾಗಿ ಸಂಸ್ಕೃತವಾದ ಆಚಾರಪಾಲನೆಯಲ್ಲಿ ಆಸಕ್ತರೂ ಶ್ರೇಯಃಕಾಮಿಗಳೂ ಆದವರು ಮಿತವಾದ ಮಧ್ಯಮ ಮಾರ್ಗದಲ್ಲಿದ್ದು ಕ್ರಮೇಣ ಶ್ರೇಯಸ್ಸಿನ ಸೋಪಾನಗಳನ್ನು ಏರಬೇಕೆಂದು ತಿಳಿದಿರುತ್ತಾರೆ. ಅಂತಃ ಮತ್ತು ಬಹಿಃ ಏಕಪ್ರಕಾರವಾಗಿರುವುದು ಉತ್ತಮ. ಅಂತಃ ಇಲ್ಲದಿದ್ದರೂ ಬಹಿಃ ತಮ್ಮ ತಮ್ಮ ಮಿತಿಯಲ್ಲಿ ಆಚಾರವನ್ನು ಸಾಧಿಸಿ ಇತರರಿಗೆ ಸಂದೇಹಾದಿಗಳು ಆಗದಂತೆಯೂ ಆವರಣವು ಕೆಡದಂತೆಯೂ ನಿರ್ವಂಚನೆಯಾಗಿ ವರ್ತಿಸುವುದು ಮಧ್ಯಮ. ಅಂತಃ ಮತ್ತು ಬಹಿಃ ವಿರೋಧವಾಗಿ ವರ್ತಿಸುವುದು ಅಧಮ. ಅಂತಃ ಆಚಾರವನ್ನು ಸಾಧಿಸುತ್ತಾ ಬಹಿಃ ವಿರೋಧ ವರ್ತನೆಯನ್ನು ಹೊಂದಿರುವುದು ವಂಚನೆಯಾದುದರಿಂದ ಅಧಮವಾಗಿಯೇ ಪರಿಣಮಿಸುವುದು.

ಆಚಾರ ರಹಸ್ಯಜ್ಞಾನವೂ ಅನುಸಂಧಾನಪರತೆಯೂ ಇಲ್ಲದ ಅನುಷ್ಠಾತೃಗಳ ಆಚಾರವು ಶುಷ್ಕವಾಗಿ ಕೇವಲ ಉಚ್ಚನೀಚ ಭಾವನೆಗೆ ಅವಕಾಶವಾಗುವುದು. ನೀಚತ್ವಕ್ಕೆ ಗುರಿಯಾದವರು ಅನುಷ್ಠಾನಕ್ಕೆ ಅನರ್ಹರೆಂಬ ಭಾವನೆಯೂ ಮೂಡುವುದು. ಆಚಾರಶೀಲರೆನಿಸಿಕೊಂಡವರು ಜ್ಞಾನಬಾಹಿರವಾದ ಮತ್ತು ಅರ್ಥ ಪರವಾಗಿ ಪರಮಾರ್ಥವನ್ನು ದೂರೀಕರಿಸುವ ಸನ್ನಿವೇಶದಲ್ಲಿ ವರ್ತಿಸುವುದಾದರೆ ಸಾಮಾನ್ಯರ ಪಾಡೇನು ? ಇಂತಹ ಸಂದರ್ಭಗಳಲ್ಲಿ ಧನಲೋಭದಿಂದ, ಅಧಿಕಾರ ಲೋಭಾದಿಗಳಿಂದ ಕೂಡಿದ ಪರಕೀಯರು,–ಪರಸ್ಪರ ವಿರೋಧಿಗಳೆಂದು ವ್ಯವಹಾರ ಮಾಡುವ ಮೇಲ್ಕಂಡ ಉಚ್ಚನೀಚ ಭಾವ ಗ್ರಸ್ತರಾದ ದೇಶೀಯರನ್ನು ಭೇದಿಸಿ ದೇಶವನ್ನು ಕಬಳಿಸುವರು ; ಅಸಹನೆ, ಅಸೂಯೆಗಳಿಂದ ತಮ್ಮ ಸಂಕುಚಿತ ಪಂಥಗಳ ಅನುಷ್ಠಾನಕ್ಕೆ ಜನಗಳು ಬಲಿಯಾಗುನಂತೆ ಮಾಡುವ ಪರಿಸ್ಥಿತಿಗಳನ್ನು ಕಲ್ಪಿಸುತ್ತಾರೆ. ಜನಕ್ಷೋಭೆ, ದೇಶಕ್ಷೋಭೆಗಳಿಂದ ಧರ್ಮ – ಆಚಾರಗಳ ಅನುಷ್ಠಾನಕ್ಕೂ ಕ್ಷೋಭೆಯುಂಟಾಗುವ ಪರಿಸ್ಥಿತಿಯಲ್ಲಿ ಶ್ರದ್ಧೆಯೂ ಆಸ್ಥೆಯೂ ಉಳ್ಳ ಮಹನೀಯರ ಮೊರೆಯು (ಪ್ರಾರ್ಥನೆಯ) ಪ್ರತಿಫಲವಾಗಿ ಅನುಷ್ಠಾನ ದೇವತೆಯು ಉದಾರರಾದ ಪ್ರಮುಖರನ್ನು ಪ್ರೇರಿಸಿ ತನ್ಮೂಲಕ

CC-0. In Public Domain. Gurukul Kangri Collection, Haridwar

ಭಗವತ್ಪ್ರೇಮಭಾವಕ್ಕೆ ಪಾತ್ರರಾದ ಸಾಮಾನ್ಯರೂ ಸಹ ಅನುಷ್ಠಾನಕ್ಕೂ

Digitized by Arya Samaj Foundation Chennai and eGangotri

ಅರ್ಹರು ಎಂಬುದನ್ನು ಪ್ರಚಾರಮಾಡಿ ಸಾಮಾನ್ಯರನ್ನು ಪ್ರಚೋದಿಸುವ ಪರಿಸ್ಥಿತಿಯಾಗುವುದು.

ಹೀಗೆ ಅಸ್ತಿತ್ವವನ್ನೂ ಗೌರವವನ್ನೂ ಹೊಂದಿದ ಸಾಮಾನ್ಯರು ತಮ್ಮ ತಮ್ಮ ಪಂಥನಾಯಕರ ಆಶ್ರಯದಲ್ಲಿ ಪಂಥೋಕ್ತ ಅನುಷ್ಠಾನಗಳನ್ನು ಮಾಡುವವರಾಗಿ ಪರಕೀಯರನ್ನು ಎದುರಿಸುವ ಮಹಾಶಕ್ತಿಯನ್ನು ಧರಿಸುವವರಾಗುವರು. ಇಂತಹ ಪಂಥಾನುಯಾಯಿಗಳ ವೀರ ಕರ್ಮ ಪ್ರೋತಗಳಿಂದ ಪರಕೀಯ ಬಾಧಾ ಸಮುದ್ರದಲ್ಲಿ ಮುಳುಗಿ ಹೋಗುವ ಪ್ರದೇಶಗಳೂ, ಮೂಲಾಚಾರವೂ, ಅನುಷ್ಠಾನಗಳೂ ರಕ್ಷಿಸಲ್ಪಡುವುವು. ಮೂಲಾಚಾರಕ್ಕೆ ಅನುರೋಧವಾಗಿದ್ದು ತಂತಮ್ಮ ಪಂಥಗಳ ಪ್ರಕಾಶಕ್ಕೆ ಅವಕಾಶವಿದ್ದರೂ ಸಮಯೋಚಿತವಾಗಿ ಧರ್ಮಾನುಷ್ಠಾನ ರಕ್ಷಕಗಳಾಗುವುವು. ಪರಕೀಯ ಸಹವಾಸ ಸಂಪರ್ಕಾದಿಗಳಿಂದ ಮಾನಸಿಕ ಶಾರೀರಕ ವ್ಯಾಪಾರಗಳು ಕುಂಠಿತವಾಗುತ್ತವೆ. ಮೂಲಾಚಾರದ ರಹಸ್ಯ ತತ್ವಜ್ಞಾನವು ಮರೆಯಾಗಿರುವಾಗ ಪರಕೀಯ ದಾಸ ಮನೋಭಾವಗಳಿಂದ ಪಂಥ ವೈಲಕ್ಷಣ್ಯಗಳು ಅನಿವಾರ್ಯವಾಗಿ ಉದಯಿಸುವುವು. ಅಧಮ ವರ್ತನೆಗಳೇ ಹೆಚ್ಚುವುವು.

ಮೇಲೆ ವಿವರಿಸಿದ ವರ್ತನೆ–ವರ್ಣ–ವೃತ್ತಿ–ಪಂಥ–ಅನುಷ್ಠಾನಗಳೆಲ್ಲವೂ ವ್ಯಕ್ತಿ ಸ್ವಾತಂತ್ರ್ಯವನ್ನೂ ಋಣ ಭಾವಾದಿಗಳನ್ನೂ ಪ್ರಧಾನವಾಗಿ ಸೂಚಿಸುವ 'ಸ್ವ' ಶಬ್ದಾರ್ಥದ ವೈಶಿಷ್ಟ್ಯದಿಂದ ಸ್ವಾಚಾರ, ಸ್ವಕರ್ತವ್ಯ ಕರ್ಮ (ಸ್ವಧರ್ಮ), ಸ್ವಕರ್ಮಗಳೇ ಆಗಿರುತ್ತವೆ. ಒಬ್ಬ ವ್ಯಕ್ತಿಯ ಸ್ವಾಚಾರಕ್ಕೆ ಋಣದ ಪ್ರಮಾಣಾನುಸಾರವಾಗಿ ವ್ಯಕ್ತಿ, ಕುಟುಂಬ, ಸಮಾಜ, ಪ್ರದೇಶ, ದೇಶ, ವಿಶ್ವಗಳು ಎಲ್ಲವೂ ಹೊಣೆಗಾರಿಕೆಯನ್ನೂ ಹೊತ್ತಿವೆ. ಈ ಪ್ರಮಾಣಕ್ಕೆ ತಕ್ಕಂತೆ ಇರುವ ಸಮನ್ವಯ ವರ್ತನೆಯು ಮಧ್ಯಮ ಮಾರ್ಗವಾದ ಸ್ವಾಚಾರವೆನಿಸುವುದು. ಇದರ ಅನುಷ್ಠಾನದಿಂದ ಋಣಗಳೆಲ್ಲವೂ ಆಯಾ ಪ್ರಮಾಣಕ್ಕೆ ತಕ್ಕಂತೆ ಸರ್ವರಿಗೂ ಹಂಚಿಕೆಯಾಗಿ ಅನುಭವಿಸಲ್ಪಡಬೇಕಾಗುವುದು. ಸ್ವಂತ ವಿವೇಚನೆ ಬರುವವರೆಗೂ ವ್ಯಕ್ತಿಯು ಒಂದು ಅವಸ್ಥೆಯಲ್ಲಿ ಕುಟುಂಬಾದಿಗಳು ಆ ವ್ಯಕ್ತಿಯ ಸ್ವಾಚಾರಕ್ಕೂ ಶ್ರೇಯಸ್ಸಿಗೂ ಅಥವಾ ಅವನತಿಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬದ್ಧರಾಗುವರು ; ಪ್ರತ್ಯುತ್ಪನ್ನ ಮತಿಯು ಉಂಟಾದಾಗ ಆ ವ್ಯಕ್ತಿಯು ತನ್ನ ಮತ್ತು ಕುಟುಂಬಾದಿಗಳ ಸ್ವಾಚಾರ ವಿಮರ್ಶೆಯ ಮೂಲಕ ಅನುಷ್ಠಾನಾದಿಗಳನ್ನು ರೂಪಿಸಲು ಹೊಣೆಗಾರರಾಗಬೇಕಾಗುವುದು.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೇ ಜನಾಃ |
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ||

ವಿಶಾಲವಾದ ರಾಷ್ಟ್ರಕ್ಕೆ ಅನ್ವಯಿಸುವ, ಗಂಭೀರವೂ ಉನ್ನತವೂ ಮಹಾ ಮಹಿಮೆಯುಳ್ಳದ್ದೂ ಆದ, ಬಹು ಸಂಖ್ಯಾಕ ಜನಗಳಿಗೆ ಕಲ್ಪತರುವಾದ ಅನುಷ್ಠಾನ ವೈವಿಧ್ಯಗಳನ್ನುಳ್ಳ ಆಚಾರವನ್ನು ಒಂದೇ ರಾಷ್ಟ್ರಕ್ಕೆ ಸೇರಿದ್ದರೂ ಸಂಪರ್ಕ – ವ್ಯವಹಾರಗಳಿಗೆ ಅವಕಾಶವಿಲ್ಲದುದರಿಂದ ಸಣ್ಣ ಸಣ್ಣ ಪ್ರದೇಶದ – ಸಮಾಜದ ಜನಗಳು ತಿಳಿಯುವುದಕ್ಕೂ ಅನುಷ್ಠಾನ ಮಾಡುವುದಕ್ಕೂ ಅಸಮರ್ಥರಾಗಿರುತ್ತಾರೆ. ಇಂತಹ ಪರಿಸ್ಥಿತಿಯ ಜನಾಂಗಗಳಲ್ಲಿ ಪ್ರಮುಖರಾಗಿರುವವರನ್ನೂ ದೃಷ್ಟಾದೃಷ್ಟವಿಚಾರಗಳಲ್ಲಿ ತಮ್ಮದೇ ಆಗಿ ಸಿದ್ಧಿಪ್ರದವಾಗುವ ಪಂಥವನ್ನು ಆದರ್ಶವಾಗಿ ಅನುಷ್ಠಾನ ಮಾಡುವವರನ್ನೂ ಜನ ಸಮೂಹವು ಆದರಿಸಿ ಅನುಸರಿಸುವ ಪರಿಸ್ಥಿತಿಯು ಒದಗುವುದು. ಇಂತಹ ಪ್ರಮುಖರು ಪಂಥಪ್ರವರ್ತಕರಾಗಿ ಅನುಯಾಯಿಗಳಿಗೆ ಮಾರ್ಗದರ್ಶಕರಾಗುತ್ತಾರೆ. ಇದರಿಂದ ಪ್ರವರ್ತಕ ವರ್ಗದವರಿಗೂ ಅನುಯಾಯಿ ವರ್ಗದವರಿಗೂ ಸ್ವಪರ ಪ್ರಯೋಜನಗಳು ಕೈಗೂಡುವುವು.

ತಿಳಿವಳಿಕೆಗೆ ನಿಲುಕದಿರಬಹುದಾದ ವಂಶ ಪರಂಪರೆಯೆಂಬ ಸಂಕುಚಿತವಾದ ಸಂಪ್ರದಾಯಾವರಣದ ಮರೆಯಲ್ಲಿ ಪೂರ್ವಾಪರ ವಿಮರ್ಶೆಯು ಕುಂಠಿತವಾಗುವುದು. ತಾತ್ಕಾಲಿಕವಾಗಿ ಕುಹಕವೆಂದು ಕಾಣಬರುವ ಮತ್ತು ಮೊದಲು ಮೊದಲು ಎದುರಿಸಲ್ಪಟ್ಟ ಕ್ರಮೇಣ ಪರಿಚಯವು ಸಂಸ್ಥಾಪಿತವಾದನಂತರ ಮೈತ್ರಿಯಿಂದಲೂ ಶ್ರದ್ಧೆಯಿಂದಲೂ ವಿಮರ್ಶಾ ಪೂರ್ವಕ ಸ್ವಾಗತೀಕರಿಸಲ್ಪಟ್ಟ ಪಂಥಗಳು ಹಿತ ಸಾಧಕಗಳಾಗಿಯೇ ಪರಿಣಮಿಸುವುವು.

ಪ್ರಾದೇಶಿಕ, ಭೌಗೋಲಿಕ ಜ್ಞಾನವಿಲ್ಲದೆ, ಏಕೈಕವಾದ ಬ್ರಾಹ್ಮಣಾಚಾರದ ಪರಮ ತತ್ವವನ್ನು ತಿಳಿಯಲಾರದೆ ಸಂಸ್ಕೃತಿಯಾಗಲೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಚಾರವೆಂಬ ಅಭ್ಯಸ್ತ ಕರ್ಮವಾಗಲೀ ಮಲಿನವಾಗಿರುವಾಗ, ಮೋಹ ಮೌಢ್ಯದ ಬಲೆಯಲ್ಲಿ ಸಿಕ್ಕಿದ ಜನಗಳು ತಮ್ಮ ತಮ್ಮ ಪ್ರಾದೇಶಿಕ ಪ್ರಮುಖರಿಂದ ಪ್ರಚಲಿತವಾದ ಆರ್ಥಿಕ ಮತ್ತು ಪಾರಮಾರ್ಥಿಕಗಳ ಹೆಸರಿನಲ್ಲಿ ಪ್ರಕಟವಾಗುವ ಸಂಕುಚಿತ ಪಂಥವನ್ನು ಹೊಂದುವುದು ಸ್ವಭಾವವಾಗಿರುತ್ತದೆ. ಮತ್ತು ಪಂಥ ಪ್ರವರ್ತಕರ ಹೆಸರಿನಿಂದ ಪ್ರಾಪಂಚಿಕವಾದ ಹಿರಿಮೆಗಾಗಿ ಪ್ರಸಿದ್ಧಿ ಪಡಿಸುವುದು ಸಹಜವಾಗಿರುತ್ತದೆ.

## ಅನುಷ್ಠಾನಗ್ಲಾನಿ (ಧರ್ಮಗ್ಲಾನಿ?)

ಐಹಿಕಾಮುಷ್ಮಿಕ ವಿಷಯಗಳ ಸಾಧನೆಗೆ ವಿಹಿತವಾಗಿರುವ ಆಚಾರದ ತಿಳಿವಳಿಕೆಗೆ ಸಂಕುಚಿತ ದೃಷ್ಟಿ, ಜ್ಞಾನ ಮತ್ತು ಆದರ್ಶಗಳ ಅಭಾವ, ಅನುಷ್ಠಾನ ವೈರೂಪ್ಯ ಮತ್ತು ವೈವಿಧ್ಯ, ವೃತ್ತಿದೋಷ, ಪಂಥ ಪ್ರವರ್ತನೆಗಳ ಸಾಮರಸ್ಯವಿಲ್ಲದಿರುವಿಕೆ ಇವು ಭಂಗವನ್ನುಂಟು ಮಾಡುವುವು. ಸಾಮಾನ್ಯ ಪರಿಸ್ಥಿತಿ ಮತ್ತು ವಿಶೇಷ ಪಂಥಗಳಲ್ಲಿ ಕಾಣಬೇಕಾದ ಐಕ್ಯೈಕವಾದ ಆಚಾರದ ಮೂಲತತ್ವವನ್ನು ಆಗಾಗ್ಗೆ ರೂಪಿಸಿ ರೂಢಿಸಿ ಸಂರಕ್ಷಿಸುವ ರಾಜ್ಯಭಾರವು ಶಕ್ತಿ ಮತ್ತು ಕರ್ತವ್ಯನಿಷ್ಠೆಗಳಿಂದ ವಿಹೀನವಾಗುವುದರಿಂದಲೂ ಪರಕೀಯ ಸಂಸರ್ಗ ಕುಹಕಗಳ ಮೋಹಪಾಶಕ್ಕೆ ಜನತೆಯು ಸಿಕ್ಕಿಬೀಳುವುದರಿಂದಲೂ ಸ್ವಸ್ವಕರ್ಮಾನುಷ್ಠಾನಕ್ಕೆ ಗ್ಲಾನಿಯು ಉಂಟಾಗುವುದು. ಪ್ರಾಪಂಚಿಕ, ಪಾರಮಾರ್ಥಿಕ ಅನುಷ್ಠಾನಗಳಿಗೆ ಆಕರವಾದ ಋಗ್ವೇದ, ಶುಕ್ಲ–ಕೃಷ್ಣ ಯಜುರ್ವೇದ, ಸಾಮವೇದ, ಅಥರ್ವವೇದಗಳೆಂಬ ವೇದದ ಒಂದೊಂದು ಅಂಶವನ್ನು ಸ್ವಾಧೀನ ಮಾಡಿಕೊಂಡವರೂ ಸಹ ಒಂದು ವೇದಭಾಗವು ಮತ್ತೊಂದು ವೇದಭಾಗದಿಂದ ಪ್ರತ್ಯೇಕಿಸಲ್ಪಟ್ಟಂತೆ ಗೋಡೆಗಳನ್ನೆಬ್ಬಿಸಿ ಕೋಟೆಗಳನ್ನು ಕಟ್ಟಿಕೊಂಡಂತೆ ಆಯಾ ವೇದಭಾಗವನ್ನು ಪ್ರತಿಪಾದಿಸುವುದರಿಂದ ಭೇದ ಭಾವನೆಗೆ ಅವಕಾಶವು ತಲೆದೋರುವುದು. ಯಜ್ಞಗಳ ಅನುಷ್ಠಾನವೂ ಈ ಭೇದ ಭಾವನೆಯ ಹೊಡೆತದಿಂದ ಕಣ್ಮರೆಯಾಗಲು ಅವಕಾಶವಾಗುವುದು.

ವೇದಭಾಗ ಪ್ರಾವೀಣರನ್ನು ದ್ವೇಷಿಸುವ ನೆಪದಲ್ಲಿ ವೇದವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವೇದಭಾಗವನ್ನೂ ಅಣಕಿಸಿ ದೂರೀಕರಿಸುವ ಕುಬುದ್ಧಿಯು ಅಂಕುರವಾಗುವುದು. ವೈಯಕ್ತಿಕವಾದ ಈ ಭೇದ ಭಾವನೆಗಳ ಅವಾಂತರದಿಂದ ವೇದಭಾಗಗಳನ್ನು ಒಟ್ಟುಗೂಡಿಸಿ ವ್ಯಾಸಂಗಮಾಡುವ, ತಿಳಿಯುವ ಮತ್ತು ಪೂರ್ಣವಾದ ವೇದದ ಒಳ ಅಂಗಗಳಿಂದ (ಋಕ್ ಯಜುಸ್ಸಾಮ-ಅಥರ್ವ) ಸಾಧ್ಯವಾಗಬೇಕಾದ ಯಜ್ಞಾದಿಗಳನ್ನು ಅನುಷ್ಠಾನ ಮಾಡುವ ಮನೋಭಾವವೇ ಅಳಿಸಿಹೋಗುವ ಸಂಸ್ಕಾರವುಂಟಾಗುತ್ತದೆ. ಅಪರಣಗಳೂ ಹೊಣೆಗಾರರಾದ ಪ್ರಜೆಗಳೂ ಔದಾಸೀನ್ಯ ಭಾರದಿಂದ ಬಲಹೀನರಾಗಿರುವುದರಿಂದ ತಮ್ಮ ತಮ್ಮ ಹೊಣೆಗಾರಿಕೆಯ ಕಾರ್ಯವನ್ನು ನಿರ್ವಹಿಸಿ ಕ್ರಮಪಡಿಸುವುದಕ್ಕೆ ಯತ್ನಿಸಲಾರದವರಾಗುತ್ತಾರೆ.

ವೇದಶಾಸ್ತ್ರಾದಿಗಳ ಅನುಭವ ವ್ಯಂಜಕ ಪದ ಪಂಕ್ತಿಗಳಲ್ಲಿ ದ್ಯೋತಕವಾಗುವ ತರ್ಕಬದ್ಧವಾದ ಅನುಭವವನ್ನು ಲಕ್ಷಿಸದೆ ವ್ಯಾಕರಣಾದಿ ಸಂಕುಚಿತದೃಷ್ಟಿಯಿಂದ ಅವುಗಳನ್ನು ವ್ಯಾಖ್ಯಾನ ಮಾಡುವುದು; ತಮ್ಮ ತಮ್ಮ ಮಿತಿಗೆ ಅನುಕೂಲಿಸುವಂತೆ ವ್ಯಾಕರಣವನ್ನೂ ತರ್ಕಬದ್ಧವಾದ ಅನುಭವವನ್ನೂ ದೂರೀಕರಿಸಿ ತಿರುವುಮುರುವು ಮಾಡಿ ಅಪೌರುಷೇಯ ವಾಣಿಗಳನ್ನೂ ಶಾಸ್ತ್ರಾದಿಗಳನ್ನೂ ವ್ಯಾಖ್ಯಾನ ಮಾಡುವುದು: ಅಪೌರುಷೇಯವೂ ಅಖಂಡವೂ ಪೂರ್ಣವೂ ಏಕೈಕವೂ ಅದ್ವಿತೀಯವೂ ಆದ 'ಧರ್ಮ' ಸಮುದ್ರದ ವಾಣೀ ತರಂಗಗಳನ್ನು ಖಂಡ ಖಂಡವಾಗಿ ನೋಡಿ ಖಂಡವನ್ನೇ ಅಖಂಡವೆಂದು ಅಲಂಕಾರ ಶೈಲಿಯಲ್ಲಿ ವಿಜೃಂಭಿಸುವುದು; (ಷಟ್ ದರ್ಶನಗಳು; ಷಡಂಗಗಳು; ಕಲಾತ್ಮಕವಾದ ಆಯುಶ್ಶಾಸ್ತ್ರ ಧನುಶ್ಶಾಸ್ತ್ರ ಗಂಧರ್ವ ಶಾಸ್ತ್ರಗಳು; ಖಗೋಲ ಭೂಗೋಲ; ವಾಯುಗುಣ ಶಾಸ್ತ್ರಗಳು ಅರ್ಥನೀತಿ ಶಾಸ್ತ್ರ ರಸಾಯನಾದಿ ಶಾಸ್ತ್ರ – ಇತ್ಯಾದಿ ಸಾಧನಗಳಿಂದ ವಸ್ತುವಿಜ್ಞಾನಕ್ಕೆ ಅವಕಾಶವಿರುತ್ತದೆ. ಆದರೂ) ಒಂದೊಂದು ಕಲೆಯ, ಶಾಸ್ತ್ರದ ಪಕ್ಷಪಾತ ದೃಷ್ಟಿಯಿಂದಲೂ ಭೂಗೋಲ ಜ್ಞಾನವಿಲ್ಲದೆಯೂ ಮಾನವತೆಯ ಪರಿಮಿತಿಯೇ ತಿಳಿಯದೆಯೂ ಪ್ರಜಾಪತಿ ರಾಜ್ಯದಲ್ಲಿ ಪ್ರಜೆಗಳ ಪ್ರಭುಶಕ್ತಿಯ ಅರಿವಿಲ್ಲದೆಯೂ, ಅರ್ಥ ವೈಕಲ್ಯದಿಂದ ತಮ್ಮನ್ನೂ ಸುತ್ತಮುತ್ತಲಿನವರನ್ನೂ ವಂಚಿಸುವುದು – ಇತ್ಯಾದಿ ಕಾರಣಗಳಿಂದ ದುರ್ಮನೋಭಾವಗಳು ಅಂಕುರವಾಗಿ ಜನರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವೇಷಾಸೂಯೆಗಳಿಂದ ಅನುಷ್ಠಾನವನ್ನು ವಿಕಾರಗೊಳಿಸುವರು.

ಧರ್ಮಸ್ಯ ಗ್ಲಾನಿರ್ಭವತಿ 'ಧರ್ಮಕ್ಕೆ ಗ್ಲಾನಿಯುಂಟಾಗುವುದು.' 'ಧರ್ಮವು ಕ್ಷೀಣಿಸಿದೆ' ಇತ್ಯಾದಿ ಉಕ್ತಿಗಳು ರೂಢಿಯಲ್ಲಿವೆ. ಆದರೆ ನಿತ್ಯವೂ ಶಾಶ್ವತವೂ ಅಖಂಡವೂ ಪೂರ್ಣವೂ ಆದ ಧರ್ಮ ವಾ ಕರ್ಮಕ್ಕೆ ಗ್ಲಾನಿಯಾಗಲೀ ಚ್ಯುತಿಯಾಗಲೀ ಉಂಟಾಗುವುದಿಲ್ಲ. ಧರ್ಮ ಪ್ರತಿಪಾದಕ 'ನಾದ' ಶಬ್ದ ರಾಶಿಗಳು ನಿತ್ಯವಾದುವು. ಇಂದ್ರಿಯ ಗೋಚರವೆನಿಸಿದ ವೇದಾದಿ ಗ್ರಂಥಗಳು ಮಾನವ ದೃಷ್ಟಿಗೆ ಒಂದುವೇಳೆ ಅದೃಶ್ಯವಾದರೂ, ಬ್ರಹ್ಮಾಂಡದಲ್ಲಿ ಅವು ನಿತ್ಯವಾಗಿ ಪ್ರಕಾಶಿಸುತ್ತಾ ತಪಃ ಫಲವಾಗಿ ಗೋಚರವಾಗುವುವು. ಲಿಖಿತವಾದ ಪಂಚಾಂಗವು 'ನಷ್ಟ'ವಾದರೂ ನಕ್ಷತ್ರವೂ ಸೌರವ್ಯೂಹವೂ ನಷ್ಟವಾಗದಿರುವುದು ಸರ್ವರಿಗೂ ತಿಳಿದಿದೆ. ಧರ್ಮಗ್ಲಾನಿ ಶಬ್ದವು ಆಚಾರ-ಅನುಷ್ಠಾನ-ಅನುಸಂಧಾನಾದಿಗಳಿಗೆ ಕುಂದಕ–ನ್ಯೂನತೆಯಾಗಿರುವುದೆಂದು ತಿಳಿಸುವುದು. ಸಂಸ್ಕೃತವಾದ ಆಚಾರವೆನಿಸುವ ಕರ್ಮಗಳ ಅನುಷ್ಠಾನಕ್ಕೆ ಅಡ್ಡಿ ಆತಂಕಗಳು ವ್ಯಕ್ತಿಗಳಲ್ಲಿ ಉಂಟಾಗಿರುವುದೆಂದು ತಿಳಿಯಬೇಕು.

ಮಾನವತೆಗೆ ಸಾಮಾನ್ಯವಾಗಿರುವ ತತ್ವಾನ್ವೇಷಣವನ್ನೇ ದೂರೀಕರಿಸಿ ಕೇವಲ ಸ್ವೋದರ ಪೂರಣವೇ ಮೊದಲಾದ ಇಂದ್ರಿಯ ಕಾಮನೆಗಳನ್ನು ಹೊಂದುವುದಕ್ಕಾಗಿ ಕರ್ಮಗಳನ್ನು ಮಾಡುನವರು ಅರ್ಥದಾಸರೆನಿಸುವರು. ಅರ್ಥದಾಸ್ಯ, ಜೀವಿಕಾದಾಸ್ಯಗಳೇ ಪ್ರಧಾನವಾದ ಮಾನವ ವರ್ಗದವರು ಮಾನವತೆಯ ಸಾಮಾನ್ಯ ಹಂತದಲ್ಲಿಯೇ ನಿಲ್ಲುವವರಾಗುತ್ತಾರೆ. ಇಂತಹವರು ಸರ್ವದಾ ಸರ್ವತ್ರ ಋಣ ಕರ್ಮ ವಿಧಾನದ ವಿಷಕ್ರಿಮಿ ನ್ಯಾಯದಂತೆ ಇರುತ್ತಾರೆ. ಮತ್ತು ಮೇಲಕ್ಕೆ ಏರುವ ಅಥವಾ ಕೆಳಕ್ಕೆ ಇಳಿಯುವ ಅವಕಾಶವನ್ನು ಹೊಂದಿರುತ್ತಾರೆ. ಮೇಲಿನ ಹಂತಗಳನ್ನು ಏರುವವರೂ ಏರಿದವರೂ ಸಹ ಪಶು ಸಮಾನವಾದ ಜೀವನ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತಿ ಹಂತಗಳಿಂದ ಕುಸಿದು ಬೀಳುವರು. ವಿದ್ವಾಂಸರೂ ಸಹ ಇಂದ್ರಿಯ ಪರವಶರಾಗಿ ಚಪಲತೆಗೆ ಒಳಪಟ್ಟು ಸನ್ನಿವೇಶಕ್ಕೆ ತಕ್ಕಂತೆ ಇಂದ್ರಿಯ ವಿಷಯಾಸಕ್ತರಾಗಿಯೇ ಕಾಲಯಾಪನೆ ಮಾಡುತ್ತಾರೆ. –ಇತ್ಯಾದಿ ಲೋಕಾನುಭವ ವಿಚಾರವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೀ ಶಂಕರ ಭಗವತ್ಪೂಜ್ಯಪಾದರು ಮೋಹ ಮುದ್ಗರ ಪ್ರಕರಣದಲ್ಲಿ ಹೇಳಿರುತ್ತಾರೆ. ಆದುದರಿಂದ ವಿದ್ವತ್ತಿನೊಡನೆ ಅನುಷ್ಠಾನವು ಸೇರಿಕೊಂಡಿರುತ್ತೆಂಬುದು ಯಥಾರ್ಥವಾಗಲಾರದು. ಆದರೆ ವಿದ್ವತ್ತಿಲ್ಲದೆ ಸಂಸ್ಕೃತಿಯ ತಿಳಿವಳಿಕೆಯು ಉಂಟಾಗುವುದಿಲ್ಲ ಮತ್ತು ಅನುಷ್ಠಾನಕ್ಕೆ ಅವಕಾಶವೇ ಇರುವುದಿಲ್ಲವೆಂಬುವದನ್ನೂ ಮರೆಯಬಾರದು.

ವಿದ್ವದಭಾವದಿಂದ ಅಥವಾ ವಿದ್ವತ್ತಿನ ಸದುಪಯೋಗವಿಲ್ಲದಿರುವುದರಿಂದ ಅನುಷ್ಠಾನವು ಮಲಿನವಾಗಿ ಪ್ರಜೆಗಳಲ್ಲಿ ವೈಮನಸ್ಯ ವಿರಸಗಳನ್ನು ಹೊಂದಿದ ಕೆಲವರು ವಿದ್ವತ್ತಿಗೇ ಬಹಿಷ್ಕಾರ ಹಾಕಿ ಸಾಮಾನ್ಯರ ಮಟ್ಟದಲ್ಲಿ ಜೀವನವನ್ನು ಸಾಗಿಸುತ್ತಾ 'ಧರ್ಮ ಪರಾಯಣರು' ಎನಿಸಿಕೊಳ್ಳುವಂತೆ ಪಂಥಗಳನ್ನು ಸೃಷ್ಟಿಸಿ ನಾಯಕರೆನಿಸಿಕೊಂಡು ಸಾಮಾನ್ಯ ನೀತಿಯನ್ನು ಬೋಧಿಸುತ್ತಾರೆ. ವಿದ್ವತ್ ಉಳ್ಳಂಥಾ ಮಂಡನಮಿಶ್ರಾದಿಗಳೂ ಮಿತವಾದ ಮತ್ತು ಸಂಕುಚಿತವಾದ ಶಾಸ್ತ್ರದ ಒಂದು ದೃಷ್ಟಿಯಿಂದ ವಿಷಯ ಸಂಗ್ರಹಮಾಡಿ ತಮ್ಮ ಪ್ರಭಾವಗಳನ್ನು ಬೀರಿದರೂ ಅನುಷ್ಠಾನ ಗ್ಲಾನಿಯು ತಪ್ಪಲಿಲ್ಲ. ಒಬ್ಬೊಬ್ಬ ಪ್ರಮುಖರು ಒಂದೊಂದು ಶಾಸ್ತ್ರ (ದರ್ಶನ) ಕಲೆಗಳಲ್ಲಿ ಪ್ರವೀಣರಾಗಿ ಏಕಾಕ್ಷಿಗಳಂತೆ ಕಾಕ ದೃಷ್ಟಿಯ ಪಕ್ಷಪಾತದಿಂದಲೇ ತತ್ತ್ವಾನ್ವೇಷಣ ಮಾಡುತ್ತಾರೆ. ಸರ್ವರೂ ಸರ್ವವನ್ನೂ ತಿಳಿಯಲಾರರು– ಎಂಬ ವ್ಯಾಜದಿಂದ ಉದಾಸೀನರಾಗಿರುವುದು ಮಾತ್ರವಲ್ಲದೆ ವಿವಿಧ ಶಾಸ್ತ್ರಜ್ಞರ ಒಕ್ಕೂಟದಿಂದ ಸಮಸ್ಯಾ ಪರಿಹಾರಕ್ಕೆ ಅವಕಾಶ ತಂದುಕೊಳ್ಳುವ ಯತ್ನವನ್ನೇ ಮಾಡದಿರುವುದು ಶೋಚನೀಯ.

"ತಿಳಿದಂಥ ಒಂದು ಶಾಸ್ತ್ರ"ವೆಂಬ ನೇತ್ರದಿಂದಲೂ, ಸಮಸ್ತವಾದ ಇತರ ಶಾಸ್ತ್ರಗಳ ಸಾಮಾನ್ಯ ಜ್ಞಾನವೆಂಬ ದ್ವಿತೀಯ ನೇತ್ರದಿಂದಲೂ, ಸಾಮರಸ್ಯವೆಂಬ ಉಪನೇತ್ರದಿಂದಲೂ ತತ್ತ್ವಾನ್ವೇಷಣ ಮಾಡಿದವರ ಅಥವಾ ಮಾಡುವವರ ಸಂಖ್ಯೆಯು ವಿರಳವಾಗಿರುತ್ತದೆ.

ಇಂದ್ರಿಯ ಪ್ರೀತಿಗಾಗಿ ದೇವತ್ವ ವಶೀಕರಣ ಯತ್ನ; ವೈಯಕ್ತಿಕ ಕೌಟುಂಬಿಕ ದೇವತ್ವಗಳ ಅರಿವಿಲ್ಲದಿರುವಿಕೆ; ಮನಸ್ಸನ್ನು ಸಡಿಲಿಸಿ ಋಣಾನುಬಂಧವಾಗಿ ಬಂದಿರುವ ಕರ್ತವ್ಯಾರಾಧನ ಕ್ರಮವನ್ನು ಬಿಡುವುದು; ಪಾಷಂಡಾರಾಧನವನ್ನು ಆಚರಿಸುವುದು; ಆರ್ಷೇಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆರಾಧನಗಳನ್ನು ದ್ವೇಷಿಸುವುದು; ಸಮತಾರಾಧನ ಸಂಸ್ಕೃತಿಯನ್ನು ತಳ್ಳಿಹಾಕುವುದು – ಇತ್ಯಾದಿ ವಿಮರ್ಶಾದಿ ರಹಿತ ಕಾರ್ಯಕ್ರಮಗಳನ್ನಿಟ್ಟುಕೊಂಡು ಕರ್ತವ್ಯಕರ್ಮವನ್ನು ಬಿಡುವುದು ಮತ್ತು ಬಿಡಿಸುವುದು; ನಿತ್ಯಜೀವನಕ್ಕೆ ಅತ್ಯವಶ್ಯಕವಾಗಿದ್ದ, ಯಜ್ಞಕಾರ್ಯ, ದೇವತಾ ಸೇವೆಗಳ ಶ್ರೇಣಿಗೆ ಏರಿಸಲ್ಪಟ್ಟಿರುವ ವಾಣಿಜ್ಯ, ಶುಶ್ರೂಷಾ, ರಾಜ್ಯಭಾರ ಕಾರ್ಯ ಕ್ರಮಗಳಲ್ಲಿ ಶಾಕ ಕ್ರಯ ವಿಕ್ರಯ ಮೊದಲುಗೊಂಡು ದಿಗ್ವಿಜಯದ ಪರ್ಯಂತ ಮೋಹ, ಮೋಸ, ಕುಹಕಗಳಿಂದ ಕಾರ್ಯಾರ್ಥಿಗಳೂ ಕಾರ್ಯಕರ್ತರೂ ಪರಸ್ಪರ ಕೆಡುವಂತೆ ಮಾಡುವುದು. ಇವೆಲ್ಲವೂ ಧರ್ಮಾನುಷ್ಠಾನ ಗ್ಲಾನಿಯ ಸೂಚಕಗಳು.

ಉಚ್ಚನೀಚ ಭಾವದ ಬೆಂಕಿಯಿಂದ ಸುಡಲ್ಪಟ್ಟ ಸಾಮಾನ್ಯ ಪ್ರಜೆಗಳು ಪರಕೀಯರ ಅಧಿಕಾರೈಶ್ವರ್ಯಬಲದರ್ಪಾದಿಗಳಿಂದ ಮೋಹಿತರಾಗಿ ತಮ್ಮ ತಮ್ಮ 'ಸ್ವಾನುಷ್ಠಾನ'ಗಳನ್ನು ತಿರಸ್ಕರಿಸಿ ತ್ಯಜಿಸುವ ಪರಿಸ್ಥಿತಿಯುಂಟಾಗುವುದು. ದೇಶ ರಾಜ್ಯಭಾರ ಮಾಡುವ ಪರಕೀಯ ಜನಗಳ ಮನೋಲ್ಲಾಸದಂತೆ ತಾಂಡವವಾಡುವ ಸ್ಥಿತಿಯೇ ಮೋಹಪ್ರಲುಬ್ಧ ಜನತೆಯನ್ನು ಹಿಂಬಾಲಿಸುವುದು. ಇದರ ಪರಿಣಾಮವಾಗಿ, ಶಾಶ್ವತ ಕಲ್ಯಾಣಾಭ್ಯುದಯಗಳನ್ನೀವ ಬ್ರಾಹ್ಮಣಾಚಾರದ ಅನುಷ್ಠಾನಗಳಿಗೆ ಗ್ಲಾನಿಯುಂಟಾಗುವುದು.

ವೇದವೇ ಸರ್ವಸ್ವವು, ಅಖಂಡವು, ಪೂರ್ಣವು, ವಿಶ್ವವ್ಯಾಪಿಯು ಎಂಬ ಸಿದ್ಧಾಂತವು ಘೋಷಿತವಾಗಿರುವಾಗ ವೇದವು ಗೌಣವೆಂಬ ಅರ್ಥ ಬರುವಂತೆ ವಾದಮಾಡುತ್ತಾ ಪುಷ್ಪಿತ ವಚನಗಳಿಂದ ಮರುಳು ಮಾಡುವ ಪ್ರಸಂಗವು ಶೋಚನೀಯವಾದುದು. ಅಧಿಕಾರ, ಸನ್ನಿವೇಶ, ಕಾಲ, ದೇಶ, ಪಾತ್ರಗಳಿಗೂ ಸತ್ವಾದಿ ಮೂರು ಗುಣಗಳಿಗೂ ಹೊಂದಿಸಿಕೊಳ್ಳಬಹುದಾದ ಪ್ರತಿಯೊಂದು ವೇದೋಕ್ತ ವಿಷಯವೂ ವೇದಾನುಯಾಯಿಗಳ ಜ್ಞಾನದ ಹಂತಗಳಿಗೆ ಅನುಸಾರವಾಗಿ ಅರ್ಥವನ್ನು ಬೆಳಗುವುದು. ವೇದಗಳು ಜಿಜ್ಞಾಸುಗಳಲ್ಲಿ ತುಂಬಿರುವ ತ್ರೈಗುಣ್ಯಭಾವಗಳನ್ನು ಪ್ರತಿಬಿಂಬಿಸುವುವು. ಇಂತಹ ವೇದೋಕ್ತಿಗಳ ಸಹಜವೂ ನೈಜವೂ ಆದ ಅರ್ಥವನ್ನು [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಶುದ್ಧಾಂತಃಕರಣ ದೃಷ್ಟಿಯಿಂದ ಕೂಡಿರಬೇಕು. ಅಂದರೆ ನಿಸ್ತ್ರೈಗುಣ್ಯನಾಗಿರಬೇಕೆಂದು ಹೇಳಲಾಗಿದೆ. ಶುಷ್ಕವಾದ ವೈರಾಗ್ಯದ ಮಾತುಗಳನ್ನಾಡಿ ವೇದಗಳ ಅಂತರ್ಭಾಗವೂ ಗರ್ಭವೂ ಆದ ವೇದಾಂತ ಬ್ರಹ್ಮದಿಂದ ಪರಿಪೋಷಿತವಾದ ಕರ್ಮವನ್ನೂ ಕರ್ಮ ಸಮೃದ್ಧಿಗೆ ಮೂಲವಾದ ಬ್ರಹ್ಮವನ್ನೂ ತೊರೆದು ಮಾತೃವಾದ ವೇದವನ್ನೇ ತಾತ್ಸಾರಮಾಡಿ ಕ್ಷಣಕಾಲವಾದರೂ ಕರ್ಮವಿಲ್ಲದೆ ಇರುವ ವ್ಯಕ್ತಿಯಲ್ಲಿ ವಾ ಪ್ರಪಂಚದಲ್ಲಿ ಕರ್ಮಾನುಷ್ಠಾನವಾದವನ್ನು ಎದುರಿಸುವುದರಿಂದ ಮಂಕು ಕವಿಯುವುದು. ನಿರುದ್ಯೋಗಿಗಳೂ ಆಲಸ್ಯವುಳ್ಳವರೂ ಶಾರೀರಕ ಬಲದಿಂದ ಅವರವರ ಕೆಲಸದಿಂದ ತಪ್ಪಿಸಿಕೊಳ್ಳಲು ಜಲ್ಪಿಸುವ ಬೈರಾಗಿ ಮಾತುಗಳು ಲೋಕಕಂಟಕವಾಗುವುವು. ಇದು ಪ್ರಕೃತಿಗೂ ಋತಕ್ಕೂ ಸರಿಬೀಳದೆ ಪ್ರಕೃತಿಯನ್ನು (ಜನತೆಯನ್ನು) ಪ್ರಕೃತಿಯೇ ಹೊಡೆದೆಚ್ಚರಿಸಿ, ಎಬ್ಬಿಸಿ ವಿದ್ವಜ್ಜಾಡ್ಯವನ್ನು ಪ್ರತಿಭಟಿಸುವಂತಾಗುವುದು. ಈ ಸಂದರ್ಭದಲ್ಲಿ ವಿದ್ವಾಂಸರು ಪರಕೀಯರ ಆಶ್ರಯದಲ್ಲಿ ಕುತ್ಸಿತವೂ ಸಂಕುಚಿತವೂ ಆದ ಕೋಟೆಗಳನ್ನು ಕಟ್ಟಿಕೊಂಡು ಏಕಾಕ್ಷಿಗಳಂತೆ ವರ್ತಿಸುವವರಾಗುವುದರಿಂದ ಪ್ರತಿಭಟನೆಯೂ ಸಹ ತಂಡ ತಂಡವಾಗಿ ಏಳುವುದರಿಂದ ಅನುಷ್ಠಾನವು ಛಿದ್ರವಾಗುವುದು.

ಕರ್ಮ ಮಾಡದೆ ಒಂದು ಕ್ಷಣಕಾಲವೂ ನಿಲ್ಲಲಾರದ ದೇಹಿಗಳಿಂದ ತುಂಬಿದ ಪ್ರಪಂಚದಲ್ಲಿ ಕರ್ಮವು ಅವಿಚ್ಛಿನ್ನವಾಗಿ ನಡೆಯುತ್ತಿರುವಾಗ ಕರ್ಮವು ಕ್ಲೇಶಕರ ಮತ್ತು ಹಿಂಸಾತ್ಮಕವೆಂದೂ, ಸುಸಂಸ್ಕೃತವಾದ ಕರ್ಮಾನುಷ್ಠಾನವು ಕಠಿಣತರವೆಂದೂ ಹೇಳುವುದು ಜಾಡ್ಯದ ಫಲ. ತಾನಾಗಿಯೇ ನಡೆದುಹೋಗಬೇಕಾಗಿರುವ ಕರ್ಮವನ್ನು ವಿವೇಕದಿಂದ ನಿಯಮಾನುಗುಣವಾಗಿ ಅನುಷ್ಠಾನಮಾಡಿದರೆ ದುಷ್ಪರಿಣಾಮವನ್ನು ಹೋಗಲಾಡಿಸಿ ಅತಿಶಯವಾದ ಶ್ರೇಯಸ್ಸನ್ನು ಪಡೆಯಬಹುದಾಗಿದೆ. ಋಣಕರ್ಮಾನುಸಾರವಾಗಿ ಅತ್ಯವಶ್ಯಕವಾಗಿ ಫಲಾನುಭವಮಾಡುವುದರ ಮೂಲಕ ಶೋಧನಕ್ಕಾಗಿ (ಕಳೆಯುವುದು ಅಥವಾ ತೊಳೆಯುವುದು) ಅವರವರ ಸಂಕಲ್ಪದಂತೆ ಜೀವಗಳು ಕರ್ಮಪ್ರಯೋಗಶಾಲೆ (ದೇವಾಲಯ) ಯೆಂಬ ವೃತ್ತಿಕ್ಷೇತ್ರವಾದ ದೇಹವನ್ನು ಆಶ್ರಯಿಸಿದಾಗ ನಡೆಯುವ ಕರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಚರಣಾದಿ ವ್ಯಾಪಾರಗಳನ್ನು ಹಿಂಸೆ ಎಂದು ಭಾವಿಸುವುದು ವಿವೇಕವಲ್ಲ. ಪ್ರಕೃತಿ ಪುರುಷರ ಋಣ ಕರ್ಮದ ಲೀಲೆಯನ್ನು ಹಿಂಸೆ ಎಂದು ಹೇಳಲಾಗುವುದಿಲ್ಲ. ಉದ್ದೇಶಸಾಧನೆಗಾಗಿ ಜನ್ಮತಾಳಿದ ಮೇಲೆ ವೃತ್ತಿಕ್ಷೇತ್ರಗಳ ಪದ್ಧತಿಮರ್ಯಾದೆ ವ್ಯವಹಾರಾನುಗುಣವಾಗಿ ಕೆಲಸವನ್ನು ನಿರ್ವಹಿಸುತ್ತಾ ಪ್ರತಿ ದೇಹಿಯೂ ಆಯಾ ಮಟ್ಟದಲ್ಲಿ ಅಲೌಕಿಕ ಯೋಗಾನುಭವವನ್ನು ಪಡೆದು ಆನಂದಿಸಬೇಕು. ಶ್ರೇಯಸ್ಸಿಗಾಗಿ ದೇಹವನ್ನು ಖಡ್ಗಾದಿ ಆಯುಧಗಳಿಂದ ಛೇದಿಸುವ ಮತ್ತು ವಿವಿಧವಾಗಿ ದಂಡಿಸುವ ಅನುಷ್ಠಾನವು* ನಿರತಿಶಯವಾದ ಸುಖವನ್ನು ಮೇಲ್ಕಂಡ ಛೇದನ ಕಾರ್ಯಕ್ಕೆ ಸಂಬಂಧಪಟ್ಟವರೆಲ್ಲರಿಗೂ ಕೊಡುವುದು. ಕೇವಲ ಇಂದ್ರಿಯ ಭೋಗಗಳಿಗೆ ಪ್ರಾಪಂಚಿಕ ಮಟ್ಟದಲ್ಲಿ ನಡೆಯುವ ಈ ಬಗೆಯ ಛೇದನ ದಂಡನೆಗಳು ದೇಹಿಯನ್ನು ಕೆಳಮಟ್ಟಕ್ಕೆ ತಳ್ಳುವುವು. ಆದುದರಿಂದ ಅಹಿಂಸಾವಾದವು ಹಿಂಸಾಶೀಲರಾದ ದೇಹಾಭಿಮಾನಿಗಳ "ವಾದಸರಣಿ" ಎಂಬುದು ದೃಢವಾಗಿ ದೂರೀಕೃತವಾದನಂತರ ಅನುಷ್ಠಾನ ಸೌಂದರ್ಯಾನುಭವಕ್ಕೆ ದಾರಿ ಯಾಗುವುದು.

ಪ್ರಪಂಚದಲ್ಲಿ ಪ್ರಕೃತಿ ನಿಯಮದಂತೆ ಮತ್ತು ವ್ಯಕ್ತಿಗಳ ಋಣಾನುಬಂಧಕ್ಕೆ ತಕ್ಕಂತೆ ಒಂದೊಂದು ಭೂ ಪ್ರದೇಶವೇ ಒಂದೊಂದು ವಿಧವಾದ ಕರ್ಮವನ್ನು ನಿರ್ವಹಿಸುವಂತಿದೆ. ಪಶ್ಚಿಮಾರ್ಧಗೋಳದ ಭೂಮಿಯ ಮತ್ತು ವಾಯುಗುಣದ ಪ್ರಸಾದದಿಂದ ಯಂತ್ರಕಾರ್ಯ ನಿರ್ವಾಹವು ನಡೆಯುತ್ತಿದೆ. ಮತ್ತು ಅಲ್ಪ ಸಂಖ್ಯಾತರಾದ ಅಲ್ಲಿಯ ಜನಗಳು ಪ್ರಾಣಿಗಳಂತೆ ಯಂತ್ರ ಚಾಲನಕಾರ್ಯದಲ್ಲಿ ನಿರತರಾಗಿ ಸಾಮಾನ್ಯ ಜೀವನವನ್ನು ನಡೆಸಬೇಕಾಗಿದೆ. ಅಂತಹ ಕಡೆಗಳಲ್ಲಿ ಪಾರಮಾರ್ಥಿಕಅನುಷ್ಠಾನದ ಬಗ್ಗೆ ಜಿಜ್ಞಾಸೆಯ ಪ್ರಸಂಗವೇ ಇರುವುದಿಲ್ಲ. ವಿಶ್ವದಲ್ಲಿ ಕಾಮಮೋಹಾದಿಗಳ ಬಲೆಗಳಲ್ಲಿ ಸಿಕ್ಕಿರುವ ವ್ಯಕ್ತಿ-ವ್ಯಕ್ತಿಗೂ, ಕುಟುಂಬ-ಕುಟುಂಬಕ್ಕೂ, ಸಮಾಜ-ಸಮಾಜಕ್ಕೂ, ದೇಶ-ದೇಶಕ್ಕೂ ಇರಬಹುದಾದ ವೈಷಮ್ಯವೂ ಅಸೂಯಾದಿ ದುರ್ಗುಣಗಳೂ, ದೃಷ್ಟಿ

---

* ಬ್ರಾಹ್ಮಣಧರ್ಮ (ಯೂನಿವರ್ಸಲ್ ರಿಲಿಜನ್) ಪುಟ 50-56

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದೋಷಾದಿಗಳೂ ಕುಹಕಗಳೂ ಕುತಂತ್ರಗಳೂ ಹೇರಳವಾಗಿರುವುದರಿಂದ ಪ್ರತಿ ವ್ಯಕ್ತಿಯೂ ಮತ್ತೊಬ್ಬರೊಡನೆ ವ್ಯವಹಾರವನ್ನು ನಡೆಸುವಾಗ ಬಹಳ ಎಚ್ಚರಿಕೆಯಿಂದ ಅನುಷ್ಠಾನ ನಿಯಮಗಳನ್ನು ಪಾಲಿಸಬೇಕೆಂದು ರಾಜನೀತಿ ಶಾಸ್ತ್ರದಲ್ಲಿ ಉಕ್ತವಾಗಿರುತ್ತದೆ. ಅಪರಿಚಿತರೊಡನೆ ಅಪರಿಚಿತ ಸನ್ನಿವೇಶದಲ್ಲಿ ಭೋಜನ ವಿವಾಹಾದಿಗಳಿಗೆ ಮನಸೋತ ಮಾನವರು ವ್ಯಕ್ತಿತ್ವವನ್ನು ಕಳೆದುಕೊಂಡು ದುಷ್ಟ ವರ್ತನೆಗಳಿಗೆ ಬಲಿಯಾಗುತ್ತಾರೆ. ಸಾಮಾನ್ಯ ಜೀವನ ಮಟ್ಟಕ್ಕೆ ವಿರೋಧವನ್ನುಂಟುಮಾಡುವ ವಸ್ತುಗಳ ಮೇಲಿನ ಗಾಳಿಯು ಸೋಕಿದರೂ ವಿಷವಾಗಿ ಪರಿಣಮಿಸುತ್ತದೆ. ಅತ್ಯಂತ ಸೂಕ್ಷ್ಮ ವಿಷಕ್ರಿಮಿಗಳಿಂದ ಎಡೆಬಿಡದೆ ಆವರಿಸಲ್ಪಟ್ಟ ದೇಹಿಗಳು ಸರ್ವದಾ ಅಶುಚಿಯ ಬಾಧೆಯನ್ನು ತಪ್ಪಿಸಿಕೊಳ್ಳಬೇಕಾಗಿರುತ್ತದೆ. ದೇಹಿಗಳು ಹೆಚ್ಚು ಸಂಖ್ಯೆಯಲ್ಲಿ ಸೇರಿದಾಗ ಅಪರ ಉಸಿರಾಟವೇ ಪರಸ್ಪರವಾಗಿ ಆರೋಗ್ಯವನ್ನು ಹಾಳುಮಾಡಿ ರಕ್ತದ ಚಲನೆಯನ್ನು ಕೆಡಿಸಿ ಇಂದ್ರಿಯಗಳೂ ಮನಸ್ಸೂ ದುರಾಚಾರಕ್ಕೆ ಯತ್ನಿಸುವಂತೆ ಮಾಡುವುದು. ಹೀಗಿರುವಲ್ಲಿ ಆಹಾರವಿಹಾರಗಳಲ್ಲಿ ಬೆರೆಯುವುದರಿಂದ ಅಶುಚಿಯು ಹೆಚ್ಚಿ ಮತ್ತಷ್ಟು ಹೆಚ್ಚಿನ ಕೇಡು ಉಂಟಾಗುವುದೆಂದು ಹೇಳಬೇಕಾದುದೇ ಇಲ್ಲ. ಪ್ರಕೃತಿಯಲ್ಲಿ ದೊರೆಯುವ ಸೊಪ್ಪು, ಗೆಡ್ಡೆ, ಹಣ್ಣುಹಂಪಲುಗಳೂ ವನಸ್ಪತಿಗಳೂ ಮೂಲಿಕಾದಿ ಧಾತುಗಳೂ ಪ್ರಜೆಗಳ ಉಪಯೋಗಕ್ಕಾಗಿಯೇ ಇರುವುವು. ಇವೆಲ್ಲವೂ ಅನಾರೋಗ್ಯವನ್ನೂ ರೋಗವನ್ನೂ ಹೋಗಲಾಡಿಸುವ ಗುಣ ಮತ್ತು ಶಕ್ತಿಗಳಿಂದ ಕೂಡಿರುತ್ತವೆ. ಆದುದರಿಂದ ಅಡಿಗೆ ಮನೆಯಲ್ಲಿ ಪಾಕಕ್ಕಾಗಿ ಉಪಯೋಗಿಸಲ್ಪಡುವ ಪ್ರತಿಯೊಂದು ಪದಾರ್ಥವೂ ಔಷಧವೇ ಆಗಿರುತ್ತದೆ. ಇವುಗಳನ್ನು ಉಪಯೋಗಿಸುವುದಕ್ಕೆ ಮುನ್ನ ಅವುಗಳ ಗುಣ ಮತ್ತು ಶಕ್ತಿಗಳನ್ನೂ ಉಪಯೋಗಿಸುವ ವ್ಯಕ್ತಿಯು ತನ್ನ ದೇಹೇಂದ್ರಿಯಗಳ ಗುಣ ಮತ್ತು ಶಕ್ತಿಗಳನ್ನೂ ತಿಳಿದು ಆರೋಗ್ಯವಸ್ತು ಸ್ಥಿತಿಯು ಹೆಚ್ಚುವ ಅಥವಾ ವಿಷಮಸ್ಥಿತಿಯು ನಾಶವಾಗುವ ಸಂದರ್ಭಗಳಲ್ಲಿ ಯಾವವುಗಳನ್ನು ? ಹೇಗೆ ? ಎಷ್ಟು ಪ್ರಮಾಣಗಳಲ್ಲಿ ? ಯಾವ ಮಿಶ್ರಣದಲ್ಲಿ ? ಉಪಯೋಗಿಸಬೇಕೆಂಬುದನ್ನು [illegible] ಆರೋಗ್ಯವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮವಾಗಿದ್ದು ಜ್ಞಾನ ಮತ್ತು ಕರ್ಮಗಳ ಇಂದ್ರಿಯಗಳು ಶುಚಿಯಾಗಿ ಅನುಷ್ಠಾನ ಸಾಮರ್ಥ್ಯವನ್ನು ಹೊಂದಿ ಲವಲವಿಕೆಯಿಂದಲೂ ಆಲಸ್ಯವಿಲ್ಲವೆಯೂ ಅನುಷ್ಠಾನ ತತ್ಪರಗಳಾಗಿರುವಂತಾಗುವುದು. ಅನುಷ್ಠಾನ ಗ್ಲಾನಿಗೆ ಎಡೆಯಿರುವುದಿಲ್ಲ. ಭಾರತೀಯ ಸಂಸ್ಕೃತಿಯ ವಿತಿಗೆ ಒಳಪಟ್ಟ ಸ್ತ್ರೀಯರ ರಜಸ್ವಲಾ ಪ್ರಕರಣ, ಬಾಣಂತಿಯರ – ಮೈಲಿಗೆ – ಸೂತಕ ಆಶೌಚಾದಿಗಳು ಅವರವರ ವಿತಿಯಲ್ಲಿ ಆರೋಗ್ಯ ಸಾಧನೆಗೂ ಮತ್ತು ಸಂಪರ್ಕ – ಸಂಸರ್ಗ – ದೋಷನಿವಾರಣೆ ಮೂಲಕ ಅನುಷ್ಠಾನ ಗ್ಲಾನಿಯನ್ನು ತಡೆಗಟ್ಟಲೂ ಸಹಕರಿಸುವುವು. ಆದುದರಿಂದ ಮೈಲಿಗೆ ಎಂಬುದು ಮಡಿಗೆ ಸಮಾನವಾಗಿ ಪೂಜ್ಯವೇ ಆಗಿರುತ್ತದೆ.

ಸಂಸ್ಕೃತಿಯ ಅನುಷ್ಠಾನದ ದೃಷ್ಟಿಯಿಂದ ವಿಶ್ವದ 250 ಕೋಟಿ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಅವರವರ ಆಹಾರ ವಿಹಾರಾದಿಗಳನ್ನು ಸ್ವಧರ್ಮ ವಿತಿಯಲ್ಲಿ ಇಟ್ಟುಕೊಳ್ಳಬೇಕೆಂದು ಅನುಷ್ಠಾನ ರಹಸ್ಯವು ಹೇಳುವುದು. ಮಹಾತ್ಮರ ಸಂದರ್ಶನ ಸಾನ್ನಿಧ್ಯಗಳಿಂದ ಶ್ರೇಯಸ್ಸಾಧನೆಯಾಗಬಹುದು. ಶ್ರೇಯೋ ವಿಮುಖರ ಸಾನ್ನಿಧ್ಯವು ಮತ್ತು ಸಂಭಾಷಣಾದಿ ವ್ಯವಹಾರಾದಿಗಳು ಮಾನಸಿಕವಾದ ತೀವ್ರ ಪರಿಣಾಮಗಳನ್ನುಂಟುಮಾಡುವುವು. ಮತ್ತು ಸಂಸ್ಕೃತಿ, ಅನುಷ್ಠಾನ ನಾಶಕರಗಳಾಗುವುವು. ಇವುಗಳನ್ನು ತಡೆಗಟ್ಟುವುದಕ್ಕೂ ಮಾರ್ಗದರ್ಶನ ಮಾಡುವುದಕ್ಕೂ ಸಂಸ್ಕೃತಿರಕ್ಷಣ ಧರ್ಮಾನುಷ್ಠಾನಾಭಯಪ್ರದಾನಗಳಿಗೂ ಆಧಾರವಾದ ರಾಜನೀತಿ ಶಾಸ್ತ್ರವು ಸಹಕರಿಸುತ್ತದೆ. ಅಂಗರಕ್ಷಕನಂತೆ ಇರುವ ರಾಜನೀತಿ ಜ್ಞಾನದ ಉದಯವೇ ಆತ್ಮಸೃಷ್ಟಿಯೆನಿಸಿ ಧರ್ಮಾನುಷ್ಠಾನ ಲೋಪವನ್ನೂ ಹೋಗಲಾಡಿಸುತ್ತದೆ.

ಬ್ರಹ್ಮಾಂಡದಲ್ಲಿ ದೇಹಿಗಳ ಋಣಾನುಬಂಧಗಳು ಕಾರ್ಯಗತವಾಗುವುದಕ್ಕೆ ಅರ್ಹವಾದ ಪ್ರಯೋಗಶಾಲೆಗಳನ್ನು ಉಚಿತಸ್ಥಾನಗಳಲ್ಲಿ ನಿರ್ಮಿಸುವುದು ಪ್ರಕೃತಿಗೂ ಋತಕ್ಕೂ ಸೇರಿದ್ದು. ಪೂರ್ಣಶಕ್ತಿ ಸ್ವಾತಂತ್ರ್ಯಗಳಿಂದ ದೇಹಿಗಳು ಮಾಡಬಹುದಾದ ಅನುಸಂಧಾನಗರ್ಭಿತ ಸಂಸ್ಕೃತಿಯ ಅನುಷ್ಠಾನಗಳು ನಿರ್ದಿಷ್ಟವಾದ ಪ್ರಯೋಗಶಾಲೆಗಳಂತಿರುವ ಭೂ ಪ್ರದೇಶಗಳಿಗೆ ಸಂಬಂಧಪಟ್ಟವೆ. ಈ ಅನುಷ್ಠಾನಗಳ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಶಾರೀರಕ ಮಾನಸಿಕ ಪ್ರಭಾವಗಳೇ ವಿಶೇಷವಾಗಿರುವುವು. ಅದಕ್ಕನು ಗುಣವಾಗಿ ಬಹುಕಾಲದ ಸಂಪರ್ಕ – ಆಚಾರ – ವ್ಯವಹಾರಾದಿಗಳಿಂದ ಆಯಾ ಭೂಪ್ರದೇಶ ವಾಯುಪ್ರದೇಶಗಳ ಒಂದೊಂದು ಅಣುವೂ ಸಹ ಅನುಷ್ಠಾನ ಮನೋಭಾವವನ್ನು ಹೊಂದಿರುವಂತೆ ಅನುಭವಕ್ಕೆ ಬಂದಿದೆ. ಹಡಗು ಸಂಚಾರವು ಭೂಮಿಯ ಮೇಲೆ ಆಗುವುದಿಲ್ಲ; ಪಕ್ಷಿಗಳು ಭೂ ಗರ್ಭದಲ್ಲಿ ಹಾರುವುದಿಲ್ಲ. ವಿವೇಕಿಗಳಾದ ದೇಹಿಗಳು ತಮ್ಮ ಮಿತಿಯರಿತು ಸುಖ ಶಾಂತಿ ಪ್ರದಕಾರ್ಯಾನುಷ್ಠಾನ ತತ್ಪರರಾಗುವುದರಿಂದ ಧರ್ಮ ಗ್ಲಾನಿಯು ನಿವಾರಣೆಯಾಗುತ್ತದೆ.

ಅನುಷ್ಠಾನ ಗ್ಲಾನಿಯು ಸ್ವತಃ ದೇಹಿಗಳು ನೆರವೇರಿಸುವ ತಪಸ್ಸಿ ನಿಂದಲೇ ಹೋಗಲಾಡಿಸಲ್ಪಡಬೇಕಾಗುತ್ತದೆ. ಸತ್ ಆವರಣವು ಗ್ಲಾನಿ ಪರಿಹಾರಕ್ಕೆ ಅತ್ಯವಶ್ಯಕವಾದ ಸಾಧನಗಳಲ್ಲಿ ಒಂದಾಗಿದೆ ಲಿಖಿತವಾದಂತಿ ರುವ ಹಿಂದು ಹಿಂದಿನ ಅನುಭವವನ್ನು ಸಮೀಚೀನವಾಗಿ ವಿವೇಕದಿಂದ ತಿಳಿದು. ಮುಂದು ಮುಂದಿನ ಋಣ – ಕರ್ಮ – ಅನುಭವಗಳನ್ನು ಕ್ರಮಪಡಿಸುವುದಕ್ಕೆ ಆವರಣವೇ ಪ್ರಧಾನವಾದುದು. ಈ ಆವರಣ— ಸನ್ನಿವೇಶ ಪರಿಸ್ಥಿತಿಯ ಜ್ಞಾನವು ಅಹಂಕಾರ, ಅಸೂಯಾದಿಗಳಿಂದ ಮಲಿನವಾಗಿ ವಿವೇಚನೆಯ ಕಾರ್ಯವು ನಡೆಯುವುದಕ್ಕೆ ಅಡ್ಡಿಯಾಗು ವುದು. ತಿಳಿಯುವುದೊಂದು ಹೇಳುವುದು ಇನ್ನೊಂದು ಮಾಡುವುದು ಮತ್ತೊಂದು – ಆಗಿರುವಾಗ ವಸ್ತುವಿನ ನಿಜಾಂಶ ಜ್ಞಾನವು ದೂರವಾ ಗುವುದು. ವಸ್ತುಜ್ಞಾನವಿಲ್ಲದೆ ಇಚ್ಛಾ ಮತ್ತು ಕ್ರಿಯೆಗಳಿಗೆ ಪ್ರವೃತ್ತಿ ಇರುವುದಿಲ್ಲ. ಮಾನವತೆಗೆ ಅವಶ್ಯಕವಾಗಿ ಬೇಕಾದ ಗುಣಗಳು ಹೀನ ವಾದಾಗ ಋಣ, ವಾಸನೆ, ಆವರಣಗಳಿಗೆ ತಕ್ಕಂತೆ ದುಷ್ಕರ್ಮಗಳು ತಲೆದೋರಿ ದುಷ್ಫಲಗಳು ಅನುಭವಕ್ಕೆ ಬರುವುವು. ನೋವು ತಿಂದನಂತರ ವಿವೇಕೋದಯವಾಗುವುದು ಸ್ವಾಭಾವಿಕವಾಗಿರುವುದು. ದುಷ್ಫಲ– ಪ್ರಾಪ್ತಿಗೆ ಸಾಕ್ಷಾತ್‌ಸಂಬಂಧವನ್ನು ಹೊಂದದೆ ಇದ್ದಾಗ್ಯೂ ಹೊಣೆಗಾರಾ ದವರೂ ಸಹ, ದುಷ್ಫಲವನ್ನು ಅನುಭವಿಸುವ ಕಾಲದಲ್ಲಿ ನೋವನ್ನು ಮೂಲ ಸಮೇತ ಪರಿಹರಿಸುವ (ಹೋಗಲಾಡಿಸುವ) ಋಣವನ್ನು ಹೊಂದಿ ಪುನಃ ಸಂಕಲ್ಪಿಸಿ ... ಸಂಕಲ್ಪಾ ... ಕ್ಕೆ ತಕ್ಕಂತೆ ... ಮಾನಸಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಯತ್ನಗಳು ನಡೆದು ಪ್ರಕೃತಿಯ ಸಹಾಯದಿಂದ ದುಷ್ಫಲ ಪ್ರಾಪಕ ಕರ್ಮಗಳನ್ನು ಮಾಡುವವರಿಗೆ ಪ್ರತಿಭಟನೆಯಾಗುವುದು. ಈ ಪ್ರತಿಭಟನೆಗಳು ಕಾಲೋಚಿತವಾಗಿ ದೇಶೋಚಿತವಾಗಿ ಪಾತ್ರೋಚಿತವಾಗಿ ಸಾರ್ವತ್ರಿಕವಾಗಿ ಸಾರ್ವಜನಿಕವಾಗಿ ನಡೆಯುವುವು. ಇದಕ್ಕೆ ಹೊಣೆಯಾದಂತೆ ಕಾಣುವ ಕಾಲ, ದೇಶ, ಪಾತ್ರಗಳೇ ಅವತಾರವೆನಿಸುವುವು. ಇವುಗಳೇ ಆತ್ಮನ ಸೃಷ್ಟಿಯೆನಿಸುವುವು.*

ಬ್ರಹ್ಮಮಯವಾದ ಬ್ರಹ್ಮಾಂಡವು ಆಕಾಶಮಯ ವಾಯುಮಯ, ತೇಜೋಮಯ, ಅಮ್ಮಯ, ಪೃಥ್ವೀಮಯಗಳೆಂಬಂತೆ ಪ್ರತ್ಯೇಕವಾಗಿ ಸಾಕ್ಷಾತ್ಕರಿಸಲ್ಪಟ್ಟಿದೆ. ಹೀಗೆ ಗೋಚರವಾಗುವ ಪಂಚಭೂತಗಳಲ್ಲಿ ಪ್ರತಿಯೊಂದರಲ್ಲಿಯೂ ಅವಾಂತರ ಪಂಚಭೂತಾಂಶಗಳು ತಕ್ಕ ಪ್ರಮಾಣಗಳಲ್ಲಿ ಸಂಯೋಜಿತವಾಗಿವೆ. ಮಧ್ಯವರ್ತಿಯಾದ 'ತೇಜಸ್ಸು' ದೃಗ್ವಿಷಯಕ್ಕೆ ಬರುವ ತತ್ತ್ವಗಳಲ್ಲಿ ಮೊದಲನೆಯದಾದುದರಿಂದ ತದಾರಾಧಕರೂ ಅಗ್ನಿಯ ಯಜನವನ್ನು ಪ್ರಧಾನವಾಗಿಟ್ಟುಕೊಂಡು ವಿವಿಧವಾಗಿ ಅನುಷ್ಠಾನ ಮಾಡಿ ಉಪಾಸಿಸಿರುವರೂ ಆದ ತಪಸ್ವಿಗಳು ಜ್ಯೋತಿಶ್ಶಾಸ್ತ್ರವನ್ನು ರೂಪಿಸಿ, ರೂಢಿಸಿರುತ್ತಾರೆ.

ಕರ್ಮಾಚಾರ ವ್ಯವಹಾರ ಸಂಸ್ಕೃತಿಗಳನ್ನು ಒಳಗೊಂಡ ಜೀವನಯಜ್ಞವನ್ನೂ ಭೂಮಿಯೂ ಸೇರಿ ಸೌರವ್ಯೂಹದ ಮಂಡಲದಲ್ಲಿರುವ ತೇಜೋಮೂರ್ತಿಗಳ ವರ್ತನೆಯನ್ನೂ- ವಿಭಜನ ಸಂಯೋಜನಗಳಿಗೆ ಗುರಿಮಾಡಿ ಪರಸ್ಪರ ಸಾಮಾನ್ಯವಾಗಿರುವ ಜೀವನಯಜ್ಞದ ಕಲೆಗಳನ್ನು ಗೊತ್ತುಮಾಡಿರುತ್ತಾರೆ. ವಿಭಜನ ಸಂಯೋಜನಗಳಿಗೆ ಒಳಗಾದ ಪಂಚಭೂತಾತ್ಮಕ ತೇಜೋಮೂರ್ತಿಗಳೇ ದೇಹಿಯು ಧರಿಸುವ ಉಪಾಧಿಗೆ ಕಾರಣವಾದ ಬೀಜ ಮತ್ತು ಕ್ಷೇತ್ರಗಳ ಆಶ್ರಯಸ್ಥಾನವಾಗಿರುತ್ತವೆ.

---

* 'ಆತ್ಮಾನಂ ಸೃಜಾಮ್ಯಹಂ' — ಗೀತಾ.

ಆ - ಸಮಂತಾತ್ ಅತತಿ, ಮನುತೇ ಚ ಇತಿ ಆತ್ಮಾ ಜೀವಃ, ದೇಹೀ.

— ವಿದ್ವಾನ್ ಶ್ರೀ ಎಸ್. ಎಲ್. ಶ್ರೀಕಂಠಯ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದೇಹಿಯ ಋಣಾನುಬಂಧಕ್ಕೆ ಸರಿದೂಗುವ ವಿಭಜನ ಸಂಯೋಜನಗಳು ಪಂಚಭೂತಾತ್ಮಕವಾಗಿಯೇ ಇರುವುವು. ಇಂತಹ ಪಂಚಭೂತಾತ್ಮಕ ಮೂರ್ತಿಗಳು (ಜ್ಯೋತಿರ್ಗ್ರಹಗಳು) ಭೂಗೋಲ ಖಗೋಲಗಳ ಮಧ್ಯವರ್ತಿ ಪ್ರದೇಶದಲ್ಲಿ ಸೌರವ್ಯೂಹದಲ್ಲಿ ಚಲನ ವಲನ ವೇಗೋತ್ಕರ್ಷದಿಂದ ತೇಜಸ್ಸಾಗಿ ಕಂಡುಬಂದು, ಯಾವ ಯಾವ ಪ್ರಭಾವ ಬೀರುತ್ತವೆಂಬುದನ್ನು ಅನುಸಂಧಾನ ಪರಾಯಣರು ತಿಳಿಯುತ್ತಾರೆ. ಈ ತೇಜೋಮೂರ್ತಿಗಳಲ್ಲಿರುವ ವಸ್ತು ವಿಭಜನ ಸಂಯೋಜನ ವಿಧಾನವನ್ನು ಜೀವನ ಲಕ್ಷಣ, ಕಲೆಗಳ ಲಕ್ಷಣಗಳೊಂದಿಗೆ ವಿವರಿಸಲಾಗಿದೆ.

ಉಪಾಧಿಗಳಲ್ಲಿ ಕಾಣುವ ವಸ್ತುಗಳ ವಿಭಜನ ಸಂಯೋಜನ ಪ್ರಮಾಣಗಳಿಗೂ ಜೀವನದ ತನ್ಮಾತ್ರ ವಸ್ತು ವಿಭಜನ ಸಂಯೋಜನ ಪ್ರಮಾಣಗಳಿಗೂ, ಸೌರವ್ಯೂಹದಲ್ಲಿ ಬ್ರಹ್ಮಾಂಡ ತೇಜಸ್ಸಿನಲ್ಲಿ ಕಂಡ ವಿಭಜನ ಸಂಯೋಜನ ಪ್ರಮಾಣಗಳಿಗೂ ಸಾಮ್ಯವು ತೋರಿಬಂದು ಜೀವನದಲ್ಲಿ ಕಂಡ ಕಲೆಯ ವಿಭಾಗಗಳ ಲಕ್ಷಣದೊಡನೆ ವಿವರಿಸಿದ್ದಾರೆ.

ಸೌರವ್ಯೂಹದಲ್ಲಿ ಕಂಡ ವೇದೋಕ್ತ ಹೆಸರುಗಳು ವೇದೋಕ್ತವಾದ ಜೀವನಕಲಾ ವಿನ್ಯಾಸಗಳಲ್ಲಿಯೂ ಕಂಡು ಬರುತ್ತವೆ. ಗಣಿತಶಾಸ್ತ್ರ ರೀತ್ಯಾ ರೂಢಿಸಿ ಸರ್ವ ಸಾಮಾನ್ಯವಾಗಿ ಅನ್ವಯಿಸಿಕೊಳ್ಳಬಹುದಾದ ಶಾಸ್ತ್ರಪ್ರಕ್ರಿಯೆ – ಸೂತ್ರಗಳನ್ನು ಕೊಟ್ಟಿರುತ್ತಾರೆ. ಇವುಗಳಿಂದ ದೇಹಿಗಳ ಋಣಾನುಬಂಧ, ಕರ್ತವ್ಯ, ಶಕ್ತಿ, ಸ್ವಾತಂತ್ರ್ಯಗಳ ಮಿತಿಯನ್ನು ತಿಳಿಯಲು ಅವಕಾಶವಿದೆ.

ಗೊತ್ತಾದ ವಿಭಜನ ಸಂಯೋಜನ ಪ್ರಮಾಣಗಳೂ ನಿರ್ದಿಷ್ಟವಾದ ಜೀವನ ಯಜ್ಞದ ಕಲೆಗಳನ್ನು ಸೂಚಿಸುವ ತೇಜಸ್ಸೂತ್ರ ಪ್ರಕ್ರಿಯೆಗಳೂ ದಿವ್ಯಜ್ಞಾನ ತಪಃ ಫಲವಾಗಿ ದೃಷ್ಟವಾಗಿವೆ.

ಪಿಂಡಾಂಡ ಬ್ರಹ್ಮಾಂಡಗಳಲ್ಲಿರುವ ತೇಜೋಮೂರ್ತಿಗಳ ಸ್ಥಿತಿಗತಿಗಳಿಂದ ವ್ಯಂಜಕವಾಗುವ ಜೀವನ ಯಜ್ಞದ ಕಲೆಗಳು ಪರಸ್ಪರ ಸಮಾನವಾಗಿರುವುವು. ಮತ್ತು ಚಲನವಲನಗಳ ಪ್ರಭಾವದಿಂದ ಶಕ್ತಿಯು ಆಕರ್ಷಣಾಪಕರ್ಷಣಗಳು ಬ್ರಹ್ಮಾಂಡ ಪಿಂಡಾಂಡಗಳನ್ನು ಆವರಿಸಿರುವುವು. ಆಯಾ ಕಲಾ ವಿನ್ಯಾಸಗಳಿಗೆ ಅನುರೂಪವಾಗಿ ಜೀವನಯಜ್ಞ

CC-0. In Public Domain. Gurukul Kangri Collection, Haridwar

ಜ್ಞ

Digitized by Arya Samaj Foundation Chennai and eGangotri


ಕಲೆಯ ಕಾರ್ಯಕಾರಿ ಸಮಾರಂಭದಲ್ಲಿ ದೇಹಿಯ ಹಿಂದಿನ ಋಣವು ಯಾವುದು ? ವರ್ತಮಾನ ಜನ್ಮದ ಶಕ್ತಿ ಸ್ವಾತಂತ್ರ್ಯ ಪ್ರಯೋಗಕ್ಕೆ ಹಿಂದಿನ ಕರ್ಮ ಫಲವು ಸಹಕಾರಿಯೇ ? ವಾ ಅಪಕಾರಿಯೇ ? ಪ್ರತಿಕಾರಿಯೇ ? ಬಹುಕಾಲದಿಂದ ಅನುಸರಿಸಿ ಬಂದಿರುವ ನಮ್ಮದೇ ಆದ ಋಣವು ಶೇಷವಾಗಿ ಮುಂದರಿಯುವುದಾಗಿದ್ದರೆ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲವಾಗಿರುತ್ತದೆ. ಹೊಸ ಹೊಸ ಋಣಗಳಿಗೆ ಯತ್ನಿಸಿ ವಿಘ್ನಗಳನ್ನು ಅನುಭವಿಸುವುದಕ್ಕೆ ಅವಕಾಶ ಕೊಡದಂತೆ ಹಿಂದಿನ ಋಣ ಶೇಷಕ್ಕೆ ತಕ್ಕಂತೆ ವ್ಯವಸಾಯ ಮಾಡಿ ಇಷ್ಟಾರ್ಥ ಸಿದ್ಧಿಯನ್ನು ಹೊಂದಿ ಬಂಧನದಿಂದ ತಪ್ಪಿಸಿಕೊಳ್ಳುವುದಕ್ಕೆ ದೇಹಿಯ ಕಾರ್ಯಕ್ಷೇತ್ರ ವಾವುದು ? — ಇತ್ಯಾದಿಗಳನ್ನು ಜೀವನಕಲಾ ವಿನ್ಯಾಸ ವಿಜ್ಞಾನ ದಿಂದ ತಿಳಿಯುವುದಕ್ಕೆ ಸಹಕಾರವಾಗುವಂತೆ ದೇಹಿಗಳ ಸರ್ವವಿಧ ಮಿತಿ ಗಳನ್ನು ತಿಳಿಸುವ ಶಾಸ್ತ್ರವನ್ನು ಅಗ್ನಿಸ್ವರೂಪರಾದ ಶಾಸ್ತ್ರವಿದರು ತಿಳಿಯ ಪಡಿಸಿರುತ್ತಾರೆ. ಈ ಶಾಸ್ತ್ರದ ಫಲವನ್ನು ಅನುಭವಿಸುವುದಕ್ಕೆ ಅಡ್ಡಿ ಯಾಗುವ ವಂಚಕ ವೇಷಾದಿಗಳನ್ನು ತಿಳಿಸಿ ಎಚ್ಚರಿಸುವುದಕ್ಕೂ ರಾಜ ನೀತಿ ಶಾಸ್ತ್ರಕ್ಕೆ ಶರಣುಹೋಗಿ ಧರ್ಮಗ್ಲಾನಿಯನ್ನು ದೂರೀಕರಿಸಬೇಕು.

ಧರ್ಮಕ್ಕೆ ಸಾಧನವಾದ ಶರೀರವನ್ನು ಆಯುರ್ವೇದೋಕ್ತವಾದ ಸೂಕ್ತಿಗಳಿಂದಲೂ ಆಹಾರ ವಿಹಾರಗಳಿಂದಲೂ ರೋಗಾದಿಗಳನ್ನು ತಡೆಗಟ್ಟುವ ಮತ್ತು ಗುಣಪಡಿಸುವ ತೃಣ ಮೂಲಿಕಾದಿಗಳಿಂದಲೂ ಎಚ್ಚರಿಕೆಯಿಂದ ಪೋಷಿಸಿ ಅನುಷ್ಠಾನ ಸಾಮರ್ಥ್ಯವನ್ನು ಹೊಂದಬೇಕು ಆಲಸ್ಯಾದಿಗಳನ್ನು ಹೋಗಲಾಡಿಸಿಕೊಳ್ಳಬೇಕು. ಸ್ವದೇಶ–ಸ್ವಧರ್ಮ ವಿರುದ್ಧವಾದ ಔಷಧಿಗಳಿಂದ ಶರೀರ ಸಾಮರ್ಥ್ಯವು ಕುಂಠಿತವಾಗುವು ದೆಂಬುದನ್ನು ವಿವೇಕದಿಂದ ತಿಳಿದು ದೂರೀಕರಿಸಬೇಕು. ವೇದ – ಆಗಮಾದಿ ಶಾಸ್ತ್ರಗಳಲ್ಲಿ ಹೇಳಿರುವಂತೆ ಮಂತ್ರ ಪ್ರಯೋಗಗಳಿಂದ ಆಧಿ ವ್ಯಾಧಿಗಳನ್ನು ತಡೆಗಟ್ಟುವ ಅಥವಾ ಗುಣಪಡಿಸಿಕೊಳ್ಳುವ ಸಂಸ್ಕಾರ ಗಳಿಂದ ಶರೀರವನ್ನು ಅನುಷ್ಠಾನಕ್ಕೆ ಅರ್ಹವಾದುದನ್ನಾಗಿ ಮಾಡಿ ದೇಹಿ ಗಳು ಸರ್ವ ಶಾಸ್ತ್ರಗಳ ಸಾರಸಂಗ್ರಹವಾದ ರಾಜಧರ್ಮದ ಪರಿಮಿತಿಯಲ್ಲಿ ಸ್ವಧರ್ಮಾನುಷ್ಠಾನವನ್ನು ವಿವೇಕ ವಿಚಾರಗಳಿಂದ ನಡೆಸಿದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಷ್ಠಾನದ ಪರಿಪೂರ್ಣತೆಯ ಫಲವನ್ನು ಹೊಂದಿ ಸರ್ವದಾ ಸರ್ವತ್ರ ಸುಖವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಸಂಸ್ಕೃತಿ ಮೂಲವಾದ ಅನುಷ್ಠಾನಗಳ ವಿವರಣೆ ಮತ್ತು ಮರ್ಮವನ್ನು ತಿಳಿಯಪಡಿಸಿ ಧರ್ಮಗ್ಲಾನಿಯನ್ನೂ ಅಧರ್ಮ ವ್ಯಾಪಾರಗಳ ಹೆಚ್ಚಿಗೆಯನ್ನೂ ಹೋಗಲಾಡಿಸುವುದಕ್ಕೆ ಆತ್ಮಸೃಷ್ಟಿಯೋಪಾದಿಯಲ್ಲಿರುವ ರಾಜನೀತಿಯ ಮಹಿಮೆಯನ್ನು ತೋರಿಸುವುದೇ ವಿಭೂತಿಪುರುಷಾವತಾರ ರಹಸ್ಯ. ಕ್ಷಾತ್ರವನ್ನು ಬೆಳಗುವ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದಗಳ ಅನುಷ್ಠಾನವನ್ನು ಸಮಾನವಾಗಿ ಹೊಂದಿರುವ ದೇಹಿಗಳೆಲ್ಲರೂ ಇದಕ್ಕಾಗಿ ಅವತಾರವನ್ನು ಹೊಂದುತ್ತಾರೆ. ಸರ್ವ ಸಾಮರಸ್ಯದ ಅವತಾರ ವಿಶೇಷವಾದ ಸರ್ವ ದರ್ಶನ, ಸರ್ವ ಶಾಸ್ತ್ರ, ಸರ್ವಕಲಾ ಅನುಭವಗಳು, ಭೂಗೋಲ ಜ್ಞಾನಾದಿ ಕಲೆಗಳು ಏಕ ಕಾಲದಲ್ಲಿ ಸಮಷ್ಟಿ ರೂಪದಲ್ಲಿ ಎಂಬಂತೆ ಲಭ್ಯವಾಗಿರುವ ಈ ಸನ್ನಿವೇಶದಲ್ಲಿ ವಿಮರ್ಶಾತ್ಮಕ ರಸಾಭಿಜ್ಞ ಸಂಶೋಧನಗಳು 'ಆತ್ಮಾನಂ ಸೃಜಾಮ್ಯಹಂ' ಎಂಬುದನ್ನು ಚರಿತಾರ್ಥವಾಗುವಂತೆ ಮಾಡಬೇಕಾಗಿದೆ.

ಮತ್ಸ್ಯಾದ್ಯವತಾರ ಕಥೆಗಳಿಂದ ಗೊತ್ತಾಗುವ ದೇಹಿಯ ವ್ಯಾಪಾರಗಳು ಸರ್ವದಾ ಸರ್ವರಲ್ಲಿಯೂ ಉದಯಿಸುವುವು. ಮತ್ತು ಮರೆಯಾಗುವುವು. ಒಂದೊಂದು ಅವತಾರಕ್ಕೆ ಮೀಸಲಾಗಿರುವ ವ್ಯಾಪಾರಗಳು — ಎಂಬಂತೆ ಪ್ರಕೃತಿಯಲ್ಲಿರುವುದಿಲ್ಲ. ಕೃತ, ತ್ರೇತಾ, ದ್ವಾಪರ ಎಂಬ ಹೆಸರುಳ್ಳ ಯುಗಗಳಲ್ಲಿ ಯಾವ ಯಾವ ಒಳ್ಳೆಯ ಅಥವಾ ದುಷ್ಟ ಪರಿಸ್ಥಿತಿಗಳು ಇದ್ದುವೋ ಅವು 'ಕಲಿ' ಹೆಸರಿನ ಯುಗದಲ್ಲಿಯೂ ಇವೆ. ಕಾಲ ಗಣನೆಗೆ ಸಂಕೇತವಾಗಿ ಉಪಯುಕ್ತವಾಗಿರುವ ಶಬ್ದಗಳಿಂದ ಕೃತ ತ್ರೇತಾದಿಗಳು ಸರ್ವ ಶಕ್ತರೂ, ಸರ್ವಸ್ವತಂತ್ರರೂ, ಋಣಾನುಬಂಧ ರೀತ್ಯಾ ಸ್ವಾತಂತ್ರ್ಯದ ಮಿತಿಯನ್ನು ಕಲ್ಪಿಸಿಕೊಂಡವರೂ ಆದ ದೇಹಿಗಳ ವ್ಯಾಪಾರಗಳಲ್ಲಿ ಪ್ರವೇಶಿಸಲಾರವು. ಕೃತ ತ್ರೇತಾ ದ್ವಾಪರ ಕಲಿಗಳು ಅನುಷ್ಠಾನಾವಸ್ಥೆಯ ವಿಶೇಷಗಳು ಆಗಿವೆ. ಪ್ರತಿಯೊಬ್ಬನ ವರ್ತನೆಯಲ್ಲಿಯೂ ಪ್ರತಿ ಕ್ಷಣದಲ್ಲಿಯೂ ಕೃತ ತ್ರೇತಾ ದ್ವಾಪರ ಕಲಿಗಳ ಗುಣ ಶಕ್ತಿಕರ್ಮಗಳು ಕಾಣುತ್ತಿರುವುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


'ರಾಜಾ ಕಾಲಸ್ಯ ಕಾರಣಂ' ಎಂಬಂತೆ ಸರ್ವವೂ ಪ್ರಭುಶಕ್ತಿಗೆ ಒಳಪಡತಕ್ಕುವಾಗಿವೆ. ಪಂಚ ವಲಯಗಳಲ್ಲಿ 'ರಾಜ್ಯ'ವನ್ನು ನಿರ್ವಹಿಸುವವರೆಲ್ಲರೂ ರಾಜರಾಗಿ (ರಯೀಣಾಂ ಪತಯಃ) ಪ್ರಭುಶಕ್ತಿಯ ಸ್ಥಾನ ಮಾನಾದಿಗಳನ್ನು ಅರಿತು ಪ್ರಯೋಗಿಸಿದರೆ ಕಲ್ಯಾಣ ಅವಸ್ಥೆಗಳಲ್ಲಿ ಕರ್ಮವು ನಡೆದು ಕಾಲವೆನಿಸುವುದು. ಕರ್ಮವು, ಕರ್ಮ ಪ್ರಪಂಚವು ಸುಖಕರವಾಗಿ ಶ್ರೇಯಃಪ್ರಾಪ್ತಿಯನ್ನುಂಟುಮಾಡುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ೮. ಜೀವನಯೋಗ - ಅನುಸಂಧಾನ

ಋಣಾನುಬಂಧದಿಂದ ಒಂದು ಕಡೆ ಜನ್ಮವೆತ್ತಿ 1) ಸ್ವಾತಂತ್ರ್ಯ ವನ್ನು ಪ್ರಯೋಗಿಸಿ ವ್ಯವಸಾಯ ಮಾಡುವುದರಿಂದ ಅನುರೋಧ ವಿರೋಧಾತ್ಮಕವಾದ ಋಣಕಲ್ಪನೆಗೆ ಗುರಿಯಾಗಬಹುದಾದ ಸನ್ನಿವೇಶ ವನ್ನೂ 2) ಸಂಸ್ಕೃತಿಯು ಸಾಲದೆ ಜೀವನಯಜ್ಞದ ಋಣಕಲ್ಪನೆಗೆ ಗುರಿಯಾಗಬಹುದಾದ ಸನ್ನಿವೇಶವನ್ನೂ 3) ಸಂಸ್ಕೃತಿಯು ಸಾಲದೆ ಜೀವನಯಜ್ಞದ ಯೋಗ ರಹಸ್ಯವು ಮರೆಯಾಗಿರುವ ಸನ್ನಿವೇಶದಲ್ಲಿ ಸಮತಾ, ಶರಣಾಗತಿ, ಸಮರ್ಪಣ ಬುದ್ಧಿ ಎಂಬುವುಗಳ ಪಾಠಗಳಲ್ಲಿ ಶಿಕ್ಷಣವು ಹೇಗೆ ಲಭ್ಯವಾಗುವುದೆಂಬುದನ್ನೂ 4) ಶಿಕ್ಷಣ (ತಪಸ್ಸು) ಪೂರ್ತಿಯಾದನಂತರ ಫಲಾನುಭವವಾಗುವ ವಿಚಾರವನ್ನೂ ಉದಾಹರಿಸಿ ತೋರಿಸಲು ಹರಿಶ್ಚಂದ್ರ ಪ್ರಜೆಯ ಅನುಭವವನ್ನು ಆರಿಸಿರುತ್ತಾರೆ. ಹರಿಶ್ಚಂದ್ರ ಶಬ್ದವು ಸಾಮಾನ್ಯವಾಗಿ ಆಕಸ್ಮಿಕವಾಗಿ ಆರಿಸಿದುದಾಗಿರ ಬಹುದು. ಮನುಷ್ಯ ಸಾಮಾನ್ಯಕ್ಕೇ ಅನ್ವಯಿಸಿಕೊಳ್ಳಬಹುದಾದ ಅನುಭವ ವಿವರಗಳಿಗೆ ದೃಷ್ಟಾಂತ ತೋರಿಸಲು ಅನ್ವರ್ಥ ನಾಮಗಳನ್ನು ಆರಿಸಿಕೊಳ್ಳುವುದು ಆಖ್ಯಾನಗಳಲ್ಲಿ ಕಂಡುಬಂದಿದೆ. ಅಂತಹ ಹರಿಶ್ಚಂದ್ರ ಮೊದಲಾದ ಅಂಕಿತ ನಾಮಗಳನ್ನು ಹೊಂದಿದವರು ಜೀವಿಸಿ ದ್ದರು ಎಂದಾಗಲೀ, ಸರ್ವರೂ ಆದರಿಸುವಂತೆ ಮಾರ್ಗದರ್ಶನಕ್ಕಾಗಿ ಮತ್ತು ನಿದರ್ಶನಕ್ಕಾಗಿ ಕಲ್ಪಿಸಿದ ವ್ಯಕ್ತಿಗಳ ಸಂಕೇತ ನಾಮಗಳೆಂದಾಗಲೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಗ್ರಹಿಸಬಹುದು. ಸುಖ ದುಃಖಗಳಿಗೆ ಭಾಗಿಗಳಾದ ಸರ್ವರೂ ದೃಷ್ಟಾಂತದ ಸಂಕೇತ ನಾಮಗಳ ಮೂಲಕ ನಿತ್ಯಜೀವನದ ಅನುಭವ ಗಳನ್ನು ಪರಿಚಯ ಮಾಡಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳ ಬಹುದು; ಮತ್ತು ಆಯಾ ಮಾದರಿಯ ಜೀವನ ವೃತ್ತಾಂತಗಳನ್ನು ದೇಹಿಗಳು ತಮ್ಮ ವರ್ತನೆಯಲ್ಲಿ ಅಳವಡಿಸಿಕೊಳ್ಳಬಹುದು; ವಿರೋಧ ವಿಷಯಗಳಾದರೆ ವಿಸರ್ಜಿಸಬಹುದು. ಹೀಗೆ ವ್ಯಕ್ತಿಗಳ ಸಂಸ್ಕಾರದ ಅಂತಸ್ತಿಗೆ ತಕ್ಕಂತೆ ಮಕ್ಕಳು ಮೊದಲುಗೊಂಡು ವಯೋವೃದ್ಧರ ಪರ್ಯಂತ ಸರ್ವರೂ ಸ್ವಂತವಾಗಿ ಅನುಭವಿಸಿದಂತೆ ಅಥವಾ ಅನುಭವಿ ಸುವಂತೆ ದೃಷ್ಟಾಂತ ಕಥಾಸಂದರ್ಭಗಳನ್ನು ತಿಳಿದು ಹಿಗ್ಗದೆಯೂ ತಗ್ಗದೆ ಯೂ, ಮುಗ್ಗದೆಯೂ ಈಗಿನ ಸ್ವಕರ್ಮ ಮತ್ತು ಹಿಂದಿನ ಸ್ವಕರ್ಮ ಫಲಾನುಸಾರ ಶ್ರೇಯಸ್ಸನ್ನು ಸಮಾಧಾನದಿಂದ ಸಾಧಿಸಬಹುದಾಗಿದೆ.

ಚಂದ್ರಮತಿ ಮತ್ತು ಹರಿಶ್ಚಂದ್ರ ಎಂಬ ಹೆಸರುಗಳು, ಸಂಸ್ಕೃತಿಯ ಕೆಲವು ಹಂತಗಳನ್ನೇರಿದ ಆಚಾರವನ್ನು ಪಾಲಿಸುವುದರಿಂದ ಶ್ರೇಷ್ಠತೆಯ ನ್ನು ಹೊಂದಿದವರೆಲ್ಲರಿಗೂ ಸಲ್ಲಬಹುದು. 'ಕೆಂಪು ಕಿರಣ' ವೆಂಬ ಅರ್ಥವುಳ್ಳ ರೋಹಿತಾಶ್ವ ಎಂಬ ಹೆಸರು ಜೀವನದ ಅರುಣೋದಯವನ್ನು ಸೂಚಿಸುವುದಾಗಿ, ಬಾಲಕರಿಗೂ ಯುವಕರಿಗೂ ಅನ್ವಯಿಸಬಹುದಾದ ಸಂಕೇತ ನಾಮವಾಗಿರುವುದು.

ಸುಸಂಸ್ಕೃತರು ಸಂಸ್ಕೃತಿಯ ಅಭಿನಿವೇಶದಿಂದ ಜೀವನಯಜ್ಞ ನಿರ್ವಾಹಕ್ಕೆ ಕುಂಡಲಿನೀ ಶಕ್ತಿಯ ಪ್ರತಿಬಿಂಬವಾದ ಯಜ್ಞೋಪವೀತ ವನ್ನು ಧರಿಸಿ ಸನ್ಮಾರ್ಗದಲ್ಲಿರುವವರಾದರೂ ರಾಜನೀತಿಯೆಂಬ ರಾಜ ಯೋಗದ ರಹಸ್ಯವನ್ನು ತಿಳಿಯದೆ ನಿವಾರಣೀಯವಾದ ದೋಷಗಳಿಂದ ಕೂಡಿರುತ್ತಾರೆ. ಆದರೆ ಸಂಸ್ಕೃತಿಯ ಅಭಿನಿವೇಶವೆಂಬ ಸದುದ್ದೇಶದಿಂದ ಅಂತಹವರನ್ನು ಉನ್ನತ ಸ್ಥಾನಕ್ಕೆ ಸಮಯೋಚಿತವಾಗಿ ಏರಿಸಲು ತಕ್ಕ ಸನ್ನಿವೇಶಗಳನ್ನು ಪ್ರಸನ್ನಳಾದ ಪ್ರಕೃತಿ ಮಾತೆಯೂ (ವಿಧಿಯೂ) ಖಚಿತವೂ ಕಲ್ಪಿಸುವುವು.

ಅಭಿಮುಖವಾದ ವಿಧಿಯು – ದೇಹಿಗೆ ಅಭಿಮತವಾದುದನ್ನು ಎಷ್ಟು ದೂರದಲ್ಲಿ, ಕಾಣದೆ ಕೇಳದೆ ಇರುವ ಸ್ಥಳದಲ್ಲಿದ್ದರೂ ಅದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ತಂದು ಒದಗಿಸುವುದೆಂಬುದು ಸ್ವಕರ್ಮದ ತತ್ವ– ಜೀವಾಳ – ತಿರುಳು.*

ಹರಿಶ್ಚಂದ್ರನಾದ ದೇಹಿಯು 1) ಯಾವ ಯಾವ ಸನ್ನಿವೇಶದಲ್ಲಿ ಹೇಗೆ ವರ್ತಿಸಬೇಕಾಗುತ್ತದೆ ? ಮತ್ತು ಹೇಗೆ ವರ್ತಿಸುತ್ತಾನೆ ? ಮತ್ತು ಆ ವರ್ತನೆಯ (ಸ್ವಕರ್ಮದ) ಫಲಗಳನ್ನು ಅನುಭವಿಸಿ ಮುಂದೆ ಮುಂದೆ ಹೇಗೆ ಸರಿಯುತ್ತಾನೆ ? ಹೇಗೆ ಉತ್ತೀರ್ಣನಾಗುತ್ತಾನೆ ? 2) ಜೀವನವನ್ನು ಋಣ ಕರ್ಮ ಮತ್ತು ಋಣ ಕರ್ಮಫಲಾನುಸಾರ ಅನುಷ್ಠಾನ ಮಾಡುವಾಗ ಅನುರೋಧವಾದ ಮತ್ತು ವಿರೋಧವಾದ ಸಹಾಯಗಳು ವ್ಯಕ್ತಿಗಳಿಗೆ ಹೇಗೆ ಘಟಿಸುವುವು ? 3) ಘಟನೆಗಳು ಅನುರೋಧವಾಗಿ ಕಂಡುಬಂದರೂ (ಕಣ್ಣಿಗೆ ಕಂಡರೂ) ಅವು ಋತದ ದೃಷ್ಟಿಯಿಂದ ಹೇಗೆ ವಿರೋಧಫಲಕಾರಿಯಾಗುತ್ತವೆ ; ತನಗೆ ವಿರೋಧವೆಂದು ಭಾವಿಸಿದ್ದರೂ ಅವು ಹೇಗೆ ಅನುರೋಧ ಫಲಜನಕವಾಗುತ್ತವೆ. ಎಂಬಿವೇ ಮೊದಲಾದುವೆಲ್ಲವನ್ನೂ ಹರಿಶ್ಚಂದ್ರ ಆಖ್ಯಾನ ವಿವರಣೆಯಿಂದ ತಿಳಿಯುತ್ತಾನೆ.

ಋತ ಮತ್ತು ಋಣಕ್ಕನುಗುಣವಾಗಿ — 'ಯಾದೃಶೀ ಭವಿತವ್ಯತಾ' ಯಾವ ಫಲಾನುಭವ ಪ್ರಾಪ್ತಿಯು ದೇಹಿಗಾಗಿ ಕಾದಿರುವುದೋ ಅದನ್ನು ಪೂರೈಸುವುದಕ್ಕೆ ತಕ್ಕಂತೆ – 'ಮತಿರುತ್ಪದ್ಯತೇ ಪುಂಸಾಂ' ಸ್ತ್ರೀಪುರುಷ ಪ್ರಜೆಗಳಿಗೆ ಬುದ್ಧಿ ಸಂಕಲ್ಪಗಳು ಉದಯಿಸುವುವು. 'ವ್ಯವಸಾಯೋಽಪಿ ತಾದೃಶಃ' ಪ್ರಯತ್ನಗಳೂ ತದನುಸಾರವಾಗಿ ನಡೆಯುವುವು. ಮತ್ತು 'ಸಹಾಯಾಶ್ಚ ತಥೈವ ಸ್ಯುಃ' ಸಹಾಯಗಳೂ ಅಭಿಮುಖವಾಗಿಯೇ ಒದಗುವುವು. ಪರಿಣಾಮದಲ್ಲಿ ಫಲಪ್ರಾಪ್ತಿ – ಅನುಭವಗಳು ಆಗುವುವು. ಹಿಂದಿನ ಕರ್ಮದ ಫಲವು ಅನುಭವಕ್ಕಾಗಿ ಒದಗುವುದನ್ನೂ, ತಾತ್ಕಾಲಿಕವಾಗಿ ಸ್ವತಂತ್ರಿಸಿ ನಡೆಯುವ ಕರ್ಮಗಳ ಫಲಾನುಭವ ವಿವರವನ್ನೂ ರಾಜನೀತಿ ಪಾಠವು ತಿಳಿಸುವುದು.

೧

ಯೋಗಕ್ಕೂ ಯೋಗ ಸಿದ್ಧಿಗೂ ಮೊದಲನೆಯ ಹಂತವು ಸದ್ಗುರು ಸಾನ್ನಿಧ್ಯವಾಗಿರುತ್ತದೆ. ಸತ್ ಸ್ವಕರ್ಮದಲ್ಲಿ ಶ್ರದ್ಧಾಳುವಾದವನಿಗೆ

---

* ದ್ವೀಪಾದನ್ಯಸ್ಮಾದಪಿ ಮಧ್ಯಾದಪಿ ಜಲನಿಧೇರ್ದಿಶೋಽಪ್ಯಂತಾತ್ ಆನೀಯ ಝಟಿತಿ ಘಟಯತಿ ವಿಧಿರಭಿಮತಮಭಿಮುಖೀಭೂತಃ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸು ಪರಿಪಕ್ವವಾದಾಗ ಗುರುವನ್ನು ಅನ್ವೇಷಣಮಾಡುವ ಸ್ಥಿತಿಯು ಉಂಟಾಗುತ್ತದೆ. ಗುರುವು ಎಷ್ಟೇ ದೂರವಲ್ಲಿದ್ದರೂ ಸಾಧಕನ ಅನ್ವೇಷಣದ ಗೀಳು ಗುರುಹೃದಯಕ್ಕೆ ನಾಟುವುದು. ಉತ್ತಮಾಧಿಕಾರಿಗಳಾದ ಇಂತಹ ಶಿಷ್ಯರನ್ನು ಅನ್ವೇಷಣೆ ಮಾಡಿಕೊಂಡು ಗುರುವೇ ಸ್ವತಃ ಬಂದು ಅನುಗ್ರಹಿಸುತ್ತಾನೆ.† ಆಚಾರ ನಿಷ್ಠೆ ಇರುವ ಗೃಹಸ್ಥರೇ ಮೊದಲಾದವರಿಗೆಲ್ಲಾ ಈ ಸನ್ನಿವೇಶವು ಸದಾಚಾರದ ಫಲವಾಗಿ ಬಂದೇ ಬರುವುದು. ಸತ್ಸಂಗ ಪ್ರಾಬಲ್ಯದಿಂದ ದುರಭಿಮಾನ ತ್ಯಾಗವಾಗಿ ಗುರುಬೋಧನೆ ಪಡೆಯಲು ಅರ್ಹತೆಯುಂಟಾಗುವುದು, ಯೋಗವು ಲಭಿಸುವುದು (ಯೋಗಃ = ಆತ್ಮಲಾಭಃ). ಈ ಹಂತದಲ್ಲಿರುವ ಪ್ರಜೆಗಳ ಹೆಸರನ್ನು ಚಂದ್ರಮತಿ, ಹರಿಶ್ಚಂದ್ರ ಪದಗಳು ಅಲಂಕರಿಸುವುವು.

೨

ಸದಾಚಾರ ವರ್ತನೆಯಿಂದ ಪುಣ್ಯವನ್ನು ಗಳಿಸಿದರೂ ಮನಸ್ಸಿಗೆ ಶಾಂತಿಯು ಲಭಿಸುವುದಿಲ್ಲ. ಪುಣ್ಯದ ಫಲವನ್ನು ಅನುಭವಿಸಿ, ನಿರ್ಋಣಿಯಾದ ಹೊರತು ಪರಮ ಪದವಿಯೂ ಲಭಿಸುವುದಿಲ್ಲ. ಪುಣ್ಯಫಲವನ್ನು ಅನುಭವಿಸಿದನಂತರ ಲಾಭವಾಗಬಹುದಾದ ಪರಮ ಪದವಿಗೆ ಕಾದಿದ್ದರೆ ಮಧ್ಯಕಾಲದಲ್ಲಿ ಪುನಃ ಪುನಃ ಋಣ ಬಂಧನಕ್ಕೆ ಅವಕಾಶವುಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಅಪ್ರಕೃತವೆನಿಸುವ ಪುಣ್ಯದ ಫಲವನ್ನು ಸುಸಂಸ್ಕೃತರಿಗೆ ಕೃಷ್ಣಾರ್ಪಣ ಬುದ್ಧಿಯಿಂದ ಸಂನ್ಯಸ್ತಮಾಡಿ ಸಾತ್ವಿಕವಾಗಿ ದಾನಮಾಡಿದರೆ ಕೂಡಲೆ ಪುಣ್ಯಫಲಾನುಭವದ ದೆಸೆಯಿಂದ ಬಿಡುಗಡೆಯಾಗಿ ಜೀವನ್ಮುಕ್ತಿ ಪದವಿಯು ಸ್ವತ ಏವ ಉದಯಿಸುವುದು.

---

† ಸಿದ್ಧಿ ಹೊಂದಿದರೂ ವಿವೇಚನೆ ಇಲ್ಲದಿರುವವರ ದರ್ಶನ ವಾಗ್ಮಿತೆಗಳು, ಋಣವು ಪಕ್ವವಾಗಿರುವವರ ಮನಸ್ಸಿನಲ್ಲಿ ಕ್ಷೋಭೆಯನ್ನುಂಟುಮಾಡಿ ಆವೇಶಕ್ಕೆ ಒಳಗಾಗುವಂತೆ ಮಾಡಿ ದೇಹಿಗಳನ್ನು ನಷ್ಟಕ್ಕೆ ಈಡುಮಾಡುವುವು. ರಾಜನೀತಿ ಜ್ಞಾನದಿಂದ ಎಚ್ಚರವಾಗಿದ್ದು ಧೈರ್ಯ-ಸ್ಥೈರ್ಯಾದಿಗಳಿಂದ ವಿವೇಕವನ್ನು ಬಲಪಡಿಸಿಕೊಂಡು ಕಾರ್ಯಸಾಧನೆ ಮಾಡಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಸುಸಂಸ್ಕೃತ ತಪಸ್ಸಿನ ಸೋಪಾನಾಗ್ರವನ್ನೇರಿ ಈ ಪರಿಸ್ಥಿತಿಗೆ ಕಾದಿರುವವರೆಲ್ಲರೂ ವಿಶ್ವಾಮಿತ್ರರೆನಿಸುವರು.

೩

ಅತಿಶಯವಾದ ತಪಸ್ಸನ್ನಮಾಡಿ ಪುಣ್ಯವನ್ನು ಕೂಡಿಹಾಕಿಕೊಂಡ ಯಾವ ವ್ಯಕ್ತಿಯಾಗಲೀ ವಿಶ್ವಾಮಿತ್ರನಾದರೂ ಶೂದ್ರದಿಂದ ದೇಹಿಗೆ ಸಾಧ್ಯವಾಗಬೇಕಾದ ಶಾಂತಿ, ಸುಖವು ದೊರೆಯುವುದಿಲ್ಲ. ಶಾಂತಿಸ್ವರೂಪವಾದ ವಸಿಷ್ಠತ್ವವು (ಅಂದರೆ ಪ್ರಾಪಂಚಿಕವೆನಿಸಿದ ಇಂದ್ರಿಯಮನಸ್ಸು ವೊದಲಾದ ಸರ್ವವನ್ನೂ ಗೆದ್ದು ಅಂತಃ ಬಹಿಃ ಶಾಂತಿಮಯವಾಗಿರುವಿಕೆ) ಪ್ರಾಪ್ತಿಯಾಗುವುದಕ್ಕೆ ಪುಣ್ಯ–ಪುಣ್ಯಫಲಗಳೇ ಅಡಚಣೆಯಾಗಿರುತ್ತವೆ. ಸತ್ಸಂಗದಿಂದ ವಿವೇಕೋದಯವಾಗಿ ಪುಣ್ಯದ ಬಂಧನವನ್ನು (ಕಮಿಟ್‌ಮೆಂಟ್) ತಪ್ಪಿಸಿಕೊಳ್ಳುವ ಉಪಾಯವನ್ನು ಆಲೋಚಿಸಬೇಕಾಗುತ್ತದೆ.

ಭವಿತವ್ಯವಾದ ವಸಿಷ್ಠತ್ವವೇ ದೇಹಿಗೆ ಬುದ್ಧಿಯನ್ನು ಉಂಟುಮಾಡುವುದು. (ಬುದ್ಧಿಃ ಕರ್ಮಾನುಸಾರಿಣೀ). ನ ದೇವಾ ಯಷ್ಟಿಮಾ-ದಾಯ ರಕ್ಷಂತಿ ಪಶುಪಾಲವತ್ | ಯಂ ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಂ || – ಎಂಬಂತೆ ಇಚ್ಛಾ ಜ್ಞಾನ ಕರ್ಮಾಭಿಮಾನ ದೇವತೆಗಳು ಪಿಂಡಾಂಡ ಬ್ರಹ್ಮಾಂಡಗಳಲ್ಲಿ ದೇವತ್ವವನ್ನು (ಡಿವಿನಿಟಿ) ಸಾಧಿಸುವ ಯೋಗಿಗಳನ್ನು ಸಂರಕ್ಷಿಸುವುದಕ್ಕೆ ಹಸುಕಾಯುವವರಂತೆ ದಂಡಧಾರಿಗಳಾಗಿ ನಿಲ್ಲಬೇಕಾಗಿರುವುದಿಲ್ಲ. ಅಂತಃ ವಾ ಬಹಿಃ ಪ್ರಸನ್ನರಾಗಿ ಸನ್ನಿಹಿತರಾಗಿದ್ದು, ಅವರವರ ಬಂಧನಮುಕ್ತಿಯನ್ನು–ಇಷ್ಟವನ್ನು ಅವರೇ ಸ್ವತಃ ಸಾಧಿಸಿಕೊಳ್ಳುವಂತೆ (ಅವರವರ ಇಷ್ಟವು ತನ್ನಷ್ಟಕ್ಕೆ ತಾನೇ ಸ್ವಯಂ ಪ್ರಾಪ್ತವಾಗುವಂತೆ) ಸದ್ಬುದ್ಧಿಯನ್ನು ಕೊಡುತ್ತಾರೆ.

೪

ವಿಶ್ವಾಮಿತ್ರನಾದ ತಪೋನಿಧಿಯು ವಸಿಷ್ಠತ್ವವೆಂಬ ಹಂತವನ್ನೇರಲು ಪುಣ್ಯಫಲದ ಭಾರವನ್ನು ಅಪೇಕ್ಷಿತರಾದ ಸತ್ಪಾತ್ರರಿಗಾಗಲೀ ಅಥವಾ ಯಾವ ಸತ್ಪಾತ್ರದಿಂದ ಪುಣ್ಯಫಲವು ಸದ್ವಿನಿಯೋಗವಾಗುವುದೋ ಅಂತಹವರಿಗಾಗಲೀ ವಹಿಸುವುದಕ್ಕೆ ಪ್ರಯತ್ನಿಸುವುದು ಸ್ವಭಾವವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯೋಗದ ಸೋಪಾನಾಗ್ರವನ್ನೇರಿರುವ ಯೋಗಿಗಳು ನಿತ್ಯಸುಖಾನಂದದಲ್ಲಿರುವವರಾಗಿ, ಸಾತ್ವಿಕವಾಗಿ ದಾನ ಮಾಡಲ್ಪಡುವುದಾದ ಹಾಗೂ ಬಂಧನಕ್ಕೆ ಕಾರಣವಾದ ಇಂತಹ ಪುಣ್ಯಫಲವನ್ನು ಆಪೇಕ್ಷಿಸುವುದಿಲ್ಲ, ಒಪ್ಪುವುದೂ ಇಲ್ಲ. ಆದರೆ ಯೋಗಕ್ಕೆ ಅರ್ಹರಾಗಿ ಯೋಗದ ಮೆಟ್ಟಲನ್ನು ಏರುವವರು. ಸ್ವಯಂ ದತ್ತವಾದ ಪುಣ್ಯ ಫಲವನ್ನು ಧರಿಸಬಹುದು.

೫

ಪುಣ್ಯಫಲ ಪ್ರತಿಗ್ರಹಕ್ಕೆ ಉತ್ತಮಾಧಿಕಾರಿಗಳಾಗಿರುವವರಲ್ಲಿ ಹರಿಶ್ಚಂದ್ರನಾದ ಮಾನವನೇ ಪ್ರಥಮನಾಗಿರುತ್ತಾನೆ. ಇಂತಹವರು ತಪಸ್ಸಿನ ಫಲವಾದ ಪುಣ್ಯಫಲರಾಶಿಯನ್ನು ವಹಿಸಿ ನಿರ್ವಹಿಸಲು ಸಮರ್ಥರಾಗಿರಬೇಕು; ಮತ್ತು ಅಚಾತುರ್ಯದಿಂದ ಪ್ರತಿಗೃಹೀತೃವಾದ ತನಗೂ, ದಾತೃವಿಗೂ ಅಶಾಂತಿಯುಂಟಾಗಿ, ಸುತ್ತಮುತ್ತಲಿನವರಿಗೂ ಅಶಾಂತಿ ಪ್ರಕರಣವು ಹರಡದಂತೆ ಶಿಷ್ಟನಾಗಿ ಜಾಗರೂಕತೆಯಿಂದಿರುವ ಅರ್ಹತೆಯನ್ನು ಹೊಂದಿರಬೇಕು. ಆದುದರಿಂದ ರಾಜನೀತಿಯು ಹೇಳುವಂತೆ; ಪ್ರತ್ಯಕ್ಷವಾದರೂ ಪ್ರಮಾಣಿಸಿಯೇ ನೋಡಬೇಕು. "ಭಟ್ಟರ ಹೊಟ್ಟೆಗೆ ಹಂಟೆಗೊಡ್ಡ ಹೊಕ್ಕಿತು." "ಎತ್ತು ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು." ಎಂಬಂತಿರುವ ವ್ಯಾಕರಣ ಬದ್ಧವಾದ ಪ್ರಯೋಗಗಳ ಅರ್ಥವನ್ನು ಮಾತ್ರ ವಿವೇಚಿಸಿ ತಿಳಿದು, ನಗೆಗೀಡಾದಂತೆ, ರಸಾಭಿಜ್ಞ ವಿಮರ್ಶೆಯಿಂದ ಕಾರ್ಯಾಕಾರ್ಯಗಳನ್ನು ಗೊತ್ತುಮಾಡಬೇಕು.

೬

ತಪಸ್ಸಿನ ಬಲದಿಂದ 'ಅನ್ಯಮಿಂದ್ರಂ ಕರಿಷ್ಯಾಮಿ.' ಅಂದರೆ ರಾಜ್ಯವನ್ನು ನಿರ್ವಹಿಸಬಲ್ಲ ಯಾವ ವ್ಯಕ್ತಿಗಾದರೂ ಕ್ಷತ್ರಿಯಪಟ್ಟವನ್ನು ಕಟ್ಟುತ್ತೇನೆ; ಅಥವಾ ಇರುವ ವ್ಯಕ್ತಿಯನ್ನು ಕ್ಷತ್ರಿಯ ಗುಣಶಕ್ತಿ ಸಂಪನ್ನನಾಗಿ ಮಾಡಿ ರಾಜ್ಯಭಾರಮಾಡುವ ಶಕ್ತಿಯನ್ನು ತುಂಬಿಸುತ್ತೇನೆ ಎಂಬ ಸಂಕಲ್ಪ ಸಾಮರ್ಥ್ಯಾದಿಗಳನ್ನು ಹೊಂದಿದ ವಿಶ್ವಾಮಿತ್ರನಾದ ವಿಭೂತಿಪುರುಷನು * ಹರಿಶ್ಚಂದ್ರ ವ್ಯಕ್ತಿಯ ಕರ್ಮ ಶ್ರದ್ಧೆ ಮೊದಲಾದ

* [illegible] ...ಸರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಕಲಗುಣಸಂಪನ್ನತೆಯನ್ನು ಶ್ರವಣಮಾಡಿ † ಹರಿಶ್ಚಂದ್ರ ಗೃಹಸ್ಥನ ಬಳಿಗೆ ಬರುತ್ತಾನೆ. ಪರೀಕ್ಷಾರ್ಥವಾಗಿ ಯಜ್ಞಧನವನ್ನು ಯಾಚಿಸುತ್ತಾನೆ ಹೀಗೆ ಯಾಚಿಸುವ ವಿಶ್ವಾಮಿತ್ರ ವ್ಯಕ್ತಿಯ ಮಹಿಮೆ ಮೊದಲಾದ ಪೂರ್ವಾಪರಗಳನ್ನು ತಿಳಿಯದೆಯೂ, ತಿಳಿಯಬೇಕೆಂಬ ಕರ್ತವ್ಯಾಂಶ ವನ್ನು ಗಮನಿಸದೆಯೂ, ತಿಳಿದಿದ್ದರೂ ಮೋಹಪರವಶನಾಗಿ ವಿಮರ್ಶೆ ಮಾಡದೆಯೂ "ಸಂಪತ್ತಿಗೆ ತಾನು ಅಧಿಪತಿ, ಯಜ್ಞವೆಂಬ ಶ್ರೇಷ್ಠತಮ ಕರ್ಮ ನಿರ್ವಾಹಕ್ಕೆ ಧನವು ಯಾಚಿಸಲ್ಪಡುತ್ತದೆ ; ನಾನು ದಾತೃವೆನಿಸಿದ ಶ್ರೀಮಂತ, ಆಗಂತುಕನು ಧನಾರ್ಥಿ" ಎಂಬ ಮಿತಿಯಲ್ಲಿ ಹರಿಶ್ಚಂದ್ರ ಶ್ರೀಮಂತ ಗೃಹಸ್ಥನು ಸಾಮಾನ್ಯವಾಗಿ (ಔದಾಸೀನ್ಯದಿಂದ ?) ತಿಳಿಯು ತ್ತಾನೆ. ತಾನು ಸ್ವಕರ್ಮವನ್ನು ನೆರವೇರಿಸುವ ಧೀರನೆಂಬ ಭಾವನೆ ಯಿಂದ ಧನವನ್ನು ದಾನ ಮಾಡುತ್ತಾನೆ. ಅಪಾರವಾದ ಧನವನ್ನು ಯಾಚಿಸಿದಾಗ ಧನದ ಅತಿಶಯ (ಮಿತಿ ಮೀರಿದ ?) ಪ್ರಮಾಣಾದಿ ಗಳಿಂದುಂಟಾಗಬಹುದಾದ ಆಶ್ಚರ್ಯಾದಿಗಳಿಂದ ಮನಸ್ಸು ಪರಿವರ್ತನೆ ಹೊಂದದೆ ದುಡುಕಿ ಕರ್ತವ್ಯೋನ್ಮುಖವಾಗುವ ಅಸಮಾಕ್ಷ್ಯಕಾರಿತ್ವ ಪರಿಸ್ಥಿತಿಗೆ ರಾಜನೀತಿ ಮತ್ತು ರಸಾಭಿಜ್ಞ ವಿಮರ್ಶಕ ಮನೋಭಾವ ವಾ ಶಿಕ್ಷಣವಿಲ್ಲದಿರುವುದೇ ಕಾರಣ. ಇದು ಯೋಗ್ಯತಾ ಪರೀಕ್ಷೆಯ ಹಂತದ ಮೊದಲನೇ ಪ್ರಕರಣವಾಗುವುದು.

೭

ವಿಶ್ವಾಮಿತ್ರ ತಪಸ್ವಿಯ ಅಮೋಘ ಮಹಿಮೆಯನ್ನು ತಿಳಿದು ಸುಶಿಕ್ಷಿತನೂ ರಸಾಭಿಜ್ಞ ವಿಮರ್ಶಕನೂ ಆದ ಸ್ವಕರ್ಮ ತತ್ಪರನು ತತ್ ಕ್ಷಣವೇ ಆತನಿಗೆ ಶರಣಾಗತನಾಗಿ ಆತನ ಅನುಗ್ರಹವನ್ನು ಸಂಪಾ ದಿಸಬೇಕು. ಯಾಚಿಸಿದೊಡನೆಯೇ ದಾನಮಾಡಿದ ಅಮಿತ ಧನವನ್ನು ತತ್ ಕ್ಷಣವೇ ಪರಿಗ್ರಹಿಸದೇ ಯಾಚಕನಾದ ಯಾಜ್ಞಿಕನು ಉದಾಸೀನ ನಾಗಿ ಹೋದಾಗಲೂ, ಒಳಹೊಕ್ಕು ವಿಮರ್ಶಿಸಿ ಪರಿಸ್ಥಿತಿಯ ನಿಜಾಂಶ

† ರಾಮಚಂದ್ರನ ಮಹಿಮೆಯನ್ನು ವಾಲ್ಮೀಕಿಯು ನಾರದವೃತ್ತಿಯ ವ್ಯಕ್ತಿಯಿಂದ ತಿಳಿದುದನ್ನು ಜ್ಞಾಪಿಸಿಕೊಳ್ಳಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ತಿಳಿಯುವ ಜಿಜ್ಞಾಸೆಗೆ ಹರಿಶ್ಚಂದ್ರ ಮಾನವನು ಅರ್ಹತೆಯನ್ನು ಹೊಂದಿರಲಾರನು. ಎಂದರೆ ಅನುಸಂಧಾನ (ಯೋಗ, ಕರ್ಮಯೋಗ ಬುದ್ಧಿ) ವಿಲ್ಲದ ಕರ್ಮಾಚರಣೆಯ ಸಾಮಾನ್ಯ ಹಂತದಿಂದ ಮೇಲಕ್ಕೆ ಏರಲು ಪ್ರಾಪಂಚಿಕ ಮನೋಭಾವದ ಆವರಣವು ಬಲವಾಗಿದೆಯೆಂದು ತಿಳಿಯಬೇಕು. ತಪಃ ಫಲಪ್ರದಾನಕ್ಕೆ ಸತ್ಪಾತ್ರನ ಸತ್ವ ಪರೀಕ್ಷೆಗೆ ಹೊರಟ ವಿಶ್ವಾಮಿತ್ರ ಯೋಗೀಶ್ವರನು — ಅಹಂಕಾರ, ಕಾಮಾದಿಗಳ ಬಲೆಯಲ್ಲಿ ಸಿಕ್ಕಿ ಅನುಷ್ಠಿಸುವ ಸ್ವಕರ್ತವ್ಯ ಕರ್ಮದ ಕಡಿಮೆ ಬಣ್ಣವನ್ನು (ಮಿತಿಯನ್ನು) ಧರಿಸಿದ ಹರಿಶ್ಚಂದ್ರನ ಅನರ್ಹತೆಯು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ತನ್ನ ಉದ್ಯಮವನ್ನು ಕೈ ಬಿಡುವವನು ಹತಾಶನಾಗುವುದಿಲ್ಲ. ಬೇಯದೆ ಇರುವ ಹಸೀಮಡಕೆ ಸ್ಥಿತಿಯಲ್ಲಿರುವ, ಯೋಗ ವಿವೇಚನೆಯುಂಟಾಗದಿರಬಹುದಾದ ಅಥವಾ ಯೋಗವನ್ನು ಮರೆತಿರಬಹುದಾದ ಇಂತಹ ಹರಿಶ್ಚಂದ್ರ ವ್ಯಕ್ತಿಗಳನ್ನು ಯೋಗಿಯ ಹಂತಕ್ಕೆ ಏರಿಸಿ ಸ್ವಯಂ ಲಭ್ಯವಾದ ಪುಣ್ಯ ಫಲದ ಪ್ರತಿಗ್ರಹಕ್ಕೆ ಅಧಿಕಾರಿಯನ್ನಾಗಿ ಮಾಡಬೇಕೆಂಬ ಕರುಣೆಯು ಯೋಗೀಶ್ವರರ ಹೃದಯದಲ್ಲಿ ಉದಯಿಸುವುದು ಸ್ವಭಾವ.* ಪ್ರಾಪಂಚಿಕೋನ್ನತಿಯ ವಿಫಲತೆಯ ಅನುಭವವೆಂಬ ಕ್ಲೇಶಕ್ಕೆ ಗುರಿಯಾದ ಸ್ವಕರ್ಮ ಪರನಲ್ಲಿ ಉಚ್ಚನೀಚ ಭಾವೋದ್ರೇಕ ಮಾಡುವ ಅಹಂಕೃತಿ ಮಮತಾ ಇಲ್ಲದ 'ಸಮತಾ' ಬುದ್ಧಿಯು ಉಂಟಾಗಬಹುದೆಂಬುದನ್ನು ಶಿಕ್ಷಣ–ಅಭ್ಯಾಸ ಕ್ರಮ ಪಾಠವು ತಿಳಿಸುವುದು. ಅದರಂತೆ ಪರೀಕ್ಷೆಯ ಎರಡನೇ ಭಾಗವು ಆರಂಭವಾಗುವುದು.

೮

ತಪಃ ಫಲಪ್ರಭಾವದಿಂದ ದುಷ್ಟ ಮೃಗಗಳ ಬಾಧೆಯ ನಾಟಕವು ರಾಜಧಾನಿಯಲ್ಲಿ ಆರಂಭವಾದಾಗ, ಕರ್ತವ್ಯ ತತ್ಪರನಾದ ಹರಿಶ್ಚಂದ್ರನು ಶಾರೀರಕ ಕ್ಷತ್ರಿಯ ಬಲವನ್ನು ಪ್ರಯೋಗಿಸಿ ಮೃಗ ಬಾಧಾಪರಿಹಾರಕ್ಕೆ

---

* ಯೋಗೀಶ್ವರನಾದ ಶ್ರೀ ಕೃಷ್ಣನ ಬೋಧೆಯಿಂದ ಕಾರ್ಪಣ್ಯ-ದೋಷೋಪಹತ ಸ್ವಭಾವಃ, ಧರ್ಮ ಸಮ್ಮೂಢ ಚೇತಾಃ ಆಗಿದ್ದ ಅರ್ಜುನನಿಗೆ ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ||

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯತ್ನಿಸುತ್ತಾನೆ. ಇಂತಹ ಬಾಧೆಗಳು ತನ್ನ ಅಥವಾ ಜನತೆಯ ಕರ್ತವ್ಯ ಕರ್ಮ ದೋಷದ ಪರಿಣಾಮವಾಗಿ * ಪ್ರಕೃತಿ ಪ್ರೇರಿತವಾಗಿ ಉಂಟಾಗುವುವು. ಎಂಬುದೇ ಮೊದಲಾದ ಕಾರಣಗಳನ್ನು ಕಂಡುಹಿಡಿಯುವುದು ಸಾಮಾನ್ಯವಾಗಿ ಪ್ರಥಮಕಲ್ಪವಾಗಿರುತ್ತದೆಂದು ರಾಜನೀತಿಯು ತಿಳಿಸುತ್ತದೆ. ವಿವೇಕಯುತ ವಿಮರ್ಶೆಯಿಲ್ಲದೆ ಮಾಡಿದ ಶ್ರಮವು ವ್ಯರ್ಥವಾಗುತ್ತದೆ.

ಹರಿಶ್ಚಂದ್ರನ ದೈಹಿಕ ಬಲವು ನಿಷ್ಫಲವಾಗಿ, ಫಲಶೂನ್ಯತೆಯಿಂದ ಯಾವ ವಿಧವಾದ ಮನೋವಿಕಾರವೂ ಇಲ್ಲದ ಜಡರಂತೆ,– ಕಾಡಿನಲ್ಲಿ ಅಲೆದು ಆಯಾಸದಿಂದ ಕುಳಿತಿರುವಾಗ ಸತ್ವ ಪರೀಕ್ಷಕ ಮೂರ್ತಿಯು ದರ್ಶನ ಕೊಡುತ್ತಾನೆ. ತನ್ನ ತಪಃ ಫಲವನ್ನು ಚಂಡಾಲ ಕನ್ಯಕಾ ದ್ವಯ ರೂಪದಲ್ಲಿ ಹರಿಶ್ಚಂದ್ರನ ಮುಂದೆ ನಿಲ್ಲಿಸಿ ಸ್ವತ ಏವ ಪ್ರದಾನ ಮಾಡಲು ಯತ್ನಿಸುತ್ತಾನೆ. ವಿವೇಕದಿಂದ ರಸಾಭಿಜ್ಞ ವಿಮರ್ಶೆಯಿಂದ ವಿಷಯವನ್ನು ತೂಗಿ ವಿಷಯ ಗ್ರಹಣ ಮಾಡುವುವಕ್ಕೆ ಹರಿಶ್ಚಂದ್ರನ ಭಾರಭೂತವಾದ, ಮಂದವಾದ, ಸಂಕುಚಿತವಾದ ಋಣಭಾರವು ಅವಕಾಶ ಕೊಡುವುದಿಲ್ಲ.

ಕರ್ಮಠನೆನಿಸಿದ ಅನುಸಂಧಾನ ಯೋಗ_ವಿವೇಕ–ವಿಲ್ಲದೆ ಕರ್ಮಾನುಷ್ಠಾನ ಮಾಡುವ ಹರಿಶ್ಚಂದ್ರನ ಕಣ್ಣಿನಲ್ಲಿ ಕೆಂಪೇರುವುದು ! ಹರಿಶ್ಚಂದ್ರನೆಂದರೇನು ! ವಿಶ್ವಾಮಿತ್ರನೆಂದರೇನು ! ಚಂಡಾಲ ಕನ್ಯಕೆ

---

* ಜನಗಳ ದುಷ್ಕರ್ಮದ ಫಲವಾಗಿ, ಅದಕ್ಕೆ ಸಂಬಂಧಪಡದಂತೆ ದುಷ್ಟಮೃಗಗಳ ಬಾಧೆಗೆ ಗುರಿಯಾಗುವುದರ ರಹಸ್ಯ ; ಒಬ್ಬನು ತಪಸ್ಸು ಮಾಡುತ್ತಿದ್ದರೂ, ತಪಃ ಪ್ರಯತ್ನ ಫಲದಿಂದ ಸಂಬಂಧವಿಲ್ಲವರಿಗೆ ಉಂಟಾಗುವ ಅಹಿತಾನುಭವಗಳು ಇವುಗಳ ರಹಸ್ಯ – ಇವೆಲ್ಲವನ್ನೂ ಭೇದಿಸಿ ಸಂಬಂಧ ಕಲ್ಪನೆ ಮಾಡುವುದು ವಿವೇಕ. ಪ್ರಜೆಗಳ (ದೇಶದ) ಧನವನ್ನು ತನ್ನದೆಂದು ಭಾವಿಸಿ ಸ್ವೇಚ್ಛೆಯಿಂದ ವಿನಿಯೋಗಿಸುವುದೆಂಬ ಅಹಂಕೃತಿ ಲೋಪದ ಸೂಚನೆಗಾಗಿ ದುಷ್ಟಮೃಗ ಬಾಧಾ ನಾಟಕವು ಏರ್ಪಟ್ಟಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯರೆಂದರೇನು ! ವಿವಾಹವೆಂದರೇನು ! ಎಂಬ ಭಾವನೆಗಳು ಕೋಪೋ ದ್ರೇಕದಿಂದ ವಿಷಯದ ಪರಿತ್ಯಾಗಕ್ಕೂ ಮತ್ತು ವಿವೇಚನೆಯಿಂದ ವಿಷಯ ಪರಿಗ್ರಹಕ್ಕೂ ಸಮಾನವಾಗಿರುವುವು. "ಏನೋ ! ತಂತ್ರ ! ಸ್ವಾರಸ್ಯ !! ಇರಬೇಕು." ಎಂದು ವಿಮರ್ಶಿಸುತ್ತಿದ್ದರೆ ರಹಸ್ಯವು ಹೊರಪಟ್ಟು ಹೊರಗೆ ಕಾಣುವುದು. ಕೇವಲ 'ಮಿಥ್ಯಾ' ಎಂದು ಕೋಪ ದಿಂದ ತುಚ್ಛವಾಗಿ ಜರಿದು ತಿರಸ್ಕರಿಸಬಹುದು. ಅಥವಾ ಅಂತತಃ ಅಪಾರ ಮಹಿಮಾ ಅಷ್ಟಸಿದ್ಧಿ ಪ್ರಾಪ್ತಿಯಿರುವುದೆಂತಲೂ ತಿಳಿದು ಶರಣಾ ಗತಿಯಿಂದ ಅನಂತ ಪುಣ್ಯ ಫಲವನ್ನು ಪಡೆಯಬಹುದು.

'ಸಾಮಾನ್ಯವಾಗಿ ಉಪೇಕ್ಷೆ ಮಾಡತಕ್ಕದ್ದಲ್ಲ' ಎಂತಲೂ (ಸಹಸಾ ವಿದಧೀತ ನ ಕ್ರಿಯಾಂ ಎಂತಲೂ) ಪರ್ಯಾಲೋಚಿಸುವಷ್ಟು ರಾಜನೀತಿ ಯನ್ನು ಅರಿಯದ ಹರಿಶ್ಚಂದ್ರನು ಕ್ರೋಧಕ್ಕೆ ಬಲಿಯಾಗುತ್ತಾನೆ. ಚಂಡಾಲ ಸಂಪರ್ಕವೆಂಬ ಭಾವನೆಯನ್ನು ಸಹಿಸದಿರುವ ವೇಗದಲ್ಲಿ ದೇಶ ವನ್ನಾದರೂ ಬಿಟ್ಟು ಹೋಗುವ ಪ್ರತಿಜ್ಞೆ ಮಾಡುತ್ತಾನೆ.

ನಿರ್ಣಯಾನುಸಾರ ಯತ್ನಿಸುವುದರ ಪರಿಣಾಮವಾಗಿ ಅಹಂಕಾ ರಾದಿಗಳಿಗೆ ಬೀಜರೂಪವಾದ ಸಂಪತ್ತು, ಧನ, ದರ್ಪಗಳು ಕೈಬಿಟ್ಟು ಹೋಗುವಂತಾಗುವುವು. ಆದುದರಿಂದ 'ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ' ಎಂಬಂತೆ ಯೋಗಕ್ಕೆ ಮಾರ್ಗವಾಗುವುದು.†

---

† ಯೋಗ ಪಟ್ಟಕ್ಕೆ ಅರ್ಹತೆಯುಂಟಾದವರು ಮೊದಲನೇ ಪರೀಕ್ಷೆ ಯಲ್ಲಿಯೇ ಶರಣಾಗತರಾಗಿ ಸರ್ವವೂ ಜಗದೀಶ್ವರನಿಗೆ ಸೇರಿದ್ದು ; ನಾನೇನು ಕೊಡಬಲ್ಲೆ ? ನನ್ನದಾಗಿ ಏನಿದೆ ? ಕ್ಷಮಿಸಬೇಕು. ಆಜ್ಞಾಧಾರಕನಾಗಿದ್ದೇನೆ ಎಂದು ನಮಸ್ಕರಿಸಿ ಯೋಗಾರೂಢರಾಗುತ್ತಾರೆ ಎರಡನೇ ಪರೀಕ್ಷೆಯಲ್ಲಿ (ಕನ್ಯಕಾ ವಿವಾಹ) "ಜಗದ್ವಂದ್ಯರೂ ಜಗದ್ಗುರು ಗಳೂ ಆದ ಮಹಾತ್ಮರು ಹೇಳಿದ ಮಾತಿಗೆ ಪ್ರತಿಯಿಲ್ಲ ! ಆಜ್ಞಾ !" ಎಂದು ಕೈ ನೀಡಿ ಚಂಡಾಲ ಕನ್ಯಕಾ ಸ್ವರೂಪವನ್ನು ತಳೆದ ತಪೋ ರಾಜ್ಯಲಕ್ಷ್ಮಿಯನ್ನು – ಸಿದ್ಧಿಯನ್ನು – ಪಾಣಿಗ್ರಹಣ ಮಾಡುತ್ತಾರೆ. ವಿಶ್ವಾಮಿತ್ರನು ಸ್ವಿಜಮಾದಿಯೂ ಚಂಡಾಲರನ್ನು ಹುಸುವೆಮಾಡಿಕೊಳ್ಳಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯೋಗಕ್ಕೆ ಪುಚಕಾರ ಕೊಟ್ಟಂತಾಗುವುದು. ವರಿವಸ್ಯಾ ರಹಸ್ಯ ಬೋಧೆಗೆ ಬೆಳಕಾಗುವುದು. ಗಾಣಕ್ಕೆ ಸಿಕ್ಕಿ ಎಣ್ಣೆಯು ಕಾಳು ಅರೆಯುಲ್ಪಡುವಂತೆ, ಶಿಕ್ಷಣಕ್ಕೆ ಆರಂಭವಾಗುವುದು. ಅನುಸಂಧಾನವಿಲ್ಲದ ಸ್ವಕರ್ಮ ನಿರತರು ಸಾಮಾನ್ಯವಾಗಿ ಈ ವಿಧವಾದ ತಪಸ್ಸಿಗೆ ಅಧಿಕಾರಿಗಳಾಗಿ ಯೋಗದ ಪ್ರಥಮ ಸೋಪಾನವನ್ನು ಏರುವವರಾಗುತ್ತಾರೆ. ಈ ತಪಸ್ ಶಿಕ್ಷಣವನ್ನು ಸಾಕ್ಷಾತ್ತಾಗಿಯೋ ಪರೋಕ್ಷವಾಗಿಯೋ ಗುರೂಪದೇಶದಿಂದ (ಪ್ರಕೃತಿಯಿಂದ) ಪಡೆದವರು ರಾಜನೀತಿ ವಿವೇಕಯುತರಾಗಿ, "ಈಶಾವಾಸ್ಯಮಿದಂ ಸರ್ವಂ, ಮಾ ಗೃಧಃ ಕಸ್ಯ ಸ್ವಿದ್ಧನಂ"* ಎಂಬುವರ ರಹಸ್ಯವನ್ನು ಪಾಲಿಸಿ ಕ್ಷಿಪ್ರಸಿದ್ಧಿಯನ್ನು ಹೊಂದುತ್ತಾರೆ.

೯

ಹರಿಶ್ಚಂದ್ರನನ್ನು ಯೋಗಿಯನ್ನಾಗಿ ಮಾಡುವ ಹೊಣೆಗಾರಿಕೆಯೂ ಅಂತಹ ಅಧಿಕಾರಿಯನ್ನು ಸ್ವಯಂ ವರಿಸಿದ ಯೋಗೀಶ್ವರನಿಗೆ ಉಂಟಾಗುವುದು. ಹರಿಶ್ಚಂದ್ರ-ಮನಸ್ಸು ಹಣ್ಣಾಗುವವರೆಗೂ ಅದಕ್ಕೆ ಕಾವು ಕೊಡಬೇಕಾಗುವುದು. ಪಕ್ವಸ್ಥಿತಿಯುಂಟಾಗಲು ಹರಿಶ್ಚಂದ್ರನಿಗೆ ಅನೇಕ ಜನ್ಮಗಳಲ್ಲಿ ಅನೇಕ ಸ್ಥಿತಿ ಸನ್ನಿವೇಶಗಳಲ್ಲಿ ಅನುಭವವಾಗಬೇಕು †

---

ಹೇಳುವನೇ !! ಲೋಕದಲ್ಲಿ ಚಂಡಾಲನಾರು ? ರಾಜನಾರು ? ಸರ್ವ ದೇಹಿಗಳೂ ಆತ್ಮರೂಪರೇ. ಚಂಡಾಲನೂ ಪೂಜ್ಯನು ! ರಾಜನಾದರೂ ನೀಚನು ! ಇತ್ಯಾದಿ ವಿಮರ್ಶೆಯಿಂದ ದೈನ್ಯವನ್ನು ಅವಲಂಬಿಸುತ್ತಾರೆ.

* ವಿಶ್ವವೆಲ್ಲವೂ ಪೂರ್ಣದಿಂದ ವ್ಯಾಪೃತವಾಗಿರುವುದು. ಎಂಬ ಸ್ವತಸ್ಸಿದ್ಧವಾದ ಆಲೋಚನೆಯನ್ನು ದೂರೀಕರಿಸಿ, ಕಸ್ಯ = ಪೂರ್ಣನ, ಪರಮಾತ್ಮನ, ಧನಂ = ಸಂಪತ್ತನ್ನು ಭೋಗಿಸಕೂಡದು (ಮಾ ಭುಂಜೀಥಾಃ) ; ಮತ್ತು ಮಾ ಗೃಧಃ = ಅಪೇಕ್ಷಿಸಲೂ ಕಾಮಿಸಲೂ ಆಶಿಸಲೂ ಕೂಡದು. ಪರಮಾತ್ಮನ ಸಂಪತ್ತು ಪರಮಾತ್ಮನಿಗೇ ಹೊರತು ಇಂದ್ರಿಯಗಳ ಮನಸ್ಸಿನ ಕೇವಲ ಉಪರಿಪ್ಲವವಾದ ಭೋಗಕ್ಕಲ್ಲ. (ಚಮಕದ 'ಮೇ' 'ಮೇ' ಶಬ್ದಗಳು ಇದನ್ನೇ ಬೋಧಿಸುವುವು.)

† ಇಂತಹ ಪುಣ್ಯಗಳ ಫಲಾನುಭವಕ್ಕೆ ಸಿದ್ಧವಾಗುವ ಪರಿಸ್ಥಿತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲಿಯ ವರೆಗೂ ವಿಶ್ವಾಮಿತ್ರನು ಕಾದು ಕುಳಿತಿರಲಾದೀತೇ ? ಯೋಗಾಧಿಕಾರಿಯು ಅನೇಕ ಜನ್ಮಗಳಲ್ಲಿಯಾದರೂ ಅವಿವೇಕಕ್ಕೆ ಎಡೆಗುಡದೆ ಒಂದೇ ಸಮನಾಗಿ ಮೇಲಕ್ಕೇರುವ ಭರವಸೆ ತಾನೇ ಹೇಗಾದೀತು ? ಆದುದರಿಂದ ಅನೇಕ ಜನ್ಮಗಳಲ್ಲಿ ದೊರೆಯಬೇಕಾದ ಯೋಗಫಲವನ್ನು ಈ ಜನ್ಮ - ಉಪಾಧಿಯಲ್ಲಿಯೇ ಒದಗಿಸುವ ಪರಿಸ್ಥಿತಿ ಕಲ್ಪನೆಗೆ ಸರಿಯಾದ ವ್ಯವಸ್ಥೆಯಾಗಬೇಕು.

ಅವಸ್ಥಾ ವಿಶೇಷ ವಿಕಾರಗಳೆಂಬುವುಗಳೇ ಅನೇಕ ಜನನ-ಜೀವನ-ಮರಣಗಳ ಅನುಭವವನ್ನು ಉಂಟುಮಾಡುವಂತೆ ಮಾಡಬೇಕಾದ ಗುರುತರಭಾರವೂ ವಿಶ್ವಾಮಿತ್ರ ಯೋಗೀಶನಿಗೆ ಸೇರಿದ್ದು. ಪುಣ್ಯಫಲ ! ಬಿಡುವುದಕ್ಕಾಗುವುದಿಲ್ಲ !! ಕಟ್ಟಿಕೊಳ್ಳುವುದಕ್ಕೂ ಆಗುವುದಿಲ್ಲ !! *

೧೦

ರಾಜನೀತಿಯು ತಿಳಿಸುವ ಯುಕ್ತಾಯುಕ್ತತೆಗಳನ್ನು ಪರ್ಯಾಲೋಚಿಸುವ ವಿವೇಚನೆಯು ಮರೆಯಾಗಿರುವ ಪರೀಕ್ಷೆಯ ವಿಷಯವಾದ ಅವಸ್ಥಾವಿಶೇಷವು ಒದಗುವುದು. ಸಹನೆಯ ಮಿತಿಯು ಮೀರಿದಂತಾಗಿ ಹರಿಶ್ಚಂದ್ರ ಮಾನವ ಮುಖದಿಂದಲೂ ದುರ್ವಾಕ್ಯಗಳು ಹೊರಡುವುವು †

---

ಯನ್ನು ಹೊಂದುವುದಕ್ಕೆ ಪೂರ್ವ ದುಷ್ಕರ್ಮ ಫಲಗಳನ್ನೂ ವಿಪ್ರತಿಕ್ರಿಯಾಫಲಗಳನ್ನೂ ಅನುಭವಿಸಿದನಂತರ ಮನಸ್ಸನ್ನು ಸಮಸ್ಥಿತಿಗೆ ತಂದುಕೊಳ್ಳುವ ಸ್ಥಿತಿಯು ಪ್ರತಿ ದೇಹಿಗೂ ಒದಗುವುದು. ಇದನ್ನು ತೇಜಸ್ಸಿನ ವಿಭಜನ ಸಂಯೋಜನ ಪರಿಮಾಣದಲ್ಲಿ ಪಿಂಡಾಂಡಬ್ರಹ್ಮಾಂಡಗಳಲ್ಲಿ ಚಲಿಸುವ ತೇಜೋ ಮೂರ್ತಿಗಳು, ಗ್ರಹಗಳು ಆಯಾ ಸ್ಥಾನದಲ್ಲಿದ್ದು ಸೂಚಿಸುವ ಸೂತ್ರವನ್ನು ದೈವಜ್ಞರು ತೋರಿಸಿರುವರು.

* ದುಷ್ಕರ್ಮ ಫಲಾನುಭವವು ಇದಕ್ಕೆ ಕೇವಲ ವ್ಯತಿರಿಕ್ತವಾಗಿ ಕಠಿಣತಮವಾಗಿರುವುದು !!

† ಶಂಕರದಿಗ್ವಿಜಯ — ಮಂಡನಮಿಶ್ರರು ಶ್ರೀ ಶಂಕರರ ಪರಿವ್ರಾಜಕ ರೂಪವನ್ನು ನೋಡಿ ಕುತಃ ಮುಂಡೀ ? ಎಂದು ತುಚ್ಛವಾಗಿ ಸಂಬೋಧಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಹಂಕಾರದ ಕಾವು ಏರುವುದು. ಇಂತಹ ಅವಸರದಲ್ಲಿ ಪ್ರತಿಜ್ಞಾ ಋಣ ಬಂಧನಕ್ಕೆ ಸಿಕ್ಕಿ ದೇಶವನ್ನೂ ದೇಶ ರಾಜ್ಯದ ಭಾರವನ್ನೂ ಬಿಟ್ಟು ಹಣದ ಸಾಲದ ಹೊರೆಯನ್ನು ಹೊರುತ್ತಾನೆ. ಸ್ವಪ್ರಭುಶಕ್ತಿಯ ಮಿತಿಯ ಅರಿವಿಲ್ಲದೆಯೂ, ವಿವೇಕವು ಮರೆಯಾಗಿ ಧನವನ್ನು ದಾನಮಾಡಿ ಉದಾರಿ ಯೆಂದು ಹೆಸರು ಪಡೆದ ಅಹಂಕಾರದಿಂದ ಕೂಡಿ ನಿರ್ಧನನಾಗಿ ಅಲೆಯು ತ್ತಾ ಹಾಸ್ಯಕ್ಕೆ ಗುರಿಯಾಗುತ್ತಾನೆ. ತಾತ್ಕಾಲಿಕವಾಗಿ ಒತ್ತುತ್ತಿರುವ ಸಾಲವನ್ನು ತೀರಿಸಲು ಬೇರೆ ಕಡೆ ಸಾಲ ಕೇಳುವುದಾದರೂ ಹೇಗೆ? ಕೊಡುವವರಾರು? ಅಪಾರವಾಗಿರುವ ಸಾಲವನ್ನು ತೀರಿಸುವ ಬಗೆ ಹೇಗೆ?

ಲೋಕದಲ್ಲಿ ಪರೋಪಕಾರ ಬುದ್ಧಿಯಿಂದ ಸಹಾಯವನ್ನು ಸಾಲ ವಾಗಿ ಕೊಟ್ಟು ಪುನಃ ಅದನ್ನು ಪಡೆಯುವುದೆಂಬ ವ್ಯವಹಾರವು ರೂಢಿ ಯಲ್ಲಿದೆ. ಸಾಲದ ಹೊರೆಯನ್ನು ಸರಿದೂಗುವ ದ್ರವ್ಯಗುಣಶಕ್ತಿಗಳು ಸಾಲಕ್ಕೆ ಒತ್ತೆಯಾಗಿರಬೇಕು. ಅನುಸಂಧಾನ ಮಾರ್ಗ ತಿಳಿಯದೆ ನಿಯಮಾನುಸಾರ ಸ್ವಕರ್ಮವನ್ನು ನಿರ್ವಹಿಸುವ ಗುಣಾದಿಗಳು ಮಾತ್ರ ಹರಿಶ್ಚಂದ್ರರಿಗೆ ಧನವಾಗಿರುವುದು. ಈ ಧನವನ್ನು ಒತ್ತೆಯಾಗಿಟ್ಟು ವ್ಯವಹಾರಕ್ಕಾಗಿ ಗೊತ್ತಾದ ಧನವನ್ನು ಸಾಲವಾಗಿ ಪಡೆಯಬಹುದಾದ ಪ್ರತಿ ಫಲವು ಋತದಲ್ಲಿ ಕಂಡುಬಂದರೂ ಕೇವಲ ಇಂದ್ರಿಯ ವ್ಯಾಪಾರ ರತರಾದ ಮಾನವರು ಋತ ನಿಯಮದ ಮಟ್ಟಕ್ಕೇರಿ ಸಹಕರಿಸುವುದಕ್ಕೆ ಅಸಾಧಾರಣವಾದ ಸನ್ನಿವೇಶವು ದೊರೆಯಬೇಕಾಗಿದೆ.

೧೧

ತಾತ್ಕಾಲಿಕವಾಗಿ ಒತ್ತುತ್ತಿರುವ ಸಾಲದ ಭಾರಗಳನ್ನು ಪರಿಹರಿಸಿ ಕೊಳ್ಳಲು, ವ್ಯಕ್ತಿ ಸ್ವಾತಂತ್ರ್ಯವನ್ನು ಒತ್ತೆಯಿಟ್ಟು ಜೀವನದ ಕರ್ಮದ ಪ್ರಗತಿಯನ್ನು ಸಾಧಿಸುವ ಶಿಕ್ಷಣವನ್ನು ಸತ್ಪಾತ್ರರಿಗೆ ಒದಗಿಸುವ ವ್ಯವ ಸ್ಥೆಯನ್ನು ವಿಶ್ವಾಮಿತ್ರ ಬ್ರಹ್ಮನೇ ಕಲ್ಪಿಸಬೇಕಾಗುತ್ತದೆ. ಈ ಶಿಕ್ಷಣ ಶಾಲೆಯಲ್ಲಿ ಶಿಕ್ಷಕರ ಪಾತ್ರಗಳನ್ನು ವಹಿಸಲು ದೇವತ್ವವನ್ನು ಸಾಧಿಸಿದ ಮಾನವರು (ದೇವತೆಗಳು) ವಿಶ್ವಾಮಿತ್ರ ಸಂವಿಧಾತನ ರಾಜನೀತಿ ಶಾಸನ ಕ್ಕೆ ಒಳಪಟ್ಟು ಗೌರವಾದಿ ಸಂಭಾವನೆಗಳಿಂದ ಸತ್ಕಾರ್ಯ ಪ್ರವರ್ತಕ ರಾಗಬೇಕಾಗಿದೆ. ಅಂತಹ ಸಹಾಯಕರು ಕಾಲ (ಕರ್ಮ) ಪರಿಪಾಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ದಿಂದ ಕಾಣಿಸಿಕೊಳ್ಳುವರು. ಕುಟುಂಬ ರಾಜನಾಗಿ ರಾಜನೀತಿಯನ್ನು ಮರೆತು ಋಣದ ಬಿಕ್ಕಟ್ಟಿಗೆ ಒಳಗಾದ ಹರಿಶ್ಚಂದ್ರನು ಕುಟುಂಬ ಸ್ವಾತಂತ್ರ್ಯವನ್ನು ಮಾರಿ ಪತ್ನೀ ಪುತ್ರರನ್ನು ಪರಾಧೀನ ಮಾಡಿ ಪಡೆದ ವ್ಯಾವಹಾರಿಕ ವಿನಿಮಯ ಧನದಿಂದ ಸಾಲದ ಸ್ವಲ್ಪ ಭಾಗವನ್ನು ತೀರಿಸುತ್ತಾನೆ.*

ಪ್ರಜಾಪತಿಯ ರಾಜ್ಯಭಾರದಲ್ಲಿ ಅವರವರ ರಾಜ್ಯ (ಸರ್ಕಾರ) ಗಳನ್ನು ನಡೆಸುವ ಪ್ರಜೆಗಳಲ್ಲಿ ಒಬ್ಬರು ನೀಚರು ಒಬ್ಬರು ಉಚ್ಚವರ್ಗಕ್ಕೆ ಸೇರಿದವರು ಎಂಬ ದುರ್ಭಾವನೆಯು ಆವರಣ ಪ್ರಭಾವದಿಂದ ಉಂಟಾಗ ಬಹುದು.† ಅದರಂತೆ ಹರಿಶ್ಚಂದ್ರನಾದ ಕರ್ಮ ಶ್ರದ್ಧಾಳುವಿಗೂ ಅನುಸಂಧಾನ ಯೋಗ ಶಿಕ್ಷಣವಿಲ್ಲದುದರ ಪರಿಣಾಮವಾಗಿ ಭೇದಭಾವನೆ

---

* ಪತ್ನಿಯು ಅಗಲಿ ಪರಸೇವೆಯಲ್ಲಿರುವಾಗ ಗೃಹಸ್ಥನು ಯಜ್ಞಾದಿ ಕರ್ಮಗಳನ್ನು ಆಚರಿಸಲಾಗುವುದಿಲ್ಲ. ಸಾಕ್ಷಾತ್ ಬ್ರಹ್ಮಕರ್ಮ ಶ್ರದ್ಧೆ ಅಡಗಿ ಹೋಗುವುದು. ಈ ಪರಿಸ್ಥಿತಿಯಲ್ಲಿ ಹರಿಶ್ಚಂದ್ರನ ಜೀವನವು ಮುಂದೆ ಸಾಗಬೇಕಾಗಿದೆ. ಪತ್ನೀ ಸಮೇತನಾಗಿ ಯೋಗವನ್ನು ಅಭ್ಯಾಸ ಮಾಡುವ ರಾಜನೀತಿ ವ್ಯವಹಾರ ಜ್ಞಾನವು ಮರೆಯಾಗಿ, ಅಮೃತಧಾರಾ ಸೂಚಕವಾದ ಚಂದ್ರಶಬ್ದವು ಅಹಂಕಾರ – ಗರ್ವ ಸೂಚಕವಾಗಿ ಪರಿಣ ಮಿಸಿದಾಗ ವಿನಿಪಾತಗಳು ಶತಮುಖವಾಗಿ ಬಂದೊದಗುವುವು. ಪರಮ ಪ್ರೀತಿಯ ಕರ್ಮವೇ ಕೈ ಬಿಟ್ಟು ಹೋಗುವುದು. ಭ್ರಷ್ಟತೆಯು ಪ್ರಾಪ್ತವಾಗಿ ಭ್ರಷ್ಟಸ್ಯ ಕಾ ವಾ ಗತಿಃ ? ಎಂಬಂತಾಗುವುದು. ಆದರೆ ಇದು ಶಿಕ್ಷಣದ ರಹಸ್ಯವೆಂದು ತಲೆಬಾಗಿ ಶರಣುಹೋಗಿ ದೃಢಚಿತ್ತರಾಗಿರ ಬೇಕು. ಕರ್ತವ್ಯೋ ಮಹದಾಶ್ರಯಃ ; ಕರ್ತವ್ಯೋ ನೀಚಾಶ್ರಯಶ್ಚ ॥

† ಶ್ರೀ ಶಂಕರಭಗವತ್ಪೂಜ್ಯಪಾದರೂ ಈ ಅನುಭವಕ್ಕೆ ಗುರಿಯಾಗಿ ಮನೀಷಾ ಪಂಚಕದಲ್ಲಿ ಆತ್ಮಾನುಭವವನ್ನು ಪ್ರತಿಪಾದಿಸಿರುವರು.

ದತ್ತಾತ್ರೇಯ ಮಾಹಾತ್ಮ್ಯದಲ್ಲಿ ಅಸಹ್ಯವಾದ ರೂಪಗಳಲ್ಲಿ ಭಕ್ತರಿಗೆ ಕಾಣಿಸಿಕೊಂಡು ಗುರು ದತ್ತಾತ್ರೇಯರು ಸರ್ವ ಸಮತಾಭಾವದ ಶಿಕ್ಷಣ ಕೊಟ್ಟಿರುವ ...

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಬಲವಾಗಿ ಬೇರೂರುವುದು. ಸಾಧ್ವಾಚಾರ, ಶಿಷ್ಟಾಚಾರದ ಫಲವಾಗಿ ವಿಶ್ವಾಮಿತ್ರ ಗುರುವು ಸ್ವಯಂ ಅನುಗ್ರಹಿಸಿ ನೀಚಾದಿ ಭಾವನೆಗಳನ್ನು ಹೋಗಲಾಡಿಸುವ ಶಿಕ್ಷಣವನ್ನು ಕೊಡುವ ಹೊಣೆಯನ್ನು ಹೊತ್ತಂತೆ ಆಗುತ್ತದೆ.

೧೨

ಲೋಕವಂದ್ಯವಾದ ಋತ, ವ್ಯವಹಾರನ್ಯಾಯ, ಗುಣಾದಿ ಸೂಚಕ ಋಷಿದೇವತ್ವ ಸದ್ಗುಣಗಳನ್ನು ಹೊಂದಿದ ವೀರಬಾಹುವು ವಿಶ್ವಾಮಿತ್ರ ಗುರು ಪ್ರೇರಿತನಾಗಿ ನಿಷಾದ ಯಜ್ಞ ಕಾರ್ಯವನ್ನು ನೆರವೇರಿಸುವ ಮಹಾಮಹಿಮೆಯಿಂದ ಕೂಡಿರುವ ವಿಚಾರವು ಪ್ರಪಂಚವನ್ನೆಲ್ಲಾ ಬೆಳಗುತ್ತದೆ. ಉಚ್ಚ ನೀಚ ಭಾವನೆಯ ದೋಷಕ್ಕೆ ಪ್ರಾಯಶ್ಚಿತ್ತವೆಂಬ ಶಿಕ್ಷಣ ಕೊಟ್ಟು 'ಸಮತಾ' ಭಾವನೆಯ ಮೇಲಿನ ಕೊಳೆಯನ್ನು ತೊಳೆಯುವುದಕ್ಕಾಗಿ ವೀರಬಾಹುವು ಹರಿಶ್ಚಂದ್ರನಿಗೆ ಶಿಕ್ಷಕನಾಗುವ ಸನ್ನಿವೇಶವನ್ನು ಕಲ್ಪಿಸಬೇಕಾಗಿದೆ. ಸಮತಾ ಭಾವನೆಯಿಂದ ಶೂದ್ರವು* ರೂಢಮೂಲವಾಗಿ ಶಾಶ್ವತ ಸುಖವು ಲಭಿಸಬೇಕಾದರೆ ನೀಚವೆಂದು ಪ್ರಕಟವಾಗಿರುವ ಸನ್ನಿವೇಶದಲ್ಲಿ ಸೇವೆಮಾಡಿ ನೀಚ ಭಾವನೆಯನ್ನು ಪರಿಹರಿಸಿಕೊಳ್ಳಬೇಕೆಂಬುದು ಶಿಕ್ಷಣದ ತತ್ವ; ಇದು ಋತ. ಪತ್ನೀಪುತ್ರ ಸಮೇತ ಸದ್ಗೃಹಸ್ಥನಾಗಿದ್ದುಕೊಂಡೇ ಯಾರಾದರೂ ಈ ಗುಣಗಳನ್ನು ಅಭ್ಯಾಸ ಮಾಡಬಹುದು. ಸ್ವಲ್ಪ ಸ್ವಲ್ಪವಾಗಿ ಮತ್ತು ಕ್ರಮಶಃ ಮಾಡಲ್ಪಟ್ಟ ಈ ಸಂಸ್ಕೃತಿಯ ಅನುಷ್ಠಾನವು ಫಲಕಾರಿಯಾಗಲು ಹೆಚ್ಚು ಕಾಲ ಬೇಕಾಗಬಹುದು. ಅತ್ಯುತ್ಕಟವಾದ ಪ್ರಯತ್ನಾದಿಗಳಿಂದ ಕ್ಷಿಪ್ರ ಸಿದ್ಧಿಯಾಗುವುದು. ಈ ಅತ್ಯುತ್ಕಟ ಪರಿಸ್ಥಿತಿಗೆ (ಪ್ರಕೃತಿ, ವಿಧಿ, ದೈವ)

---

* ಅವಿರೋಧವಾಗಿ ಪ್ರಕೃತಿಗೆ (ಸನ್ನಿವೇಶಕ್ಕೆ, ವಿಧಿಗೆ, ಕರ್ಮ ಫಲಕ್ಕೆ) ಶರಣು ಹೋಗುವ, 'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ' ಎಂಬ ಭಾವನೆ; ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ; 'ಕರಿಷ್ಯೇ ವಚನಂ ತವ' ಎಂಬುದನ್ನು ಶುದ್ಧಾಂತಃಕರಣದಿಂದ ಪಾಲಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಕರ್ಮಫಲಗಳಿಂದ ವಿವಿಧ ರೀತಿಯಲ್ಲಿ ಪ್ರೇರಿತನಾಗಿ, ಪರೋಕ್ಷವಾಗಿ ಮಾರ್ಗವನ್ನು ತೋರಿಸುವ ಗುರುವಿನ ನಿರ್ದೇಶದ ಮೇರೆ ಎಂಬಂತೆ ಹರಿಶ್ಚಂದ್ರನು ತನ್ನ ಸ್ವಾತಂತ್ರ್ಯವನ್ನೂ ಮಾರಿ ವೀರಬಾಹುವಿನಲ್ಲಿದ್ದ ಅರ್ಥಕ್ಕೆ ದಾಸನಾಗಿ ನಿಲ್ಲುತ್ತಾನೆ. ಇದು ಗುರುಕುಲವಾಸವಲ್ಲದೆ ಮತ್ತೇನು ? ಆದರೂ ಹಠ, ಅಹಂಕಾರಗಳ ಅತ್ಯುತ್ಕಟಾವಸ್ಥೆಯಲ್ಲಿ ತಾನು ಸುಮುಖ ಸಂಸ್ಕೃತಿಯಿಂದ ವಿಮುಖ ಸಂಸ್ಕೃತಿ ಕಡೆಗೆ ಎಷ್ಟೋ ಹಂತಗಳನ್ನು ಇಳಿದು ದಾಟಿ ಬಂದಂತೆ ಭಾವಿಸುವುದಕ್ಕಾಗಲೀ, ಅಥವಾ ಈ ಶಿಕ್ಷಣಶಾಲೆಯ ಶಿಕ್ಷಣವು ತನ್ನನ್ನು ಉನ್ನತಿಗೆ ಏರಿಸುವುದೆಂದು ತಿಳಿಯುವುದಕ್ಕಾಗಲೀ ಈ ಅಲ್ಪ ಕಾಲದ ಅಭ್ಯಾಸದಿಂದ ಅವಕಾಶವಾಗುವುದಿಲ್ಲ. ಸ್ಮಶಾನದಲ್ಲಿಯೂ ವಾಸವನ್ನು ಅನುಭವಿಸುತ್ತಾನೆ.† ಪುತ್ರ ಮರಣ ಶೋಕವನ್ನು ಅನುಭವಿಸುತ್ತಾನೆ. ಸ್ತ್ರೀ ವಧೆಗೂ ಪರೋಕ್ಷವಾಗಿ ಸ್ವಪತ್ನೀ ವಧೆಗೂ ಸಿದ್ಧನಾಗುವ ಪರಿಸ್ಥಿತಿಯುಂಟಾಗುತ್ತದೆ. ಆದರೂ ಅಹಂಕಾರ, ಹಠಗಳೆಂಬ ಐಶ್ವರ್ಯವು ಕುಂದುವುದಿಲ್ಲ. ಸರ್ವಕ್ಕೂ ತನ್ನ ವ್ಯಕ್ತಿತ್ವವೇ ಕಾರಣವೆಂದೂ ತನ್ನ ವೃತ್ತಿಯೇ ವರ್ಣವೇ ತಾತ್ಕಾಲಿಕವಾಗಿ ಪ್ರಧಾನವೆಂದೂ ಅಹಂಕಾರೈಶ್ವರ್ಯ ಮದ ಮತ್ತನಾಗಿಯೇ ಇರುತ್ತಾನೆ. "ಐಶ್ವರ್ಯಮದಮತ್ತೋ ಹಿ ಸರ್ವೋಽಹಮಿತಿ ಮನ್ಯತೇ"*

---

† ಮಾಲತೀಮಾಧವ ನಾಟಕದಲ್ಲಿ ಶ್ರೋತ್ರಿಯಕುಲದ ಮಾಧವನು ಕಾರ್ಯಸಿದ್ಧಿಗಾಗಿ ಮಾಂಸವನ್ನು ವಿಕ್ರಯಿಸಲು ತೊಡಗುತ್ತಾನೆ. ಇದು ರಾಜನೀತಿ. ರಾಜನೀತಿಯನ್ನು ಮಾನವನು ಔದಾಸೀನ್ಯದಿಂದ ಕಂಡರೂ, ರಾಜನೀತಿಯು ಮಾನವನನ್ನು ಬಿಟ್ಟು ಹೋಗುವುದಿಲ್ಲ.

* ಗೀತಾ — ಜ್ಞಾನಕಾಂಡ ಉಪನಿಷತ್ತುಗಳನ್ನು ಕಡೆಗಣ್ಣಿಂದ ನೋಡುವ ಕರ್ಮಕಾಂಡ ಪರನೂ, ಕರ್ಮಕಾಂಡವನ್ನು ಕಡೆಗಣ್ಣಿಂದ ನೋಡುವ ಜ್ಞಾನಕಾಂಡ ಉಪನಿಷದಧ್ಯಯನ ಮಾಡುವವನೂ ಈ ಮೋಹಕ್ಕೆ ಭಾಗಿಗಳಾಗುತ್ತಾರೆ. ಇಂತಹವರು ಸಾಮಾನ್ಯ ಸ್ಥಿತಿಯಲ್ಲಿ ಯೋಗಮಾಯೆಯ ಚಿಕಿತ್ಸೆ (ಶಿಕ್ಷಣ) ಗಳಿಂದ ದುರಹಂಕಾರವನ್ನು ಕಿತ್ತೊಗೆಯಬಹುದು. (ಪುರಂದರದಾಸರನ್ನು ಸ್ಮರಿಸಬಹುದು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ವೇದೋಕ್ತವಾದ ಸಾಕ್ಷಾತ್ ಬ್ರಹ್ಮಕರ್ಮ ಮಾರ್ಗದಲ್ಲಿ ನಡೆಯುತ್ತೇನೆ" ಎಂಬ ಹಿಂದಿನ ಸ್ಥಿತಿಗೂ ಈಗಿನ ಸ್ಮಶಾನವಾಸದ ಪರಿಸ್ಥಿತಿಗೂ ಇರುವ ವ್ಯತ್ಯಾಸ ಮತ್ತು ಹೋಲಿಕೆಗಳಿಂದ ಗುಣದೋಷಗಳನ್ನು ರಸಾಭಿಜ್ಞತಾ ದೃಷ್ಟಿಯಲ್ಲಿ ವಿಮರ್ಶಿಸುವ ಮನೋಭಾವವು ಇನ್ನೂ ಉಂಟಾಗಿಲ್ಲ! ಅನುಸಂಧಾನ, ಯೋಗ, ಶರಣಾಗತಿ ಮತ್ತು ಶೂದ್ರಗಳ ಮರ್ಮವು ಇನ್ನೂ ಭಾಸವಾಗಿಲ್ಲ! ಯೋಗ ಮಾಯೆ ಎಂಬ ಚಾಟಿಯ ತಾಡನಗಳಿಂದ ಚಮತ್ಕಾರವು (ಪವಾಡವು) ಗೋಚರವಾದಲ್ಲದೆ ಹಠ, ಅಹಂಕಾರಾದಿ ಭಾವನೆಗಳು ಮನಸ್ಸನ್ನು ಬಿಟ್ಟು ಹೋಗಲಾರವು. ಅಂತಹ ಮಾನವಾತೀತವಾದ ಅನುಭವಗಳು ಹರಿಶ್ಚಂದ್ರನಿರುವ ಶಿಕ್ಷಣ ಶಾಲೆಯಲ್ಲಿ ಉಂಟಾಗಬೇಕಾಯಿತು.

೧೩

ಹಠಾತ್ತಾಗಿ ಉಂಟಾದ ಮಾಂಗಲ್ಯ ದರ್ಶನದಿಂದ, ವಧೂವರರು ಜಾಯಾಪತಿ (=ದಂಪತಿ) ಗಳೆಂಬ ಅರಿವುಂಟಾಗುತ್ತದೆ. ಮನಸ್ಸಮುದ್ರದಲ್ಲಿ ಮಂಥನವು ನಡೆದು ಅಮೃತ ಪ್ರಾಪ್ತಿಗೆ–ಯೋಗಕ್ಕೆ–ದಾರಿಯಾದ ಮಾನವಾತೀತವಾದ ಮತ್ತು ಅತೀಂದ್ರಿಯವಾದ ಘಟನೆಯೆಂಬ ಕುಠಾರವು ಅಹಂಕಾರವನ್ನು ಅಡಗಿಸುತ್ತದೆ. ಯೋಗಕ್ಕೆ ತಡೆಯಾದ ತೆರೆಯು ತತ್‌ಕ್ಷಣ ಸರಿಯುತ್ತದೆ. ಕೇನೋಪನಿಷತ್ತಿನಲ್ಲಿ ಉದಾಹರಿಸಿರುವಂತೆ ಯಕ್ಷದರ್ಶನದಿಂದ ದೇವತೆಗಳ (ದೇವ ಮಾನವರು – ಮಾನವ ದೇವರುಗಳ) ಅಹಂಕಾರವು ಅಡಗಿ ಯೋಗಾನುಭವವು ಸ್ವತಃ ಪ್ರಕಾಶವಾದಂತಾಗುವುದು. 'ನಷ್ಟೋ ಮೋಹಃ ; ಸ್ಮೃತಿರ್ಲಬ್ಧಾ ; ಕರಿಷ್ಯೇ ವಚನಂ ತವ' ಎಂಬಂತೆ ಕರ್ಮಸಂನ್ಯಾಸ (–ಸಮರ್ಪಣ–) ಬುದ್ಧಿಯೂ ಯೋಗವೂ ಲಭಿಸುತ್ತದೆ. * ಸ್ವಯಂ ಪ್ರಕಟವಾದ ಅನುಸಂಧಾನ

---

* ಶ್ರೀ ಶ್ರೀ ಆನಂದ, ಯೋಗಾನಂದ ಬ್ರಹ್ಮರ್ಷಿ ಗುರು ಪಾದುಕಾರಾಧನೆಯು ಈ ಲೇಖಕ ಶಿಷ್ಯದಂಪತಿಗಳಿಗೆ ದೊರೆತಿರುವುದು ಈ ಬಗೆಯ ಸುಯೋಗದಿಂದಲೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಹಸ್ಯದಿಂದ ಹರಿಶ್ಚಂದ್ರನು ಪ್ರಸನ್ನನಾದ ಯೋಗಿಯಾಗುತ್ತಾನೆ. ಕರ್ಮ ಯೋಗಿಯಾಗುತ್ತಾನೆ. ಸರ್ವ ಸನ್ಮಂಗಳೋದಯವಾಗುತ್ತದೆ. ಅನೇಕ ಜನ್ಮಗಳಲ್ಲಿ ಉಂಟಾದ ಕ್ಲೇಶಗಳಿಂದ ದೊರೆಯಬಹುದಾದ ಪುಣ್ಯಫಲ ಗಳನ್ನೆಲ್ಲಾ ಒಂದೇ ಜೀವನದಲ್ಲಿ ಪಡೆದು "ಪ್ರಜೆಗಳ-ದೇವತೆಗಳ-ನಂಬಿಕೆಗೆ ಪಾತ್ರನು" ಎಂಬುದು ಸ್ಥಿರವಾಗುತ್ತದೆ. ಇಂತಹ ವ್ಯಕ್ತಿಗಳೇ ಪ್ರದೇಶ, ದೇಶಗಳ ರಾಜ್ಯಭಾರವನ್ನು ನಿರ್ವಂಚನೆಯಾಗಿ ನಿರ್ವಹಿಸತಕ್ಕವರು. ಇಂತಹ ಯೋಗಿಗಳನ್ನು ಆರಿಸಿ ಅವರ ವಶಕ್ಕೆ ವಿಶ್ವವನ್ನು ತುಂಬುವನ್ನು ಧನಕನಕ ವಸ್ತುಗಳನ್ನು ಕೊಟ್ಟು, ಪ್ರಜೆಗಳ ಯೋಗಕ್ಷೇಮವನ್ನು ವಹಿಸಿದರೆ ಲೋಪದೋಷಗಳುಂಟಾಗದೆ ಪುರುಷಾರ್ಥಗಳು ಸಾಧಿಸಲ್ಪಡು ವುವು. ಇಂತಹವರೇ ರಾಜರ್ಷಿಗಳು; ದೇಶಕ್ಕೆಲ್ಲಾ ರಾಜರು. ಜನಕ ರಾಜ ಗುಣವುಳ್ಳ ಇಂತಹವರು ಈ ಸುಯೋಗವನ್ನು ಹೊಂದುತ್ತಾರೆ. ವಿಶ್ವಾಮಿತ್ರ ವಿಭೂತಿ ಪುರುಷರ ತಪಃ ಫಲರಾಶಿಯನ್ನು ಮಾತ್ರವಲ್ಲದೆ ಪ್ರಕೃತಿಯ ಧನವೆನಿಸಿದ ಬ್ರಹ್ಮಾಂಡವನ್ನು ಇವರ ವಶಕ್ಕೆ ಕೊಟ್ಟು ಕ್ಷತ್ರವನ್ನು ಕ್ರಮಪಡಿಸಬಹುದು; ಬ್ರಹ್ಮವನ್ನು ಸಂರಕ್ಷಿಸಿ ಸಂವರ್ಧಿಸುವ ಅನುಸಂಧಾನ ಅನುಷ್ಠಾನ ಕರ್ಮಗಳಿಗೆ ಸತ್ ಆವರಣಗಳನ್ನು ಕಲ್ಪಿಸ ಬಹುದು. ಪೂರ್ಣವೆನಿಸಿದ 'ಕರ್ಮ'ವನ್ನೂ ಧರ್ಮದ ರೂಪವನ್ನೂ ಆಚಾರಾನುಷ್ಠಾನಗಳನ್ನೂ ಸಾಕ್ಷಾತ್ಕರಿಸಿ ಪ್ರಜೆಗಳು ಶ್ರೇಯೋವಂತ ರಾಗಬಹುದು.

೧೪

ಸಾಮಾನ್ಯವಾಗಿ ಇತರರು ಧಾರೆಯೆರೆದು ಕೊಟ್ಟ ದಾನವು-ತಪಃ ಫಲವು ಬಂಧನಕ್ಕೆ ಗುರಿಪಡಿಸುವುದು. ಯೋಗದ ಹಂತಗಳನ್ನು ಏರಲು ಅಡಚಣೆ. ದಾತೃ, ದಾನದ್ರವ್ಯ, ದಾನಕರ್ಮ, ಪ್ರತಿಗ್ರಹೀತೃ, ಕಾಲ, ದೇಶ, ಉದ್ದೇಶ ಇತ್ಯಾದಿಗಳು ದ್ರೋಹ, ಅನ್ಯಾಯಗಳ ಸೋಂಕಿಲ್ಲದೆ ಶುದ್ಧವಾಗಿದ್ದು ಸಾರ್ಥಕ ಮತ್ತು ಚರಿತಾರ್ಥಕಗಳಾಗುವುದು ವಿರಳ. ನ್ಯಾಸಭೂತವಾದ ಅರ್ಥವನ್ನು ಪ್ರಕೃತಿಯಿಂದ ಪಡೆದು ಪ್ರಕೃತಿ ಪ್ರೇರಣೆಯಿಂದ ಪ್ರಕೃತಿಯಲ್ಲಿ ಪ್ರಕೃತಿಗಾಗಿ ವಿನಿಯೋಗಿಸಬೇಕಾದುದೇ ಕರ್ಮಯೋಗದ ರಹಸ್ಯ. ಯಾರಿಗೂ ಕೋಪವಾಗದಂತೆ ನ್ಯಾಯದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಧನದ್ರವ್ಯಾದಿ ಅರ್ಥವನ್ನು ಆರ್ಜಿಸಿ ಅಥವಾ ಪರಿಗ್ರಹಿಸಿ ಸ್ವಪರ ಹಿತವಾಗುವಂತೆ, ಅನುರೋಧ ಕರ್ಮವನ್ನಾಚರಿಸುವುದೇ ಜೀವನಯಜ್ಞ ರಹಸ್ಯ. ಇದನ್ನೇ "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ, ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿ ಬದುಕಿರೋ" ಎಂದು ಸಂಗೀತ ಕಲಾವಿದ ಮಹಾನುಭಾವರು ವಿವರಿಸಿ ಹೇಳಿರುತ್ತಾರೆ.

ದೇಹಿಗಳೆಲ್ಲರೂ ಪ್ರತಿದಿನವೂ ಪ್ರತಿಕ್ಷಣದಲ್ಲಿಯೂ ಇಂತಹ ಪರಿಸ್ಥಿತಿಗಳನ್ನು ಅವರವರ ಕರ್ಮಯೋಗ ಬುದ್ಧಿಯ ಪ್ರಮಾಣಾಂಶಕ್ಕೆ ತಕ್ಕಂತೆ ಸಾಕ್ಷಾತ್ತಾಗಿ, ಪರೋಕ್ಷವಾಗಿ, ತಿಳಿದಂತೆ, ತಿಳಿಯದಂತೆ, ಅನುಭವ ಮಾಡಿಕೊಳ್ಳುತ್ತಲೇ ಇರುತ್ತಾರೆ.

ಹೀಗೆ ಹರಿಶ್ಚಂದ್ರ ಮನೋಧರ್ಮದಿಂದ ಕರ್ಮಯೋಗಿಗಳಾದ ನಳ, ರಾಮಚಂದ್ರ, ಧರ್ಮರಾಯಾದಿಗಳು, ಶ್ರೀ ಶಂಕರಾಚಾರ್ಯ, ವಿದ್ಯಾರಣ್ಯ, ಸದಾಶಿವ ಬ್ರಹ್ಮೇಂದ್ರ ಮೊದಲಾದವರು ಸರ್ವರ ದೃಷ್ಟಿ ಪಥಕ್ಕೆ ಬರುವುದಕ್ಕೆ ಆಯಾ ಚರಿತ್ರೆಯನ್ನು ಬರೆದವರು ಕಾರಣರು. ಇಂತಹವರು ಕೋಟಿ ಸಂಖ್ಯೆಯಲ್ಲಿರುತ್ತಾರೆ. ಯಾವ ಪೊದೆಯಲ್ಲಿದ್ದರೂ (ಗುಹೆಯಲ್ಲಿದ್ದರೂ) ವಿಭೂತಿ ಪುರುಷರು ವಿಖ್ಯಾತಿಗೆ ಬರುವುದಕ್ಕೆ ಕವಿಗಳೂ ಅವರ ಋಣಾನುಬಂಧವೂ ಕಾರಣ.

೧೫

ವಿಶ್ವಾಮಿತ್ರ ವಿಭೂತಿ ಪುರುಷರ ಸಂದರ್ಶನದಿಂದಲೇ ಅವರ ಮಹಿಮೆಯನ್ನು ತಿಳಿಯಬಹುದು. ಅಂತಹ ಜೀವನ್ಮುಕ್ತರು ಸಾಮಾನ್ಯವಾಗಿ ಸಾಮಾನ್ಯರಂತೆ ಪ್ರಾಪಂಚಿಕವಾಗಿಯೋ ಎಂಬಂತೆ ಮನೋವಾಕ್ಕಾಯಕರ್ಮಗಳನ್ನಾಚರಿಸುವರು.* ಸ್ವಕರ್ಮನಿಷ್ಠರಾದ ಹರಿಶ್ಚಂದ್ರರು

---

* ವಂಚನಾದಿ ಕಲೆಗಳಲ್ಲಿ ಅಭ್ಯಾಸ ಶಿಕ್ಷಣವನ್ನು ಹೊಂದಿದವರ ವೇಷಭಾಷಾ ಭೂಷಣಗಳಿಂದ ಕ್ಷುಲ್ಲಕರನ್ನು ಮಹಾತ್ಮರನ್ನಾಗಿ ಸಂಭಾವಿಸಿ ಮೋಸ ಹೋಗುವ ಜನತೆಗೆ ರಾಜನೀತಿ ನೇತ್ರವೇ ಆಪ್ತಮಿತ್ರನಂತೆ-ಚಾರನಂತೆ ಸಹಕಾರಿಯಾಗಬೇಕಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವಕರ್ಮದ ಅನುಸಂಧಾನ (ಯೋಗ) ರಹಸ್ಯವನ್ನು ಕ್ರಮೇಣ ಶಿಕ್ಷಣದ ಫಲವಾಗಿ ತಿಳಿದು, ಆತ್ಮವನ್ನು ಸಮರ್ಪಿಸಿದ ಬಲಿ ಚಕ್ರವರ್ತಿಯಂತೆ ಸರ್ವಸ್ವವನ್ನೂ ಅರ್ಪಿಸಿ ಶರಣಾಗತರಾಗಬಹುದು.

ವಿಶ್ವಾಮಿತ್ರರ ಪ್ರಶಂಸೆಗೆ ಒಳಪಟ್ಟ, ಚಂಡಾಲ ಕನ್ಯೆಯರು "ಸಾಕ್ಷಾತ್ ಲಕ್ಷ್ಮೀ" ಎಂಬ ಭಾವನೆಯಿಂದ ಆದರಿಸಲ್ಪಡಬೇಕಾದವರು. (ಶ್ರೀಶಂಕರಭಗವತ್ಪೂಜ್ಯಪಾದರಿಗೂ ಈ ವಿಧವಾದ ಶಿಕ್ಷಣವು ಲಭಿಸಿತ್ತು) ಸ್ಮಶಾನ, ಕ್ಷೇತ್ರ, ವಾಸದ ಮನೆ, ಅರಮನೆ, ಯಜ್ಞಶಾಲೆ ಇತ್ಯಾದಿಗಳೆಲ್ಲಾ ಒಂದೇ ಮನೆಯ ಬೇರೆ ಬೇರೆ ಭಾಗಗಳಾಗಿ ಪ್ರಯೋಜನಕಾರಿಗಳಾಗಿರುತ್ತವೆ. ದೇಹಿಗಳಿಗೆ ನಿಷಾದವೃತ್ತಿಯಾಗಲೀ, ವೈಶ್ಯವರ್ಣವಾಗಲೀ, ಕ್ಷತ್ರಿಯ ವರ್ತನೆಯಾಗಲೀ, ಶ್ರೋತ್ರಿಯ ಕರ್ಮವಾಗಲೀ, ಶೂದ್ರ ಸ್ವಭಾವವಾಗಲೀ ಪ್ರಕೃತಿಯ ಅಪ್ಪಣೆಯಂತೆ ಋಣದ ಮಿತಿಯಲ್ಲಿ ಜೀವನಯಜ್ಞ ನಿರ್ವಾಹ ಸಾಧನವಾಗಿರುತ್ತವೆ. ಇದೇ ರಾಜಧರ್ಮದ ಸಾರ ಕ್ಷತ್ರಿಯ ವರ್ತನೆಯವರ ಗುಂಪಿಗೆ ಸೇರಿದ ವ್ಯಕ್ತಿಯಾಗಲೀ ಅಥವಾ ಪ್ರದೇಶ, ದೇಶಗಳ ರಾಜ್ಯಭಾರವನ್ನು ಹೊಣೆಗಾರಿಕೆಯಿಂದ ನಡೆಸುವ ಕ್ಷತ್ರಿಯ ವ್ಯಕ್ತಿಯಾಗಲೀ ಅಥವಾ ಬೇರೆಯವರಾಗಲೀ ಗಮನ ಕೊಟ್ಟು ತಿಳಿದು ನಡೆಸಬೇಕಾದ ಧರ್ಮವು ಮಾತ್ರ 'ರಾಜಧರ್ಮ' ಎಂದಲ್ಲ. "ಪ್ರಜಾಪತಿಯ ಪಂಚ ವಲಯಗಳ ರಾಜ್ಯಭಾರದಲ್ಲಿ ಸರ್ವ ವ್ಯಕ್ತಿಗಳೂ ರಾಜರೆನಿಸಿ, ಪ್ರಭುಗಳೆನಿಸಿ ಪ್ರಭುತ್ವ ವಾ ಪ್ರಭುಶಕ್ತಿಯಿಂದ ಅವರವರ ಮಿತಿಯಲ್ಲಿ ರಾಜಧರ್ಮವನ್ನು ಪಾಲಿಸುವ ಹೊಣೆಗಾರಿಕೆಯುಳ್ಳವರು." ಎಂಬಿವೇ ಮೊದಲಾದ ರಾಜಧರ್ಮ ವಿಷಯಗಳನ್ನು ಪುರಾಣೇತಿಹಾಸಾದಿಗಳಿಂದ ತಿಳಿದು ದೇಹಿಗಳು ತಮ್ಮ ಮಿತಿಯಲ್ಲಿ ಆಚರಿಸುವುದರಿಂದ ಋಷಿಋಣ, ಪಿತೃಋಣ, ದೇವಋಣ, ಮೊದಲಾದ ಋಣಗಳು * ಪರಿಹಾರವಾಗುವುವು. ಕೇವಲ ಪ್ರಾಪಂಚಿಕದ ಇಂದ್ರಿಯಾರ್ಥ ಪ್ರಾಪ್ತಿಗಾಗಿ ಪುರಾಣೇತಿಹಾಸಗಳಲ್ಲಿ ಕಂಡ ನಾಯಕ (ವೀರ)ರನ್ನು ಹೊಗಳಿದರೆ, ಪೂಜಿಸಿದರೆ ಸಾಮಾನ್ಯ ಫಲಪ್ರಾಪ್ತಿಯೇ ಹೊರತು

---

* [illegible] 65-77 ಅಧ್ಯಾಯ [illegible]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಯೋಗಲಾಭವಾಗುವುದಿಲ್ಲ. ವಿಮರ್ಶಾ, ವಿವೇಕಗಳಿಂದ ಆ ವೀರರ ಮಿತಿಯನ್ನೂ ವಾಚಕರ ಮಿತಿಯನ್ನೂ ತಿಳಿಯದೆ ಇದ್ದರೆ ಸ್ಥೈರ್ಯ ಧೈರ್ಯ ಸ್ಥಿತಪ್ರಜ್ಞೆಗಳು ಉಂಟಾಗುವುದಿಲ್ಲ. ಹಿರಿಯರ ಪ್ರಸಿದ್ಧ ಪುರುಷರ ಚರಿತ್ರೆಗಳು ಭೂಮಿ ಜಲ ಪ್ರದೇಶ, ವಾಯು, ಜ್ಯೋತಿರ್ಘನಗಳು ಮತ್ತು ಪರ್ಜನ್ಯಪ್ರಭಾವಾದಿಗಳ ಚರಿತ್ರೆಗಳು ಸೂಚಿಸುವ ರಾಜನೀತಿಯಜ್ಞಾನದಿಂದ ಕಾಲಕ್ರಮದಲ್ಲಿ ಯೋಗಮಾರ್ಗವು ದೊರೆಯುವುದು.

ಬಾಣ ಕವಿಯು ತನ್ನ ಅಮೋಘ ಕಾವ್ಯವಾದ ಕಾದಂಬರಿಯಲ್ಲಿ ವಿವರಿಸಿರುವ ರಾಜನೀತಿ ಮರ್ಯಾದಾ ಪ್ರಕಾಶಕವಾದ ಜೀವನ ವರ್ತನೆಯ ವಿಷಯಗಳ ರಹಸ್ಯವು ಪ್ರಮುಖವಾಗಿರುವುದು : ತನ್ನ ಬಳಿಗೆ ಬಂಧುವಿನಿಂದ ಇಂದ್ರಾಯುಧವೆಂಬ ಕುದುರೆಯನ್ನು ಆರೋಹಣ ಮಾಡುವ ಸಮಾರಂಭದಲ್ಲಿ ಚಂದ್ರಾಪೀಡನು ಆ ಅಶ್ವದ ಆಕಾರೈಃ, ಇಂಗಿತೈಃ ಗತ್ಯಾ, ಚೇಷ್ಟಯಾ, ಭಾಷಣೇನ ಚ ನೇತ್ರ ವಕ್ತ್ರ ವಿಕಾರೇಣ ಅದರ ಮಹಿಮೆಯನ್ನು ಊಹಿಸಿ ತಿಳಿದು ತಿಳಿಯುವವನಾಗಿ "ಯೋಽಸಿ, ಸೋಽಸಿ ಮಹಾತ್ಮನ್, ನಮಸ್ತೇ ಸರ್ವಥಾ ಅಪಚಾರಃ ಮರ್ಷಣೀಯಃ" (ಯಃ ಅಸಿ = ತೇಜಃ ಶಾಂತಿ ಸೌಂದರ್ಯಾದಿ ಗುಣಗಣಗಳಿಂದಲೂ ವಿಭೂತಿ ಮಹಿಮೆಯಿಂದಲೂ ಕೂಡಿ ಮನ್ನಣೆಗೆ ಪಾತ್ರವಾದ ಯಾವ ಉದ್ದಾಮ ವೈನತೇಯ ಅಶ್ವ ದೇಹವನ್ನು ಧರಿಸಿರುತ್ತೀಯೋ — ಸಃ ಅಸಿ = ಯೋಗಾದಿ ಸಂಸ್ಕಾರಗಳಿಂದ ಅಂತಹ ಶುದ್ಧಾಂತರಾತ್ಮನಾಗಿ ಶುದ್ಧಾತ್ಮನಾಗಿರುತ್ತೀಯೆ. ಮಹಾತ್ಮನೇ, ನಮಸ್ಕಾರ, ಯಾವ ಅಪಚಾರವಿದ್ದರೂ ಕ್ಷಮಿಸಬೇಕು.") ಎಂದು ಗೌರವಿಸುತ್ತಾನೆ. ಅವತಾರ ರಹಸ್ಯ ಗರ್ಭಿತಗಳಾದ ಇಂತಹ ಉಕ್ತಿಗಳು ಸಂಸ್ಕೃತಿ – ರಾಜನೀತಿ – ಅಭ್ಯಾಸಗಳ ಫಲವಾಗಿ ಹೊರ ಬೀಳುವುವು, ಸಂಸ್ಕೃತಿ ಸಾಧನೆಗೆ ಸಹಕಾರಿಗಳಾಗುವುವು. ಜೀವನದ ಈ ಬಗೆಯ ಗುಟ್ಟುಗಳನ್ನು ತಿಳಿದು ಋಷಿಗಳು ಮಾನವರ ಮಿತಿಗಳನ್ನು ಹೇಗೆ ಪ್ರದರ್ಶಿಸಬೇಕು ? ಆರೋಗ್ಯ, ಮನಶ್ಶಾಸ್ತ್ರಗಳ ನಿಯಮಗಳನ್ನು ಹೇಗೆ ಪಾಲಿಸಬೇಕು ? ವರ್ತನೆಗಳನ್ನು ಹೇಗೆ ಕ್ರಮಗೊಳಿಸಬೇಕು ? ಇತ್ಯಾದಿ ಪಾಠಗಳನ್ನು ಗೃಹ್ಯ ಧರ್ಮ ಸೂತ್ರಗಳಲ್ಲಿ ತಿಳಿಸಿರುತ್ತಾರೆ. ರಾಜ್ಯದ ಪಂಚವಲಯಗಳಲ್ಲಿಯೂ ಆಚರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri
रजिस्ट्रार कार्यालय,
गुरुकुल कांगड़ी विश्वविद्यालय,
जिला सहारनपुर (उ० प्र०)

ಸಲ್ಪಡಬೇಕಾದ ಈ ನಿಯಮಗಳು ಸ್ವಪರ ಹಿತಸಾಧನೆಯ ರಾಜನೀತಿಯೇ ಆಗಿರುತ್ತವೆ.*

---

* ಸ್ತ್ರೀ, ಪುರುಷ ವ್ಯಕ್ತಿತ್ವವನ್ನು ಪ್ರಕೃತಿ – ಸ್ವಾಭಾವಿಕ ಗುಣಗಳಿಗೆ ಅನುಸಾರವಾಗಿ, ಮುಚ್ಚುಮರೆ ಮಾಡದೆ ಅನುರೂಪವಾದ ಉಡುಪು ಮೊದಲಾದುವುಗಳಿಂದ ಪ್ರಕಟಿಸುವುದು ; ಆರೋಗ್ಯಕ್ಕೂ, ಮನೋಭಾವ, ಕುಲ – ಮೊದಲಾದುವುಗಳನ್ನು ಬೆಳಗುವುದಕ್ಕೂ ಭಸ್ಮ, ಶ್ವೇತಮೃತ್, ರಕ್ತಮೃತ್ (ಕಾವಿ), ಪೀತಮೃತ್ (ಗೋಪೀಚಂದನ), ಗಂಧಾದಿಗಳ ಮತ್ತು ರಕ್ಷೆಯ ಧಾರಣೆ ; ವಿದೇಶದಲ್ಲಿ ಡಾ|| ಕೂರ್ನ ಮೊದಲಾದವರು ಭಾವಿಸಿರುವ ಜಲಚಿಕಿತ್ಸೆಗೆ ಮೂಲವಾದ ತಣ್ಣೀರು (ನದೀ, ತಟಾಕಾದಿಗಳಲ್ಲಿ) ಸ್ನಾನ, ಮೂತ್ರ ವಿಸರ್ಜನೆಯಾದನಂತರ ತಣ್ಣೀರಿನಿಂದ ಶೌಚ ; ಮಲವಿಸರ್ಜನೆಯಾದನಂತರ ತಣ್ಣೀರು, ಮೃತ್ತಿಕೆಗಳಿಂದ ಶೌಚ ; ಕರ್ಣವೇಧಾದಿಗಳು ; ಭೂವಾಯುಗುಣಾದಿಗಳಿಗೆ ತಕ್ಕ ಉಡಿಗೆ ತೊಡಿಗೆಗಳು ಸಂಸ್ಕೃತಿಯ ಸೋಪಾನಗಳನ್ನು ಏರಿದಂತೆ ಮುಖದಲ್ಲಿ ಕಾಣುವ ವರ್ಚಸ್ಸು, ತೇಜಸ್ಸು ಮಾತ್ರ ರಾಜಕೀಯವಾಗಿ ಪಡೆದ ಗೌರವಗಳು ; ರಾಜ್ಯದ ಸ್ಥಾನಮಾನ ಪ್ರದರ್ಶಕ ಚಿಹ್ನೆಗಳು. ಇವೆಲ್ಲವೂ ವ್ಯಕ್ತಿಗಳ ಮಿತಿಯನ್ನು ಬೆಳಗಿ ಪರಸ್ಪರ ವರ್ತನೆಗಳಲ್ಲಿ ಲೋಪದೋಷಗಳುಂಟಾಗದೆ ಶಾಂತಿ ಸೌಕರ್ಯಗಳಿಗೆ ಅವಕಾಶವನ್ನು ಕಲ್ಪಿಸುತ್ತವೆ.

ವ್ಯವಹಾರದಲ್ಲಿ, ನಾಟಕ ವೇಷಧಾರಿಯಂತೆ ವರ್ತಿಸಿದರೆ ಘರ್ಷಣಕ್ಕೆ ಅವಕಾಶವಾಗುವುದು ; ಶಾಂತಿ ಭಂಗವಾಗುವುದು.

ವ್ಯವಹಾರದಲ್ಲಿ ವ್ಯಕ್ತಿಗಳ ಇತಿಮಿತಿ ಸೂಚಕವಾದ ರಾಜನೀತಿಯನ್ನು ಅರಿತ ಸ್ತ್ರೀ ಪುರುಷರು ತಮ್ಮನ್ನೂ ತಮ್ಮ ಶತ್ರುಗಳನ್ನೂ, ಮೋಸಗಾರರನ್ನೂ, ಮಿತ್ರರನ್ನೂ ರಕ್ಷಿಸಲು ಸಮರ್ಥರಾಗುವರು.

ವಿವಾಹಿತ ಸ್ತ್ರೀಯರನ್ನು ಮುಸ್ಲಿಮರು ಗೌರವಿಸುತ್ತಿದ್ದರು ; ಅವಿವಾಹಿತರನ್ನು ಬೇರೆ ದೃಷ್ಟಿಯಿಂದ ನೋಡುತ್ತಿದ್ದರು – ಎಂಬುದರಿಂದ ವಿವಾಹಿತ ಸ್ತ್ರೀತ್ವವನ್ನು ಹೊರಪಡಿಸುವ ಚಿಹ್ನವು ಆವಶ್ಯಕ ಎಂಬುದು ರಾಜನೀತಿಯ ಸಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವಿಕ್ರಮನ ಕಥೆಯಿಂದಲೂ ಜೀವನದಲ್ಲಿ ವರ್ತನೆಯ ಸಾರವನ್ನು ತಿಳಿಯಬೇಕಲ್ಲದೆ, ಶನ್ಯಾದಿ ಜ್ಯೋತಿರ್ಗ್ರಹಗಳು ಜನಗಳನ್ನು ವಂಚಿಸುತ್ತಾರೆಂತಲೂ ಮಾನವರನ್ನು ಬೊಂಬೆಗಳಂತೆ ಆಟವಾಡಿಸುತ್ತಾರೆಂತಲೂ ತಿಳಿಯುವುದು ಮಹಾಪಾತಕವು. ಸರ್ವ ಶಕ್ತರೂ ಸರ್ವ ಸ್ವತಂತ್ರರೂ ಆದ ದೇಹಿಗಳು ಸ್ವಕರ್ಮ ಫಲಬದ್ಧರಾಗಿರುವುದನ್ನು ಮರೆತು ಅನ್ಯಾರೋಪ ಮಾಡುವುದು ಅಪರಾಧವಾಗುವುದು. ಕರ್ಮಗತಿಯ ರಹಸ್ಯವನ್ನು, ತಿಳಿಯದೆ ಅನುಸಂಧಾನವಿಲ್ಲದೆ ಗರ್ವದಿಂದ ನಡೆಯುವುದು ವಿರೋಧ ಮಾರ್ಗವೆಂಬುದನ್ನೂ ತಿಳಿಯಬೇಕು. ತಮ್ಮ ತಮ್ಮ ವಿಧಿಗೆ-ಪ್ರಕೃತಿಗೆ ಶರಣಾಗತರಾಗಿ ಕೇವಲ ಶೂದ್ರದಿಂದ ಜೀವನವನ್ನು ಸಾಗಿಸಿ ಸುಖಿಗಳಾಗಬಹುದು. ಅಥವಾ ಸ್ವಾತಂತ್ರ್ಯವನ್ನು ಪ್ರಯೋಗಿಸಿ, ದಕ್ಷತೆಯನ್ನೂ ಸಾಮರ್ಥ್ಯವನ್ನೂ ತೋರಿಸುವ ಕ್ಷತ್ರದಿಂದ ಬ್ರಹ್ಮವನ್ನು ವೃದ್ಧಿಗೊಳಿಸುವಾಗ ಅನುಸಂಧಾನದ ಮಾರ್ಗವನ್ನು ತಿಳಿದು ಕರ್ಮಾನುಷ್ಠಾನ ಮಾಡಬೇಕಾಗಿರುತ್ತದೆ. ಮಿತಿಯನ್ನು ಹೇಳುವ ವಿವೇಚನೆಯ ಮಾರ್ಗಗಳು ಅನೇಕ ಮುಖವಾದ ಅನೇಕ ರೂಪವಾದ ನೃಪನೀತಿ - ರಾಜನೀತಿ ಶಾಸ್ತ್ರದಲ್ಲಿ ಸರ್ವರಿಗೂ ಸುಲಭವಾಗಿ ಗೋಚರವಾಗಬಹುದಾಗಿರುವಂತೆ ವಿಸ್ತಾರವಾಗಿ ತಿಳಿಸಿರುತ್ತಾರೆ. ಸನ್ಮಾರ್ಗದಲ್ಲಿ ನಡೆದು ಕ್ಷೇಮವಾಗಿರುವಂತೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಾಗಿ ಸರ್ವರೂ ಅನುಸರಿಸಬೇಕಾದ ಪದ್ಧತಿಯೇ ನೃಪನೀತಿಯಾಗಿರುತ್ತದೆ. ಪಾರಿಭಾಷಿಕ ಶಾಸ್ತ್ರಗಳಾವುವೂ ಅನ್ಯಶಾಸ್ತ್ರ ಸಹಾಯವಿಲ್ಲದೆ ಸ್ವಂತವಾಗಿ ಮತ್ತು ನೇರವಾಗಿ ಜೀವನ ಕಲೆಯನ್ನು ತಿಳಿಸುವುದಿಲ್ಲ; ತಿಳಿಸಲು ಸಾಧ್ಯವೂ ಇಲ್ಲ. ಸಮಸ್ತ ಪಾರಿಭಾಷಿಕ ಶಾಸ್ತ್ರಗಳ ಸಾರವನ್ನು ಸಂಗ್ರಹಿಸಿ ಜೀವನ ಕಲಾ ಸಂವಿಧಾನವೆಂಬ ರಾಜ್ಯದ (ಸರ್ಕಾರದ) ಪಂಚವಲಯಗಳನ್ನು ನಿರ್ವಹಿಸುವುದು ರಾಜನೀತಿಯೊಂದೇ. ಪ್ರಭುತ್ವವನ್ನು-ಪ್ರಭುಶಕ್ತಿಯನ್ನು ಹೊಂದಿ ರಾಜನೆನಿಸುವ ಪ್ರತಿಯೊಬ್ಬ ಪ್ರಜೆಯೂ ರಾಜನೀತಿ ಶಾಸ್ತ್ರ ಪರಿಶ್ರಮವನ್ನು ಅವಶ್ಯಕವಾಗಿ ಹೊಂದಬೇಕಾಗಿರುತ್ತದೆ. ರಾಜನೀತಿ ಪರಿಶ್ರಮವಿಲ್ಲದಿದ್ದರೆ, ಪ್ರಜಾತ್ವಕ್ಕೆ ಜಲಾಂಜಲಿಯನ್ನು ಕೊಟ್ಟು ಆ ಸಾಮರ್ಥ್ಯ ಇರುವವರೆಗೂ ಪಶುವರ್ಗದ ದೇಹಿಗಳ ಹಂತದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವಾತಂತ್ರ್ಯವನ್ನೂ ವಿವೇಕವನ್ನೂ ದೂರೀಕರಿಸಿ ಇರಬೇಕಾಗುತ್ತದೆ. ಸಸ್ಯ–ಪಶುವರ್ಗ ದೇಹಿಗಳ ಹಂತದಲ್ಲಿದ್ದು ಸ್ವಾತಂತ್ರ್ಯವನ್ನು ದುರುಪಯೋಗಿಸಿಕೊಳ್ಳುವುದಾದರೆ ತಮ್ಮನ್ನೂ ತಮ್ಮ ಸುತ್ತಮುತ್ತಲಿನವರನ್ನೂ ಹೇಯವಾದ ಬಾಧೆಗೆ ಗುರಿಮಾಡಿಕೊಂಡು ದುಷ್ಕರ ಪರಿಸ್ಥಿತಿಯ ಋಣಪಾಶದಿಂದ ತಮ್ಮನ್ನು ತಾವೇ ಕಟ್ಟಿಹಾಕಿಕೊಳ್ಳುತ್ತಾರೆ. ಇವೆಲ್ಲವೂ ಪ್ರತಿಕ್ಷಣದಲ್ಲಿಯೂ ಪ್ರಪಂಚದಲ್ಲಿ ನಡೆಯುವ ಆಗು ಹೋಗುಗಳಿಂದ ಕರತಲಾಮಲಕವಾಗಿ ಅನುಭವಕ್ಕೆ ಬರುತ್ತವೆ. ಜೀವನದ ವರ್ತನೆ ಮಿತಿಗಳನ್ನು ಕ್ರಮಗೊಳಿಸಿ ಚಕ್ಕನಿ ರಾಜಮಾರ್ಗ (ಮಧ್ಯಮ ಮಾರ್ಗ) ಬೋಧಕವಾದ ರಾಜನೀತಿಯೇ (ರಾಜ್ಯವೇ) ರಾಜಯೋಗವೇ ಸಕಲ ಶ್ರೇಯಸ್ಸಿಗೂ ಮೂಲಾಧಾರವಾಗಿರುವುದರಿಂದ ಸಚ್ಚಿದಾನಂದಾನುಭವ ಸಾಕ್ಷಾತ್ಕಾರಕ್ಕೂ ಅಪರೋಕ್ಷ ಜ್ಞಾನಾನುಭವಕ್ಕೂ ಆಶ್ರಯವಾಗಿದೆ.

ಶ್ರೇಯಸ್ಸಿಗೆ ವಿಹಿತವಾಗಿರುವ ಋತ–ಪ್ರಕೃತಿ ಪ್ರೇರಿತ ಸಂಪತ್ತುಗಳು ಸನ್ಮಾರ್ಗ ಬೋಧನೆಗಾಗಿ 'ಸಮತ್ವ' ಪರಿಪಾಲನೆಗಾಗಿ ಸರ್ವದಾ, ಸರ್ವತ್ರ ತುಂಬಿಕೊಂಡಿವೆ. ರಾಜನೀತಿ ನೇತ್ರದಿಂದ ವೀಕ್ಷಿಸಿ, ಪರೀಕ್ಷಿಸಿ, ವಿಮರ್ಶಿಸಿ ಜೀವನಯೋಗ ಅನುಸಂಧಾನಮಾರ್ಗವನ್ನು ತಿಳಿಯಬೇಕು. ರಾಜ್ಯದ ಪಂಚವಲಯಗಳಲ್ಲಿಯೂ ಜಾಗರೂಕತೆಯಿಂದ ಇಹಪರ ಶ್ರೇಯಸ್ಸನ್ನು ಸಾಧಿಸಬೇಕಾದುದು ಪ್ರತಿಯೊಬ್ಬ ಪ್ರಜಾ – ದೇಹಿಯ ಕರ್ತವ್ಯ. ವೇದೋಕ್ತ ರೀತ್ಯಾ ದೇವತಾ ಯಜ್ಞಗಳನ್ನು ಬ್ರಹ್ಮನಿಷ್ಠೆಯಿಂದ ನೆರವೇರಿಸಿ ಕೃತಕೃತ್ಯರಾಗುವಂತೆ ಎಚ್ಚರಿಕೆ ಕೊಟ್ಟು ಸಂದೇಹ ನಿವಾರಣೆ ಮಾಡುವ ರಾಜನೀತಿಯು ಪುರುಷಾರ್ಥ ಸಾಧಕವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

...ri Library
Access on
Class on
Cat. on
Tag etc
Checked
Any Other

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar